ಕನ್ನಡ ಮಹಿಳಾ ಪ್ರವಾಸ ಕಥನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಮಮತ ಆರ್

ಮಾರ್ಗದರ್ಶಕರು
ಡಾ. ಎ ಸುಬ್ಬಣ್ಣ ರೈ
ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೨೦

ಕನ್ನಡ ಮಹಿಳಾ ಪ್ರವಾಸ ಕಥನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಮಮತ ಆರ್

ಮಾರ್ಗದರ್ಶಕರು

ಡಾ. ಎ ಸುಬ್ಬಣ್ಣ ರೈ

ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೨೦

ಸಂಶೋಧಕರ ಘೋಷಣಾ ಪತ್ರ

ಕನ್ನಡ ಮಹಿಳಾ ಪ್ರವಾಸ ಕಥನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಎ ಸುಬ್ಬಣ್ಣ ರೈ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು, ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

R. Mamatha

(ಮಮತ ಆರ್)

ದಿನಾಂಕ: 10.2.2020

ಸ್ಥಳ: ವಿದ್ಯಾರಣ್ಯ

ಸಂಶೋಧಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಮಮತ ಆರ್. ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಕನ್ನಡ ಮಹಿಳಾ ಪ್ರವಾಸ ಕಥನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು, ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ: 20.9.2021

ಸ್ಥಳ: ವಿದ್ಯಾರಣ್ಯ

(ಡಾ. ವಿ. ಸುಬ್ಬಣ್ಣ ರೈ)

ಮಾರ್ಗದರ್ಶಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧ ಅಧ್ಯಯನದ ಉದ್ದೇಶ

೧.೨ ಅಧ್ಯಯನದ ವ್ಯಾಪ್ತಿ

೧.೩ ಅಧ್ಯಯನದ ವೈಧಾನಿಕತೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವೈಧಾನಿಕತೆ

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಪ್ರವಾಸ ಕಥನಗಳು ಒಂದು. ಈ ಪ್ರವಾಸ ಕಥನಗಳು ಪಶ್ಚಿಮದ ಪ್ರೇರಣೆ–ಪ್ರಭಾವದಿಂದ ಬೆಳೆಯಿತಾದರೂ ಕನ್ನಡ ಸಾಹಿತ್ಯ ಪರಂಪರೆಯಿಂದಲೇ ಅದರ ನೆರಳನ್ನು ಕಾಣುತ್ತೇವೆ. ಒಂಬತ್ತನೇ ಶತಮಾನದಲ್ಲಿ ಶ್ರೀವಿಜಯನು ತನ್ನ 'ಕವಿರಾಜಮಾರ್ಗ' ಕೃತಿಯಲ್ಲಿ ಹೇಳಿದ 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡಾದ ಕನ್ನಡದೋಳ್' ಎಂಬುದು ಕನ್ನಡ ನಾಡಿನ ವಿಸ್ತೀರ್ಣವನ್ನು ಕುರಿತು ತಿಳಿಸುತ್ತದೆ. ಆದಿಕವಿ ಪಂಪ ತನ್ನ 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ ಹೇಳಿದ 'ಆರಂಕುಸವಿಟ್ಟೊಡಂ ನೆನವುದೆನ್ನ ಮನಂ ವನವಾಸಿ ದೇಶಮಂ.....' ಎಂಬ ವಾಕ್ಯವು ಕರ್ನಾಟಕದ ಬನವಾಸಿ ಪ್ರದೇಶವು ನಂದನವನದಂತೆ ಕಾಣುವ ದೇಶವಾಗಿದೆ ಎಂದು ಹಾಡಿ ಹೊಗಳುತ್ತದೆ. ಶಾಸನ ಕವಿಗಳು, ವಚನಕಾರರು, ಕೀರ್ತನಕಾರರು ಸಹ ಪ್ರದೇಶಗಳ ವಿವರಗಳನ್ನು ದಾಖಲಿಸಿದ್ದಾರೆ. ಅಲ್ಲದೇ ಕಾವ್ಯಗಳಲ್ಲಿಯೂ ಪ್ರವಾಸದ ವರ್ಣನೆಯನ್ನು ಗುರುತಿಸಲಾಗಿದೆ. ಆದರೆ ಭಾರತದಲ್ಲಿ 'ಪ್ರವಾಸಿಗರು' ಎನ್ನುವ ಪದವು ಹುಟ್ಟಿಕೊಂಡಿದ್ದು ಮಾತ್ರ ವಿದೇಶಿ ಪ್ರವಾಸಿಗರು ಕಾಣಿಸಿಕೊಂಡಾಗಿನಿಂದ. ಆರನೇ ಶತಮಾನದಿಂದೀಚೆಗೆ ವಿದೇಶಿ ಪ್ರವಾಸಿಗರು ಇಲ್ಲಿನ ನೆಲ ಜಲದ ವೈಶಿಷ್ಟ್ಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ನಾಡಿಗೆ ಮತ್ತು ವಿಶ್ವಕ್ಕೆ ಪರಿಚಯಿಸಿದ್ದಾರೆ. ಅದರಲ್ಲಿ ಫಾಹಿಯಾನ್, ಹ್ಯುಯೆನ್‌ತ್ಸಾಂಗ್, ಇತ್ಸಿಂಗ್, ಅಬ್ದುಲ್ ರಜಾಕ್, ಫೆರಿಷ್ತಾ, ಬರೌನಿ, ಡೊಮಿಂಗೊ ಪಾಯೆಸ್ ಮುಂತಾದ ವಿದೇಶಿ ಪ್ರವಾಸಿಗರು ಪ್ರಮುಖರಾಗಿದ್ದಾರೆ. ಭಾರತದ ಸಾಮ್ರಾಜ್ಯಗಳ ಆಡಳಿತ, ಯುದ್ಧ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಾತಾವರಣವನ್ನು ದಾಖಲಿಸಿದ್ದಾರೆ. ಈ ಐತಿಹಾಸಿಕ ದಾಖಲೆಗಳು ಪ್ರವಾಸ ಕೃತಿಯ ರಚನೆಗೆ ಬುನಾದಿಯನ್ನು ಹಾಕಿಕೊಟ್ಟಿವೆ ಎಂದು ಹೇಳಬಹುದು. ಅನೇಕ ರಾಜಮನೆತನಗಳಿಗೂ ವಿದೇಶಿ ಪ್ರವಾಸಿಗರು ಭೇಟಿ ಕೊಡುವ ಮೂಲಕ ಇಲ್ಲಿನ ಸಾಮಾಜಿಕ, ಆಡಳಿತ, ರಾಜಕೀಯ, ಧಾರ್ಮಿಕತೆಗಳ ಬಗ್ಗೆ ದಾಖಲಿಸಿದ್ದಾರೆ. ಆಧುನಿಕ ಕಾಲಕ್ಕೆ ಕಿಟಲ್, ಜೇಮ್ಸ್ ಪ್ರಿನ್ಸೆಪ್, ಬಿ.ಎಲ್.ರೈಸ್, ಕರ್ನಲ್ ಮೆಕೆಂಝಿ ಮುಂತಾದ ವಿದೇಶಿ ವಿದ್ವಾಂಸರು

ಇಲ್ಲಿನ ಭಾಷಿಕ ವಿದ್ವತ್ತು ಕುರಿತು ಅಧ್ಯಯನ ಮಾಡಿದ್ದಾರೆ. ಭಾಷಿಕ ಅಧ್ಯಯನಗಳು ಪ್ರವಾಸ ಕಥನಗಳಲ್ಲಿ ಸೇರದೆ ಹೋದರೂ ಭಾರತದ ಪ್ರಾದೇಶಿಕ ಭಾಷೆ, ಸಾಹಿತ್ಯ, ಆಚರಣೆ, ಜಾನಪದ, ಸಂಸ್ಕೃತಿ, ಮುಂತಾದ ವೈಶಿಷ್ಟ್ಯಗಳನ್ನು ದೇಶ ವಿದೇಶಗಳಿಗೆ ಪರಿಚಯಿಸಿದವರಾಗಿ ಪ್ರಮುಖರಾಗುತ್ತಾರೆ.

ಆಧುನಿಕ ಸಂದರ್ಭದಲ್ಲಿ ಹುಟ್ಟಿಕೊಂಡ ಪ್ರವಾಸ ಕಥನ ಪ್ರಕಾರಕ್ಕೆ ಭಾರತೀಯ ಪರಂಪರೆ ಮತ್ತು ವಿದೇಶಿ ಪ್ರವಾಸ ಸಾಹಿತ್ಯ ಪ್ರಭಾವ ಬೀರಿವೆ. ೧೮೯೦ರಲ್ಲಿ ಪ್ರಕಟವಾದ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರ 'ದಕ್ಷಿಣ ಭಾರತ ಯಾತ್ರೆ'ಯು ಕನ್ನಡದ ಮೊದಲ ಪ್ರವಾಸ ಕಥನವಾಗಿದೆ. ಇದು ಭಾರತದ ಧಾರ್ಮಿಕ ಕ್ಷೇತ್ರಗಳನ್ನು ಪರಿಚಯಿಸುವ ಕೃತಿಯಾಗಿದೆ. ನಂತರದಲ್ಲಿ ವಿ.ಸೀತಾರಾಮಯ್ಯ ಅವರ 'ಪಂಪಾಯಾತ್ರೆ', ಅಸುಂಡಿ ರಂಗರಾಯ ಅವರ 'ವಿಲಾಸವತಿಯ ಪ್ರಸಂಗ' ಪ್ರವಾಸ ಕಥನಗಳು ರಚನೆಯಾದವು. ವಿ.ಕೃ.ಗೋಕಾಕ್, ದೇಜಗೌ, ಶಿವರಾಮ ಕಾರಂತ, ಎ.ಎನ್.ಮೂರ್ತಿರಾಯರು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಜಿ.ಎಸ್.ಶಿವರುದ್ರಪ್ಪ, ಮುಂತಾದವರು ಪ್ರವಾಸ ಕೈಗೊಂಡು ತಮ್ಮ ಅನುಭವಗಳನ್ನು ದಾಖಲಿಸುವ ಮೂಲಕ ಪ್ರವಾಸ ಸಾಹಿತ್ಯವನ್ನು ಗಟ್ಟಿಗೊಳಿಸಿದರು. ಮಹಿಳಾ ಪ್ರವಾಸಿಗರು ಸಹ ಹಿಂದೆ ಉಳಿಯದೇ ಪ್ರವಾಸ ಕಥನಗಳನ್ನು ರಚಿಸಿದರು. ರಾಣಿ ಚನ್ನಾಜಮ್ಮಣ್ಣಿ, ಪಿ.ಆರ್.ಜಯಲಕ್ಷ್ಮಿ, ನೀಳಾದೇವಿ, ಅನುಪಮಾ ನಿರಂಜನ, ಸುಧಾಮೂರ್ತಿ, ನೇಮಿಚಂದ್ರ, ಲತಾಗುತ್ತಿ, ಹೇಮಲತಾ ಮಹಿಷಿ ಮುಂತಾದವರು ಪ್ರವಾಸ ಕಥನಗಳನ್ನು ರಚಿಸಿದ್ದಾರೆ. ವಸ್ತು, ತಂತ್ರ, ಪ್ರಾದೇಶಿಕ ವಿವರಗಳನ್ನೊಳಗೊಂಡ ಮಹಿಳಾ ಪ್ರವಾಸ ಕಥನಗಳು ಇಂದು ಸಮೃದ್ಧವಾಗಿವೆ. ಸ್ವದೇಶಿ-ವಿದೇಶಿ ಮಹಿಳಾ ಪ್ರವಾಸ ಕಥನಗಳಲ್ಲಿ ಸ್ವಂತಿಕೆಯನ್ನು ಪಡೆದುಕೊಂಡು ಮುನ್ನಡೆದಿವೆ. ಹೊಸ ಪ್ರಯೋಗಗಳನ್ನು ಮಾಡುತ್ತಲೂ, ಹೊಸ ಅರಿವಿನ ಜಗತ್ತನ್ನು ಮಹಿಳಾ ಪ್ರವಾಸ ಕಥನಗಳು ಪರಿಚಯಿಸುತ್ತವೆ.

೧. ಅಧ್ಯಯನದ ಉದ್ದೇಶ

ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಪ್ರವಾಸ ಕಥನವು ಇನ್ನುಳಿದ ಕಥೆ, ಕಾವ್ಯ, ಕಾದಂಬರಿ ಪ್ರಕಾರಗಳಿಗೆ ಇರುವ ಕೆಲವು ಕಟ್ಟುಪಾಡುಗಳಿಂದ ಮುಕ್ತವಾದ ಮತ್ತು ಬೇರೊಂದು ರೀತಿಯಲ್ಲಿ ಲೇಖಕರಿಗೆ ಹೆಚ್ಚು ಸ್ವಾತಂತ್ರ್ಯವನ್ನು ನೀಡುವ ಪ್ರಕಾರವಾಗಿದೆ. ಪ್ರವಾಸ ಕಥನದ ನಡಿಗೆಯಲ್ಲಿ ಕಥೆ ಕಟ್ಟಬಹುದು, ಹರಟಬಹುದು, ಉಪನ್ಯಾಸ ನೀಡಬಹುದು ಮತ್ತು ವೈಯಕ್ತಿಕ ಆಸಕ್ತಿ, ಅಭಿರುಚಿಗಳನ್ನು ಕಾಣಿಸಬಹುದು. ಅದೇ ರೀತಿ ಬೇರೆ ಬೇರೆ ಸ್ಥಳಗಳ ಜನರ ವಿಚಾರಧಾರೆಯನ್ನು, ಸಾಂಸ್ಕೃತಿಕ ಬದುಕನ್ನು ಅಭಿವ್ಯಕ್ತಿಗೊಳಿಸಬಹುದಾದ ಈ ಪ್ರವಾಸ ಸಾಹಿತ್ಯಕ್ಕೆ ಕನ್ನಡದಲ್ಲಿ ವಿಶಿಷ್ಟವಾದ ಸ್ಥಾನವಿದೆ. ತಕ್ಷಣದಲ್ಲೇ ಸಿಕ್ಕಿದ ಅನುಭವಗಳಾದರೂ ಅದರಿಂದ ಮನುಷ್ಯನ ಚಿಂತನೆಯನ್ನು ವೃದ್ಧಿಸಿಕೊಳ್ಳಬಲ್ಲ ಶಕ್ತಿ ಇರುತ್ತದೆ. ಪ್ರವಾಸದ ಅನುಭವಗಳು ಶಕ್ತ ಬರಹಗಾರರಲ್ಲಿ ಮರುಸೃಷ್ಟಿಯಾಗಿ ಮತ್ತೊಂದು ಪ್ರದೇಶದ ಹಾಗೂ ನಮ್ಮ ಪ್ರಪಂಚದ

ಪ್ರತ್ಯಕ್ಷ ಅನುಭವವನ್ನೇ ಓದುಗರ ಕಣ್ಣೇದುರಿಗೆ ಕಟ್ಟಬಲ್ಲದು. ಇಂತಹ ಅನುಭವವನ್ನು ನೀಡುವ ಪ್ರವಾಸ ಕಥನಗಳು ಕನ್ನಡದಲ್ಲಿ ಸಾಕಷ್ಟು ಇವೆ. ವಿವಿಧ ಸಂದರ್ಭಗಳಲ್ಲಿ ನಾಡು, ಹೊರನಾಡುಗಳಿಗೆ ಪ್ರವಾಸ ಕೈಗೊಂಡ ವ್ಯಕ್ತಿಗಳು ಕಂಡುಂಡ ತಮ್ಮ ಅನುಭವಗಳನ್ನು ಬರಹ ರೂಪದಲ್ಲಿ ಪ್ರಕಟಿಸುವ ಒಂದು ಪ್ರಕಾರದ ಸಾಹಿತ್ಯ ಇದಾಗಿದೆ.

ಇತ್ತೀಚಿನ ದಿನಗಳಲ್ಲಿ ಕನ್ನಡ ನಾಡಿನ ಮಹಿಳೆಯರು ಕೂಡ ವಿವಿಧ ಉದ್ದೇಶಗಳಿಗೋಸ್ಕರ ಹೊರರಾಜ್ಯ, ಹೊರದೇಶಗಳಿಗೆ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಅಂತವರಲ್ಲಿ ಅನೇಕರು ತಮ್ಮ ಪ್ರವಾಸದ ಅನುಭವಗಳನ್ನು ಬರವಣಿಗೆಯ ಮೂಲಕ ಪ್ರಕಟಪಡಿಸುತ್ತಾರೆ. ಹಾಗೇ ತಮ್ಮ ಪ್ರವಾಸದ ಅನುಭವಗಳನ್ನು ಪ್ರಕಟಪಡಿಸುವ ಮಹಿಳೆಯರಲ್ಲಿ ಕೆಲವರು ಈಗಾಗಲೇ ಲೇಖಕಿಯರಾಗಿ ಗುರುತಿಸಿಕೊಂಡವರಾಗಿದ್ದಾರೆ. ಇನ್ನು ಕೆಲವರು ಸಾಮಾನ್ಯ ಮಹಿಳೆಯರಾಗಿದ್ದಾರೆ. ಅಂತಹ ಮಹಿಳೆಯರನ್ನು ಪ್ರಸ್ತುತ ಅವರು ಬರೆದಿರುವ ಪ್ರವಾಸ ಕಥನವೇ ಲೇಖಕಿಯರನ್ನಾಗಿ ರೂಪಿಸುತ್ತವೆ. ಬಹುಪಾಲು ಮಹಿಳಾ ಪ್ರವಾಸ ಕಥನಗಳು ಪುರುಷ ಲೇಖಕರ ಪ್ರವಾಸ ಕಥನಗಳಿಗಿಂತ ಭಿನ್ನವಾಗಿರುತ್ತವೆ. ಮಹಿಳೆಯರು ಪ್ರವಾಸದ ಮೂಲಕ ಪಡೆಯುವ ಅನುಭವಗಳು, ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅವರು ತೋರುವ ಅಭಿರುಚಿಗಳು, ಪುರುಷರಿಗಿಂತ ಭಿನ್ನವಾಗಿರುತ್ತವೆ. ಅನೇಕ ಸಂದರ್ಭಗಳಲ್ಲಿ ಮಹಿಳೆಯರನ್ನು ಕ್ರಿಯಾಶೀಲಗೊಳಿಸುವಲ್ಲೂ ಪ್ರವಾಸಗಳು ಸಹಕಾರಿಯಾಗುತ್ತವೆ. ತಮ್ಮ ಕೌಟುಂಬಿಕ ಮತ್ತು ವೃತ್ತಿಪರ ಬದುಕನ್ನು ಇನ್ನಷ್ಟು ಕ್ರಿಯಾಶೀಲಗೊಳಿಸಲು ಇಂತಹ ಪ್ರವಾಸದ ಅನುಭವಗಳು ಮಹಿಳೆಯರಿಗೆ ನೆರವಾಗುತ್ತವೆ. ಪ್ರವಾಸದ ಸಂದರ್ಭದಲ್ಲಿ ಸೂಕ್ಷ್ಮಜ್ಞರಾದ ಮಹಿಳೆಯರು ತಾವು ಕಂಡ ಮತ್ತು ತಮ್ಮ ಸಂಪರ್ಕಕ್ಕೆ ಬಂದ ಇತರ ಮಹಿಳೆಯರ ಬದುಕನ್ನು ಸೂಕ್ಷ್ಮವಾಗಿ ಗಮನಿಸಿ, ಪ್ರವಾಸ ಕಥನಗಳಲ್ಲಿ ಅದನ್ನು ಅಭಿವ್ಯಕ್ತಿಪಡಿಸುವ ಸಾಧ್ಯತೆ ಇದೆ. ಹಾಗಾಗಿ ಬಹುಪಾಲು ಮಹಿಳಾ ಪ್ರವಾಸ ಕಥನಗಳಲ್ಲಿ ಇದುವರೆಗೆ ನಮ್ಮ ಅನುಭವಕ್ಕೆ ಬರದ ಮಹಿಳಾ ಪ್ರಪಂಚವೊಂದು ಅನಾವರಣಗೊಳ್ಳಬಹುದಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಮಹಿಳಾ ಪ್ರವಾಸ ಕಥನಗಳು ಪುರುಷ ಲೇಖಕರ ಪ್ರವಾಸ ಕಥನಗಳಿಗಿಂತ ಅನನ್ಯವಾಗಿ ನಿಲ್ಲುತ್ತವೆ. ಇಂತಹ ಭಿನ್ನತೆ, ವಿಶಿಷ್ಟತೆ, ಅನನ್ಯತೆಗಳನ್ನು ಗುರುತಿಸುವುದರ ಮೂಲಕ ಕನ್ನಡದ ಮಹಿಳಾ ಪ್ರವಾಸ ಕಥನಗಳಲ್ಲಿ ಒಟ್ಟಾರೆ ಸ್ತ್ರೀ ಬದುಕಿನ ಪ್ರತಿನಿಧೀಕರಣವು ಯಾವ ಸ್ವರೂಪದಲ್ಲಿದೆ ಎಂಬುದನ್ನು ಕಂಡುಕೊಳ್ಳುವ ಉದ್ದೇಶ ಪ್ರಸ್ತುತ ಅಧ್ಯಯನಕ್ಕಿದೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಮಹಿಳಾ ಪ್ರತಿನಿಧೀಕರಣವನ್ನು ನಾನಾ ಸ್ವರೂಪಗಳಲ್ಲಿ ಕಾಣಬಹುದಾಗಿದೆ. ಮಾನವ ಸಮಾಜದಲ್ಲಿ ಹೆಣ್ಣು ಮತ್ತು ಗಂಡೆಂಬ ಎರಡು ಪ್ರಮುಖ ಜಾತಿಗಳಿದ್ದು, ಎಲ್ಲಾ ಕಾಲದ ನಮ್ಮ ಸಾಹಿತ್ಯ ಕೃತಿಗಳಲ್ಲೂ ಆ ಎರಡು ಜಾತಿಯ ಪಾತ್ರಗಳು ಸ್ಥಾನ ಪಡೆದಿರುತ್ತವೆ. ಆದರೆ ಪ್ರಾಚೀನ ಸಾಹಿತ್ಯ ಕೃತಿಗಳ ಅಧ್ಯಯನದಿಂದ ತೊಡಗಿ ಸಮಕಾಲೀನ ಸಂದರ್ಭದ ಅಧ್ಯಯನದವರೆಗೆ ನಿರ್ದಿಷ್ಟ ಸಾಹಿತ್ಯ ಕೃತಿಗಳಲ್ಲಿನ ಮಹಿಳಾ

ಪ್ರತಿನಿಧೀಕರಣವನ್ನು ಗುರುತಿಸುವ ಅಧ್ಯಯನಗಳೇ ಹೆಚ್ಚಾಗಿ ನಡೆಯುತ್ತವೆಯೇ ಹೊರತು, ಪುರುಷನ ಪ್ರತಿನಿಧೀಕರಣವನ್ನು ಗುರುತಿಸುವ ಅಧ್ಯಯನಗಳು ಅಷ್ಟಾಗಿ ನಡೆಯುತ್ತಿಲ್ಲವೆಂದು ಹೇಳಬಹುದು ಇದಕ್ಕೆ ಕಾರಣಗಳು ಇಲ್ಲದಿಲ್ಲ. ಕುಟುಂಬದಲ್ಲಿ ಅದೇ ರೀತಿ ಸಮಾಜದಲ್ಲಿ ಹೆಣ್ಣಿನ ಬದುಕಿಗೆ ಗಂಡಿಗಿಂತ ವೈವಿಧ್ಯಮಯವಾದ ಆಯಾಮಗಳಿರುತ್ತವೆ ಎಂಬುದು ಒಂದು ಕಾರಣವಾದರೆ, ಸಮಾಜದಲ್ಲಿ ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯಾಗಿ ಪರಿಗಣಿಸಲಾಗುತ್ತಿದೆ ಎಂಬುದು ಇನ್ನೊಂದು ಕಾರಣ. ಈ ವಿವಿಧ ಆಯಾಮಗಳನ್ನು ಮತ್ತು ತರತಮ ಭಾವವನ್ನು ಗುರುತಿಸಿ ವಿಶ್ಲೇಷಿಸುವ ಸಲುವಾಗಿ ನಿರ್ದಿಷ್ಟ ಸಾಹಿತ್ಯದಲ್ಲಿ 'ಸ್ತ್ರೀ ಪಾತ್ರಚಿತ್ರಣ', 'ಹೆಣ್ಣಿನ ಪರಿಕಲ್ಪನೆ', ಸ್ತ್ರೀ ಪ್ರತಿನಿಧೀಕರಣ' ಇತ್ಯಾದಿ ಶೀರ್ಷಿಕೆಗಳ ಅಧ್ಯಯನಗಳು ನಡೆಯುತ್ತಿವೆ.

ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಕಥನ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಈ ಬಗೆಯ ಅನೇಕ ಅಧ್ಯಯನಗಳು ನಡೆದಿವೆ. ಪ್ರಸ್ತುತ ಪ್ರವಾಸ ಕಥನವೆಂಬುದು ಕಥನ ಸಾಹಿತ್ಯಕ್ಕಿಂತ ಭಿನ್ನವಾದ ಒಂದು ಸಾಹಿತ್ಯ ಪ್ರಕಾರ. ಇಲ್ಲಿ ಪಾತ್ರಗಳ ಸೃಷ್ಟಿ, ಕಲ್ಪನೆ-ಇತ್ಯಾದಿಗಳಿಗೆ ಅವಕಾಶವಿಲ್ಲ. ಹಾಗಾಗಿ ಗಂಡು ಅಥವಾ ಹೆಣ್ಣಿನ ಪ್ರತಿನಿಧೀಕರಣದ ಸ್ವರೂಪ ಹೀಗೆ ಭಿನ್ನವಾಗಿರುತ್ತವೆ. ಪ್ರವಾಸ ಸಂದರ್ಭದಲ್ಲಿ ತಾವು ಭೇಟಿ ಮಾಡಿದ, ಒಂದಿಲ್ಲೊಂದು ಕಾರಣಕ್ಕೆ ತಮ್ಮ ಮೇಲೆ ಪ್ರಭಾವ ಬೀರಿದ, ತಮ್ಮನ್ನು ಬಹುವಾಗಿ ಕಾಡಿದ, ವ್ಯಕ್ತಿಗಳ ಕುರಿತು ಲೇಖಕರು ತಮ್ಮ ಅನುಭವಗಳೊಂದಿಗೆ ಬರೆದಾಗ ಅದು ಸಂಬಂಧಪಟ್ಟ ವ್ಯಕ್ತಿಗಳ ಪ್ರತಿನಿಧೀಕರಣವೆನಿಸುತ್ತದೆ. ಸ್ತ್ರೀಯರ ಪ್ರತಿನಿಧೀಕರಣ ಪುರುಷ ಲೇಖಕರ ಪ್ರವಾಸ ಕಥನಗಳಲ್ಲೂ ಇರಬಹುದು. ಆದರೆ ಸ್ತ್ರೀಯರ ಬಗೆಗಿನ ಮಹಿಳಾ ಲೇಖಕಿಯರ ದೃಷ್ಟಿಕೋನ ಸ್ತ್ರೀಯರನ್ನು ಅವರು ಪರಿಭಾವಿಸುವ ಬಗೆ ಪುರುಷ ಲೇಖಕರಿಗಿಂತ ಭಿನ್ನವೂ, ವಿಶಿಷ್ಟವೂ ಆಗಿರುವ ಸಾಧ್ಯತೆಯಿದೆ. ಅಂತಹ ಸಾಧ್ಯತೆಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಕೌಟುಂಬಿಕ ನೆಲೆಯಲ್ಲಿ, ಸಾಮಾಜಿಕ ನೆಲೆಯಲ್ಲಿ, ಔದ್ಯೋಗಿಕ ರಂಗದಲ್ಲಿ, ರಾಜಕೀಯ ರಂಗದಲ್ಲಿ, ಕಾರ್ಮಿಕ ವಲಯದಲ್ಲಿ, ಕಲಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸ್ತ್ರೀಯರ ಬದುಕನ್ನು ಕನ್ನಡದ ಮಹಿಳಾ ಪ್ರವಾಸ ಕಥನಗಳು ಹೇಗೆ ಪಡಿಮೂಡಿಸಿವೆ ಎಂಬುದನ್ನು ಗುರುತಿಸಿ ವಿಶ್ಲೇಷಿಸುವ ಮೂಲಕ ಮಹಿಳಾ ಪ್ರವಾಸ ಕಥನಗಳು ಕಟ್ಟಿಕೊಡುವ ಸ್ತ್ರೀ ಸಂಸ್ಕೃತಿಯ ವಿನ್ಯಾಸವನ್ನು ಕಂಡುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

೨. ಅಧ್ಯಯನದ ವ್ಯಾಪ್ತಿ

ಕನ್ನಡ ಮಹಿಳಾ ಪ್ರವಾಸ ಕಥನಗಳ ಇತಿಹಾಸವನ್ನು ಗಮನಿಸಿದಾಗ, ಮಹಿಳೆಯರು ಕೌಟುಂಬಿಕ ಮಿತಿಯೊಳಗೆ ಮೊದಮೊದಲು ಭಾರತೀಯ ಧಾರ್ಮಿಕ ಸ್ಥಳಗಳಿಗೆ ಪ್ರವಾಸಗಳನ್ನು ಕೈಗೊಳ್ಳುತ್ತಿದ್ದರು. ಶಿಕ್ಷಣ ಮತ್ತು ಜಾಗತೀಕರಣದ ಪರಿಣಾಮದಿಂದಾಗಿ ಮಹಿಳೆಯರು ಮೌಢ್ಯದ ಆಚರಣೆಗಳನ್ನು ಧಿಕ್ಕರಿಸಿದರು. ಪುರುಷರಷ್ಟೇ ಸಮರ್ಥವಾಗಿ ಎಲ್ಲಾ ರಂಗಗಳಲ್ಲಿ ಕೆಲಸ ಮಾಡಬಲ್ಲೇವು ಎಂಬುದು ಹಂತ ಹಂತವಾಗಿ ಸಾಧಿಸಿ ತೋರಿಸುವಲ್ಲಿ ದಿಟ್ಟ ಹೆಜ್ಜೆ

ಇಡತೊಡಗಿದರು. ಬೇರೆ ಬೇರೆ ಪ್ರದೇಶ, ಭಾಷೆ, ನೆಲ, ಸಂಸ್ಕೃತಿ, ನೈಸರ್ಗಿಕ ವೈವಿಧ್ಯವನ್ನು, ವಿಕೋಪಗಳನ್ನು ದಾಖಲಿಸುವಂತಹ ಪ್ರವಾಸ ಕಥನಗಳು ಪುರುಷರಿಗೆ ಕಷ್ಟವಾಗುವಂತಹ ಸಂದರ್ಭಗಳಲ್ಲೂ ಮಹಿಳೆಯರು ಇಂದು ಯಶಸ್ವಿಯಾಗಿ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಶತಮಾನದ ಅವಧಿಯ ಅಂಚಿನಲ್ಲಿರುವ ಮಹಿಳಾ ಪ್ರವಾಸ ಕಥನಗಳಲ್ಲಿ ಮಹಿಳೆಯನ್ನು ಪ್ರತಿನಿಧೀಕರಿಸುವ ಅನೇಕ ಸಂಗತಿಗಳು ವ್ಯಕ್ತವಾಗಿವೆ. ೧೯೩೭ರಲ್ಲಿ ಪ್ರಕಟವಾದ ರಾಣಿ ಚನ್ನಾಜಮ್ಮಣ್ಣಿ ಅವರ 'ನನ್ನ ಪ್ರಪಂಚ ಸಂಚಾರ' ಕೃತಿಯಿಂದ ಹಿಡಿದು, ಇತ್ತೀಚಿನ ಕೃತಿಗಳಾದ ಸುಮಂಗಲಾ ಎಸ್.ಮುಮ್ಮಿಗಟ್ಟಿ ಅವರ 'ಅದ್ಭುತ ಜೀವವಾಸ ಅಂಡಮಾನ್'(೨೦೧೭), ಸುಧಾ ಚಿದಾನಂದಗೌಡ ಅವರ 'ಸಮನ್ವಿತೆ ಗೋಮಾಂತ'(೨೦೧೭), ಹೇಮಾಮಾಲಾ.ಬಿ.ಅವರ 'ಚಾರ್‌ಧಾಮ್'(೨೦೧೭), ಎಚ್.ಎನ್.ಆರತಿ ಅವರ 'ಬೆಟ್ಟದಡಿಯ ಬಿದಿರ ಹೂ'(೨೦೧೭) ಮತ್ತು ೨೦೧೮ರಲ್ಲಿ ಪ್ರಕಟವಾದ ಇಂದಿರಾ ಹೆಗ್ಗಡೆ ಅವರ 'ಇಂದ್ರಪ್ರಸ್ಥದಿಂದ ಐತಿಹಾಸಿಕ ನಡೆ', ತೇಜಸ್ವಿನಿ ಬಿ.ಯಕ್ಕುಂಡಿಮಠ ಅವರ 'ತಿರೆಯ ಮೇಲಣ ಸ್ವರ್ಗ' ಕೃತಿಗಳ ವರೆಗಿನ ವಿಭಿನ್ನ ಮಾದರಿಯ ದೃಷ್ಟಿಕೋನದ ಸುಮಾರು ೧೫೦ಕ್ಕಿಂತಲೂ ಹೆಚ್ಚು ಮಹಿಳಾ ಪ್ರವಾಸ ಕಥನಗಳನ್ನು ಇಲ್ಲಿ ಅನುಲಕ್ಷಿಸಲಾಗಿದೆ. ಅಂತವುಗಳಲ್ಲಿ ಪ್ರಸ್ತುತ ಅಧ್ಯಯನದ ಪರಿಕಲ್ಪನೆಗೆ ಪೂರಕವಾಗುವ ಒಟ್ಟು ೭೩ರಷ್ಟು ಪ್ರಾತಿನಿಧಿಕ ಪ್ರವಾಸ ಕಥನಗಳನ್ನು ಇಲ್ಲಿ ಪ್ರಮುಖ ಆಕರಗಳಾಗಿ ಬಳಸಿಕೊಳ್ಳಲಾಗಿದೆ.

೩. ಅಧ್ಯಯನದ ವೈಧಾನಿಕತೆ

ಕನ್ನಡ ಮಹಿಳಾ ಪ್ರವಾಸ ಕಥನಗಳನ್ನು ಅಧ್ಯಯನ ನಡೆಸಿ ಅಭಿವ್ಯಕ್ತಗೊಂಡ ಸ್ತ್ರೀ ಪ್ರತಿನಿಧೀಕರಣದ ವಿವಿಧ ನೆಲೆಗಳನ್ನು ಇಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಮಹಿಳಾ ಪ್ರವಾಸ ಕಥನಗಳಲ್ಲಿನ ವಸ್ತು, ಆಶಯ, ನಿರೂಪಣಾ ವಿಧಾನಗಳಲ್ಲಿ ಕಂಡುಬರುವ ಸ್ತ್ರೀ ಪ್ರತಿನಿಧೀಕರಣವನ್ನು ಅಧ್ಯಯನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಪ್ರಮುಖ ಆಕರಮುಖಿ ವಿಶ್ಲೇಷಣಾತ್ಮಕ ಅಧ್ಯಯನ ವಿಧಾನವನ್ನು ಅನುಸರಿಸಲಾಗಿದೆ. ಪ್ರಾಸಂಗಿಕವಾಗಿ ಸ್ತ್ರೀಪರ ದೃಷ್ಟಿಕೋನದ ಅಧ್ಯಯನದ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

❑❑❑

ಅಧ್ಯಾಯ ಎರಡು

ಪ್ರಸ್ತಾವನೆ-ವಿಷಯ ಪ್ರವೇಶ

೨.೧. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

೨.೨. ಕನ್ನಡ ಪ್ರವಾಸ ಕಥನಗಳ ಸ್ವರೂಪ, ಲಕ್ಷಣ ಮತ್ತು ಇತಿಹಾಸ

ಅಧ್ಯಾಯ ಎರಡು

ಪ್ರಸ್ತಾವನೆ–ವಿಷಯ ಪ್ರವೇಶ

ಕನ್ನಡ ಪ್ರವಾಸ ಸಾಹಿತ್ಯವು ಒಂದು ವಿಶಿಷ್ಟವಾದ ಸಾಹಿತ್ಯ ಪ್ರಕಾರವಾಗಿದೆ. ಉಳಿದೆಲ್ಲ ಸಾಹಿತ್ಯ ಪ್ರಕಾರಗಳಿಗಿದ್ದಷ್ಟೇ ಪ್ರಾಮುಖ್ಯತೆಯಿದ್ದು, ಸೃಜನಶೀಲ ಸಾಹಿತ್ಯಕ್ಕೆ ಸರಿಸಮಾನವಾಗಿ ಬೆಳೆದು ನಿಂತಿದೆ. ಕನ್ನಡ ಪ್ರವಾಸ ಸಾಹಿತ್ಯವು ಸಾಂಸ್ಕೃತಿಕವಾದ ಅಧ್ಯಯನಕ್ಕೆ ಹೆಚ್ಚಿನ ಅವಕಾಶ ಇರುವುದರಿಂದ ಗಂಭೀರವಾದ ವಿಸ್ತೃತವಾದ ಅಧ್ಯಯನದ ಅವಶ್ಯವಿದೆ. ಏಕೆಂದರೆ, ಕನ್ನಡ ಪ್ರವಾಸ ಕಥನಗಳು ಒಂದು ವಲಯಕ್ಕೆ ಸೀಮಿತವಾಗಿಲ್ಲ. ಒಂದು ದೇಶದ ನಿಸರ್ಗ, ಸಂಸ್ಕೃತಿ, ಜನಾಂಗ, ಆಹಾರ, ಕಲೆ, ಸಾಹಿತ್ಯ ಮುಂತಾದ ವಿಚಾರಗಳಿಗೆ ಸಂಬಂಧಿಸಿವೆ. ಪ್ರಾಚೀನ ಇತಿಹಾಸದಿಂದ ಹಿಡಿದು ಇತ್ತೀಚಿನವರೆಗೂ ಪ್ರವಾಸಿಗನ ಕಣ್ಣಿಗೆ ಕಾಣುವ, ತನ್ನ ಅನುಭವಕ್ಕೆ ಬಂದಿರುವುದನ್ನು ಮುಕ್ತವಾಗಿ ನಿರೂಪಿಸಲಾಗಿದೆ. ಇಂದು ಪ್ರವಾಸ ಕಥನಗಳು ಮನರಂಜನೆಗೆ ಸೀಮಿತವಾಗದೇ ಹೊಸತನದ ಹುಡುಕಾಟಗಳಿಗೆ ಕಾರಣವಾಗಿವೆ. ಈ ಹುಡುಕಾಟದಿಂದಾಗಿ ಹೊಸಜಗತ್ತಿನ ಸಾಂಸ್ಕೃತಿಕ ವಿಷಯಗಳನ್ನು ಪರಿಚಯಿಸುತ್ತವೆ. ಕೆಲವರು ಪ್ರವಾಸದ ಅನುಭವಗಳನ್ನು ಅನುಭವಿಸಿದರೆ, ಕೆಲವರು ಆ ಅನುಭವಗಳನ್ನು ದಾಖಲಿಸುತ್ತಾರೆ. ಹೀಗಾಗಿಯೆನೋ ಪ್ರವಾಸ ಕಥನಗಳು ಜಗತ್ತಿನ ಎಲ್ಲಾ ಭಾಷೆಗಳಲ್ಲಿ ರಚನೆಯಾಗಿವೆ. ಗ್ರೀಕ್‌ರು, ರೋಮನ್ನರು, ಫ್ರೆಂಚರು, ಯುರೋಪಿಯನ್ನರು ಪ್ರವಾಸ ಕೈಗೊಂಡು ತಮ್ಮ ಅನುಭವಗಳನ್ನು ಪ್ರವಾಸ ಕೃತಿಗಳಲ್ಲಿ ದಾಖಲಿಸಿದ್ದಾರೆ. ಪಾಶ್ಚಿಮಾತ್ಯ ಇತಿಹಾಸಕಾರರು ಭಾರತಕ್ಕೆ ಪ್ರವಾಸ ಮಾಡಿದ ದಾಖಲೆಗಳಿವೆ. ಪ್ರಾಚೀನ ಭಾರತದ ಇತಿಹಾಸ, ರಾಜ ಮನೆತನಗಳ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆಡಳಿತ ಮುಂತಾದವುಗಳ ಕುರಿತ ಮಾಹಿತಿ ಇಂದಿಗೂ ಲಭ್ಯವಾಗುತ್ತವೆ.

೧೮೮೦ರಲ್ಲಿ ಕರ್ಕಿ ವೆಂಕಟರಮಣಶಾಸ್ತ್ರಿ ಅವರ 'ದಕ್ಷಿಣ ಭಾರತ ಯಾತ್ರೆ' ಕೃತಿಯಿಂದ ಆರಂಭವಾದ ಕನ್ನಡ ಪ್ರವಾಸ ಸಾಹಿತ್ಯಕ್ಕೆ ಇದೀಗ ೧೩೦ ವರ್ಷಗಳ ಇತಿಹಾಸವಿದೆ. ಕನ್ನಡದಲ್ಲಿ ೫೦೦ಕ್ಕೂ ಹೆಚ್ಚಿನ ಪ್ರವಾಸ ಕಥನಗಳು ರಚನೆಗೊಂಡಿವೆ ಮತ್ತು ರಚನೆಗೊಳ್ಳುತ್ತಲೇ ಇವೆ. ಮಹಿಳಾ ಪ್ರವಾಸಿಗರು ಸಹ ಕನ್ನಡ ಪ್ರವಾಸ ಸಾಹಿತ್ಯಕ್ಕೆ ಗುರುತರವಾದ ಕೊಡುಗೆಗಳನ್ನು

ಕೊಟ್ಟಿದ್ದಾರೆ. ಪ್ರವಾಸ ಕಥನಗಳನ್ನು ಬಹುಮಟ್ಟಿಗೆ ಸ್ವದೇಶಿ-ವಿದೇಶಿ ಸಾಂಸ್ಕೃತಿಕ ಸಂಗತಿಗಳನ್ನು ಕುರಿತು ತುಲನಾತ್ಮಕವಾಗಿ ನಿರೂಪಿಸಿರುವುದನ್ನು ಕಾಣುತ್ತೇವೆ. ವಿದೇಶ ಪ್ರವಾಸಗಳಲ್ಲಿನ ಆಚರಣೆ, ಜೀವನ ಪದ್ಧತಿ, ಪ್ರಾಮಾಣಿಕತೆ, ಉದ್ಯೋಗ, ಶಿಕ್ಷಣ, ಮುಕ್ತ ಲೈಂಗಿಕ ವಿಚಾರಗಳು ಮುಂತಾದ ಹಲವು ವಿಚಾರಗಳಲ್ಲಿ ಪ್ರವಾಸಿಗನ ಜ್ಞಾನ ಮತ್ತು ಅನುಭವ ಲೋಕದ ವಿಭಿನ್ನ ಗ್ರಹಿಕೆಗಳಿಂದಾಗಿ ಓದುಗರ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸುತ್ತದೆ. ಮೊದಲಿನ ರೂಪರೇಷಗಳನ್ನು ಬಿಡಿಸಿಕೊಂಡ ಪ್ರವಾಸ ಕಥನಗಳು ಆಧುನಿಕತೆಯ ವೇಗಕ್ಕೆ ಒಳಗಾಗಿ ನಿರೂಪಣೆಯಲ್ಲಿ ವೈಶಿಷ್ಟ್ಯಗೊಳಿಸುತ್ತಿದ್ದಾರೆ. ಮಹಿಳಾ ಪ್ರವಾಸಿಗರು ಹೊಸತನವನ್ನು ತಮ್ಮ ಕಥನ ಶೈಲಿಯಲ್ಲಿ ತರುವ ಸಲುವಾಗಿ ಹೊಸದಾರಿಗಳನ್ನು ಹುಡುಕ ತೊಡಗಿದ್ದಾರೆ. ಅವು ಸಾಧ್ಯವಾದಷ್ಟು ಹೊಸ ಅನುಭವಗಳ ದಾಖಲೆಯಾಗಿರಬೇಕೆಂಬ ಮನೋಭಾವದಿಂದ ಪ್ರವಾಸ ಕೈಗೊಳ್ಳುವ ಪ್ರವಾಸಿಗರು ಇದ್ದಾರೆ. ಇಂತಹ ಪ್ರವಾಸಿಗರ ಮಹತ್ವಕಾಂಕ್ಷೆಯಿಂದಾಗಿ ಉತ್ತಮವಾದ, ಸತ್ವಶಾಲಿ ವಿಚಾರಗಳನ್ನು ಇಂದಿನ ಪ್ರವಾಸ ಕಥನಗಳು ಒಳಗೊಳ್ಳುತ್ತಿವೆ.

ವೈವಿಧ್ಯಮಯ ಸಂಗತಿಗಳನ್ನು ದಾಖಲಿಸುವ ಪ್ರವಾಸಗಳಲ್ಲಿ ಮಹಿಳಾ ಪ್ರವಾಸಿಗರ ಕೊಡುಗೆ ಇಂದು ಅಪಾರವಾಗಿದೆ. ಮಹಿಳಾ ಪ್ರವಾಸಗಳಲ್ಲೂ ವೃತ್ತಿಪರ, ಹವ್ಯಾಸಿ ಪ್ರವಾಸಿಗರಿದ್ದು, ನಾಲ್ಕಾರು ಭಾರಿ ಪ್ರವಾಸ ಕೈಗೊಂಡ ಮಹಿಳಾ ಪ್ರವಾಸಿಗರು ಇದ್ದಾರೆ. ಇಂತಹ ಪ್ರವಾಸ ಕಥನಗಳಲ್ಲಿ ಮಹಿಳೆಯರನ್ನು ಪ್ರತಿನಿಧಿಸುವ ನಿರೂಪಣೆಗಳಿವೆ. ಈ ಮೂಲಕ ಸ್ವದೇಶಿ-ವಿದೇಶಿ ಮಹಿಳೆಯರ ಜೀವನ ಪದ್ಧತಿ ಮತ್ತು ಸಂಸ್ಕೃತಿಗಳನ್ನು ಮುಖಾಮುಖಿಯಾಗಿಸಿದ್ದಾರೆ. ಇಂತಹ ಪ್ರವಾಸ ಕಥನಗಳು ಬುಡಕಟ್ಟು ಮಹಿಳೆಯರು, ದಲಿತ ಮಹಿಳೆಯರು, ಶ್ರಮಿಕ ಮಹಿಳೆಯರು, ಹಾಗೂ ಶೋಷಿತ ಮಹಿಳೆಯರ ಕುರಿತಾಗಿವೆ. ಅಷ್ಟೇ ಅಲ್ಲದೇ ಕೌಟುಂಬಿಕ, ಔದ್ಯೋಗಿಕ ಮಹಿಳೆಯರನ್ನು, ಮಹಿಳಾ ಹಕ್ಕುಗಳಿಗೆ ಹೋರಾಡಿದ ಕ್ರಾಂತಿಕಾರಕ ಮಹಿಳೆಯರನ್ನು ಹಾಗೂ ಸ್ತ್ರೀವಾದದ ದೃಷ್ಟಿಧೋರಣೆಗಳನ್ನು ಮಹಿಳಾ ಪ್ರವಾಸ ಕಥನಗಳು ಗುರುತಿಸಿವೆ. ಜಾಗತೀಕರಣದ ಹೊತ್ತಿನಲ್ಲಿ ಮಹಿಳೆಯರ ಶಕ್ತಿ ಮತ್ತು ಪ್ರಾಮುಖ್ಯತೆ ಅರಿತು ಜಗತ್ತಿನ ಬಹುತೇಕ ಸರ್ಕಾರಗಳು ಮಹಿಳಾ ಸಬಲೀಕರಣಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಮಹಿಳೆಯರನ್ನು ಒಂದು ಪರಿಧಿಯಲ್ಲಿ ತರುವ ಪ್ರಯತ್ನಗಳನ್ನು ಮಹಿಳಾ ಪ್ರವಾಸಗಳು ಮಾಡುತ್ತಿವೆ. ಏಕೆಂದರೆ ಭೌಗೋಳಿಕವಾಗಿ ಎಷ್ಟೇ ಭಿನ್ನತೆಯಿದ್ದರೂ, ಮಹಿಳೆಯರ ಮನೋಭಾವಗಳು ಒಂದೇ ತೆರನಾಗಿ ಕಂಡುಬರುತ್ತವೆ. ಸ್ತ್ರೀ ಬದುಕು ಎನ್ನುವುದು ಆಲದ ಮರದಂತೆ, ಅದರ ಕೊಂಬೆಗಳು ಚಾಚಿಕೊಂಡು ಬೃಹತ್ತಾಗಿ ಬೆಳೆದಂತೆ ಸ್ತ್ರೀ ಪ್ರತಿನಿಧೀಕರಣವು ಅನೇಕ ವಿನ್ಯಾಸಗಳಿಂದ ಕೂಡಿದೆ. ನಗರ ಮತ್ತು ಗ್ರಾಮೀಣ ಮಹಿಳೆಯರಲ್ಲಿನ ವ್ಯತ್ಯಾಸಗಳನ್ನು ಗುರುತಿಸುವ ಜೊತೆಗೆ ಮಹಿಳಾ ಅನನ್ಯತೆಗಳನ್ನು ಸವಿಸ್ತಾರವಾಗಿ ವಿಶ್ಲೇಷಿಸುವುದಕ್ಕೆ ಈ ಅಧ್ಯಯನದಲ್ಲಿ ಒತ್ತುಕೊಡಲಾಗಿದೆ.

೨.೧. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಪ್ರವಾಸ ಕಥನಗಳು ತಡವಾಗಿ ರಚನೆಗೊಂಡವು. ಇದೀಗ ನೂರು ವರ್ಷಗಳ ಇತಿಹಾಸ ಹೊಂದಿದೆ. ಈ ನೂರು ವರ್ಷಗಳ ಅವಧಿಯಲ್ಲಿ ಪುರುಷ ಪ್ರವಾಸ ಕಥನಗಳು ಹೆಚ್ಚಿನ ಸಂಖ್ಯೆಯಲ್ಲಿ ರಚನೆಯಾಗಿವೆ. ೧೮೯೦ರಲ್ಲಿ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರ 'ದಕ್ಷಿಣ ಭಾರತ ಯಾತ್ರೆ' ಕೃತಿಯಿಂದ ಆರಂಭವಾದ ಪ್ರವಾಸ ಕಥನವು ಇಂದಿಗೂ ರಚನೆಗೊಳ್ಳುತ್ತಲೇ ಇವೆ. ಆದರೆ ಮಹಿಳಾ ಪ್ರವಾಸ ರಚನೆಯಾಗಲು ಐದು ದಶಕಗಳೇ ಬೇಕಾದವು. ಸಂಪ್ರದಾಯ, ಆಚರಣೆಗಳು, ಹೆಣ್ಣೆಂಬ ಅವಗಹನೆಯಿಂದಾಗಿ ಪ್ರವಾಸ ಕೈಗೊಳ್ಳುವ ಸಾಹಸ ಮಾಡಿರಲಿಲ್ಲ. ಮಹಿಳೆಯರು ಪ್ರವಾಸ ಕೈಗೊಂಡರು ಅವು ಧಾರ್ಮಿಕ ಕ್ಷೇತ್ರಗಳಿಗೆ ಮಾತ್ರ ಸೀಮಿತಗೊಂಡಿದ್ದವು. ಅವುಗಳನ್ನು ಅಕ್ಷರ ರೂಪಕ್ಕೆ ಇಳಿಸುವ ಗೋಜಿಗೆ ಹೋಗಿರಲಿಲ್ಲ. ೧೯೩೭ರಲ್ಲಿ ರಾಣಿ ಚನ್ನಾಜಮ್ಮಣ್ಣಿ ಅವರ 'ನನ್ನ ಪ್ರಪಂಚ ಸಂಚಾರ' ಕೃತಿಯು ಹೊರಬಂದಿತು. ಇದು ಕನ್ನಡದ ಮೊದಲ ಮಹಿಳಾ ಪ್ರವಾಸ ಕಥನವಾಗಿ ಗುರುತಿಸಿಕೊಂಡಿದೆ. ಇದು ಮೊದಲ ವಿದೇಶಿ ಮಹಿಳಾ ಪ್ರವಾಸವು ಆಗಿದೆ. ಈ ಕೃತಿಯ ನಂತರ ೧೯೭೬ರಲ್ಲಿ ರುಕ್ಮಿಣಿ ಗಿರಿಮಾಜಿ ಅವರ 'ಬೆಂಗಳೂರಿನಿಂದ ಬದರಿಯಾತ್ರೆಗೆ' ಮೊದಲ ಸ್ವದೇಶಿ ಮಹಿಳಾ ಕೃತಿಯಾಗಿ ಹೊರಹೊಮ್ಮಿತು. ೧೯೮೧ರಲ್ಲಿ ಎಂ.ಕೆ.ಇಂದಿರಾ ಅವರ 'ಅನುಭವ ಕುಂಜ', ೧೯೮೩ರಲ್ಲಿ ನೀಳಾದೇವಿ ಅವರ 'ನಾ ಕಂಡ ಆಖಂಡ', ಶಾಂತದೇವಿ ಮಾಳವಾಡ ಅವರ 'ಶ್ರೀಗಿರಿಯಿಂದ ಹಿಮಗಿರಿಗೆ' ಪ್ರವಾಸ ಕಥನಗಳು ಪ್ರಕಟವಾದವು. ಈ ಕೃತಿಗಳ ಪ್ರಕಟಣೆಯ ಅಂತರವನ್ನು ಗಮನಿಸಿದಾಗ ಸುಮಾರು ಐದಾರು ದಶಕಗಳ ಅವಧಿಯಲ್ಲಿ ನಾಲ್ಕಾರು ಕೃತಿಗಳು ರಚನೆಯಾಗಿರುವುದು ತಿಳಿದುಬರುತ್ತದೆ. ೯೦ರ ದಶಕದ ನಂತರ ಮಹಿಳಾ ಪ್ರವಾಸಿಗರ ಸಂಖ್ಯೆ ಹೆಚ್ಚಾಗ ತೊಡಗಿ ವಿದೇಶಿ-ಸ್ವದೇಶಿ ಪ್ರವಾಸ ಕಥನಗಳು ಹೆಚ್ಚಾಗಿ ರಚನೆಯಾದವು.

ಆರಂಭದಲ್ಲಿ ಮಹಿಳಾ ಪ್ರವಾಸ ಕಥನಗಳು ಪತ್ರಿಕೆಗಳಲ್ಲಿ ಲೇಖನದ ರೂಪದಲ್ಲಿ ಬರುತ್ತಿದ್ದವು. ದಿನಪತ್ರಿಕೆಗಳಲ್ಲಿ ಪ್ರತ್ಯೇಕ ಕಾಲಂಗಳನ್ನು ಪ್ರವಾಸದ ಅನುಭವಗಳನ್ನು ದಾಖಲಿಸಿಕ್ಕಿಟ್ಟಿರುವ ಅಂಕಣ ರೂಪದ ಬರಹಗಳು ಇಂದಿಗೂ ಪ್ರಕಟವಾಗುತ್ತಿವೆ. ಬರುಬರುತ್ತಾ ಕೃತಿಗಳ ರೂಪದಲ್ಲಿ ತಮ್ಮ ಪ್ರವಾಸದ ಅನುಭವಗಳನ್ನು ಹಂಚಿಕೊಳ್ಳತೊಡಗಿದರು. ಮಹಿಳಾ ಪ್ರವಾಸ ಕೃತಿಗಳು ಇಂದು ನೂರ ಐವತ್ತಕ್ಕೂ ಅಧಿಕ ಸಂಖ್ಯೆಯಲ್ಲಿ ರಚನೆಗೊಂಡು ಸಮೃದ್ಧವಾಗಿ ಬೆಳೆದು

ನಿಂತಿವೆ. ಅಲ್ಲದೇ ಪದವಿ ತರಗತಿಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕಗಳಾಗಿವೆ. ಸಾಹಿತ್ಯ ವಲಯದಲ್ಲಿಯೂ ಪ್ರವಾಸದ ಅನುಭವಗಳನ್ನು ದಾಖಲಿಸುವುದಕ್ಕೆ ಹೆಚ್ಚಿನ ಮನ್ನಣೆಯು ದೊರೆತ್ತಿದ್ದರಿಂದ ಹೆಚ್ಚಿನ ಒಲವು ಪ್ರವಾಸ ಕಥನಗಳಿಗೆ ಸಿಕ್ಕಿತು. ಆದರೆ ಪ್ರವಾಸ ಸಾಹಿತ್ಯವನ್ನು ಕುರಿತು ಹೆಚ್ಚಿನ ಅಧ್ಯಯನಗಳು ಕಂಡುಬರುವುದಿಲ್ಲ. ಪ್ರವಾಸ ಕಥನಗಳ ಬಗ್ಗೆ ಹಲವು ಕೃತಿಗಳಿದ್ದರೂ ಮಹಿಳಾ ಸಂವೇದನೆಗಳನ್ನು ಗುರುತಿಸುವಂತಹ ಅಧ್ಯಯನಗಳಾಗಿಲ್ಲ. ಒಟ್ಟಾರೆ ಪ್ರವಾಸ ಕಥನಗಳ ವಿಮರ್ಶೆಯೊಳಗೆ ಕೆಲವು ಮಹಿಳಾ ಪ್ರವಾಸ ಕೃತಿಗಳ ವಿಶ್ಲೇಷಣೆಗಳನ್ನು ಗಮನಿಸಬಹುದಾಗಿದೆ. ಇಂತವುಗಳಲ್ಲಿ ಕೆಲವು ಪೂರ್ಣ ಪ್ರಮಾಣದ ಅಧ್ಯಯನಗಳಾದರೆ, ಇನ್ನು ಕೆಲವು ಅಂಶಿಕವಾಗಿ ಪ್ರವಾಸ ಕಥನಗಳ ಬಗೆಗಿನ ಅಧ್ಯಯನಗಳಾಗಿವೆ. ಈ ಬಗೆಯ ಕೆಲವು ಅಧ್ಯಯನ ಕೃತಿಗಳನ್ನು ಅವಲೋಕಿಸಿ ಅವುಗಳಲ್ಲಿನ ತಾತ್ವಿಕತೆಯನ್ನು ಇಲ್ಲಿ ಸಮೀಕ್ಷಿಸಲಾಗಿದೆ. ಕನ್ನಡ ಮಹಿಳಾ ಪ್ರವಾಸ ಕಥನಗಳ ಕುರಿತು ಇದುವರೆಗೆ ಬಂದಂತಹ ಪಿಎಚ್.ಡಿ. ಮಹಾಪ್ರಬಂಧಗಳನ್ನು, ಎಂ.ಫಿಲ್. ನಿಬಂಧಗಳನ್ನು, ವಿಮರ್ಶಾ ಕೃತಿಗಳನ್ನು ಮತ್ತು ಕೆಲವು ಪ್ರಮುಖ ಲೇಖನಗಳನ್ನು ಪ್ರಸ್ತುತ ಸಮೀಕ್ಷೆಗೆ ಒಳಪಡಿಸಲಾಗಿದೆ.

ಕನ್ನಡ ಪ್ರವಾಸ ಸಾಹಿತ್ಯಗಳನ್ನು ಕುರಿತು ಪಿಎಚ್.ಡಿ. ಮತ್ತು ಎಂ.ಫಿಲ್. ಅಧ್ಯಯನಗಳಾಗಿವೆ. ಮೊದಲಿಗೆ ಪಿಎಚ್.ಡಿ. ಮಹಾಪ್ರಬಂಧವನ್ನು ಕುರಿತು ಗಮನಿಸಬಹುದಾಗಿದೆ. ಎಸ್.ಪೂರ್ಣಿಮ ಅವರ 'ಅಮೇರಿಕಾ ಪ್ರವಾಸ ಕಥನಗಳ ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯವು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧವಾಗಿದೆ. ಪ್ರಾತಿನಿಧಿಕ ವಾಗಿ ಆಯ್ದ ಕೃತಿಗಳ ಕುರಿತು ಅಧ್ಯಯನ ನಡೆಸಿರುವ ಪ್ರಬಂಧದಲ್ಲಿ ಒಟ್ಟು ಎಂಟು ಅಧ್ಯಾಯಗಳಿವೆ. ಪ್ರವಾಸ ಸಾಹಿತ್ಯದ ಹುಟ್ಟು ಬೆಳವಣಿಗೆ ಸ್ವರೂಪವನ್ನು ಒಳಗೊಂಡಂತೆ, ಅಮೇರಿಕಾ ದೇಶವು ಪ್ರವಾಸಿಗರ ಹೆಚ್ಚು ಆಕರ್ಷಣೆಗಳಿಗೆ ಒಳಗಾಗಿರುವುದರಿಂದ ಸಾಂಸ್ಕೃತಿಕ ಅಧ್ಯಯನಕ್ಕೆ ಒತ್ತುಕೊಟ್ಟಿದ್ದಾರೆ. ಅಲ್ಲಿಯ ಸಾಮಾಜಿಕ, ಸಾಹಿತ್ಯಕ, ಅರ್ಥಿಕ ಮೊದಲಾದ ವಿಷಯಗಳನ್ನು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಅಳವಡಿಸಿ, ಭಾರತ ಮತ್ತು ಅಮೇರಿಕಾದ ಸಂಸ್ಕೃತಿಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುತ್ತಾರೆ. ಮಹಿಳಾ ಪ್ರವಾಸ ಕಥನಗಳ ವಿಶ್ಲೇಷಣೆಯ ಅಧ್ಯಾಯದಲ್ಲಿ ಅನುಪಮಾ ನಿರಂಜನ ಅವರ 'ಅಂಗೈಯಲ್ಲಿ ಯುರೋ ಅಮೇರಿಕಾ', ಪಾರ್ವತಮ್ಮ ಮಹಾಲಿಂಗಶೆಟ್ಟಿಯವರ 'ಅಮೇರಿಕಾದ ಇತಿಹಾಸ ಮತ್ತು ಜನಜೀವನ', ಸುಧಾಮೂರ್ತಿಯವರ 'ಆಟ್ಲಾಂಟಿಕ್‌ದಾಚೆಗೆ', ಪದ್ಮಾಶಣೈ ಅವರ 'ಅಮೇರಿಕಾ: ವಾಸ ಪ್ರವಾಸ', ಲಲಿತಾ ಸುಬ್ಬರಾವ್ ಅವರ 'ನಾನು ಮತ್ತು ಅಮೇರಿಕಾ' ಮುಂತಾದ ಪ್ರವಾಸ ಕಥನಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಈ ಮಹಿಳಾ ಪ್ರವಾಸ ಕಥನಗಳಲ್ಲಿನ ಸಾಮಾಜಿಕ ಅಂಶಗಳು, ಅರ್ಥಿಕ ಅಂಶಗಳು, ಸಾಂಸ್ಕೃತಿಕ ಅಂಶಗಳನ್ನು ಈ ಭಾಗದಲ್ಲಿ ವಿಶ್ಲೇಷಿಸುತ್ತಾರೆ.

ಪ್ರವಾಸ ಕಥನಗಳ ಕುರಿತ ಅಧ್ಯಯನದಲ್ಲಿ ಎಂ.ಫಿಲ್. ನಿಬಂಧಗಳು ಮುಖ್ಯವಾಗಿವೆ. 'ಅಮೇರಿಕಾ ಕುರಿತ ಮೂರು ಪ್ರವಾಸ ಕಥನಗಳ ಅಧ್ಯಯನ' ಎಂಬ ಸಂಪ್ರಬಂಧವನ್ನು

ತುಕಾರಾಮ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ನಿಬಂಧವು ಒಟ್ಟು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಎ.ಎನ್.ಮೂರ್ತಿರಾವ್ ಅವರ 'ಅಪರವಯಸ್ಕನ ಅಮೇರಿಕಾ ಯಾತ್ರೆ', ಬಿ.ಜಿ.ಎಲ್. ಸ್ವಾಮಿಯವರ 'ಅಮೇರಿಕಾದಲ್ಲಿ ನಾನು' ಮತ್ತು ಸಾರಾ ಅಬೂಬಕ್ಕರ್ ಅವರ 'ಐಷಾರಾಮದ ಆಳದಲ್ಲಿ' ಎಂಬ ಅಮೇರಿಕಾ ಕುರಿತಾದ ಮೂರು ಕೃತಿಗಳನ್ನು ಅಧ್ಯಯನಕ್ಕೆ ಆಯ್ದು ಕೊಂಡಿದ್ದಾರೆ. ನವೋದಯ ಪಂಥದಿಂದ ಎ.ಎನ್.ಮೂರ್ತಿರಾವ್, ನವ್ಯ ಪಂಥದಿಂದ ಬಿ.ಜಿ.ಎಲ್.ಸ್ವಾಮಿ, ಬಂಡಾಯ ಪಂಥದಿಂದ ಸಾರಾ ಅಬೂಬಕ್ಕರ್ ಅವರುಗಳು ಅಮೇರಿಕಾ ಪ್ರವಾಸ ಕೈಗೊಂಡ ಪ್ರವಾಸ ಕೃತಿಗಳನ್ನು ಪ್ರಾತಿನಿಧಿಕವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮಹಿಳಾ ಲೇಖಕರಾದ ಸಾರಾ ಅಬೂಬಕ್ಕರ್ ಅವರ ಪ್ರವಾಸ ಕಥನಗಳನ್ನು ಆಯ್ದುಕೊಂಡಿರುವುದರಿಂದ ಪುರುಷ ಲೇಖಕರ ಮತ್ತು ಮಹಿಳಾ ಲೇಖಕಿಯರ ವಿಭಿನ್ನ ದೃಷ್ಟಿಕೋನಗಳನ್ನು ಗುರುತಿಸಲು ಸಾಧ್ಯವಾಗಿದೆ. ಭಾರತದ ಬಗೆಗೆ ಭಾರತೀಯ ಸಂಸ್ಕೃತಿ, ಜನಜೀವನದ ಬಗೆಗೆ ಆಯಾ ಲೇಖಕರ ದೃಷ್ಟಿಕೋನ ಹಾಗೂ ಅಭಿಪ್ರಾಯಗಳಲ್ಲಿರುವ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. 'ಅಮೇರಿಕಾ ಪ್ರವಾಸ ಕಥನಗಳ ಸಾಂಸ್ಕೃತಿಕ ನೋಟಗಳು' ಎಂಬ ಅಧ್ಯಾಯದಲ್ಲಿ ಸಾಮಾಜಿಕ ವ್ಯವಸ್ಥೆಯ ಪ್ರತಿಕ್ರಿಯೆಗಳು, ಲೇಖಕರ ಪ್ರವಾಸ ಕಥನಗಳಲ್ಲಿನ ಭಿನ್ನ ದೃಷ್ಟಿಕೋನಗಳನ್ನು ಜನಾಂಗೀಯ ತಾರತಮ್ಯಗಳು ಮತ್ತು ಮಾನವ ಸಂಬಂಧಗಳ ಬಗೆಗೆ ವಿಶ್ಲೇಷಿಸಲಾಗಿದೆ. 'ಮಹಿಳಾ ಜಗತ್ತಿನ ಚಿತ್ರಣ' ಎಂಬ ಉಪ ಅಧ್ಯಾಯದಲ್ಲಿ ಪುರುಷ ಲೇಖಕರು ಅಮೇರಿಕಾ ಮಹಿಳೆಯರ ಬಾಹ್ಯ ಚಟುವಟಿಕೆಗಳನ್ನು ಕುರಿತು ಚರ್ಚಿಸಿದ್ದಾರೆ. ಮಹಿಳಾ ಲೇಖಕಿಯಾದ ಸಾರಾ ಅಬೂಬಕ್ಕರ್ ಅವರು ಪುರುಷ ಲೇಖಕರಿಗಿಂತ ಭಿನ್ನವಾಗಿ ಅಮೇರಿಕಾದಲ್ಲಿನ ಮಹಿಳೆಯರ ಸಾಮಾಜಿಕ ಸಮಸ್ಯೆಗಳು, ಮಹಿಳಾ ಹೋರಾಟಗಳು, ರಾಜಕೀಯ, ಸಾಮಾಜಿಕ ಜೀವನವನ್ನು ಅಧ್ಯಯನಕಾರರು ಗುರುತಿಸಿದ್ದಾರೆ.

ಕನ್ನಡ ಪ್ರವಾಸ ಕಥನಗಳ ಕುರಿತು ಅಧ್ಯಯನ ಮಾಡುವವರಿಗೆ ಪ್ರವಾಸ ಸಾಹಿತ್ಯದ ಮೇಲೆ ಬಂದಿರುವ ವಿಮರ್ಶಾ ಕೃತಿಗಳ ಅಧ್ಯಯನವು ಮುಖ್ಯವಾಗುತ್ತವೆ. ಕನ್ನಡ ಪ್ರವಾಸ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಎಸ್.ವಿದ್ಯಾಶಂಕರ್ ಅವರ 'ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ' ಎಂಬ ಕೃತಿಯು ಅತ್ಯಂತ ಉಪಯುಕ್ತವೆನಿಸಿದೆ. ಕೃತಿಯ ಶೀರ್ಷಿಕೆಯೇ ಹೇಳುವ ಹಾಗೆ, ಪ್ರವಾಸೋದ್ಯಮ ಇಲಾಖೆ, ಸ್ಥಾಪನೆ, ಉದ್ದೇಶ, ಗುರಿ, ಸಾಧನೆಗಳ ಬಗ್ಗೆ ಚಾರಿತ್ರಿಕ ವಿವರಗಳಿವೆ. ಪ್ರವಾಸಿ ವಾರ್ತಾ ಕಛೇರಿಗಳು, ಭಾರತ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದ ತೀರ್ಥಯಾತ್ರೆ ಸಾಹಿತ್ಯ, ಅನುವಾದ ಸಾಹಿತ್ಯಗಳ ವಿಭಾಗ ಕ್ರಮದಲ್ಲಿ ಕೃತಿಯನ್ನು ನೋಡಲಾಗಿದೆ. ಈ ಕೃತಿಯ ಬೆನ್ನುಡಿಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಎಸ್.ಜಿ.ಸಿದ್ದರಾಮಯ್ಯ ಅವರು "ಒಂದು ದೇಶವನ್ನು ಕುರಿತು ಹಲವು ಪ್ರವಾಸಾನುಭವಗಳು ಬಂದಿದ್ದರೂ ನೋಡುವವರ ಕಣ್ಣಿನ ಗ್ರಹಿಕೆಗನುಗುಣವಾಗಿ ಅಲ್ಲಿನ ಅನುಭವದ ಅಸ್ಮಿತೆ ವಿಶಿಷ್ಟವೆನ್ನಿಸಿದಂತೆ ಹರಿದಿರುತ್ತದೆ. ಇದೆಲ್ಲವನ್ನು ಎಸ್.ವಿದ್ಯಾಶಂಕರ್ ಅವರು ಒಳನೋಟ ಹರಿಸಿ ವಿಶ್ಲೇಷಿಸಿದ್ದಾರೆ. ಅಲ್ಲಿನ ಚಾರಿತ್ರಿಕ, ಸಾಂಸ್ಕೃತಿಕ ಮಹತ್ವಗಳ

ಬಗೆಗಿನ ಭಿನ್ನ ಅಭಿಪ್ರಾಯಗಳನ್ನು ಸಮಚಿತ್ತದಲ್ಲಿ ವಿಶ್ಲೇಷಿಸಿದ್ದಾರೆ. ಇದೊಂದು ಕನ್ನಡಕ್ಕೆ ಅಪೂರ್ವವಾದ ಕೊಡುಗೆ." (ವಿದ್ಯಾಶಂಕರ್.ಎಸ್., ೨೦೦೬, ಬೆನ್ನುಡಿ) ಎಂದಿದ್ದಾರೆ. ಈ ಅಭಿಪ್ರಾಯಕ್ಕೆ ಪೂರಕವೆಂಬಂತೆ ಈ ಕೃತಿಯು ಪ್ರವಾಸೋದ್ಯಮ ಮತ್ತು ಪುರುಷ ಪ್ರವಾಸ ಕಥನಗಳ ವೈವಿಧ್ಯ ವಿವರಣೆಗಳ ಜೊತೆಗೆ ಮಹಿಳಾ ಪ್ರವಾಸಿಗರಾದ ಸುಧಾಮೂರ್ತಿ, ನೀಳಾದೇವಿ, ಜಯಶ್ರೀ.ಕೆ.ಆರ್, ಅನುಪಮಾ ನಿರಂಜನ, ಸುಶೀಲ ಕೊಪ್ಪರ್, ಜಯಾ ರಾಜಶೇಖರ್, ಕುಲಶೇಖರಿ, ರಾಜಾಮ್ಮಣ್ಣಿ ನಾಗರಾಜ್‌ರಾವ್, ಪಾರ್ವತಮ್ಮ ಮಹಾಲಿಂಗಶೆಟ್ಟಿ, ವಸಂತಿ ಚಂದ್ರ ಮುಂತಾದವರು ಮಹಿಳಾ ಪ್ರವಾಸ ಕಥನಗಳನ್ನು ವಿವರಿಸಿದ್ದಾರೆ. ಮಹಿಳಾ ಪ್ರವಾಸಿಗರ ಕಥನ ಶೈಲಿ, ಸ್ವರೂಪ ಮತ್ತು ಮಹಿಳಾ ಸಂವೇದನೆಯನ್ನು ನಿರೂಪಿಸಿದ್ದಾರೆ.

ಪ್ರವಾಸ ಕಥನಗಳ ಅಧ್ಯಯನಕ್ಕೆ ಲತಾಗುತ್ತಿ ಅವರ 'ಪ್ರವಾಸ ಸಾಹಿತ್ಯ: ವಿಶ್ವಸಂಸ್ಕೃತಿಗಳು' ಎಂಬ ಕೃತಿಯು ಮಹತ್ವವನ್ನು ಪಡೆದುಕೊಳ್ಳುತ್ತದೆ. ಕನ್ನಡದ ಪ್ರವಾಸ ಕಥನಗಳು ಕಟ್ಟಿಕೊಟ್ಟಿರುವ ವಿಶ್ವಸಂಸ್ಕೃತಿಯ ಸ್ವರೂಪವನ್ನು ವಿಶ್ಲೇಷಿಸುತ್ತವೆ. ಅಧ್ಯಯನಕಾರರು ಇಲ್ಲಿ ಅನೇಕ ಕನ್ನಡ ಪ್ರವಾಸ ಕಥನಗಳನ್ನು ಓದಿ ಅವುಗಳ ಸೂಕ್ಷ್ಮ ನೆಲೆ-ಬೆಲೆಯನ್ನು ಪರ್ಯಾಯವಾಗಿ ಗುರುತಿಸುತ್ತಾರೆ. ವಿವಿಧ ರಾಜ್ಯಗಳ, ದೇಶಗಳ ಜನರ ಜೀವನ ವಿಧಾನ ರೂಢಿಸಂಪ್ರದಾಯವನ್ನು ಗಮನಿಸುತ್ತಾರೆ. ಯುರೋಪ್ ಜನರ ಸಂಸ್ಕೃತಿ ಆಚರಣೆಗಳು ಉಡುಗೆ-ತೊಡುಗೆಗಳು, ಭಿನ್ನ ರೀತಿಯ ಸಂಸ್ಕೃತಿಯ ಚಹರೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಉತ್ತರ ಅಮೇರಿಕಾ ಸಂಸ್ಕೃತಿಯನ್ನು ಇತರೆ ದೇಶಗಳ ಸಂಸ್ಕೃತಿಯ ಚಹರೆಗಳೊಂದಿಗೆ ಹೋಲಿಸಿ ವಿಶ್ಲೇಷಿಸಿದ್ದಾರೆ. ದಕ್ಷಿಣ ಅಮೇರಿಕಾದಲ್ಲಿರುವ ಬುಡಕಟ್ಟು ಸಂಸ್ಕೃತಿಗಳು ಇನ್ಕಾ(ಇಂಕಾ), ಮಾಯಾ ಸಂಸ್ಕೃತಿ, ನಾಸ್ಕ, ಮೋಛೆ ಸಂಸ್ಕೃತಿಗಳನ್ನು ವಿಶ್ಲೇಷಿಸಲಾಗಿದೆ. ಆಫ್ರಿಕಾ ಸಂಸ್ಕೃತಿಯನ್ನು ಕುರಿತು ಮತ್ತು ಅಲ್ಲಿನ ಬುಡಕಟ್ಟು ಜನಾಂಗವಾದ ಮಸಾಯಿ ಜನರ ಸಂಸ್ಕೃತಿಯನ್ನು ಚರ್ಚಿಸಲಾಗಿದೆ. ಸಹಾರಾ ಮರುಭೂಮಿ, ಕಲಹಾರಿ ಮರುಭೂಮಿ ಅಲ್ಲಿನ ಜನರ ಜೀವನ, ಹರಿದ್ವರ್ಣ ಕಾಡು ಪ್ರದೇಶ, ಈಜಿಪ್ಟ್‌ನ ಚರಿತ್ರೆ ಕುರಿತಂತೆ ಈ ಕೃತಿಯಲ್ಲಿ ವಿವರಿಸಲಾಗಿದೆ. ಆಸ್ಟ್ರೇಲಿಯಾ ದೇಶದ ಜನರ ಸಂಸ್ಕೃತಿ ಏಷ್ಯಾಖಂಡದಲ್ಲಿ ಬರುವ ಅನೇಕ ರಾಷ್ಟ್ರಗಳ ಸಂಸ್ಕೃತಿಯನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ. ಒಟ್ಟಾರೆಯಾಗಿ ವಿವಿಧ ಪ್ರದೇಶಗಳ ಸಾಂಸ್ಕೃತಿಕ ಚಹರೆಗಳು ವಿಶಿಷ್ಟ ರೀತಿಯ ಸಂಸ್ಕೃತಿಯ ಆಚರಣೆಗಳು, ಪ್ರವಾಸ ಸಾಹಿತ್ಯದಲ್ಲಿ ವಿಶ್ವಸಂಸ್ಕೃತಿಯಾಗಿ ಹೇಗೆ ಒಡಮೂಡಿವೆ. ಎಂಬುದನ್ನು ಪ್ರಸ್ತುತ ಕೃತಿಯಲ್ಲಿ ಚರ್ಚಿಸಲಾಗಿದೆ. ಇದೇ ಲೇಖಕಿಯ 'ಕನ್ನಡ ಪ್ರವಾಸ ಸಾಹಿತ್ಯದ ಒಳನೋಟಗಳು' ಎಂಬುದು ಅವರ ಮಹಾಪ್ರಬಂಧಕ್ಕೆ ಪೂರಕವಾಗಿ ರಚನೆಗೊಂಡ ಒಂದು ಕಿರುಪುಸ್ತಕವಾಗಿದೆ. ಏಷ್ಯಾ, ಯುರೋಪ, ಅಮೇರಿಕಾ, ಆಸ್ಟ್ರೇಲಿಯಾ, ಆಫ್ರಿಕಾ ಖಂಡಗಳಿಗೆ ಪ್ರವಾಸ ಕೈಗೊಂಡ ಪುರುಷ ಮತ್ತು ಮಹಿಳೆಯರ ಪ್ರವಾಸ ಕಥನಗಳ ಕುರಿತು ವಿವರಿಸಿದ್ದಾರೆ. ಬಹುತೇಕ ಮಹಿಳಾ ಪ್ರವಾಸಿಗರ ಕೃತಿಗಳಲ್ಲಿನ ಸ್ವರೂಪ, ಚರಿತ್ರೆ, ವೈವಿಧ್ಯದ ವಿವರಗಳನ್ನು ಸಂಕ್ಷಿಪ್ತವಾಗಿ ನಿರೂಪಿಸುತ್ತಾರೆ. ಕೃತಿಯೊಳಗೆ ಮಹಿಳಾ ಸಂವೇದನೆ, ಜೀವನ, ಸ್ಥಿತಿಗತಿಗಳನ್ನು ಕುರಿತು ಪ್ರಸ್ತಾಪಿಸುವುದಿಲ್ಲ.

ಬಿ.ಟಿ.ಅನುರಾಧ ಅವರ 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ' ಪ್ರವಾಸ ಕಥನದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಪ್ರವಾಸ ಕಥನಗಳು ವಿಭಿನ್ನ ಗ್ರಹಿಕೆಗಳನ್ನು, ಪ್ರವಾಸಿಯ ಮನೋಧರ್ಮ, ಸ್ತ್ರೀ ಸಂವೇದನೆಯ ಸ್ವರೂಪಗಳನ್ನು, ಪ್ರವಾಸ ಸಾಹಿತ್ಯದ ಕೆಲವು ಕೃತಿಗಳ ಸಂಕ್ಷಿಪ್ತ ಪರಿಚಯಗಳನ್ನು, ಪ್ರವಾಸ ಸಾಹಿತ್ಯ ಮತ್ತು ಪ್ರವಾಸೋದ್ಯಮದ ಜಾಗತೀಕರಣದ ಸ್ವರೂಪ ಅಧ್ಯಯನಗಳನ್ನು ಒಳಗೊಂಡಿದೆ. ಮಹಿಳಾ ಪ್ರವಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈ ಕೃತಿಯು ಮಹತ್ವದ ಕೃತಿಯಾಗಿದೆ. ಈ ಕೃತಿಯಲ್ಲಿ ಮಹಿಳೆಯರ ಪ್ರವಾಸ ಸಾಹಿತ್ಯದಲ್ಲಿ ಸ್ತ್ರೀಪರ ಕಾಳಜಿಗಳು, ಸ್ತ್ರೀ ಸಂವೇದನೆಗಳು, ಸಂಸ್ಕೃತಿ ಬಗೆಗಿನ ಕಾಳಜಿಗಳು, ರಾಜಕೀಯ ಅಂಶಗಳು, ವಿಜ್ಞಾನ, ಸಂಶೋಧನೆ ಮುಂತಾದ ವಿಷಯಗಳನ್ನು ಪ್ರಸ್ತಾಪಿಸುವುದಲ್ಲದೇ, ಪ್ರಕೃತಿ ಮತ್ತು ನಿಸರ್ಗದ ಬಗೆಗಿನ ಕಾಳಜಿಗಳನ್ನು, ವಿಭಿನ್ನ ಸಂಸ್ಕೃತಿಗಳನ್ನು ಮುಖಾಮುಖಿಗೊಳಿಸಿದ್ದಾರೆ. ಅಲ್ಲದೇ ಸಾಂಪ್ರದಾಯಿಕತೆಯನ್ನು ಮುರಿವ ಮತ್ತು ಪೋಷಿಸುವ ಅಂಶಗಳನ್ನು ಲೇಖಕಿ ಅವರಲ್ಲಿ ಕಾಣುತ್ತೇವೆ. ವಿದೇಶದಲ್ಲಿ ಮಹಿಳೆಯರ ಸ್ಥಾನಮಾನ, ಅಲ್ಲಿನ ಅಭದ್ರತೆಯನ್ನು, ಸಾಮಾಜಿಕ ಜೀವನವನ್ನು ಚಿತ್ರಿಸಿದ್ದಾರೆ. ಪುರುಷರಷ್ಟೇ ಪರಿಣಾಮಕಾರಿಯಾಗಿ ಚಿತ್ರಿಸಿರುವುದನ್ನು ಈ ಕೃತಿಯ ವೈಶಿಷ್ಟ್ಯಗಳಲ್ಲಿ ಒಂದು. ಸ್ತ್ರೀ ಸಂವೇದನೆಗಳನ್ನು ನಿರೂಪಿಸುವ ಅಧ್ಯಾಯವು ಈ ಅಧ್ಯಯನಕ್ಕೆ ಉಪಯುಕ್ತವಾಗಿದೆ.

ಅಶೋಕ ನರೋಡೆ ಅವರು 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ' ಎಂಬ ಕೃತಿಯಲ್ಲಿ ಪ್ರವಾಸದ ಅನುಭವಗಳನ್ನು ಕುರಿತು ರಚನೆಯಾದ ಹಲವು ಲೇಖನಗಳನ್ನು ಸಂಗ್ರಹಿಸಿದ್ದಾರೆ. ಇದು ಸ್ವದೇಶಿ ಮತ್ತು ವಿದೇಶಿ ಪ್ರವಾಸ ಕೈಗೊಂಡಂತಹ ಲೇಖಕರಿಂದ ಬರೆಯಿಸಿದ ಲೇಖನಗಳ ಸಂಗ್ರಹವಾಗಿದೆ. ಕರ್ನಾಟಕದ ಕೆಲವು ಚಾರಿತ್ರಿಕ ಜಿಲ್ಲೆಗಳನ್ನೊಳಗೊಂಡಂತೆ, ಭಾರತದ ಪ್ರಮುಖ ಸ್ಥಳಗಳನ್ನು ಕುರಿತ ಲೇಖನಗಳಿವೆ. ದುಬೈ, ಸಿಂಗಾಪುರ, ಮಲೇಶಿಯಾ, ಜರ್ಮನ್, ಮಾಸ್ಕೋ, ಅಮೇರಿಕಾ ಮುಂತಾದ ದೇಶಗಳಲ್ಲಿ ಸುತ್ತಾಡಿದ ಅನುಭವಗಳನ್ನು ಲೇಖನದಲ್ಲಿ ಹಂಚಿಕೊಂಡಿದ್ದಾರೆ. ಲತಾಗುತ್ತಿಯವರು ತಮ್ಮ 'ಯುರೋ ನಾಡಿನಲ್ಲಿ' ಎಂಬ ಪ್ರವಾಸ ಕಥನದ ಕುರಿತು ತಾನೇ ಬರೆದಿರುವ ಒಂದು ಲೇಖನವು ಈ ಸಂಕಲನದಲ್ಲಿದೆ. ಮಾತೃಪ್ರೇಮ ವಂಚಿತ ಮಕ್ಕಳು ವಿದೇಶದಲ್ಲಿರುವ ಬಗ್ಗೆ, ಮಹಿಳಾ ಸಂವೇದನೆಯನ್ನು ತೌಲನಿಕವಾಗಿ ಗುರುತಿಸಿದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದ್ದಾರೆ. ಎರಡು ಪುಟಗಳ ಈ ಲೇಖನವು ಮಹಿಳಾ ಪ್ರವಾಸ ಕಥನಗಳ ಬಗೆಗೆ ಹೆಚ್ಚಿನದೇನನ್ನು ಪ್ರಸ್ತಾಪಿಸುವುದಿಲ್ಲ. ಕೃತಿಯ ಕುರಿತು ಪರಿಚಯಾತ್ಮಕವಾದ ಬರಹವನ್ನು ಕಾಣಬಹುದಾಗಿದೆ. ಉಳಿದಂತೆ ಬಹುತೇಕ ಲೇಖನಗಳು ಚರಿತ್ರೆ, ನಿಸರ್ಗ, ಸಾಮಾಜಿಕ, ರಾಜಕೀಯ, ಅಭಿವೃದ್ಧಿ ಅಂಶಗಳ ಕಡೆ ಒತ್ತು ನೀಡುತ್ತವೆ.

ಮಹಿಳಾ ಪ್ರವಾಸ ಸಾಹಿತ್ಯ ಕ್ಷೇತ್ರದಲ್ಲಿ ಪ್ರಮುಖ ಹೆಸರಾದ ನೇಮಿಚಂದ್ರ ಅವರ ಸಮಗ್ರ ಸಾಹಿತ್ಯವನ್ನು ಕುರಿತು ರಮ್ಯ.ವೈ.ಪಿ. ಅವರು ಅಧ್ಯಯನ ನಡೆಸಿರುವ 'ನೇಮಿಚಂದ್ರ ಅವರ

ಪ್ರವಾಸ-ಕಥನಗಳು' ಎಂಬುದು ಪ್ರಕಟಿತ ಎಂ.ಫಿಲ್. ನಿಬಂಧವಾಗಿದೆ. ಈ ಕೃತಿಯಲ್ಲಿ ನೇಮಿಚಂದ್ರ ಅವರ ಬದುಕು-ಬರಹ, ವಿದ್ಯಾಭ್ಯಾಸ, ಸಣ್ಣಕತೆಗಳು, ಪ್ರವಾಸ ಸಾಹಿತ್ಯ ಮತ್ತು ಅವರ ಕಥನಗಳ ವಿನ್ಯಾಸದ ಅಧ್ಯಾಯಗಳನ್ನು ಮಾಡಿಕೊಂಡಿದ್ದಾರೆ. ಅವರ 'ಒಂದು ಕನಸಿನ ಪಯಣ' ಮತ್ತು 'ಪೆರುವಿನ ಪವಿತ್ರ ಕಣಿವೆಯಲ್ಲಿ' ಎಂಬ ಕೃತಿಗಳ ವಿಶ್ಲೇಷಣೆಯಲ್ಲಿ ಮಹಿಳೆಯನ್ನು ಕೇಂದ್ರೀಕರಿಸಿದ ನಿರೂಪಣೆಗಳು ಕಂಡುಬರುವುದಿಲ್ಲ. ಸಾಂದರ್ಭಿಕವಾಗಿ ಉದಾಹರಿಸಿರುವುದನ್ನು ಗಮನಿಸಬಹುದು. ನೇಮಿಚಂದ್ರ ಬದುಕು ಬರಹ ಮತ್ತು ಸಂದರ್ಶನದಲ್ಲಿ ಕೆಲವು ಮಹಿಳಾ ಪರವಾದ ಚಿಂತನೆಗಳು ವ್ಯಕ್ತವಾಗಿವೆ. ಕೃಷ್ಣಾನಂದ ಕಾಮತ್ ಅವರ 'ಪ್ರವಾಸಿ ಪ್ರಬಂಧಗಳು' ಎಂಬುದು ಪ್ರವಾಸಾನುಭವ ಆಧಾರಿತ ಲಲಿತ ಪ್ರಬಂಧಗಳ ಕೃತಿಯಾಗಿದೆ. 'ಸ್ತ್ರೀ ಸೌಂದರ್ಯದ ಶೋಧನೆಯಲ್ಲಿ', 'ಕ್ಯಾಮರ ಕಂಡ ಕನ್ಯೆಯರು' ಅಧ್ಯಾಯಗಳು ಮಹಿಳೆಯರ ಕುರಿತಾದ ಬರಹಗಳಾಗಿವೆ. ಇವುಗಳನ್ನು ವಸ್ತುನಿಷ್ಠವಾಗಿ ರಸವತ್ತಾದ ನಿರೂಪಣೆಯೊಂದಿಗೆ ನವಿರಾದ ಹಾಸ್ಯದ ಶೈಲಿಯ ಅನ್ವೇಷಕ ದೃಷ್ಟಿಕೋನವನ್ನು ಪರಿಚಯಿಸುತ್ತಾರೆ.

ಮಹಿಳಾ ಪ್ರವಾಸ ಕಥನಗಳನ್ನು ಕುರಿತು ಮಲ್ಲೇಪುರಂ ಜಿ.ವೆಂಕಟೇಶ ಅವರು ಸಂಪಾದಿಸಿರುವ 'ಪ್ರವಾಸ ಸಾಹಿತ್ಯ ಒಂದು ಅಧ್ಯಯನ' ಕೃತಿಯು ವಿಚಾರ ಸಂಕಿರಣ ಒಂದರಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನವಾಗಿದೆ. ಪ್ರವಾಸ ಕಥನಗಳ ಜೊತೆಗೆ ಬೇರೆ ಬೇರೆ ವಲಯದ ವಿಷಯಗಳನ್ನು ಲೇಖನವಾಗಿಸಿದ್ದಾರೆ. ಎಸ್.ಎಸ್.ತಾರಾನಾಥ, ಹೋ.ಶ್ರೀನಿವಾಸಯ್ಯ, ಎಚ್.ಎಸ್.ವೆಂಕಟೇಶಮೂರ್ತಿ, ಕೆ.ಎಂ.ಮುನಿಕೃಷ್ಣಪ್ಪ, ಅನುಪಮಾ ನಿರಂಜನ, ಸಿ.ಪಿ.ಕೃಷ್ಣಕುಮಾರ, ಎಚ್.ಕೆ.ರಂಗನಾಥ, ಕೆ.ಅನಂತರಾಮು ಈ ಎಲ್ಲಾ ಸಾಹಿತಿಗಳು ಬರೆದ ಲೇಖನಗಳ ಸಂಗ್ರಹದ ಕೃತಿ ಇದಾಗಿದೆ. ಮಲ್ಲೇಪುರಂ ಜಿ.ವೆಂಕಟೇಶ ಅವರು 'ಶೈಕ್ಷಣಿಕ ಮಹತ್ವದ ಪ್ರವಾಸ ಗ್ರಂಥ' ಎಂಬ ಶೀರ್ಷಿಕೆಯಲ್ಲಿ 'ಜಯಶ್ರೀ ಕಂಡ ಜಗತ್ತು' ಎಂಬ ಪುಸ್ತಕದ ಪರಿಚಯ ಮಾಡಿರುತ್ತಾರೆ. ಸಾಂದರ್ಭಿಕವಾಗಿ 'ಶ್ರೀಬಾಲ ಗಂಗಾಧರನಾಥ ಸ್ವಾಮಿಜಿಯವರ ಪ್ರವಾಸ ಅನುಭವದ ವಿಶಿಷ್ಟತೆ' ಎಂಬ ಬರಹವಿದೆ. ಜಿ.ಎಸ್.ಶಿವರುದ್ರಪ್ಪ ಅವರು ಪ್ರವಾಸ ಸಾಹಿತ್ಯದ ಮಹತ್ವ ಮತ್ತು ನಿಲುವುಗಳನ್ನು ಪ್ರಸ್ತಾಪಿಸಿದ್ದಾರೆ. ಪ್ರವಾಸ ಎನ್ನುವುದು ಶಿಕ್ಷಣದ ಒಂದು ಭಾಗವೆನ್ನುತ್ತಾರೆ. ಪ್ರವಾಸಕ್ಕೆ ಹೋದ ಪ್ರವಾಸಿಗರು ಎನೆಲ್ಲಾ ಅಂಶಗಳನ್ನು ಗಮನಿಸಬೇಕು, ಯಾವ ಅಂಶಗಳು ನಮಗೆ ಮುಖ್ಯ, ಬರವಣಿಗೆಯ ಶೈಲಿ ಹೇಗಿರಬೇಕೆಂಬುದನ್ನು ಜಿ.ಎಸ್.ಶಿವರುದ್ರಪ್ಪ ಅವರು ಪ್ರಸ್ತಾಪಿಸುತ್ತಾರೆ. ಎನ್.ಎಸ್.ತಾರಾನಾಥ ಅವರು ಪ್ರವಾಸ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣಗಳ ಬಗ್ಗೆ ವಿವರಿಸುತ್ತಾರೆ. ಪ್ರವಾಸ ಸಾಹಿತ್ಯವು ಗದ್ಯರೂಪದ್ದಾಗಿದ್ದು, ಆತ್ಮವೃತ್ತಾಂತದ ನಿರೂಪಣಾ ವಿಧಾನಗಳ ಕುರಿತು ವಿವರಿಸುತ್ತಾರೆ. ಪ್ರವಾಸ ಕಥನಕಾರರ ಸೃಜನಶೀಲತೆಯ ದೃಷ್ಟಿಕೋನಗಳು ಹೇಗೆ ಭಿನ್ನವಾಗಿರುತ್ತವೆ ಎಂಬುದನ್ನು ಚರ್ಚಿಸುತ್ತಾರೆ. ಆದರೆ ಸ್ವದೇಶಿ ಮತ್ತು ವಿದೇಶಿ ಮಹಿಳೆಯರನ್ನು ಪ್ರತಿನಿಧಿಸುವಂತಹ ಹೆಚ್ಚಿನ ವಿವರಗಳನ್ನು ಇಲ್ಲಿನ ಬರಹಗಳು ಒದಗಿಸುವುದಿಲ್ಲ.

ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ: ಯುರೋಪ್' ಈ ಲೇಖನದಲ್ಲಿ ಯುರೋಪನ್ನು ಗ್ರಹಿಸಿದ ಕ್ರಮ ಪ್ರವಾಸ ಕಥನಗಳಲ್ಲಿ ಹೇಗೆ ಪ್ರಕಟಗೊಂಡಿದೆ ಎಂಬುದನ್ನು ವಿವರಿಸಿದ್ದಾರೆ. ಅಮೇರಿಕಾ ಮತ್ತು ಯುರೋಪ್ ಪ್ರವಾಸ ಕಥನಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುವುದಲ್ಲದೇ, ಭಾರತೀಯ ಮನೋಭಾವಕ್ಕೆ ಯುರೋಪ್ ಹತ್ತಿರವೆನಿಸುತ್ತದೆ ಎಂದಿದ್ದಾರೆ. ಅನುಪಮಾ ನಿರಂಜನ ಅವರು 'ಪ್ರವಾಸ ಸಾಹಿತ್ಯ: ಧನ್ಯತೆಯ ಕ್ಷಣಗಳು' ಎಂಬ ಲೇಖನದಲ್ಲಿ ತಾವು ಪ್ರವಾಸ ಕೈಗೊಂಡಂತಹ ಸಂದರ್ಭದಲ್ಲಿ ತಮಗಾದಂತಹ ಅನುಭವಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಕೆ.ಎಂ.ಮುನಿಕೃಷ್ಣಪ್ಪ ಅವರು 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ: ಪೂರ್ವ ದೇಶಗಳು' ಎಂಬ ಲೇಖನದಲ್ಲಿ ಜಪಾನ್, ಸಿಂಗಪೂರ, ಹಾಂಕಾಂಗ್, ಬ್ಯಾಂಕಾಂಗ್ ವೈಶಿಷ್ಟ್ಯಗಳನ್ನು ನಿರೂಪಿಸಿದ್ದಾರೆ. ಕೆ.ಅನಂತರಾಮು ಅವರು ಬರೆದಿರುವ 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ: ಭಾರತ' ಎಂಬ ಲೇಖನದಲ್ಲಿ ಭಾರತದೊಳಗೆ ಪ್ರವಾಸ ಕೈಗೊಂಡಂತಹ ಹಲವಾರು ಕೃತಿಗಳನ್ನು ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ, ಕಲೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಶಾಂತಾದೇವಿ ಮಾಳವಾಡ ಅವರ 'ಶ್ರೀಗಿರಿಯಿಂದ ಹಿಮಗಿರಿಯವರೆಗೆ', ಮಹಾದೇವಿಯಮ್ಮ ಅವರ 'ದೇವತಾತ್ಮ', ಎಂ.ಕೆ.ಇಂದಿರಾ ಅವರ 'ಅನುಭವ ಕುಂಜ', ವಸಂತಿ ಚಂದ್ರ ಅವರ 'ಭಾರತಿ ದರ್ಶನ', ಪಿ.ಆರ್.ಜಯಲಕ್ಷ್ಮಮ್ಮ ಅವರ 'ಬದರಿಯಾತ್ರೆ' ಮುಂತಾದ ಪ್ರವಾಸ ಕಥನಗಳಲ್ಲಿ ಬಹುತೇಕ ಧಾರ್ಮಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಕೃತಿಗಳಾದ ಕಾರಣ ಮಹಿಳಾ ಸಂವೇದನೆಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಲೇಖಕರು ಪ್ರವಾಸ ಕಥನಗಳ ಸ್ವರೂಪ ವೈವಿಧ್ಯಗಳನ್ನು ಪ್ರಸ್ತಾಪಿಸುತ್ತಾರೆ. ಕರೀಗೌಡ ಬೀಚನಹಳ್ಳಿ ಅವರ ಸಂಪಾದಿಸಿರುವ 'ಕನ್ನಡ ವಾರ್ಷಿಕ ೧೯೯೩' ಎಂಬ ಕೃತಿಯಲ್ಲಿ ಎ.ವಿ.ನಾವಡ ಅವರ 'ಪ್ರವಾಸ ಸಾಹಿತ್ಯ' ಎಂಬ ಲೇಖನದಲ್ಲಿ ೧೯೯೩ರ ಒಳಗೆ ಬಂದಂತಹ ಪ್ರಮುಖ ನಾಲ್ಕು ಪ್ರವಾಸ ಕಥನಗಳನ್ನು ಸಮೀಕ್ಷೆಗೆ ಒಳಪಡಿಸಿದ್ದಾರೆ. ಲತಾಗುತ್ತಿ ಅವರ 'ಯುರೋ ನಾಡಿನಲ್ಲಿ' ಕೃತಿಯ ಕುರಿತು ಯುರೋಪ್‌ನ ಚಾರಿತ್ರಿಕ, ನೈಸರ್ಗಿಕ, ಗ್ರಂಥಾಲಯ, ಚಿತ್ರಶಾಲೆ, ಕಲೆ, ಚರ್ಚ್‌ಗಳ ಬಗೆಗಿನ ಮಾಹಿತಿಯನ್ನು ನೀಡುತ್ತಾರೆ. ಈ ಬರಹವು ವಿವರಣಾತ್ಮಕ ಧಾಟಿಯಲ್ಲಿದ್ದರೂ, ಬರಿಯ ಮಾಹಿತಿ ಕೋಶವಾಗದೆ ವ್ಯಕ್ತಿ ವಿಶಿಷ್ಟವಾದ ಕೆಲವು ಹೊಳಹುಗಳನ್ನು ನೀಡುತ್ತದೆ ಮತ್ತು ತೌಲನಿಕ ವಿವೇಚನೆಯನ್ನು ಮಾಡುತ್ತದೆ ಎನ್ನುತ್ತಾರೆ. ಈ ಕೃತಿಯಲ್ಲಿ ಮಹಿಳಾ ಸಂವೇದನೆಗಳಿರುವ ಕುರಿತು "ಪ್ಯಾರಿಸ್ ಮಹಿಳೆಯರ ಬಿಡುವಿಲ್ಲದ ದುಡಿಮೆ. ವೃತ್ತಿಗೌರವ. ಇನ್ನೊಬ್ಬರ ಮನೆಯಲ್ಲಿ ಆಳಾಗಿ ದುಡಿಯುವಲ್ಲಿ ನಿಸ್ಸಂಕೋಚತನ ಇವುಗಳನ್ನು ಗುರುತಿಸುತ್ತಾರೆ."(ಕರೀಗೌಡ ಬೀಚನಹಳ್ಳಿ(ಸಂ), ೧೯೯೩, ಪುಟ-೧೭೭) ಎಂದು ಹೇಳುತ್ತಾರೆ. ಪದ್ಮಾಶಣೈ ಅವರ 'ವಾಸ ಪ್ರವಾಸ' ಕೃತಿಯಲ್ಲಿ ವ್ಯಕ್ತವಾಗಿರುವ ಅಮೇರಿಕ ಕುಟುಂಬದ ಸ್ವರೂಪ ಮಕ್ಕಳ-ಪಾಲಕರ ಸಂಬಂಧ, ವಿವಾಹದ ಕಲ್ಪನೆ, ವಿವಾಹ ಬಾಹಿರ ಲೈಂಗಿಕ ಸಂಬಂಧ, ಕರಾರು ರೂಪದ ಹೆಣ್ಣು-ಗಂಡು ಸಂಬಂಧ, ವಿವಾಹ ವಿಚ್ಛೇದನ, ಕ್ರೌರ್ಯ, ಹಿಂಸೆ, ನಿರ್ಗತಿಕ ಮಕ್ಕಳನ್ನು, ಸಾಕುವ ಸಾಕು ಮನೆ ಮುಂತಾದ ಹಲವಾರು ವಿಚಾರಗಳಿರುವ ಬಗ್ಗೆ ತಿಳಿಸುತ್ತಾರೆ. ಕೃಷ್ಣಾನಂದ ಕಾಮತ್ ಅವರ

'ಮಧ್ಯಪ್ರದೇಶದ ಮಡಿಲಲ್ಲಿ', ಮತ್ತು ಕು.ಶಿ.ಹರಿದಾಸಭಟ್ಟ ಅವರ 'ರಶಿಯಾದಲ್ಲಿ ಡೊಳ್ಳಿನ ದಿಗ್ವಿಜಯ' ಎಂಬ ಕೃತಿಗಳನ್ನು ವಿಮರ್ಶಾತ್ಮಕ ನೆಲೆಯಲ್ಲಿ ವಿಶ್ಲೇಷಿಸುತ್ತಾರೆ.

ಆರ್ಯಾಂಬ ಪಟ್ಟಾಭಿ ಅವರು ಸಂಪಾದಿಸಿರುವ 'ಮಹಿಳಾ ಸಾಹಿತ್ಯ ಸಮೀಕ್ಷೆ' ಎಂಬ ಕೃತಿಯಲ್ಲಿ ಸೀತಾಹನಸೋಗೆಯವರು 'ಪ್ರವಾಸ ಮತ್ತು ಕ್ರೀಡೆ' ಎಂಬ ಲೇಖನದಲ್ಲಿ ಪ್ರವಾಸ ಸಾಹಿತ್ಯವು ಅಡುಗೆ ಮನೆಗಷ್ಟೇ ಸೀಮಿತವಾಗಿದ್ದ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ದೊರೆತು ಪ್ರವಾಸ ಮಾಡುತ್ತಿದ್ದಾರೆ ಎಂದಿದ್ದಾರೆ. ಪ್ರವಾಸ ಕಥನಗಳನ್ನು ಸ್ವರಾಜ್ಯ ಪ್ರವಾಸ, ಸ್ವದೇಶ ಪ್ರವಾಸ ಮತ್ತು ವಿದೇಶ ಪ್ರವಾಸ ಸಾಹಿತ್ಯಗಳೆಂದು ಮೂರು ರೀತಿಯಲ್ಲಿ ವಿಭಾಗಿಸಿ, ಒಟ್ಟು ಮಹಿಳೆಯರ ಒಟ್ಟು ೪೦ ಪ್ರವಾಸ ಕಥನಗಳನ್ನು ಹೆಸರಿಸಿದ್ದಾರೆ. ಅವುಗಳಲ್ಲಿ ಕೆಲವು ಕೃತಿಗಳನ್ನು ಗಮನಿಸಬಹುದಾಗಿದೆ. ಚಂದ್ರಭಾಗಾ ದೇವಿ ಅವರ 'ಗೆಜ್ಜೆಯ ಹೆಜ್ಜೆಯ ನುಡಿ', ನಿರ್ಮಲಶಣೈ & ಜಿ.ಕೆ.ಶಣೈ ಅವರ 'ಪುತ್ತೂರಿನಿಂದ ಕಾಶ್ಮೀರಕ್ಕೆ', ಶಾಂತಾದೇವಿ ಮಾಳವಾಡ ಅವರ 'ಶ್ರೀಗಿರಿಯಿಂದ ಹಿಮಗಿರಿಗೆ', ರುಕ್ಮಿಣಿ ಗಿರಿಮಾಜಿ ಅವರ 'ಬೆಂಗಳೂರಿನಿಂದ ಬದರಿನಾಥಕ್ಕೆ', ಆಶಾಪೋತದಾರ ಅವರ 'ಪೌರ್ವಾತ್ಯ ದೇಶಗಳ ಹಕ್ಕಿನೋಟ', ಎಂ.ಕೆ.ಇಂದಿರಾ ಅವರ 'ಅನುಭವ ಕುಂಜ', ಸೀತಮ್ಮ ನಂಜೇಗೌಡ ಅವರ 'ನಾವು ಕಂಡ ಅಮೇರಿಕ', ಸರೋಜ ಜಾಮಯ್ಯ ಅವರ 'ಸಿಂಹಾಚಲದಿಂದ ಹಿಮಾಚಲದವರೆಗೆ', ಅನುಪಮಾ ನಿರಂಜನ ಅವರ 'ಅಂಗೈಯಲ್ಲಿ ಯುರೋ ಅಮೇರಿಕಾ', ಶಮಂತ ಅವರ 'ಗಿರಿಸ್ನೇಹ', ನೀಳಾದೇವಿ ಅವರ 'ನಾ ಕಂಡ ಆಖಂಡ', ಜಾನಕಿ ಬ್ರಹ್ಮಾವರ ಅವರ 'ತಿರುಗಾಟದ ತಿರುಳು', ಅನುಪಮಾ ನಿರಂಜನ ಅವರ 'ಸ್ನೇಹಯಾತ್ರೆ', ಲತಾಗುತ್ತಿ ಅವರ 'ಯುರೋ ನಾಡಿನಲ್ಲಿ' ಮುಂತಾದ ಪ್ರವಾಸ ಕಥನಗಳನ್ನು ಸಮೀಕ್ಷೆಗೆ ಒಳಪಡಿಸಿದ್ದಾರೆ. ಮಹಿಳೆಯರ ವಿದೇಶಿ ಪ್ರವಾಸ ಕಥನಗಳು ಸಾಮಾನ್ಯವಾಗಿ ಅಮೇರಿಕ, ರಷ್ಯಾ, ಜಪಾನ್, ಜರ್ಮನಿ, ಆಸ್ಟ್ರೇಲಿಯಾ, ಇಟಲಿ, ಕೆನಡಾ, ಶ್ರೀಲಂಕಾ, ಹಾಂಗಾಂಕ್, ಇಂಡೋಚೈನಾ, ಆರಬ್ ದೇಶಗಳವರೆಗೂ ವ್ಯಾಪಿಸಿವೆ. ಅತೀ ಹೆಚ್ಚು ಪ್ರವಾಸ ಕಥನಗಳು ಬಂದಿರುವುದೆಂದರೆ ಅಮೇರಿಕ ದೇಶದ್ದಾಗಿವೆ. ಸ್ವದೇಶಿ ಕೃತಿಗಳು ಧಾರ್ಮಿಕ, ರಾಜಕೀಯ, ನೈಸರ್ಗಿಕ ಪರಿಚಯವನ್ನು ಮಾಡಿಕೊಟ್ಟರೇ, ವಿದೇಶಿ ಪ್ರವಾಸ ಕಥನಗಳು ಚಾರಿತ್ರಿಕ, ಭೌಗೋಳಿಕ, ರಾಜಕೀಯ, ಸಾಮಾಜಿಕ, ನೈಸರ್ಗಿಕ, ಸಂಸ್ಕೃತಿಗಳನ್ನು ಬಿಂಬಿಸುತ್ತವೆ ಎಂದು ನಿರೂಪಿಸಿದ್ದಾರೆ. ಲೇಖನವೊಂದಕ್ಕೆ ಆಯ್ದ ೪೦ ಕೃತಿಗಳ ಅವಲೋಕನದ ಮಾಹಿತಿಯನ್ನಷ್ಟೇ ನೀಡಲು ಇಲ್ಲಿ ಸಾಧ್ಯವಾಗಿದೆ.

ಇದುವರೆಗೆ ಬಂದಿರುವ ಕೃತಿಗಳು, ಮಹಾಪ್ರಬಂಧಗಳು, ಲೇಖಕಗಳನ್ನು ಅವಲೋಕಿಸಿದಾಗ ಪ್ರವಾಸ ಕಥನಗಳ ಸ್ವರೂಪ, ಚಾರಿತ್ರಿಕ, ಸಾಂಸ್ಕೃತಿಕವಾದ ಅಧ್ಯಯನಗಳು ಹೆಚ್ಚೆಂದು ಹೇಳಬಹುದು. ಮಹಿಳಾ ಸಂವೇದನೆಗಳು ಅಲ್ಲಲ್ಲಿ ಕಾಣಿಸಿಕೊಂಡರು ಮಾಹಿತಿ ಪ್ರಧಾನವಾಗಿ ಕಂಡುಬರುತ್ತವೆ. ಮಹಿಳಾ ಪ್ರವಾಸ ಕಥನಗಳ ಕುರಿತು ಈವರೆಗೆ ಅಧ್ಯಯನಗಳ ಪ್ರಮಾಣ ವಿರಳವಾಗಿರುವುದು ಸ್ಪಷ್ಟವಾಗುತ್ತದೆ. ಲತಾಗುತ್ತಿ, ಬಿ.ಟಿ.ಅನುರಾಧ ಮತ್ತು ಎಸ್.ವಿದ್ಯಾಶಂಕರ್

ಅವರು ತಮ್ಮ ಅಧ್ಯಯನ ಕೃತಿಗಳಲ್ಲಿ ಪುರುಷ ಪ್ರವಾಸ ಕಥನಗಳ ಜೊತೆಗೆ ಮಹಿಳಾ ಪ್ರವಾಸಿಗರ ಕೃತಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಕನ್ನಡ ಪ್ರವಾಸ ಕಥನಗಳ ಕುರಿತು ಇದುವರೆಗೆ ನಡೆದಿರುವ ಇಂತಹ ಕೆಲವು ಅಧ್ಯಯನಗಳನ್ನು ಪೂರಕ ಆಕರಗಳನ್ನಾಗಿಯೂ, ಪ್ರಾತಿನಿಧಿಕ ಮಹಿಳಾ ಪ್ರವಾಸ ಕಥನಗಳನ್ನು ಪ್ರಧಾನ ಆಕರಗಳನ್ನಾಗಿಯೂ ಬಳಸಿಕೊಂಡು ನಡೆಸಿರುವ ಪ್ರಸ್ತುತ ಅಧ್ಯಯನವು ಒಟ್ಟಾರೆ ಮಹಿಳಾ ಪ್ರವಾಸ ಕಥನಗಳ ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳಿಗಿಂತ ಹಲವು ನೆಲೆಗಳಲ್ಲಿ ಭಿನ್ನವಾಗಿ ನಿಲ್ಲುತ್ತವೆ.

❑❑❑

೨.೨ ಕನ್ನಡ ಪ್ರವಾಸ ಕಥನಗಳ ಸ್ವರೂಪ, ಲಕ್ಷಣ ಮತ್ತು ಇತಿಹಾಸ

ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಪ್ರವಾಸ ಕಥನವೂ ಒಂದು. ಈಗಾಗಲೇ ಪ್ರವಾಸ ಕಥನಗಳು ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ಸ್ಥಾನವನ್ನು ಕಲ್ಪಿಸಿಕೊಂಡಿದೆ. ಕತೆ, ಕಾದಂಬರಿ, ನಾಟಕ, ಕಾವ್ಯ ಪ್ರಕಾರಗಳಿಗಿಂತ ಪ್ರವಾಸ ಕಥನಗಳು ಭಿನ್ನವಾಗಿ ಬೆಳೆದು ಬಂದಿವೆ. ಸಾಮಾನ್ಯವಾಗಿ ಪ್ರವಾಸ ಕಥನಗಳನ್ನು ಚರ್ಚೆ ಮಾಡುವಾಗ ತಾವು ನೋಡಿರದ ಬೇರೊಂದು ಜಗತ್ತಿನ ವೈಶಿಷ್ಟ್ಯಗಳನ್ನು ಪ್ರವಾಸ ಕಥನಗಳಲ್ಲಿ ಕಾಣುತ್ತೇವೆ. ಆ ಸ್ಥಳದ ವೈಶಿಷ್ಟ್ಯಗಳು ಅಲ್ಲಿನ ಪರಿಸರ, ರಾಜಕೀಯ ಮತ್ತು ಆ ಪ್ರದೇಶದ ಸಾಂಸ್ಕೃತಿಕ ಮಹತ್ವದ ವಿಷಯಗಳನ್ನು ತಿಳಿಯಬೇಕಾದರೆ ಪ್ರವಾಸ ಕಥನಗಳ ಓದು ಅಗತ್ಯವಾಗಿದೆ. ಪ್ರವಾಸಿಗನ ಅನುಭವಗಳು ಅಕ್ಷರ ರೂಪಕ್ಕೆ ಇಳಿದಾಗ ಅದರ ಪರಿಚಯವು ದೇಶ ವಿದೇಶಗಳಿಗೆ ಹಬ್ಬುತ್ತದೆ. ಹೀಗೆ ಪ್ರವಾಸ ಕಥನಗಳು ದೇಶದ ಹಂಗನ್ನು ತೊರೆದು ವಿಶ್ವದ ಮೂಲೆ ಮೂಲೆಗೂ ಪರಿಚಯವಾಗಿ ಬಿಡುತ್ತವೆ. ಈ ಕಾರಣಕ್ಕಾಗಿಯೇ ಪ್ರವಾಸ ಕಥನಗಳು ಜಾಗತಿಕವಾಗಿ ಆಯಾ ದೇಶದ ಬೆಳವಣಿಗೆಯನ್ನು ಕಾಲ ಕಾಲಕ್ಕೆ ದಾಖಲು ಮಾಡುವಂತಹ ಕೃತಿಗಳಾಗಿಯೂ ಗಮನಾರ್ಹವಾಗಿವೆ. ಈ ಹಿನ್ನೆಲೆಯಲ್ಲಿ ಪ್ರವಾಸ ಕಥನಗಳು ಪ್ರವಾಸಿಗರಿಗೆ ದಾರಿ ದೀಪವಾಗುತ್ತವೆ. ಅವು ಬೆಳೆದು ಬಂದಂತಹ ದಾರಿಯನ್ನು ಅದರ ಸ್ವರೂಪ, ಲಕ್ಷಣಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಕನ್ನಡ ಪ್ರವಾಸ ಕಥನಗಳ ಸ್ವರೂಪ

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಪ್ರವಾಸ ಕಥನಗಳು ಮುಖ್ಯವಾಗಿವೆ. ಪ್ರವಾಸ ಕಥನಗಳ ಸ್ವರೂಪವನ್ನು ಪ್ರಾಚೀನ ಕೃತಿಗಳಲ್ಲಿ ಗುರುತಿಸುವುದಾದರೂ ಸ್ಪಷ್ಟ ರೂಪ ಪಡೆದಿದ್ದು ಮಾತ್ರ ೧೯ನೇ ಶತಮಾನದ ನಂತರದಲ್ಲಿ. ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಿಗೆ ಪಾಶ್ಚಿಮಾತ್ಯ ಸಾಹಿತ್ಯ ಹೇಗೆ ಪ್ರಭಾವ ಬೀರಿದೆಯೋ, ಹಾಗೆಯೇ ಪ್ರವಾಸ ಕಥನಗಳ ಹುಟ್ಟಿಗೂ ಪಶ್ಚಿಮದ ಪ್ರವಾಸ ಕಥನಗಳು ಬೀರಿದ ಪ್ರಭಾವವು ದಟ್ಟವಾಗಿವೆ. ಪ್ರವಾಸ ಕಥನಗಳಿಗೆ ಪಶ್ಚಿಮದ ಚೌಕಟ್ಟು ಒದಗಿದರೂ ಪ್ರವಾಸ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣಗಳನ್ನು ದೇಸಿ ಕಥನಗಳಲ್ಲಿಯೇ ಗುರುತಿಸಬಹುದಾಗಿದೆ. ಭಾರತೀಯ ಪುರಾಣಗಳ ಕಾಲದಿಂದಲೇ ಕೃತಿಕಾರರು ಪ್ರವಾಸದ ಅನುಭವಗಳನ್ನು ಬರೆದುಕೊಂಡಿರುವುದನ್ನು ತಿಳಿಯಬಹುದು. ರಾಮಾಯಣ,

ಮಹಾಭಾರತ, ಶಾಸನಗಳು ಚಂಪೂ ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ, ಕೀರ್ತನೆಗಳಲ್ಲೂ ಪ್ರವಾಸದ ಸ್ವರೂಪವನ್ನು ಕಾಣುತ್ತೇವೆ. ಅಲ್ಲದೇ ಆಧುನಿಕ ಪ್ರವಾಸ ಸಾಹಿತ್ಯ ಪ್ರಕಾರವಾದ ಪ್ರಬಂಧ, ಕಥೆ, ಕಾದಂಬರಿಗಳಲ್ಲೂ ಪ್ರವಾಸದ ಅನುಭವವುಳ್ಳ ಅಂಶಗಳು ಭಾಸವಾಗುತ್ತವೆ. ದೇಸಿ ಕೃತಿಗಳಲ್ಲಿ ಕಾಣಬಹುದಾದ ಬರಹದ ನೆರಳುಗಳೇ ಆಧುನಿಕ ಸಾಹಿತ್ಯ ಪ್ರಕಾರಗಳಾಗಿ ರಚನೆಗೊಂಡು ಪ್ರತ್ಯೇಕ ಚೌಕಟ್ಟುಗಳನ್ನು ನಿರ್ಮಿಸಿಕೊಂಡು ಹೊಸತನವನ್ನು ಮೂಡಿಸುತ್ತವೆ. ಪ್ರವಾಸ ಸಾಹಿತ್ಯದ ಬೆಳವಣಿಗೆಯನ್ನು ಕುರಿತು ಎಸ್.ವಿದ್ಯಾಶಂಕರ್ ಅವರು 'ಕನ್ನಡ ಸಾಹಿತ್ಯ ಸಮೀಕ್ಷೆ' ಎಂಬ ಕೃತಿಯಲ್ಲಿ "ಕನ್ನಡ ಪ್ರವಾಸ ಸಾಹಿತ್ಯಕ್ಕೆ ಒಂದು ಸಾಹಿತ್ಯ ಪ್ರಕಾರವಾಗಿ ನಿಶ್ಚಿತ ನೆಲೆಯಿರುವುದು ಅದರ ಒಂದು ನೂರು ವರ್ಷಗಳ ಗತ ಇತಿಹಾಸದಿಂದ ಸ್ಪಷ್ಟಗೊಳ್ಳುತ್ತಿದೆ"(ವಿದ್ಯಾಶಂಕರ್ ಎಸ್., ೧೯೬೧, ಪುಟ-೬೫) ಎಂದಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ರಚನೆಯಾದ ಕೃತಿಗಳು ಬೆರಳೆಣಿಕೆಯಷ್ಟಾದರೂ ಪ್ರವಾಸ ಸಾಹಿತ್ಯದ ಉಗಮವನ್ನು ಪ್ರಾಚೀನ ಕಾಲದಿಂದಲೂ ಗುರುತಿಸಲಾಗಿದೆ.

೧೯ನೇ ಶತಮಾನದ ಕೊನೆಯ ದಶಕದಲ್ಲಿ ಬಂದ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರ 'ದಕ್ಷಿಣ ಭಾರತ ಯಾತ್ರೆ'ಯು ಆಧುನಿಕ ಕನ್ನಡದ ಮೊದಲ ಪ್ರವಾಸ ಕಥನವಾಗಿದೆ. ಈ ಕೃತಿಯಲ್ಲಿ ದಕ್ಷಿಣ ಭಾರತವನ್ನು ಪ್ರವಾಸ ಮಾಡಿದ ಅನುಭವಗಳಿವೆ. ಭಾರತದ ಸ್ವಾತಂತ್ರ್ಯ ಹೋರಾಟದ ಅವಧಿಗೆ ನಿರ್ದಿಷ್ಟ ಪ್ರವಾಸ ಕಥನಗಳು ಬರಲಿಲ್ಲವಾದರೂ, ಕನ್ನಡದಲ್ಲಿ ಪ್ರವಾಸ ಸಾಹಿತ್ಯದ ರಚನೆ ಹೆಚ್ಚಾಗಿದ್ದು ಮಾತ್ರ ೧೯೫೦ರ ನಂತರದಲ್ಲಿ. ಈ ಹೊತ್ತಿಗೆ ಭಾರತ ಸ್ವಾತಂತ್ರ್ಯಗೊಂಡಿದ್ದು ಬಹುಮುಖ್ಯವಾಗಿ ಸಾರಿಗೆ ವ್ಯವಸ್ಥೆ ಸುಧಾರಣೆ, ಸಮುದ್ರಯಾನ, ವಾಹನಗಳು, ರಸ್ತೆಗಳ ನಿರ್ಮಾಣ, ದೂರವಾಣಿ ಮತ್ತು ವಿಮಾನಯಾನಗಳಿಂದಾಗಿ ಇಡೀ ವಿಶ್ವವೇ ಸಂಕುಚಿತವಾಗತೊಡಗಿತು. ಧಾರ್ಮಿಕತೆಯನ್ನೇ ಮೈಗೂಡಿಸಿಕೊಂಡು ಬೆಳೆದ ಭಾರತೀಯರು ಇಂಗ್ಲೀಷ್ ಶಿಕ್ಷಣದ ಪ್ರಭಾವದಿಂದಾಗಿ ಸಮುದ್ರಯಾನದ ಮೂಢನಂಬಿಕೆ ತೊರೆದು ಶಿಕ್ಷಣ, ಉದ್ಯೋಗ, ಪ್ರವಾಸ ಮುಂತಾದ ಉದ್ದೇಶಗಳಿಗಾಗಿ ವಿದೇಶದ ರಾಷ್ಟ್ರಗಳಿಗೆ ಭೇಟಿ ನೀಡುವ ಪದ್ಧತಿ ಆರಂಭವಾಯಿತು. ಇಂತಹ ಭೇಟಿಗಳ ಫಲವಾಗಿ ತಾವು ಕಂಡುಂಡ ಅನುಭವ ಜಗತ್ತನ್ನು ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ ಅಲ್ಲಿನ ಸಾಂಸ್ಕೃತಿಕ ಜಗತ್ತಿನ ಪರಿಚಯವನ್ನು ಓದುಗರಿಗೆ ನೀಡಿದರು. ಇದು ಅನೇಕ ಓದುಗರ ಪ್ರವಾಸದಲ್ಲಿನ ಅಭಿರುಚಿಯನ್ನು ಹೆಚ್ಚಿಸಿತು. ಈ ಕುರಿತು ಬಿ.ಟಿ.ಅನುರಾಧ ಅವರು 'ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ "ಪ್ರವಾಸ ಸಾಹಿತ್ಯದ ಸೃಷ್ಟಿಯು ಪ್ರವಾಸಿಯಿಂದ ಎಂಬುದು ಖಚಿತ. ಇದು ಪ್ರವಾಸಿಯ ದಿನಚರಿಯಂತಿದ್ದು ಪರಸ್ಥಳದ ಭೌತಿಕ ವಸ್ತುಗಳ ವರ್ಣನೆಯನ್ನು ಒಳಗೊಂಡಿರುತ್ತದೆ. ಪ್ರವಾಸಿ ತನ್ನದಲ್ಲದ ನಾಡು-ನುಡಿ, ಜನ-ಮನ, ಸಮಾಜ-ಸಂಸ್ಕೃತಿಗೆ ಇವೇ ಮೊದಲಾದ ಮೂರ್ತ ಹಾಗೂ ಅಮೂರ್ತ ವಿಚಾರಗಳಿಗಾಗಿ ಮುಖಾಮುಖಿಯಾಗುತ್ತಾನೆ. ಹೀಗೆ ಗಳಿಸಿದ ಪ್ರವಾಸಿಯ ಅನುಭವಗಳ ಪ್ರತಿಬಿಂಬವಾಗಿ ಪ್ರವಾಸ ಸಾಹಿತ್ಯ ಹುಟ್ಟುತ್ತದೆ"(ಅನುರಾಧ

ಬಿ.ಟಿ, ೨೦೧೧, ಪುಟ-೧೩) ಎಂದಿದ್ದಾರೆ. ಪ್ರವಾಸ ಕೈಗೊಂಡ ಪ್ರವಾಸಿಗರಿಗೆ ಭೌತಿಕ ವಿಚಾರ ವಿನಿಮಯಗಳು ಮುಖ್ಯವಾಗುವ ಜೊತೆಗೆ, ಸಾಂಸ್ಕೃತಿಕವಾದ ವಿಚಾರಗಳನ್ನು ದಾಖಲಿಸುವುದು ಅಷ್ಟೇ ಮಹತ್ವವಾಗಿರುತ್ತವೆ.

ಪ್ರವಾಸ ಕಥನದ ಕರ್ತೃಗಳಿಗೆ ಪ್ರವಾಸವೆಂಬುದು ವೃತ್ತಿಯಾಗಿರದೆ ಪ್ರವೃತ್ತಿಯಾಗಿರುವ ಸಂದರ್ಭಗಳೇ ಹೆಚ್ಚು ಎನ್ನಬಹುದಾಗಿದೆ. ಯಾರೂ ಬೇಕಾದರೂ ತಮಗೆ ದೊರಕುವ ಅನುಭವಗಳ ಬಗ್ಗೆ ಬರೆಯಬಹುದು. ಸಾಹಿತ್ಯದ ವಿವಿಧ ಪ್ರಕಾರಗಳಂತೆ ವಿಶಿಷ್ಟವಾದ ನೈಪುಣ್ಯಗಳ ಹೊರತಾಗಿಯೂ ಪ್ರವಾಸ ಕಥನಗಳನ್ನು ಬರೆಯಬಹುದಾಗಿದೆ. ಪ್ರವಾಸ ಕಥನಗಳ ಲೇಖಕರು ವಿವಿಧ ಕ್ಷೇತ್ರಗಳ ವಕ್ತಾರರೂ ಆಗಿರುತ್ತಾರೆ. ವಿವಿಧ ವೃತ್ತಿಯ ಮತ್ತು ಪ್ರವೃತ್ತಿ ಲೇಖಕರು ಇರುವುದರಿಂದ ವಿವಿಧ ಕ್ಷೇತ್ರಗಳ ವಕ್ತಾರರಾಗಿಯೂ ಕಂಡುಬರುತ್ತಾರೆ. ತಾವು ಪ್ರವಾಸ ಮಾಡಿದ ಅನುಭವಗಳನ್ನು ಕಥನವಾಗಿಸುವ ಸಂದರ್ಭದಲ್ಲಿ ಅವರವರ ವೃತ್ತಿಗಳು, ವಿಚಾರಗಳು ಪ್ರವಾಸ ಕಥನದ ವಸ್ತು ದ್ರವ್ಯವನ್ನು ನಿಯಂತ್ರಿಸುತ್ತಿರುತ್ತಾರೆ. ಉದಾಹರಣೆಗೆ ಸಾಹಿತಿ, ವೈದ್ಯ, ತಂತ್ರಜ್ಞ, ರಾಜಕೀಯ, ಆಸ್ತಿಕ ಮತ್ತು ನಾಸ್ತಿಕ ಮನೋಧರ್ಮದ ವ್ಯಕ್ತಿಗಳಿಗೆ ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದ ವಿಚಾರಗಳು ಸದಾ ಜಾಗೃತವಾಗಿರುತ್ತವೆ ಅಥವಾ ಅದನ್ನು ಮೀರಬಹುದಾಗಿದೆ. ವೃತ್ತಿ ಮತ್ತು ಪ್ರವೃತ್ತಿಗಳಿಗೆ ಅನುಗುಣವಾಗಿ ಪ್ರವಾಸದ ನಿರೂಪಣೆಗಳಲ್ಲೂ ತಮ್ಮ ವೃತ್ತಿಪರ ವಿಚಾರಗಳಿಗೆ ಹೆಚ್ಚು ಒತ್ತುಕೊಟ್ಟಿರುವುದನ್ನು ಗಮನಿಸಬಹುದಾಗಿದೆ. ಇವು ಎರಡು ಸಂಸ್ಕೃತಿಗಳಲ್ಲಿ ತಟಸ್ಥ ನಿಲುವು ತಳೆಯುವುದು ಅನಿಶ್ಚಿತವಾಗುತ್ತವೆ. ತಮ್ಮಲ್ಲಿರುವ ಹಿಂದಿರುವ ಮನೋಭಾವಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ವಿರೋಧಿಸಲುಬಹುದು. ಇದು ಸಾಮಾನ್ಯರ ಬರಹಗಳಲ್ಲಿ ಕಂಡು ಬಂದರೆ ಇವುಗಳಿಗೆ ಭಿನ್ನವಾಗಿ ಮಾನವತಾವಾದಿಗಳು, ಸಮತಾವಾದಿಗಳು, ಸಮಾಜವಾದಿಗಳು ಮತ್ತು ಬಂಡವಾಳಶಾಹಿಗಳ ನಿಲುವಿನ ಪ್ರವಾಸ ಕಥನಗಳು ಕಂಡುಬರುತ್ತವೆ. ಒಂದು ದೇಶದ, ಪ್ರದೇಶದ ಪರಿಸರವನ್ನು ಯಥಾವತ್ತಾಗಿ ನಿರೂಪಿಸುವ ವಿಧಾನ ಒಂದಾದರೆ. ಆಯಾ ದೇಶದ ಬೆಳವಣಿಗೆಗೆ ಪೂರಕ ಮತ್ತು ಮಾರಕವಾಗಿ ಚರ್ಚಿಸುವಂತಹ ಅಂಶಗಳು ಸಹ ಪ್ರವಾಸಿಗನಲ್ಲಿ ಹೊಸದಾದ ಚಿಂತನೆಗಳನ್ನು ಹುಟ್ಟುಹಾಕಬಹುದಾಗಿದೆ. ಈ ಕುರಿತು ಬಿ.ಟಿ.ಅನುರಾಧ ಅವರು "ಇಂತಹ ಕಥನಗಳು ವೈವಿಧ್ಯತೆ ಮತ್ತು ಸ್ವಂತಿಕೆಯನ್ನು ಆರಂಭಿಸಿ ತಾನು ಹಿಂತಿರುಗುವ ಸಮಯದಲ್ಲಿ ವಿವಿಧ ಸಮಾಜ-ಸಂಸ್ಕೃತಿಗಳಿಗೆ ಮುಖಾಮುಖಿಯಾಗುತ್ತಾನೆ. ತನ್ನದಲ್ಲದ ಪರಸ್ಥಳದ ಬೆನ್ನೆಲುಬು, ಪರಸ್ಥಳದ ವಿಶ್ಲೇಷಣೆ ಇಲ್ಲದಿದ್ದರೆ ಈ ಸಾಹಿತ್ಯ ಪ್ರಕಾರವು ಅಸ್ಪಷ್ಟವಾಗುತ್ತದೆ."(ಅದೇ, ಪುಟ-೧೪) ಎಂದು ಹೇಳುತ್ತಾರೆ.

ಪ್ರವಾಸ ಎಂದಾಕ್ಷಣ ಮೊದಲಿಗೆ ನೆನಪಾಗುವುದು ಪ್ರವಾಸ ಕೈಗೊಳ್ಳಬೇಕಾದ ಸಿದ್ಧತೆಗಳು. ಪ್ರವಾಸ ಹೊರಡುವ ಸಂದರ್ಭ, ಪಾಸ್‌ಪೋರ್ಟ್, ನೀಲನಕ್ಷೆ, ವಾಹನ ವ್ಯವಸ್ಥೆ, ಸ್ಥಳಗಳ

ಭೇಟಿ, ಊಟ, ವಸತಿ, ಮುಂತಾದ ಆಲೋಚನೆಗಳು ಬಹುಮುಖ್ಯವಾಗುತ್ತವೆ. ಎಲ್ಲದಕ್ಕೂ ಮೊದಲು ಪ್ರವಾಸಿಗರು ಯಾವ ಮಾರ್ಗವಾಗಿ ಹೋಗಬೇಕು ಎಂದು ಆಲೋಚಿಸಬೇಕಾಗುತ್ತದೆ. ಇಂತಹ ಪ್ರಯಾಣಗಳ ಸಾರಿಗೆಯ ಸ್ವರೂಪಗಳನ್ನು ೧. ಪಾದಯಾತ್ರೆಯ ಪ್ರಯಾಣಗಳು ೨. ಪ್ರಾಣಿ ವಾಹನದ ಪ್ರಯಾಣಗಳು ೩. ಯಂತ್ರ ವಾಹನ ಭೂ ಪ್ರಯಾಣಗಳು ೪. ಹಡುಗು ಪ್ರಯಾಣಗಳು ೫. ವಿಮಾನ ಪ್ರಯಾಣಗಳು ಮುಂತಾದವುಗಳನ್ನು ಗಮನಿಸಬಹುದಾಗಿದೆ. ಇವುಗಳಲ್ಲಿ ಆಧುನಿಕ ಪ್ರಯಾಣ ಮಾಧ್ಯಮವಾದ ವಿಮಾನ ಯಾನವು ಇಂದು ವಿಶ್ವವನ್ನು ಸಂಕುಚಿತಗೊಳಿಸಿವೆ. ಪ್ರಯಾಣ ಸೌಲಭ್ಯಗಳು ಸರ್ವೆ ಸಾಮಾನ್ಯವಾಗಿರುವುದರಿಂದ ಕಡಿಮೆ ಅವಧಿಯಲ್ಲಿ ನಾವು ತಲುಪಬೇಕಾದ ಸ್ಥಳವನ್ನು ಸೇರಲು ಅನುಕೂಲವಾಗುತ್ತದೆ. ಇವುಗಳು ಪ್ರವಾಸಿಗನ ಆರ್ಥಿಕತೆಯ ಮೇಲೆ ಅವಲಂಬಿತವಾಗಿದ್ದು, ಕೆಲವೊಮ್ಮೆ ಅವರವರ ಅಭಿರುಚಿಯ ಮೇಲೆ ನಿರ್ಧರಿತವಾಗಿರುತ್ತವೆ. ಇದು ಪ್ರವಾಸ ಕೈಗೊಳ್ಳಬೇಕಾದ ವಾಹನದ ಆಯ್ಕೆಗಳಾದರೆ, ಪ್ರವಾಸ ಮಾಡುವ ಮನೋಭಾವದ ಹಿಂದಿನ ಉದ್ದೇಶಗಳನ್ನು ತಿಳಿಯುವುದು ಅಷ್ಟೇ ಮುಖ್ಯವಾಗುತ್ತದೆ.

ಆಧುನಿಕ ಕಾಲಕ್ಕೆ ಪ್ರವಾಸ ಎಂಬುದು ತಮ್ಮ ವೃತ್ತಿಯಿಂದ ಭಾಗವಾಗಿರುವುದಕ್ಕಿಂತಲೂ ಪ್ರವೃತ್ತಿಯಾಗಿ ಕಂಡುಬರುತ್ತದೆ. ಆದಿಮಾನವರಿಗೆ ಪ್ರವಾಸ(ವಲಸೆ) ಎಂಬುದು ಅವರ ಬದುಕಿನ ಅನಿವಾರ್ಯ ಭಾಗವಾಗಿರುತ್ತದೆ. ಆದರೆ ಪ್ರಸ್ತುತ ಸಂದರ್ಭಕ್ಕೆ ಪ್ರವಾಸ ಎಂಬುದು ನಿರ್ದಿಷ್ಟ ಕಾರಣಕ್ಕಾಗಿ ಸುತ್ತುವರಿಯುವುದಾಗಿದೆ. ೧. ಹವ್ಯಾಸಿ ಪ್ರವಾಸಿ ೨. ನಿಯೋಗಿ ಪ್ರವಾಸಿ ಎಂಬ ಎರಡು ಪ್ರಕಾರಗಳಾಗಿ ಗುರುತಿಸಲಾಗಿದೆ. ಹವ್ಯಾಸಿ ಪ್ರವಾಸಿಗರು ನಿರಂತರವಾಗಿ ಪ್ರವಾಸ ಮಾಡುವವರು ಆಗಿರುತ್ತಾರೆ. ಇಂತಹ ಪ್ರವಾಸಿಗರಿಗೆ ಅನೇಕ ಭಾರಿ ಗೊತ್ತು ಗುರಿಗಳು ಇರುವುದಿಲ್ಲ. ಇವರು ಪ್ರಪಂಚವನ್ನು ಸುತ್ತಾಡುವ ಅನುಭವವನ್ನು ಆಸ್ವಾಧಿಸುತ್ತಾರೆ. ನಿಯೋಗಿ ಪ್ರವಾಸಿಗರು ಸರ್ಕಾರಿ ನೌಕರರು, ವಿದ್ಯಾರ್ಥಿಗಳು, ರಾಜಕಾರಣಿಗಳು, ಸಂಘ, ಸಂಸ್ಥೆಗಳ ವೃತ್ತಿಪರರಾಗಿದ್ದು, ಸರ್ಕಾರ ಅಥವಾ ಸಂಸ್ಥೆಗಳು ಒಂದು ನಿಶ್ಚಿತ ಕಾರಣಕ್ಕಾಗಿ ಪ್ರವಾಸ ಮಾಡುವ ಅನುಕೂಲತೆಯನ್ನು ಕಲ್ಪಿಸಿಕೊಟ್ಟಿರುತ್ತಾರೆ. ಇಂತಹ ಪ್ರವಾಸಕಥನಗಳು ಕನ್ನಡದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಯಾವುದೇ ಸಿದ್ಧತೆಗಳು ಇಲ್ಲದೆ ಪ್ರವಾಸ ಮಾಡುವ ಪ್ರವಾಸಿಗರು ಅನಿವಾರ್ಯ, ಆಕಸ್ಮಿಕ, ಹಠಾತ್, ತುರ್ತುಪ್ರವಾಸ ಮಾಡುವವರು ಕಾಲದ ಮಿತಿಯಿಲ್ಲದೆ, ಹೊಸದನ್ನು ಬಯಸಿ ಹೋಗುತ್ತಾರೆ. ಈ ಹಿನ್ನೆಲೆಯಲ್ಲಿ ಅವರ ಪ್ರವಾಸದ ಅನುಭಗಳು ವೈಶಿಷ್ಟ್ಯಪೂರ್ಣವಾಗುತ್ತವೆ. ಉದಾಹರಣೆಗೆ ಓ.ಎಲ್.ನಾಗಭೂಷಣಸ್ವಾಮಿ ಅವರ 'ನನ್ನ ಹಿಮಾಲಯ' ಪ್ರವಾಸ ಕಥನವನ್ನು ಗಮನಿಸಬಹುದಾಗಿದೆ. ಎಲ್ಲ ವಿಷಯದಲ್ಲಿಯ ಸ್ವತಂತ್ರರಾಗಿವುದರಿಂದ ಇವರ ಮಾನಸಿಕ ಮತ್ತು ಬೌದ್ಧಿಕ ವಿಕಾಸಕ್ಕೆ ಸಾಧನವೆಂದು ಬಗೆದು ಪ್ರವಾಸವನ್ನು ಒಂದು ಅವಿಭಾಜ್ಯ ಘಟಕವಾಗಿ ಭಾವಿಸುತ್ತಾರೆ. ಕಾಲ ಅವಕಾಶಗಳು ದೊರೆತಾಗ ಏಕಾಂಗಿಯಾಗಿಯೇ ಇಲ್ಲವೇ ಗುಂಪು ಗೂಡಿಯೇ ಸಂಚರಿಸುವವರು ಹವ್ಯಾಸಿ

ಪ್ರವಾಸಿಗರಾಗಿರುತ್ತಾರೆ. ಪ್ರವಾಸ ಕೈಗೊಳ್ಳುವುದು ಮನರಂಜನೆಯ ಸಲುವಾಗಿ ಎಂಬುವುದರ ಹೊರತಾಗಿಯೂ ಅನೇಕ ಕಾರಣಗಳು ಸಹ ಪ್ರವಾಸಕ್ಕೆ ಪ್ರೇರಣೆ ಆಗುತ್ತವೆ. ಹವ್ಯಾಸಿ ಮತ್ತು ನಿಯೋಗಿ ಪ್ರವಾಸ ಮಾಡುವವರಲ್ಲಿಯೂ ಅನೇಕ ಕಾರಣಗಳಿರುವುದು ಪ್ರವಾಸ ಸಾಹಿತ್ಯದ ಅಧ್ಯಯನಗಳಿಂದ ತಿಳಿದುಬರುತ್ತದೆ. ಅಂತಹವುಗಳಲ್ಲಿ ಶಾರೀರಿಕ ಪ್ರೇರಣೆ, ಸಾಂಸ್ಕೃತಿಕ ಪ್ರೇರಣೆ, ವ್ಯಕ್ತಿಯ ಅಂತರ್‌ಪ್ರೇರಣೆ, ಅಂತಸ್ತು, ಸಂತೋಷ, ವಿಶ್ರಾಂತಿ ಹಾಗೂ ವಿರಾಮ, ಮನೋರಂಜನೆ, ಆರೋಗ್ಯ, ಕ್ರೀಡೆಗಳಲ್ಲಿ ಭಾಗವಹಿಸಲು, ಕುತೂಹಲ, ಸಂಸ್ಕೃತಿ ಅಧ್ಯಯನ, ಕುಲ ಸಂಬಂಧ ಹಾಗೂ ಕುಟುಂಬ, ಆಧ್ಯಾತ್ಮಿಕ ಹಾಗೂ ಧಾರ್ಮಿಕ ಉದ್ದೇಶ, ಪ್ರತಿಷ್ಠೆ, ವೃತ್ತಿ ಅಥವಾ ವ್ಯಾಪಾರ, ತೀರ್ಥಯಾತ್ರೆ, ಸಾಂಸ್ಕೃತಿಕ ಪ್ರವಾಸ, ಶೈಕ್ಷಣಿಕ ಪ್ರವಾಸ, ಅಲೆಮಾರಿ ಪ್ರವಾಸ, ಆಹ್ವಾನಿತ ಪ್ರವಾಸ, ಸಾಹಸಯುಕ್ತ ಪ್ರೇರಣೆಗಳು ಹೀಗೆ ಹಲವು ಸಂಗತಿಗಳು ಪ್ರವಾಸ ಕೈಗೊಳ್ಳಲು ಕಾರಣಗಳಾಗುತ್ತವೆ. ಮನುಷ್ಯರು ಆಧುನಿಕತೆಯ ಓಟಕ್ಕೆ ಸಿಕ್ಕು ಓಡುವ ಕಾಲಕ್ಕೆ ಅವರಿಗೆ ಅನೇಕ ಸಮಸ್ಯೆಗಳು, ಜಾಡ್ಯಗಳು ಎದುರಾಗುತ್ತವೆ. ಇವುಗಳಿಂದ ಮುಕ್ತಿ ಅಥವಾ ನೆಮ್ಮದಿಯನ್ನು ಪಡೆಯಲು ಬೇರೊಂದು ಮಾರ್ಗಕ್ಕೆ ಜಾರಿಕೊಳ್ಳುತ್ತಾರೆ. ಕಾರಣಗಳು ಬೇರೆ ಬೇರೆ ಇದ್ದರೂ, ಆ ಕಾರಣಗಳಿಗೆ ಪೂರಕವಾಗಿ ಪ್ರವಾಸ ಮಾಡಬೇಕಾಗುತ್ತದೆ. ಇಂತಹ ಪ್ರವಾಸಿಗರು ತಮಗೆ ಸಿಕ್ಕಂತಹ ಅನುಭವಗಳನ್ನು ಬರಹದಲ್ಲಿ ದಾಖಲಿಸಬಹುದು ಅಥವಾ ದಾಖಲಿಸದೇ ಇರಬಹುದಾಗಿದೆ. ಕೆ.ಅನಂತರಾಮು ಅವರು ಪ್ರವಾಸ ಒಳಗೊಳ್ಳಬಹುದಾದ ವಿಭಿನ್ನ ಪ್ರಕಾರಗಳ ಕುರಿತು "ಅದು ಕ್ಷೇತ್ರ ಸಾಹಿತ್ಯ, ಲಲಿತ ಪ್ರಬಂಧ, ಜೀವನ ಚರಿತ್ರೆ, ಆತ್ಮಕಥೆ, ವಿಚಾರ ಸಾಹಿತ್ಯ, ಪತ್ರ ಸಾಹಿತ್ಯ, ನಾಟಕ, ವಿಮರ್ಶೆ, ಸಣ್ಣಕತೆಗಳ ಸ್ಪರ್ಶವನ್ನು ಪಡೆದುಕೊಳ್ಳುತ್ತದೆ. ರಂಗದ ಮೇಲೆ ನಡೆದಾಡುವ ಪಾತ್ರಗಳು ಕಾದಂಬರಿ ಮುಂತಾದ ವಿವಿಧ ಸಾಹಿತ್ಯದ ಪ್ರಕಾರಗಳಲ್ಲೂ ಕ್ಷಣ ಕ್ಷಣಕ್ಕೂ ಹೊಸ ಹೊಸದನ್ನು ತೋರಿಸುವಂತೆ ಪ್ರವಾಸ ಕಥನಕಾರರೂ ನಿರೂಪಣೆಯುದ್ದಕ್ಕೂ ಹೊಸ ಹೊಸ ಸಂಗತಿಗಳ ರಸದೌತಣವನ್ನು ಮಾಡಿಸುತ್ತಾನೆ."(ಮಲ್ಲೇಪುರಂ ವೆಂಕಟೇಶ(ಸಂ), ೧೯೯೨, ಪುಟ-೧೦) ಎಂದಿದ್ದಾರೆ. ಸಾಹಿತ್ಯದ ಹಲವು ಪ್ರಕಾರಗಳ ನಿರೂಪಣೆಗಳಲ್ಲಿಯೂ ಕಾಣಲಾಗುತ್ತದೆ.

ಪ್ರವಾಸ ಮತ್ತು ಪ್ರವಾಸ ಕಥನ ಪದಗಳ ವ್ಯುತ್ಪತ್ತಿ

ಪ್ರವಾಸ ಎಂಬ ಪದದ ವ್ಯುತ್ಪತ್ತಿಯನ್ನು ಗಮನಿಸಿದಾಗ, ಟೂರಿಸ್ಟ್ ಎಂಬ ಮೂಲ ಪದ ಕ್ರಿ.ಶ. ೧೭೯೨ರಷ್ಟು ಹಳೆಯದು. ಅದು Tourist ಎಂಬ ಪದದಿಂದ ಬಂದಿದೆ. Tour ಪದವು ಲ್ಯಾಟಿನ್‌ನ Tornu ಎಂಬುದರಿಂದ ಬಂದಿದೆ. ಈ ಪದದ ಅರ್ಥವು ವೃತ್ತವೊಂದನ್ನು ವಿವರಿಸುವ ಸಾಮಾಗ್ರಿ ಅಥವಾ ಸುತ್ತವವನ ಚಕ್ರ ಎಂಬುದಾಗಿದೆ. ೧೭ನೇ ಶತಮಾನದ ಪೂರ್ವಾರ್ಧದಲ್ಲಿ ಈ ಪದವು ಮೊದಲಿಗೆ ಸ್ಥಳದಿಂದ ಸ್ಥಳಕ್ಕೆ ಸಂಚರಿಸುವುದು, ಒಂದು ಸಂಚಾರ, ಒಂದು ವಿಹಾರ ಯಾತ್ರೆ, ಒಂದು ದೇಶದ ಸಾಂಸ್ಕೃತಿಕ ಅನನ್ಯತೆಯ ಪ್ರದೇಶಗಳನ್ನು ಸಂಚರಿಸುವುದಕ್ಕೆ ಪ್ರವಾಸವೆಂದು ಕರೆಯುವ ವಾಡಿಕೆಯಿದೆ. 'Tourist' ಪದವು ಕ್ರಿ.ಶ.೧೮೦೦

ಕ್ಕಿಂತಲೂ ಹಿಂದೆಯೇ ಬಳಕೆಯಾಗಿದೆ. Dictionnaire Universal ಪ್ರಕಾರ 'Tourist' ಪದವು ವ್ಯಕ್ತಿಯೋರ್ವನು ಕುತೂಹಲಕ್ಕಾಗಿ ಸಂಚಾರದಿಂದ ಪಡೆಯಬಹುದಾದ ಖುಷಿಗಾಗಿ ಅಥವಾ ತಾನು ಸುತ್ತಾಟದ ಅನುಭವವನ್ನು ಬೇರೆಯವರಿಗೆ ಹೇಳಲಿಕ್ಕಾಗಿ ಮಾಡಿದ ಸಂಚಾರ ಎಂದು ವಿವರಿಸಿದೆ. ಇಂಗ್ಲೀಷ್‌ನಲ್ಲಿ ಪ್ರವಾಸ ಸಾಹಿತ್ಯವನ್ನು 'Travelogue' ಅಥವಾ 'Travel Literature' ಎಂದು ಕರೆಯುತ್ತಾರೆ.

ಇಂಗ್ಲೀಷ್‌ನ 'Tourist' ಪದವು ವಿಭಿನ್ನ ಅರ್ಥಗಳನ್ನು ಒಳಗೊಂಡಿದೆ. ತೀರ ಇತ್ತೀಚೆಗೆ 'ಖುಷಿ ಸಂಚಾರ' ಎಂಬ ಅರ್ಥದಲ್ಲಿ 'Tourist' ಪದ ಬಳಕೆಗೊಂಡಿದೆ. ೧೯ನೇ ಶತಮಾನದ ಮೊದಲಿಗೆ 'Tourist' ಎಂಬುದು ಮನರಂಜನೆಗಾಗಿ ಮಾಡುವವರು ಅಥವಾ ಆನಂದಕ್ಕಾಗಿ, ಕುತೂಹಲಕ್ಕಾಗಿ, ಪ್ರಕೃತಿಯ ಸುಂದರ ದೃಶ್ಯಗಳಿಗಾಗಿ ಸಂಚರಿಸುವವರು ಎಂಬ ಅರ್ಥದಲ್ಲಿ ಬಳಕೆಗೊಂಡಿದೆ. ೧೯೭೩ರಲ್ಲಿ 'ಲೀಗ್ ಆಫ್ ನೇಷನ್ಸ್' ಎಂಬ ಸಂಸ್ಥೆಯು 'Tourist' ಪದದ ವ್ಯಾಖ್ಯೆಯನ್ನು ವಿವರಿಸುತ್ತಾ, ಯಾವಾತನು ತಾನು ವಾಸ ಮಾಡುವ ದೇಶಕ್ಕೆ ಅಥವಾ ಹೊರಗೆ, ಕೊನೆಯ ಪಕ್ಷ ೨೪ಗಂಟೆಗಳ ಕಾಲ ಬೇರೆ ಸ್ಥಳಗಳಿಗೆ ಭೇಟಿ ನೀಡುವವರನ್ನು ಪ್ರವಾಸಿ ಎಂಬುದಾಗಿ ಹೇಳಿದೆ.

ಹಿಂದಿಗಿಂತಲೂ ಈಗ ಪ್ರವಾಸ ಅರ್ಥ ಸ್ವರೂಪಗಳು ಭಿನ್ನವಾಗಿವೆ. ಕ್ರೀಡೆ, ಆರೋಗ್ಯ, ವಿದೇಶಿ, ವಾಣಿಜ್ಯ, ಯೋಗ, ತರಬೇತಿ, ಕಲೆ, ಮದುವೆ, ಸಂಗೀತ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳ ಪ್ರವಾಸವನ್ನು ಹೊರತುಪಡಿಸಿ ಕೇವಲ ಪ್ರವಾಸಿಗರು ಒಂದು ಸ್ಥಳಕ್ಕೆ ಭೇಟಿ ಕೊಟ್ಟಾಗ ಪಡೆದ ಅನುಭವಗಳನ್ನು ಬರಹ ರೂಪದಲ್ಲಿಡುವ ಕಥನವನ್ನು ಪ್ರವಾಸ ಕಥನ ಎಂದು ಕರೆಯಲಾಗಿದೆ. ಪ್ರಸ್ತುತ ಪ್ರವಾಸ ಕಥನವನ್ನು ಮುಖ್ಯವಾಗಿಟ್ಟುಕೊಂಡು ಅದರ ರೂಪುರೇಷೆಗಳು ಮತ್ತು ಬೆಳೆದುಬಂದ ಬಗೆಯನ್ನು ಚರ್ಚಿಸಲಾಗಿದೆ.

ಪ್ರವಾಸ ಕಥನಗಳ ಲಕ್ಷಣಗಳು

ಇದುವರೆಗಿನ ಪ್ರವಾಸ ಕಥನಗಳನ್ನು ನೋಡಿದಾಗ ಕೃತಿಯ ಬರಹಗಾರರು ಮತ್ತು ಕೃತಿಯು ನಿರೂಪಿಸುವ ವಿಧಾನಗಳಿಂದ ಅದರ ಲಕ್ಷಣಗಳನ್ನು ತಿಳಿಯಬಹುದಾಗಿದೆ. ಈ ಕುರಿತು ಎನ್.ಎಸ್.ತಾರಾನಾಥ ಅವರು 'ಪ್ರವಾಸ ಸಾಹಿತ್ಯ' ಕೃತಿಯಲ್ಲಿ "ಒಬ್ಬ ವ್ಯಕ್ತಿ ತನ್ನದಾದಂತಹ ಒಂದು ಊರು/ಜಾಗವನ್ನು ಬಿಟ್ಟು ತನ್ನದಲ್ಲದಂತಹ ಇನ್ನೊಂದು ಊರು/ ಜಾಗಕ್ಕೆ ಹೋಗಿ ಆ ಪ್ರದೇಶವನ್ನು ಸುತ್ತಿ ಬಂದು ಆ ಹೊಸ ಜಾಗದಲ್ಲಿ ಆದಂತಹ ಅನುಭವಗಳನ್ನು ಬಣ್ಣಿಸಿದ, ಅಲ್ಲಿ ನೋಡಿದಂತಹ ಪ್ರೇಕ್ಷಣೀಯ ಸ್ಥಳಗಳನ್ನು ವರ್ಣಿಸಿದ, ಅಲ್ಲಿನ ಜನರ ರೀತಿ ನೀತಿ ಜೀವನ ವಿಧಾನಗಳನ್ನು ವಿವರಿಸಿದ ಸಾಹಿತ್ಯವನ್ನು ಸ್ಥೂಲವಾಗಿ ಪ್ರವಾಸ ಸಾಹಿತ್ಯ ಎಂದು ಕರೆಯುತ್ತಾರೆ."(ತಾರಾನಾಥ ಎನ್.ಎಸ್., ೧೯೯೦, ಪುಟ-೭)

ಎಂದಿದ್ದಾರೆ. ಯಾವುದೇ ಒಬ್ಬ ವ್ಯಕ್ತಿ ಅಪರಿಚಿತವಾದ ಜಾಗವನ್ನು ನೋಡಲು ಪ್ರಯಾಣಕ್ಕೆ ಮಾಡಿಕೊಂಡ ಸಿದ್ಧತೆಗಳಿಂದ ಹಿಡಿದು, ತನ್ನ ಊರು ನೆಲವನ್ನು ಮತ್ತೆ ತಲಪುವವರೆಗಿನ ಎಲ್ಲ ಬಗೆಯ ಸರಳ, ಸಂಕೀರ್ಣ ಅನುಭವಗಳು ಮುಖ್ಯವಾಗುತ್ತವೆ. ಇಂಥ ಅನುಭವಗಳೇ ಪ್ರವಾಸ ಸಾಹಿತ್ಯ ಕೃತಿಗಳಲ್ಲಿ ಹರಳುಗಟ್ಟುತ್ತವೆ. ಕನ್ನಡದಲ್ಲಿ ಬಂದಿರುವ ಪ್ರವಾಸ ಕೃತಿಗಳನ್ನು ಗಮನಿಸಿದರೆ ಪ್ರವಾಸ ಸಾಹಿತ್ಯದ ಕೆಲವು ಸಾಮಾನ್ಯ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

- ಪ್ರವಾಸ ಕಥನಗಳು ಬಹುಮಟ್ಟಿಗೆ ಗದ್ಯರೂಪದಲ್ಲಿ ಇರುತ್ತದೆ. ಪ್ರಾಸಂಗಿಕವಾಗಿ ಗದ್ಯದ ನಡುವೆ ಅಲ್ಲಲ್ಲಿ ಪದ್ಯಗಳು ಗೋಚರಿಸುತ್ತವೆ. ಪದ್ಯಗಳು ಪ್ರವಾಸ ಕಥನಗಳಲ್ಲಿ ಕಂಡುಬಂದರು ಸಂಪೂರ್ಣವಾಗಿ ಪದ್ಯಮಯವಾಗಿರುವುದಿಲ್ಲ. ಓದುಗರ ಅಭಿರುಚಿಗೆ ಪದ್ಯಕ್ಕಿಂತ ಗದ್ಯದ ಸ್ವರೂಪವೇ ಹೆಚ್ಚು ಆಪ್ತವಾಗುತ್ತದೆ. ಹೀಗಾಗಿ ಅದೊಂದು ಗದ್ಯ ನಿರೂಪಣಾ ಪ್ರಧಾನವಾದ ಪ್ರಕಾರವಾಗಿದೆ. ನಿರೂಪಣಾ ತಂತ್ರಗಾರಿಕೆಯಿಂದ ಅಲ್ಲಲ್ಲಿ ಗಾದೆ, ನುಡಿಗಟ್ಟು, ಸುಭಾಷಿತ, ತ್ರಿಪದಿ, ಜಾನಪದ ಮುಂತಾದವುಗಳನ್ನು ಬಳಸಿಕೊಂಡು ನಿರೂಪಿಸಿರುತ್ತಾರೆ.
- ಪ್ರವಾಸ ಕಥನಗಳಲ್ಲಿ ಸಾಮಾನ್ಯವಾಗಿ ಭಾಷೆಯ ಬಳಕೆ ಸರಳವಾಗಿರುತ್ತವೆ. ಪ್ರವಾಸ ಕಥನಗಳನ್ನು ಸೃಜನಶೀಲ ಬರಹಗಾರರೇ ಬರೆಯಬೇಕೆಂದಿಲ್ಲ. ಸಾಮಾನ್ಯರು ಬರೆಯಬಹುದು. ಪ್ರವಾಸದ ಅನುಭವಗಳನ್ನು ದಾಖಲು ಮಾಡುವ ಮನಸ್ಸುಳ್ಳವರು ಬರೆಯಬಹುದಾಗಿದೆ. ಸಾಮಾನ್ಯ ಪ್ರವಾಸಿಗರು ತಮ್ಮ ಅನುಭವಗಳನ್ನು ದಾಖಲಿಸುವುದರಿಂದ ಭಾಷಿಕ ದೃಷ್ಟಿಯಿಂದ ಸರಳ ನಿರೂಪಣಾ ಶೈಲಿಯನ್ನು ಆಯ್ದುಕೊಳ್ಳುತ್ತಾರೆ. ಸಾಹಿತ್ಯದ ವಿವಿಧ ಪ್ರಕಾರಗಳಂತೆಯೇ ಪ್ರವಾಸ ಕಥನಗಳು ಕೂಡಾ ನಿರೂಪಣಾ ಪ್ರಧಾನವಾಗಿರುತ್ತದೆ.
- ಪ್ರವಾಸ ಕಥನಗಳಲ್ಲಿ ಉತ್ತಮಪುರುಷ ಸರ್ವನಾಮವಾದ 'ನಾನು' ಎನ್ನುವ ಆತ್ಮವೃತ್ತಾಂತ ನಿರೂಪಣಾ ಕ್ರಮವು ಎಲ್ಲಾ ಕೃತಿಗಳಲ್ಲಿ ಸಾಮಾನ್ಯವಾಗಿರುತ್ತದೆ. ಆತ್ಮಕಥನಗಳಂತೆ ಪ್ರವಾಸ ಕೃತಿಗಳಲ್ಲಿ ಪ್ರವಾಸಿಗರು ತಮ್ಮದೇ ಆದ ಅನುಭವಗಳನ್ನು ದಾಖಲಿಸುವುದರಿಂದ 'ನಾನು' ಎಂಬುದು ಕಥನದುದ್ದಕ್ಕೂ ಪಸರಿಸಿರುತ್ತದೆ. ಪ್ರವಾಸ ಕಥನದ ಉಸಿರಾಟದ ಭಾಗವಾಗಿರುತ್ತದೆ. ಲೇಖಕರು ತಾವು ಪ್ರವಾಸಿಯಾಗಿದ್ದುದನ್ನು ನೆನೆಸಿಕೊಂಡ ಸಂಗತಿಗಳನ್ನು, ಅಥವಾ ಘಟನೆಗಳ ವಿವರಗಳನ್ನು ವರ್ಣಿಸಲು ಆರಂಭಿಸುತ್ತಾರೆ. ನಾನು ಹೋದೆ, ನನಗೆ ಈ ಅನುಭವ ಆಯಿತು, ನಾನು ಇದನ್ನು ನೋಡಿದೆ, ನಾನು ಅಲ್ಲಿ ಓಡಾಡಿದೆ, ನನಗೆ ಹೀಗೆ ಕಂಡಿತು, ನಾನು ವೀಸಾ, ಪಾಸ್‌ಪೋರ್ಟ್ ಕಳೆದುಕೊಂಡೆ, ಹೀಗೆ 'ನಾನು', 'ನಾನು' ಎಂಬುದು ಪ್ರವಾಸ ಸಾಹಿತ್ಯದಲ್ಲಿ ಎದ್ದು ಕಾಣುತ್ತದೆ. ಇದು ಆರಂಭದಿಂದ ಕೊನೆಯ ಸಾಲಿನವರೆಗೂ ಬಳಕೆಯಲ್ಲಿರುತ್ತದೆ. ಇದರ ಹೊರತಾಗಿ 'ಅವರು' ಎಂಬ ಪ್ರಥಮ ಪುರುಷ ಸರ್ವನಾಮವನ್ನು ಸಾಂದರ್ಭಿಕವಾಗಿ ಬಳಸುತ್ತಾರೆ.

- ವ್ಯಕ್ತಿ ತಾನಿದ್ದ ಸ್ಥಳವನ್ನು ಬಿಟ್ಟು ಬೇರೆ ಸ್ಥಳಕ್ಕೆ ಹೋಗಿ ನಿಶ್ಚಿತ ಅವಧಿಯವರೆಗೂ ಅಲ್ಲಿದ್ದು, ಮತ್ತೆ ತಾನಿದ್ದ ಸ್ಥಳಕ್ಕೇ ವಾಪಸ್ಸು ಬರುವವರೆಗೆ ಆ ನಿಶ್ಚಿತ ಅವಧಿಯಲ್ಲಿ ತನಗಾಗುವ ಎಲ್ಲ ಬಗೆಯ ಅನುಭವಗಳು ಪ್ರವಾಸ ಕಥನದ ಬರವಣಿಗೆಯ ವಸ್ತುಗಳಾಗಿರುತ್ತವೆ. ಆದರೆ ಕಥನಕಾರರು ತಮ್ಮ ಅನುಭವಕ್ಕೆ ಬಂದದ್ದನ್ನು ಎಲ್ಲಾವನ್ನು ನಿರೂಪಿಸದೇ ತಮಗೆ ಆಸಕ್ತಿ ಇರುವ ಸಂಗತಿಗಳನ್ನು ಮಾತ್ರ ದಾಖಲಿಸುತ್ತಾರೆ.
- ಪ್ರವಾಸಿಯೊರ್ವನು ತನ್ನ ಊರನ್ನು ತೊರೆದು ಇನ್ನೊಂದು ದೇಶದಲ್ಲಿ ವರ್ಷಾನುಗಟ್ಟಲೇ ನೆಲಸಿ, ಅಲ್ಲಿನ ಅನುಭವಗಳನ್ನು ಬರೆದರೆ ಅದು ಪ್ರವಾಸ ಸಾಹಿತ್ಯ ಎನ್ನಿಸಿಕೊಳ್ಳುವುದಿಲ್ಲ. ತಾನಿರುವ ದೇಶದಿಂದ ಬೇರೊಂದು ದೇಶಕ್ಕೆ ಪ್ರಯಾಣ ಬೆಳಸಿ ಸಂದರ್ಶಿಸಿ ಸ್ವಸ್ಥಳಕ್ಕೆ ಬಂದು ಹಿಂದಿನ ಘಟನೆಗಳನ್ನು ನೆನಪಿಸಿಕೊಂಡು ಬರೆಯಬೇಕು, ಇಲ್ಲವೆ ಪ್ರವಾಸದ ಸಂದರ್ಭದಲ್ಲಿ ಟಿಪ್ಪಣಿ ಬರೆದಿಟ್ಟುಕೊಂಡು ಕೃತಿ ರಚನೆ ಮಾಡುವಾಗ ವಿವರಿಸುವುದು ಪ್ರವಾಸ ಕಥನದ ಸಾಮಾನ್ಯ ಲಕ್ಷಣವಾಗಿದೆ. ಈ ನಾಲ್ಕು ಲಕ್ಷಣಗಳನ್ನು ಪ್ರವಾಸ ಸಾಹಿತ್ಯದ ಬಹುಮುಖ್ಯ ಅಂಶಗಳೆಂದು ಪರಿಗಣಿಸಲಾಗಿದೆ.

ಪ್ರವಾಸ ಕಥನಗಳನ್ನು ಓದುವಾಗ ನಮಗೆ ಗೋಚರವಾಗುವ ಒಂದು ಪ್ರಧಾನ ಸಂಗತಿ ಎಂದರೆ, ಪ್ರವಾಸಿಗರು ಅಪರಿಚಿತರೊಂದಿಗಿನ ಒಡನಾಟ. ಅಪರಿಚಿತವಾದ ವ್ಯಕ್ತಿಗಳು, ಅಪರಿಚಿತವಾದ ವಾತಾವರಣ, ಅಪರಿಚಿತವಾದ ವಸ್ತು, ಅಪರಿಚಿತವಾದ ದೃಶ್ಯಗಳು ಪ್ರವಾಸ ಕಥನಗಳ ಉದ್ದಕ್ಕೂ ಅಪರಿಚಿತವಾದ ವಸ್ತು-ವ್ಯಕ್ತಿಗಳ ವಿಚಾರಗಳನ್ನು ಪರಿಚಯಿಸುತ್ತಾರೆ. ಈ ಅಪರಿಚಿತರೊಂದಿನ ಒಡನಾಟವು ಹೊಸ ಅನುಭವವನ್ನು ಕೊಟ್ಟರೇ, ಒಮ್ಮೊಮ್ಮೆ ಸಮಸ್ಯೆಗಳಿಗೂ ಕಾರಣವಾಗಿರುತ್ತವೆ. ಇದರಿಂದ ಕೃತಿಯಲ್ಲಿ ಅಪರಿಚಿತ ಜನ, ಅಪರಿಚಿತ ಜಾಗ, ಅಪರಿಚಿತ ಲೋಕವರ್ತನೆಗಳಿಂದ ಕಿಕ್ಕಿರಿದು ತುಂಬಿರುತ್ತದೆ. ಆದರೂ ಇಂತಹ ಪ್ರಯಾಣದ ಅನುಭವವು ಪ್ರವಾಸಿಗನಿಗೆ ದಿನೇ ದಿನೇ ಹೊಸ ಅನುಭವಗಳನ್ನು ಪಡೆಯುತ್ತಿರುತ್ತಾರೆ. ಇದರಿಂದಾಗಿ ಒಬ್ಬರನ್ನೊಬ್ಬರು ಸ್ಪಂದಿಸಲು, ಅರಿಯಲು ತುಂಬ ಮುಖ್ಯವಾಗಿ ಬೇಕಾದದ್ದು ಭಾಷೆ. ವಿದೇಶದ ನೆಲದಲ್ಲಿ ಜನರ ಜೊತೆ ಮಾತನಾಡಲು, ಓಡಾಡಲು ನಮಗೆ ಮೊದಲು ಇಂಗ್ಲೀಷ್‌ನ ಪರಿಚಯವಿರಬೇಕು ಅಥವಾ ಆಯಾ ಸ್ಥಳಗಳ ಭಾಷೆಯ ಅಥವಾ ಸಂಪರ್ಕಕ್ಕೆ ಒಬ್ಬರನ್ನು ಬಳಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಒಂದೊಂದು ಗಳಿಗೆಯೂ ನಮಗೆ ಉಸಿರುಕಟ್ಟುವ ಸನ್ನಿವೇಶವಾಗುತ್ತದೆ ಎಂದು ಅನೇಕ ಪ್ರವಾಸಿಗರು ಬರೆದುಕೊಂಡಿದ್ದಾರೆ. ಹೀಗಾಗಿ ಜರ್ಮನಿಗೆ ಹೋದರೆ ಜರ್ಮನ್, ಫ್ರಾನ್ಸ್‌ಗೆ ಹೋದರೆ ಫ್ರೆಂಚ್, ಇಟಲಿಗೆ ಹೋದರೆ ಇಟ್ಯಾಲಿಯನ್, ಅಮೇರಿಕಾ ಹೋದರೆ ಇಂಗ್ಲೀಷ್ ಹೀಗೆ ಆಯಾ ದೇಶದ ಭಾಷೆಯ ಪರಿಚಯದ ಜ್ಞಾನವು ಅತಿ ಅಗತ್ಯವಿರುತ್ತದೆ. ಪ್ರವಾಸ ಕಥನಗಳಲ್ಲಿ ಭಾಷಿಕ ಸಂವಹನವು ಮುಖ್ಯ ತೊಡಕಾಗಿ ನಿಲ್ಲುತ್ತದೆ. ಕನ್ನಡದ ಕೆಲವು ಪ್ರವಾಸ ಕಥನಗಳನ್ನು ಗಮನಿಸಿದರೆ, ಭಾಷೆಯ ತೊಡಕು

ಕಂಡುಬರದಷ್ಟು ವಿಶಿಷ್ಟವಾಗಿ ಮೂಡಿಬಂದಿವೆ. ಭಾಷೆಯೇ ಮುಖ್ಯ ಎಂದು ಭಾವಿಸಬೇಕಿಲ್ಲ. ಪ್ರವಾಸ ಮಾಡುವ ಇಚ್ಛಾಶಕ್ತಿ ಇದ್ದರೆ ಭಾಷೆಯ ಹಂಗನ್ನು ಮೀರಿ ಅನೇಕ ದೇಶಗಳನ್ನು ಸುತ್ತಿದ ಪ್ರವಾಸಿಗರಿದ್ದಾರೆ ಹಾಗೂ ಉತ್ತಮ ಪ್ರವಾಸ ಕಥನಗಳು ಹೊರಬಂದಿವೆ. ಈ ಅಪರಿಚಿತ ಭಾಷೆಯನ್ನು ಗೆಲ್ಲುತ್ತ, ನೆಲವನ್ನು ದಾಟುತ್ತ, ಪರಿಚಿತವಾಗಿಸಿಕೊಳ್ಳುತ್ತ ಹೋಗುವ ಪ್ರಕ್ರಿಯೆಯು ನೇಮಿಚಂದ್ರರ 'ಪೆರುವಿನ ಪವಿತ್ರ ಕಣಿವೆಯಲ್ಲಿ' ಪ್ರವಾಸ ಕಥನದ ಉದ್ದಕ್ಕೂ ನಿರೂಪಿತಗೊಂಡಿದೆ.

ಒಬ್ಬ ಲೇಖಕರಿಂದ ಇನ್ನೊಬ್ಬ ಲೇಖಕರಿಗೆ ಪ್ರವಾಸದ ಸಂದರ್ಭದಲ್ಲಿ ಸಿಕ್ಕುವ ಅನುಭವಗಳು ಭಿನ್ನವಾಗುತ್ತವೆ ಹಾಗೂ ಒಬ್ಬರಿಂದ ಇನ್ನೊಬ್ಬರಿಗೆ ಬದಲಾಗುತ್ತ ಹೋಗುತ್ತವೆ. ಇದನ್ನೇ ಲೇಖಕ ಪ್ರತಿಕ್ರಿಯೆ ಎನ್ನುತ್ತಾರೆ. ಇದರಿಂದಾಗಿ ಒಬ್ಬನೇ ಲೇಖಕನ ಭಿನ್ನ ಪ್ರವಾಸಗಳು, ಇಬ್ಬರು ಲೇಖಕರು ಒಂದೇ ಸ್ಥಳಕ್ಕೆ ಪ್ರವಾಸ ಮಾಡಿದ ಅನುಭವಗಳು ಭಾಷೆ ಮತ್ತು ನಿರೂಪಣಾ ಶೈಲಿಯಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಉದಾಹರಣೆಗೆ, ಅಮೇರಿಕಾ ದೇಶದ ಪ್ರವಾಸ ಕಥನಗಳ ಕುರಿತು ಕನ್ನಡದಲ್ಲಿ ನಾಲ್ಕು ಲೇಖಕರು ತಮ್ಮ ಅನುಭವ ಕಥನಗಳನ್ನು ಬರೆದಿದ್ದಾರೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಅಮೇರಿಕಾದಲ್ಲಿ ಗೊರೂರು', ಬಿ.ಜಿ.ಎಲ್.ಸ್ವಾಮಿ ಅವರ 'ಅಮೇರಿಕಾದಲ್ಲಿ ನಾನು' ಮತ್ತು ಎ.ಎನ್.ಮೂರ್ತಿರಾಯರ 'ಅಪರವಯಸ್ಕನ ಅಮೇರಿಕಾ ಯಾತ್ರೆ' ಕೃತಿಗಳು ಹೊರಬಂದಿವೆ. ಮಹಿಳಾ ಪ್ರವಾಸಿಗರಾದ ಅನುಪಮಾ ನಿರಂಜನರ 'ಅಂಗೈಯಲ್ಲಿ ಯುರೋ ಮತ್ತು ಅಮೇರಿಕಾ', ಪದ್ಮಾಶಣ್ಯೆ ಅವರ 'ಅಮೇರಿಕಾ: ವಾಸ ಪ್ರವಾಸ', ಮತ್ತು ಪರಮೇಶ್ವರಿ ಲೋಕೇಶ್ವರ್ ಅವರ 'ಅಮೇರಿಕಾದಲ್ಲಿ ಅರವತ್ತು ದಿನಗಳು' ಈ ಕೃತಿಗಳು ಒಂದೇ ದೇಶದ ಪ್ರವಾಸ ಕಥನಗಳಾಗಿವೆ. ಆದರೆ ಪ್ರವಾಸಿಗರ ಅನುಭವ ನಿರೂಪಣೆಯಿಂದಾಗಿ ವಿಭಿನ್ನವಾಗಿವೆ. ಪ್ರವಾಸ ಕಥನಗಳ ನಿರೂಪಣಾ ಶೈಲಿಯನ್ನೊಳಗೊಂಡಂತೆ, ಪ್ರವಾಸಿಗರ ಅಥವಾ ಬರಹಗಾರರ ಅನುಭವಗಳ ಅನುಸಂಧಾನವು ಒಬ್ಬರಿಂದ ಒಬ್ಬರಿಗೆ ಒಂದೊಂದು ರೀತಿಯಲ್ಲಿ ಅಭಿವ್ಯಕ್ತಿಗೊಂಡಿರುತ್ತವೆ. ಈ ವೈವಿಧ್ಯದ ಭಿನ್ನ ಆಲೋಚನಾ ಕ್ರಮಕ್ಕೆ 'ಲೇಖಕ ಪ್ರತಿಕ್ರಿಯೆ' ಮುಖ್ಯ ಕಾರಣವಾಗಿರುತ್ತದೆ.

ಈ ಕಾರಣಕ್ಕಾಗಿ ಪ್ರವಾಸ ಕಥನಗಳು ಬಹುತೇಕವಾಗಿ ಆತ್ಮಕಥನದ ಗುಣಗಳನ್ನು ಹೊಂದಿರುತ್ತವೆ. ಆತ್ಮಕಥನಕ್ಕೆ ಸಮೀಪದ ಲಕ್ಷಣಗಳನ್ನು ಪ್ರವಾಸ ಕಥನದ ನಿರೂಪಣೆಯು ಒಳಗೊಂಡಿರುತ್ತದೆ. ಲೇಖಕರು ಹೊರ ದೇಶದಲ್ಲಿ ಒಂದು ನಿಶ್ಚಿತ ಅವಧಿಯನ್ನು ಕಳೆಯುವಾಗಿನ ಸಂದರ್ಭದ ಘಟನೆ, ವಾಸ್ತವಾನುಭವಗಳನ್ನು, ಅಲ್ಲಿನ ಮಾಹಿತಿ ಸಂಗ್ರಹಗಳನ್ನು ಮಾತ್ರ ಬರವಣಿಗೆಯಲ್ಲಿ ಹಿಡಿದಿಡುತ್ತಾರೆ. ಅದ್ದರಿಂದ ಸಹಜವಾಗಿಯೇ ಆತ್ಮಕಥನ ರೂಪವನ್ನು ಪಡೆದುಕೊಳ್ಳುತ್ತದೆ. ಅಷ್ಟೇ ಅಲ್ಲದೇ ಅನೇಕ ಲೇಖಕರು ತಮ್ಮ ಜೀವನಚರಿತ್ರೆ ಬರವಣಿಗೆಗೆ ಪ್ರವಾಸ ಅನುಭವಗಳನ್ನು ಆಕರವಾಗಿ ಬಳಸಿರುವುದು ತಿಳಿದುಬರುತ್ತದೆ.

ಕನ್ನಡ ಪ್ರವಾಸ ಕಥನಗಳ ಇತಿಹಾಸ

ಪ್ರಾಚೀನ ಕಾಲದಿಂದಲೂ ಮನುಷ್ಯರು ಒಂದಲ್ಲ ಒಂದು ಕಾರಣದಿಂದ ಅಲೆಮಾರಿ ಪ್ರವೃತ್ತಿಯುಳ್ಳವರಾಗಿತ್ತಾರೆ. ಮನುಷ್ಯರು ಹುಟ್ಟಿನಿಂದ ಹಿಡಿದು ಇಲ್ಲಿಯವರೆಗೂ ಹಂತ ಹಂತವಾಗಿ ಹೊಸದನ್ನು ಅನ್ವೇಷಿಸುತ್ತಲೇ ಬಂದಿದ್ದಾರೆ. ಆ ಅನ್ವೇಷಣೆಯ ಮನೋಭಾವನೆಗಳಿಂದಾಗಿಯೇ ಪ್ರವಾಸ ಕಥನಗಳು ಸೃಷ್ಟಿಯಾಗಿವೆ ಎನ್ನಬಹುದು. ಮನುಷ್ಯರು ವಾಣಿಜ್ಯ, ತೀರ್ಥಯಾತ್ರೆ, ಜ್ಞಾನಕ್ಕಾಗಿ ಸದಾ ಸಂಚಾರಿಗಳೇ ಆಗಿರುತ್ತಾರೆ. ಹೀಗೆ ಹೊಸದನ್ನು ಸ್ವೀಕರಿಸುವ ಮನುಷ್ಯರು ಆಧುನಿಕತೆಗೆ ಒಗ್ಗಿಕೊಂಡಂತೆಲ್ಲಾ ಮಾನಸಿಕ ತೊಳಲಾಟಗಳಿಗೆ ಗುರಿಯಾಗಿದ್ದಾರೆ. ಈ ಒತ್ತಡದ ಬದುಕನ್ನು ತಾನು ಇರುವ ಸ್ಥಳದಿಂದ ಸ್ವಲ್ಪ ದಿನಗಳ ಕಾಲ ಬೇರೊಂದು ಸ್ಥಳಕ್ಕೆ ಭೇಟಿ ಕೊಡುವ ಮೂಲಕ ತನ್ನ ಮಾನಸಿಕ, ಕೆಲಸದ ಒತ್ತಡವನ್ನು ಸರಿದೂಗಿಸುವ ನಿಟ್ಟಿನಲ್ಲಿ ಪ್ರವಾಸ ಕೈಗೊಳ್ಳುವುದು ಹಿಂದಿನಿಂದಲೂ ಬಂದಿದೆ. ಹೀಗೆ ಒಬ್ಬರು ಮತ್ತೊಂದು ದೇಶಕ್ಕೆ ಭೇಟಿ ನೀಡುವ ಮೂಲಕ ಸಾಂಸ್ಕೃತಿಕ ಸಂಬಂಧಗಳು ಮತ್ತಷ್ಟು ಹತ್ತಿರವಾಗಿ ಗಟ್ಟಿಗೊಂಡವು. ಒಬ್ಬರು ಮತ್ತೊಬ್ಬರ ಭಾಷೆ, ಆಚಾರ, ವಿಚಾರ ಸಂಪ್ರದಾಯ, ಜೀವನ ವಿಧಾನ, ಸಂಸ್ಕೃತಿಗಳನ್ನು ತಿಳಿಯಲು ಪ್ರವಾಸ ಕಥನಗಳಿಂದ ಸಾಧ್ಯವಾಯಿತು. ಹೊಸ ಹೊಸ ದೇಶಗಳನ್ನು ಸುತ್ತುವ ಹಾಗೂ ಪ್ರಪಂಚವನ್ನು ನೋಡುವ ಸಲುವಾಗಿ ಪ್ರವಾಸಗಳು ಆರಂಭವಾದವು. ಕೆಲವರು ಪ್ರಜ್ಞಾಪೂರ್ವಕವಾಗಿಯೇ ಪ್ರವಾಸ ಮಾಡುವುದು ಹವ್ಯಾಸವನ್ನಾಗಿಸಿಕೊಂಡರು. ಸುಮಾರು ಕ್ರಿ.ಪೂ.೪೦೦೦ರಲ್ಲಿ 'ಸುಮೇರಿಯನ್ನರು' ವಾಣಿಜ್ಯ ವ್ಯವಹಾರಗಳಲ್ಲಿ ಹಣದ ಪ್ರಾಮುಖ್ಯತೆಯನ್ನು ಕಂಡುಕೊಂಡರು. ಇದು ಇವರಲ್ಲಿ ಆಲೋಚನೆಯ ಕ್ರಮವನ್ನು ಹಣದ ಬಳಕೆಯನ್ನು ಹುಟ್ಟುಹಾಕಿತು. ಹಣದ ಬಳಕೆಯಿಂದಾಗಿ ಒಂದು ಪ್ರದೇಶಕ್ಕೆ ಹೋಗಿ ಬರಲು ಕಾರಣವಾದವು. ಇದು ಮುಂದೆ ಪ್ರವಾಸಕ್ಕೆ ಕಾರಣವಾಯಿತು. ಅನೇಕರಿಗೆ ಹೊಸ ಅನುಭವವನ್ನು ಪಡೆಯುವ ಸಲುವಾಗಿ, ತಮ್ಮದಲ್ಲದ ಪ್ರಪಂಚವನ್ನು ಇತರರಿಗೆ ಪರಿಚಯಿಸುವ ಸಲುವಾಗಿ ಪ್ರವಾಸ ಹೊರಡುವ ಹೊಸ ಶಕೆ ಪ್ರಾರಂಭವಾಯಿತು.

ಪ್ರವಾಸದಿಂದ ಉಲ್ಲಾಸ ಹೊಂದುವ, ಪ್ರವಾಸಕ್ಕೋಸ್ಕರ ಪ್ರಯಾಣಿಸುತ್ತಾ ಮತ್ತು ಅದರ ಬಗೆಗಿನ ಕೃತಿಗಳಲ್ಲಿ ಪೆಟ್ರಾರ್ಕ್‌ನು(೧೩೦೪-೧೩೭೪) ಕ್ರಿ.ಶ.೧೩೩೬ರಲ್ಲಿ ಬರೆದ 'ಅಸೆಂಟ್ ಆಫ್ ಮೌಂಟ್ ವೆಂಟಾಕ್ಸ್' ಅತ್ಯಂತ ಹಳೆಯ ದಾಖಲೆಯಾಗಿದೆ. ಆತನು ಪರ್ವತಗಳ ಗಗನಚುಂಬಿ ಎತ್ತರದ ಶಿಖರವನ್ನು ನೋಡುವ ಆಸೆಯಿಂದ ಪರ್ವತದ ತುದಿಗೆ ಏರಿದವನೆಂಬುದಾಗಿ ಹೇಳುತ್ತಾನೆ. ಅವನು ಏರಿದ ಶಿಖರದ ಕೆಳಗೆ ಉಳಿದಿದ್ದ ಅವನ ಜೊತೆಗಾರರನ್ನು ಅವನು 'ಫ್ರಿಜಿಡ ಇನ್‌ಕ್ಯೂರಿಯೋಸಿಟರಸ್' (ಕುತೂಹಲ ರಹಿತ ಸಪ್ಪೆ ಜನರು) ಎಂದು ಕರೆದಿದ್ದಾನೆ. ಪೆಟ್ರಾರ್ಕ್‌ನ ಕುತೂಹಲವೇ ಪರ್ವತ ಏರಲು ಕಾರಣವಾಗಿದೆ. ನಂತರ ಅವನು ತನ್ನ ಪರ್ವತಾರೋಹಣದಲ್ಲಾದ ಅನುಭವಗಳನ್ನು ಬರೆದಿದ್ದಾನೆ. ಡ್ಯೂಕ್

ಆಫ್ ಬರ್ಗಂಡಿಯ ಬಳಿ ಕವಿಯಾಗಿದ್ದ ಮೈಕೇಲ್ ಟೇಲ್‌ಮೆಂಟ್ ಎಂಬುವವನು ೧೪೩೦ರಲ್ಲಿ ಜುರಾ ಪರ್ವತಗಳಲ್ಲೆಲ್ಲ ಸಂಚರಿಸಿ ವೈಯಕ್ತಿಕ ಅನಿಸಿಕೆಗಳನ್ನು ಕೃತಿ ರೂಪದಲ್ಲಿ ದಾಖಲಿಸಿದ್ದಾನೆ. ಕೇವಲ ಹೆಬ್ಬಂಡೆಗಳ ಭಯಂಕರ ಮುಖಗಳ ಮತ್ತು ಪರ್ವತದಿಂದ ಹರಿದು ಬರುವ ಝರಿಗಳು ಗುಡುಗುತ್ತ ಧುಮ್ಮಿಕ್ಕುವ ಚಿತ್ರಗಳ ಬಗ್ಗೆ ವರದಿ ನೀಡಿದ್ದಾನೆ. ಆಂಟೋನಿ ಡೀಲಾ ಸಾಲೇ ಎಂಬಾತನು 'ಪೆಟಿಟ್ ಜೇಹಾನ್ ಡೀ ಸೇಂಟೀ' ಕೃತಿಯಲ್ಲಿ ತನ್ನ ಹುಚ್ಚು ಯೌವ್ವನದ ಹಸಿ ಬಯಕೆಗಳ ಕುತೂಹಲದಿಂದಾಗಿ ಕ್ರಿ.ಶ.೧೪೦೭ರಲ್ಲಿ ಲಿಪಾರಿ ದ್ವೀಪಗಳಲ್ಲಿನ ಅಗ್ನಿಪರ್ವತವನ್ನು, ಜ್ವಾಲಾಮುಖಿಯನ್ನು ಆರೋಹಣ ಮಾಡಿ ತನ್ನ ಮೇಲಾದ ಪ್ರಭಾವವನ್ನು ತಿಳಿಸಿದ್ದಾನೆ. ೧೫ನೇ ಶತಮಾನದ ಮಧ್ಯಭಾಗದಲ್ಲಿ ಗಿಲೀಸ್ ಲೇ ಬೋವಿಯತ್ ತನ್ನ 'ಲಿವಿರೇಡೇ ಲಾ ಡಿಸ್‌ಕ್ರಿಪ್‌ಷನ್ ಡೆಸ್ ಪೇಸ್' ಕೃತಿಯಲ್ಲಿ ನಾನು ಒಂದು ಕಾಲದಲ್ಲಿ ಮಾಡಿದಂತಹ ಪ್ರವಾಸವು ವೈವಿಧ್ಯಮಯ ರಾಜ್ಯಗಳ ಮತ್ತು ದೇಶಗಳ ವಿಶ್ವಪರ್ಯಟನೆ ಮಾಡಿ ಅಲ್ಲಿನ ವಿಶೇಷತೆಗಳನ್ನು ನೋಡುವ ಮೂಲಕ ಆನಂದಿಸುತ್ತಾನೆ ಮತ್ತು ತಿಳಿಯದಿರುವ ಜನರಿಗೆ ಪ್ರವಾಸ ಮಾಡಲು ಈ ಚಿಕ್ಕ ಪುಸ್ತಕವನ್ನು ಬರೆಯಲು ಪ್ರೇರಣೆಯಾಗಿದೆ ಎಂದು ಹೇಳಿಕೊಂಡಿದ್ದಾನೆ.

ಆಧುನಿಕ ಭಾರತೀಯ ಸಾಹಿತ್ಯದ ಹಲವು ಪ್ರಕಾರಗಳಿಗೆ ಪಾಶ್ಚಾತ್ಯ ಸಾಹಿತ್ಯವೇ ಆಧಾರವಾದರೂ, ಪ್ರಾಚೀನ ಭಾರತದಲ್ಲಿ ಪ್ರವಾಸ ಸಾಹಿತ್ಯದ ಗುಂಪಿಗೆ ಸೇರಬಹುದಾದ ಹಲವು ಕೃತಿಗಳಿವೆ. ಈ ಕುರಿತು ಲತಾ ಗುತ್ತಿ ಅವರು 'ಪ್ರವಾಸ ಸಾಹಿತ್ಯ: ವಿಶ್ವಸಂಸ್ಕೃತಿಗಳು' ಎಂಬ ಕೃತಿಯಲ್ಲಿ "ನಮ್ಮ ಹಿಂದಿನ ಕವಿಗಳೆಲ್ಲ ಮಹಾಪಂಡಿತರೆ ಆಗಿದ್ದು, ಅವರ ಅಂದಿನ ಕೆಲವು ಕೃತಿಗಳಲ್ಲಿ ಪ್ರವಾಸದ ಅನುಭವಗಳು ದೊರೆಯುತ್ತದೆಂದು, ಉದಾಹರಣೆಗೆ ಬಾಣನ ಸಂಸ್ಕೃತದ 'ಹರ್ಷಚರಿತ' ಇದರಲ್ಲಿ ಬಾಣಭಟ್ಟನು ಪ್ರವಾಸದ ಲಾಭಗಳನ್ನು ತಿಳಿಸಿದ್ದಾನೆ."(ಲತಾಗುತ್ತಿ, ೨೦೦೭, ಪುಟ–೧೪) ಎಂದಿದ್ದಾರೆ. ಕ್ರಿ.ಶ.೧೧೪೦–೫೦ರಲ್ಲಿ ರಚಿತವಾದ ಕಲ್ಹಣನ 'ರಾಜತರಂಗಿಣಿ', ಕ್ರಿ.ಶ.೧೪೫೯ರಲ್ಲಿ ಜೋನರಾಜ ಮತ್ತಿವನ ಶಿಷ್ಯ ಶ್ರೀವರ, ಅನಂತರ ಪ್ರಾಜ್ಯ ಭಟ್ಟ, ಶುಕ, ಸೋಮೇಶ್ವರ, ಅರಿಸಿಂಹ ಮುಂತಾದವರು ಐತಿಹಾಸಿಕ, ಭೌಗೋಳಿಕ ಹಾಗೂ ಅಂದಿನ ರಾಜಕೀಯ ಸ್ಥಿತಿಗತಿಗಳನ್ನು ತಿಳಿಸುವಂತಹ ಗ್ರಂಥಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ವಿ.ಗೋಪಾಲಕೃಷ್ಣ ಮತ್ತು ಕೆಳದಿ ಗುಂಡಾಜೋಯಿಸ್ ಇವರುಗಳು ಸಂಪಾದಿಸಿದ ಅನಾಮಿಕ ಕರ್ತೃವಿನ 'ತಂಜಾವೂರು ಟು ವಿಜಯರಾಜ ಗಿರಿದುರ್ಗ' ಎಂಬ ಶೀರ್ಷಿಕೆಯಿರುವ ಪ್ರವಾಸ ಕಥನವು ರಚನೆಯಾಗಿದೆ. ೧೭ನೇ ಶತಮಾನಕ್ಕೆ ಸೇರಿರಬಹುದಾದ ತಾಳೆಗರಿಯಲ್ಲಿ ರಚಿತವಾದ ಹಸ್ತಪ್ರತಿಯ ಪ್ರವಾಸ ಸಾಹಿತ್ಯವನ್ನು ಇನ್‌ಸ್ಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್, ಚೆನ್ನೈ ಇವರು ಸಂಪಾದಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದನ್ನು ಗುರುತಿಸಬಹುದಾಗಿದೆ.

ಭಾರತದಲ್ಲಿ ಪ್ರಾಚೀನಕಾಲದಿಂದ ೧೯ನೇ ಶತಮಾನದವರೆಗೂ ಸಮುದ್ರ ದಾಟುವುದು ಅಪರಾಧ ಎಂಬ ಕಲ್ಪನೆಯಿತ್ತು. ಅದೊಂದು ಧಾರ್ಮಿಕ ಭಾವನೆಯಾಗಿತ್ತು. ಹೀಗಾಗಿ ಭಾರತದಿಂದ ಹೊರದೇಶಗಳಿಗೆ ಭೇಟಿ ಕೊಡುವ ಪರಿಪಾಟಗಳು ಬಹುತೇಕ ಇರಲಿಲ್ಲ. ಆದರೆ

ಪ್ರವಾಸ ಕಥನದ ಬರಹಗಳನ್ನು ದೇಸಿ ಬರಹಗಾರರಲ್ಲಿ ಗುರುತಿಸಲಾಗಿದೆ. ಭಾರತೀಯ ಪ್ರಾಚೀನ ಕೃತಿಗಳಲ್ಲಿ ಕೃತಿಕಾರರು ತಾವು ಭೇಟಿ ಕೊಟ್ಟ ಪ್ರದೇಶ, ರಾಜಾಸ್ಥಾನ, ರಾಜರ ಆಡಳಿತ, ಸ್ಥಳೀಯ ಪರಿಸರದ ಕುರಿತು ಕೃತಿಗಳಲ್ಲಿ ಸಾಂದರ್ಭಿಕವಾಗಿ ಹೇಳಿಕೊಂಡಿರುವುದಿದೆ. ಅದು ರಾಮಾಯಣ, ಮಹಾಭಾರತದಂತಹ ಪೌರಣಿಕ ಕೃತಿಗಳಿಂದ ಹಿಡಿದು ಆಧುನಿಕ ಪೂರ್ವ ಸಾಹಿತ್ಯ ಕೃತಿಗಳಲ್ಲಿಯೂ ಪ್ರವಾಸ ಕಥನಗಳ ಸ್ವರೂಪಗಳನ್ನು ಕಾಣುತ್ತೇವೆ. ರಾಮ ಲಕ್ಷ್ಮಣರ ವನವಾಸ, ಪಾಂಡವರು ಮಾಡಿದ ವನವಾಸದ ಸಂದರ್ಭದಲ್ಲಿ ಅಲ್ಲಿನ ಪರಿಸರದ ಪ್ರಸಂಗಗಳು, ರಾವಣನ ಲಂಕಾ ಪ್ರದೇಶದ ವರ್ಣನೆಗಳು ಅಲ್ಲಿನ ಸೌಂದರ್ಯವನ್ನು ವರ್ಣಿಸುವುದಲ್ಲಿ ಪ್ರವಾಸ ಸಾಹಿತ್ಯದ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ವಾರಾಣಾಸಿ, ಕಾಶ್ಮೀರ, ತಿರುಪತಿ, ಧರ್ಮಸ್ಥಳ, ಮೈಸೂರು, ಪಟ್ಟದಕಲ್ಲು, ಹಂಪಿ, ಶ್ರವಣಬೆಳಗೊಳ ಮುಂತಾದ ಧಾರ್ಮಿಕ, ಐತಿಹಾಸಿಕ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ವಿವರಗಳನ್ನು ದಾಖಲಿಸಿರುವುದು ಕಂಡುಬರುತ್ತವೆ. ಶ್ರೀವಿಜಯನ 'ಕವಿರಾಜಮಾರ್ಗ' ಕೃತಿಯಲ್ಲಿ ಕನ್ನಡ ನಾಡಿನ ವಿಸ್ತಾರವನ್ನು ಕುರಿತು ಹೇಳಿದರೆ, ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ಬನವಾಸಿ ದೇಶದ ವರ್ಣನೆ ಕುರಿತು ಹೇಳಿದ್ದಾರೆ. ಅಲ್ಲದೇ ವಚನ ಸಾಹಿತ್ಯ, ಕೀರ್ತನೆ, ಜಾನಪದಗಳಲ್ಲೂ ಪ್ರವಾಸದ ವಿವರಗಳು ಕಂಡುಬರುತ್ತವೆ

ಕ್ರಿ.ಶ.೧೮೯೦ರಲ್ಲಿ ಪ್ರಕಟವಾದ ಕರ್ಕಿ ವೆಂಕಟರಮಣಶಾಸ್ತ್ರಿಯವರ 'ದಕ್ಷಿಣ ಭಾರತ ಯಾತ್ರೆ' ಎಂಬ ಕೃತಿಯು ೩೭ ಪದ್ಯಗಳ ಕಿರು ಪುಸ್ತಕವಾದ ಈ ಕೃತಿಯಲ್ಲಿ ಉಡುಪಿಯಿಂದ ಗುರುವಾಯೂರು ಪ್ರದೇಶದವರೆಗಿನ ಧಾರ್ಮಿಕ ಸ್ಥಳಗಳನ್ನು ಕುರಿತು ಒಂದೆರಡು ಪದ್ಯಗಳಲ್ಲಿ ವರ್ಣಿಸಲಾಗಿದೆ. ನಂತರದಲ್ಲಿ ವಿ.ಸೀತಾರಾಮಯ್ಯ ಅವರ 'ಪಂಪಾಯಾತ್ರೆ'(೧೯೨೬) ಪ್ರವಾಸ ಕಥನವು ಪ್ರಕಟಗೊಂಡಿದೆ. ಅಸುಂಡಿ ರಂಗರಾಯರ 'ವಿಲಾಯತಿ ಪ್ರವಾಸ' ಎಂಬ ಕೃತಿಯು ಮತ್ತು ಸಾಲಿ ರಾಮಚಂದ್ರರಾಯ ಅವರ ಜಯಕರ್ನಾಟಕ ಪತ್ರಿಕೆಯಲ್ಲಿ ೧೯೨೭-೨೮ರಲ್ಲಿ ಪತ್ರ ರೂಪದಲ್ಲಿ ಪ್ರಕಟಗೊಂಡ ಪ್ರವಾಸ ಕಥನಗಳಾಗಿವೆ. ಜಿ.ಪುಟ್ಟಯ್ಯ ಅವರ 'ಅಭಿವೃದ್ಧಿ ಸಂದೇಶ'(೧೯೨೧) ಕೃತಿಯು ಪತ್ರರೂಪದ ಪ್ರವಾಸಾನುಭವವೆಂದು ಕರೆದಿದ್ದಾರೆ. ೧೯೩೭-೩೮ರ ಸುಮಾರಿಗೆ ಅರಸು ಮನೆತನದ ರಾಣಿ ಚೆನ್ನಾಜಮ್ಮಣ್ಣಿ ಅವರ 'ನನ್ನ ಪ್ರಪಂಚ ಸಂಚಾರ' ಕೃತಿಯು ಕನ್ನಡದ ಮೊದಲ ಮಹಿಳಾ ಪ್ರವಾಸ ಕಥನವಾಗಿದೆ. ಆನಂತರದಲ್ಲಿ ಭಾಸ್ಕರರಾವ್ ಮಾಲೂರ್‌ಕರ್ ಅವರು ತಮ್ಮ ತಾಯಿಗೆ ಬರೆಯುತ್ತಿದ್ದ ಪತ್ರಗಳನ್ನು ಹೊರತು ಪಡಿಸಿದರೆ, ವಿ.ಕೃ.ಗೋಕಾಕ್‌ರ 'ಸಮುದ್ರಾಚೆಯಿಂದ' ಪ್ರವಾಸ ಕಥನವು ಕೃತಿ ರೂಪದಲ್ಲಿ ಪ್ರಕಟವಾದ ಪ್ರಥಮ ವಿದೇಶ ಪ್ರವಾಸದ ಅನುಭವವಿರುವ ಕೃತಿಯಾಗಿದೆ.

ಸ್ವಾತಂತ್ರ್ಯ ನಂತರದ ಭಾರತದಲ್ಲಿ ಪ್ರವಾಸ ಕಥನಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗ ತೊಡಗಿದವು. ಕನ್ನಡದಲ್ಲಿಯೂ ಶಿವರಾಮ ಕಾರಂತ, ದಿನಕರ ದೇಸಾಯಿ, ಕೃಷ್ಣಾನಂದ ಕಾಮತ್, ನವರತ್ನ ರಾಮರಾವ್, ದೇ.ಜ.ಗೌ, ವ್ಯಾಸರಾಯ ಬಲ್ಲಾಳ, ಕೃಷ್ಣಾನಂದ ಕಾಮತ್,

ಕು.ಶಿ.ಹರಿದಾಸ ಭಟ್ಟ, ಎ.ಎನ್.ಮೂರ್ತಿರಾವ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಶ್ರೀರಂಗ, ಜಿ.ಎಸ್.ಶಿವರುದ್ರಪ್ಪ, ಬಿ.ಜಿ.ಎಲ್.ಸ್ವಾಮಿ, ಬಸವರಾಜ ಕಟ್ಟಿಮನಿ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಎಚ್.ಎಸ್.ರಾಘವೇಂದ್ರರಾವ್, ನಾಗೇಶ ಹೆಗಡೆ, ಓ.ಎಲ್.ನಾಗಭೂಷಣಸ್ವಾಮಿ ಮುಂತಾದವರು ಪ್ರವಾಸ ಕಥನಗಳನ್ನು ಬರೆದಿದ್ದಾರೆ. ಸುಮಾರು ೭೦ರ ದಶಕದ ನಂತರ ಕನ್ನಡದಲ್ಲಿ ಮಹಿಳೆಯರು ಸಹ ಪ್ರವಾಸ ಕಥನಗಳನ್ನು ರಚಿಸಿರುವುದು ಕಂಡುಬರುತ್ತದೆ. ಹೇಮಾಲತಾ ಮಹಿಷಿ, ಅನುಪಮಾ ನಿರಂಜನ, ಶಾಂತಾದೇವಿ ಮಾಳವಾಡ, ನೀಳಾದೇವಿ, ನೇಮಿಚಂದ್ರ, ಸುಧಾಮೂರ್ತಿ, ಸುಭಾಷಿಣಿ, ಲೀಲಾವತಿ ದೇವದಾಸ್, ಲತಾಗುತ್ತಿ, ಪಿ.ಆರ್.ಜಯಲಕ್ಷ್ಮಮ್ಮ, ಪ್ರೇಮಾಭಟ್ ಮುಂತಾದವರು ಪ್ರವಾಸ ಸಾಹಿತ್ಯವನ್ನು ರಚಿಸಿದ್ದಾರೆ. ಇವುಗಳಲ್ಲದೇ ಪ್ರವಾಸ ಕಥನಗಳ ಕುರಿತು ಅನುವಾದ ಸಾಹಿತ್ಯವು ಹೊರಬಂದಿದೆ. ಕನ್ನಡದಲ್ಲಿ ಇದುವರೆಗೂ ಸುಮಾರು ೫೦೦ಕ್ಕೂ ಹೆಚ್ಚು ಕೃತಿಗಳು ರಚನೆಯಾಗಿದ್ದು, ಪ್ರವಾಸ ಕಥನಗಳು ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ವಿಶಿಷ್ಟವಾದ ಸ್ಥಾನವನ್ನು ದಕ್ಕಿಸಿಕೊಂಡಿವೆ.

❑❑❑

ಅಧ್ಯಾಯ ಮೂರು

ಕನ್ನಡದಲ್ಲಿ ಮಹಿಳಾ ಪ್ರವಾಸ ಕಥನಗಳ ಹುಟ್ಟು ಮತ್ತು ಬೆಳವಣಿಗೆ

ಅಧ್ಯಾಯ ಮೂರು

ಕನ್ನಡದಲ್ಲಿ ಮಹಿಳಾ ಪ್ರವಾಸ ಕಥನಗಳ ಹುಟ್ಟು ಮತ್ತು ಬೆಳವಣಿಗೆ

ಈಗಾಗಲೇ ಗಮನಿಸಿದಂತೆ ಕನ್ನಡ ಪ್ರವಾಸ ಸಾಹಿತ್ಯಕ್ಕೆ ೧೦೦ ವರ್ಷಗಳಿಗಿಂತಲೂ ಹೆಚ್ಚಿನ ಇತಿಹಾಸವಿದೆ. ಎಲ್ಲ ಸಾಹಿತ್ಯ ಪ್ರಕಾರಗಳಂತೆಯೇ ಪ್ರವಾಸ ಸಾಹಿತ್ಯವು ಇಂದು ಸಮೃದ್ಧವಾಗಿ ಬೆಳೆದು ನಿಂತಿದೆ. ಇದುವರೆಗೂ ಸ್ವದೇಶಿ ಮತ್ತು ವಿದೇಶಿ ಪ್ರವಾಸಗಳನ್ನು ಒಳಗೊಂಡಂತೆ ಸುಮಾರು ೫೦೦ಕ್ಕೂ ಹೆಚ್ಚು ಪ್ರವಾಸ ಕಥನಗಳು ಹೊರಬಂದಿವೆ. ಪ್ರವಾಸ ಸಾಹಿತ್ಯದ ಹುಟ್ಟು ಬೆಳವಣಿಗೆಯನ್ನು ಗಮನಿಸಿದಾಗ ಪುರುಷ ಪ್ರವಾಸಿಗರಷ್ಟೇ ಅಲ್ಲದೇ ಮಹಿಳಾ ಪ್ರವಾಸಿಗರು ಪ್ರವಾಸ ಸಾಹಿತ್ಯ ರಚನೆಯಲ್ಲಿ ತೊಡಗಿರುವುದು ಗಮನಾರ್ಹವಾಗಿದೆ. ಪುರುಷ ಪ್ರಧಾನವಾದ ನಾಡಿನಲ್ಲಿ ಮಹಿಳೆಯರಿಗೆ ಪ್ರವಾಸಗಳು ಮಾತಿಗೂ ದಕ್ಕದ ವಿಚಾರಗಳಾಗಿದ್ದವು. ತಮ್ಮ ಕುಟುಂಬದ ಹಿರಿಯರನ್ನು, ಗಂಡನನ್ನು ಒಪ್ಪಿಸಿ ಸ್ವದೇಶ ಪ್ರವಾಸ ಕೈಗೊಳ್ಳುವ ಮಾತು ಒಂದು ದುಸ್ತರ ಸಂಗತಿಯಾಗಿತ್ತು. ಸಮುದ್ರ ದಾಟಿ ಹೋದರು ಎಂದರೆ, ಊರಿನಿಂದಲೇ ಬಹಿಷ್ಕಾರಕ್ಕೆ ಒಳಗಾಗುತ್ತಿದ್ದರು. ಭಾರತೀಯರಲ್ಲಿ ಪ್ರವಾಸಗಳೆಂದರೇ ಸಾಹಸದ ಕೆಲಸವೆಂದು, ಬುದ್ಧಿವಂತ ಪುರುಷರಿಗೆ ಮಾತ್ರ ಸೀಮಿತಗೊಂಡಿದ್ದವು. ಆದರೆ ಧಾರ್ಮಿಕ ಯಾತ್ರೆಗಳನ್ನು ಕೈಗೊಳ್ಳಲಿಕ್ಕೆ ಅವಕಾಶವಿತ್ತು. ಹೆಂಗಸರು ತಮ್ಮ ಇಳಿವಯಸ್ಸಿನಲ್ಲಿ ಗಂಡನೊಡನೆ ಮಾತ್ರ ಯಾತ್ರೆ ಮಾಡಬಹುದಿತ್ತು. ಕಾಶಿ, ಬದರಿನಾಥ, ವಾರಾಣಾಸಿ ಮುಂತಾದ ಧಾರ್ಮಿಕ ಸ್ಥಳಗಳಿಗೆ ಭೇಟಿ ಕೊಡಬಹುದಾಗಿತ್ತು. ಇಂತಹ ಪ್ರವಾಸದಲ್ಲಿ ಮನೋರಂಜನೆಗೆ ಅವಕಾಶವಿರಲಿಲ್ಲ. ಮೋಕ್ಷದ ಉದ್ದೇಶಕ್ಕಾಗಿ ಮಾತ್ರ ಎಂಬಂತೆ ಗಂಡು ಹೆಣ್ಣು ತಮ್ಮ ಇಳಿವಯಸ್ಸಿನಲ್ಲಿ ಇಂತಹ ಧಾರ್ಮಿಕ ಯಾತ್ರೆಗಳನ್ನು ಕೈಗೊಳ್ಳುತ್ತಿದ್ದರು. ಪ್ರವಾಸದ ಸಂದರ್ಭಕ್ಕೆ ಧಾರ್ಮಿಕ ಸ್ಥಳಗಳಾಚೆ ಪ್ರೇಕ್ಷಣೀಯ ತಾಣಗಳನ್ನು ಭೇಟಿ ಮಾಡುವುದು, ಅಪರಿಚಿತ ಪ್ರದೇಶಗಳನ್ನು ನೋಡುವುದು ನಿಷೇಧವಾಗಿದ್ದವು. ಅಂತಹ ಹವ್ಯಾಸಗಳನ್ನು ಮೋಜು-ಮಸ್ತಿಗಾಗಿ ತಿರುಗಾಡುವ ಪ್ರಕ್ರಿಯೆ ಎಂದು ನಿರ್ಧರಿಸುತ್ತಿದ್ದರು. ಕೆಲವೊಮ್ಮೆ ಅಂತವರಿಗೆ ಶಿಕ್ಷೆಗಳಾಗುತ್ತಿದ್ದವು. ಕಾಲದ ಗತಿಗೆ ಸಿಲುಕಿದ ಸಮಾಜವು ಚಲನಶೀಲವಾಗುತ್ತಾ ಬಂದಾಗ ಅನೇಕ ಬದಲಾವಣೆಗಳು ಉಂಟಾದವು.

ಶಿಕ್ಷಣ ಮತ್ತು ಜಾಗತೀಕರಣದ ಪರಿಣಾಮದಿಂದಾಗಿ ಮಹಿಳೆಯರು ಮೌಢ್ಯದ ಆಚರಣೆಗಳನ್ನು ಧಿಕ್ಕರಿಸಿದರು. ಪುರುಷರಷ್ಟೇ ಸಮರ್ಥವಾಗಿ ಎಲ್ಲಾ ರಂಗಗಳಲ್ಲಿ ಕೆಲಸ ಮಾಡಬಲ್ಲೆವು ಎಂಬುದು ಹಂತ ಹಂತವಾಗಿ ಸಾಧಿಸತೊಡಗಿಸುವಲ್ಲಿ ದಿಟ್ಟ ಹೆಜ್ಜೆ ಇಡತೊಡಗಿದರು. ಬೇರೆ ಬೇರೆ ಪ್ರದೇಶ, ಭಾಷೆ, ನೆಲ, ಸಂಸ್ಕೃತಿ, ನೈಸರ್ಗಿಕ ವೈವಿಧ್ಯಯನ್ನು, ವಿಕೋಪಗಳನ್ನು ದಾಖಲಿಸುವಂತಹ ಪ್ರವಾಸ ಕಥನಗಳು ಪುರುಷರಿಗೆ ಕಷ್ಟವಾಗುವಂತಹ ಸಂದರ್ಭಗಳಲ್ಲೂ ಮಹಿಳೆಯರು ಇಂದು ಯಶಸ್ವಿಯಾಗಿ ಪ್ರವಾಸ ಕೈಗೊಳ್ಳುತ್ತಿದ್ದಾರೆ.

೧೮೮೦ರಲ್ಲಿ ಪ್ರಕಟವಾದ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರ 'ದಕ್ಷಿಣ ಭಾರತ ಯಾತ್ರೆ'ಯು ಕನ್ನಡದ ಮೊದಲ ಪ್ರವಾಸ ಕಥನವಾಗಿದೆ. ನಂತರದಲ್ಲಿ ಅನೇಕ ಪುರುಷ ಬರಹಗಾರರು ಪ್ರವಾಸ ಕಥನಗಳನ್ನು ಬರೆದಿದ್ದಾರೆ. ೧೮೮೦ರಿಂದ ೧೯೩೭ರ ಅವಧಿಗೆ ಕನ್ನಡದಲ್ಲಿ ಮಹಿಳಾ ಪ್ರವಾಸಿಗರು ಕಂಡುಬಂದಿಲ್ಲ. ತೀರ್ಥಯಾತ್ರೆ ಮತ್ತು ಪ್ರವಾಸಗಳನ್ನು ಕೈಗೊಂಡಿದ್ದರೂ ತಮ್ಮ ಅನುಭವವನ್ನು ಬರೆದಿಡುವಂತಹ ಕೆಲಸಗಳು ಈ ಅವಧಿಯಲ್ಲಿ ಕಂಡುಬರುವುದಿಲ್ಲ. ಆಧುನಿಕ ಸಾಹಿತ್ಯ ಚರಿತ್ರೆಯ ವಿವಿಧ ಪ್ರಕಾರಗಳನ್ನು ಗಮನಿಸಿದಾಗಲೂ ದೀರ್ಘ ಅವಧಿಯ ಅಂತರದಲ್ಲಿ ಮಹಿಳಾ ಬರಹಗಾರರು ಕಂಡುಬರುವುದಿಲ್ಲ. ೧೯೩೭ರಲ್ಲಿ ಮೈಸೂರು ಒಡೆಯರ ರಾಣಿ ಚನ್ನಾಜಮ್ಮಣ್ಣಿಯವರ 'ನನ್ನ ಪ್ರಪಂಚ ಸಂಚಾರ' ಕೃತಿ ರಚನೆಗೊಂಡಿದ್ದು, ಇದು ಕನ್ನಡದ ಮೊಟ್ಟಮೊದಲ ಮಹಿಳಾ ಪ್ರವಾಸ ಕಥನವೆಂಬ ಖ್ಯಾತಿಗೆ ಪಾತ್ರವಾಗಿದೆ. ಇದರ ಸ್ಫೂರ್ತಿಯಿಂದ ಪಿ.ಆರ್.ಜಯಲಕ್ಷ್ಮಿ, ಚಂದ್ರಭಾಗಾದೇವಿ, ರುಕ್ಮಿಣಿ ಗಿರಿಮಾಜಿ, ಎಂ.ಕೆ.ಇಂದಿರಾ, ಅನುಪಮಾ ನಿರಂಜನ ಮುಂತಾದವರು ಪ್ರವಾಸ ಕೈಗೊಂಡು ತಮ್ಮ ಅನುಭವಗಳನ್ನು ಬರೆದರು. ಕನ್ನಡದಲ್ಲಿ ಪ್ರವಾಸ ಕಥನಗಳ ಸಂಖ್ಯೆ ಹೆಚ್ಚಾಗಿ ಕಂಡುಬಂದದ್ದು ಮಾತ್ರ ೧೯೭೦ರ ದಶಕದಲ್ಲಿ. ಈ ಮೂರು ದಶಕದಲ್ಲಿ ದೇಶದಾಚೆಗೆ ಪ್ರವಾಸ ಮಾಡಿರುವ ಮಹಿಳೆಯ ಸಂಖ್ಯೆ ಕಡಿಮೆ ಎನ್ನಬಹುದಾಗಿದೆ. ಮಹಿಳೆಯರು ದೇಶದ ಒಳಗಿನ ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕೈಗೊಂಡಿರುವುದೇ ಕಂಡುಬರುತ್ತದೆ. ಮಹಿಳೆಯರು ಆಧುನಿಕತೆಗೆ ತೆರೆದುಕೊಂಡಂತೆ ಕಟ್ಟುಪಾಡುಗಳು ಮತ್ತು ಅಸಹಾಯಕತೆಗಳನ್ನು ಮೀರಿ ಪ್ರವಾಸ ಕೈಗೊಳ್ಳತೊಡಗಿದರು. ಇಂತಹ ಪ್ರವಾಸ ಕಥನಗಳಲ್ಲಿ ಸ್ತ್ರೀಪರವಾದ ಕಾಳಜಿಗಳು, ಸ್ತ್ರೀ ಸಂವೇದನೆಗಳು, ಸಂಸ್ಕೃತಿಯ ಬಗೆಗಿನ ಕಾಳಜಿ, ರಾಜಕೀಯವನ್ನು ಕುರಿತಾದ ಅಂಶಗಳು, ವಿಜ್ಞಾನ, ಸಂಶೋಧನೆ, ಪ್ರಕೃತಿ ಹಾಗೂ ನಿಸರ್ಗದ ಬಗೆಗಿನ ಕಾಳಜಿಗಳು ವ್ಯಕ್ತವಾಗಿವೆ. ಭಿನ್ನ ಸಂಸ್ಕೃತಿಗಳ ತೌಲನಿಕ ಅಧ್ಯಯನ, ವಿದೇಶದಲ್ಲಿ ಮಹಿಳೆಯರ ಸ್ಥಾನಮಾನ, ಶೋಷಣೆ, ಸಾಮಾಜಿಕ ಜನಜೀವನ, ಬಹುಸಂಸ್ಕೃತಿಯಲ್ಲಿ ಮಹಿಳಾ ಬದುಕು, ಸಾಂಸ್ಕೃತಿಕ ರಂಗಗಳಲ್ಲಿನ ಕ್ರಿಯಾಶೀಲ ಬದುಕಿನ ಅಭಿವ್ಯಕ್ತಿಯನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಸಂಪ್ರದಾಯಿಕತೆಯನ್ನು ಮುರಿಯುವ ಮತ್ತು ಪೋಷಿಸುವ ಚಿಂತನೆಗಳನ್ನು ಪುರುಷರಷ್ಟೇ ಪರಿಣಾಮಕಾರಿಯಾಗಿ ಮಹಿಳೆಯರು ತಮ್ಮ ಪ್ರವಾಸ ಕಥನಗಳಲ್ಲಿ ನಿರೂಪಿಸಿರುವುದನ್ನು ಕಾಣುತ್ತೇವೆ. ಮಹಿಳಾ

ಪ್ರವಾಸಿಗಾರರು ಸ್ವಾತಂತ್ರ್ಯ ನಂತರದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಸ್ವಾತಂತ್ರ್ಯಪೂರ್ವದಲ್ಲಿಯೇ ಸಾಹಿತ್ಯದ ಹಲವು ಪ್ರಕಾರಗಳು ರಚನೆಗೊಂಡಿದ್ದರೂ ಸಮಾಜದ ಮುನ್ನೆಲೆಗೆ ಬಂದದ್ದು ಮಾತ್ರ ವಿರಳವಾಗಿವೆ. ಕನ್ನಡದಲ್ಲಿ ಪ್ರವಾಸವನ್ನು ಕೈಗೊಂಡು ತಮ್ಮ ಪ್ರವಾಸದ ಅನುಭವಗಳನ್ನು ಕೃತಿಯಾಗಿ ದಾಖಲಿಸುವ ಮೂಲಕ ರಾಣಿ ಚೆನ್ನಾಜಮ್ಮಣ್ಣಿಯವರು ಅನೇಕ ಮಹಿಳಾ ಪ್ರವಾಸಿಗರಿಗೆ ಮಾದರಿಯಾಗಿ ಕಂಡಿದ್ದಾರೆ.

ಮೈಸೂರು ಮನೆತನದ ರಾಣಿ ಚನ್ನಾಜಮ್ಮಣ್ಣಿ ಅವರು 'ನನ್ನ ಪ್ರಪಂಚ ಸಂಚಾರ' ಕೃತಿಯಲ್ಲಿ ಯುರೋಪ್ ಪ್ರವಾಸ ಮಾಡಿದ ತಮ್ಮ ಅನುಭವಗಳನ್ನು ದಾಖಲಿಸಿದ್ದಾರೆ. ಲಂಡನ್, ವಿಯಾನ್ನ, ವೆನಿಸ್, ನೇಪಲ್ಸ್, ಜ್ಯೂರಿಚ್, ಸ್ಕಾಟ್‌ಲ್ಯಾಂಡ್, ಆಸ್ಟ್ರೇಲಿಯಾ, ಇಂಡೋನೇಷ್ಯಾ, ಅಮೇರಿಕಾ ಇತ್ಯಾದಿ ಪಟ್ಟಣಗಳಲ್ಲಿ ನೋಡಿದ ಸಾಮಾಜಿಕ ರೀತಿ, ನೀತಿ, ಜನರ ಸ್ವಭಾವ, ನಿಸರ್ಗ ಸಂಪತ್ತು, ಜನರ ಮುಕ್ತಭಾವನೆ, ವಿದ್ಯಾಭ್ಯಾಸ ಮೊದಲಾದವುಗಳ ಬಗೆಗೆ ವಿವರವಾಗಿ ದಾಖಲಿಸುತ್ತಾರೆ. ಅಲ್ಲಿಯ ಜನಜೀವನವನ್ನು ನಮ್ಮ ದೇಶದ ಬದುಕಿನೊಂದಿಗೆ ಹೋಲಿಸುವ ಬರಹವನ್ನು ಕಾಣುತ್ತೇವೆ. ಅಲ್ಲದೆ ಈ ಪ್ರವಾಸ ಕಥನದ–ಭಾಷೆ–ನುಡಿಗಟ್ಟು–ನಿರೂಪಣಾ ವಿಧಾನವು ವಿಶಿಷ್ಟವಾಗಿದೆ. ಚನ್ನಾಜಮ್ಮಣ್ಣಿಯವರ ಪ್ರವಾಸ ಕಥನವು ಅನೇಕ ಮಹಿಳಾ ಪ್ರವಾಸಿಗರಿಗೆ ಹೊಸ ಉತ್ಸಾಹವನ್ನು ನೀಡಿರುವ ಕುರಿತು ಮಲ್ಲೇಪುರಂ ಜಿ.ವೆಂಕಟೇಶ ಅವರು 'ಪ್ರವಾಸ ಸಾಹಿತ್ಯ ಒಂದು ಅಧ್ಯಯನ' ಕೃತಿಯಲ್ಲಿ ಹೀಗೆ ವಿವರಿಸುತ್ತಾರೆ. "ಇವರ ಬರವಣಿಗೆಯಂತೂ ಸ್ಫುಟವಾಗಿದೆ, ಅನುಭವಗಳನ್ನು ನೇರವಾಗಿ ನಿರ್ಭಿಡೆಯಿಂದ ಹೇಳುತ್ತಾ ಹೋಗುತ್ತಾರೆ. ಶೈಲಿಯಂತೂ ಪಳಗಿದೆ, ಸರಳತೆ, ಖಚಿತತೆ, ರಮ್ಯ ನಿರೂಪಣೆ, ವಸ್ತು ನಿರೂಪಣೆ, ವಸ್ತು ನಿರ್ವಹಣೆಯಲ್ಲಿ ನಮ್ಮ ಆಸಕ್ತಿಯನ್ನು ಕೆರಳಿಸುತ್ತದೆ."(ಮಲ್ಲೇಪುರಂ ಜಿ.ವೆಂಕಟೇಶ (ಸಂ). ೧೯೯೨, ಪು–೩೯) ಎಂದಿದ್ದಾರೆ. ಪುರಾಣ, ಧಾರ್ಮಿಕತೆ, ಸಂಸ್ಕೃತಿ, ಆಚಾರ–ವಿಚಾರ, ನಂಬಿಕೆ ಅಡುಗೆ ಮನೆಗೆ ಸೀಮಿತವಾದಂತಹ ವಿದ್ಯಾವಂತ ಮಹಿಳೆಯರು ತಮಗಿದ್ದ ಅಡೆತಡೆಗಳನ್ನು ನಿರ್ಲಕ್ಷಿಸಿದ ಸ್ಫೂರ್ತಿಯ ಕಥನವಾಗಿಯೂ ಈ ಕೃತಿ ಮಹತ್ವದಾಗುತ್ತದೆ.

೧೯೫೬ರಲ್ಲಿ ಪ್ರಕಟಗೊಂಡ ಪಿ.ಆರ್.ಜಯಲಕ್ಷ್ಮಮ್ಮನವರ 'ಬದರಿಯಾತ್ರೆ' ಎಂಬ ಪ್ರವಾಸ ಕಥನವು ಬದರಿಯಾತ್ರೆ ಹೊರಡುವವರಿಗೆ ಒಂದು ಕೈಪಿಡಿಯಂತಿದ್ದು. ತೀರ್ಥಯಾತ್ರೆ ಮಾಡುವವರಿಗೆ ಮನಸ್ಸಿಗೆ ನೆಮ್ಮದಿ, ಆತ್ಮಕ್ಕೆ ಸಂತೋಷ, ಇಹಪರ ಸಾಧನೆ ಎಂಬ ದೃಷ್ಟಿಯಿಂದ ಧಾರ್ಮಿಕತೆಯ ವಿವರಗಳನ್ನೇ ಹೆಚ್ಚಾಗಿ ಹೇಳಿಕೊಂಡಿದ್ದಾರೆ. ಲೇಖಕಿಯರಿಗೆ ಆಧ್ಯಾತ್ಮದ ಕಡೆಗೆ ಒಲವು ಇರುವ ಕಾರಣ ಬದರಿಯಂತಹ ತೀರ್ಥಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಹೀಗಾಗಿ ಆ ಕ್ಷೇತ್ರಕ್ಕೆ ಭೇಟಿ ಕೊಡುವವರಿಗೆ ಇದು ಉಪಯುಕ್ತ ಕೃತಿಯಾಗಿದೆ. ಲಲಿತಾ ಸುಬ್ಬರಾವ್ ಅವರ 'ನಾನು ಕಂಡ ಅಮೇರಿಕಾ' ಕೃತಿಯು ೧೯೭೧ರಲ್ಲಿ ಪ್ರಕಟವಾಗಿದೆ. ಅಮೇರಿಕಾ ದೇಶಕ್ಕೆ ಕೌಟುಂಬಿಕ ಹಿನ್ನೆಲೆಯಲ್ಲಿ ಭೇಟಿಕೊಟ್ಟ ಲೇಖಕಿ ಅಮೇರಿಕಾವನ್ನು ಚಾರಿತ್ರಿಕವಾಗಿಯೂ, ಅಭಿವೃದ್ಧಿಶೀಲ ರಾಷ್ಟ್ರವೆಂತಲೂ ಚಿತ್ರಿಸಿದ್ದಾರೆ. ಅಮೇರಿಕಾ

ಮಹಿಳೆಯರ ಕುರಿತು ಕೆಲವು ವಿವರಗಳನ್ನು ದಾಖಲಿಸುವ ಪ್ರಯತ್ನವನ್ನು ಮಾಡಿದ್ದಾರೆ. ಮೈಸೂರು ಸರ್ಕಾರದಿಂದ ವಿಶ್ವಪರ್ಯಟನೆ ಮಾಡಿ ಭಾರತೀಯ ನೃತ್ಯ ಪದ್ಧತಿಯ ವೈಶಿಷ್ಟ್ಯವನ್ನು ವಿದೇಶಿಯರಿಗೆ ಪರಿಚಯಿಸಿದ ಕೀರ್ತಿ ಚಂದ್ರಭಾಗಾದೇವಿ ಮತ್ತು ಶ್ರೀಕೃಷ್ಣರಾವ್ ಅವರಿಗೆ ಸಲ್ಲುತ್ತದೆ. ಈ ಕಲಾವಿದ ದಂಪತಿಗಳ ಕಲಾಯಾತ್ರೆಯ ವಿವರಗಳನ್ನು 'ಗೆಜ್ಜೆಯ ಹೆಜ್ಜೆಯ ನುಡಿ'(೧೯೭೧) ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಇದನ್ನು ಪತ್ರಸಾಹಿತ್ಯ ಪ್ರಕಾರವಾಗಿ ಗುರುತಿಸುತ್ತರಾದರೂ ವಿಶ್ವಪರ್ಯಟನೆಯ ಕಲಾಯಾತ್ರೆಯ ಅನುಭವಗಳಾಗಿವೆ. ತಾವು ಕಂಡ ನೆಲ, ಜಲ, ಜನ, ಸಂಸ್ಕೃತಿ, ವೈವಿಧ್ಯ ಮುಂತಾದವುಗಳನ್ನು ತಮ್ಮ ಕೃತಿಯಲ್ಲಿರಿಸಿದ್ದಾರೆ. ಚಂದ್ರಭಾಗಾದೇವಿ ಅವರು ಹೊರದೇಶದ ಕಲೆ, ಸಂಸ್ಕೃತಿಯನ್ನು ಪತ್ರದ ಮೂಲಕ ಹಂಚಿಕೊಳ್ಳುವ ಒಂದು ಪ್ರಯೋಗಶೀಲ ಕೃತಿಯಾಗಿ ಗಮನಸೆಳೆಯುತ್ತದೆ.

ಪೂರ್ವದೇಶಗಳ ಪ್ರವಾಸ ಮಾಡಿದ ಅನುಪಮಾ ನಿರಂಜನ ಅವರ 'ಸ್ನೇಹಯಾತ್ರೆ' ಮಹತ್ವದ ಪ್ರವಾಸ ಕೃತಿಯಾಗಿದೆ. ೧೯೭೫ರಲ್ಲಿ ಬರ್ಲಿನ್‌ನಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ಕಾಂಗ್ರೇಸ್‌ನಲ್ಲಿ ಭಾಗವಹಿಸಲು ಹೋಗಿದ್ದ ಅನುಪಮಾ ಅವರು ಪೂರ್ವ ಜರ್ಮನಿ, ರಷ್ಯಾ, ಪೋಲೆಂಡ್‌ಗಳಲ್ಲಿನ ಪ್ರವಾಸದ ಅನುಭವಗಳನ್ನು ಸಾಮಾಜಿಕವಾಗಿ, ಚಾರಿತ್ರಿಕವಾಗಿ ಸಾಕಷ್ಟು ಮಾಹಿತಿಗಳೊಂದಿಗೆ ಇಲ್ಲಿ ದಾಖಲಿಸಿದ್ದಾರೆ. ಪ್ರವಾಸ ಸಾಹಿತ್ಯದ ಅಧ್ಯಯನಕಾರರಾದ ಬಿ.ಟಿ.ಅನುರಾಧ ಅವರು ಈ ಕೃತಿಯ ಕುರಿತು "ಕುಮಾರವ್ಯಾಸ ಭಾರತವನ್ನು ಓದಿದಾಗ ಕಲಿಯುಗ ದ್ವಾಪರವಾಗುವಂತೆ ಅನುಪಮಾರ ಪ್ರವಾಸ ಓದಿದಾಗ ಅವರು ಕಂಡ ದೇಶಗಳು ನಮ್ಮ ಮನಸ್ಸಿನಲ್ಲಿ ಚಿತ್ರಿತವಾಗುತ್ತವೆ. ಅವರು ಅನುಭವಗಳನ್ನು ದಾಖಲಿಸಿರುವ ರೀತಿ ಅನನ್ಯ ಮತ್ತು ಪರಿಪೂರ್ಣವಾದುದು."(ಅನುರಾಧ.ಬಿ.ಟಿ., ೨೦೧೧, ಪುಟ-೧೫೩) ಎಂದು ಹೇಳಿದ್ದಾರೆ. ಮಹಿಳಾ ಪ್ರವಾಸ ಬರೆಯುವವರಿಗೆ ಉತ್ತಮ ಕೃತಿಯೆಂದು, ಓದಿ ಕಲಿಯುವುದು ಸಾಕಷ್ಟಿದೆ ಎಂತಲೂ ಪ್ರಸ್ತಾಪಿಸುತ್ತಾರೆ. ಈ ಕೃತಿಯ ಭಾಷೆ, ನಿರೂಪಣೆ, ಪ್ರವಾಸದ ಅನುಭವಗಳನ್ನು ಕುರಿತು ಹೇಳಿರುವುದು ಕುವೆಂಪುರವರ ಕುಮಾರವ್ಯಾಸ ಭಾರತದ ವ್ಯಾಖ್ಯಾನ ನೆನಪಿಸುವಂತಿದೆ. ಅಷ್ಟಮಟ್ಟಿಗೆ ಒಬ್ಬ ಲೇಖಕಿಗೆ ಒಂದು ದೇಶದ ಪಕ್ಷಿನೋಟದ ಬರಹದ ಈ ಕೃತಿಯನ್ನು ಓದಿದಾಗ ತಿಳಿದುಬರುತ್ತದೆ. ಒಂದರ್ಥದಲ್ಲಿ ಮಹಿಳಾ ಪ್ರವಾಸಕ್ಕೆ ಬರಹದ ಒಂದು ಮಾದರಿಯ ಕೃತಿಯೆಂದು ಹೇಳಬಹುದಾಗಿದೆ.

ಶಾಂತಾದೇವಿ ಮಾಳವಾಡ ಅವರ 'ಶ್ರೀಗಿರಿಯಿಂದ ಹಿಮಗಿರಿಗೆ' ಪ್ರವಾಸ ಕಥನವು ೧೯೭೮ರಲ್ಲಿ ಪ್ರಕಟಗೊಂಡಿದ್ದು, ಶ್ರೀಶೈಲದಿಂದ ಸಿಮ್ಲಾದವರೆಗಿನ ಭಾರತದ ಸುಂದರ ಸ್ಥಳಗಳ ವಿಶಿಷ್ಟತೆಗಳನ್ನು ಪರಿಚಯಿಸಿದ್ದಾರೆ. ಶಾಂತಾದೇವಿಯವರ ಈ ಕೃತಿಯು ಹವ್ಯಾಸಿಯಾಗಿಯೋ, ವೃತ್ತಿಪರವಾಗಿಯೋ ಪ್ರವಾಸ ಮಾಡಿದ ಕಥನವಾಗದೆ, ತಮ್ಮ ಕುಟುಂಬದ ಜೊತೆಗೆ ಬಿಡುವಿನ ಸಂದರ್ಭದಲ್ಲಿ ಬಿಡಿ ಬಿಡಿಯಾಗಿ ಸಂದರ್ಶಿಸಿದ ಸ್ಥಳಗಳ ಬಗ್ಗೆ ಪರಿಚಯಿಸುವ ಸಂಗ್ರಹ ರೂಪದ ಕೃತಿಯಂತಿದೆ. ನೈಸರ್ಗಿಕ ರಮ್ಯತೆಯನ್ನು ಹೆಚ್ಚು ದಾಖಲಿಸಿರುವ ಲೇಖಕಿ ಕಾಶ್ಮೀರ,

ಕನ್ಯಾಕುಮಾರಿ, ಕೇರಳ, ಸಿಮ್ಲಾ, ಚಂಡೀಗಢ, ಗೌಹತಿ, ನಂದಿಬೆಟ್ಟ, ಕೆಮ್ಮಣ್ಣುಗುಂಡಿಗಳ ವರ್ಣನೆಯನ್ನು ಮಾಡಿದ್ದಾರೆ. ಕಾಶಿ, ಶ್ರೀಶೈಲ, ರಾಮೇಶ್ವರ, ಪಾಂಡಿಚೆರಿ, ಹರಿದ್ವಾರ ಮುಂತಾದ ಧಾರ್ಮಿಕ ಕ್ಷೇತ್ರಗಳ ಗುಡಿ ಗೋಪುರಗಳ ವಿವರಣೆ, ಶಿಲ್ಪಕಲಾ ವೈಶಿಷ್ಯ ಮತ್ತು ದೈವಶ್ರದ್ಧೆಯ ವಿವರಗಳು ಕೃತಿಯಲ್ಲಿ ದಟ್ಟವಾಗಿವೆ. 'ಶಿಲ್ಪಕಲೆಯ ತೊಟ್ಟಿಲು' ಮತ್ತು 'ಚಾಲುಕ್ಯರ ಕೀರ್ತಿ ಕಲಶ' ಮುಂತಾದ ಶೀರ್ಷಿಕೆಗಳು ಕೃತಿಯಲ್ಲಿ ಆಕರ್ಷಣೆಯಾಗಿ ಮೂಡಿಬಂದಿವೆ. ಆ ಸ್ಥಳಗಳ ಕುರಿತು ಮಾಹಿತಿ ಪ್ರಧಾನವಾಗಿ ದಾಖಲಿಸುತ್ತಾರೆ. ಈ ಕೃತಿಯು ಕರ್ನಾಟಕ ಮತ್ತು ಭಾರತದ ಪ್ರವಾಸಿ ಮಾರ್ಗದರ್ಶಿ ಕೃತಿಯಾಗಿ ಮುಖ್ಯವಾಗುತ್ತದೆ.

೧೯೮೧ರಲ್ಲಿ ಪ್ರಕಟವಾದ ಎಂ.ಕೆ.ಇಂದಿರಾ ಅವರ 'ಅನುಭವ ಕುಂಜ' ಕೃತಿಯು ೧೭ ದಿನಗಳ ಕಾಲ ದಕ್ಷಿಣ ಭಾರತ ಪ್ರವಾಸ ಮಾಡಿದ ಅನುಭವ ಕಥನವಾಗಿದೆ. ತಿರುಪತಿಯಲ್ಲಿ ಭಕ್ತರ ಪಾಡು, ಪಾಂಡಿಚೇರಿಯ ಅರವಿಂದ ಮತ್ತು ಮಾತಾಜಿಯವರ ಆತ್ಮಸಿದ್ಧಿಯನ್ನು ವರ್ಣಿಸಿದ್ದಾರೆ. ತಂಜಾವೂರಿನ ಬೃಹದೀಶ್ವರ, ಶ್ರೀರಂಗ, ರಾಮೇಶ್ವರವನ್ನು ಸಂದರ್ಶಿಸಿದ ವಿವರಣೆಯಿದೆ. ನದಿಯಲ್ಲಿ ಸ್ನಾನ ಮಾಡುವ ಮೂಢನಂಬಿಕೆಯನ್ನು ಲೇಖಕಿ ಸಹಪ್ರಯಾಣಿಕರಿಗೆ ಪ್ರಶ್ನಿಸುತ್ತಾರೆ. ಅಲ್ಲದೇ ಪ್ರವಾಸ ತಾಣದಲ್ಲಿನ ಭಿಕ್ಷುಕರ ಹಾವಳಿಯನ್ನು ಖಂಡಿಸಿದ್ದಾರೆ. ಕನ್ಯಾಕುಮಾರಿಯಲ್ಲಿನ ವಿವೇಕಾನಂದರ ವಿಗ್ರಹವನ್ನು ವರ್ಣಿಸುತ್ತಾರೆ. ಚಂಡಮಾರುತದಲ್ಲಿ ಹಾನಿಗೊಳಗಾದವರ ಬಗ್ಗೆ ಲೇಖಕಿ ಮರುಕ ವ್ಯಕ್ತಪಡಿಸುತ್ತಾರೆ. ಈ ಮೂಲಕ ಎಂ.ಕೆ.ಇಂದಿರಾ ಅವರು ಪ್ರವಾಸ ಕಥನದಲ್ಲಿ ಭಾವನಾತ್ಮಕವಾದ ನಿರೂಪಣೆಯನ್ನು ಮೂಡಿಸಿದ್ದಾರೆ. ಬಿ.ಲೀಲಾಭಟ್ ಅವರು 'ಭೂತ-ನಾಗರ ನಡುವೆ' ಮತ್ತು 'ಶಕ್ತಿಯ ಶೋಧನೆಯಲ್ಲಿ'(೧೯೮೧) ಎಂಬ ಕೃತಿಗಳನ್ನು ರಚಿಸಿದ್ದಾರೆ. ಈ ಕೃತಿಗಳನ್ನು ಕರ್ನಾಟಕ ಪ್ರವಾಸ ಕಥನದ ಕ್ಷೇತ್ರದಲ್ಲಿ ತಪ್ಪದೆ ಉಲ್ಲೇಖಿಸಬೇಕು ಎಂದು ಅನೇಕ ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. 'ಭೂತ ನಾಗರ ನಡುವೆ' ಎಂಬುದು ಮಾರ್ತಾ ಆ್ಯಪ್ಸನ್ ಎಂಬ ವಿದೇಶಿ ಸಂಶೋಧಕಿಯೊಡನೆ ತುಳು ನಾಡಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡ ಪ್ರವಾಸ ಅಧ್ಯಯನದ ಕೃತಿಯಾಗಿದೆ. ಅಲ್ಲಿನ ಭೂತರಾಧನೆ, ನಾಗಾರಾಧನೆಯ ವೈಶಿಷ್ಟ್ಯಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ. ಸ್ಥಳೀಯ ತಾಣಗಳ ವೈವಿಧ್ಯವನ್ನು ತಿಳಿಸುವ ಪ್ರವಾಸ ಕಥನವಾಗಿ ಇದು ವಿಶಿಷ್ಟವಾಗಿದೆ. ಇವರ 'ಶಕ್ತಿಯ ಶೋಧನೆಯಲ್ಲಿ' ಎಂಬ ಕೃತಿಯು ಇಪ್ಪತ್ತು ಅಧ್ಯಾಯಗಳನ್ನು ಒಳಗೊಂಡಿದೆ. ದೇವಸ್ಥಾನಗಳಿಗೆ ಸಂಬಂಧಿಸಿದ ಐತಿಹಾಸಿಕ ಹಿನ್ನೆಲೆ, ಧಾರ್ಮಿಕ, ಸಂಪ್ರದಾಯ, ತಾತ್ವಿಕ ಆಧಾರ, ಆರಾಧನ ವೈಚಿತ್ರ್ಯ, ಕಲಾವೈವಿಧ್ಯ, ಸಾಮಾಜಿಕ ನಂಬಿಕೆ, ವೈಯಕ್ತಿಕ ಧೋರಣೆಗಳ ರಂಜಕ ಮತ್ತು ವ್ಯಂಜಕ ನಿರೂಪಣೆಯುಳ್ಳ ಪುಸ್ತಕವು ಶೋಧನೆ ಮತ್ತು ಪ್ರವಾಸಗಳೆರಡರ ಕಷ್ಟ-ಸುಖಗಳ, ಲಾಭ-ನಷ್ಟಗಳನ್ನು ಈ ಕೃತಿಯು ಚಿತ್ರಿಸುತ್ತದೆ.

ಆರಂಭದ ಮಹಿಳಾ ಪ್ರವಾಸ ಕೃತಿಗಳನ್ನು ಅವಲೋಕಿಸಿದಾಗ ದೇಸಿಯ ಪ್ರವಾಸ ಕಥನಗಳೇ ಹೆಚ್ಚಾಗಿ ಕಂಡುಬರುತ್ತವೆ. ಭಾರತದಿಂದ ಆಚೆಗೆ ಹೋಗುವ ಅವಕಾಶ ವಂಚಿತರಾದ

ಕಾರಣಕ್ಕೆ ಭಾರತದೊಳಗೆ ಪ್ರವಾಸ ಮಾಡಿದ ಅನುಭವಗಳನ್ನು ದಾಖಲು ಮಾಡಿದ ಕೃತಿಗಳಾಗಿ ಕಂಡುಬರುತ್ತವೆ. ೧೯೯೯ರಲ್ಲಿ ಪ್ರಕಟವಾದ ಹೇಮಲತಾ ಮಹಿಷಿ ಅವರ 'ಯುರೋ ದರ್ಶನ' ಕೃತಿಯು ವಿದೇಶಿ ಪ್ರವಾಸ ಕಥನವಾಗಿದೆ. ಮೂವತ್ತೈದು ದಿನಗಳ ಯುರೋಪ್ ಪ್ರವಾಸದ ಅನುಭವವನ್ನು ಕುರಿತು ಲೇಖಕಿ "ಒಬ್ಬ ಪ್ರವಾಸಿ, ಪ್ರವಾಸಿಯಾಗಿ ಹೊಸ ದೇಶಕ್ಕೆ ಹೋದಾಗ ಭಿನ್ನವಾದ ಸಂಸ್ಕೃತಿ, ಜನಜೀವನ, ವ್ಯವಸ್ಥೆ, ಮೌಲ್ಯಗಳನ್ನು ಕಂಡಾಗ ಎಷ್ಟರಮಟ್ಟಿಗೆ ಅದನ್ನು ಗ್ರಹಿಸಲು ಸೂಕ್ತವಾಗಿ ಪದಗಳನ್ನು ಹಿಡಿದಿಡಲು ಶಕ್ತನಾಗುತ್ತಾನೆ? ಹೆಚ್ಚೆಂದರೆ ಅದು ಆ ಪ್ರವಾಸಿಯ ಗ್ರಹಿಕೆ ಎಂದು ಹೇಳಬಹುದಷ್ಟೇ" (ಹೇಮಲತಾ ಮಹಿಷಿ, ೧೯೯೯, ಪುಟ-ಲೇಖಕಿಯ ಮಾತು) ಎಂದು ಹೇಳಿಕೊಂಡಿದ್ದಾರೆ. ಈ ಅನಿಸಿಕೆಗಳು ಪ್ರವಾಸ ಕಥನಗಳು ಒಂದು ಪ್ರದೇಶದ ಸಮಗ್ರ ತಿಳುವಳಿಕೆಯ ಕುರಿತು ಎತ್ತಿರುವ ಪ್ರಶ್ನೆಯಾಗಿ ಸಮಂಜಸವಾಗಿದೆ. ಒಂದು ದೇಶದ ಸಾಂಸ್ಕೃತಿಕ, ಆಡಳಿತ, ರಾಜಕೀಯ, ಸಾಮಾಜಿಕ ಸ್ಥಿತಿಗತಿಗಳನ್ನು, ಚರಿತ್ರೆಗಳನ್ನು ಕೇವಲ ೩೦-೩೫ದಿನಗಳ ಅವಧಿಯಲ್ಲಿ ಎಲ್ಲವನ್ನು ತಿಳಿಯುವುದು ಅಸಾಧ್ಯವಾಗುತ್ತದೆ. ಆದರೆ ಲೇಖಕರು ತಾವು ಕಂಡುಂಡ ಪರಿಸರವನ್ನು ಪರಿಚಯಾತ್ಮಕವಾಗಿ ಬರೆದ ಕೃತಿಗಳೇ ಇಂದಿಗೂ ಇವೆ. ಒಂದರ್ಥದಲ್ಲಿ ಯಾವ ಕೃತಿಗಳು ಪರಿಪೂರ್ಣವಾಗಲಾರವು ಎಂಬ ಮಾತಿನಂತೆ ಹೇಮಲತಾ ಮಹಿಷಿ ಅವರ ಮೇಲಿನ ಅನಿಸಿಕೆಗಳು ಸೂಕ್ತವಾಗುತ್ತವೆ. ಲೇಖಕಿ ಯುರೋಪಿನ ಏಳು ದೇಶಗಳಾದ ಫ್ರಾನ್ಸ್, ಜರ್ಮನಿ, ನೆದರಲ್ಯಾಂಡ್, ಲಕ್ಸಂಬರ್ಗ್, ಬೆಲ್ಜಿಯಂ, ಸ್ಪೈಯಿನ್ ಮತ್ತು ಪೋರ್ಚ್‌ಗಲ್ ದೇಶಗಳಿಗೆ ಭೇಟಿ ನೀಡಿದ್ದಾರೆ. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕೆಲವು ಅಂಶಗಳನ್ನು ದಾಖಲಿಸಿದ್ದಾರೆ. ಲೇಖಕಿ ಪ್ರವಾಸ ಮಾಡಿದ ಸ್ಥಳಗಳಲ್ಲಿ ಲಂಡನ್ ದೇಶವನ್ನು ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ನಂತರ ಬ್ರಾಂಚಿ ಸೋದರಿಯರು ಮತ್ತು ಮೂರ್‌ಗಳು, ವರ್ಡ್ಸ್‌ವರ್ತ್‌ನ ಲೇಕ್ ಡಿಸ್ಟ್ರಿಕ್ ಹಾಗೂ ಶೇಕ್ಸ್‌ಪಿಯರ್‌ನ ಹ್ಯಾವರ್ಥನ ವಿವರಗಳು ತುಂಬಾ ಕುತೂಹಲಕಾರಿಯಾಗಿವೆ. 'ಕಹಿಸಿಹಿ ಲಂಡನ್', 'ಪಾಂತೆ ಇಟಲಿಯ ಹಂಪೆ', 'ನಾಜಿ ಶಿಬಿರದಲ್ಲೊಂದು ದಿನ', 'ಬರ್ಲಿನ್ ಗೋಡೆ ಹೊಡೆದಿದೆ' ಎನ್ನುವ ಅಧ್ಯಾಯಗಳು ಅಲ್ಲಿನ ಸಾಂಸ್ಕೃತಿಕತೆಯನ್ನು ಬಿಂಬಿಸುತ್ತವೆ.

ಅಮೃತ ಮಹಾದೇವಿ ಅಣ್ಣಿಗೇರಿ ಅವರ 'ಕರ್ನಾಟಕದ ಸಾಂಸ್ಕೃತಿಕ ಸ್ಥಳಗಳು' ಕೃತಿಯಲ್ಲಿ ಕನ್ನಡ ನಾಡಿನ ಪ್ರಮುಖ ಸ್ಥಳಗಳ ಇತಿಹಾಸ, ಸಂಸ್ಕೃತಿ, ಪೂರ್ವ ವೈಭವಗಳ ಪರಿಚಯವಿದೆ. ತ್ರಿವೇಣಿ ಶಿವಕುಮಾರ್ ಅವರು 'ನಿಸರ್ಗಪ್ರಿಯರ ನಾಡಿನಲ್ಲಿ' ಎಂಬ ಕೃತಿಯು ಸ್ವಿಜರ್‌ಲ್ಯಾಂಡ್, ಇಟಲಿ, ಜರ್ಮನಿ, ಹಾಲೆಂಡ್, ಫ್ರಾನ್ಸ್, ಇಂಗ್ಲೆಂಡ್ ದೇಶಗಳ ಸುತ್ತಾಟದ ಅನುಭವವನ್ನು ನಿರೂಪಿಸಿದ್ದಾರೆ. ಪ್ರವಾಸ ಪೂರ್ವದಲ್ಲಿ ಪ್ರಯಾಣಿಸುವ ಎಲ್ಲಾ ಸ್ಥಳಗಳ ಮಾಹಿತಿ ಪಡೆದು ಪ್ರವಾಸ ಮಾಡಿದ್ದಾಗಿ ಹೇಳಿಕೊಂಡಿದ್ದಾರೆ. ಕುಟುಂಬ ಸಮೇತವಾಗಿ ಪ್ರವಾಸ ಕೈಗೊಂಡಿದ್ದರಿಂದ ಇದನ್ನು ಒಂದು ಗುಂಪು ಪ್ರವಾಸ ಕಥನವಾಗಿ ವಿಮರ್ಶಕರು ಗುರುತಿಸಿದ್ದಾರೆ. ಕೃತಿಯ ಹೆಸರೇ ಹೇಳುವಂತೆ ಪ್ರಕೃತಿ ಸೌಂದರ್ಯದ ಜೊತೆಗೆ ಕಲೆ, ಸಾಹಿತ್ಯ, ಸಂಸ್ಕೃತಿಗಳ ಬಗೆಗೆ ತಿಳುವಳಿಕೆ ಹೊಂದಬೇಕೆನ್ನುವ ಕಳಕಳಿ ಅವರಲ್ಲಿದೆ. ಸಂದರ್ಭ ಮತ್ತು

ಸನ್ನಿವೇಶಗಳನ್ನು ಲೇಖಕಿ ತುಲನಾತ್ಮಕವಾಗಿ ವಿಶ್ಲೇಷಿಸುವ ನಿರೂಪಣೆಗಳು ಕೃತಿಯಲ್ಲಿ ಎದ್ದುಕಾಣುತ್ತವೆ. ಸ್ವಿಜರ್‌ಲ್ಯಾಂಡ್‌ನ ಹೋಟೆಲ್‌ವೊಂದರ ಸನ್ನಿವೇಶವೊಂದನ್ನು ಕುರಿತು ಲೇಖಕಿ "ದೊಡ್ಡ ಕಿಟಕಿಗೆ ಕಬ್ಬಿಣದ ಸರಳುಗಳು ಇಲ್ಲದೆ ಪೂರ್ತಿ ತೆರೆದಿತ್ತು. ಎದುರಿಗೆ ಅಲ್ಪಾ ಪರ್ವತಗಳು, ಅವುಗಳ ಮೇಲೆಲ್ಲಾ ತನ್ನ ಹಾಲು ಬೆಳೆದಿಂಗಳನ್ನು ಚೆಲ್ಲಿ ಆಕಾಶದಲ್ಲಿ ಚಂದ್ರ ನಗುತ್ತಿದ್ದ. ನೀರವ ರಾತ್ರಿ ಬೆಟ್ಟದ ಬುಡದಲ್ಲಿ ಸದ್ದಿಲ್ಲದೆ ಶಾಂತವಾಗಿ ಮಲಗಿದ್ದ ಪುಟ್ಟ ಊರು. ಎಷ್ಟು ಪ್ರಶಾಂತವಾಗಿ ಬಯಲಾಗಿಬಿಟ್ಟಿತ್ತು. ಬೇಂದ್ರೆಯವರಂದಂತೆ ಜಂಬ-ಗಿಂಬ ಸೋರಿ ಕಂಬದಂತೆ ನಿಂತಾಗಿತ್ತು. ಎದುರಿಗೆ ಕಾಣುತ್ತಿದ್ದ ಬೆಳ್ಳಿ ಬೆಟ್ಟಗಳಿಗೆ ಸರಳುಗಳಿಲ್ಲದ ಕಿಟಕಿಯ ಚೌಕಟ್ಟಿನಿಂದ ಅದೊಂದು ಸಂಪೂರ್ಣ ಚಿತ್ರಕಾರನ ಕುಂಚದಿಂದ ಮೂಡಿದ ಅದ್ಭುತ ಚಿತ್ರದಂತೆ ಕಾಣುತ್ತಿತ್ತು." (ತ್ರಿವೇಣಿ ಶಿವಕುಮಾರ್,೨೦೦೨, ಪು-೩೨) ಎಂದು ನಿರೂಪಿಸುತ್ತಾರೆ. ಸಹಪ್ರಯಾಣಿಕರ ವರ್ತನೆಗಳನ್ನು ಸೂಕ್ಷ್ಮವಾಗಿ ಗಮನಿಸಿ ದಾಖಲಿಸುವ ಲೇಖಕಿ ಪ್ರವಾಸದ ಧ್ಯೇಯವನ್ನು ಮರೆತು ಚುಕ್ಕಿ ಆಟದಲ್ಲಿ ಮಗ್ನರಾಗಿರುವ ಯುವ ದಂಪತಿಗಳನ್ನು ಕುರಿತು "ಹದಿನಾರು ದಿನಗಳನ್ನು ವ್ಯರ್ಥ ಮಾಡಿಕೊಂಡು ಲಕ್ಷಗಟ್ಟಲೇ ಹಣ ಖರ್ಚು ಮಾಡಿಕೊಂಡು ಇವರು ಚುಕ್ಕಿ ಆಟ ಆಡಲು ಪ್ರವಾಸ ಕೈಗೊಂಡಿದ್ದಾರೆ?" (ಅದೇ, ಪು-೩೨) ಎಂದು ಚಿಂತಿಸುವರು. ಈ ಮೂಲಕ ಲೇಖಕಿಗಿದ್ದ ಪ್ರವಾಸದ ಉದ್ದೇಶವನ್ನು ಅರಿಯಬಹುದಾಗಿದೆ.

ನಂತರದಲ್ಲಿ ಮಹಾದೇವಿಯಮ್ಮ ದೊಡ್ಮನೆ, ಲಲಿತಾ ಸುಬ್ಬರಾವ್, ಚಂದ್ರಭಾಗಾದೇವಿ, ಪದ್ಮಾ ಉಮಾಪತಿ, ಸರೋಜ ಗೋಪಾಲ್, ನೀಳಾದೇವಿ, ನರ್ಮದಾ.ಬಿ.ಕೆ., ರುಕ್ಮಿಣಿ ಗಿರಿಮಾಜಿ, ಲತಾಗುತ್ತಿ, ಪದ್ಮಾಶಣೈ, ಹೇಮಲತಾ ಮಹಿಷಿ, ಕುಲಶೇಖರಿ, ವಾಗೀಶ್ವರಿ ಶಾಸ್ತ್ರಿ, ಗಂಗಾ ಬಿ ರಾಜಪುರೋಹಿತ, ಲೀಲಾವತಿ ದೇವದಾಸ್, ನೇಮಿಚಂದ್ರ, ವಿಜಯಾ ಸುಬ್ಬರಾಜ್, ತ್ರಿವೇಣಿ ಶಿವಕುಮಾರ್, ಲೀಲಾಭಟ್, ಇಂದಿರಾ ಶಿವಣ್ಣ, ಉಮಾರಾವ್, ಪ್ರಭಾಮೂರ್ತಿ, ಸಾರಾ ಅಬೂಬಕರ್, ಮೀನಾ ಮೈಸೂರು, ನೇಮಿಚಂದ್ರ ಇನ್ನೂ ಮುಂತಾದ ಲೇಖಕಿಯರು ಪ್ರವಾಸ ಕೃತಿಗಳನ್ನು ರಚಿಸಿದ್ದಾರೆ. ಈ ಪ್ರವಾಸ ಕಥನಗಳು ಸ್ವರೂಪ, ನಿರೂಪಣೆ, ದೃಷ್ಟಿಕೋನಗಳಿಂದಾಗಿ ವಿಶಿಷ್ಟವಾಗಿ ಮೂಡಿಬಂದಿವೆ.

ಮಹಿಳಾ ಪ್ರವಾಸ ಕಥನದ ಆರಂಭದ ಬೆಳವಣಿಗೆಗಳನ್ನು ಗಮನಿಸಿದಾಗ, ಕೆಲವು ಅಂಶಗಳನ್ನು ಪ್ರಧಾನವಾಗಿ ಗುರುತಿಸಬಹುದಾಗಿದೆ.

- ರಾಣಿ ಚನ್ನಾಜಮ್ಮಣ್ಣಿ ಅವರದು ಮೊದಲ ಮಹಿಳಾ ಪ್ರವಾಸಕಥನವಾಗಿದ್ದು, ಮೂಲತಃ ರಾಜಮನೆತನಕ್ಕೆ ಸೇರಿದ ಮಹಿಳೆಯಾದ ಅವರಿಗೆ ಪ್ರವಾಸ ಕೈಗೊಳ್ಳುವ ಅವಕಾಶಗಳಿದ್ದವು. ಆದರೆ ಸಾಮಾನ್ಯ ಮಹಿಳೆಯರಿಗೆ ಇಂತಹ ಅವಕಾಶಗಳು ಇಲ್ಲದಿರುವ ವ್ಯಾತ್ಯಾಸಗಳನ್ನು ಕಾಣುತ್ತೇವೆ. ಪ್ರವಾಸ ಸಂದರ್ಭಕ್ಕೆ ಬೇಕಾದ ಸ್ವಾತಂತ್ರ್ಯವು ಆರಂಭಿಕ ಮಹಿಳೆಯರಿಗೆ ಇಲ್ಲದಿದ್ದನ್ನು ಗುರುತಿಸಬಹುದಾಗಿದೆ. ಎರಡು ದಶಕಗಳ ನಂತರ ಮಹಿಳಾ ಪ್ರವಾಸಿಗರು ಪ್ರವಾಸ ಮಾಡಿ ಕೃತಿಗಳನ್ನು ಬರೆದು ಪ್ರಕಟಿಸಲು ಸಾಧ್ಯವಾಗಿದೆ.

- ಆರಂಭದ ಪ್ರವಾಸ ಕಥನಗಳನ್ನು ಗಮನಿಸಿದಾಗ, ಲೇಖಕಿಯರು ಕುಟುಂಬದವರ ಜೊತೆಗಿನ ಪ್ರವಾಸ ಮಾಡಿದ ಸಂದರ್ಭಗಳನ್ನು ಬರೆದುಕೊಂಡಿರುವುದು ಎದ್ದುಕಾಣುತ್ತವೆ. ಕೌಟುಂಬಿಕ ನಿಯಮಗಳನ್ನು, ಒತ್ತಡಗಳನ್ನು ನಿಭಾಯಿಸಿಕೊಂಡು ಉತ್ತಮ ಕೃತಿಗಳನ್ನು ಬರೆದರಾದರೂ ಈ ಒತ್ತಾಡಗಳಿಂದಾಗಿ ಸ್ವಾತಂತ್ರ್ಯವಾಗಿ ಪ್ರವಾಸದ ಅನುಭವವನ್ನು ದಾಖಲಿಸುವಲ್ಲಿ ವಿಫಲವಾಗಿದೆ ಎಂದು ಭಾಸವಾಗುತ್ತದೆ.
- ಮಹಿಳಾ ಪ್ರವಾಸಿಗರು ಕುಟುಂಬದ ಜೊತೆಗೆ ಪ್ರವಾಸ ಕೈಗೊಂಡಿದ್ದು ಅಲ್ಲದೇ, ತಾವು ಭೇಟಿ ನೀಡುವ ಸ್ಥಳಗಳೆಲ್ಲವೂ ಧಾರ್ಮಿಕವಾಗಿ ಪ್ರಸಿದ್ಧವಾದ ಸ್ಥಳಗಳಾಗಿವೆ. ಧಾರ್ಮಿಕ ಕಥನಗಳಂತೆ ರಚಿಸಿದ ಪ್ರವಾಸ ಕಥನಗಳು ಸಾಕಷ್ಟು ದೊರಕುತ್ತವೆ. ಆರಂಭದ ಲೇಖಕಿಯರ ಮನೋಭಾವವು ದೈವಿಕ ನಂಬಿಕೆಗಳಿಂದ ಕೂಡಿರುವುದರಿಂದ ಪ್ರವಾಸ ಕಥನಗಳಲ್ಲಿ ಧಾರ್ಮಿಕ ಶ್ರದ್ಧೆ, ಭಕ್ತಿ, ಆಧ್ಯಾತ್ಮ, ಆಚರಣೆ, ಜಾನಪದ ಸಂಕಥನಗಳ ಕುರಿತಾದ ವಿಷಯಗಳನ್ನೇ ದಾಖಲಿಸಿದ್ದಾರೆ.
- ರಾಣಿ ಚನ್ನಾಜಮ್ಮಣ್ಣಿಯವರ ವಿದೇಶಿ ಪ್ರವಾಸ ಹೊರತು ಪಡಿಸಿ ಬಹುತೇಕ ಆರಂಭಿಕ ಪ್ರವಾಸ ಕಥನಗಳು ಭಾರತದ ಐತಿಹಾಸಿಕ, ಧಾರ್ಮಿಕ, ನೈಸರ್ಗಿಕ ಸ್ಥಳಗಳಾದ ವಾರಾಣಾಸಿ, ಹರಿದ್ವಾರ, ಆಯೋಧ್ಯೆ, ಕೇರಳ, ಗೋವಾ, ಕಲ್ಕತ್ತಾ, ದೆಹಲಿ, ಜಮ್ಮು ಕಾಶ್ಮೀರ, ಅಂಡಮಾನ್ ಮುಂತಾದ ಸ್ವದೇಶಿ ಸ್ಥಳಗಳಿಗೆ ಭೇಟಿಕೊಟ್ಟ ಅನುಭವಗಳನ್ನು ದಾಖಲಿಸುತ್ತವೆ ಮತ್ತು ಅಂತಹ ಪ್ರದೇಶಗಳನ್ನೇ ಗುರಿಯಾಗಿಟ್ಟುಕೊಂಡು ನಿರ್ದಿಷ್ಟವಾಗಿ ಪ್ರವಾಸ ಮಾಡಿರುವುದು ಕಂಡುಬರುತ್ತದೆ. ಅಲ್ಲದೇ ದೇಶದಾಚೆಗೆ ಹೊರಡುವ ಸಾಹಸಗಳು ಮಾಡಿರುವುದು ವಿರಳವಾಗಿದೆ.
- ೨೦ನೇ ಶತಮಾನದಲ್ಲಿ ಸ್ತ್ರೀವಾದವು ಹೆಚ್ಚು ಪ್ರಚಲಿತವಾದಾಗ, ಮಹಿಳೆಯರು ಸಂಪ್ರದಾಯ, ಆಚರಣೆ, ರೂಢಿ ಪದ್ಧತಿಗಳನ್ನು ಮೀರಿ ಹೊರ ದೇಶಗಳಿಗೆ ಒಂಟಿಯಾಗಿ ಅಥವಾ ಸ್ನೇಹಿತೆಯೊಂದಿಗೆ ಪ್ರವಾಸ ಕೈಗೊಂಡಿರುವುದನ್ನು ಅನೇಕ ಪ್ರವಾಸಕಥನಗಳಲ್ಲಿ ಗುರುತಿಸಬಹುದು. ದೇಶ ಆಧುನಿಕವಾದಂತೆ ಮಹಿಳೆಯರು ಜಾಗೃತರಾಗಿ, ನಿರ್ಭೀತಿಯಿಂದ ಪ್ರವಾಸ ಮಾಡಿ ತಮ್ಮ ಅನುಭವ ಕಥನಗಳನ್ನು ಬರೆದಿರುವುದನ್ನು ಕಾಣುತ್ತೇವೆ.

ಮಹಿಳಾ ಸಾಹಿತ್ಯ ಕಥನಗಳು ಎಂದಾಗ ಸಹಜವಾಗಿ ಹುಡುಕುವುದು ಸ್ತ್ರೀ ಪ್ರತಿನಿಧೀಕರಣವನ್ನು. ಅದರಲ್ಲೂ ಪ್ರವಾಸ ಸಾಹಿತ್ಯವೆಂದಾಗ ಒಂದು ದೇಶದ ಮಹಿಳೆ ಮತ್ತೊಂದು ದೇಶದ ಮಹಿಳೆಯು ಹೊಂದಿರಬಹುದಾದ ಧೋರಣೆ ಯಾವ ಬಗೆಯದು ಎನ್ನುವ ಕುತೂಹಲ ಹುಟ್ಟುವುದು ಸಹಜವಾಗಿರುತ್ತದೆ. ಪ್ರವಾಸ ಕಥನಗಳಲ್ಲಿ ಇಂತಹ ಅಂಶವನ್ನು ಮಹಿಳಾ ಪ್ರವಾಸಿಗರು ಮಾತ್ರವಲ್ಲದೆ ಪುರುಷ ಪ್ರವಾಸಿಗರು ಕೂಡ ತಮ್ಮ ಅನುಭವಗಳನ್ನು ಹಂಚಿಕೊಂಡಿರುವುದನ್ನು ಕಾಣುತ್ತೇವೆ. ಸದೃಢರಲ್ಲದ ಮಹಿಳೆಯರು ತಮ್ಮ

ಪ್ರವಾಸ ಕಥನಗಳಲ್ಲಿ ಮೇಲು ನೋಟಕ್ಕೆ ಕಂಡುಬರುವ ಸಂದರ್ಭಗಳನಷ್ಟೇ ದಾಖಲಿಸಬಲ್ಲರು. ಎಂಬುದು ವಿಮರ್ಶಕರ ಅಭಿಪ್ರಾಯವಾಗಿತ್ತು. ಆದರೆ ತಮಗೆ ಒದಗಬಹುದಾದ ಎಲ್ಲಾ ಅಪತ್ತುಗಳನ್ನು ಮೀರಿ ಪ್ರವಾಸ ಮಾಡಿದ ಶಮಂತ, ನೇಮಿಚಂದ್ರ, ಮಮತಾರಾವ್ ಅಂತಹ ಲೇಖಕಿಯರು ಪುರುಷ ಪ್ರವಾಸಗಳಿಗಿಂತಲೂ ಒಂದು ಕೈ ಮೇಲಾಗಿ ಪ್ರವಾಸ ಕೈಗೊಂಡ ಉದಾಹರಣೆಗಳಿವೆ. ಒಂದು ಕಾಲಕ್ಕೆ ಮಹಿಳೆಯರ ಪ್ರವಾಸವು ಧಾರ್ಮಿಕತೆಗೆ ಸೀಮಿತವಾಗಿದ್ದು, ಒಂದು ದೇಶದ ಮುಖ್ಯ ಪಟ್ಟಣಗಳಿಗೆ ಭೇಟಿಕೊಟ್ಟು ಬರುವುದಿತ್ತು. ಆದರೆ ಇಂದಿನ ಮಹಿಳಾ ಪ್ರವಾಸಿಗರು ಪ್ರವಾಸಕ್ಕಾಗಿಯೇ ಹಿಮಾಲಯದ ತುತ್ತತುದಿಗೆ ಏರುವ ಸ್ವಸಾಮರ್ಥ್ಯವನ್ನು ಗಳಿಸಿದ್ದಾರೆ.

ಕನ್ನಡದಲ್ಲಿ ಮಹಿಳಾ ಪ್ರವಾಸಿಗರ ಸಂಖ್ಯೆ ೧೯೮೦ರ ನಂತರದಲ್ಲಿ ಗಣನೀಯವಾಗಿ ಹೆಚ್ಚಾಗಿದೆ. ಅಂತಹವರಲ್ಲಿ ನೇಮಿಚಂದ್ರ ಅವರ 'ಒಂದು ಕನಸಿನ ಪಯಣ' ಮತ್ತು 'ಪೆರುವಿನ ಪವಿತ್ರ ಕಣಿವೆಯಲ್ಲಿ', ಲತಾಗುತ್ತಿ ಅವರ 'ಯುರೋ ನಾಡಿನಲ್ಲಿ' ಮತ್ತು 'ನಾ ಕಂಡ ಅರೇಬಿಯಾ', ವಿಜಯಾ ದಬ್ಬೆ ಅವರ 'ಉರಿಯ ಚಿಗುರ ಉತ್ಕಲೆ', ಜಿ.ಎಸ್.ಸುಮಿತ್ರಾಬಾಯಿ ಅವರ 'ಬ್ರಹ್ಮಪುತ್ರದ ಕಣಿವೆಯಲ್ಲಿ', ಸುಧಾಮೂರ್ತಿಯವರ 'ಅಂಟ್ಲಾಟಿಕದಾಚೆಗೆ', 'ಕಾವೇರಿಯಿಂದ ಮೆಕಾಂಗಿಗೆ' ಮತ್ತು 'ಹಕ್ಕಿಯ ತೆರೆಯಲಿ', ತ್ರಿವೇಣಿ ಶಿವಕುಮಾರ್ ಅವರ 'ದಿವ್ಯ ಮೌನದ ದೇಶದಲ್ಲಿ', ಸಾರಾ ಅಬೂಬಕರ್ ಅವರ 'ಐಷಾರಾಮದ ಆಳದಲ್ಲಿ', ನರ್ಮದಾ.ಬಿ.ಕೆ. ಅವರ 'ಸುಂದರ ಸ್ವಪ್ನ', ಅನುಸುಯಾ ರಾವ್ ಅವರ 'ಸುಂದರ ಕರ್ನಾಟಕ', ಶಮಂತ ಅವರ 'ಹಿಮದಗ್ನಿ' ಮತ್ತು 'ಕದನ ಕಾಶ್ಮೀರ', ಪಾರ್ವತಮ್ಮ ಮಹಾಲಿಂಗಶೆಟ್ಟಿ ಅವರ 'ಅಮೇರಿಕಾದ ಇತಿಹಾಸ ಮತ್ತು ಇಂದಿನ ಜನಜೀವನ', ವಾಣಿರಾವ್ ಅವರ 'ಹಿಮಾಲಯದ ಮಡಿಲಲ್ಲಿ', ಮಮತರಾವ್ ಅವರ 'ಕೈಲಾಸಾಧಿಪತಿಯ ಮನೆಯಂಗಳದಲ್ಲಿ', ವಾಗೀಶ್ವರಿ ಶಾಸ್ತ್ರೀ ಅವರ 'ಸಿರಿಸಿಂಗಾರದ ಸಿಂಗಾಪುರ', ವಿಜಯಾ ಸುಬ್ಬರಾಜು ಅವರ 'ಸ್ವರ್ಗದ್ವೀಪದ ಕನಸಿನ ಬೆನ್ನೇರಿ', ಲಲಿತಾಶಾಸ್ತ್ರಿ ಅವರ 'ಉತ್ತರ ಅಮೇರಿಕಾದಲ್ಲಿ ಚಾತುರ್ಮಾಸ್ಯ', 'ಪರಮೇಶ್ವರಿ ಲೋಕೇಶ್ವರ್ ಅವರ 'ಅಮೇರಿಕಾದಲ್ಲಿ ಅರವತ್ತು ದಿನಗಳು', ಪದ್ಮಾ ಗುರುರಾಜ್ ಅವರ 'ಕಾಂಗೂರಗಳ ನಾಡಿನಲ್ಲಿ', ಪದ್ಮಾಶಣೈ ಅವರ 'ಅವನಿಯ ಅಪ್ಸರೆ ಅಮೇರಿಕಾ', ಜಾನಕಿ ಬ್ರಹ್ಮಾವರ ಅವರ 'ತಿರುಗಾಟದ ತಿರುಳು', ದೇ.ನಾ.ಶ್ರೀ. ಅವರ 'ಕಲಾತೀತರ ದ್ವೀಪದಲ್ಲಿ', ಹೋ.ನಾಗರತ್ನ ಅವರ 'ನಿಸರ್ಗಸ್ವರ್ಗ ಅಂಡಮಾನ್', ಕೆ.ಉಷಾ.ಪಿ.ರೈ. ಅವರ 'ಲಕ್ಷದ್ವೀಪಕ್ಕೆ ಲಗ್ಗೆ ಇಟ್ಟಾಗ', ಇಂದಿರಾ ಶಿವಣ್ಣ ಅವರ 'ನಿಗೂಢಗಳ ನಿಚ್ಚಣಿಕೆ ಏರಿ', 'ತನ್ಮಯತೆ ಉನ್ಮತ್ತತೆ' ಮತ್ತು 'ಹಾಲೆಂಡಿನಿಂದ ಲಂಡನ್‌ವರೆಗೆ', ಸುನೀತಾ ಶೆಟ್ಟಿಯವರ 'ಪ್ರವಾಸಿ ಹೆಜ್ಜೆಗಳು', ಮೀನಾ ಮೈಸೂರು ಅವರ 'ಎತ್ತಣಿಂದೆತ್ತ', ಶಶಿಕಲಾ ನಾಯಕ ಅವರ 'ವಿಶ್ವ ದರ್ಶನ', ಲೀಲಾ ಮಿರ್ಲೇ ಅವರ 'ಪ್ರವಾಸ', ಆಶಾದೇವಿ ನೂಲಾ ಅವರ 'ನನ್ನ ಪ್ರವಾಸ ಕಥನ', ಸುಭಾಷಿಣಿ ಅವರ 'ಜರ್ಮನಿಯ ಒಡಲಲ್ಲಿ', ಸುಶೀಲಾ ಕೊಪ್ಪರ್ ಅವರ 'ಪಡುವಣದ ಪತ್ರಮಾಲೆ', ದೇವಕಿ

ಮೂರ್ತಿ ಅವರ 'ಅಮೇರಿಕಾ ಇಣುಕು ನೋಟ', ನೀಳಾದೇವಿ ಅವರ 'ನಾ ಕಂಡ ಆಖಂಡ', ರಾಜಲಕ್ಷ್ಮಿ ಗೋಪಾಲ್ ಅವರ 'ಅಮರಲೋಕದಲ್ಲಿ ಅಧ್ಯಾಪಕಿ', ಬಿ.ಎಸ್.ಶೈಲಜಾ ಅವರ 'ಸಫಾರಿ ಎಂಬ ಲಕ್ಷುರಿ', ಪ್ರಭಾಮೂರ್ತಿ ಅವರ 'ಹಸಿರು ಹವಳ', ಕುಲಶೇಖರಿ ಅವರ 'ಬೊಗಸೆ ಬುತ್ತಿ', ಉಮಾರಾವ್ ಅವರ 'ರಾಕೀ ಪರ್ವತಗಳ ನಡುವೆ ಕ್ಯಾಬರೆ', ಪ್ರಭಾಮೂರ್ತಿ ಅವರ 'ಕಾಲಗರ್ಭ' ಮುಂತಾದವುಗಳು ಕನ್ನಡದ ಪ್ರಮುಖ ಪ್ರವಾಸ ಕಥನಗಳಾಗಿ ಗಮನಸೆಳೆಯುತ್ತವೆ.

ಬದಲಾವಣೆ ಜಗದ ನಿಯಮ ಎನ್ನುವಂತೆ, ಕೇವಲ ಪುರುಷ ಸುತ್ತಾಟಕ್ಕೆ ಸೀಮಿತವಾಗಿದ್ದ ಮತ್ತು ಕುಟುಂಬ ಸದಸ್ಯರ ಜೊತೆಗೆ ಪ್ರವಾಸ ಕೈಗೊಳ್ಳಬೇಕಾದ ಅನಿವಾರ್ಯತೆ ಇಂದು ಮಹಿಳೆಯರಿಗಿಲ್ಲ. ದೇಶ, ವಿದೇಶವನ್ನು ಮಹಿಳೆಯರೇ ಸ್ವತಂತ್ರವಾಗಿ ಸುತ್ತಬಲ್ಲಷ್ಟು ಪ್ರಬುದ್ಧತೆಯನ್ನು ಮೇರೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಿಳಾ ಪ್ರವಾಸಿಗರ ಸುತ್ತಾಟಗಳು ಮಹತ್ವದ ಬೆಳವಣಿಗೆಯನ್ನು ಪಡೆದುಕೊಂಡಿವೆ. ಕೃತಿ ರಚನಾ ವಿಧಾನದಲ್ಲೂ ಪ್ರಾಯೋಗಿಕ ಬರಹಗಳಂತೆ ವಿಭಿನ್ನ ಹಾದಿಯಲ್ಲಿ ತೊಡಗಿಸಿಕೊಂಡಿದ್ದಾರೆ. ತೀರ ಇಚೀನವರೆಗೂ ಕೌಟುಂಬಿಕ ಭೇಟಿಗಾಗಿಯೋ, ಹವ್ಯಾಸಕ್ಕಾಗಿಯೋ, ವೃತ್ತಿಪರವಾಗಿಯೋ, ವಿದೇಶದಲ್ಲಿರೋ ತಮ್ಮ ಮಕ್ಕಳ ಭೇಟಿಗಾಗಿಯೋ ಪ್ರವಾಸ ಮಾಡುತ್ತಿದ್ದರು. ಈ ಪ್ರವಾಸಗಳು ಅಂತರರಾಷ್ಟ್ರಗಳ ಕುರಿತು ತನ್ನ ಅನುಭವವನ್ನು ಹಂಚಿಕೊಳ್ಳುವುದು ಹೊಸತನದ ಆಲೋಚನೆಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಕೇವಲ ಧಾರ್ಮಿಕತೆಯ ದೃಷ್ಟಿಕೋನಗಳಿಂದಲೇ ಪ್ರವಾಸ ಕೈಗೊಳ್ಳುವ ಮನೋಭಾವದಿಂದ ಹೊರಬಂದು ವಿದೇಶಗಳಿಗೆ ಹೋಗಿ ಅಲ್ಲಿನ ನಿಸರ್ಗ, ಚರಿತ್ರೆ, ಸಮಾಜ, ಆಡಳಿತ, ಸಂಸ್ಕೃತಿಗಳನ್ನು ಶೋಧಿಸಿ ವಿಶ್ಲೇಷಿಸಿ ಬರೆಯುತ್ತಿರುವುದನ್ನು ಇತ್ತೀಚಿನ ದಿನಗಳಲ್ಲಿ ಕಾಣಬಹುದಾಗಿದೆ. ಅಲ್ಲದೆ ಮಹಿಳೆಯರಲ್ಲೂ ಹವ್ಯಾಸಿ ಪ್ರವಾಸಕಾರ್ತಿಯರಾಗಿ ಒಂದಕ್ಕಿಂತಲೂ ಹೆಚ್ಚು ದೇಶಗಳಿಗೆ ಭೇಟಿ ನೀಡಿ ಪ್ರವಾಸ ಕಥನಗಳನ್ನು ರಚಿಸಿದವರಿದ್ದಾರೆ. ಕನ್ನಡದ ಮಹಿಳಾ ಪ್ರವಾಸಿಗರು ಏಷ್ಯಾ, ಯುರೋಪ, ಅಮೇರಿಕಾ, ಆಸ್ಟ್ರೇಲಿಯಾ, ಆಫ್ರಿಕಾ ಮೊದಲಾದ ವಿಶ್ವದ ಬಹುತೇಕ ಎಲ್ಲಾ ದೇಶಗಳಿಗೆ ಪ್ರವಾಸ ಕೈಗೊಂಡು ತಮ್ಮ ಅನುಭವಗಳನ್ನು ಕೃತಿ ರೂಪದಲ್ಲಿ ದಾಖಲಿಸಿರುವುದು ಗಮನಸೆಳೆಯುತ್ತದೆ. ಹೀಗೆ ಸುತ್ತಾಡಿ ಬಂದಂತಹ ಲೇಖಕಿಯರ ಕೃತಿಗಳಲ್ಲಿ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ಆಯಾ ದೇಶಗಳ ರಾಜಕೀಯ, ಸಾಮಾಜಿಕ, ಐತಿಹಾಸಿಕ, ಕಲೆ, ಸಂಸ್ಕೃತಿಗಳ ಪರಿಚಯ, ವಿವರಣೆಗಳಿದ್ದು ಅವುಗಳೆಲ್ಲದರ ಸಮಗ್ರ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ದೇಶ ವಿದೇಶಗಳಲ್ಲಿನ ವಿಜ್ಞಾನ ತಂತ್ರಜ್ಞಾನದ ಪ್ರಗತಿ, ಪ್ರಕೃತಿ ವೈಶಿಷ್ಟ್ಯ, ಅಭಿವೃದ್ಧಿಗಳ ವಿಚಾರಗಳು ಲೇಖಕಿಯರಲ್ಲಿ ಅಚ್ಚರಿಯನ್ನು ಮೂಡಿಸಿವೆ. ಈ ಅಚ್ಚರಿಯ ಸಂಗತಿಗಳೇ ಪ್ರವಾಸಕ್ಕಾಗಿ ಕೈ ಬೀಸಿ ಕರೆಯುವ ದೇಶ ವಿದೇಶದ ಪ್ರಕೃತಿ, ಸಾಂಸ್ಕೃತಿಕ ವೈಶಿಷ್ಟ್ಯಗಳು ಪ್ರವಾಸ ಕಥನಗಳನ್ನು ಹೆಚ್ಚುವಂತೆ ಮಾಡಿವೆ.

೧೯೩೦ರಲ್ಲಿ ಪ್ರಕಟವಾದ ರಾಣಿ ಚನ್ನಾಜಮ್ಮಣ್ಣಿ ಅವರ 'ನನ್ನ ಪ್ರಪಂಚ ಸಂಚಾರ' ಕೃತಿಯಿಂದ ಹಿಡಿದು ೨೦೧೮ರಲ್ಲಿ ಪ್ರಕಟವಾದ ಇಂದಿರಾ ಹೆಗ್ಗಡೆ ಅವರ 'ಇಂದ್ರಪ್ರಸ್ಥದಿಂದ ಐತಿಹಾಸಿಕ ನಡೆ', ತೇಜಸ್ವಿನಿ ಬಿ.ಯಕ್ಕುಂಡಿಮಠ ಅವರ 'ತಿರೆಯ ಮೇಲಣ ಸ್ವರ್ಗ' ಕೃತಿಗಳವರೆಗಿನ ವಿಭಿನ್ನ ಮಾದರಿಯ ದೃಷ್ಟಿಕೋನವಿರುವ ಸುಮಾರು ನೂರ ಐವತ್ತಕ್ಕಿಂತಲೂ ಹೆಚ್ಚು ಮಹಿಳಾ ಪ್ರವಾಸ ಕಥನಗಳು ಪ್ರಕಟವಾಗಿವೆ, ಈಗಲೂ ಪ್ರಕಟವಾಗುತ್ತಿವೆ. ಅಂತವುಗಳಲ್ಲಿ ಪ್ರಾತಿನಿಧಿಕವಾದ ಪ್ರವಾಸ ಕಥನಗಳನ್ನು ಆಯ್ದು ಮುಂದಿನ ಅಧ್ಯಯನಗಳಲ್ಲಿ ಪ್ರಧಾನ ಆಕರಗಳಾಗಿ ಬಳಸಿಕೊಳ್ಳಲಾಗಿದೆ.

❑❑❑

ಅಧ್ಯಾಯ ನಾಲ್ಕು

ಮಹಿಳಾ ಪ್ರವಾಸ ಕಥನಗಳ ಸ್ವರೂಪ ಮತ್ತು ವೈವಿಧ್ಯ

೪.೧. ಹವ್ಯಾಸಿ ಪ್ರವಾಸ ಕಥನಗಳು

೪.೨. ವೃತ್ತಿಪರ ಪ್ರವಾಸ ಕಥನಗಳು

೪.೩. ದೇಶೀಯ ಪ್ರವಾಸ ಕಥನಗಳು

೪.೪. ವಿದೇಶಿ ಪ್ರವಾಸ ಕಥನಗಳು

ಅಧ್ಯಾಯ ನಾಲ್ಕು

ಮಹಿಳಾ ಪ್ರವಾಸ ಕಥನಗಳ ಸ್ವರೂಪ ಮತ್ತು ವೈವಿಧ್ಯ

ಮನುಷ್ಯರು ಪ್ರಪಂಚದ ವಿಸ್ತಾರ, ವೈವಿಧ್ಯಗಳು ಅರಿವಾದಂತೆ ಬೌದ್ಧಿಕವಾಗಿ, ಭೌತಿಕವಾಗಿ ಬೆಳೆಯತೊಡಗಿರು. ಕುತೂಹಲ ಹೆಚ್ಚಾದಂತೆ ಭೂಭಾಗಗಳನ್ನೆಲ್ಲಾ ಕಂಡು ಹಿಡಿದರು. ಅಧಿಕಾರ, ಆಡಳಿತದ ವಿಸ್ತರಣೆಯ ಹಂತಗಳು ದಾಟಿ ಆಧುನಿಕತೆಗೆ ತಮ್ಮನ್ನು ತಾವು ತೆರೆದುಕೊಳ್ಳತೊಡಗಿದರು. ತಾವು ಬೆಳೆದ ಯಾವುದೇ ಕ್ಷೇತ್ರಗಳಿಂದ ಭಿನ್ನವಾದ, ವಿಶಿಷ್ಟವಾದ ದಾರಿಯನ್ನು ಹುಡುಕಿದರು. ಈ ವಿಶಿಷ್ಟತೆಯ ಹುಡುಕಾಟಗಳು ಸಾಹಿತ್ಯ ಕ್ಷೇತ್ರಕ್ಕೂ ಪ್ರಭಾವ ಬೀರಿದವು. ಪ್ರವಾಸ ಸಾಹಿತ್ಯವು ಇದಕ್ಕೆ ಹೊರತಾಗಲಿಲ್ಲ. ಮೊದಮೊದಲಿಗೆ ತೀರ್ಥಯಾತ್ರೆಗಳ ಸ್ವರೂಪದಲ್ಲಿದ್ದ ಕೃತಿಗಳು ಸಮಗ್ರ ವಿವರಗಳನ್ನು ಒಳಗೊಂಡ ಪ್ರವಾಸ ಕಥನಗಳು ರಚನೆಗೊಂಡವು. ಮಹಿಳಾ ಪ್ರವಾಸಿಗರು ಇದಕ್ಕೆ ಕೈಜೋಡಿಸಿದರು. ತಮ್ಮ ಅನುಭವಗಳನ್ನು ದಾಖಲಿಸುತ್ತಿದ್ದ ಸಂಗತಿಗಳು, ನಿರೂಪಣೆ, ತತ್ವ, ಸಿದ್ಧಾಂತ, ಭಾಷಿಕ ಸ್ವರೂಪಗಳಲ್ಲಿಯೂ ತಮ್ಮದೆ ಅನನ್ಯತೆಗಳನ್ನು ಸಾರಿದರು. ವಿಶ್ವದ ಮಾರುಕಟ್ಟೆಗಳು ಬೆಳೆದಂತೆ, ಸೌಲಭ್ಯಗಳು ಹೆಚ್ಚಾದಂತೆ ಸ್ವತಃ ಸರ್ಕಾರವು ಅಭಿವೃದ್ಧಿ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿತು. ಇದಕ್ಕೆ ಸಂಘ ಸಂಸ್ಥೆಗಳು ಕೈಜೋಡಿಸಿದವು. ತಮ್ಮ ತಿರುಗಾಟದ ಅನುಭವದ ಕೃತಿಗಳು ಹೆಚ್ಚಾದಂತೆ ಹವ್ಯಾಸಿ ಮತ್ತು ವೃತ್ತಿಪರ ಪ್ರವಾಸಕಾರರಾಗಿ ಬೆಳೆಯತೊಡಗಿದರು. ಪುರುಷರಿಗೆ ಮಾತ್ರ ಸೀಮಿತವಾಗಿದ್ದ ಸುತ್ತಾಟಗಳಲ್ಲಿ ಮಹಿಳೆಯರೂ ಯಶಸ್ಸನ್ನು ಸಾಧಿಸಿದರು. ಸ್ವದೇಶಿಯಾಗಲಿ, ವಿದೇಶಿಯಾಗಲಿ, ಭಾಷೆ ಯಾವುದಾದರೂ ಇರಲಿ ತಮ್ಮ ಆತ್ಮಸ್ಥೈರ್ಯ, ಸಾಹಸ, ಧೈರ್ಯ, ಬೌದ್ಧಿಕ ಶಕ್ತಿಗೆ ತಕ್ಕಂತೆ ಮಹಿಳೆಯರು ದೇಶ ವಿದೇಶದ ಮೂಲೆ ಮೂಲೆಗಳನ್ನು ಸುತ್ತುವುದಕ್ಕೆ ಮುಂದಾದರು. ಹೀಗಾಗಿ ಪುರುಷ ಪ್ರವಾಸ ಕಥನಗಳಿಗಿಂತಲೂ ಭಿನ್ನವಾಗಿ ಮಹಿಳಾ ಪ್ರವಾಸ ಬರಹಗಳು ಮೂಡಿಬಂದವು. ತಮ್ಮದೇ ಆದ ದೃಷ್ಟಿಕೋನಗಳನ್ನು ಹೊಂದಿದ ಮಹಿಳಾ ಪ್ರವಾಸ ಕಥನಗಳ ವೈವಿಧ್ಯವನ್ನು ಅರಿಯಲು, ಹವ್ಯಾಸಿ ಪ್ರವಾಸ ಕಥನಗಳು, ವೃತ್ತಿಪರ ಪ್ರವಾಸ ಕಥನಗಳು, ದೇಶೀಯ ಪ್ರವಾಸ ಕಥನಗಳು ಮತ್ತು ವಿದೇಶಿ ಪ್ರವಾಸ ಕಥನಗಳೆಂದು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

೪.೧. ಹವ್ಯಾಸಿ ಪ್ರವಾಸ ಕಥನಗಳು

ಮನುಷ್ಯರ ಕ್ರಿಯಾಶೀಲತೆಯು ಆರೋಗ್ಯದ ಮೇಲೆ ಉತ್ತಮ ಪರಿಣಾಮವನ್ನು ಬೀರುತ್ತದೆ. ವ್ಯಕ್ತಿಯ ಹಿತಾಸಕ್ತಿಗೆ ಅನುಗುಣವಾಗಿ ಕ್ರಿಯಾಶೀಲತೆಯನ್ನು ನಿರ್ಧರಿಸಬಹುದಾಗಿದೆ. ಇವುಗಳು ವ್ಯಕ್ತಿಯಲ್ಲಿನ ಚಟುವಟಿಕೆಗಳಿಗೆ ಕಾರಣವಾಗುತ್ತವೆ. ಕೆಲವು ಸಂದರ್ಭದಲ್ಲಿ ವ್ಯಕ್ತಿಯ ಕ್ರಿಯಾಶೀಲ ಚಟುವಟಿಕೆಗಳು ಹವ್ಯಾಸಗಳಾಗಿ ಮಾರ್ಪಡುತ್ತವೆ. ಇದರಿಂದಾಗಿ ವ್ಯಕ್ತಿಯ ಮಾನಸಿಕ, ದೈಹಿಕ ಆರೋಗ್ಯವನ್ನು ಉತ್ತಮ ಪಡಿಸುತ್ತವೆ. ಕ್ರೀಡೆ, ಸಂಗೀತ, ಸಾಹಿತ್ಯ, ಸಿನಿಮಾ, ನೃತ್ಯ, ಕಲೆ ಮುಂತಾದವುಗಳು ಹವ್ಯಾಸಿ ರೂಪದಲ್ಲಿ ಮನುಷ್ಯರ ಚಹರೆಯನ್ನು ಬದಲಾಯಿಸುತ್ತವೆ. ಪ್ರವಾಸ ಮಾಡುವುದು ಮನುಷ್ಯರ ಹವ್ಯಾಸಗಳಲ್ಲಿ ಒಂದು. ಕವಿ ಕುವೆಂಪು ಅವರ ಅನಿಕೇತನ ಪದ್ಯದಲ್ಲಿನ 'ಎಲ್ಲಿಯೂ ನಿಲ್ಲದಿರು ಮನೆಯನೆಂದೂ ಕಟ್ಟದಿರು' ಎಂಬ ಮಾತು ಹವ್ಯಾಸಿ ಪ್ರವಾಸ ಮಾಡುವವರಿಗೆ ಒಂದು ಉತ್ತಮ ಉದಾಹರಣೆಯಾಗಿದೆ. ಕುವೆಂಪು ಮಾತಿನಲ್ಲಿ ವ್ಯಕ್ತಿಯು ಮನೆಯೊಂದನ್ನು ಕಟ್ಟಿದರೆ ಒಂದು ಕಡೆ ನಿಲ್ಲಬೇಕಾಗುತ್ತದೆ. ಹೀಗೆ ನೆಲೆನಿಂತ ವ್ಯಕ್ತಿಯಲ್ಲಿ ಕ್ರಿಯಾಶೀಲವಲ್ಲದ ಬದುಕನ್ನು ತೋರುತ್ತದೆ. ಹವ್ಯಾಸಿಗರಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳವನ್ನು ಸುತ್ತುವುದು ಎಂದರೆ ಅದು ನೂರಾರು ಅನುಭವಗಳ ಸಂಗಮವೆಂದೆ ಬಿಂಬಿತವಾಗುತ್ತದೆ. ಇಂತಹ ಹವ್ಯಾಸವನ್ನು ಮೈಗೂಡಿಸಿಕೊಂಡ ಮಹಿಳಾ ಬರಹಗಾರರು ಕನ್ನಡದಲ್ಲಿ ಬೆರಳೆಣಿಕೆಯ ಸಂಖ್ಯೆಯಲ್ಲಿದ್ದಾರೆ. ಅಂತಹವರಲ್ಲಿ ಪ್ರಮುಖರಾಗಿ ಸುಧಾಮೂರ್ತಿ, ನೇಮಿಚಂದ್ರ, ಎಚ್.ಎಸ್.ಅನುಪಮಾ, ಇಂದಿರಾ ಶಿವಣ್ಣ, ಮಮತಾರಾವ್, ಶಮಂತ, ಪ್ರೇಮಾಭಟ್, ಲತಾಗುತ್ತಿ ಮುಂತಾದವರು ಮಹಿಳಾ ಪ್ರವಾಸಕಾರರಾಗಿ ಕನ್ನಡ ಸಾಹಿತ್ಯದಲ್ಲಿ ಗುರುತಿಸಿಕೊಂಡಿದ್ದಾರೆ.

'ಹವ್ಯಾಸ' ಎಂಬ ಹೆಸರೇ ಸೂಚಿಸುವಂತೆ, ಯಾವುದೇ ವ್ಯಕ್ತಿ ತಮಗೆ ಇಷ್ಟವಾದ ಕೆಲಸವನ್ನು ಮತ್ತೆ ಮತ್ತೆ ಮಾಡುವುದಾಗಿರುತ್ತದೆ. ಅಂದರೆ ಪ್ರವೃತ್ತಿಯಾಗಿರುವ ಚಟುವಟಿಕೆಗಳಾಗಿರುತ್ತವೆ. ಹವ್ಯಾಸಗಳು ಮನುಷ್ಯನ ಬದುಕಿನ ಅವಿಭಾಜ್ಯ ಭಾಗವಾಗಿರುತ್ತವೆ. ಇಂತವರು ತಮಗೆ ಹೊಂದಿಕೆಯಾಗುವ ಹವ್ಯಾಸಗಳಲ್ಲೇ ನೆಮ್ಮದಿಯನ್ನು ಕಾಣಲು ಬಯಸುತ್ತಾರೆ. ಇದು ಬರಹಗಾರರಿಗೂ ಅನ್ವಯವಾಗುತ್ತದೆ. ಆದರೆ ಕ್ರೀಡೆ, ಸಂಗೀತ, ಸಿನಿಮಾ, ನೃತ್ಯಗಳಂತೆ ಪ್ರವಾಸಕಾರರ ಹವ್ಯಾಸಗಳು ಇರುವುದಿಲ್ಲ. ಪ್ರವಾಸ ಎನ್ನುವುದು ನಿರಂತರ ಹವ್ಯಾಸವಾಗಿರದೆ ವರ್ಷಕ್ಕೆ ಒಂದೆರಡು ಭಾರಿ ಕೈಗೊಳ್ಳುವ ಚಟುವಟಿಕೆಯಾಗಿರುತ್ತದೆ. ಇದಕ್ಕಾಗಿ ಸಮಯಾವಕಾಶ, ಕುಟುಂಬ ಸದಸ್ಯರ ಒಪ್ಪಿಗೆ, ಹಣಕಾಸಿನ ಸ್ಥಿತಿಗತಿಗೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಇಲ್ಲಿ ಪ್ರವಾಸಿಗರ ಪೂರ್ವತಯಾರಿ, ಪೂರ್ವಯೋಜನೆ, ಪರಿಶ್ರಮ, ಪ್ರವಾಸ ಕೈಗೊಳ್ಳುವ ಪ್ರದೇಶದ ಬಗೆಗಿನ ಪೂರ್ವ ಮಾಹಿತಿಯೂ ಮುಖ್ಯವಾಗುತ್ತವೆ. ಕುಟುಂಬ, ಉದ್ಯೋಗ, ಸಾಮಾಜಿಕ ಸಮಸ್ಯೆಗಳ ಒತ್ತಡ ಸ್ತ್ರೀಯರಿಗೆ ಹೆಚ್ಚಿರುವುದರಿಂದ ಹವ್ಯಾಸಿ ಪ್ರವಾಸಕಾರ್ತಿಯರು ಕನ್ನಡದಲ್ಲಿ ವಿರಳವಾಗಿದ್ದಾರೆ. ಹವ್ಯಾಸ ಪ್ರವಾಸಿಗರನ್ನು ಕುರಿತು ಎಸ್.ವಿದ್ಯಾಶಂಕರ್ ಅವರು

“ಪ್ರವಾಸವು ಮಾನಸಿಕ ಹಾಗೂ ಬೌದ್ಧಿಕ ವಿಕಾಸಕ್ಕೆ ಸಾಧನವೆಂದು ಬಗೆದು ತನ್ನ ಬದುಕಿನಲ್ಲಿ ಪ್ರವಾಸವನ್ನು ಒಂದು ಅವಿಭಾಜ್ಯ ಘಟಕವಾಗಿಸಿ ಕಾಲಾವಕಾಶಗಳು ದೊರೆತಾಗ ಏಕಾಂಗಿಯಾಗಿಯೋ ಇಲ್ಲವೆ ಗುಂಪುಗೂಡಿಯೊ ಸಂಚರಿಸುವವರು ಹವ್ಯಾಸಿ ಪ್ರವಾಸಿಗರೆಂದು ಕರೆದಿದ್ದಾರೆ.” (ವಿದ್ಯಾಶಂಕರ್ ಎಸ್., ೨೦೦೬, ಪುಟ-೧೪೩) ಅವರ ಈ ಹೇಳಿಕೆಯು ಹವ್ಯಾಸಿ ಪ್ರವಾಸಿಯು ಪ್ರವಾಸದ ದಿನಗಳಲ್ಲಿ ಪಡೆಯುವಂತಹ ಅನುಭವ ಮಾನಸಿಕವಾಗಿಯೂ, ಬೌದ್ಧಿಕವಾಗಿಯೂ ವಿಕಾಸ ಹೊಂದುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ತಿಳಿಸುತ್ತದೆ. ಸ್ಥಳದಿಂದ ಸ್ಥಳಕ್ಕೆ, ದೇಶದಿಂದ ದೇಶಕ್ಕೆ ಪ್ರವಾಸ ಮಾಡುವಾಗ ನಾನಾ ಸಾಂಸ್ಕೃತಿಕ ವೈವಿಧ್ಯಗಳನ್ನು ಖುದ್ದು ಸಂದರ್ಶಿಸಿದಾಗ ಪ್ರವಾಸಿಗರ ಬೌದ್ಧಿಕ ಮಟ್ಟದ ತಿಳುವಳಿಕೆಯು ಹೆಚ್ಚಾಗುತ್ತದೆ. ಹವ್ಯಾಸಿ ಪ್ರವಾಸಿಗರ ನಿರಂತರ ಸುತ್ತಾಟವು ಜಗತ್ತಿನ ಭೌಗೋಳಿಕ ವ್ಯಾಪ್ತಿಯನ್ನು ಪರಿಮಿತಗೊಳಿಸುತ್ತದೆ. ಈ ತಿರುಗಾಟದ ಒಡನಾಟವು ಜೀವಪರವಾದ ಕಾಳಜಿಯನ್ನು ಬೆಳೆಸಿಕೊಂಡು ವಿಶ್ವಮಾನವ ಪ್ರಜ್ಞೆಯನ್ನು ಉಂಟಾಗುತ್ತದೆ. ವೈವಿಧ್ಯವನ್ನು ಬಿಂಬಿಸುವ ಜಗತ್ತಿನ ಹಲವಾರು ಸಂಸ್ಕೃತಿಗಳ ಸಾರವು ಮನುಷ್ಯರ ಬದುಕನ್ನು ಕಟ್ಟಿಕೊಳ್ಳುವ ಬಗೆಗಳನ್ನು ಕುರಿತು ಸ್ಪಷ್ಟವಾದ ಅರಿವನ್ನು ಉಂಟುಮಾಡುತ್ತದೆ.

ವಿಶ್ವದ ಹಲವು ಪ್ರದೇಶಗಳಲ್ಲಿ ಭಾಷೆ, ನೆಲ, ಆಚರಣೆ, ವೇಷ ಭೂಷಣ, ಬದುಕಿನ ಕ್ರಮ, ಊಟೋಪಚಾರ ಮತ್ತು ಭೌಗೋಳಿಕತೆಗಳು ಮಾತ್ರ ಭಿನ್ನವಾಗಿರುತ್ತವೆ. ಈ ನಡುವೆ ಜಗತ್ತು ಎಷ್ಟೇ ಬೃಹತ್ ಆಗಿದ್ದರು ಸಾಮಾನ್ಯ ಅಂಶವೆಂದರೆ ಮನುಷ್ಯ ಬದುಕುವ ಕ್ರಮವನ್ನು ಎಲ್ಲಾ ದೇಶಗಳ ಧರ್ಮಗಳು ಸಾರುತ್ತವೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಹವ್ಯಾಸಿ ಪ್ರವಾಸಿಗರು ಪ್ರವಾಸ ಮಾಡುತ್ತ ಜಗತ್ತಿನ ವೈವಿಧ್ಯಮಯ ಜ್ಞಾನವನ್ನು ಪಡೆಯುತ್ತಾರೆ. ಆ ಮೂಲಕ ಅವರ ಹೃದಯಾಂತರಾಳದಲ್ಲಿ ಒಬ್ಬ ಸಂತ ಉದ್ಭವವಾಗುತ್ತಾನೆ. ವಿಶ್ವವೇ ಪರಿಚಯವಾದ ಮೇಲೆ, ವಿಶ್ವದ ಆಚರಣೆಗಳು ಎಷ್ಟೇ ಭಿನ್ನವಾದರೂ, ಎಲ್ಲಾ ಜನರರನ್ನು ಸಹೋದರರಂತೆ ಕಾಣುವ ಮಾನವೀಯ ಕಣಜದಂತೆ ತೋರುತ್ತಾರೆ. ಈ ಸಂತ ತನದ ಮಾನವೀಯ ದೃಷ್ಟಿಕೋನಗಳು ಇದ್ದಾಗ ಮಾತ್ರ ಹವ್ಯಾಸಿ ಪ್ರವಾಸ ಕಥನಗಳನ್ನು ಸಮರ್ಥವಾಗಿ ಬರೆಯಲು ಸಾಧ್ಯವಾಗುತ್ತದೆ. ಜನಾಂಗೀಯ, ಸಾಂಸ್ಕೃತಿಕ, ಭಾಷಿಕ, ಆಚರಣಾತ್ಮಕ, ಚಾರಿತ್ರಿಕ, ಭೌಗೋಳಿಕ ದ್ವೇಷದಿಂದಲೂ ಹವ್ಯಾಸಿ ಪ್ರವಾಸಿಗರು ಪ್ರವಾಸ ಕೈಗೊಂಡರೆ ಅವರ ಶ್ರಮದ ಫಲಿತ ಸಾರ್ಥಕವಾಗುವುದಿಲ್ಲ. ಕನ್ನಡದ ಮಹಿಳಾ ಪ್ರವಾಸಕಾರರು ಒಬ್ಬಂಟಿಯಾಗಿ ಅಥವಾ ಸ್ನೇಹಿತೆಯರೊಡನೆ ಪ್ರವಾಸ ಮಾಡಿದ ಅನುಭವ ಹೊಂದಿದ್ದಾರೆ. ಹವ್ಯಾಸಿ ಪ್ರವಾಸಕಾರರ ಬರಹಗಳಲ್ಲಿ ತಾವು ಭೇಟಿ ನೀಡಿದ ದೇಶಗಳ ಅನನ್ಯತೆಯನ್ನು ಸಮಗ್ರವಾಗಿ ಹಿಡಿದಿಡುವ ಕೆಲಸವನ್ನು ಮಾಡಿರುವುದು ಇವರ ಕೃತಿಗಳಿಂದ ತಿಳಿದುಬರುತ್ತದೆ. ಸುಧಾಮೂರ್ತಿಯವರ ‘ಕಾವೇರಿಯಿಂದ ಮೆಕಾಂಗಿಗೆ’, ‘ಅಟ್ಲಾಂಟಿಕದಾಚೆಗೆ’, ‘ಹಕ್ಕಿಯ ತೆರೆಯಲಿ’, ನೇಮಿಚಂದ್ರರ ‘ಪೆರುವಿನ ಪವಿತ್ರ ಕಣಿವೆಯಲ್ಲಿ’. ‘ಒಂದು ಕನಸಿನ ಪಯಣ’, ಎಚ್.ಎಸ್.ಅನುಪಮಾ ಅವರ

'ಅಂಡಮಾನ್ ಕಂಡ ಹಾಗೆ', 'ಚೆಗೆವಾರನ ನೆಲದಲ್ಲಿ, 'ನೈಲ್ ದಾರಿಗುಂಟ', ಇಂದಿರಾ ಶಿವಣ್ಣ ಅವರ 'ತನ್ಮಯತೆ ಉನ್ಮತ್ತತೆ', 'ನಿಗೂಢಗಳ ನಿಚ್ಚಣಿಕೆ ಏರಿ', 'ಬದುಕಿಗೆ ಬಂಗಾರದ ಲೇಪನ', 'ಹಾಲೆಂಡಿನಿಂದ ಲಂಡನ್‌ವರೆಗೆ', ಉಮಾರಾವ್ ಅವರ 'ರಾಕೀ ಪರ್ವತಗಳ ನಡುವೆ ಕ್ಯಾಬರೆ', 'ಇನ್ನು ಎಲ್ಲಿಗೋಟ', ತ್ರಿವೇಣಿ ಶಿವಕುಮಾರ್‌ರವರ 'ಭುವನದ ಬೆರಗು', 'ಬಹುರೂಪೀ ಭಾರತ', ಪ್ರೇಮಾಭಟ್ ಅವರ 'ಪೂರ್ವಾಂಚಲದಲ್ಲಿ ಕೆಲವು ದಿನಗಳು', 'ಪಶ್ಚಿಮದತ್ತ ಪಯಣ', ಲತಾಗುತ್ತಿಯವರ 'ನಾ ಕಂಡಂತೆ ಅರೇಬಿಯಾ', 'ಯುರೋ ನಾಡಿನಲ್ಲಿ', ಶಮಂತ ಅವರ 'ಕದನ ಕಾಶ್ಮೀರ', 'ಹಿಮದಗ್ನಿ', ಹೇಮಲತಾ ಮಹಿಷಿಯವರ 'ಯುರೋ ದರ್ಶನ', 'ಕಾಂಗರೂ ಕಿವಿಯ ನಾಡಿನಲ್ಲಿ' ಮುಂತಾದವು ಪ್ರಸಿದ್ಧ ಮಹಿಳಾ ಹವ್ಯಾಸಿ ಕೃತಿಗಳಾಗಿವೆ.

ಕನ್ನಡದ ಹವ್ಯಾಸ ಪ್ರವಾಸ ಕಥನಗಳನ್ನು ಗಮನಿಸಿದಾಗ ಪ್ರವಾಸಿಗರು ಏಕಾಂಗಿಯಾಗಿಯೋ ಗುಂಪಾಗಿಯೋ ಪ್ರವಾಸ ಕೈಗೊಳ್ಳುತ್ತಾರೆ. ವೃತ್ತಿಪರ ಪ್ರವಾಸಿಗರಂತೆ ಯಾವುದೇ ಸರ್ಕಾರಿ ಸಂಸ್ಥೆಗಳ ಆರ್ಥಿಕ ನೆರವನ್ನು ಬಯಸದೇ ಬಹುತೇಕ ಸ್ವಂತ ಖರ್ಚಿನಲ್ಲಿಯೇ ಪ್ರವಾಸಕ್ಕೆ ಮುಂದಾಗುತ್ತಾರೆ. ಇವರು ನಿರ್ದಿಷ್ಟವಾದ ಸಮಯ, ಸ್ಥಳ, ವಸತಿ, ಊಟೋಪಚಾರ ಯಾವುದನ್ನು ಪರಿಪಾಲಿಸುವುದಿಲ್ಲ. ಸ್ವಇಚ್ಛೆಯ ಮನೋಭಾವದವರಾದ ಈ ಪ್ರವಾಸಿಗರು ಅಲೆಮಾರಿಗರಂತೆ ಪ್ರವಾಸ ಹೊರಡುತ್ತಾರೆ. ಗೊತ್ತು-ಗುರಿಗಳಿದ್ದರು ಪ್ರವಾಸ ಕೈಗೊಂಡ ಉದ್ದೇಶದ ಸಫಲತೆಗೆ ಹೆಚ್ಚು ಜಾಗರೂಕತೆಯನ್ನು ವಹಿಸುವುದು ಈ ಪ್ರವಾಸ ಕಥನಗಳ ಮುಖ್ಯವಾದ ಸ್ವರೂಪವು ಆಗಿರುತ್ತದೆ. ಹವ್ಯಾಸಿ ಪ್ರವಾಸಿ ಕಥನಗಳ ಸ್ವರೂಪವು ಉಳಿದ ಪ್ರವಾಸ ಕಥನಗಳಿಗಿಂತಲೂ ಭಿನ್ನವಾಗಿರುತ್ತದೆ. ಹವ್ಯಾಸಿಗರು ತಾವು ಆಯ್ದುಕೊಂಡ ದೇಶದ ಉದ್ದಗಲಕ್ಕೂ ಸುತ್ತುವ ಕಡೆಗೆ ಆಸಕ್ತಿವಹಿಸಿ ಸಮಗ್ರ ಅಧ್ಯಯನದ ವಿಶ್ಲೇಷಣೆ ಮಾಡಿರುತ್ತಾರೆ. ಹೀಗೆ ಪ್ರವಾಸ ಸಂದರ್ಭವು ಒಮ್ಮೊಮ್ಮೆ ಕ್ಲಿಷ್ಟಕರವೂ ಆಗಿರುತ್ತದೆ. ಧೈರ್ಯ, ಸ್ಥೈರ್ಯ, ಜಾಗರೂಕತೆ ವಹಿಸಬೇಕಾದ ಅನಿವಾರ್ಯತೆ ಹವ್ಯಾಸಿ ಪ್ರವಾಸ ಕಥನಗಳಲ್ಲಿ ದಟ್ಟವಾಗಿ ಎದ್ದುಕಾಣುತ್ತದೆ. ಹವ್ಯಾಸಿ ಪ್ರವಾಸ ಕಥನಕಾರರಿಗೆ ಇರಬೇಕಾದ ಲಕ್ಷಣಗಳ ಕುರಿತು ಪು.ತಿ.ನ. ಅವರು "ಸಾಮಾನ್ಯವಾಗಿ ನಾಲ್ಕು ಜನ ಗೆಳೆಯರು ಕೂಡಿಕೊಂಡೋ ಅಥವಾ ಯಾವುದಾದರೂ ಪ್ರವಾಸೋದ್ಯಮ ಸಂಸ್ಥೆಯವರು ಏರ್ಪಡಿಸಿದ ಪೂರ್ವ ನಿಯೋಜಿತ ಕಾರ್ಯಕ್ರಮದಲ್ಲಿ ಸೇರಿಕೊಂಡು ಹೋಗುವ ಪ್ರವಾಸಿಗರಿಗಿಂತ ಏಕಾಕಿ ಪ್ರವಾಸಿಗೆ ಜವಾಬ್ದಾರಿ ಮತ್ತು ಜಾಗರೂಕತೆಗಳ ಅವಶ್ಯಕತೆ ಹೆಚ್ಚು, ಧೈರ್ಯ, ಸ್ಥೈರ್ಯ, ದಿಟ್ಟತನ, ತಾಳ್ಮೆ, ಸಮಾಧಾನ ತನಗೆ ತಾನೇ ಸಂಗಾತಿಯಾಗಬಲ್ಲ ಸ್ವಭಾವಗಳನ್ನು ಹೊಂದಿರುವ ಏಕಾಕಿ ಪ್ರವಾಸಿಗೆ ಪ್ರವಾಸ ಕಾಲದಲ್ಲಿ ಸ್ವಾತಂತ್ರ್ಯ, ಆನಂದ ಮತ್ತು ಜ್ಞಾನಾನುಭವಗಳ ಗಳಿಕೆಯು ಹೆಚ್ಚು"(ವಿದ್ಯಾಶಂಕರ್ ಎಸ್., ೨೦೦೬, ಪುಟ-೧೪೪) ಎಂದು ಅಭಿಪ್ರಾಯ ಪಡುತ್ತಾರೆ. ಹವ್ಯಾಸಿ ಪ್ರವಾಸ ಕಥನಕಾರರಿಗೆ ಸಂಬಂಧಪಟ್ಟ ಪು.ತಿ.ನ. ಅವರ ಮಾತುಗಳು ಸಮರ್ಥನೀಯವಾದದ್ದು. ಈ ಪ್ರಕಾರದ ಪ್ರವಾಸಿಗರು ಸ್ಥಳೀಯರ ಮೇಲೆ ಅವಲಂಬಿತವಾಗಿ ಕುತೂಹಲ ಮೂಡಿಸುವ ಅಪರಿಚಿತ

ಸ್ಥಳಗಳಿಗೆ ಭೇಟಿ ಕೊಡುವುದರಿಂದ ಅಪಾಯದ ಅಂಚಿನಲ್ಲಿ ಭಯಾನಕ ಪ್ರದೇಶಗಳಲ್ಲಿ ಸುತ್ತಾಟ ಮಾಡಬೇಕಾಗುತ್ತದೆ. ಇಂತಹ ಗುಣಲಕ್ಷಣಗಳು ಹವ್ಯಾಸಿ ಪ್ರವಾಸ ಕಥನಗಳಲ್ಲಿ ಎದ್ದುಕಾಣುತ್ತವೆ. ಹಗಲಿನಲ್ಲಿ ನಿರ್ಭೀತಿಯಿಂದ ಸುತ್ತಾಡುವ ಮಹಿಳಾ ಪ್ರವಾಸಕಾರರು ಕುತೂಹಲಕ್ಕಾಗಿ ಹೊಸ ವಿಚಾರಗಳನ್ನು ಅರಸುತ್ತ ಹೋದ ಸಂದರ್ಭದಲ್ಲಿ ರಾತ್ರಿ ಸಮಯದಲ್ಲಿ ನಿರ್ಜನ ಪ್ರದೇಶದಲ್ಲಿ ಒಬ್ಬಂಟಿಯಾಗಿ ಕಾಲ ಕಳೆದ ಸಂಗತಿಗಳನ್ನು ಸುಧಾಮೂರ್ತಿ, ನೇಮಿಚಂದ್ರರಂತಹ ಹವ್ಯಾಸಿ ಪ್ರವಾಸಕಾರರು ಬರೆದುಕೊಂಡ ಉದಾಹರಣೆಗಳಿವೆ. ಸುಧಾಮೂರ್ತಿ ಅವರು 'ಆಟ್ಲಾಂಟಿಕ್‌ದಾಚೆಗೆ' ಪ್ರವಾಸ ಕಥನದಲ್ಲಿ ಪ್ರವಾಸದ ಅನುಭವಗಳನ್ನು ಕುರಿತು "ಕೆಲವು ಕೆಟ್ಟ ಅನುಭವಗಳು ನನ್ನ ಧೈರ್ಯ, ಮಾನಸಿಕ ಸ್ವಾಸ್ಥ್ಯಗಳನ್ನೇ ಹಲವಾರು ಭಾರಿ ಅಲುಗಿಸಿದವು. ಅಪರಿಚಿತ ದೇಶದಲ್ಲಿ ಹೋಟೆಲ್‌ನಲ್ಲಿ ಒಬ್ಬಂಟಿಯಾಗಿರಬೇಕಾಗಿ ಬಂದಾಗ ಅಳುಕಿದ್ದೇನೆ. ಗ್ರ್ಯಾಂಡ್ ಕ್ಯಾನಿಯನ್ ಕೊಳ್ಳದ ಹೋಟೆಲ್ ಹತ್ತಿರದಲ್ಲಿದ್ದ ಬಂಗಲೆಯಲ್ಲಿ ನಾನೊಬ್ಬಳೇ ಇದ್ದೆ. ದಟ್ಟ ಅರಣ್ಯದ ಹೊರತು ಮತ್ತೇನೂ ಗೋಚರಿಸಲಿಲ್ಲ. ಲಾಸ್ ಏಂಜಲಿಸ್‌ನ ಕಿರು ಮನೆಯೊಂದರಲ್ಲಿ ಮುದಿಬೆಕ್ಕಿನ ಜೊತೆ ರಾತ್ರಿ ಕಾಲ ಕಳೆದದ್ದು, ವಾಷಿಂಗ್‌ಟನ್ನಿನ ಲಿಂಕನ್ ಜೆಫರ್‌ಸನ್ ಸ್ಮಾರಕ ನೋಡುವ ಸಂದರ್ಭಕ್ಕೆ ಒಂಟಿಯಾಗಿ ಉಳಿದದ್ದು ಇವುಗಳನ್ನು ಮರೆಯಲಾಗದು."(ಸುಧಾಮೂರ್ತಿ, ೧೯೮೧, ಪುಟ-೧೦೭) ಎಂದಿದ್ದಾರೆ. ಇಂತಹ ಸಂಕಷ್ಟದ ಕಾಲವನ್ನು ನೇಮಿಚಂದ್ರ, ಶಮಂತ, ಎಚ್.ಎಸ್.ಅನುಪಮಾ ಅವರ ಕೃತಿಗಳಲ್ಲಿಯೂ ಕಾಣುತ್ತೇವೆ. ಅಂತಹ ಸಂದರ್ಭದಲ್ಲಿ ಅವರಿಗೆ ಬೆಂಬಲವಾಗಿ ನಿಂತದ್ದು ತಾವು ಪ್ರವಾಸ ಕೈಗೊಳ್ಳುವ ಪೂರ್ವದಲ್ಲಿ ತೆಗೆದುಕೊಂಡ ಅಚಲ ನಿರ್ಧಾರ ಒಂದೆ.

ಹವ್ಯಾಸಿ ಕಥನಕಾರರು ಪ್ರವಾಸದ ಅಧ್ಯಯನದ ಸಂದರ್ಭದಲ್ಲಿ ಸ್ವತಂತ್ರರಾಗಿರುತ್ತಾರೆ. ಪ್ರವಾಸವು ಮಾನಸಿಕ ಮತ್ತು ಬೌದ್ಧಿಕ ವಿಕಾಸಕ್ಕೆ ಸಾಧನವೆಂದು ಬಗೆದು, ತನ್ನ ಬದುಕಿನಲ್ಲಿ ಪ್ರವಾಸವನ್ನು ಒಂದು ಅವಿಭಾಜ್ಯ ಘಟಕವಾಗಿಸಿ, ಕಾಲಾವಕಾಶಗಳು ದೊರೆತಾಗ ಏಕಾಂಗಿಯಾಗಿಯೋ ಇಲ್ಲವೆ ಗುಂಪುಗೂಡಿಯೋ ಸಂಚರಿಸುವವರು ಹವ್ಯಾಸಿ ಪ್ರವಾಸಿಗರಾಗಿರುತ್ತಾರೆ. ಹವ್ಯಾಸಿ ಪ್ರವಾಸಿಗರಿಗೆ ಪ್ರವಾಸದ ಅಧ್ಯಯನದಲ್ಲಿ ಸ್ವಾತಂತ್ರ್ಯತೆ ಹೆಚ್ಚು ಇರುತ್ತದೆ. ಯಾರ ಮಿತಿಗಳಿಗೆ ಒಳಗಾಗದೆ, ಕಾಲದ ಮಿತಿಯನ್ನು ಹಾಕಿಕೊಳ್ಳದೆ, ಮನಸ್ಸಿನ ಬಯಕೆಗಳು ಶಮನಗೊಳ್ಳುವವರೆಗೆ ಹಿಂತಿರುಗಲಾರರು. ಆದರೆ ಗುಂಪುಗೂಡಿ ಅಥವಾ ಸಾಮೂಹಿಕವಾಗಿ ಪ್ರವಾಸ ಕೈಗೊಂಡಾಗ ಸಂಸ್ಥೆಯವರ ಅಥವಾ ಗುಂಪಿನ ಒಂದೇ ತೀರ್ಮಾನಕ್ಕೆ ಬದ್ಧರಾಗಿರಬೇಕಾಗುತ್ತದೆ. ಈ ಪ್ರವಾಸಿಗರಲ್ಲಿ ಸಮಯದ ಪರಿಪಾಲನೆ ಅತೀ ಮುಖ್ಯವಾಗುತ್ತದೆ. ಇದ್ಯಾವ ನಿರ್ಬಂಧಗಳು ಹವ್ಯಾಸಿ ಪ್ರವಾಸಿಗರಿಗೆ ಇರುವುದಿಲ್ಲ. ತಮಗೆ ಇಷ್ಟಬಂದಂತೆ ಸುತ್ತುವ, ದೇಶೀಯ ಮತ್ತು ವಿದೇಶಿ ವ್ಯಕ್ತಿಗಳ ಜೊತೆಯಾಗಲಿ ಭೇಟಿ ಮಾಡುವ, ಮಾಹಿತಿ ಕಲೆಹಾಕುವ, ಹರಟೆ ಹೊಡೆಯುವುದಕ್ಕೆ ಒತ್ತು ನೀಡುತ್ತಾರೆ. ಆ ಮೂಲಕ ಅವರೊಳಗಿನ ಜ್ಞಾನದ ಹಸಿವನ್ನು ತೀರಿಸಿಕೊಳ್ಳ ಬಯಸುತ್ತಾರೆ. ಯಾವುದೇ ಅವಸರವಿಲ್ಲದೇ ವೈವಿಧ್ಯ

ಸ್ಥಳಗಳನ್ನು ವಿರಾಮವಾಗಿ ನೋಡಲು ಮುಂದಾಗುತ್ತಾರೆ. ಇದರಿಂದ ವೃತ್ತಿಪರ ಪ್ರವಾಸಿಗರಂತೆ ತಿಳಿದಷ್ಟು ಮಾಹಿತಿಗಳೊಂದಿಗೆ ಮುಕ್ತಾಯ ಮಾಡುವುದಿಲ್ಲ. ಒಂದು ಪ್ರದೇಶದ ಜನಜೀವನವನ್ನು ಸಮಗ್ರವಾಗಿ ಶೋಧಿಸುವ ಗುಣವನ್ನು ಇವರಲ್ಲಿ ಕಾಣುತ್ತೇವೆ. ಹೀಗೆ ಅನೇಕ ದೃಷ್ಟಿಕೋನಗಳಿಂದ ಅಧ್ಯಯನ ಮಾಡುವಂತಹ ಎಲ್ಲಾ ಸ್ವಾತಂತ್ರ್ಯ ಹವ್ಯಾಸಿ ಪ್ರವಾಸಿಗರಿಗೆ ಇರುತ್ತದೆ. ಪ್ರವಾಸದಿಂದ ದೊರಕುವ ಆತ್ಮಸಂತೃಪ್ತಿಯ ಅಧ್ಯಯನವೇ ಇವರ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಉದಾಹರಣೆಯಾಗಿ ನೇಮಿಚಂದ್ರರ 'ಪೆರುವಿನ ಪವಿತ್ರಕಣಿವೆಯಲ್ಲಿ' ಎಂಬ ಕೃತಿಯನ್ನು ಗಮನಿಸಬಹುದಾಗಿದೆ. ಈ ಕಥನವು ಪೆರು ದೇಶಗಳ ಸಂಸ್ಕೃತಿ, ಆಚಾರ ವಿಚಾರಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಬಹುದಾಗಿದೆ. ಹವ್ಯಾಸಿ ಪ್ರವಾಸ ಕಥನಗಳು ವೃತ್ತಿನಿರತ ಪ್ರವಾಸ ಕಥನಗಳಿಗಿಂತಲೂ ಭಿನ್ನವಾಗಿರುತ್ತವೆ. ಬಹುಪಾಲು ಪ್ರವಾಸ ಸಾಹಿತ್ಯವು ವರ್ಣಾನಾತ್ಮಕ ನೆಲೆಯಲ್ಲಿ ನಿರೂಪಿತವಾಗಿರುತ್ತಾದರೂ ಹವ್ಯಾಸಿ ಪ್ರವಾಸ ಕಥನಗಳು ವರ್ಣನೆಗೆ ಬದಲಾಗಿ ವಿಷಯದ ವಿಶ್ಲೇಷಣೆಗೆ ತೊಡಗುತ್ತವೆ. ಒಂದು ಸಂಸ್ಕೃತಿಯನ್ನು ಮತ್ತೊಂದು ಸಂಸ್ಕೃತಿಗೆ ತಾಳೆ ನೋಡುತ್ತವೆ. ವಿಮರ್ಶಿಸುತ್ತವೆ. ತೌಲನಿಕವಾಗಿ ಚರ್ಚೆಗೆ ನಿಲ್ಲುತ್ತವೆ. ಮೇಲು ನೋಟದ ವಿಷಯ ಕ್ರೋಡೀಕರಣ ಮಾಡದೆ ಪೂರ್ವಾಪರವಾದ ಮಾಹಿತಿಗಳನ್ನು ಕಲೆಹಾಕುವಲ್ಲಿ ತೊಡಗುತ್ತಾರೆ. ಈ ಕಾರಣಕ್ಕಾಗಿ ಹವ್ಯಾಸಿ ಪ್ರವಾಸ ಕಥನಗಳು ಇತರೆ ಪ್ರವಾಸ ಕಥನಗಳ ಸ್ವರೂಪಗಳಿಗಿಂತ ವಿಭಿನ್ನವಾಗಿ ನಿಲ್ಲುತ್ತವೆ.

ಹವ್ಯಾಸಿ ಪ್ರವಾಸ ಕಥನಗಳ ವೈವಿಧ್ಯ ವಿಚಾರಗಳಿಗೆ ಬಂದಾಗ ಪ್ರವಾಸ ಕಥನದ ಪ್ರಕಾರಗಳಲ್ಲಿ ವಿಶೇಷವಾಗಿ ನಿಲ್ಲುತ್ತವೆ. ನಿರ್ದಿಷ್ಟವಾದ ಪ್ರದೇಶ, ಜನಸಮುದಾಯ, ಆಚರಣೆ, ಸಾಮಾಜಿಕ, ರಾಜಕೀಯ, ಆರ್ಥಿಕ, ಆಡಳಿತಗಳನ್ನು ತಿಳಿಯದೆ ಬಹುಸಂಸ್ಕೃತಿಯ ವೈವಿಧ್ಯಮಯವಾದ ವಿಷಯಗಳನ್ನು ಒಳಗೊಳ್ಳುತ್ತವೆ. ಈ ಕಾರಣಕ್ಕಾಗಿ ಪ್ರವಾಸಿಗರಿಗೆ ವಿವಿಧ ಕ್ಷೇತ್ರಗಳ ಪರಿಚಯವಿರಬೇಕಾಗುತ್ತದೆ. ಅದರಲ್ಲೂ ಹವ್ಯಾಸಿ ಪ್ರವಾಸ ಕಥನಗಳಲ್ಲಿ ಮಾಹಿತಿಗಳನ್ನು ದಾಖಲಿಸುವಂತಹ ಕಾರ್ಯಕ್ಕೆ ಇಳಿದಾಗ ಅನ್ಯಜ್ಞಾನ ಶಿಸ್ತುಗಳು ಅವಶ್ಯವಾಗಿ ಬೇಕಾಗುತ್ತದೆ. ಹವ್ಯಾಸಿ ಪ್ರವಾಸಿಯೂ ತಾವು ಪ್ರವಾಸ ಮಾಡುವಂತಹ ದೇಶದ ವಕ್ತಾರರು ಆಗಿರುತ್ತಾರೆ. ಓದುಗರಿಗೆ ಪರಿಚಯವೇ ಇರದ ದೇಶದ ವಿಶಿಷ್ಟತೆಯನ್ನು ತಿಳಿಸುವ ನಿರೂಪಕರು ಆಗಿರುತ್ತಾರೆ. ಹೀಗಾಗಿ ಹವ್ಯಾಸಿ ಪ್ರವಾಸ ಕಥನದ ವೈವಿಧ್ಯ ಇರುವುದೇ ವಿವಿಧ ಕ್ಷೇತ್ರಗಳನ್ನು ಅಧ್ಯಯನ ಮಾಡಿ ವಿವರಿಸುವ ಬಗೆಯಲ್ಲಿ. ಸಾಮಾನ್ಯವಾಗಿ ಪ್ರವಾಸಿಗರು ವಿವಿಧ ವೃತ್ತಿ, ಪ್ರವೃತ್ತಿಯವರಾಗಿರುತ್ತಾರೆ. ಉದಾಹರಣೆಗೆ ಎಚ್.ಎಸ್.ಅನುಪಮಾ ಅವರು ವೈದ್ಯರಾದರೆ, ಇಂದಿರಾ ಶಿವಣ್ಣ ಅವರು ಕೈಮಗ್ಗ ನಿಗಮದ ಅಧಿಕಾರಿಯಾದವರು. ಸುಧಾಮೂರ್ತಿಯವರದು ತಂತ್ರಜ್ಞಾನ ಕ್ಷೇತ್ರವಾದರೆ, ಲತಾಗುತ್ತಿಯವರದು ಅಧ್ಯಾಪಕ ವೃತ್ತಿ. ಹೀಗೆ ಸಾಹಿತಿ, ವೈದ್ಯ, ವಕೀಲ, ತಂತ್ರಜ್ಞಾನ, ಧಾರ್ಮಿಕ, ರಾಜಕೀಯ, ಆಡಳಿತ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ತಿಳುವಳಿಕೆಯಿಂದಾಗಿ ಓದುಗರಲ್ಲಿ ಕುತೂಹಲ ಉಂಟಾಗುತ್ತದೆ. ಅಲ್ಲದೆ ಪ್ರವಾಸಿಗರ ವೃತ್ತಿ,

ಪ್ರವೃತ್ತಿಗಳಿಗೆ ಸಂಬಂಧಿಸಿದ ವಿಚಾರಗಳು ಜಾಗೃತವೂ ಆಗಿರುತ್ತವೆ. ಆದರೆ ಹವ್ಯಾಸಿ ಪ್ರವಾಸಿಗರು ಒಂದು ದೇಶದಿಂದ ಹೊರಟು, ಮತ್ತೊಂದು ದೇಶವನ್ನು ಸಂದರ್ಶಿಸುವುದರಿಂದ ಈ ಎಲ್ಲಾ ವಲಯಗಳ ಕಡೆ ಗಮನ ಹರಿಸಿರುವುದನ್ನು ಕಾಣುತ್ತೇವೆ. ಹವ್ಯಾಸಿ ಪ್ರವಾಸ ಕಥನಕಾರ್ತಿಯ ಬರಹಗಳಲ್ಲಿ ಪ್ರವಾಸದ ಅನುಭವಗಳನ್ನು ತಾವು ಆಳವಡಿಸಿಕೊಳ್ಳುವ ಸೈದ್ಧಾಂತಿಕ ವಿಚಾರವಾದಿತನ ಕಾಣಿಸಿಕೊಳ್ಳುತ್ತವೆ.

ಮಹಿಳಾ ಹವ್ಯಾಸಿ ಪ್ರವಾಸಿಗರು ತಮ್ಮ ಕಥನಗಳನ್ನು ಪ್ರಸ್ತುತ ಸಂದರ್ಭಕ್ಕೆ ಅನ್ವಯಿಸುವಂತೆ ರಚಿಸಿರುತ್ತಾರೆ. ಆಧುನಿಕ ಜಗತ್ತಿಗೆ ತೆರೆದುಕೊಳ್ಳಬಹುದಾದ ಆಲೋಚನೆಯನ್ನು ನಿರೂಪಿಸಲು ಪ್ರಯತ್ನಿಸಿರುತ್ತಾರೆ. ಜಾಗತೀಕರಣವು ಸಮಾಜಕ್ಕೆ ಬೀರುವ ಪರಿಣಾಮಗಳ ಕುರಿತು ಅವುಗಳ ಮಹತ್ವಗಳನ್ನು ಕುರಿತು ಅರ್ಥೈಸಲು ಗಮನಹರಿಸಿರುವುದನ್ನು ಕಾಣುತ್ತವೆ. ಇಂತಹ ಕೃತಿಗಳಲ್ಲಿ ಸ್ವದೇಶಿ, ರಾಜಕೀಯ, ಆಡಳಿತ, ಇತಿಹಾಸ, ಸಮಾಜದ ವಸ್ತುಸ್ಥಿತಿಯ ಬದಲಾವಣೆಗಳನ್ನು ಗಮನಿಸುವ ಜೊತೆಗೆ ಪ್ರವಾಸಿ ಸ್ಥಳದಲ್ಲಿನ ವಿಶಿಷ್ಟತೆಗಳನ್ನು ತೌಲನಿಕವಾಗಿ ಅಭ್ಯಾಸಿಸಿ ನಿರೂಪಿಸಿರುತ್ತಾರೆ. ಇದರಿಂದಾಗಿ ಜಾಗತೀಕವಾಗಿ ದೇಶದ ಅಭಿವೃದ್ಧಿ ರೂಪುರೇಷಗಳನ್ನು ತಿಳಿಯಬಹುದಾಗಿದೆ. ಹವ್ಯಾಸಿ ಪ್ರವಾಸಿ ಕಥನಗಳು ಕೆಲವು ಐತಿಹಾಸಿಕತೆಯ ವಿವರಗಳಿಗೆ ಸಾಕ್ಷಿಯಾಗದೆ, ವಾಸ್ತವ ಸಮಾಜವನ್ನು ತೆರೆದಿಡುತ್ತವೆ. ಚಾರಿತ್ರಿಕವಾದ ಸಂಗತಿಗಳ ಜೊತೆಗೆ ವರ್ತಮಾನದ ಸಂಗತಿಗಳನ್ನು ತುಲನೆ ಮಾಡುತ್ತವೆ. ಹವ್ಯಾಸ ಪ್ರವಾಸಕಾರ್ತಿಯರ ಸಂಖ್ಯೆ ಇತ್ತೀಚಿಗೆ ಹೆಚ್ಚುತ್ತಿದ್ದು, ಅವರ ಕೃತಿಗಳು ಸಹ ಅಷ್ಟೇ ಪ್ರಸಿದ್ಧಿಯನ್ನು ಪಡೆಯುತ್ತಿವೆ.

೪.೨. ವೃತ್ತಿಪರ ಪ್ರವಾಸ ಕಥನಗಳು

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳನ್ನು ರಚಿಸಿದ ಬಹುತೇಕ ಬರಹಗಾರರು ವೃತ್ತಿ ಪ್ರವೃತ್ತಿಗಳಲ್ಲಿ ಭಿನ್ನತೆ ಇರವವರಿದ್ದಾರೆ. ಬರವಣಿಗೆಯನ್ನೇ ವೃತ್ತಿಯಾಗಿ ಮಾಡಿಕೊಂಡು ಬಂದಿರುವಂತವರು ವಿರಳವಾಗಿದ್ದಾರೆ. ಆಧುನಿಕತೆಯ ಭರಾಟೆಯ ಜೀವನಕ್ಕೆ ಹೊಂದಿಕೊಳ್ಳುವುದು, ಒಂದೇ ವೃತ್ತಿಯನ್ನು ನಂಬಿಕೊಂಡು ಜೀವಿಸುವುದು ಕಷ್ಟವಾದ್ದರಿಂದ, ಜೀವನ ನಿರ್ವಹಣೆಗಾಗಿ ವೃತ್ತಿಯನ್ನು, ತಮ್ಮ ವಿವೇಚನೆ, ವಿಶಿಷ್ಟತೆ, ಆಸಕ್ತಿಗೆ ಅನುಗುಣವಾಗಿ ತಮ್ಮ ಅನುಭವಗಳ ಒತ್ತಡಗಳನ್ನು ಬಿಡುಗಡೆಗೊಳಿಸುವುದಕ್ಕೆ ಪ್ರವೃತ್ತಿಗಳ ಮೊರೆ ಹೋಗುವುದನ್ನು ಇಂದು ಸರ್ವೆಸಾಮಾನ್ಯವಾಗಿ ನೋಡಬಹುದಾಗಿದೆ. ಹಾಗೇ ನೋಡಿದರೆ ಈ ಹಿಂದೆ ಕನ್ನಡ ಸಾಹಿತ್ಯವನ್ನೇ ಓದಿಕೊಳ್ಳದವರೂ ಪ್ರವಾಸ ಸಾಹಿತ್ಯ ರಚಿಸಿರುವುದನ್ನು ಕಾಣುತ್ತೇವೆ. ಸಾಹಿತ್ಯ ಚಳುವಳಿಯ ಪ್ರಭಾವದಿಂದಾಗಿ ಮತ್ತು ವಿಶ್ವ ಸಂಕುಚಿತಗೊಂಡಂತೆ ಅನ್ಯಭಾಷೆಯ ತಿಳುವಳಿಕೆಯಿಂದಾಗಿ ಅನೇಕ ಬರಹಗಾರರು ವಿಭಿನ್ನ ವೃತ್ತಿಯಲ್ಲಿವವರೂ ಸಾಹಿತ್ಯ ರಚಿಸುತ್ತಿದ್ದರು. ಕನ್ನಡದಲ್ಲೂ ಇದು ಹೆಚ್ಚಿನ ಮಟ್ಟದಲ್ಲಿದೆ. ಕತೆ, ಕಾದಂಬರಿ, ಕವನಗಳ ಹೊರತಾಗಿಯೂ ವಿವಿಧ ಜ್ಞಾನಶಿಸ್ತೀಯ ರಂಗಗಳಾದ ವೈದ್ಯಕೀಯ, ಕಾನೂನು, ಕೃಷಿ, ರಂಗಭೂಮಿ ಮುಂತಾದ ಕ್ಷೇತ್ರಗಳಲ್ಲಿ ದುಡಿಯುವವರು ಅವರ ವೃತ್ತಿಗೆ ಸಂಬಂಧಿಸಿದಂತೆಯೂ ಅಥವಾ ವೃತ್ತಿಯಾಚೆಗಿನ

ಬದುಕನ್ನು ಕಟ್ಟಿಕೊಡುವಲ್ಲಿ ನಿರತರಾಗಿದ್ದಾರೆ. ಇಂತಹ ವೈವಿಧ್ಯದಿಂದ ಕೂಡಿದ ಬರಹಗಳೆಲ್ಲವನ್ನ ಇಂದು ಸಾಹಿತ್ಯ ಎಂದೇ ಪರಿಗಣಿಸಲಾಗುತ್ತದೆ. ಇದು ಪ್ರವಾಸ ಕ್ಷೇತ್ರಕ್ಕೆ ಹೆಚ್ಚು ಅನ್ವಯವಾಗುವಂತಹ ಮಾತಾಗಿದೆ. ಕನ್ನಡ ಪ್ರವಾಸ ಕಥನಗಳು ಹುಟ್ಟಿಕೊಂಡಿರುವುದೇ ವೃತ್ತಿ-ಪ್ರವೃತ್ತಿಗಳ ವಿಭಿನ್ನತೆಯಿಂದಾಗಿಯೇ ಎನ್ನಬಹುದಾಗಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಉದ್ಯೋಗ ಮಾಡುತ್ತಿರುವವರು ಪ್ರವಾಸ ಹೊರಟ ಸಂದರ್ಭದಲ್ಲಿ ತಮ್ಮ ಅನುಭವಗಳನ್ನು ಕಥನಗಳಾಗಿ ನಿರೂಪಿಸಿದ್ದಾರೆ. ಇಂತಹ ಕಥನಗಳು ಸಾಹಿತ್ಯದ ಹೊರತಾದ ಮುನ್ನೋಟಗಳನ್ನು ನೀಡುತ್ತವೆ.

ವೃತ್ತಿಪರ ಪ್ರವಾಸ ಕಥನಗಳ ಸ್ವರೂಪ ಮತ್ತು ವೈವಿಧ್ಯಗಳನ್ನು ಗಮನಿಸುವುದಾದರೆ, ವೃತ್ತಿಪರ ಪ್ರವಾಸಿಗರು ಸರ್ಕಾರದ ಆಡಳಿತಾತ್ಮಕ ಪ್ರತಿನಿಧಿಗಳಾಗಿರುತ್ತಾರೆ. ಇಲ್ಲವೆ ಸಂಘ-ಸಂಸ್ಥೆಗಳಿಂದ ನಿಯೋಜಿಸಲ್ಪಟ್ಟಿರುತ್ತಾರೆ. ಇಲ್ಲವೇ ವಿದ್ಯಾಭ್ಯಾಸಕ್ಕಾಗಿ ವಿದೇಶಿಗಳಿಗೆ ಹೋಗುವ ಅಥವಾ ಉದ್ಯೋಗ ಹರಸಿಕೊಂಡು ಮತ್ತೊಂದು ದೇಶಗಳಿಗೆ ಹೋಗುವುದನ್ನು ಇಲ್ಲಿ ಕಾಣುತ್ತೇವೆ. ಸರ್ಕಾರ ಮತ್ತು ಸಂಘ-ಸಂಸ್ಥೆಗಳ ಯೋಜನೆಯಂತೆ ನಿರ್ದಿಷ್ಟವಾದ ಪ್ರವಾಸ ಮಾಡಿ ಬರೆದಿರುವ ಕೃತಿಗಳು ಅಧಿಕ ಸಂಖ್ಯೆಯಲ್ಲಿ ರಚನೆಗೊಳ್ಳಲು ಸಹಕಾರಿಯಾಗಿವೆ. ಅಂತಹ ಮಹಿಳಾ ಪ್ರವಾಸ ಕೃತಿಗಳನ್ನು ಹೆಸರಿಸುವುದಾದರೆ ಅನುಪಮಾ ನಿರಂಜನರ 'ಸ್ನೇಹಯಾತ್ರೆ', ಶಮಂತ ಅವರ 'ಹಿಮದಗ್ನಿ', ಹೇಮಲತಾ ಮಹಿಷಿಯವರ 'ಹಂಗೇರಿಯಲ್ಲಿ ಹೇಮ' ಮುಂತಾದವು ವಿದೇಶಿ ಬರಹಗಾರರ ವೇದಿಕೆಯ ಕಾರ್ಯಕ್ರಮಗಳಿಗೆ ರಚಿಸಿದ ಪ್ರವಾಸದ ಅನುಭವಗಳನ್ನು ದಾಖಲಿಸಿದ ಕೃತಿಗಳಾಗಿವೆ. ಅಕ್ಕಾ ಸಮ್ಮೇಳನ, ಅಂತರಾಷ್ಟ್ರೀಯ ಬರಹಗಾರರ ಒಕ್ಕೂಟ, ಅನಿವಾಸಿ ಕನ್ನಡಿಗರ ಕನ್ನಡ ಸಂಘಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಸರ್ಕಾರ ರೂಪಿಸಿದ ಭಾಷಾವಾರು ಕಾರ್ಯಕ್ರಮಗಳಿಗೆ ಹೋಗಿ ಬರುವ ಲೇಖಕಿಯರು ತಮ್ಮ ಅನುಭವವನ್ನು ಪ್ರವಾಸ ಕೃತಿಗಳಾಗಿಸಿದ್ದಾರೆ.

ಎಸ್.ವಿದ್ಯಾಶಂಕರ್ ಅವರು ವೃತ್ತಿನಿರತ ಪ್ರವಾಸಿಗರನ್ನು ನಿಯೋಗಿ ಪ್ರವಾಸಿಗರೆಂದು ಕರೆದಿದ್ದಾರೆ. ಅಂದರೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಒಂದು ರಾಜ್ಯ, ದೇಶ, ವಿದೇಶಗಳ ಕುರಿತಾಗಿ ಸಮಗ್ರ ಅಧ್ಯಯನ ಮಾಡಲು ನಿಯೋಜಿಸಿರುವ ಕಥನಕಾರರು ಎನ್ನಬಹುದಾಗಿದೆ. ಈ ಕುರಿತು ಎಸ್. ವಿದ್ಯಾಶಂಕರ್ ಅವರು "ಸರಕಾರದ ಪ್ರತಿನಿಧಿಗಳಾಗಿಯೋ, ಆಮಂತ್ರಿತ ಅತಿಥಿಗಳಾಗಿಯೊ, ಉನ್ನತ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳಾಗಿಯೊ, ಸ್ವದೇಶಿ ಇಲ್ಲವೇ ವಿದೇಶಿ ನೆರವಿನಿಂದ ಹೊರದೇಶಗಳಿಗೆ ಹೋಗುವವರು ನಿಯೋಗಿ ಪ್ರವಾಸಿಗರೆಂದು ಕರೆದಿದ್ದಾರೆ" (ವಿದ್ಯಾಶಂಕರ್ ಎಸ್., ೨೦೦೬, ಪುಟ-೧೪೪) ಎಂದು ಹೇಳಿದ್ದಾರೆ. ಇಂತಹ ಪ್ರವಾಸಗಳು ಸ್ವಇಚ್ಛೆಯುಳ್ಳ ಅಥವಾ ತಮ್ಮ ಧ್ಯೇಯೋದ್ದೇಶಗಳ ಈಡೇರಿಕೆಗಳಿಗಾಗಿ ಕೈಗೊಂಡ ಪ್ರವಾಸಗಳಾಗಿರುತ್ತವೆ. ಹವ್ಯಾಸಿ ಪ್ರವಾಸಿಗರಂತೆ ವೃತ್ತಿನಿರತ ಪ್ರವಾಸಿಗರು ಒಂಟಿಯಾಗಿಯೂ, ಗುಂಪಾಗಿಯೂ ಸಂಚರಿಸುತ್ತಾರೆ. ವೃತ್ತಿಪರ ಪ್ರವಾಸಿಗರು ಸಾಮಾನ್ಯವಾಗಿ ಏಕಾಂಗಿಯಾಗಿಯೋ ಅಥವಾ ನಾಲ್ಕು ಜನ ಗೆಳೆಯರು ಕೂಡಿಕೊಂಡು ಹೋಗುತ್ತಾರೆ. ಹೀಗೆ ಹೋಗುವ

ಪ್ರವಾಸಿಗರು ಯಾವುದಾದರೂ ಪ್ರವಾಸೋದ್ಯಮ ಸಂಸ್ಥೆಯವರು ಏರ್ಪಡಿಸಿದ ಪೂರ್ವ ನಿಯೋಜಿತ ಪ್ರವಾಸ ಕಾರ್ಯಕ್ರಮದಲ್ಲಿ ತೊಡಗಿಕೊಳ್ಳುತ್ತಾರೆ. ಗುಂಪು ಪ್ರವಾಸಿಗರಿಗಾಗಲಿ, ಏಕಾಂಗಿ ಪ್ರವಾಸಿರಿಗಾಗಲಿ, ಸಂಬಂಧಿಸಿದ ಸಂಸ್ಥೆಗಳೇ ಪ್ರವಾಸದ ಖರ್ಚುಗಳನ್ನು ನಿಭಾಯಿಸುತ್ತದೆ ಅಥವಾ ನೀಡುತ್ತಾರೆ. ತಂಡವಾಗಿ ಹೋಗುವ ವೃತ್ತಿಪರರಿಗಿಂತ ಏಕಾಂಗಿ ಪ್ರವಾಸಿಗರಿಗೆ ಜವಾಬ್ದಾರಿ ಮತ್ತು ಜಾಗರೂಕತೆಗಳು ಹೆಚ್ಚು, ಧೈರ್ಯ, ಸ್ಥೈರ್ಯ, ದಿಟ್ಟತನ, ತಾಳ್ಮೆ, ಸಮಯಾವಧಾನ, ತನಗೆ ತಾನೇ ಸಂಗಾತಿಯಾಗಬಲ್ಲ ಸ್ವಭಾವಗಳನ್ನು ಹೊಂದಿರಬೇಕಾಗುತ್ತದೆ. ಒಂಟಿಯಾಗಿ ಪ್ರವಾಸ ಮಾಡುವವರು ಪ್ರವಾಸ ಕಾಲದಲ್ಲಿ ಸ್ವಾತಂತ್ರ್ಯ ಆನಂದ ಜ್ಞಾನಾನುಭವಗಳ ಗಳಿಕೆಯೇ ಮುಖ್ಯವಾಗುತ್ತದೆ. ಆದರೆ ಸ್ವಂತ ಖರ್ಚಿನಲ್ಲಿ, ಸ್ವತಂತ್ರವಾಗಿ, ಕಾಲದ ಮೀತಿಯಲ್ಲಿ ಪ್ರವಾಸ ಮಾಡುವ ಅವಕಾಶ ನಿಯೋಗಿ ಪ್ರವಾಸಿಗರಿಗೆ ಇರುವುದಿಲ್ಲ. ಎಲ್ಲಾವನ್ನು ಸಂಸ್ಥೆಗಳೇ ನೋಡಿಕೊಳ್ಳುತ್ತವೆ. ಗುಂಪುಗೂಡಿ ಪ್ರವಾಸ ಕೈಗೊಂಡಾಗ ಅಲ್ಲಿ ವೈಯಕ್ತಿಕ ಸ್ವಾತಂತ್ರ್ಯವಿರುವುದಿಲ್ಲ. ಸಾಮೂಹಿಕ ತೀರ್ಮಾನಗಳಿಗೆ ಹಾಗೂ ಪ್ರವಾಸಿ ಸಂಸ್ಥೆಯವರು ಕೈಗೊಂಡ ತೀರ್ಮಾನಗಳಿಗೆ ನಿಯೋಗಿ ಪ್ರವಾಸಿಗರು ಬದ್ಧರಾಗಿರಬೇಕಾಗುತ್ತದೆ. ಬೇರೆ ದೇಶಗಳ ಅತಿಥಿಯಾಗಿ ಪ್ರವಾಸ ಕೈಗೊಂಡಾಗಲಂತೂ, ಆಹ್ವಾನಿತರ ಕಾರ್ಯಕ್ರಮಗಳ ವೇಳಾಪಟ್ಟಿಗೆ ಪ್ರವಾಸಿಯು ಹೊಂದಿಕೊಳ್ಳಬೇಕಾದ ದಾಕ್ಷಿಣ್ಯ ಸ್ಥಿತಿ ಪ್ರಾಪ್ತವಾಗುತ್ತದೆ. ತಮಗೆ ಇಷ್ಟಬಂದಂತೆ ಸುತ್ತುವ, ಮನಸ್ಸಿಗೆ ಪ್ರಿಯರಾದವರನ್ನು ಭೇಟಿ ಮಾಡುವ, ಆರಾಮದಾಯಕವಾಗಿ ನಿಂತು ನೋಡುವ ಜನಜೀವನವನ್ನು ಸ್ವಇಚ್ಛೆಯಂತೆ ಪ್ರವಾಸ ಮಾಡುವ ಸ್ವಾತಂತ್ರ್ಯ ಅಲ್ಲಿ ಮೊಟಕುಗೊಳ್ಳುತ್ತವೆ. ವಿದೇಶಗಳಲ್ಲಿ ನಡೆಯುವ ಸಭೆ, ಸಮ್ಮೇಳನ, ವಿಚಾರಗೋಷ್ಠಿಗಳಲ್ಲಿ ಪಾಲ್ಗೊಳ್ಳಲು ಹೋಗುವ ಪ್ರತಿನಿಧಿಗಳು ನಿಶ್ಚಿತ ಅಲ್ಪಕಾಲಾವಧಿಯಲ್ಲಿ ತಂಗುತ್ತಾರೆ. ತಾವು ಭೇಟಿ ಮಾಡುವ ದೇಶವನ್ನು ಸಮಗ್ರವಾಗಿ ನೋಡಲು, ಜನಜೀವನವನ್ನು ಅಭ್ಯಾಸ ಮಾಡಲು ಸಮಯಾವಕಾಶಗಳಿರುವುದಿಲ್ಲ. ಈ ಕುರಿತು ನೇಮಿಚಂದ್ರ ಅವರು "ಒಂದು ಕನಸಿನ ಪಯಣ' ಕೃತಿಯಲ್ಲಿ "ಓದಿದಷ್ಟು ಹೊಸ ಅನುಭವಗಳನ್ನು, ರೋಮಾಂಚನಕಾರಿ ಭಾವನೆಗಳು ಆದರೆ ನನ್ನ ಮುಂದೆ ಈ ಪ್ರಶ್ನೆ ಬೃಹದಾಕಾರವಾಗಿ ನಿಂತಿತು. ನನ್ನ ಪ್ರವಾಸಕ್ಕೆ ಈ ಪುಸ್ತಕ ಏನು ನೇರವಾಗಲಿಲ್ಲ. ವಿಜ್ಞಾನಿಗಳ ತಾಣವನ್ನು ಹುಡುಕುತ್ತಾ ಹೊರಟು ನೋಡುವ ಆಸೆ ನನ್ನಲ್ಲಿ ಉದ್ಭವಿಸಿದರೂ ನಾನು ಹೋಗುವ ಪ್ರವಾಸಿ ಸಂಸ್ಥೆಯ ಯೋಜಿತ ಪ್ರವಾಸದಲ್ಲಿ ಅದೆಲ್ಲ ಅಸಾಧ್ಯವೆಂದು ಕೈಬಿಟ್ಟೆ"(ನೇಮಿಚಂದ್ರ, ೧೯೯೯, ಲೇಖಕಿಯ ಮಾತು) ಎಂದಿದ್ದಾರೆ. ಗುಂಪು ನಿಯೋಜಿತ ಪ್ರವಾಸಿಗರಲ್ಲಿ ಈ ಸಮಸ್ಯೆಯು ಕಂಡುಬರುತ್ತದೆ. ನೇಮಿಚಂದ್ರರ ಈ ಮಾತಿಗೆ ತದ್ವಿರುದ್ಧವಾಗಿಯೂ ಅನೇಕ ಪ್ರವಾಸ ಕಥನಗಳು ಕನ್ನಡದಲ್ಲಿ ರಚನೆಗೊಂಡಿವೆ. ನಿಯೋಗಿ ಪ್ರವಾಸಿಗರಾಗಿ ಹೊರಟ ಮಹಿಳಾ ಪ್ರವಾಸಿಗರ ಕೃತಿಗಳಲ್ಲಿ ಅನುಪಮಾ ನಿರಂಜನರ 'ಸ್ನೇಹಯಾತ್ರೆ, ಅಂಜಲಿ ರಾಮಣ್ಣ ಅವರ 'ಬೆಳಕಿನ ಸೆರಗು', ತೇಜಸ್ವಿನಿ ಬಿ.ಯಕ್ಕುಂಡಿಮಠ ಅವರ 'ತಿರೆಯ ಮೇಲಣ ಸ್ವರ್ಗ', ಪ್ರಜ್ಞಾ ಮತ್ತಿಹಳ್ಳಿಯವರ 'ದೇವರಸ್ವಂತ ನಾಡಿನಲ್ಲಿ', ಎಚ್.ಎಸ್.ಮುಕ್ತಾಯಕ್ಕ ಅವರ 'ಮದಿರೆಯ

ನಾಡಿನಲ್ಲಿ', ಸಂಧ್ಯಾ.ಎಸ್. ಅವರ 'ಹಲವು ಕಾಲಗಳ ನಾಡು: ಗುಜರಾತ್', ಸುಧಾ ಚಿದಾನಂದಗೌಡರ 'ಸಮನ್ವಿತೆ ಗೋಮಾಂತ', ಶಮಂತ ಅವರ 'ಹಿಮದಗ್ನಿ', ಶಾಂತದೇವಿ ಮಾಳವಾಡರ 'ಶ್ರೀಗಿರಿಯಿಂದ ಹಿಮಗಿರಿಗೆ', ಶೈಲಜಾ ಎನ್.ಬಾಗೇವಾಡಿ ಯವರ 'ದೇವಾಲಯಗಳ ನಾಡಿನಲ್ಲಿ' ಮುಂತಾದವುಗಳು ಪ್ರಮುಖವಾಗಿವೆ.

ಈ ಮೇಲಿನ ಮಹಿಳಾ ವೃತ್ತಿಪರ ಪ್ರವಾಸ ಕಥನಗಳು ಕರ್ನಾಟಕ ಸಾಹಿತ್ಯ ಅಕಾಡಮಿ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯ ವತಿಯಿಂದ ಪ್ರವಾಸ ಕೈಗೊಂಡ ಅನುಭವ ಕಥನಗಳಾಗಿವೆ. ಇವು ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿದ ಲೇಖಕಿಯರಿಗೆ ಇಲಾಖೆಯ ಯೋಜನೆಯಂತೆ ನಿರ್ದಿಷ್ಟ ರಾಜ್ಯಗಳ ಕುರಿತಾದ ಅಧ್ಯಯನವನ್ನು ಮಾಡುವ ಉದ್ದೇಶಕ್ಕಾಗಿ ಸರ್ಕಾರ ನಿಯೋಜಿಸಿದ ಯೋಜನೆಯ ಫಲಿತಗಳಾಗಿವೆ. ಖಾಸಗಿ ಸಂಸ್ಥೆಗಳು ಪ್ರವಾಸ ಕಥನಗಳ ಅಧ್ಯಯನಕ್ಕೆ ತೊಡಗಿದ್ದು ವಿರಳ ಎನ್ನಬಹುದಾಗಿದೆ. ಆದರೆ ಸರ್ಕಾರದ ಇಲಾಖೆಗಳು ಈ ಕುರಿತು ಅರ್ಜಿಗಳನ್ನು ಆಹ್ವಾನಿಸುತ್ತವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಪ್ರವಾಸ ಕಥನದ ಬರವಣಿಗೆಗೆ ಪ್ರೋತ್ಸಾಹ ನೀಡಲು ಸಹಾಯಧನ ನೀಡಿ ಯುವಬರಹಗಾರರನ್ನು ಆಹ್ವಾನಿಸಿ ಅವರ ಆಯ್ಕೆಯಂತೆ ಭಾರತದ ವಿವಿಧ ರಾಜ್ಯಗಳಿಗೆ ಕಳಿಸಿಕೊಟ್ಟು ಅವರಿಂದ ಪ್ರವಾಸ ಕಥನಗಳನ್ನು ಬರೆಸಲು ಇಟ್ಟುಕೊಂಡ ಯೋಜನೆಗಳ ಬಗ್ಗೆ ಹೇಳಿಕೊಂಡಿದ್ದಾರೆ. ಇಲ್ಲಿಯವರೆಗೆ ಭಾರತದ ವಿವಿಧ ರಾಜ್ಯಗಳ ಕುರಿತಾದ ಅಧ್ಯಯನಕ್ಕೆ ಮಾತ್ರ ಈ ಪ್ರವಾಸ ಕೃತಿಗಳ ರಚನೆಗೆ ಅವಕಾಶ ಮಾಡಿಕೊಟ್ಟಿದೆ. ಇಂತಹ ಪ್ರವಾಸ ಕೃತಿಗಳ ಮೂಲಕ ವೈವಿಧ್ಯಮಯವಾದ ಭಾರತದಲ್ಲಿ ರಾಜ್ಯ ರಾಜ್ಯಗಳಿಗೂ ಆಚರಣೆ, ಸಂಸ್ಕೃತಿ, ಸಂಪ್ರದಾಯ, ಕಲೆ, ಸಾಹಿತ್ಯಗಳೂ ಭಿನ್ನವಾಗಿರುವುದು ತಿಳಿದುಬರುತ್ತದೆ. ಅಂತಹ ಭಿನ್ನತೆಗಳನ್ನು ಕೃತಿಗಳಲ್ಲಿ ದಾಖಲಿಸುವುದರಿಂದ ಓದುಗರಿಗೆ ಭಾರತದ ಬಗ್ಗೆ ಒಂದು ದೃಷ್ಟಿಕೋನ ಬೆಳೆಯುತ್ತದೆ. ಈ ಹಿನ್ನೆಲೆಯಲ್ಲಿ ವೃತ್ತಿನಿರತ ಪ್ರವಾಸ ಸಾಹಿತ್ಯವು ಅನುಕೂಲವಾಗಿವೆ. ಮಹಿಳಾ ಲೇಖಕಿಯರು ಅನೇಕ ರಾಜ್ಯ ದೇಶಗಳನ್ನು ಸುತ್ತಾಡಿ, ಸಮಗ್ರ ರೀತಿಯ ಅಧ್ಯಯನವನ್ನು ಮಾಡಿದ್ದಾರೆ. ತೇಜಸ್ವಿನಿ ಬಿ.ಯಕ್ಕುಂಡಿಮಠ ಅವರು 'ತಿರೆಯ ಮೇಲಣ ಸ್ವರ್ಗ' ಕೃತಿಯಲ್ಲಿ ಅಕಾಡೆಮಿಯು ವೃತ್ತಿಪರ ಪ್ರವಾಸದ ಜವಾಬ್ದಾರಿಯನ್ನು ವಹಿಸಿದ ಕುರಿತು "ತೆಲಂಗಾಣ ರಾಜ್ಯದ ವಿವಿಧ ಸ್ಥಳಗಳಿಗೆ ಭೇಟಿಯಿತ್ತು. ಅವುಗಳ ವಿಶೇಷತೆಗಳನ್ನು ಅರಿಯುವ; ಅಲ್ಲಿನ ಮಹಾನ್ ವ್ಯಕ್ತಿಗಳನ್ನು, ಕಲಾಕಾರರನ್ನು ಜನಸಾಮಾನ್ಯರನ್ನು ಸಂದರ್ಶಿಸುವ; ರಾಜ್ಯದ ಸಾಹಿತ್ಯ-ಸಂಸ್ಕೃತಿಯ ಶ್ರೀಮಂತಿಕೆಯನ್ನು ಅರಿಯುವ; ರಾಜ್ಯದ ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಯನ್ನು ತಿಳಿಯುವ ಸದಾವಕಾಶ ದೊರೆಯಿತು"(ತೇಜಸ್ವಿನಿ ಬಿ.ಯಕ್ಕುಂಡಿಮಠ, ೨೦೧೬, ಲೇಖಕಿಯ ಮಾತು) ಎಂದು ಪ್ರಸ್ತಾಪಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರತಿವರ್ಷ ಪ್ರತಿಭಾನ್ವಿತ ಹೊಸ ಬರಹಗಾರರನ್ನು ಗುರುತಿಸುವುದು ಅವರಿಗೆ ಅನುಧಾನ ನೀಡಿ ಪ್ರವಾಸ ಕೈಗೊಳ್ಳಲು ಮಾರ್ಗದರ್ಶನ ಮಾಡುವುದು, ಅವರು ಆಯ್ದುಕೊಂಡ ರಾಜ್ಯಗಳ ಕುರಿತು ಪ್ರವಾಸ ಕಥನವನ್ನು ಬರೆಸುವ,

ಮುದ್ರಿಸುವ ಯೋಜನೆಯನ್ನು ಹಮ್ಮಿಕೊಂಡಿವೆ. ಈ ಪ್ರವಾಸ ಕಥನಗಳಿಂದ ಕನ್ನಡದ ಓದುಗರಲ್ಲಿ ಪ್ರವಾಸದ ಹವ್ಯಾಸ ಬೆಳೆಸುವುದು, ಪ್ರವಾಸ ಕಥನಗಳ ರಚನೆಗಳನ್ನು ತಿಳಿಯಪಡಿಸುವುದು ಅಕಾಡಮಿಯ ಉದ್ದೇಶಗಳಾಗಿವೆ. ಹೀಗೆ ರೂಪಿಸಿದ ಯೋಜನೆಗಳ ಆಶಯಗಳನ್ನು ತಿಳಿಯಪಡಿಸುತ್ತದೆ. ಪುರುಷ ಲೇಖಕರಿಗೆ ಸೀಮಿತವಾದ ಪ್ರವಾಸಗಳು, ಮಹಿಳೆಯರಿಗೂ ವಿಸ್ತರಿಸಿಕೊಳ್ಳಲು ನೆರವಾದವು. ಈ ಯೋಜನೆ ಫಲವಾಗಿ ಅಕಾಡಮಿಯ ಹೊರತಾಗಿಯು ಹವ್ಯಾಸಿ ಪ್ರವಾಸಿಗರನ್ನು ರೂಪಿಸಿದ ಕೀರ್ತಿ ವೃತ್ತಿಪರ ಪ್ರವಾಸ ಕಥನಗಳಿಗೆ ಸಲ್ಲುತ್ತದೆ. ಈ ಯೋಜನೆಯು ಕೇವಲ ವೃತ್ತಿಪರ ಪ್ರವಾಸಿಗರನ್ನಷ್ಟೇ ಬೆಳೆಸದೆ, ಹವ್ಯಾಸಿ ಪ್ರವಾಸಿಗರನ್ನು ಬೆಳೆಸಿದೆ ಎನ್ನಬಹುದಾಗಿದೆ.

೪.೩. ದೇಶೀಯ ಪ್ರವಾಸ ಕಥನಗಳು

ಭಾರತವು ಅತ್ಯಂತ ವೈವಿಧ್ಯಮಯವಾದ ದೇಶ, ಇದರ ವಿಸ್ತಾರವು ಕರಾವಳಿ ತೀರದ ಮನೋಹರ ದೃಶ್ಯಗಳು, ಬಯಲು ಪ್ರದೇಶಗಳನ್ನು ಹೊಂದಿದೆ. ಸಾಂಸ್ಕೃತಿಕವಾದ ವಿಭಿನ್ನತೆಯ ಜೊತೆಗೆ ಭೌಗೋಳಿಕವಾಗಿ ವಿಭಿನ್ನವಾದ ದೇಶ ಇದಾಗಿದೆ. ಉತ್ತರ ಭಾರತ ಮತ್ತು ದಕ್ಷಿಣ ಭಾರತ ಎರಡು ಭಾಗಗಳಲ್ಲಿ ಬಹುವಿಧವಾದ ವ್ಯವಸಾಯ, ಉದ್ಯಮಗಳು, ದೊಡ್ಡ ಪಟ್ಟಣಗಳು, ದಟ್ಟ ಜನಸಂದಣಿಯಿರುವ ಪ್ರದೇಶಗಳು ವಿಶಾಲ ಬಯಲು ಪ್ರದೇಶಗಳು, ಬಂದರುಗಳು, ಕರಾವಳಿ ತೀರಗಳು, ಭವ್ಯ ಪರ್ವತದ ಶ್ರೇಣಿಗಳು, ಮನಸೂರೆಗೊಳ್ಳುವ ಕಣಿವೆಗಳು, ಸಂಪದ್ಭರಿತ ಕಾಡುಗಳು, ಭಕ್ತಿಯನ್ನು ಉದ್ದೀಪಿಸುವ ದೇವಾಲಯಗಳು, ವೈವಿಧ್ಯಮಯವಾದ ವೇಷಭೂಷಣಗಳು, ಪ್ರಾಚೀನ ಅವಶೇಷಗಳು, ಶಿಲ್ಪಕಲಾ ವೈಭವ, ನಾಗರೀಕತೆಗೆ ಒಳಗಾಗದೆ ಗ್ರಾಮೀಣ ಪರಿಸರದಲ್ಲೇ ಉಳಿದುಕೊಂಡ ಜನಸಂಪತ್ತು, ಶಾಸ್ತ್ರೀಯ ಸಂಗೀತ, ಕಲೆ, ದೇಶೀಯ ಭಾಷೆಗಳು ಮುಂತಾದವುಗಳು ಭಾರತವನ್ನು ಅತ್ಯಂತ ಆಕರ್ಷಣೀಯವಾಗಿಸಿವೆ. ಈ ಸಮೃದ್ಧಿಯ ಜೊತೆಗೆ ಬರಗಾಲವನ್ನು ಸೃಷ್ಟಿಸಿಕೊಂಡಂತೆ ಕೆಲವು ಪ್ರದೇಶಗಳಿವೆ. ಒಟ್ಟಾರೆ ಭಾರತದ ೨೯ ರಾಜ್ಯಗಳು, ೯ ಕೇಂದ್ರಾಡಳಿತ ಪ್ರದೇಶಗಳನ್ನು ಹೊಂದಿದ ಐಕ್ಯತೆಯ ನಾಡಾಗಿದೆ. ಇಂತಹ ವಿಶಿಷ್ಟ ನಾಡನ್ನು ಪ್ರವಾಸ ಮಾಡುವುದೇ ಒಂದು ಮಾನಸಿಕ ಸುಖ ಸಂತೋಷವನ್ನು ಕೊಡುತ್ತದೆ. ಪುರುಷ ಪ್ರವಾಸಕಾರರನ್ನು ಮೀರುವ ರೀತಿಯಲ್ಲಿ ಈ ವರ್ಣಮಯ ಪರಿಸರವನ್ನು ಸವಿಯಲು ಮಹಿಳಾ ಪ್ರವಾಸಿಗರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಆದರೆ ಪ್ರವಾಸಿ ಮಹಿಳೆಯರೆಲ್ಲರೂ ತಮ್ಮ ಅನುಭವಗಳೆಲ್ಲವನ್ನು ಬರಹದ ರೂಪಕ್ಕಿಳಿಸುವುದಿಲ್ಲ. ಕೆಲವರು ನೋಡಿ ಅನುಭವಿಸಿದರೆ, ಸಾಹಿತ್ಯ ಅಭಿರುಚಿ ಇರುವವರು ಬರಹದ ರೂಪದಲ್ಲಿ ದಾಖಲಿಸುತ್ತಿದ್ದಾರೆ. ಆಧುನಿಕ ಪೂರ್ವ ಭಾರತದಲ್ಲಿ ಪ್ರವಾಸ ಎನ್ನುವುದು 'ತೀರ್ಥಯಾತ್ರೆ' ಎನ್ನುವ ಪರಿಕಲ್ಪನೆಯಾಗಿ ಹೆಚ್ಚು ಪ್ರಚಲಿತದಲ್ಲಿತ್ತು. 'ಯಾತ್ರೆ' ಅನ್ನುವುದು ದೇವಾಲಯಗಳಿಗೆ ಮಾತ್ರ ಸೀಮಿತವಾಗಿತ್ತು. ಇಳಿವಯಸ್ಸಿನಲ್ಲಿ ಪುಣ್ಯಕ್ಷೇತ್ರಗಳಿಗೆ ಹೋಗಿ ಪವಿತ್ರ ನದಿಗಳಲ್ಲಿ ಸ್ನಾನ ಮಾಡಿ ದೇವರ ದರ್ಶನ ಮಾಡಿಕೊಂಡು ಬರುವುದರಿಂದ ಮುಕ್ತಿ

ದೊರೆಯುವುದೆಂಬ ನಂಬಿಕೆಯಿತ್ತು. ಆಧುನಿಕ ತೀರ್ಥಯಾತ್ರೆಯೂ ಸಂಪ್ರದಾಯಿಕವಾದ ವಿನೂತನ ಉದ್ದೇಶದ ಪ್ರವಾಸ ಕಥನಗಳು ಹೆಚ್ಚು ಪ್ರಚಲಿತವಾಗಿವೆ. ದೇಶದ ಅಭಿವೃದ್ಧಿ ಮತ್ತು ವಿಭಿನ್ನ ಸಂಸ್ಕೃತಿಗಳನ್ನು ಅನಾವರಣಗೊಳಿಸುವುದಕ್ಕಾಗಿ ಪ್ರವಾಸ ಸಾಹಿತ್ಯ ಸಹಾಯವಾಗುತ್ತದೆ. ಒಂದು ರಾಜ್ಯದ ಜನರು ಅಲ್ಲಿನ ನಿಸರ್ಗ, ಆಡಳಿತ, ರಾಜಕೀಯ, ಧಾರ್ಮಿಕ ವಿಚಾರಗಳನ್ನು ಅರಿತುಕೊಳ್ಳಲು ಪ್ರವಾಸಗಳು ರೂಪಗೊಂಡವು. ಮಹಿಳಾ ಲೇಖಕಿಯರು ಭಾರತದ ಉದ್ದಗಲಕ್ಕೂ ಸುತ್ತಿ, ತಮ್ಮ ದೃಷ್ಟಿಕೋನಕ್ಕೆ ಪೂರಕವಾಗಿ ಸಂದರ್ಶನ ಮಾಡಿ, ಆಯಾ ರಾಜ್ಯಗಳ ಸಮಗ್ರ ಮಾಹಿತಿಯನ್ನು ಕೃತಿಗಳಲ್ಲಿ ದಾಖಲಿಸಲು ಪ್ರಯತ್ನಿಸಿದ್ದಾರೆ.

ದೇಶೀಯ ಮಹಿಳಾ ಪ್ರವಾಸಿಗರಲ್ಲಿ ಹವ್ಯಾಸಿ, ವೃತ್ತಿಪರರಿಗಿಂತಲೂ ವಿಭಿನ್ನ ಪ್ರವೃತ್ತಿಯ ಲೇಖಕಿಯರಿದ್ದಾರೆ. ಅದರಲ್ಲಿ ವಿದ್ಯಾರ್ಥಿನಿಯರು, ಸಂಶೋಧಕಿಯರು, ಸಾಹಿತಿಗಳು, ಚಿಂತಕಿಯರು, ಪತ್ರಕರ್ತೆಯರು, ಕುಶಲಕರ್ಮಿಗಳು, ವೈದ್ಯರು, ಕಲಾವಿದರು, ರಾಜಕಾರಣಿಗಳು ಜ್ಞಾನಾರ್ಜನೆಗಾಗಿ, ವಿವಿಧ ಕಾರಣಗಳಿಗೆ ಪ್ರವಾಸ ಕೈಗೊಳ್ಳುವವರಿದ್ದಾರೆ. ದೇಶೀಯ ಪ್ರವಾಸದ ದಿನಗಳು ಅವಧಿಯ ಲೆಕ್ಕದಲ್ಲಾದರೂ, ದಿನಗಳ ಲೆಕ್ಕದಲ್ಲಾದರೂ ಇರಬಹುದು. ತಮಗೆ ಇಷ್ಟಬಂದ ದಿನಗಳಲ್ಲಿ ಮತ್ತೆ ಮತ್ತೆ ಹೋಗಿಬರಬಹುದು. ಯಾವುದೇ ಪೂರ್ವ ತಯಾರಿ ಇಲ್ಲದೆಯೂ ದೇಶಿ ಪ್ರವಾಸ ಮಾಡಬಹುದಾಗಿದೆ. ಕನ್ನಡ ಮಹಿಳಾ ಪ್ರವಾಸಗಳನ್ನು ಗಮನಿಸಿದರೆ, ಹೆಚ್ಚಾಗಿ ರೈಲು, ಬಸ್, ಕಾರುಗಳಲ್ಲಿ ಪಯಣ ಮಾಡಿದ್ದಾಗಿ ಬರೆದುಕೊಂಡಿದ್ದಾರೆ. ಉತ್ತರ ಭಾರತದ ಪ್ರವಾಸಕ್ಕೂ ರೈಲಿನ ಪಯಣವೇ ನೆಚ್ಚಿನ ಸಾರಿಗೆಯಾಗಿದೆ. ವಿಮಾನ ಸೌಲಭ್ಯವಿದ್ದರೂ ಅದರ ವೆಚ್ಚಕ್ಕೆ ಪ್ರವಾಸವೇ ಪೂರ್ಣಗೊಳಿಸಬಹುದೆಂದು ರೈಲನ್ನೇ ಆಶ್ರಯಿಸಿದ್ದಾರೆ. ಪ್ರವಾಸ ಮಾಡಿದ ರಾಜ್ಯಗಳಲ್ಲಿ ಕಾರನ್ನು ಬಾಡಿಗೆ ಪಡೆದು ಸ್ಥಳಗಳನ್ನು ಸಂದರ್ಶಿಸಿದ್ದಾರೆ. ಆರಂಭದ ಮಹಿಳಾ ಪ್ರವಾಸಿಗರು ಪೂರ್ವ ತಯಾರಿಯಾಗಿ ದೇಶೀಯ ಪ್ರವಾಸ ಕಥನಗಳನ್ನು ಓದಿದವರು, ಅದರ ಕಷ್ಟ ಸುಖಗಳನ್ನು ಅರಿತು, ಪ್ರವಾಸಕ್ಕೆ ಕೈಗೊಳ್ಳಬೇಕಾದ ಮುಂಜಾಗ್ರತೆಯನ್ನು ವಹಿಸುತ್ತಾರೆ. ಹೀಗಾಗಿ ಸ್ವದೇಶ ಪ್ರವಾಸ ಮಾಡುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಸ್ವತಂತ್ರವಾಗಿ ಸ್ವಂತ ದುಡ್ಡಿನಲ್ಲಿ ಪ್ರವಾಸ ಮಾಡುವವರು ಒಂದು ಕಡೆಯಾದರೆ, ಕರ್ನಾಟಕ ಸಾಹಿತ್ಯ ಅಕಾಡಮಿ, ಪ್ರವಾಸೋದ್ಯಮ ಇಲಾಖೆಯು ಕರೆಯುವ ಯೋಜನೆಗಳಿಗೆ ಒಳಪಟ್ಟು ಪ್ರವಾಸ ಮಾಡುವವರು ಇದ್ದಾರೆ. ಅಕಾಡಮಿಯ ಯೋಜನೆಗಳು ಸೂಚಿಸಿದ ಪ್ರದೇಶವನ್ನು ಕಾಲಮಿತಿಯೊಳಗೆ ಸುತ್ತಬೇಕಾಗುತ್ತದೆ. ತಮ್ಮ ಅನುಭವವನ್ನು ಕೃತಿ ರೂಪದಲ್ಲಿ ಕೊಡಬೇಕಾಗುತ್ತದೆ. ಸ್ವಂತ ಖರ್ಚಿನಲ್ಲಿ ಹೋದವರಿಗೆ ಈ ಮಿತಿಗಳು ಇರುವುದಿಲ್ಲ. ದೇಶೀಯ ಮಹಿಳಾ ಪ್ರವಾಸ ಕಥನಗಳನ್ನು ಗಮನಿಸುವುದಾದರೆ, ಶಾಂತಾದೇವಿ ಮಾಳವಾಡ ಅವರ 'ಶ್ರೀಗಿರಿಯಿಂದ ಹಿಮಗಿರಿಗೆ', ಎಚ್.ಎಸ್.ಅನುಪಮಾ ಅವರ 'ಅಂಡಮಾನ್ ಕಂಡ ಹಾಗೆ', ಅಂಜಲಿ ರಾಮಣ್ಣ ಅವರ 'ಬೆಳಕಿನ ಸೆರಗು', ಎಚ್.ಎನ್.ಆರತಿ ಅವರ 'ಬೆಟ್ಟದಡಿಯ ಬಿದಿರ ಹೂ', ತ್ರಿವೇಣಿ ಶಿವಕುಮಾರ್ ಅವರ 'ಬಹುರೂಪೀ ಭಾರತ', ತೇಜಸ್ವಿನಿ ಬಿ.ಯಕ್ಕುಂಡಿಮಠರ 'ತಿರೆಯ

ಮೇಲಣ ಸ್ವರ್ಗ', ಹೊ.ನಾಗರತ್ನ ಅವರ 'ನಿಸರ್ಗ ಸ್ವರ್ಗ ಅಂಡಮಾನ್', ನೇಮಿಚಂದ್ರರ 'ಒಂದು ಕನಸಿನ ಪಯಣ', ಪ್ರಜ್ಞಾ ಮತ್ತಿಹಳ್ಳಿಯವರ 'ದೇವರಸ್ವಂತ ನಾಡಿನಲ್ಲಿ', ರುಕ್ಮಿಣಿ ಗಿರಿಮಾಜಿಯವರ 'ಬೆಂಗಳೂರಿನಿಂದ ಬದರೀನಾಥಕ್ಕೆ', ಸಂಧ್ಯಾ.ಎಸ್. ಅವರ 'ಹಲವು ಕಾಲಗಳ ನಾಡು: ಗುಜರಾತ್', ಸುಮಂಗಲಾ ಎಸ್.ಮುಮ್ಮಿಗಟ್ಟಿ ಅವರ 'ಅದ್ಭುತ ಜೀವವಾಸ ಅಂಡಮಾನ್', ಸುಮಿತ್ರಾಬಾಯಿಯವರ 'ಬ್ರಹ್ಮಪುತ್ರದ ಕಣಿವೆಯಲ್ಲಿ', ಸುಧಾ ಚಿದಾನಂದಗೌಡ ಅವರ 'ಸಮನ್ವಿತೆ ಗೋಮಾಂತ', ಶಮಂತ ಅವರ 'ಕದನ ಕಾಶ್ಮೀರ', ಹೇಮಮಾಲಾ.ಬಿ. ಅವರ 'ಚಾರ್‌ಧಾಮ್', ಮುಂತಾದ ಕೃತಿಗಳು ಮುಖ್ಯವಾಗಿವೆ. ದೇಶದ ಬಹುತೇಕ ರಾಜ್ಯಗಳನ್ನು ಸಂದರ್ಶಿಸಿದ ಲೇಖಕಿಯರು ಸಮರ್ಥವಾಗಿ ಪ್ರವಾಸ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಕನ್ನಡ ಮಹಿಳಾ ಪ್ರವಾಸ ಕಥನಗಳಲ್ಲಿ ದೇಶೀಯ ಪ್ರವಾಸ ಕಥನಗಳೇ ಹೆಚ್ಚಿನ ಸಂಖ್ಯೆಯಲ್ಲಿ ರಚನೆಗೊಂಡಿವೆ. ಭಾರತದ ಯಾವುದೇ ರಾಜ್ಯಕ್ಕೆ ಹೋದರು ಧಾರ್ಮಿಕ ಕ್ಷೇತ್ರಗಳು ಪ್ರವಾಸದ ಆಕರ್ಷಣೀಯ ತಾಣಗಳಾಗಿವೆ. ದೇವಾಲಯಗಳ ಹೊರತಾಗಿ ದೇಶೀಯ ಪ್ರವಾಸಗಳೇ ಇಲ್ಲವೆನ್ನುವಷ್ಟರ ಮಟ್ಟಿಗೆ ಆಕ್ರಮಿಸಿಕೊಂಡಿವೆ. ಎರಡನೇ ಆದ್ಯತೆ ನೈಸರ್ಗಿಕ ಸಂಪತ್ತಿನ ದರ್ಶನ, ನಂತರದಲ್ಲಿ ಮಹಾನಗರಗಳು, ವಿಶಿಷ್ಟ ಆಚರಣೆಗಳು, ಕಲೆ, ಸಂಸ್ಕೃತಿ, ಬುಡಕಟ್ಟು ಆಚರಣೆ, ವಸ್ತುಸಂಗ್ರಾಹಲಯ ಮುಂತಾದವುಗಳ ವಿವರಗಳಿರುತ್ತವೆ. ಇವುಗಳ ಜೊತೆಗೆ ಭಾರತದಲ್ಲಿನ ವಿಶ್ರಾಂತಿ ಧಾಮಗಳು, ಹವಾಮಾನ ಕೇಂದ್ರಗಳು, ಪ್ರಾಕೃತಿಕ ದೃಶ್ಯಾವಳಿಗಳು, ಸ್ಮಾರಕಗಳು, ಜನಜೀವನದಲ್ಲಿ ಹಾಸುಹೊಕ್ಕಾದ ಹಬ್ಬ ಹರಿದಿನಗಳು, ಆಚಾರಗಳು, ನಂಬಿಕೆಗಳು, ಗ್ರಾಮೀಣ ಸೊಗಡು ಮುಂತಾದವುಗಳ ಬಗ್ಗೆ ವಿವರಿಸಿದ್ದಾರೆ. ಸ್ವದೇಶಿ ಮಹಿಳಾ ಪ್ರವಾಸ ಕಥನಗಳು ಬುಡಕಟ್ಟುಗಳ ಸಂಸ್ಕೃತಿಯ ಬಗೆಗಿನ ಮಾಹಿತಿ ನೀಡುವಲ್ಲಿ ಸಫಲವಾಗಿವೆ. ಆದಿವಾಸಿ ಮತ್ತು ಬುಡಕಟ್ಟು ಸಂಸ್ಕೃತಿಯ ಬಗೆಗಿನ ಮಾಹಿತಿ ನೀಡುವಲ್ಲಿ ಆಸಕ್ತಿ ತೋರುತ್ತಾ, ಜನಪದ ಸಂಸ್ಕೃತಿಯ ಜೀವನಕ್ರಮದ ಒಳನೋಟಗಳನ್ನು ಬಿಂಬಿಸಿವೆ. ಬುಡಕಟ್ಟುಗಳ ಆಚೆಯೂ ಸಾಮಾಜಿಕವಾಗಿ ವಿವಿಧ ರಾಜ್ಯಗಳಲ್ಲಿ ಮಹಿಳಾ ಸ್ಥಿತಿಗತಿಗಳು, ಸ್ತ್ರೀ ಪ್ರಾತಿನಿಧ್ಯತೆ, ಸ್ತ್ರೀಯರ ಸ್ಥಾನಮಾನಗಳನ್ನು ಕುರಿತು ತೌಲನಿಕವಾಗಿ ವಿವರಿಸಿದ್ದಾರೆ. ಇದರಿಂದಾಗಿ ಸಾಂಸ್ಕೃತಿಕವಾಗಿ ಮಹಿಳೆಯರು ರಾಜ್ಯದಿಂದ ರಾಜ್ಯಕ್ಕೆ ಹೇಗೆ ಭಿನ್ನವೆಂದು ತಿಳಿಯಬಹುದಾಗಿದೆ. ಅಲ್ಲದೇ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಹೋರಾಡಿದ ಮಹಿಳೆಯರು, ಶೋಷಣೆಗೆ ಒಳಪಟ್ಟ ಮಹಿಳೆಯರ ಬದುಕನ್ನು ದಾಖಲಿಸಿದ್ದಾರೆ. ಕಾಶ್ಮೀರದಲ್ಲಿ ಮಹಿಳೆಯರು ರಕ್ಷಕರಿಂದಲೇ ಅತ್ಯಾಚಾರಕ್ಕೆ ಒಳಪಟ್ಟಿರುವ ಸಂಗತಿಗಳ ಬಗ್ಗೆ ವಿರೋಧ ವ್ಯಕ್ತಪಡಿಸುವ ಮಹಿಳಾ ಧ್ವನಿಗಳನ್ನು ಕಾಣುತ್ತೇವೆ.

ಕನ್ನಡದ ಪ್ರವಾಸ ಕಥನಗಳು ಕಂಡದ್ದನ್ನು, ಅನುಭವಕ್ಕೆ ಬಂದದ್ದನ್ನು, ವಿವರಿಸುವ ಜೊತೆಗೆ ಮಾನವತಾವಾದಿ, ಸಮಾಜವಾದಿ, ಸಮತಾವಾದಿ ನಿಲುವುಗಳನ್ನು ಹಾಗೂ ಬಂಡವಾಳ ಶಾಹಿ ವ್ಯವಸ್ಥೆಗೆ ವಿರುದ್ಧದ ಧ್ವನಿಯನ್ನು ಪ್ರವಾಸದ ಸಂದರ್ಭದಲ್ಲಿ ನಿರೂಪಿಸುತ್ತಾರೆ. ಲೇಖಕಿಯರ

ಭಿನ್ನ ಪ್ರವೃತ್ತಿಗಳಿಂದಾಗಿಯೂ ಆಯಾ ಕ್ಷೇತ್ರದವರು ಅದರಲ್ಲಿ ಹೆಚ್ಚು ಸಂಶೋಧಕರಂತೆ ವಿಶ್ಲೇಷಣೆಗೆ ಇಳಿಯುತ್ತಾರೆ. ದೇಶೀಯ ಪ್ರವಾಸದ ಅನುಭವಗಳನ್ನು ದಾಖಲಿಸಿದ ಲೇಖಕಿಯರ ಬರಹಗಳಲ್ಲಿ ಎದ್ದು ಕಾಣುವಂತಹದ್ದು ಸ್ತ್ರೀ ಸಂವೇದನೆ, ಸ್ತ್ರೀಪರ ಕಾಳಜಿಗಳು ಮತ್ತು ಸಂಸ್ಕೃತಿ ಬಗೆಗಿನ ತೌಲನಿಕ ದೃಷ್ಟಿಕೋನಗಳಿವೆ. ಇಂತಹ ಸಂಗತಿಗಳಿಂದಾಗಿಯೇ ದೇಶೀಯ ಮಹಿಳಾ ಪ್ರವಾಸ ಕೃತಿಗಳು ಜಾಗತಿಕ ಮನ್ನಣೆ ಪಡೆಯುತ್ತಿವೆ. ಕೆಲವು ವೈವಿಧ್ಯಮಯ ಸ್ವದೇಶಿ ಕೃತಿಗಳನ್ನು ಗಮನಿಸುವುದಾದರೆ, ಪಿ.ಆರ್.ಜಯಲಕ್ಷ್ಮಮ್ಮನವರ 'ಬದರೀ ಯಾತ್ರೆ'ಯು ಬದರಿ ಯಾತ್ರೆ ಮಾಡುವವರಿಗೆ ಕೈಪಿಡಿಯಂತಿದೆ. ಈ ಕೃತಿಯಲ್ಲಿ ಮನಸ್ಸಿನ ನೆಮ್ಮದಿ, ಸಂತೋಷ, ಇಹಪರ ಸಾಧನೆಗೆ ಒತ್ತು ನೀಡುತ್ತಾರೆ. ಶಾಂತಾದೇವಿ ಮಾಳಾವಾಡ ಅವರ 'ಶ್ರೀಗಿರಿಯಿಂದ ಹಿಮಗಿರಿಗೆ' ಇದೊಂದು ಬಿಡಿ ಪ್ರವಾಸ ಕಥನಗಳ ಸಂಗ್ರಹವಾಗಿದೆ. ಕಾಶ್ಮೀರ, ಕನ್ಯಾಕುಮಾರಿ, ಕೇರಳ, ಸಿಮ್ಲಾ, ಚಂಡೀಗಢ, ಗೌಹತಿ, ನಂದಿಬೆಟ್ಟ, ಕೆಮ್ಮಣ್ಣುಗುಂಡಿಗಳ ನೈಸರ್ಗಿಕವಾದ ಸೌಂದರ್ಯದ ವರ್ಣನೆಯಿದೆ. ತ್ರಿವೇಣಿ ಶಿವಕುಮಾರ್ ಅವರ 'ಹವಳದ ದ್ವೀಪಗಳಲ್ಲಿ' ಅಂಡಮಾನ್ ಮತ್ತು ಮಾರಿಷಸ್‌ನ ಸಾಂಸ್ಕೃತಿಕ, ನೈಸರ್ಗಿಕ ಚಿತ್ರಣ ಕಾಣಬಹುದಾಗಿದೆ. ಎಂ.ಕೆ. ಇಂದಿರಾ ಅವರ 'ಅನುಭವ ಕುಂಜ' ೧೭ ದಿನಗಳ ದಕ್ಷಿಣ ಭಾರತದ ಕಥನವಾಗಿದೆ. ತಿರುಪತಿಯಲ್ಲಿ ಭಕ್ತರ ಪಾಡು, ಪಾಂಡಿಚೇರಿಯಲ್ಲಿನ ಆಧ್ಯಾತ್ಮಿಕ ವ್ಯಕ್ತಿಗಳು, ತಾಂಜಾವೂರು, ಶ್ರೀರಂಗ, ಬೃಹದೀಶ್ವರ, ರಾಮೇಶ್ವರವನ್ನು ಸಂದರ್ಶಿಸಿದ ವಿವರಗಳಿವೆ. ಬಿ.ಲೀಲಾವತಿ ಭಟ್ ಅವರ 'ಭೂತ–ನಾಗರ ನಡುವೆ' ಮತ್ತು 'ಶಕ್ತಿಯ ಶೋಧನೆಯಲ್ಲಿ' ಕೃತಿಗಳು ಕರ್ನಾಟಕ ಪ್ರವಾಸ ಕೃತಿಗಳಾಗಿವೆ. ಮಾರ್ತಾ ಆ್ಯಪ್ಟನ್ ಎಂಬ ಸಂಶೋಧಕಿ ಜೊತೆಗೂಡಿ ತುಳುನಾಡಿನ ಭೂತಾರಾಧನೆ, ನಾಗಾರಾಧನೆಗಳ ಕುರಿತು ಅಧ್ಯಯನ ಮಾಡಿದ್ದಾರೆ. ಎಚ್.ಎಸ್.ಅನುಪಮಾ ಮತ್ತು ಸುಮಂಗಲಾ ಎಸ್.ಮುಮ್ಮಿಗಟ್ಟಿ ಅವರು ಅಂಡಮಾನ್ ಪ್ರವಾಸ ಮಾಡಿದ್ದು ಅಲ್ಲಿನ ಬುಡಕಟ್ಟು ಜನಾಂಗಗಳಲ್ಲಿ ಮಹಿಳೆಯರ ಸ್ಥಿತಿಗತಿಗಳ ಕುರಿತು, ಜಾಗತೀಕರಣ ಅವರನ್ನು ಬಳಸಿಕೊಳ್ಳುವುದನ್ನು ವಿಶಿಷ್ಟವಾಗಿ ದಾಖಲಿಸುತ್ತಾರೆ. ಪ್ರಜ್ಞಾಮತ್ತಿಹಳ್ಳಿ ಅವರ 'ದೇವರ ಸ್ವಂತನಾಡಿನಲ್ಲಿ' ಎಂಬ ಕೃತಿಯಲ್ಲಿ ಕೇರಳದ ಧಾರ್ಮಿಕ ವಿಚಾರಗಳು, ರಮ್ಯತಾಣಗಳು ಬಗ್ಗೆ ವಿವರಿಸಿದ್ದಾರೆ. ಮಹಿಳಾ ಪ್ರಧಾನವಾದ ಈ ರಾಜ್ಯದಲ್ಲಿ ಆಧುನಿಕ ಪೂರ್ವದಲ್ಲಿ ಮಹಿಳೆಯರನ್ನು ಹೀನಾಯವಾಗಿ ಕಾಣುವ, ಲೈಂಗಿಕತೆಗಳಿಗೆ ಸೀಮಿತವಾಗಿ ನೋಡುವ ಕೆಲವು ಪ್ರದೇಶಗಳ ಬಗ್ಗೆ ವಿವರವಾಗಿ ಬರೆಯುತ್ತಾರೆ. ಬಿ.ಎನ್.ಸುಮಿತ್ರಾಬಾಯಿಯವರ 'ಬ್ರಹ್ಮಪುತ್ರದ ಕಣಿವೆಯಲ್ಲಿ' ಉತ್ತರಭಾರತದ ಕುರಿತಾಗಿ ಚಾರಿತ್ರಿಕವಾಗಿಯೂ, ಧಾರ್ಮಿಕವಾಗಿಯೂ, ಮಹಿಳೆಯನ್ನು ಪ್ರತಿನಿಧಿಸುವ ಕೃತಿಯಾಗಿ ಮುಖ್ಯವಾಗಿದೆ.. ಸುಧಾ ಚಿದಾನಂದಗೌಡ ಅವರು 'ಸಮನ್ವಿತೆ ಗೋಮಾಂತ' ಕೃತಿಯಲ್ಲಿ ಗೋವಾದ ಮಹಿಳೆಯರ ಜೀವನ, ಉದ್ಯೋಗ, ಆಚರಣೆ, ಸಂಸ್ಕೃತಿಯನ್ನು ದಾಖಲಿಸುತ್ತಾರೆ. ಶಮಂತ ಅವರು 'ಕದನ ಕಾಶ್ಮೀರ' ಕೃತಿಯಲ್ಲಿ ಕಾಶ್ಮೀರದ ಕಣಿವೆಗಳಲ್ಲಿ ಮಹಿಳೆಯರ ಬದುಕು ಊತು ಹೋದ ಬಗ್ಗೆ ಹೇಳುತ್ತಾರೆ. ಇವರ 'ಗಿರಿಸ್ನೇಹ' ಕೃತಿಯಲ್ಲಿ ಪ್ರವಾಸಿಗರ ಸ್ನೇಹಮಯ ಭಾವ, ಸಾಹಸ ಪ್ರದರ್ಶನ, ವಿಚಿತ್ರ ಸನ್ನಿವೇಶದಲ್ಲೂ ಉತ್ಸಾಹದಿಂದ ಹಿಮಾಲಯದ

ಗುರಿಯನ್ನು ಮುಟ್ಟಿದ ವಿಷಯಗಳಿವೆ. ಹೇಮಾಮಾಲಾ.ಬಿ. ಅವರ 'ಚಾರ್‌ಧಾಮ್' ಕೃತಿಯು ಹಿಮಾಲಯದ ನೈಸರ್ಗಿಕ ತಾಣ, ಕಣಿವೆಗಳು, ಅಲ್ಲಿನ ಸಾಮಾಜಿಕ ಸ್ಥಿತಿಗಳನ್ನು ದಾಖಲಿಸುತ್ತದೆ. ತೇಜಸ್ವಿನಿ ಬಿ.ಯಕ್ಕುಂಡಿಮಠ ಅವರು 'ತಿರೆಯ ಮೇಲಣ ಸ್ವರ್ಗ' ಕೃತಿಯಲ್ಲಿ ತೆಲಂಗಾಣ ರಾಜ್ಯದಲ್ಲಿನ ಮಹಿಳಾ ಕಾರ್ಮಿಕರು, ನೇಕಾರರು, ಉದ್ಯೋಗಿಗಳು, ಉದ್ಯಮಿಗಳನ್ನು ಸಂದರ್ಶಿಸಿದ ಅನುಭವಗಳನ್ನು ನಿರೂಪಿಸುತ್ತಾರೆ. ನಗರಗಳಿಂದ ಗ್ರಾಮೀಣ ಮಟ್ಟದ ಅಭಿವೃದ್ಧಿ ಯೋಜನೆಗಳು, ಆದರ್ಶಗ್ರಾಮದಲ್ಲಿ ಮಹಿಳಾ ಸದಸ್ಯರ ಪಾತ್ರಗಳನ್ನು ಕುರಿತು ವಿವರಿಸಿದ್ದಾರೆ. ಭಾರತದ ತುತ್ತತುದಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ರಾಜ್ಯಗಳಿಗೂ, ಪೂರ್ವ ಪಶ್ಚಿಮದ ಕರಾವಳಿ ತೀರಗಳಿಗೂ ಮಹಿಳಾ ಲೇಖಕಿಯರು ಪ್ರವಾಸ ಕೈಗೊಂಡು ಅಲ್ಲಿನ ಸಮಗ್ರತೆಯನ್ನು ದಾಖಲಿಸುವ ಸಾಹಸಗಾಥೆಯನ್ನು ಮೆರೆದಿದ್ದಾರೆ.

೪.೪. ವಿದೇಶಿ ಪ್ರವಾಸ ಕಥನಗಳು

ಭಾರತ ಸ್ವಾತಂತ್ರ್ಯಗೊಂಡ ನಂತರ ಶಿಕ್ಷಣ, ಉದ್ಯೋಗ, ಆಡಳಿತ, ರಾಜಕೀಯ, ವಸ್ತು ವಿನಿಮಯ, ಅಭಿವೃದ್ಧಿ, ಒಟ್ಟಾರೆ ಸಾಂಸ್ಕೃತಿಕ ತಿಳುವಳಿಕೆಯ ಕಾರಣಗಳಿಗಾಗಿ ಪ್ರವಾಸೋದ್ಯಮ ಇಲಾಖೆಯನ್ನು ಸ್ಥಾಪಿಸಿತು. ೧೯೬೦ರಲ್ಲಿ ಪ್ರವಾಸೋದ್ಯಮವನ್ನು ಭಾರತ ಸರ್ಕಾರವು ಗಂಭೀರವಾಗಿ ಪರಿಗಣನೆಗೆ ತೆಗೆದುಕೊಂಡಿತು. ಒಂದು ದೇಶವು ಮತ್ತೊಂದು ದೇಶದ ಸಾಂಸ್ಕೃತಿಕ ವಿನಿಮಯಕ್ಕಾಗಿ, ಜ್ಞಾನಾರ್ಜನೆಗಾಗಿ ವಿದೇಶಿ ಪ್ರವಾಸವನ್ನು ಮುಖ್ಯವಾಗಿ ಪರಿಗಣಿಸಿತು. ಭಾರತ ಬ್ರಿಟೀಷ್‌ರಿಂದ ಮುಕ್ತಗೊಂಡಿದ್ದರ ಫಲವಾಗಿ ಅಭಿವೃದ್ಧಿ ಪರಿಕಲ್ಪನೆಯನ್ನು ಹೊಸದಾಗಿ ರೂಪಿಸುವ ಜವಾಬ್ದಾರಿಯಿತ್ತು. ಹೀಗಾಗಿ ಪ್ರವಾಸೋದ್ಯಮ ಇಲಾಖೆ ವಿದೇಶಿ ದೇಶಗಳ ಅಧ್ಯಯನಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿತು. ಇದು ಬರುಬರುತ್ತಾ ಇಲಾಖೆಯ ಕಾರ್ಯವ್ಯಾಪ್ತಿ ವಿಶಾಲವಾಗುತ್ತ ಹೋಯಿತು. ಸ್ವಾತಂತ್ರ್ಯಪೂರ್ವದಲ್ಲಿದ್ದಂತಹ ವಿದೇಶ ಪಯಣಕ್ಕೆ ಇದ್ದಂತಹ ಕಟ್ಟುನಿಟ್ಟುಗಳು ಸಡಿಲಗೊಂಡವು. ಪ್ರಯಾಣ ಬೆಳಸುವವರಿಗೆ ಆಯಾ ದೇಶಗಳಲ್ಲಿ ವಿಶೇಷ ಆಹ್ವಾನಗಳನ್ನು, ಸೌಲಭ್ಯಗಳನ್ನು, ಆತಿಥ್ಯಗಳನ್ನು, ರಕ್ಷಣೆಗಳನ್ನು ನೀಡಲಾಯಿತು. ಈ ಹಿನ್ನೆಲೆಯಲ್ಲಿ ಮಹಿಳಾ ಪ್ರವಾಸಿಗರ ಸಂಖ್ಯೆಯು ವಿದೇಶಗಳಿಗೆ ಭೇಟಿಕೊಡುವವರ ಸಂಖ್ಯೆಯಲ್ಲಿಯೂ ಹೆಚ್ಚಳವಾಯಿತು. ಕನ್ನಡದಲ್ಲಿ ಮಹಿಳಾ ಪ್ರವಾಸಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿ ಪ್ರವಾಸ ಕಥನಗಳು ಸೇರಿವೆ. ಮಹಿಳಾ ಪ್ರವಾಸಿಗರು ಸಂಪೂರ್ಣ ಹಿಮಪ್ರದೇಶವಾದ, ಮಾನವ ವಾಸರಹಿತ ಅಂಟಾರ್ಟಿಕ್ ಖಂಡವನ್ನು ಹೊರತುಪಡಿಸಿ ಉಳಿದ ಖಂಡಗಳ ಬಹುತೇಕ ದೇಶಗಳಿಗೆ ಭೇಟಿ ನೀಡಿದ್ದಾರೆ. ಮಹಿಳಾ ಪ್ರವಾಸ ಕಥನಗಳನ್ನು ವಿಭಾಗಿಸಿ ನೋಡುವುದಾದರೆ ಏಷ್ಯಾ, ಯುರೋಪ್, ಅಮೇರಿಕಾ, ಆಸ್ಟ್ರೇಲಿಯಾ, ಆಫ್ರಿಕಾ ಖಂಡಗಳ ವೈವಿಧ್ಯತೆಯಿಂದಿರುವ ದೇಶಗಳಿಗೆ ಪ್ರವಾಸ ಕೈಗೊಂಡಿರುವುದನ್ನು ಗಮನಿಸಬಹುದಾಗಿದೆ.

ಸ್ವದೇಶದವರಲ್ಲಿದ್ದ ತೀರ್ಥಯಾತ್ರೆಗಳು ನಿಧಾನವಾಗಿ ಮನೋರಂಜನೆಯ ರೂಪಕ್ಕೆ ನಾಂದಿ ಹಾಡಿದವು. ಸಮುದ್ರವನ್ನು ದಾಟುವುದು ಅಪರಾಧವೆಂದು ತಿಳಿದು ವಿದೇಶಿ

ಪ್ರವಾಸಗಳನ್ನು ಮಾಡುತ್ತಿರಲಿಲ್ಲ. ಶಿಕ್ಷಣ ಮಟ್ಟ ಹೆಚ್ಚಾದಂತೆ, ಪರದೇಶಗಳು ಜಾಗತೀಕವಾಗಿ, ಔದ್ಯೋಗಿಕವಾಗಿ, ತಂತ್ರಜ್ಞಾನದ ಫಲವಾಗಿ ಮಾರುಕಟ್ಟೆಗಳು ವಿಸ್ತಾರವಾಗ ತೊಡಗಿದವು. ವಿದೇಶಿ ನೆಲದ ಅನುಭವಗಳನ್ನು ಪಡೆದುಕೊಳ್ಳುವುದು ತುಂಬಾ ಅವಶ್ಯವಾಗಿ ಕಂಡುಬಂದವು. 'ದೇಶ ಸುತ್ತಿ ನೋಡು, ಕೋಶ ಓದಿ ನೋಡು' ಎಂಬ ಗಾದೆ ಮಾತಿನಂತೆ, ಹಾಗೆಯೇ ತೀ.ನಂ.ಶ್ರೀ.ಯವರ 'ಮುಪ್ಪಿನ ಹಾರ ಹೆಗೆಲೇರದ ಮುನ್ನ ಕಿವಿಗೊಡು ಓ ಪ್ರೇಕ್ಷಕ ರಸಿಕನೆ ಪ್ರವಾಸದ ಕರೆಗೆ' ಎನ್ನುವಂತೆ ಜಗತ್ತನ್ನು ಕಾಣುವ, ಅನುಭವಿಸುವ, ಆನಂದಿಸುವ, ವಿಚಾರಿಸುವ, ತರ್ಕಕ್ಕೆ ಒಳಪಡಿಸಲು ಮುಂದಾದರು. ಹೊರದೇಶಗಳ ಆಚಾರ ವಿಚಾರಗಳ ಬಗ್ಗೆ ತಿಳಿಯಲು ಉತ್ಸುಕರಾದರು. ೨೦ನೇ ಶತಮಾನದಲ್ಲಿ ನಾನಾ ಕಾರಣಗಳಿಂದ ಜನ ಸಾಮಾನ್ಯರು ಸಾಹಿತಿಗಳು, ಕಲಾವಿದರು ಶೈಕ್ಷಣಿಕ ಸಾಂಸ್ಕೃತಿಕ ಅಧ್ಯಯನಕಾರರು ವಿದೇಶಗಳಿಗೆ ಹೋಗಿಬರಲು ಆಸಕ್ತರಾದರು. ಇವರಿಗೆ ಸಂಘ, ಸಂಸ್ಥೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಆಹ್ವಾನಗಳನ್ನು ಕೊಟ್ಟು ಕರೆಸಿಕೊಂಡವು. ಉನ್ನತ ವಿದ್ಯಾಭ್ಯಾಸಕ್ಕಾಗಿ ಹೋಗಿ ಬರುವ ವಿದ್ಯಾರ್ಥಿಗಳು, ಉದ್ಯೋಗ ಹರಸಿ ಹೋಗುವ ಇಂಜಿನಿಯರ್‌ಗಳು, ವೈದ್ಯರು, ವಿಜ್ಞಾನಿಗಳು, ತಂತ್ರಜ್ಞಾನಿಗಳು ಹೀಗೆ ವಿದೇಶಗಳು ಪ್ರತಿಭಾವಂತ ಯುವಜನತೆಯನ್ನು ಕೈಬೀಸಿ ಕರೆದವು. ಇವುಗಳೇ ಕನ್ನಡ ಪ್ರವಾಸ ಕಥನಗಳನ್ನು ರಚಿಸಲಿಕ್ಕೆ ಮುಖ್ಯ ಕಾರಣವಾದವು. ವಿದೇಶದಲ್ಲಿ ನೆಲಸಿದ ಮಕ್ಕಳು ತಮ್ಮ ತಂದೆ ತಾಯಿಯನ್ನು ಕರೆದುಕೊಂಡು ಹೋಗಿದ್ದರ ಫಲವಾಗಿ ಇರುವಷ್ಟು ಕಾಲ ಅಲ್ಲಿನ ಇತಿಹಾಸ, ಸಂಸ್ಕೃತಿ, ಆಚರಣೆಗಳ ಅನುಭವದ ಬಗ್ಗೆ ಕೃತಿಗಳಲ್ಲಿ ದಾಖಲಿಸಿದರು. ಈ ಮೇಲಿನ ಅಂಶಗಳು ಪುರುಷರಿಗಿಂತಲೂ ಹೆಚ್ಚು ಮಹಿಳಾ ಲೇಖಕಿಯರಿಗೆ ವರದಾನವಾಗಿ ಕಂಡುಬಂದವು.

ಕನ್ನಡದಲ್ಲಿ ೧೯೩೭ರಲ್ಲಿ ಬಂದ ರಾಣಿ ಚನ್ನಾಜಮ್ಮಣಿ ಅವರ 'ನನ್ನ ಪ್ರಪಂಚ ಸಂಚಾರ' ಮೊದಲ ಮಹಿಳಾ ವಿದೇಶಿ ಪ್ರವಾಸ ಕಥನವಾಗಿದೆ. ಇದರಲ್ಲಿ ಅನೇಕ ದೇಶಗಳನ್ನು ಸುತ್ತಾಡಿದ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಐತಿಹಾಸಿಕವಾದ ಚಹರೆ ಈ ಕೃತಿಗಿದೆ. ನಂತರದಲ್ಲಿ ಅನುಪಮಾ ನಿರಂಜನ, ಶಾಂತಾದೇವಿ ಮಾಳವಾಡ, ಸುಧಾಮೂರ್ತಿ, ಹೇಮಲತಾ ಮಹಿಷಿ, ಪದ್ಮಾಶಣೈ, ರಾಜಾಮ್ಮಣಿ ನಾಗರಾಜರಾವ್ ಅವರ ಕಥನಗಳು ಮಹಿಳೆಯರಿಗೆ ವಿದೇಶಿ ಪ್ರವಾಸ ಕೈಗೊಳ್ಳಲು ಹೆದ್ದಾರಿಯನ್ನು ಹಾಕಿಕೊಟ್ಟವು. ಮಹಿಳಾ ವಿದೇಶಿ ಪ್ರವಾಸಗಳಲ್ಲಿ ಮುಖ್ಯವಾಗಿ ಕಂಡುಬರುವುದು ಪ್ರವಾಸದ ಮುನ್ನ ಅವರಿಗಿದ್ದ ಆತಂಕಗಳು, ಪಾಸ್‌ಪೋರ್ಟ್ ಸಮಸ್ಯೆ, ವಿಮಾನ ನಿಲ್ದಾಣದಲ್ಲಿನ ಆತಂಕಗಳು, ಪ್ರವಾಸ ಮಾಡುವ ದೇಶಗಳ ಕುರಿತಾದ ಪುಸ್ತಕಗಳ ಅಭ್ಯಾಸ, ಊಟೋಪಚಾರಗಳ ಚರ್ಚೆ ಮುಂತಾದವುಗಳನ್ನು ನಿರೂಪಿಸಿರುತ್ತಾರೆ. ಪ್ರವಾಸ ಸಾಹಿತ್ಯದಿಂದ ಓದುಗರನ್ನು ಜ್ಞಾನ ಪ್ರಪಂಚಕ್ಕೆ ಕರದೊಯ್ಯಬೇಕಾದರೆ ಪೂರ್ವ ಯೋಜನೆಗಳು ಮುಖ್ಯವಾಗುತ್ತದೆ. ಪ್ರವಾಸಿಗರು ಪ್ರವಾಸ ಮಾಡುವ ತಾಣಗಳ ಬಗ್ಗೆ ಅಚ್ಚುಕಟ್ಟಾಗಿ ಓದಿ ತಿಳಿದಿರಬೇಕು. ಇಲ್ಲವಾದರೆ ಪ್ರವಾಸವೇ ತ್ರಾಸದಾಯಕವಾಗುತ್ತದೆ. ಕೆಲವು ವೇಳೆ ಅಜ್ಞಾತ ಸ್ಥಳಗಳಿದ್ದರೆ ಅಂತಹ ವಿಚಾರಗಳನ್ನು ಮೊದಲೆ ಮನಗಾಣಬೇಕು. ಆ ಕುರಿತು

ಎಚ್ಚರ ವಹಿಸಬೇಕು ಅಥವಾ ಅಲ್ಲಿನ ಸ್ಥಳೀಯರ ನೆರವಿನಿಂದ ಹೋಗಬೇಕಾಗುತ್ತದೆ. ವಿದೇಶ ಪ್ರವಾಸಕ್ಕೆ ಪೂರ್ವದಲ್ಲಿ ದೇಶ ವಿದೇಶದ ಸಮಕಾಲೀನ ಸಂದರ್ಭಗಳ ಮಾಹಿತಿಯ ಜೊತೆಗೆ, ದೇಶೀಯತೆಯ ಬಗ್ಗೆಯೂ ಸಮಗ್ರ ಮಾಹಿತಿ ಪ್ರವಾಸಿಗರಿಗೆ ಇರಬೇಕು. ಆಗದಾಗ ಮಾತ್ರ ವರ್ತಮಾನದ ವಿಚಾರಗಳನ್ನು ಕೃತಿಯಲ್ಲಿ ನಿರೂಪಿಸಲು ಸಹಕಾರಿಯಾಗುತ್ತದೆ.

ವಿದೇಶಿ ಮಹಿಳಾ ಪ್ರವಾಸಿಗಳು ಯುನೆಸ್ಕೋ ಸೇವೆಗಾಗಿಯೋ, ವಿವಿಧ ಸಾಹಿತ್ಯ ಸಂಘಗಳ ಮೂಲಕವೋ, ಸಾಂಸ್ಕೃತಿಕ ತಂಡಗಳ ಪರವಾಗಿಯೋ, ಅಕಾಡೆಮಿಗಳ ನೆರವಿನಿಂದಲೋ ಕೆಲವೊಮ್ಮೆ ಸ್ವಂತ ಖರ್ಚಿನಿಂದಲೋ ಪ್ರವಾಸ ಕೈಗೊಂಡಿರುತ್ತಾರೆ. ಹೀಗೆ ಹೋದ ಪ್ರವಾಸಿಗರಿಗೆ ಅಲ್ಲಿನ ಅಧ್ಯಯನ ಅಪೂರ್ಣವಾಗಿರುತ್ತದೆ. ಎಲ್ಲವೂ ಸಂಘ ಸಂಸ್ಥೆಗಳ ಪರಿಧಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಕಡಿಮೆ ಅವಧಿಯ ವೀಸಾ ದೊರೆತಿರುತ್ತದೆ. ಹವ್ಯಾಸಿಗರಂತೆ ತಮಗೆ ಅನಿಸಿದರ ಬಗ್ಗೆ ಸಂಶೋಧನೆ ಮಾಡಲು ಆಗುವುದಿಲ್ಲ. ಇಂತಹ ಕೃತಿಗಳಲ್ಲಿ ಮೇಲು ನೋಟದ ವಿವರವನ್ನು ಕೊಡಲು ಮಾತ್ರ ಸಾಧ್ಯವಾಗುತ್ತದೆ. ಆದರೆ ಒಂಟಿಯಾಗಿ ಪ್ರವಾಸ ಮಾಡಿದ ಲೇಖಕಿಯರಲ್ಲಿ ಈ ನಿರ್ಬಂಧಗಳಿರುವುದಿಲ್ಲ. ಅವರಲ್ಲಿನ ಆತ್ಮಸ್ಥೈರ್ಯವು ವಿದೇಶಿ ನೆಲವನ್ನು ಸಮಗ್ರ ಅಧ್ಯಯನ ಮಾಡಲು ನೆರವಾಗುತ್ತದೆ. ಕುಟುಂಬದ ಭೇಟಿಗೆ ಹೋದವರ ಪ್ರವಾಸ ಕೃತಿಗಳಲ್ಲಿ ನಿರ್ದಿಷ್ಟವಾದ, ಪ್ರಸಿದ್ಧವಾದ ಸ್ಥಳಗಳ ಬಗ್ಗೆ ವಿವರಿಸುತ್ತಾರೆ. ಮಹಿಳಾ ಪ್ರವಾಸಿಗರಲ್ಲಿ ಆಯಾ ದೇಶದ ಐತಿಹಾಸಿಕ, ಸಂಸ್ಕೃತಿಗಳ ಜೊತೆಗೆ ಅಲ್ಲಿನ ಕುಟುಂಬ ಪದ್ಧತಿ, ಮಹಿಳಾ ಲೋಕ, ಶೈಕ್ಷಣಿಕ, ಕಾರ್ಯಕ್ರಮಗಳು, ತಿಂಡಿ ತಿನಿಸುಗಳು, ಸಂಪ್ರದಾಯ ಆಚರಣೆಗಳು, ಉಡುಗೆ ತೊಡುಗೆಗಳ ಬಗ್ಗೆ ವಿವರಗಳಿರುತ್ತವೆ. ಹವ್ಯಾಸಿ ಪ್ರವಾಸಿ ಕಥನಗಳಂತೆ ವಿಶಾಲ ದೃಷ್ಟಿಕೋನಗಳು ವೃತ್ತಿಪರ ಪ್ರವಾಸ ಕಥನಗಳಲ್ಲಿ ಕಾಣಲಾರವು. ಏಕೆಂದರೆ ಕೌಟುಂಬಿಕ ಹಿನ್ನೆಲೆಯಿಂದ ಹೋದವರು ಸಂಪ್ರದಾಯಸ್ಥ ಮನೋಭಾವದವರೇ ಅಧಿಕವಾಗಿರುತ್ತಾರೆ. ಈ ಲೇಖಕಿಯರು ಹೊರದೇಶಗಳಲ್ಲಿ ಒಂಟಿಯಾಗಿ ವ್ಯವಹರಿಸುವುದಿಲ್ಲ. ಮಗನಿಂದಲೋ, ಸೊಸೆಯಿಂದಲೋ, ಮಕ್ಕಳಿಂದಲೊ ಇಲ್ಲವಾದರೆ ಪುಸ್ತಕಗಳ ನೆರವಿನಿಂದಲೊ ತಿಳಿದು ಬರೆಯುತ್ತಾರೆ. ದೇಶ, ವಿದೇಶಗಳಲ್ಲಿ ತೌಲನಿಕವಾಗಿ ಗುರುತಿಸುವ ಅಂಶಗಳು. ಭಾರತದ ಸಂಪ್ರದಾಯಸ್ಥ ವಿಚಾರಗಳನ್ನು ವಿದೇಶಿ ಸಂಸ್ಕೃತಿಗಳ ಬಗ್ಗೆ ಮುಖಾಮುಖಿಯಾಗಿಸಿ ಚರ್ಚಿಸುವುದನ್ನು ನೋಡಬಹುದು. ಮಹಿಳಾ ಪ್ರವಾಸಿಗರಿಗೆ ತೊಡಕಾಗುವುದು ಆಯಾ ದೇಶದ ಭಾಷೆಗಳು. ಸಾಮಾನ್ಯವಾಗಿ 'ವಿಶ್ವದ ಭಾಷೆ ಇಂಗ್ಲೀಷ್' ಎಂಬ ನಂಬಿಕೆಯಿದೆ. ಆದರೆ ಭಾರತದಂತೆಯೇ ಇತರ ದೇಶಗಳ ವೈವಿಧ್ಯಮಯ ಸಂಸ್ಕೃತಿಗಳನ್ನು ಹೊಂದಿವೆ. ಅಮೇರಿಕಾ, ಇಂಗ್ಲೆಂಡ್, ಆಸ್ಟ್ರೇಲಿಯಾದಂತಹ ದೇಶಗಳಲ್ಲಿ ಇಂಗ್ಲೀಷ್ ಭಾಷೆಯೇ ಪ್ರಧಾನವಾದರೆ, ಜಪಾನ್, ಜರ್ಮನಿ, ಚೀನಾ, ಅರಬ್, ಆಫ್ರಿಕಾ ಮುಂತಾದವುಗಳಲ್ಲಿ ಆಯಾ ದೇಶದಲ್ಲಿನ ಪ್ರಾದೇಶಿಕ ಭಾಷೆಗಳೇ ಆಡಳಿತ ಭಾಷೆಗಳಾಗಿವೆ. ಇಂತಹ ದೇಶಗಳಲ್ಲಿ ಇಂಗ್ಲೀಷ್ ಭಾಷೆ ಬಳಕೆಯಲಿಲ್ಲ. ಇಂತಹ ಕಡೆಗಳಲ್ಲಿ ಪ್ರವಾಸಿಗರು ಪ್ರಾದೇಶಿಕ ಭಾಷೆಗಳ ತೊಡಕನ್ನು ಅನುಭವಿಸಿದ್ದಾರೆ.

ಕನ್ನಡದಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆ ನೂರರ ಗಡಿ ತಲುಪಿದೆ. ಅವುಗಳಲ್ಲಿ ಅನುಪಮಾ ನಿರಂಜನರ 'ಅಂಗೈಯಲ್ಲಿ ಯುರೋ ಅಮೇರಿಕಾ', ನೇಮಿಚಂದ್ರರವರ 'ಪೆರುವಿನ ಪವಿತ್ರ ಕಣಿವೆಯಲ್ಲಿ', ಲತಾಗುತ್ತಿಯವರ 'ಯುರೋ ನಾಡಿನಲ್ಲಿ' ಮತ್ತು 'ನಾ ಕಂಡಂತೆ ಅರೇಬಿಯಾ', ವಿಜಯಾ ದಬ್ಬೆ ಅವರ 'ಉರಿಯ ಚಿಗುರ ಉತ್ಕಲೆ', ಸುಧಾಮೂರ್ತಿಯವರ 'ಅಟ್ಲಾಂಟಿಕದಾಚೆಗೆ', 'ಕಾವೇರಿಯಿಂದ ಮೆಕಾಂಗಿಗೆ; ಮತ್ತು 'ಹಕ್ಕಿಯ ತೆರೆಯಲಿ', ತ್ರಿವೇಣಿ ಶಿವಕುಮಾರ್ ಅವರ 'ದಿವ್ಯ ಮೌನದ ದೇಶದಲ್ಲಿ', ಸಾರಾ ಅಬೂಬಕರ್ ಅವರ 'ಐಷಾರಾಮದ ಆಳದಲ್ಲಿ', ಪಾರ್ವತಮ್ಮ ಮಹಾಲಿಂಗಶೆಟ್ಟಿಯವರ 'ಅಮೇರಿಕಾದ ಇತಿಹಾಸ ಮತ್ತು ಇಂದಿನ ಜನಜೀವನ', ವಾಗೀಶ್ವರಿ ಶಾಸ್ತ್ರೀಯವರ 'ಸಿರಿ ಸಿಂಗಾರದ ಸಿಂಗಾಪುರ', ಲಲಿತಾಶಾಸ್ತ್ರಿ ಅವರ 'ಉತ್ತರ ಅಮೇರಿಕಾದಲ್ಲಿ ಚಾತುರ್ಮಾಸ್ಯ', 'ಪರಮೇಶ್ವರಿ ಲೋಕೇಶ್ವರ್ ಅವರ 'ಅಮೇರಿಕಾದಲ್ಲಿ ಅರವತ್ತು ದಿನಗಳು', ಪದ್ಮಾಗುರುರಾಜ್ ಅವರ 'ಕಾಂಗೂರಗಳ ನಾಡಿನಲ್ಲಿ', ಪದ್ಮಾಶಣ್ಯೆರವರ 'ವಾಸ ಪ್ರವಾಸ', ಜಲಜಾ ಗಂಗೂರ ಅವರ 'ಅವನಿಯ ಅಪ್ಸರೆ ಅಮೇರಿಕಾ', ಜಾನಕಿ ಬ್ರಹ್ಮಾವರ ಅವರ 'ತಿರುಗಾಟದ ತಿರುಳು', ಇಂದಿರಾ ಶಿವಣ್ಣ ಅವರ 'ನಿಗೂಢಗಳ ನಿಚ್ಚಣಿಕೆ ಏರಿ' ಮತ್ತು ಹಾಲೆಂಡಿನಿಂದ ಲಂಡನ್‌ವರೆಗೆ', ಸುನೀತಾ ಶೆಟ್ಟಿಯವರ 'ಪ್ರವಾಸಿ ಹೆಜ್ಜೆಗಳು', ಮೀನಾ ಮೈಸೂರು ಅವರ 'ಎತ್ತಣಿಂದೆತ್ತ', ಶಶಿಕಲಾ ನಾಯಕ ಅವರ 'ವಿಶ್ವ ದರ್ಶನ', ಲೀಲಾ ಮಿರ್ಲೇಯವರ 'ಪ್ರವಾಸ', ಆಶಾದೇವಿ ನೂಲಾ ಅವರ 'ನನ್ನ ಪ್ರವಾಸ ಕಥನ', ಸುಭಾಷಿಣಿ ಅವರ 'ಜರ್ಮನಿಯ ಒಡಲಲ್ಲಿ', ಸುಶೀಲಾ ಕೊಪ್ಪರ್ ಅವರ 'ಪಡುವಣದ ಪತ್ರಮಾಲೆ', ದೇವಕಿ ಮೂರ್ತಿ ಅವರ 'ಅಮೇರಿಕಾ ಇಣುಕು ನೋಟ', ನೀಳಾದೇವಿ ಅವರ 'ನಾ ಕಂಡ ಆ ಖಂಡ', ಪ್ರೇಮಾಭಟ್ ಅವರ 'ಪಶ್ಚಿಮದತ್ತ ಪಯಣ', ರಾಜಲಕ್ಷ್ಮಿ ಗೋಪಾಲ್ ಅವರ 'ಅಮರಲೋಕದಲ್ಲಿ ಅಧ್ಯಾಪಕಿ', ಬಿ.ಎಸ್.ಶೈಲಜಾ ಅವರ 'ಸಫಾರಿ ಎಂಬ ಲಕ್ಷುರಿ', ಪ್ರಭಾಮೂರ್ತಿಯವರ 'ಹಸಿರು ಹವಳ', ಕುಲಶೇಖರಿಯವರ 'ಬೊಗಸೆ ಬುತ್ತಿ', ಉಮಾರಾವ್ ಅವರ 'ರಾಕೀ ಪರ್ವತಗಳ ನಡುವೆ ಕ್ಯಾಬರೆ', ಪ್ರಭಾಮೂರ್ತಿ ಅವರ 'ಕಾಲಗರ್ಭ' ಮುಂತಾದವುಗಳು ಕನ್ನಡದ ಪ್ರಮುಖ ವಿದೇಶಿ ಪ್ರವಾಸ ಕಥನಗಳಾಗಿ ಗಮನಸೆಳೆಯುತ್ತವೆ.

ವಿದೇಶಿ ಪ್ರವಾಸ ಸಾಹಿತ್ಯದ ವೈವಿಧ್ಯಗಳನ್ನು ಗಮನಿಸುವುದಾದರೆ, ವಿದೇಶ ಪ್ರವಾಸದಿಂದಾಗಿ ಅಲ್ಲಿನ ಸಮಾಜ ಸಂಸ್ಕೃತಿ ಪರಿಚಯವಾದ ಕಾರಣ ಮತ್ತು ವಿದೇಶಿ ಸಾಹಿತ್ಯ ಪ್ರಕಾರಗಳ ಮೇಲೆ ಗಾಢ ಪ್ರಭಾವನ್ನು ಬೀರಿವೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲೂ ಬದಲಾವಣೆ ಕಂಡುಬಂದವು. ವಿವಿಧ ರೀತಿಯ ಸಾಹಿತ್ಯ ಪ್ರಕಾರಗಳು ಸೃಷ್ಟಿಯಾದವು. ಹೊಸ ಪ್ರಯತ್ನಗಳಿಗೆ ಪ್ರೇರೇಪಿಸಿದವು. ಪುರುಷ ಪ್ರವಾಸ ಕಥನಗಳಿಗಿಂತ ಭಿನ್ನವಾಗಿ ಮಹಿಳಾ ಲೇಖಕಿಯರ ವೃತ್ತಿ ಪ್ರವೃತ್ತಿಗಳು, ಕೌಟುಂಬಿಕ, ಸಾಮಾಜಿಕ ಒತ್ತಡಗಳು ಭಿನ್ನವಾಗಿರುತ್ತವೆ. ಈ ಭಿನ್ನತೆಯಿಂದಾಗಿಯೇ ವಿದೇಶಿ ಪ್ರವಾಸ ಕಥನಗಳು ವೈವಿಧ್ಯಮಯವಾಗಿ ರಚನೆಗೊಳ್ಳಲು ಪೂರಕವಾಗಿವೆ. ಆದರೆ ಇವರಲ್ಲಿನ ಸಾಮಾನ್ಯ ಸಂಗತಿಯೆಂದರೆ ಸಾಹಿತ್ಯಾಭಿವ್ಯಕ್ತಿ. ಬೇರೆ ಬೇರೆ ದೇಶ ವಿದೇಶಗಳ ಸಂಸ್ಕೃತಿ

ಪರಿಚಯ ಮಾಡಿಕೊಳ್ಳುವಾಗ ನಮಗೆ ಅಲ್ಲಿಯ ಇತಿಹಾಸ, ಭೂಗೋಳಗಳ ಹಿನ್ನೆಲೆಗಳು ಅತೀ ಮಹತ್ವದ್ದಾಗಿ ಕಾಣುತ್ತವೆ. ಇವುಗಳನ್ನು ತಿಳಿದುಕೊಳ್ಳುವಾಗ ಅಲ್ಲಿಯ ಜನರ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಿತಿಗಳು ಸ್ಪಷ್ಟವಾಗಿ ಕಾಣುತ್ತವೆ. ಅವೆಲ್ಲದರ ಅಭ್ಯಾಸದಿಂದ ಇವುಗಳೊಂದಿಗಿನ ಮಾನವ ಸ್ವಭಾವಗಳು, ಚಲನವಲನಗಳು, ಅವರ ನೂರಾರು ಸಂಸ್ಕೃತಿಗಳನ್ನು ತಿಳಿದುಕೊಳ್ಳುವಂತೆ ಮಾಡುತ್ತವೆ. ಉದಾಹರಣೆಗೆ, ದೇಶದ ಸ್ಥಿತಿಗತಿಗಳು, ಗ್ರಾಮ ಪಟ್ಟಣಗಳು, ಯುದ್ಧದಾಳಿಗಳು, ಮಹಾನ್ ವ್ಯಕ್ತಿಗಳು, ರಾಷ್ಟ್ರದ ಘನತೆ ಗಾಂಭೀರ್ಯ, ಸಾಹಿತ್ಯ, ಸಾಹಿತಿಗಳು, ಭಾಷೆ, ಸಂಗೀತ, ನೃತ್ಯ, ಚಿತ್ರಕಲೆ, ಕರಕುಶಲ ಕಲೆಗಳು, ಚಲನಚಿತ್ರ, ರಂಗಮಂದಿರ, ಕಲಾಕಾರರು, ವಾಸ್ತು ಶಿಲ್ಪ, ವಸ್ತು ಸಂಗ್ರಹಾಲಯ, ಉದ್ದಿಮೆಗಳು, ಕಾರ್ಖಾನೆಗಳು, ಮಾರುಕಟ್ಟೆಯ ಯೋಜನೆಗಳು, ವಿಜ್ಞಾನ, ತಂತ್ರಜ್ಞಾನ, ಮುಂತಾದವುಗಳನ್ನು ಗುರುತಿಸಿಕೊಳ್ಳುತ್ತೇವೆ. ಈ ಎಲ್ಲ ವಿಷಯಗಳನ್ನು ಓದಲು, ಪರಿಚಯಿಸಿಕೊಳ್ಳಲು, ನಮ್ಮ ಸಂಸ್ಕೃತಿಯೊಂದಿಗೆ ಸಮಕಾಲೀನದಲ್ಲಿ ಚರ್ಚಿಸಿಕೊಳ್ಳಲು ಸಹಾಯವಾಗುತ್ತವೆ. ಈ ಎಲ್ಲ ಅನುಭವಗಳಿಂದ ಪ್ರವಾಸ ಸಾಹಿತ್ಯದ ಓದುಗರ ಜ್ಞಾನ ಶ್ರೀಮಂತವಾಗುತ್ತದೆ.

ವಿದೇಶಿ ಪ್ರವಾಸ ಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಪಡೆದಿರುವುದು ಅಮೇರಿಕಾ ದೇಶ. ಮಹಿಳಾ ಪ್ರವಾಸಿಗರು ಸಹ ಅಮೇರಿಕಾ ದೇಶವನ್ನು ಕುರಿತಂತೆ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಉನ್ನತ ವಿದ್ಯಾಭ್ಯಾಸ, ಒಳ್ಳೆಯ ಉದ್ಯೋಗ ಅವಕಾಶ, ವೈದ್ಯಕೀಯ ಸೌಲಭ್ಯಗಳು, ವ್ಯಾಪಾರ, ದೇಶ ಪರ್ಯಟನೆ, ಮಾಹಿತಿ ತಂತ್ರಜ್ಞಾನ ಪ್ರವಾಸಿ ತಾಣಗಳು ಇವುಗಳಿಂದ ಆಧುನಿಕ ಜಗತ್ತು ಆಕರ್ಷಣೆಯ ಕೇಂದ್ರವಾಗಿದೆ. ಈ ಕುರಿತು ಅಮೇರಿಕಾ ಪ್ರವಾಸ ಮಾಡಿದ ಲೇಖಕಿಯರಲ್ಲಿ ಅನುಪಮಾ ನಿರಂಜನ, ಲೀಲಾವತಿ ಕುಪ್ಪಸ್ವಾಮಿ, ಪಾರ್ವತಿ ಪೆಂಡರಕೂರ, ಜಯ ಕಲ್‌ಬಾಗಲ್, ಜಯಶ್ರೀ.ಕೆ.ಆರ್. ಜಲಜಾ ಗಂಗೂರು, ನೀಳಾದೇವಿ, ಪರಮೇಶ್ವರಿ ಲೋಕೇಶ್ವರ್, ಪಾರ್ವತಮ್ಮ ಮಹಾಲಿಂಗಶೆಟ್ಟಿ, ಪದ್ಮಾಶಣೈ ಮುಂತಾದವರು ತಮ್ಮ ಕೃತಿಗಳಲ್ಲಿ ಅಲ್ಲಿನ ವೈಶಿಷ್ಟ್ಯಗಳನ್ನು ದಾಖಲಿಸಿದ್ದಾರೆ. ಮೀನಾ ಮೈಸೂರು ಅವರ 'ಎತ್ತಣಿಂದೆತ್ತ' ಪ್ರವಾಸ ಕಥನವು ಯುರೋಪಿನ ಬೃಹತ್ ನಗರಗಳ ಕುರಿತು ಅಚ್ಚರಿ ವ್ಯಕ್ತಪಡಿಸಿದ್ದರೂ ತಮ್ಮ ಮೂಲ ನೆಲೆಯಾದ ಗ್ರಾಮೀಣತೆಯನ್ನು ಮಹಾನಗರಕ್ಕೆ ತಳುಕು ಹಾಕಿ ನೋಡಿದ್ದರಲ್ಲಿ ವಿಶೇಷತೆಯಿದೆ. ಫ್ರಾನ್ಸ್‌ನ ಗ್ರಾಮಗಳಲ್ಲಿ ಗಂಡನೊಡನೆ ಅನೇಕ ವರ್ಷಗಳು ಕಳೆದ ಇವರು ಅಲ್ಲಿನ ಸೇವಾ ಸಂಸ್ಥೆಗಳ ಕಾರ್ಯ ನಿರ್ವಹಿಸುವಿಕೆ, ಹಣ ಸಂಗ್ರಹಣೆ, ಬಡಜನರ ಏಳಿಗೆಗೆ ಸಹಕರಿಸುವುದನ್ನು ದಾಖಲಿಸಿದ್ದಾರೆ. ಉಮಾರಾವ್ ಅವರ 'ರಾಕೀ ಪರ್ವತಗಳ ನಡುವೆ ಕ್ಯಾಬರೆ' ಪ್ರವಾಸ ಕೃತಿಯು ಕೆನಡಾ ದೇಶದ ಬಹುಸಂಸ್ಕೃತಿಯ ಬಗ್ಗೆ ಮಾಹಿತಿ ನೀಡುತ್ತದೆ. ಅಲ್ಲಿನ ವಿಭಿನ್ನ ಸಂಸ್ಕೃತಿಯ ಗುರುತುಗಳು, ಯುರೋಪಿನ ಆಕ್ರಮಣಗಳು, ಅಲ್ಪಸಂಖ್ಯಾತರ ಸಮುದಾಯದ ವೈಶಿಷ್ಟ್ಯಗಳನ್ನು ದಾಖಲಿಸಿದ್ದಾರೆ. ಕೆನಡಾ ದಾಳಿಯ ಹೊರತಾಗಿಯೂ ಇಂದು 'ಕಲ್ಚರಲ್ ಮೊಸೇಕ್' ತತ್ವವನ್ನು ಅಳವಡಿಸಿಕೊಂಡು ವಿದೇಶಿಗರಿಗೆ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು

ತೋರುತ್ತಿದೆ. ನೇಮಿಚಂದ್ರ ಅವರ 'ಪೆರುವಿನ ಪವಿತ್ರ ಕಣಿವೆಯಲ್ಲಿ' ಎಂಬ ಕೃತಿಯು ಪೆರುವಿನ ಬಗೆಗೆ ಕುತೂಹಲವನ್ನು ಹುಟ್ಟುಹಾಕುತ್ತದೆ. ಆ್ಯಂಡೀಸ್ ಪರ್ವತಶ್ರೇಣಿ, ನಾಸ್ಕಾ ಸಂಸ್ಕೃತಿ, ರೇಖಾ ಚಿತ್ರಗಳು, ಚೌಚೀಲಾ ಎಂಬ ಮರುಳುಗಾಡಿನಲ್ಲಿ ತೆರದಿಟ್ಟ ಸಮಾಧಿಗಳು, ಮಮ್ಮಿಗಳು ಹೀಗೆ ಹೆಜ್ಜೆ ಹೆಜ್ಜೆಗೂ ಉತ್ಖನನವಾಗುತ್ತಿರುವ ಪ್ರದೇಶಗಳೇ ಇವೆ. ಪೆರುವಿನ ಇತಿಹಾಸ, ರಾಜಕೀಯ, ಸಾಮಾಜಿಕ, ಇಂದಿನ ಪರಿಸ್ಥಿತಿಗಳ ಬಗೆಗೆ ವಿವರವಾಗಿ ಹೇಳಿದ್ದಾರೆ. ಇಂದಿರಾ ಶಿವಣ್ಣ ಅವರ 'ಬದುಕಿಗೆ ಬಂಗಾರದ ಲೇಪನ' ಕೃತಿಯಲ್ಲಿ ಇಂಗ್ಲೆಂಡಿನ ಸಾಮಾಜಿಕ ಜನಜೀವನದ ಬಗ್ಗೆಯೂ ಪರಿಚಯಿಸಿದ್ದಾರೆ. ಮಾನವ ಹಕ್ಕುಗಳ ಬಗೆಗೆ, ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗೆಗೆ ನಮ್ಮ ಸರಕಾರ ಕಾನೂನು ಹೇಗೆ ಕಣ್ಣು ಮುಚ್ಚಿ ಕುಳಿತಿದೆ ಎಂದು ಹೇಳುತ್ತಾ, ಇಂಗ್ಲೆಂಡಿನ ಜನರಲ್ಲಿರುವ ಜಾಗೃತಿ ಹೆಚ್ಚು ಎಂತಲೂ ದಾಖಲಿಸುತ್ತಾರೆ. ಮಾನವೀಯತೆಯ ಗುಣ ಆ ಜನರಲ್ಲಿ ಸಹಜವಾಗಿ ಬಂದಿರುವ ಗುಣಗಳ ಕುರಿತು ನಿರೂಪಿಸಿದ್ದಾರೆ. ಪದ್ಮಾ ಗುರುರಾಜ್ ಅವರ 'ಕಾಂಗರೂಗಳ ನಾಡಿನಲ್ಲಿ' ಆಸ್ಟ್ರೇಲಿಯಾದ ಕುಟುಂಬಗಳ ಬಗ್ಗೆ ಪ್ರಸ್ತಾಪಿಸುತ್ತ ಅಲ್ಲಿನ ಕುಟುಂಬಗಳು ವಿಭಕ್ತ ಕುಟುಂಬಗಳಾಗಿದ್ದು, ಮಕ್ಕಳು ವಯಸ್ಸಿಗೆ ಬಂದ ನಂತರ ಸ್ವಾತಂತ್ರ್ಯರಾಗಲು ಇಷ್ಟಪಡುತ್ತಾರೆ ಎಂದಿದ್ದಾರೆ. ಲೈಂಗಿಕ ಅತ್ಯಾಚಾರಗಳು, ಹೆಣ್ಣು ಮಕ್ಕಳು ಕಾಣೆಯಾಗುವಿಕೆ ಇನ್ನಿತರ ಅಪರಾಧಿ ಘಟನೆಗಳು ಆಗಾಗ ನಡೆಯುತ್ತಿರುತ್ತವೆ ಎಂದು ತಿಳಿಸಿದ್ದಾರೆ. ಆಸ್ಟ್ರೇಲಿಯಾಕ್ಕೆ ಸಂಬಂಧಿಸಿದಂತೆ ಪ್ರಭಾಮೂರ್ತಿಯವರ 'ಹಸಿರು ಹವಳ' ಪ್ರವಾಸ ಕಥನವು ಅಲ್ಲಿನ ಸಿಡ್ನಿ, ಕ್ಯಾನಬೆರಾ, ಮೆಲ್ಬೋರ್ನ್ ಪಟ್ಟಣದ ಸ್ವಚ್ಛತೆ, ಹುಲ್ಲುಗಾವಲು, ಹಸಿರನ್ನು ಕಂಡು ಲೇಖಕಿಗೆ ಭಾರತದ ಕೊಳಚೆ ಪ್ರದೇಶಗಳು, ಗಿಜಿಗುಡುವ ವಾತಾವರಣ, ಪರಿಸರ ನಾಶಗಳ ಕುರಿತು ನೆನಪಿಸಿಕೊಳ್ಳುತ್ತಾರೆ. ವಕೀಲರಾದ ಪ್ರಭಾ ಮೂರ್ತಿಯವರು ಅಲ್ಲಿನ ಹೈಕೋರ್ಟ್, ಸುಪ್ರಿಂಕೋರ್ಟ್, ಕೌಂಟಿ ಕೋರ್ಟ್‌ಗಳನ್ನು ಬಗ್ಗೆ ವಿಶೇಷ ಆಸಕ್ತಿಯಿಂದ ವಿವರಿಸಿ, ಕಾನೂನಿನ ವ್ಯವಸ್ಥೆಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಹೀಗೆ ವಿದೇಶಿಯರಿಗೆ ಭಾರತೀಯ ಬಗೆಗಿನ ಗ್ರಹಿಕೆಗಳು, ಹಾಗೆಯೇ ಭಾರತೀಯರಿಗೆ ವಿದೇಶಿಯರ ಬಗೆಗಿನ ನಿಲುವುಗಳನ್ನು ಮಹಿಳಾ ಕಥನಗಳಲ್ಲಿ ಚರ್ಚೆಗೆ ಒಳಪಡಿಸಲಾಗಿದೆ. ಜಗತ್ತಿನ ವೈವಿಧ್ಯಮಯ ಬದುಕಿನೊಂದಿಗೆ ನಮ್ಮ ಬದುಕು ಮುಖಾಮುಖಿಯಾದಾಗ ನಾವು ವ್ಯಕ್ತಪಡಿಸುವ ಪ್ರತಿಕ್ರಿಯೆ, ವಿವೇಚಿಸುವ, ಗ್ರಹಿಸುವ ಅನುಭವಗಳನ್ನು ದಾಖಲಿಸುತ್ತಾರೆ. ಭಾರತದ ಸಂಪ್ರದಾಯಸ್ಥ ಉಡುಪಾದ ಸೀರೆ ಲೇಖಕಿಯ ನಿರೂಪಣೆಗಳಲ್ಲಿ ಅನನ್ಯ ಚಹರೆಯಾಗಿ ದಾಖಲೆಗೊಂಡಿದೆ. ಮಹಿಳಾ ಪ್ರವಾಸಿಗರು ಹೆಚ್ಚು ಪ್ರಾಮುಖ್ಯತೆ ನೀಡಿರುವುದು ದೇಶದ ಸಾಂಸ್ಕೃತಿಕ ವಿಚಾರಗಳಿಗೆ ಮತ್ತು ಸ್ತ್ರೀಸಂವೇದನೆ, ಸ್ತ್ರೀಕಾಳಜಿಗಳ ಬಗ್ಗೆ. ಅಮೇರಿಕಾ, ಇಂಗ್ಲೆಂಡ್, ಜಪಾನ್, ಜರ್ಮನಿ, ಆಸ್ಟ್ರೇಲಿಯಾ, ಸಿಂಗಾಪುರ ಮುಂತಾದ ದೇಶಗಳು ಮಹಿಳೆಯರಿಗೆ ಮುಕ್ತ ವಾತಾವರಣವನ್ನು ನೀಡಿ ಅವರ ಅಭಿವ್ಯಕ್ತಿಯನ್ನು ಬದಲಾಯಿಸಿದೆ. ಆದರೆ ಅಭಿವ್ಯಕ್ತಿ, ಮುಕ್ತ ಸಾಮಾಜಿಕ ವಾತಾವರಣವೇ ಮಹಿಳೆಯರನ್ನು ಶೋಷಿಸುವುದಕ್ಕೂ ಕಾರಣವಾಗಿದೆ ಎಂಬುದು ಸತ್ಯಸಂಗತಿಯಾಗಿದೆ. ಅಮೇರಿಕಾ, ಇಂಗ್ಲೆಂಡಿನಲ್ಲಿ ಈ ಸಮಸ್ಯೆ

ದಟ್ಟವಾಗಿದೆ ಎಂದು ಪ್ರವಾಸಿಗರು ಗುರುತಿಸುತ್ತಾರೆ. ಮುಸ್ಲಿಂ ಮಹಿಳಾ ಸಮುದಾಯಗಳು ಈ ಕಾಲದಲ್ಲೂ ಅನುಭವಿಸುವ ಸಂಕಟಗಳನ್ನು ಲತಾಗುತ್ತಿ ತಮ್ಮ ಅರೇಬಿಯಾ ಪ್ರವಾಸ ಕಥನದಲ್ಲಿ ವಿವರವಾಗಿ ಬರೆದುಕೊಂಡಿದ್ದಾರೆ. ವಿದೇಶಿ ಮಹಿಳಾ ಪ್ರವಾಸಗಳು ದೇಶದಿಂದ ದೇಶಕ್ಕೆ ತಾವು ನೋಡುವ ದೃಷ್ಟಿಕೋನಗಳನ್ನು ಬದಲಾಯಿಸಿ ಪ್ರವಾಸ ಕಥನಗಳನ್ನು ಕಟ್ಟಿದ ಕೀರ್ತಿ ಕನ್ನಡ ಪ್ರವಾಸಕಾರ್ತಿಯರಿಗೆ ಸಲ್ಲಬೇಕು.

ಕನ್ನಡ ಮಹಿಳಾ ಪ್ರವಾಸ ಕೃತಿಗಳಲ್ಲಿನ ಸ್ವರೂಪ ಮತ್ತು ವೈವಿಧ್ಯತೆಗಳನ್ನು ಗಮನಿಸಿದಾಗ, ಬಹುತೇಕ ಪ್ರವಾಸ ಕಥನಗಳಲ್ಲಿ ಐತಿಹಾಸಿಕ ದಾಖಲೀಕರಣ ಸಹಜವಾಗಿ ನಿರೂಪಣೆಗೊಂಡಿದೆ. ಇದರ ಜೊತೆಗೆ ಲೇಖಕಿಯರು ಇತಿಹಾಸಕಾರರಾಗಿ, ಸಮಾಜ ವಿಜ್ಞಾನಿಗಳಾಗಿ, ಮಾನವ ಜನಾಂಗದ ಶಾಸ್ತ್ರಜ್ಞರಾಗಿ, ಸಾಂಸ್ಕೃತಿಕ ಚಿಂತಕರಾಗಿ ಮಾನವೀಯ ಮೌಲ್ಯಗಳ ಆರಾಧಕರಾಗಿ ಕಂಡುಬರುತ್ತಾರೆ. ಈ ಮೂಲಕ ಬಹು ಆಯಾಮಗಳಲ್ಲಿ ತಮ್ಮ ಕಥನಗಳನ್ನು ನಿರೂಪಿಸಲು ಯತ್ನಿಸಿದ್ದಾರೆ. ಭೂತ ಮತ್ತು ವರ್ತಮಾನಗಳ ಇತಿಹಾಸ ಮತ್ತು ಸಮಕಾಲೀನ ವಿದ್ಯಮಾನಗಳನ್ನು ತಮ್ಮ ಕಥನದಲ್ಲಿ ಮುಖಾಮುಖಿಯಾಗಿಸಿದ್ದಾರೆ. ಜಗತ್ತಿನ ವಿಶಾಲತೆ, ವರ್ಣಮಯತೆ, ಸಮೃದ್ಧವಾದ ವಿಚಾರಶೀಲತೆ ಪ್ರವಾಸಿಗರ ಅಭಿವ್ಯಕ್ತಿಯಿಂದ ತಿಳಿದುಬರುತ್ತದೆ. ಇದರಿಂದಾಗಿ ಮಹಿಳಾ ಪ್ರವಾಸ ಕಥನಗಳು ಸಂಕುಚಿತ ಸ್ವಭಾವದಿಂದ ಮುಕ್ತಿ ಹೊಂದಿ ವಿಶಾಲ ಮನೋಭಾವ ಉಂಟುಮಾಡುವಲ್ಲಿ ಸಹಕಾರಿಯಾಗಿವೆ. ಮಹಿಳಾ ಹವ್ಯಾಸಿ, ವೃತ್ತಿಪರ ಪ್ರವಾಸಕಾರರು ದೇಶವಾಗಲಿ, ವಿದೇಶವಾಗಲಿ ಬಹುಶಿಸ್ತೀಯ ಅಧ್ಯಯನದಲ್ಲಿ ತೊಡಗಿರುವುರಿಂದ ಕತ್ತಲನ್ನು ಹೊಗಲಾಡಿಸುವ 'ವಿಶ್ವದ ಜ್ಞಾನ ದೀವಿಗೆ'ಗಳಂತೆ ಪ್ರವಾಸ ಕಥನಗಳು ಕೆಲಸ ಮಾಡುತ್ತವೆ.

❑❑❑

ಅಧ್ಯಾಯ ಐದು

ಮಹಿಳಾ ಪ್ರವಾಸ ಕಥನಗಳಲ್ಲಿ ಬಹುಸಂಸ್ಕೃತಿಯ ಸ್ತ್ರೀ ಬದುಕಿನ ಅಭಿವ್ಯಕ್ತಿ

೫.೧. ಬುಡಕಟ್ಟು ಮಹಿಳಾ ಸಂಸ್ಕೃತಿ

೫.೨. ದಲಿತ ಮಹಿಳಾ ಬದುಕು

೫.೩. ಮಹಿಳಾ ಶ್ರಮ ಸಂಸ್ಕೃತಿ

೫.೪. ವಿದೇಶಿ ಮಹಿಳಾ ಸಂಸ್ಕೃತಿ

೫.೫. ಭಾರತೀಯ ಮತ್ತು ವಿದೇಶಿ ಮಹಿಳಾ ಸಂಸ್ಕೃತಿ ಪರಸ್ಪರ ಮುಖಾಮುಖಿಯ ನೆಲೆಗಳು

ಅಧ್ಯಾಯ ಐದು

ಮಹಿಳಾ ಪ್ರವಾಸ ಕಥನಗಳಲ್ಲಿ ಬಹುಸಂಸ್ಕೃತಿಯ ಸ್ತ್ರೀ ಬದುಕಿನ ಅಭಿವ್ಯಕ್ತಿ

ಕನ್ನಡ ಪ್ರವಾಸ ಕಥನಗಳು ಕಾಲ ಕಾಲಕ್ಕೆ ನಿರೂಪಣೆಯಲ್ಲಿ ವಿಭಿನ್ನವಾಗುತ್ತಲೇ ಇವೆ. ಆರಂಭದ ಪ್ರವಾಸ ಕೃತಿಗಳು ಚಾರಿತ್ರಿಕ, ಮಾಹಿತಿ ಪ್ರಧಾನವಾದವುಗಳಾದರೆ, ನಂತರದ ಪ್ರವಾಸ ಕಥನಗಳಲ್ಲಿ ಭಾವಪೂರ್ಣ ನಿರೂಪಣೆಗಳು ಕಂಡುಬರುತ್ತವೆ. ಪ್ರವಾಸಕ್ಕೆ ಹೊರಟ ಪ್ರವಾಸಿಗರು ದೇಶ, ರಾಜ್ಯ, ಪ್ರದೇಶ ಇತ್ಯಾದಿ ವಿವರಗಳನ್ನು ದಾಖಲಿಸುತ್ತಾರೆ. ನೈಸರ್ಗಿಕ, ವಾಸ್ತುಶಿಲ್ಪ, ಚಾರಿತ್ರಿಕ ತಾಣಗಳ, ಅಲ್ಲಿನವರ ಜೀವನ ವಿವರಗಳ ಜೊತೆಗೆ ಸಾಂಸ್ಕೃತಿಕವಾದ ಅಂಶಗಳು ಮುಖ್ಯವಾಗುತ್ತಾ ಹೊದವು. ಅಂತಹವುಗಳಲ್ಲಿ ವರ್ತಮಾನದ ಸಾಮಾಜಿಕ ಅಂಶಗಳು ಮುಖ್ಯವಾದವು. ಒಂದು ಪ್ರದೇಶದ ವೈಶಿಷ್ಟ್ಯವಾದ ಭೌಗೋಳಿಕತೆಯೊಂದೆ ಮುಖ್ಯವಾಗದೆ, ಆ ಪ್ರದೇಶದ ಬಹುಸಂಸ್ಕೃತಿಯನ್ನು ಬಿಂಬಿಸುವಂತಹ ಅಭಿವ್ಯಕ್ತಿಗಳು ಮುಖ್ಯವಾಗುತ್ತವೆ. ಅದರಲ್ಲೂ ಮಹಿಳಾ ಬರಹಗಾರರು ಮಹಿಳೆಯರ ಬದುಕನ್ನು ತಮ್ಮದೇ ಆದ ದೃಷ್ಟಿಕೋನದಿಂದ ಅಭಿವ್ಯಕ್ತಿಸುವುದು ಪ್ರವಾಸ ಕಥನಗಳನ್ನು ವಿಶಿಷ್ಟಗೊಳಿಸುತ್ತವೆ. ಮಹಿಳಾ ಬದುಕಿನ ವಿಭಿನ್ನ ನೆಲೆಗಳನ್ನು ಮನಗಂಡು ವರ್ತಮಾನದ ಸ್ಥಿತಿಗತಿಗಳನ್ನು ತಿಳಿಯಲು ಕನ್ನಡ ಮಹಿಳಾ ಪ್ರವಾಸ ಕಥನಗಳು ನಮಗಿಂದು ಪ್ರಸ್ತುತವೆನಿಸಿವೆ. ದೇಶಗಳಾಚೆ ಎಲ್ಲವೂ ಕಲ್ಪನಾತೀತ ಎನ್ನುವ ಮನೋಭಾವ ಸಹಜವಾಗಿ ಎಲ್ಲರಲ್ಲೂ ಇರುತ್ತದೆ. ಅಲ್ಲದೇ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸ್ತ್ರೀ ಬದುಕಿನ ಪಲ್ಲಟಗಳನ್ನು ವಿಭಿನ್ನ ಸಂಸ್ಕೃತಿಗಳಲ್ಲಿ ಪ್ರವಾಸ ಕಥನಗಳು ಹೇಗೆ ಅಭಿವ್ಯಕ್ತಿಸಿವೆ ಎಂಬುದನ್ನು ತಿಳಿದುಕೊಳ್ಳುವ ಕುತೂಹಲ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಪ್ರಪಂಚದ ಮೂಲೆ ಮೂಲೆಗಳಲ್ಲಿನ ಸ್ತ್ರೀಯರ ಬದುಕನ್ನು ಕಟ್ಟಿಕೊಡುವ ಮಹಿಳಾ ಪ್ರವಾಸ ಕಥನಗಳು ವಿಶಿಷ್ಟವಾಗುತ್ತವೆ. ಬುಡಕಟ್ಟು ಮಹಿಳೆ, ದಲಿತ ಮಹಿಳೆ, ಶ್ರಮಿಕ ಮಹಿಳೆ, ವಿದೇಶಿ ಮಹಿಳೆ, ಭಾರತೀಯ ಮತ್ತು ವಿದೇಶಿ ಸಂಸ್ಕೃತಿಯ ಪರಸ್ಪರ ಮುಖಾಮುಖಿ ನೆಲೆಗಳು ಎನ್ನುವ ಬಹುಆಯಾಮಗಳು ಕನ್ನಡ ಮಹಿಳಾ ಪ್ರವಾಸ ಕಥನಗಳಲ್ಲಿ ಹಾಸುಹೊಕ್ಕಾಗಿವೆ.

೩.೧. ಬುಡಕಟ್ಟು ಮಹಿಳಾ ಸಂಸ್ಕೃತಿ

ಬುಡಕಟ್ಟು ಸಮುದಾಯಗಳನ್ನು ನಿರ್ದಿಷ್ಟ ಪ್ರದೇಶಗಳ ಮೂಲನಿವಾಸಿಗಳೆಂದು ಪರಿಗಣಿಸಲಾಗುತ್ತದೆ. ಬಹುತೇಕ ಆದಿವಾಸಿಗಳು ನಗರೀಕರಣದ ಪ್ರಭಾವಕ್ಕೆ ಒಳಗಾಗಿ ತಮ್ಮ ಸಂಸ್ಕೃತಿಯನ್ನು ಬಿಟ್ಟು, ನಗರ ಸಂಸ್ಕೃತಿಗೆ ಅಥವಾ ಜಾಗತೀಕರಣದ ಸಂಸ್ಕೃತಿಗೆ ಒಗ್ಗಿಕೊಂಡಿದ್ದಾರೆ. ಆದರೂ ಕೆಲವು ಮೂಲವಾಸಿಗಳು ತಮ್ಮತನದ ಚಹರೆಗಳನ್ನು ಕಳೆದುಕೊಳ್ಳಲಾರದ ಹಾಗೆ ಉಳಿಸಿಕೊಂಡು ಬಂದಿದ್ದಾರೆ. ಆಧುನಿಕ ಕಾಲಘಟ್ಟದಲ್ಲಿ ನಗರೀಕರಣಕ್ಕೆ ಸಿಲುಕಿ ಬದಲಾಗಿರುವ ಮತ್ತು ನಗರೀಕರಣದಿಂದ ಅಂತರ ಕಾಯ್ದುಕೊಂಡು ಬದಲಾಗದೆ ಇರುವ ಎರಡು ಬಗೆಯ ಭಿನ್ನ ಬುಡಕಟ್ಟು ಸಂಸ್ಕೃತಿಗಳು ನಮ್ಮ ಕಣ್ಣ ಮುಂದಿವೆ. ಈ ಎರಡರ ಚಾರಿತ್ರಿಕ ಹಿನ್ನೆಲೆಯಲ್ಲಿ ಮಹಿಳೆಯರ ಬದುಕಿನ ವಿನ್ಯಾಸವನ್ನು ಕನ್ನಡದ ಮಹಿಳಾ ಪ್ರವಾಸ ಕಥನಗಳು ವಸ್ತುನಿಷ್ಠವಾಗಿ ನಿರೂಪಿಸುತ್ತವೆ.

ಅನುಪಮಾ ನಿರಂಜನರ 'ಸ್ನೇಹಯಾತ್ರೆ' ಪ್ರವಾಸ ಕಥನದಲ್ಲಿ 'ಮರಿಯಾ' ಎಂಬ ಬುಡಕಟ್ಟು ಮಹಿಳೆಯ ಕುರಿತು ವಿವರಿಸುತ್ತಾ, ಇಪತ್ತು ವರ್ಷದ ಚಲುವೆಯಾಗಿದ್ದ ಮರಿಯಾ ದ್ವಿಭಾಷಿಯಾಗಿದ್ದಳು, ಅವಳ ಮುಖದ ರೂಪುರೇಷೆಗಳು ಭಾರತೀಯ ಮಹಿಳೆಯರ ಹಾಗೆ ಹೊಲುತ್ತಿದ್ದವು, ಜರ್ಮನ್ನರ ರೂಪುರೇಷೆಗಳು ಅನೇಕ ಭಾರಿ ಭಾರತೀಯರನ್ನು ಹೋಲುತ್ತಿದ್ದರೂ ಬಣ್ಣಗಳಲ್ಲಿ ವ್ಯತ್ಯಾಸಗಳಿಂದಾಗಿ ಅವರಲ್ಲಿನ ಭಿನ್ನತೆಯನ್ನು ಗುರುತಿಸಬಹುದಾಗಿದೆ ಎಂದಿದ್ದಾರೆ. ಆರ್ಯರು ಬುಡಕಟ್ಟು ಜನಾಂಗಕ್ಕೆ ಸೇರುವವರು ಎಂದು ಹೇಳುವ ಲೇಖಕಿ ಅಲ್ಲಿನ ಬುಡಕಟ್ಟು ಜನಾಂಗಗಳ ಮೈಬಣ್ಣ ಭಿನ್ನವಾಗಿರುವುದನ್ನು ಪ್ರಸ್ತಾಪಿಸುತ್ತಾರೆ. 'ಅಂಗೈಯಲ್ಲಿ ಯುರೊ ಅಮೇರಿಕ' ಕೃತಿಯಲ್ಲಿಯೂ ನಿಗ್ರೋ ಜನಾಂಗದ ಬಗ್ಗೆ ಸಂಕ್ಷಿಪ್ತವಾದ ಮಾಹಿತಿಯನ್ನು ನೀಡುತ್ತಾರೆ. ಬ್ಲಾಕ್ ಅಮೇರಿಕದವರು ಮೂಲತಃ ಬುಡಕಟ್ಟಿನ ಜನಾಂಗವಾಗಿದ್ದರಿಂದ ಬಿಳಿಯರು ಅವರನ್ನು ಸೇರದೆ ನಿರಂತರ ಶೋಷಣೆಯನ್ನು ಮಾಡುತ್ತಿದ್ದರು. ಅದು ಇಂದಿಗೂ ನಿಂತಿಲ್ಲ. ಮಹಿಳೆಯರೂ ಇದಕ್ಕೆ ಹೊರತಾಗಿಲ್ಲ ಎಂದಿದ್ದಾರೆ.

ನೇಮಿಚಂದ್ರ ಅವರು ತಮ್ಮ 'ಪೆರುವಿನ ಪವಿತ್ರ ಕಣಿವೆಯಲ್ಲಿ' ಎಂಬ ಪ್ರವಾಸ ಕಥನದ ಮೂಲಕ ಕಟ್ಟಿಕೊಡುವ ಬುಡಕಟ್ಟು ಮಹಿಳೆಯರ ಬಗೆಗಿನ ವಿವರಗಳು ಅನೇಕ ಕಾರಣಗಳಿಂದಾಗಿ ನಮಗೆ ಮುಖ್ಯವಾಗುತ್ತವೆ. ಅಮೆಜಾನ್ ಕಾಡಿನಲ್ಲಿ ಮೀನು ಹಿಡಿಯುವ ಬುಡಕಟ್ಟು ಜನರು ಈಗಲೂ ಬೆತ್ತಲೆಯಾಗಿಯೇ ಜೀವನ ಸಾಗಿಸುತ್ತಾರೆ. ಪ್ರತಿಯೊಂದು ದೇಶದಲ್ಲಿ ಮೂಲ ನಿವಾಸಿಗಳು ದಟ್ಟಾರಣ್ಯದಲ್ಲಿ ಇಂದಿಗೂ ವಾಸಿಸುತ್ತಿದ್ದಾರೆ. ಅದರಲ್ಲೂ ಪೆರು ನೆಲವನ್ನು ಅಗೆದಾಗಲೆಲ್ಲ ಪುರಾತನ ನಾಗರಿಕತೆಗಳ ಕತೆಗಳು ದೊರೆಯುತ್ತಲೇ ಇವೆ. ವಿಶ್ವವೇ ವಿಸ್ಮಯ ಪಡುವಂತಹ ಆಚಾರಗಳು, ಕಡಿದಾದ ಪರ್ವತಗಳಲ್ಲಿ ಸತ್ತ ದೇಹಗಳನ್ನು ಮಮ್ಮಿಗಳಾಗಿ ಕೂಡಿಡುವ ಪರಿ. ಮೂಲ ನಿವಾಸಿಗಳನ್ನು ಬಳಸಿಕೊಂಡು, ಅಲ್ಲಿನ ಪ್ರಾಚೀನ ಕಾಲದ ಪ್ರಭುತ್ವವು, ಬೃಹತ್ ಮೂರ್ತಿಗಳನ್ನು ನಿಲ್ಲಿಸಿದ ಪರಿ ಆಶ್ಚರ್ಯ ಮೂಡಿಸುವಂತಹದ್ದು. ಇಲ್ಲಿನ

ಇನ್ಕಾ ನಾಗರಿಕತೆ ಅತ್ಯಂತ ಪ್ರಸಿದ್ಧವಾಗಿದೆ. ಇದರಿಂದಾಗಿ ದಕ್ಷಿಣ ಅಮೇರಿಕಾದ ಸಾಂಸ್ಕೃತಿಕ ಬೇರುಗಳ ಅರ್ಥ ಮಾಡಿಕೊಳ್ಳುವ ಮೂಲ ಬೇರುಗಳು ಸಿಕ್ಕಂತಾಗುತ್ತವೆ. ಇಲ್ಲಿ 'ಲಾರ್ಡ್ ಆಫ್ ಸೈಫನ್' ಗೋರಿಯು ಕಂಡು ಬಂದಿದ್ದು, ಅದು ನಾಗರಿಕತೆಯ ಕಾಲದ ಮುಖಂಡನೊಬ್ಬನ ಗೋರಿ ಎಂದು ತಿಳಿದುಬಂದಿದೆ. ಈ ಗೋರಿಗಳ ನಿರ್ಮಾಣ ಕಾರ್ಯದಲ್ಲಿ ಬುಡಕಟ್ಟಿನ ಮಹಿಳೆಯರನ್ನು ಬಳಸಿಕೊಂಡಿದ್ದು ತಿಳಿದುಬರುತ್ತದೆ. ಅವರು ಅಶಕ್ತರಾದರೂ, ಕಾಯಿಲೆ ಬಿದ್ದರೂ, ದೈಹಿಕ ನ್ಯೂನ್ಯತೆಯಿದ್ದರೂ ಅವರನ್ನು ಪಿರಮಿಡ್ಡುಗಳನ್ನು ಕಟ್ಟಲು ಇನ್ನಿಲ್ಲದ ಹಿಂಸೆಯನ್ನು ನೀಡುತ್ತಿದದ್ದು ಚರಿತ್ರೆಯ ಪುಟಗಳಲ್ಲಿ ಕಂಡುಬರುತ್ತವೆ.

ಪೆರು ದೇಶದ ಇಂಕಾ ಸಮುದಾಯವು ಮಹಿಳಾ ಪ್ರಧಾನ ಕುಟುಂಬಗಳಾಗಿದ್ದವು. ಇಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚಿನ ಪ್ರಧಾನ್ಯವಿತ್ತು. ಮಾತ್ರ ಸಂಸ್ಕೃತಿಯ ಕುರುಹುಗಳಾಗಿ ಆಂಡಿಯನ್ ಸಂಸ್ಕೃತಿ, ಆದಿಮ ಸಂಸ್ಕೃತಿಗಳು ಮುಖ್ಯವಾಗುತ್ತವೆ. ಅದರಲ್ಲಿ ಶ್ರಮಿಕ ಕುಲದ ಹೆಣ್ಣು ಮಕ್ಕಳಿಗೆ ಮುಕ್ತ ಸ್ವಾತಂತ್ರ್ಯವಿದ್ದವು. ತಾಯಿಯ ಆಸ್ತಿ ಹೆಣ್ಣು ಮಕ್ಕಳಿಗೆ ಹಂಚಲ್ಪಡುತ್ತಿತ್ತು. ಕೃಷಿಯೂ ಸೇರಿದಂತೆ ದೈನಂದಿನ ಕೆಲಸ, ಜವಾಬ್ದಾರಿಗಳಲ್ಲಿ ಮಹಿಳೆಯರ ಪಾಲು ದೊಡ್ಡದಿತ್ತು. ಅಧಿಕಾರದ ಸ್ಥಳಗಳಲ್ಲಿ ಹೆಣ್ಣಿಗೆ ಅವಕಾಶ ಇರುತ್ತಿರಲಿಲ್ಲ. ಅವಶ್ಯಬಿದ್ದರೆ ಹೆಣ್ಣನ್ನು ಬಲಿ ಕೊಡುವ ಪದ್ಧತಿಯೂ ಜಾರಿಯಲ್ಲಿತ್ತು. ಆದರೆ ಮೂಲನಿವಾಸಿಗಳಲ್ಲಿ ದೈಹಿಕವಾಗಿ ಕೌಟುಂಬಿಕವಾಗಿ ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯ ಪಾತ್ರ ಮಹತ್ವದ್ದಾಗಿತ್ತು. ಜಗತ್ತಿನ ಎಲ್ಲಾ ಸಂಸ್ಕೃತಿಯಲ್ಲೂ, ನಾಗರಿಕತೆಗಳಲ್ಲೂ ಮಹಿಳೆಯರ ಅಗತ್ಯತೆಯನ್ನು, ಬುದ್ಧಿಮಟ್ಟವನ್ನು ಗೌರವಿಸಿ ಮನೆಯ ಒಡೆತನ ನೀಡಿ ಸಾವಿರ ವರ್ಷಗಳಿಂದ ಪೋಷಿಸಲ್ಪಡುತ್ತ ಬಂದಿದ್ದವು ಎಂಬುದನ್ನು ಪ್ರಸ್ತುತ ವಿವರಗಳಿಂದ ನಾವು ತಿಳಿದುಕೊಳ್ಳಬಹುದಾಗಿದೆ. ಕಾಲಾಂತರದಲ್ಲಿ ಪುರುಷರ ದಬ್ಬಾಳಿಕೆ ಮತ್ತು ಯಜಮಾನಿಕೆಯಿಂದಾಗಿ ಮಹಿಳೆಯು ಬುಡಕಟ್ಟು ಸಮುದಾಯಗಳಲ್ಲಿ ಮುಖ್ಯವಾಗದೆ ಹೋದಳು.

ಸುಮಂಗಲಾ ಎಸ್. ಮುಮ್ಮಿಗಟ್ಟಿ ಅವರ 'ಅದ್ಭುತ ಜೀವವಾಸ ಅಂಡಮಾನ್' ಪ್ರವಾಸ ಕಥನದಲ್ಲಿ ಅಂಡಮಾನ್ ನೆಲದ ಮೂಲ ನಿವಾಸಿಗಳ ಬಗ್ಗೆ ಬರೆದಿದ್ದಾರೆ. ಬುಡಕಟ್ಟು ಜನಾಂಗದ ಚರಿತ್ರೆಯ ಜೊತೆಗೆ ವರ್ತಮಾನದಲ್ಲಿ ಬದಲಾಗುತ್ತಿರುವ ಸಂಗತಿಗಳನ್ನು ದಾಖಲಿಸಲು ಪ್ರಯತ್ನಿಸಿದ್ದಾರೆ. ಅಂಡಮಾನ್‌ನ ಬುಡಕಟ್ಟುಗಳಲ್ಲಿ ತಮ್ಮ ಮೂಲ ಚಹರೆಗಳನ್ನೇ ಇಂದಿಗೂ ಉಳಿಸಿಕೊಂಡು ಬಂದಿರುವ ಜರವಾ ಬುಡಕಟ್ಟುವಿನ ಬಗ್ಗೆ ಮಾಹಿತಿ ನೀಡಿದ್ದಾರೆ. ಅಲ್ಲಿನ 'ಗ್ರಾಂಡ್‌ಟ್ರಂಕ್' ರಸ್ತೆಯಲ್ಲಿ ಹಾದು ಹೋಗುವಾಗ ಲೇಖಕಿಯ ಕಣ್ಣಿಗೆ ಕಂಡಿದ್ದ ಜರವಾ ಮಹಿಳೆಯರು ಕಂಡಿದ್ದ ಸನ್ನಿವೇಶವನ್ನು ಹೀಗೆ ವರ್ಣಿಸಿದ್ದಾರೆ. "ಒಬ್ಬ ಮಹಿಳೆ ಇಬ್ಬರು ಪುರುಷರು, ನಾಲ್ಕಾರು ಮಕ್ಕಳು, ಮಹಿಳೆ ಸೊಂಟಕ್ಕೆ ಕೆಂಪು ಉಡುಗೆಯನ್ನು ತೊಟ್ಟಿದ್ದಾಳೆ. ಕಂಕುಳದಲ್ಲಿ ಒಂದು ಮಗು ಇತ್ತು. ಅಚ್ಚ ಕಪ್ಪು ಬಣ್ಣ, ಸ್ವಲ್ಪ ಕೆಂಪು ಕಣ್ಣುಗಳು, ತಲೆಗೆ ಏನೇನೋ ಕಟ್ಟಿಕೊಂಡಿದ್ದರು. ಕೊರಳಿನಲ್ಲಿ ನಾರಿನಂತಹ ಸರವಿತ್ತು. ತಲೆಗೆ ಅಂಟಿಕೊಂಡಿದ್ದ

ಗುಂಗುರು ಕೂದಲನ್ನು ಮೇಲ್ಭಾಗದಲ್ಲಿ ತೆರವುಗೊಳಿಸಿದ್ದಳು. ಅಲ್ಲಿ ಎಂತಹದ್ದೊ ಬಿಳಿಯ ಬಣ್ಣದ ಗೆರೆಗಳಿದ್ದವು. ಮಹಿಳೆಯ ಮುಖ ನಿರ್ಭಾವುಕವಾಗಿ ತೋರುತ್ತಿತ್ತು" (ಸುಮಂಗಲಾ ಎಸ್.ಮುಮ್ಮಿಗಟ್ಟಿ, ೨೦೧೭, ಪುಟ-೧೧೫) ಬುಡಕಟ್ಟು ಸಮುದಾಯಗಳ ಆದಿಮ ಜೀವನ ಕ್ರಮವು ಅಳಿದು, ಇತಿಹಾಸದ ಪುಟಗಳಲ್ಲಿ ಸೇರಿದ ಜಾಗತೀಕರಣದ ಕಾಲದಲ್ಲಿಯೂ, ಜಗತ್ತಿನ ಹಲವು ಮೂಲ ಬುಡಕಟ್ಟು ಜನಾಂಗಗಳು ಆಧುನಿಕತೆಯ ಯಾವ ಸೊಂಕು ಸೋಕದೆ ತಮ್ಮ ಪಾಡಿಗೆ ತಾವು ಕಾಡಿನಲ್ಲಿ ಬದುಕುತ್ತಿದ್ದಾರೆ. ಈ ಕುರಿತು 'ನಾ ಕಂಡ ಅಂಡಮಾನ್' ಎಂಬ ಕೃತಿಯಲ್ಲಿ ಎಚ್.ಎಸ್.ಅನುಪಮಾ ಅವರು ಮಹತ್ವದ ವಿವರಗಳನ್ನು ಹೀಗೆ ಕಟ್ಟಿಕೊಡುತ್ತಾರೆ. "ಜರವಾ ದಂಪತಿಗಳು ತನ್ನ ತೆರೆದೆದೆಯನ್ನು ಕೈಕಟ್ಟಿ ಮುಚ್ಚಿಕೊಂಡ ಆಕೆ ಸೊಂಟಕ್ಕೆ ಕೆಂಪು ಹಗ್ಗ ನೇಯ್ದುಕೊಂಡಿದ್ದಳು. ಗಂಭೀರ ನಿಲುವಿನ ಮುಖದಲ್ಲಿ ನಗೆಯ ಸುಳುವಿಲ್ಲ. ಆತ ಬೆನ್ನ ಹಿಂದೆ ಬಿದಿರಿನ ಬುಟ್ಟಿ ಕೈಯಲ್ಲಿ ಬಾಣ ಹಿಡಿದು ತದೇಕ ಚಿತ್ತದಿಂದ ಗಂಭೀರನಾಗಿ ವಾಹನಗಳ ಕಾನ್ವಾಯ್ ನೋಡುತ್ತಿದ್ದ. ಮಣ್ಣು ಬಳಿದುಕೊಂಡ ಮುಖದ ಚರ್ಮಕಾಂತಿ ಮನಸೆಳೆಯಿತು. ಸ್ವಲ್ಪ ಮುಂದೆ ಹೋಗುವುದರಲ್ಲಿ ಅಮ್ಮ ಮಗು ಸಿಕ್ಕರು. ವರ್ಷದ ಮಗುವನ್ನು ಪಕ್ಕ ನಿಲ್ಲಿಸಿಕೊಂಡಾಕೆ ಯಾವುದೋ ಬೇರಿಗೋ, ನೀರಿನ ಮೂಲಕ್ಕೋ ಹುಡುಕಾಟ ನಡೆಸಿ ಆಗೆಯುತ್ತಿದ್ದಳು."(ಅನುಪಮಾ ಎಚ್.ಎಸ್., ೨೦೧೩, ಪುಟ-೩೯,) ಅಂಡಮಾನ್‌ನ 'ಗ್ರಾಂಡ್ ಟ್ರಂಕ್ ರಸ್ತೆ' ನಿರ್ಮಾಣ ಪೂರ್ವದಲ್ಲಿ ಸ್ವಚ್ಛಂದವಾಗಿ ಓಡಾಡಿಕೊಂಡಿದ್ದ ಜರವಾ ಸಮುದಾಯಗಳು, ರಸ್ತೆ ನಿರ್ಮಾಣದ ನಂತರ ಇನ್ನಿಲ್ಲದ ಸಮಸ್ಯೆಗಳಿಗೆ ಸಿಲುಕಿ, ಆಧುನಿಕ ಮನುಷ್ಯನ ಉಪಟಳಕ್ಕೆ, ಅನಾಗರಿಕತೆಯ ವರ್ತನೆಗಳಿಗೆ ಅನಿವಾರ್ಯವಾಗಿ ಒಗ್ಗಿಕೊಂಡಿದ್ದಾರೆ. ಜರವಾ ಸಮುದಾಯಗಳು ಬದುಕುವ ಹಳ್ಳಿಗಳಲ್ಲಿ ೩ಅಡಿ ಎತ್ತರ, ೬ಅಡಿ ಅಗಲದ ೧೦ ಗುಡಿಸಲುಗಳಿರುತ್ತವೆ. ಇವುಗಳಲ್ಲಿ ೨೦ ರಿಂದ ೩೦ ಜನ ಜರವಾಗಳು ವಾಸಿಸುತ್ತಾರೆ. ಸುಮಾರು ೬೦ ಅಡಿಗಳ ವ್ಯಾಸದಲ್ಲಿ ಇವುಗಳು ಹರಡಿಕೊಂಡಿರುತ್ತವೆ. ಇಲ್ಲಿನ ಗುಡಿಸಲುಗಳನ್ನು 'ಚಡ್ಡಾ' ಎಂದು, ಸಂಸಾರಗಳಿರುವ ಗುಡಿಸಲುಗಳನ್ನು 'ಟ್ಯುಟೈಮ್ ಚಡ್ಡಾ' ಎಂದು, ಹದಿಹರಿಯದ ಮತ್ತು ವಿದುರರು ಇರುವ ಗುಡಿಸಲುಗಳನ್ನು 'ಥೊರಕಲಾಂಗ್ ಚಡ್ಡಾ' ಎಂದು, ಅವಿವಾಹಿತ ಯುವತಿಯರು ಮತ್ತು ವಿಧವೆಯರು ಇರುವ ಗುಡಿಸಲನ್ನು 'ಥೊರೊಕೊಂಗೋ ಚಡ್ಡಾ' ಎನ್ನುತ್ತಾರೆ. ಇಲ್ಲಿನ ಮಹಿಳೆಯರು ಕಬ್ಬಿಣದ ಸಲಾಕೆಗಳಿಂದ ಗೆಡ್ಡೆ ಗೆಣಸು, ಬೀಜಗಳು, ಹಣ್ಣುಗಳು, ಕಾಯಿ, ಕಾಂಡ ಮುಂತಾದ ಆಹಾರ ಸಂಗ್ರಹಿಸುವ ಕೆಲಸವನ್ನು ಮಾಡುತ್ತಾರೆ. ಜೇನು ಸಂಗ್ರಹಣೆ, ಸೈಕಾಸ್ ಮರದ ಹಣ್ಣು, ಹಲಸಿನ ಹಣ್ಣು ಸಂಗ್ರಹಿಸುವುದು, ಮತ್ತು ಅವುಗಳ ಬೀಜಗಳ ಸಂಗ್ರಹಣೆ ಜರವಾ ಮಹಿಳೆಯರು ಮಾಡುವ ಕೆಲಸಗಳಾಗಿರುತ್ತವೆ. ಪುರುಷರಂತೆ ಜರವಾ ಮಹಿಳೆಯರು ಮರ ಹತ್ತುವುದರಲ್ಲೂ ಪರಿಣಿತೆಯರಾಗಿದ್ದು, ಸಮುದ್ರಗಳಿಂದ ತೇಲಿ ಬರುವ ಆಹಾರ ಪದಾರ್ಥಗಳನ್ನು ಸಂಗ್ರಹಿಸುತ್ತಾರೆಂದು ಲೇಖಕಿ ನಿರೂಪಿಸುತ್ತಾರೆ.

ಇತ್ತೀಚಿಗೆ ಅಂಡಮಾನಿನಲ್ಲಿ ಬುಡಕಟ್ಟು ಕಲ್ಯಾಣ ಇಲಾಖೆಯ ಸ್ವಯಂ ಸೇವಕರು ಬಟ್ಟೆಗಳನ್ನು ಪೂರೈಸಿದ್ದು, ಅನೇಕ ಸಂಗತಿಗಳನ್ನು ಇವರೊಂದಿಗೆ ಹಂಚಿಕೊಂಡಿದ್ದಾರೆ. ಅವರ

ಆಚಾರ ವಿಚಾರಗಳು ಜಗತ್ತಿಗೆ ಸ್ವಯಂ ಸೇವಕರಿಂದ ತಿಳಿಯುತ್ತಿವೆ. ಅಲ್ಲಿನ ಹೆಣ್ಣು ಮಕ್ಕಳ ಆಚಾರ ವಿಚಾರಗಳನ್ನು ಕುರಿತು "ಸಾಮಾನ್ಯವಾಗಿ ಜರವಾಗಳಲ್ಲಿ ಹದಿಹರೆಯದಲ್ಲಿಯೇ ಮದುವೆ ಮಾಡುತ್ತಾರೆ. ಹುಡುಗಿ ಋತುಮತಿಯಾದಾಗ ಆಕೆಯನ್ನು ಒಂದು ನಿಗದಿತ ಸ್ಥಳದಲ್ಲಿ ಇರಿಸಲಾಗುತ್ತದೆ. ಆಕೆಯ ಮಾತಿಗೂ ಮಿತಿಯುಂಟು, ಅಂಟು ಮತ್ತು ಹಂದಿಯ ಕೊಬ್ಬಿನಲ್ಲಿ ಮಿಶ್ರಮಾಡಿದ ಕೆಂಪು ಮಣ್ಣನ್ನು ಆಕೆಯ ತಲೆ, ಮುಖಕ್ಕೆಲ್ಲಾ ಹಚ್ಚುತ್ತಾರೆ. ಆಕೆ ಹಂದಿಯ ಮಾಂಸ ಮತ್ತು ಜೇನನ್ನು ತಿನ್ನುವಂತಿಲ್ಲ. ಕೇವಲ ಮೃದ್ವಂಗಿ(ಒನಾಂಗ್)ಗಳನ್ನು ಮಾತ್ರ ತಿನ್ನಬಹುದು. ಮೂರು ದಿನಗಳ ನಂತರ ಆಕೆಗೆ ಸ್ನಾನ ಮಾಡಿಸಿ, ಹೂವಿನಿಂದ ಮಾಡಿದ ಹಣೆಯ ಪಟ್ಟಿ, ಹಾರ, ಸೊಂಟ ಪಟ್ಟಿ ಮುಂತಾದವುಗಳಿಂದ ಅಲಂಕರಿಸುತ್ತಾರೆ. ಮಹಿಳೆಯರು ಮತ್ತು ಹುಡುಗಿಯರು ಆಕೆಯ ಸುತ್ತ ಹಾಡಿ ನರ್ತಿಸುತ್ತಾರೆ. ಮುಂದೆ ಆಕೆಗೆ ಯಾವುದೇ ನಿರ್ಬಂಧಗಳಿರುವುದಿಲ್ಲ." (ಸುಮಂಗಲಾ ಎಸ್.ಮುಮ್ಮಿಗಟ್ಟಿ, ೨೦೧೭, ಪುಟ-೧೩೫) ಎಂದಿದ್ದಾರೆ. ಬಹುತೇಕವಾಗಿ ಸ್ತ್ರೀ ಪುರುಷರಿಬ್ಬರೂ ಜರವಾಗಳಲ್ಲಿ ನಗ್ನರಾಗಿಯೇ ಇರುತ್ತಾರೆ. ಈ ಆಚರಣೆಗಳನ್ನು ಗಮನಿಸಿದಾಗ, ಆಧುನಿಕ ನಾಗರಿಕ ಮಾನವರು ಎಂದು ಬೀಗುವ ಭಾರತದ ಎಷ್ಟೋ ಹಳ್ಳಿಗಳಲ್ಲಿ ಜರವಾ ಮಹಿಳೆಯರ ಮೈನೆರತ ಪ್ರಸಂಗಗಳು ನೆನಪಿಸುತ್ತವೆ. ಮೂಲನಿವಾಸಿಗಳ ಆಚರಣೆಗಳನ್ನೇ ಬದಲಾಗಿಸಿಕೊಂಡು ಆಚರಿಸುವ ಪದ್ಧತಿ ಕಂಡುಬರುತ್ತವೆ.

ಆದರೆ ಇಂದು ಬುಡಕಟ್ಟು ಮಹಿಳೆಯರು ಬದಲಾಗುತ್ತಿದ್ದಾರೆ. ಟ್ರಂಕ್ ರಸ್ತೆಗಳಲ್ಲಿ ಪ್ರವಾಸಿಗರ ಎದುರೇ ಬೆತ್ತಲೆಯಾಗಿರುವುದನ್ನು ಕಂಡ ಅಲ್ಲಿನ ಸ್ವಯಂಸೇವಕರು, ಅವರನ್ನು ಭೇಟಿ ಮಾಡಿ, ತಿಳಿ ಹೇಳಿ, ಚಡ್ಡಿಯಂತಹ ವಸ್ತ್ರವನ್ನು ಬಳಸುವುದನ್ನು ಕಲಿಸಿದ್ದಾರೆ. ಬುಡಕಟ್ಟು ಮಹಿಳೆಯರು ಆ ರಸ್ತೆಗಳಲ್ಲಿ ಕಾಣಿಸಿಕೊಂಡಾಗಲೆಲ್ಲ ಮಹಿಳೆಯರ ಜೊತೆ ಮಕ್ಕಳು ಕಾಣಿಸಿಕೊಳ್ಳುವ ಕಾರಣಕ್ಕೆ, ಅವರಲ್ಲಿ ಸಂತಾನೋತ್ಪತ್ತಿ ನಿರಾಂತಕವಾಗಿ ನಡೆಯುತ್ತಿದ್ದರಿಂದಲೇ ಮಕ್ಕಳು ಕಾಣಿಸಿಕೊಳ್ಳುತ್ತಿರುವುದು ಎಂದು ಲೇಖಕಿಯು ಅಭಿಪ್ರಾಯ ಪಡುತ್ತಾರೆ. ಇವರಲ್ಲಿನ ಗರ್ಭಾವಸ್ಥೆ ಮತ್ತು ಪ್ರಸವದ ಸಂದರ್ಭದ ಸಂಸ್ಕೃತಿಯು ವಿಭಿನ್ನವಾಗಿದೆ. ಜರವಾಗಳಲ್ಲಿ ಪತ್ನಿ ಮೊದಲ ಬಾರಿಗೆ ಗರ್ಭಿಣಿಯಾದಾಗ ಪತಿ ಪತ್ನಿಯರಿಬ್ಬರೂ ಯಾವುದೇ ಆಭರಣಗಳನ್ನು(ಹೂವು, ಬಳ್ಳಿ, ಶಂಖ, ಚಕ್ರ, ಮೂಳೆ) ಬಳಸುವುದಿಲ್ಲ. ಸಾಮಾನ್ಯ ದಿನಗಳಲ್ಲಿ ಮುಖಕ್ಕೆ ಬಿಳಿಯ ಮಣ್ಣಿನ ಚಿತ್ತಾರವನ್ನು ಮಾಡಿಕೊಳ್ಳುತ್ತಾರೆ. ಆದರೆ ಈ ಆಚರಣೆಗಳು ಪತ್ನಿಯ ಪ್ರಸವ ಸಂದರ್ಭದಲ್ಲಿ ಪುರುಷರಿಗೆ ನಿಷೇಧವಾಗಿರುತ್ತದೆ. ಅದು ಒಂದು ರೀತಿ ಸಂಕೇತದಂತೆ ತೋರುತ್ತದೆ. ಸ್ತ್ರೀ ಜರವಾಗಳನ್ನು ಹೊರತುಪಡಿಸಿ ಇನ್ನಾರಿಂದಲೂ ಏನ್ನನ್ನು ಸ್ವೀಕರಿಸುವಂತಿಲ್ಲ. ಅವರಿಗಂತಲೇ ವಿಶೇಷ ಸ್ಥಳಗಳನ್ನು ಮಾಡಿರುತ್ತಾರೆ. ಹೊಕ್ಕಳು ಬಳ್ಳಿಯನ್ನು ಹರಿತವಾದ ಬಾಣದಿಂದ ಕತ್ತರಿಸುತ್ತಾರೆ. ಮಗುವಿನ ಜನನವಾದ ಕೂಡಲೇ ಅಜ್ಜಿ ಅತ್ತರೆ, ಅಲ್ಲಿನ ಹೆಂಗಸರೆಲ್ಲರೂ ಚಪ್ಪಾಳೆ ಹೊಡೆದು ಸಂಭ್ರಮಿಸುತ್ತಾರೆ. ಮಗುವಿಗೆ 'ಮಾನಿಟರಿ ಲಿಯಾರ್ಡ್' ಕೊಬ್ಬನ್ನು ಮಸಾಜ್ ಮಾಡಲು ಬಳಸುತ್ತಾರೆ. ಈ ಬುಡಕಟ್ಟು ಜನಾಂಗದವರಿಗೆ ಮಕ್ಕಳು ಬೇಡವೆಂದರೆ ಗರ್ಭನಿರೋಧಕಕ್ಕೆ ಕಾರಣವಾಗುವ 'ವಚಾಯಿ' ಹಾಗೂ 'ಹಾತೋ' ಸಸ್ಯಗಳ

ಎಲೆಗಳನ್ನು ಬಳಸುತ್ತಾರೆ. ಅಲ್ಲದೇ ಪ್ರಸವ, ಋತುಸ್ರಾವದ ಸಮಯದಲ್ಲಿ 'ಲೆಡ್ಡಾ' ಎನ್ನುವ ತೊಗಟೆಯನ್ನು ಬಳಸುತ್ತಾರೆ. ರಕ್ತಸ್ರಾವ, ಕೆಮ್ಮು, ಜ್ವರ, ತಲೆನೋವು, ಸೊಂಟನೋವು, ಗಂಟಲು ನೋವುಗಳಿಗೆ ಈ ಎಲೆಗಳನ್ನು ನೋವು ನಿವಾರಕವೆಂದೆ ಭಾವಿಸುತ್ತಾರೆ. ಸುಮಂಗಲಾ ಅವರು ಅಂಡಮಾನ್‌ನ ಬುಡಕಟ್ಟು ಮಹಿಳೆಯರ ಬಗ್ಗೆ ಮಹತ್ವದ ವಿಚಾರಗಳನ್ನು ಹಂಚಿಕೊಳ್ಳುತ್ತಾರೆ. ಇವರು ೨೦೧೧ಕ್ಕೆ ಪೂರ್ವದಲ್ಲಿ ಪ್ರವಾಸ ಕೈಗೊಂಡಿದ್ದರಿಂದ ಬುಡಕಟ್ಟು ಸಂಸ್ಕೃತಿಗಳ ಬಗ್ಗೆ, ಮಹಿಳೆಯರ ಜೀವನೋಪಾಯಗಳ ಬಗ್ಗೆ ಇತರ ಲೇಖಕ ಲೇಖಕಿಯರಿಗಿಂತ ಹೆಚ್ಚಿನ ಮಾಹಿತಿಗಳನ್ನು ನಿರೂಪಿಸಿದ್ದಾರೆ.

ಆಧುನಿಕರಿಗೂ ಸಿಗದ ಇವರ ಬುದ್ಧಿಮಟ್ಟ ಹೇಗಿತ್ತೆಂದರೆ, ಇಲ್ಲಿನ ಸೆಂಟಿನಲ್ ದ್ವೀಪವಾಸಿಗಳು ಹಿಂದೂ ಮಹಾಸಾಗರದಲ್ಲುಂಟಾದ ಸುನಾಮಿಯು ಲಕ್ಷಾಂತರ ಮಂದಿಯನ್ನು ಆಹುತಿಯಾಗಿಸಿದಾಗ, ಬುಡಕಟ್ಟು ವಾಸಿಗಳಾದ ಸೆಂಟಿನಲ್ ಸಮುದಾಯ ಮಾತ್ರ ಸಮುದ್ರ ತೀರಕ್ಕೆ ಹತ್ತಿರವಿರುವ ಕಾಡಿನಲ್ಲಿ ವಾಸವಿದ್ದರೂ ನೈಸರ್ಗಿಕ ವಿಪತ್ತನ್ನು ಎದುರಿಸಿ ಬದುಕಿದ ಗಟ್ಟಿಗರಾಗಿದ್ದಾರೆ. ಸುನಾಮಿಯ ರಕ್ಕಸದ ಅಲೆಗಳಲ್ಲೂ ಇವರು ಬದುಕಿ ಬಂದ ರೀತಿ ಆಧುನಿಕ ಮನುಷ್ಯರಿಗೂ ದಂಗು ಬಡಿಸಿವೆ. ಈ ಸಂದರ್ಭದಲ್ಲಿ ಸುನಾಮಿಯ ರಕ್ಕಸ ಅಲೆಗಳಿಂದ ರಕ್ಷಣೆ ಪಡೆಯಲು ಎತ್ತರದ ಪ್ರದೇಶಗಳಿಗೆ ಸ್ಥಳಾಂತರಗೊಂಡಿದ್ದರು ಎನ್ನಲಾಗಿದೆ. ವಿಜ್ಞಾನಕ್ಕೂ ಅರೆ ಮಸುಕಾಗಿ ತಿಳಿದ ಈ ಸಂಗತಿ ಜರವಾಗಳಿಗೆ ತಿಳಿದದ್ದು ಹೇಗೆಂಬ ಮಾಹಿತಿ ಅವರಿಂದಲೇ ತಿಳಿದುಬರಬೇಕಿದೆ. ಅಲ್ಲಿನ ಹೆಂಗಸರ ಸಂಖ್ಯೆ ಗಂಡಸರ ಸಂಖ್ಯೆಗಿಂತ ಕಡಿಮೆಯಿದ್ದು, ಅವರ ಗಣತಿ ಇಲ್ಲಿಯವರೆಗೂ ದೂರದಿಂದಲೇ ನಡೆದಿದೆ. ೨೦೦೧ರಲ್ಲಿ ೨೧ ಗಂಡು, ೧೮ ಹೆಣ್ಣುಗಳನ್ನು ಗುರುತಿಸಿದ್ದು, ೩೯ ಜನಸಂಖ್ಯೆ ಇರಬಹುದೆಂಬ ಲೆಕ್ಕಚಾರಗಳಿವೆ ಎಂದು ಅಲ್ಲಿನ ಇಲಾಖೆಗಳು ಊಹಿಸಿವೆ.

ದಕ್ಷಿಣ ಅಮೇರಿಕಾದ ಹಳೆಯ ಬುಡಕಟ್ಟು ಜನಾಂಗಗಳಲ್ಲಿ 'ಗರ್‍ವಾನಿ' ಸಮುದಾಯವು ಒಂದು. ಜರವಾ ಬುಡಕಟ್ಟು ಮಹಿಳೆಯರಂತೆ, ಪುರುಷರ ಸರಿಸಮಾನವಾಗಿ ಇಲ್ಲಿನ ಮಹಿಳೆಯರು ದುಡಿಯುತ್ತಿದ್ದರು, ಅಥವಾ ಆಹಾರ ಸಂಗ್ರಹಣೆ ಮಾಡುತ್ತಿದ್ದರು. ಶಿಕಾರಿ ಮಾಡುವುದು, ಜೇನು ಕೀಳುವುದು, ಮೆಕ್ಕೆಜೋಳ ಬೆಳೆಯುವುದು, ಪಶುಸಂಗೋಪನೆ ಮೊದಲಾದವುಗಳು ಜೀವನೋಪಾಯ ಕೆಲಸಗಳಾಗಿದ್ದವು. ಇವರದು ಅರೆ ಅಲೆಮಾರಿ ಬದುಕಾದರೂ ಶಾಂತ ಜೀವನ ಕಂಡವರು. ಕ್ರಿ.ಶ.೧೫೩೭ರಲ್ಲಿ 'ಗೊಂಜಾಲೊ', 'ಮೆಂಡೋನ್ಸಾ' ಸಮುದಾಯಗಳು ಪರಗ್ವೆ ದೇಶಕ್ಕೆ ಬಂದಾಗ ಗರ್‍ವಾನಿ ಮಹಿಳೆಯರ ಸಂಪರ್ಕದಿಂದಾಗಿ, ಮಿಶ್ರಕುಲದ 'ಮೆಸ್ಟಿಜೊ'ಗಳು ಹುಟ್ಟಿದ್ದಾಗಿ ಅಲ್ಲಿನ ಚರಿತ್ರೆಗಳು ಹೇಳುತ್ತವೆ. ಗರ್‍ವಾನಿ ಬುಡಕಟ್ಟು ಮಹಿಳೆಯರನ್ನು ಇವರು ಗುಲಾಮರಂತೆ ನಡೆಸಿಕೊಂಡರು. ಮುಂದೆ ಈ ಬುಡಕಟ್ಟು ಜನರನ್ನು ನಾಗರಿಕರನ್ನಾಗಿಸುವ ಉದ್ದೇಶದಿಂದ ಕ್ರೈಸ್ತಮತಕ್ಕೆ ಮತಾಂತರಗೊಳಿಸಿ, ಗರ್‍ವಾನಿ ಬುಡಕಟ್ಟು ಜನರ ಸಂಸ್ಕೃತಿಯನ್ನು ಅವನತಿಗೊಳಿಸಿದರು. ಆಧುನಿಕತೆಗೆ ಒಗ್ಗಿಕೊಂಡಂತೆಲ್ಲಾ "ವಸಾಹತುಗಾರರು ತಾವು ಅನ್ವೇಷಿಸಿದ 'ಹೊಸ ಜಗತ್ತಿನ' ಸ್ಥಳೀಯರನ್ನೆಲ್ಲ ಇಂಡಿಯನ್ನರೆಂಬ

ಒಂದೇ ಹೆಸರಿನಲ್ಲಿ ಕರೆದರು. ದಕ್ಷಿಣ ಅಮೆರಿಕದಲ್ಲಿ ಇಂಥ ಸಾವಿರಾರು ಇಂಡಿಯನ್ ಕುಲಗಳಿದ್ದವು. ಯುರೋಪಿನ ನಾವಿಕರು ಬಂದಿಳಿದಾಗ ಬ್ರೆಜಿಲ್ ಒಂದರಲ್ಲೆ ೨,೦೦೦ ಬುಡಕಟ್ಟುಗಳಿದ್ದವು. ಇವತ್ತಿಗೂ ಅತಿ ಹೆಚ್ಚು ಮನುಷ್ಯ ಸಂಪರ್ಕವಿರದ ಕುಲಗಳು(೬೭) ಬ್ರೆಜಿಲ್‌ನಲ್ಲಿವೆ."(ಅನುಪಮಾ.ಎಚ್.ಎಸ್, ೨೦೧೩, ಪುಟ-೪೫) ಎಂದು ಗುರುತಿಸಿದ್ದಾರೆ. ಈ ಜನಾಂಗಗಳಲ್ಲಿ ಮಹಿಳಾ ಸಮುದಾಯವು ದೊಡ್ಡ ಮಟ್ಟದಲ್ಲಿದೆ. ಪುರುಷರೊಂದಿಗೆ ಕೃಷಿ ಕೆಲಸದಲ್ಲಿ ತೊಡಗಿಕೊಂಡು ನಾಗರಿಕ ಸಮಾಜದಿಂದ ದೂರವೇ ಉಳಿದಿದ್ದಾರೆ. ಇತರೆ ಮಿಶ್ರಕುಲದ ಮೆಸ್ಟಿಜೊಗಳಂತಹ ಸಮುದಾಯಗಳ ಗರ್ವಾನಿ ಮಹಿಳೆಯರು ಲೈಂಗಿಕ ಶೋಷಣೆಯನ್ನು ಅನುಭವಿಸಿದ್ದಾರೆ. ಇಂತಹ ದಬ್ಬಾಳಿಕೆಗಳ ವಿರುದ್ಧ ತಿರುಗಿಬಿದ್ದ ಮಹಿಳೆಯರು ದಂತಕಥೆಗಳಾಗಿ ಉಳಿದಿದ್ದಾರೆ.

ಅರ್ಜೆಂಟೀನಿಯಾದ ಪೂಲನ್‌ದೇವಿ ಎಂದು ಕರೆಯುವ 'ಮಿಲೋಗ್ರಾ ಸಾಲಾ' ಆ ದೇಶದ ಮೂಲ ನಿವಾಸಿ. ಕಪ್ಪು ಮಹಿಳೆ. ಜೋಜಾಯ್ ಕಾರ್ಮಿಕ ಸಂಘದ ಒಡನಾಡಿಯಾಗಿದ್ದವಳು. ಪ್ರತಿಭಟನೆ, ಹೋರಾಟದ ಮನೋಭಾವದಿಂದಲೇ ಬೆಳೆದು ಬಂದ ಮಿಲೋಗ್ರಾ ಸಾಲಾ ಕಾರ್ಮಿಕರ ಹಕ್ಕೋತ್ತಾಯಕ್ಕೆ ಶ್ರಮಿಸಿದವಳು. ಆಕೆಯ ಮೇಲೆ ಭ್ರಷ್ಟಚಾರದ ಆರೋಪ ಹೊರಿಸಿ ಬಂದಿಸಿದಾಗ, ಸಂಘಟನಾ ಚತುರತೆ ಹೊಂದಿದ್ದ ಅವರಿಗೆ ಬಹುಬೇಗ ಜನಪ್ರಿಯತೆ ಲಭಿಸಿತು. ಈ ಜನಪ್ರಿಯತೆ ಸಾಲಾಳಿಗೆ ಮುಳ್ಳಾಯಿತು. ಪೆರುವಿನಲ್ಲಿ ಆಧುನಿಕ ಬುಡಕಟ್ಟುವಿನ ಮಹಿಳೆಯರ ಸ್ಥಿತಿಗತಿ ನೋಡುವಾಗ ಗ್ರಾಮೀಣ ಬುಡಕಟ್ಟು ಕುಲದ ಮಹಿಳೆಯರಿಗೂ, ನಗರದ ಶಿಕ್ಷಿತ ಮಹಿಳೆಯರಿಗೆ ಸಿಗುವ ಅವಕಾಶ ಮತ್ತು ಅವಮಾನಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ತಮ್ಮ ಬುಡಕಟ್ಟು ಭಾಷೆ ಬಿಟ್ಟು ಸ್ಪ್ಯಾನಿಷ್ ಬರದೆ, ತಾವು ನೆಲಸಿದ ಪ್ರದೇಶದಿಂದ ಹೊರ ಹೋಗಿ ವ್ಯವಹರಿಸಲಾಗದೆ, ಮನೆಗೆಲಸ, ಸೇವೆ ಮಾಡಲಷ್ಟೇ ಸೀಮಿತರಾಗಿದ್ದಾರೆ. ಈ ಕಾರಣಗಳಿಂದಾಗಿಯೇ ಬುಡಕಟ್ಟು ಹೆಣ್ಣುಮಕ್ಕಳ ಮೇಲೆ ಲೈಂಗಿಕ ಶೋಷಣೆಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಗರ್ಭಿಣಿಯರಾದವರಿಗೆ ಬಲವಂತದ ಆಪರೇಷನ್ನುಗಳು, 'ಅಯ್ಮಾರಾ' ಮತ್ತು 'ಕೆಚುಅ' ಬುಡಕಟ್ಟು ಹೆಣ್ಣು ಮಕ್ಕಳ ಮೇಲೆ ಹೆಚ್ಚಾಗಿ ನಡೆಯುತ್ತಿವೆ. ೧೯೯೦ರಲ್ಲಿ ದೇಶವ್ಯಾಪಿ ೩ ಲಕ್ಷ ಹೆಣ್ಣುಮಕ್ಕಳಿಗೆ ಒತ್ತಾಯದ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂಬ ವರದಿಗಳನ್ನು ಅಲ್ಲಿನ ಸರ್ಕಾರಗಳು ನೀಡಿವೆ. ಅತ್ಯಾಚಾರಕ್ಕೆ ಒಳಗಾದ ಮಹಿಳೆಯನ್ನು ಮದುವೆ ಆದರೆ, ಶಿಕ್ಷೆಯಿಂದ ತಪ್ಪಿಸಿಕೊಳ್ಳಬಹುದಾಗಿತ್ತು. ಇದರಿಂದ ಬಹುಪತ್ನಿತ್ವ ಪದ್ಧತಿ ಹೆಚ್ಚಾದವು. ಅತ್ಯಾಚಾರಕ್ಕೆ ಕಡಿವಾಣ ಇಲ್ಲದಂತಾದವು. ೧೯೯೯ರ ನಂತರ ಈ ಕಾನೂನು ರದ್ದಾಗಿದ್ದು, ಮಹಿಳಾ ಶೋಷಣೆಗಳಿಗೆ ಬಿಡುಗಡೆಯೇ ಇಲ್ಲವೆಂಬಂತೆ ಇಂದಿಗೂ ನಡೆಯುತ್ತಿರುವುದು ವಿಷಾದನೀಯ ಅಂಶವಾಗಿದೆ.

ಎಚ್.ಎಸ್.ಅನುಪಮಾ ಅವರ 'ಅಂಡಮಾನ್ ಕಂಡ ಹಾಗೆ' ಪ್ರವಾಸ ಕಥನವು ಅಲ್ಲಿನ ಪ್ರಾದೇಶಿಕ ಬುಡಕಟ್ಟು ಜನಾಂಗಗಳ ಬಗ್ಗೆ ಅನೇಕ ಮಹತ್ವದ ವಿಚಾರಗಳನ್ನು ದಾಖಲಿಸುತ್ತದೆ.

ಅಂಡಮಾನಿನ ೩.೫ಲಕ್ಷ ಜನಸಂಖ್ಯೆಯಲ್ಲಿ ೦.೫ರಷ್ಟು ಮಾತ್ರ ಮೂಲನಿವಾಸಿಗಳಿದ್ದಾರೆ. ಉಳಿದ ೯೯.೫ರಷ್ಟು ಜನ ವಲಸೆ ಬಂದವರು. ವಲಸಿಗರು ತಮ್ಮ ವಸಾಹತು ಪ್ರದೇಶವಾಗಿಸಿದ ಅಂಡಮಾನಿನಲ್ಲಿ ಶೇ.೯೯ರಷ್ಟು ಮಂದಿ ಮೂಲ ನಿವಾಸಿಗಳನ್ನೇ ಜೀವನೋಪಾಯದ ಬಂಡವಾಳ ಮಾಡಿಕೊಂಡಿದ್ದರು. ಅವರನ್ನೇ ಹತ್ತಿಕ್ಕುವ ಪ್ರಯತ್ನಗಳು ಈಗ ವಲಸಿಗರಿಂದ ಆಗುತ್ತಿದೆ. ಅಂಡಮಾನಿನ ಕಾಡುಗಳಲ್ಲಿ ಪ್ರಾಚೀನ ಬುಡಕಟ್ಟು ಸಮುದಾಯಗಳಾದ ನೀಗ್ರಾಯ್ಡ್, ಮಂಗೋಲಾಯ್ಡ್, ಜರವಾ, ಗ್ರೇಟ್ ಅಂಡಮಾನಿಗಳು ವಾಸಿಸುತ್ತಿದ್ದಾರೆ. ಒಂಗೇಗಳು ಮತ್ತು ಸೆಂಟಿನಲೀಯರು ನೀಗ್ರಾಯ್ಡ್ ಬುಡಕಟ್ಟುಗಳಾದರೆ, ಶೊಂಪೇನ್ನರು ಹಾಗೂ ನಿಕೋಬಾರಿಗಳು, ಮಂಗೋಲಾಯ್ಡ್‌ಗಳು ಬುಡಕಟ್ಟು ಕುಲಗಳಾಗಿವೆ. ಇದರಲ್ಲಿ 'ಜರವಾ' ಬುಡಕಟ್ಟು ಸಮುದಾಯವು ಅಧುನಿಕತೆಯ ಯಾವ ಸ್ಪರ್ಶವು ಹೊಂದದೆ ಮೂಲ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬಂದಿದೆ. ಉಳಿದ ಬುಡಕಟ್ಟುಗಳು ಪ್ರಕೃತಿ ವಿಕೋಪ, ರೋಗ ರುಜಿನಗಳು, ಆಧುನಿಕತೆಗೆ ಸಿಕ್ಕು ಬಹುತೇಕ ಮಾರ್ಪಡು ಹೊಂದಿದೆ. ಪ್ರಸ್ತುತ ಜರವಾಗಳ ಸಂಖ್ಯೆ ೨೫೦ ಹಾಸುಪಾಸು ಇರಬಹುದು ಎಂದಿದ್ದಾರೆ. ಗ್ರೇಟ್ ಅಂಡಮಾನಿಗಳು ೫೨, ಒಂಗೇಗಳು ೯೯, ಸೆಂಟಿನೇಲಿಯರು ೩೯ ಜನರು ಮಾತ್ರ ಇದ್ದಾರೆ. ಮಹಿಳೆಯರು ಸಹ ಅನೇಕ ಸಂಖ್ಯೆಯಲ್ಲಿದ್ದಾರೆ. ಈ ಸಮುದಾಯಗಳು ಆಧುನಿಕ ಮನುಷ್ಯನ ಸಂಪರ್ಕಕ್ಕೆ ಸಿಕ್ಕ ನಂತರ ತನ್ನ ನೆಲದಲ್ಲಿಯೇ ಅಸ್ತಿತ್ವ ಕಳೆದುಕೊಂಡು ಪರದೇಶಿಯಾಗುವತ್ತಾ ಬಂದಿದ್ದಾರೆ.

ಜರವಾ ಜನಾಂಗದ ಬದುಕನ್ನು ಪಲ್ಲಟಗೊಳಿಸಿದ ಆಧುನಿಕರೊಂದಿಗೆ ದೂರ ಉಳಿದ ಸಂಗತಿಯನ್ನು ತ್ರಿವೇಣಿ ಶಿವಕುಮಾರ್ ಅವರು 'ಬಹುರೂಪೀ ಭಾರತ'. ಎಂಬ ಪ್ರವಾಸ ಕಥನದಲ್ಲಿ ನಿರೂಪಿಸಿದ್ದಾರೆ. ೧೮೫೯ರಲ್ಲಿ ಅಂಡಮಾನಿನ ಬುಡಕಟ್ಟು ಜನಾಂಗದವರಾದ 'ಜರವಾ' ಸಮುದಾಯವು ಬ್ರಿಟಿಷರ ಜೊತೆಗೆ ಹೋರಾಡಿ ಮಡಿದ ಜಾಗವನ್ನು 'ಅಬರ್ ದೀನ್ ಹುತ್ಮಾತ ಚೌಕ', ಸೆಂಟಿನೆಲಿಯರು, ಸ್ವತಂತ್ರರು ಈಗಲೂ 'ನೀಲ್' ದ್ವೀಪದಲ್ಲಿ ವಾಸಿಸುತ್ತಾರೆ. ಆಧುನಿಕ ಜನರು ಕಂಡರೇ ವಿಷಪೂರಿತ ಬಾಣಗಳಿಂದ ಕೊಲ್ಲುತ್ತಿದ್ದರು. ನಾಗರಿಕರನ್ನು ತಮ್ಮೊಳಗೆ ಬಿಟ್ಟುಕೊಳ್ಳದಿರಲು ಕಾರಣವಿದೆ. ಆಧುನಿಕರು ಮಾಡಿದ ವಿಶ್ವಾಸ ದ್ರೋಹದ ಒಂದು ಪ್ರಸಂಗವನ್ನು ಕುರಿತು ಲೇಖಕಿ "ಅಂಡಮಾನಿನ ಸೆಲ್ಯೂಲರ್ ಜೈಲಿನಿಂದ ಖೈದಿ ದೂದಾನಾಥ್ ತಿವಾರಿ ಎನ್ನುವನು ತಪ್ಪಿಸಿಕೊಂಡು ಕಾಡಿನಲ್ಲಿ ಅಲೆಯುತ್ತಿದ್ದಾಗ, ಸಾಮಾನ್ಯವಾಗಿ ಅಪರಿಚಿತರನ್ನು ನಂಬದೆ, ಕೊಲ್ಲುವ ಜರವಾಗಳು ಅವನಿಗೆ ಅಯ್ಯೋ ಎಂದು ಆಶ್ರಯ ನೀಡಿದರು. ತಮ್ಮ ಜನಾಂಗದ ಹೆಣ್ಣನ್ನು ಕೊಟ್ಟು ವಿವಾಹ ಮಾಡಿದ್ದರು. ಈ ಜರವಾಗಳು ಒಮ್ಮೆ ಅಬರ್ ದೀನ್ ಬಜಾರಿನಲ್ಲಿರುವ ಪೋಲಿಸ್ ಠಾಣೆಯನ್ನು ಏಕಾಏಕಿ ಮೇಲೆ ಬಿದ್ದು ವಶಪಡಿಸಿಕೊಳ್ಳುವ ಯೋಜನೆ ಹಾಕಿದಾಗ, ಈ ದೂದನಾಥ್ ತಿವಾರಿ ಬ್ರಿಟೀಷರಿಗೆ ಯಾವ ಮಾಯದಲ್ಲೋ ಬಂದು ತಿಳಿಸಿ, ಇವರ ಯೋಜನೆಗಳನ್ನು ಹಾಳು ಮಾಡಿಬಿಟ್ಟನಂತೆ. ಈ ದೂದನಾಥ್ ತಿವಾರಿಯ ವಿಶ್ವಾಸ ದ್ರೋಹದಿಂದಾಗಿಯೇ ಜರವಾಗಳ

ನಾಗರಿಕ ಸಮಾಜದಿಂದ ಎಂದು ಎಂದೆಂದೂ ದೂರ ಉಳಿಯುವ ನಿರ್ಧಾರ ಮಾಡಿದರೊ ಏನೋ ಗೊತ್ತಿಲ್ಲ." (ತ್ರಿವೇಣಿ ಶಿವಕುಮಾರ್, ೨೦೧೨, ಪುಟ-೩೨೬) ಎಂದು ದಾಖಲಿಸುತ್ತಾರೆ.

ಸುಧಾಮೂರ್ತಿಯವರ 'ಕಾವೇರಿಯಿಂದ ಮೆಕಾಂಗಿಗೆ' ಕೃತಿಯಲ್ಲಿ, ಮೆಕಾಂಗ್ ನದಿಯ ತೀರದ ಮೇಲೆ ರಾಜ್ಯದಲ್ಲಿ 'ಕಾಂಬೋಜ' ಸಂತತಿಯವರು ಬುಡಕಟ್ಟು ಸಂಸ್ಕೃತಿಯವರಾಗಿದ್ದರು. ಅಲ್ಲಿನ ಮಹಿಳೆಯರು ಸಾಂಸ್ಕೃತಿಕವಾಗಿ ಕ್ರಿಯಾಶೀಲರಾಗಿದ್ದರು. ಸಂಸ್ಕೃತಿ, ಕಲೆ, ಶಿಲ್ಪಕಲೆ, ನೆಯ್ಗೆಕಲೆ, ನೃತ್ಯಕಲೆ ಎಲ್ಲವನ್ನು ಕಲಿತ್ತಿದ್ದರೆಂದು, ಇವರ ಪ್ರದೇಶವನ್ನು 'ಘೂನಾನ್' ರಾಜ್ಯ ಎಂದು ಚೀನಿಯರು ಕರೆದಿರುವುದಾಗಿ, ಚೀನಿಯರ ಪ್ರಕಾರ ಅವರು ಕಪ್ಪಾಗಿದ್ದೂ, ಕುರೂಪಿಗಳಾಗಿದ್ದಾರೆಂದು ಹೇಳುತ್ತಾರೆ. ಹೆಚ್ಚು ಬಟ್ಟೆ ಬರೆ ಉಪಯೋಗಿಸುವುದಿಲ್ಲ. ಸಭ್ಯ ಗುಣದವರು ಆಗಿದ್ದರು ಎಂದು ಕರೆದಿದ್ದಾರೆ. ಹೇಮಲತಾ ಮಹಿಷಿಯವರ 'ಕಾಂಗರೂ ಕಿವಿಯ ನಾಡಿನಲ್ಲಿ' ಕೃತಿಯಲ್ಲಿ ನ್ಯೂಜಿಲ್ಯಾಂಡ್ ದೇಶಕ್ಕೆ ಭೇಟಿಯಿತ್ತ ಸಂದರ್ಭದಲ್ಲಿ ಅಲ್ಲಿನ 'ಮಾವೋರಿ' ಬುಡಕಟ್ಟಿನ ಜನರ ಸಂಸ್ಕೃತಿಯಲ್ಲಿ ಮಹಿಳೆಯರದು ಭಿನ್ನ ಆಚರಣೆ, ಕಟ್ಟು ಮಸ್ತಾದ ಹುಡುಗಿಯರು ಮೂಗು ಉಜ್ಜಿ ತಬ್ಬಿಕೊಂಡು ಸ್ವಾಗತಿಸುವುದು ಅವರ ವಾಡಿಕೆ ಎನ್ನುತ್ತಾರೆ. ಅಲ್ಲದೇ ಅವರ ವಿಶಿಷ್ಟತೆಗಳಲ್ಲಿ ನೃತ್ಯವು ಒಂದು. ಸಂಪ್ರದಾಯದ ನಾರಿನ ಉಡುಗೆಯನ್ನು ಧರಿಸುತ್ತಾರೆ. ಗಂಡಸರದ್ದು ಕೋಲು ಹಿಡಿದು ಬೇಟೆಗಾರರ, ಯೋಧರ ನೃತ್ಯದಂತಿದ್ದರೇ, ಮಹಿಳೆಯರದು ಕುಚ್ಚಲು ಹಿಡಿದು ಚಪ್ಪಾಳೆ ತಟ್ಟುತ್ತಾ ನೃತ್ಯ ಮಾಡುತ್ತಾರೆ ಎಂದಿದ್ದಾರೆ. ಈ ನೃತ್ಯಕಲೆ ಬುಡಕಟ್ಟುಗಳಲ್ಲಿ ವಿಶಿಷ್ಟವಾದ ಆಚರಣೆಗಳಲ್ಲಿ ಒಂದು. ಅದು ಅವರ ಅಸ್ಮಿತೆಯ ಸಂಕೇತವಾಗಿಯೂ, ನೃತ್ಯಕಲೆಯನ್ನು ತಮ್ಮದೇ ಆದ ವಿಭಿನ್ನ ಶೈಲಿಯಲ್ಲಿ ಕರಗತ ಮಾಡಿಕೊಂಡಿರುವುದು ಕಂಡುಬರುತ್ತದೆ.

ಉಮಾರಾವ್ ಅವರ 'ಇನ್ನು ಎಲ್ಲಿಗೋಟ' ಎಂಬ ಕೃತಿಯಲ್ಲಿ ಭಾರತದ ವಿವಿಧ ರಾಜ್ಯಗಳಿಗೆ ಪ್ರವಾಸ ಕೈಗೊಂಡ ಅನುಭವಗಳನ್ನು ದಾಖಲಿಸಿದ್ದಾರೆ. ಅವುಗಳಲ್ಲಿ ಸಿಕ್ಕಿಂ ರಾಜ್ಯ ಪ್ರವಾಸದ ಅನುಭವವು ಒಂದು. ಸಿಕ್ಕಿಂ ಮೂಲ ನಿವಾಸಿಗಳನ್ನು 'ಲೆಪ್ಚಾ' ಬುಡಕಟ್ಟು ಎನ್ನುತ್ತಾರೆ. ಈ ಸಮುದಾಯವು ಹಿಮಪರ್ವತಗಳ ಮಡಿಲಲ್ಲಿರುವ ಊರನ್ನು 'ಸ್ವರ್ಗ' ಎಂತಲೇ ಕರೆಯುತ್ತಾರೆ. ಈ ಜನಾಂಗದ ಮಹಿಳೆಯರು ತುಂಬಾ ಕ್ರಿಯಾಶೀಲರಾಗಿದ್ದರು ಎಂದು ಲೇಖಕಿ ತಿಳಿಸಿದ್ದಾರೆ. ನಿಸರ್ಗ ಪ್ರಿಯರಾದ ಕಾರಣ ಹೂದೋಟಗಳನ್ನೇ ನಿರ್ಮಾಣ ಮಾಡಿರುವ ಸಂಗತಿಗಳು ತಿಳಿದುಬರುತ್ತವೆ. ಅಲ್ಲಿನ ಕೊನೆಯ ರಾಜ ಚೋಗ್ಯಾಲ್ ಸ್ವಾತಂತ್ರ್ಯ ಭಾರತಕ್ಕೆ ಒಪ್ಪಿಸುವವರೆಗೂ, ಅಲ್ಲಿನ ಸಂಸ್ಕೃತಿ, ನಿಸರ್ಗ ಸಂಪತ್ತು, ವೈಭವದ ಕಟ್ಟಡಗಳನ್ನು ಜಾಗರೂಕತೆಯಿಂದ ಕಾಪಾಡಿಕೊಂಡಿದ್ದರು. ಓರಿಸ್ಸಾ ರಾಜ್ಯದಲ್ಲಿನ ಬುಡಕಟ್ಟು ಮಹಿಳೆಯರಿಗೆ ಸಂಬಂಧಿಸಿದೆ. ವಿಜಯಾ ದಬ್ಬೆ ಅವರು 'ಉರಿಯ ಚಿಗುರ ಉತ್ಕಲೆ' ಪ್ರವಾಸ ಕಥನದಲ್ಲಿ ಅಲ್ಲಿನ ಗಿರಿಜನ ಮಹಿಳೆಯರು ಅರ್ಧ ತೋಳಿನ ರವಿಕೆಯನ್ನು ಹುಟ್ಟಿದನ್ನ ಕಂಡು, ತಮ್ಮ ಊರಿನಲ್ಲಿ ಮಹಾ ಆಧುನಿಕತೆ, ಪ್ಯಾಷನ್, ನಾಚಿಕೆ ಬಿಟ್ಟ ಹೆಂಗಸರು ಎನ್ನುವ ಕಲ್ಪನೆ

ಇದದ್ದನ್ನು ನೆನಪಿಸಿಕೊಳ್ಳುತ್ತಾರೆ. ಲೇಖಕಿಯ ಉದ್ದ ತೋಳಿನ ರವಿಕೆ ಅವರಿಗೆ ಹಿಂಸೆಯಾಗಿ ಕಂಡಿತ್ತು ಎನ್ನುತ್ತಾರೆ. ಓರಿಸ್ಸಾದ ಅಧ್ಯಯನ ಸಂದರ್ಭದಲ್ಲಿ ಗಿರಿಜನ ವಾಸಿಗಳಲ್ಲಿ ಜಾತಿಪದ್ಧತಿಯಿದ್ದು, ಪಂಚಮಹಲ್‌ನ ಬಳಿ ಭಾಗವತ ಗೃಹದಲ್ಲಿ ರಾಮಾಯಣ ವಾಚನ ನಡೆಯುವಾಗ ಗಿರಿಜನರು ಜಗಲಿ ಏರಿ ಕುಳಿತು ವಾಚನ ಕೇಳಿದರೆ, ಪರಿಶಿಷ್ಟ ಜಾತಿಯವರು ಕೇಳುವಂತಿರಲಿಲ್ಲ. ಜಾತಿಯತೆ ನಗರ, ಊರುಗಳಲ್ಲಿ ಸಾಮಾನ್ಯವಾದ ಸಂಗತಿ ಎನಿಸಿದರು. ನಗರಗಳಾಚೆ ಬದುಕುತ್ತಿರುವ ಬುಡಕಟ್ಟು ಜನರಿಗೂ, ಈ ಜಾತಿಪದ್ಧತಿಯ ಸೋಂಕು ಕಂಡು ವಿಜಯಾ ದಬ್ಬೆ ಅವರಿಗೆ ವಿಷಾದವೆನಿಸುತ್ತದೆ. ಬುಡಕಟ್ಟು ಜನಾಂಗಗಳಲ್ಲಿ ರಾಮಾಯಣ ವಾಚನವು ವಿರಳವಾಗಿ ನಡೆಯುತ್ತದೆ. ಅಲ್ಲದೇ ಬಹುತೇಕ ಬುಡಕಟ್ಟುಗಳಲ್ಲಿ ಜಾತಿ ಸೋಂಕುಗಳಿಲ್ಲ. ಆದರೂ ಓರಿಸ್ಸಾದ ಗಿರಿಜನಗಳಲ್ಲಿ ಜಾತಿ ನಂಬಿಕೆಗಳು ಮನೆ ಮಾಡಿರುವುದು ಕಂಡಾಗ ಆಧುನಿಕ ಮನುಷ್ಯನ ಗಾಳಿ ತಾಕಿರುವುದು ಸ್ಪಷ್ಟವಾಗುತ್ತದೆ.

ಓರಿಸ್ಸಾದ ಲೇಖಕಿ ಪ್ರತಿಭಾರಾಯ್ ಅವರ ಬಳಿ ವಿಜಯಾ ದಬ್ಬೆ ಅವರು ಗಿರಿಜನ ವಾಸಿಗಳ ಬಗ್ಗೆ ಚರ್ಚಿಸಿದಾಗ, ಅಲ್ಲಿನ ಗಿರಿಜನ ವಾಸಿಗಳು ಎಷ್ಟು ವಿಶಿಷ್ಟ ಎಂದು ಅಚ್ಚರಿಕೊಂಡಿದ್ದಾರೆ. ಮದುವೆ ಆಚರಣೆಗಳು ವಿಭಿನ್ನವಾಗಿದ್ದವು. ವಿಷಮ ವಿವಾಹಗಳು ಜಾರಿಯಲ್ಲಿದ್ದವು. ಇಲ್ಲಿನ ಹೆಣ್ಣು ಮಕ್ಕಳು(ಹೆಂಗಸರು) ತಮಗಿಂತಲೂ ಕಡಿಮೆ ವಯಸ್ಸಿನ ಗಂಡನನ್ನು ಮದುವೆಯಾಗುವ ಪದ್ಧತಿ ಜಾರಿಯಲ್ಲಿತ್ತು. ಈ ಕಾರಣಕ್ಕಾಗಿ 'ಪುಟ್ಗಂಡನ್ನ ಮದ್ವೆ ಮಾಡ್ಕಂಡು ಪಟ್ಟೆ ಸೀರೆ ಉಟ್ಕೊಂಡು' ಎಂದು ಹರಸುತ್ತಿದ್ದರು. ೮-೧೦ ವಯಸ್ಸಿನ ಹುಡುಗರಿಗೆ ೨೫-೩೦ ವರ್ಷಗಳ ಹೆಂಗಸಿನೊಂದಿಗೆ ಮದುವೆ ಮಾಡುತ್ತಿದ್ದರು. ಹುಡುಗನಿಗೆ ವಯಸ್ಸಾದಂತೆ ಮದುವೆಯಾಗುವುದು ಕಷ್ಟವಾಗಿತ್ತು. ಅದಕ್ಕಾಗಿ ಹಿರಿಯಳಾದವಳನ್ನು ಮದುವೆ ಮಾಡಿಸಿದರೆ ದುಡಿಯುತ್ತಾಳೆ. ಮನೆಯ ಜವಾಬ್ದಾರಿಯನ್ನು ನಡೆಸಿಕೊಂಡು ಹೋಗುತ್ತಾಳೆ ಎಂಬುದು ಈ ಪದ್ಧತಿಯ ವಿವರಣೆಯಾಗಿತ್ತು. ತುಂಬಾ ಕಿರಿಯ ವಯಸ್ಸಿನ ಹೆಂಡತಿ, ವಯಸ್ಸಾದ ಗಂಡಂದಿರಿಗೆ ಹಿರಿಯ ಹೆಂಡತಿಯ ಮಗನಿದ್ದರೆ, ಮಲಮಗ ಮತ್ತು ಚಿಕ್ಕಮ್ಮನ ಸಂಬಂಧಗಳು ಪ್ರಣಯ ಸಂಬಂಧಗಳಾಗುತ್ತಿದ್ದವು. ಈಗಾಗಿಯೇ ಈ ಗಿರಿಜನರಲ್ಲಿ ಮಾವ ಸೊಸೆ ಸಂಬಂಧಗಳು ಬೆಳೆಯಲಿಕ್ಕೆ ಕಾರಣವಾಗುತ್ತವೆ. ಪುಟ್ಟ ಗಂಡನಿಗೂ ನುಂಗಲಾರದ ತುತ್ತಾಗುವ ಬಂಧವಾಗಿಯೇ ಕಾಡುತ್ತವೆ. ಇಂತಹ ಆಚರಣೆಗಳಿಂದಾಗಿ ಗಂಡು-ಹೆಣ್ಣುಗಳಲ್ಲಿ ಅನೈತಿಕತೆಯ ಸಂಬಂಧಗಳು ಬೆಳೆದು, ಸಂಬಂಧಗಳ ಅರಿವು ಇಲ್ಲದಂತಾಗುತ್ತವೆ. ಇದರಿಂದ ಮಾನಸಿಕ ಸ್ವಾಸ್ಥ್ಯ ಮತ್ತು ಅಪರಾಧಿಗಳಾಗುವ ಸಂದರ್ಭಗಳು ಹೆಚ್ಚಾಗುತ್ತವೆ ಎಂದು ಪ್ರತಿಭಾರಾಯ್ ತಿಳಿಸುತ್ತಾರೆ. ಓರಿಸ್ಸಾದ ಮತ್ತೊಂದು ಬುಡಕಟ್ಟು ಸಮುದಾಯವಾದ 'ಬೊಂಡಾ' ಜನರ ಕಲೆ ಪ್ರಖ್ಯಾತವಾಗಿದ್ದು, ಹಾಡು ಕುಣಿತಗಳು ಅವರ ಬದುಕಿನ ಅವಿಭಾಜ್ಯ ಅಂಗವಾಗಿವೆ. ಹೆಣ್ಣು ಮಕ್ಕಳು ಈ ಕಲೆಗಳಲ್ಲಿ ಹೆಸರುವಾಸಿಯಾಗಿದ್ದಾರೆ. ನೃತ್ಯಕೂಟಗಳಂತಹ ಸಾರ್ವಜನಿಕ ಸಾಂಸ್ಕೃತಿಕ ಸಮಾರಂಭಗಳು ನಿರಂತರವಾಗಿ ನಡೆಯುವುದರಿಂದ ಅವರ ನಡುವಿನ ಬಾಂಧವ್ಯ

ಹೆಚ್ಚುತ್ತಿರುವುದಾಗಿ ಹೇಳುತ್ತಾರೆ.

ಒರಿಸ್ಸಾದ ಇನ್ನೊಂದು ಬುಡಕಟ್ಟು ಜನಾಂಗವೆಂದರೆ 'ಸಂತಾಲಿ'. ಈ ಜನರ ಪ್ರದೇಶವನ್ನು ಒಂದು ಸಾಂಸ್ಕೃತಿಕ ಪ್ರದೇಶದಿಂದ ಇನ್ನೊಂದು ಸಾಂಸ್ಕೃತಿಕ ಪ್ರದೇಶಕ್ಕೆ ಬದಲಾಯಿಸುವುದು ಕಷ್ಟವೆಂತಲೇ ಲೇಖಕಿಯು ಅಭಿಪ್ರಾಯ ಪಟ್ಟಿದ್ದಾರೆ. ಬಹುತೇಕ ಬುಡಕಟ್ಟು ಸಮುದಾಯಗಳ ಪರಿಸ್ಥಿತಿಯು ಇದೆ ಆಗಿದೆ. ಸಹಜವಾಗಿಯೇ ಶ್ರಮಜೀವಿಗಳಾದ ಇವರು ಸೀಮಿತ ಜಗತ್ತಿಗೆ ಹೊಂದಿಕೊಂಡು, ಹೊರ ಜಗತ್ತಿನ ಗೊಡವೆಗೆ ಹೋಗದೆ ಬದುಕುತ್ತಿರುತ್ತಾರೆ. ಹೀಗಾಗಿ ಪರಿವರ್ತನೆ ಎನ್ನುವುದು ಇವರಲ್ಲಿ ತ್ರಾಸದಾಯಕವಾಗಿದೆ. ಇಲ್ಲಿನ ಮಹಿಳೆಯರ ಸ್ಥಿತಿಗತಿಗಳು ಹೆಚ್ಚು ಅಶಾದಾಯಕವಾಗಿ ಕಂಡುಬರುವುದಿಲ್ಲ. ಇವರಲ್ಲಿ ಮೈನೆರೆದ ಹೆಣ್ಣುಮಕ್ಕಳನ್ನು ಶಾಲೆ ಬಿಡಿಸುವ ಪರಿಪಾಠವಿದೆ. ಐದು ನೂರು ಜನ ಪ್ರಾಥಮಿಕ ಶಾಲೆಗೆ ಸೇರಿದರೆ, ಪ್ರೌಢಶಾಲೆಗೆ ಹೋಗುವ ಹುಡುಗಿಯರ ಸಂಖ್ಯೆ ನೂರರ ಪ್ರಮಾಣದಲ್ಲಿರುತ್ತದೆ. ವಸತಿ ಶಾಲೆಗಳಲ್ಲಿ ಎಲ್ಲಾ ಸೇರಿ ತಿಂಗಳಿಗೆ ೫೦ರೂ ಖರ್ಚು ಇದ್ದರೂ, ಹಣ ಹೊಂದಿಸಲಾರದಷ್ಟು ಬಡತನವಿದೆ. 'ಓರಿಯಾ' ಭಾಷೆಯು ಈ ರಾಜ್ಯದ ಮಾಧ್ಯಮವಾಗಿದ್ದು, ಸಂತಾಲಿಯನ್ನರು ತಮ್ಮ ಮಾತೃ ಭಾಷೆ 'ಸಂತಾಲಿ'ಯನ್ನು ಬಿಟ್ಟು ಓರಿಯಾ ಭಾಷೆಯಲ್ಲಿ ಕಲಿಸುವುದನ್ನು ಗಮನಿಸಬಹುದು. ತೀರ ಇಚೇಗೆ ಸಂತಾಲಿ ವಾಸಿಗಳು ಆಧುನಿಕತೆಗೆ ಒಗ್ಗಿ ಚಿಕ್ಕ ಚಿಕ್ಕ ಕುಟುಂಬಗಳಾಗಿ ಹೊಡೆದುಹೋಗಿವೆ. ಮತ್ತೆ ಕೆಲವರು ನಗರವಾಸಿಗಳಾಗಿದ್ದಾರೆ.

ಅಸ್ಸಾಂನ ಮೂಲ ನಿವಾಸಿಗಳಾದ 'ಬುಡಕಟ್ಟು' ಜನರ ಸಂಸ್ಕೃತಿ ಕೃಷಿ ಪ್ರಧಾನ, ಮಾತೃ ಪ್ರಧಾನ ಸಂಸ್ಕೃತಿಯನ್ನು ಹೊಂದಿದ ನಾಡು. ಆರ್ಯ ಜನಾಂಗಗಳ ಆಗಮನದಿಂದಾಗಿ ಪಿತೃ ಪ್ರಧಾನ ಸಂಸ್ಕೃತಿ ಜಾರಿಗೆ ಬಂದಿದ್ದು, ಬುಡಕಟ್ಟು ಜನಾಂಗವು ಗುಡ್ಡಗಾಡು ಜೀವನ ನಡೆಸುವವರು ಆಗಿದ್ದರಿಂದ ವಿಶಿಷ್ಟವಾದ ಧಾರ್ಮಿಕ ವಿಧಿ, ಕ್ರೌರ್ಯ, ಕೆಳದರ್ಜೆಯ ಸಂಸ್ಕರಣಗಳ ಆಚರಣೆಗಳಿವೆ. ಆರ್ಯರ ಆಗಮನದಿಂದಾಗಿ ಶಕ್ತಿ ದೇವತೆಗಳ ಆರಾಧನೆಗಳು ಹೆಚ್ಚಾಯಿತು. ಮಾತೃ ಸಂಸ್ಕೃತಿಯನ್ನೇ ಪ್ರಧಾನವಾಗಿ ಸ್ವೀಕರಿಸಿದ್ದ ಅಸ್ಸಾಂನಲ್ಲಿ ನಿಧಾನಕ್ಕೆ ಪಿತೃ ಸಂಸ್ಕೃತಿ ಆಚರಣೆಗೆ ವಾಲಿಕೊಂಡು ಪುರುಷ ಪ್ರಧಾನ ಸಮಾಜವಾಗಿ ಮಾರ್ಪಟ್ಟಿದೆ. ಬುಡಕಟ್ಟು ಸಮುದಾಯಗಳಲ್ಲಿರುವ ಮಹಿಳಾ ಆರಾಧನೆಯು ಇದೀಗ ಇಲ್ಲದಂತಾಗಿವೆ. ಪುರುಷ ದಬ್ಬಾಳಿಕೆ, ಮೌಲ್ಯಗಳು, ಶೋಷಣೆಗಳು ಬುಡಕಟ್ಟು ಮಹಿಳೆಯರ ಯಜಮಾನಿಕೆಯನ್ನು ಕಸಿದು ಮಾನ್ಯತೆ ಇಲ್ಲವಾಗಿಸಿವೆ. ಇಲ್ಲಿನ ಮಹಿಳೆಯರಿಗಿದ್ದ ಸ್ಥಾನಮಾನಗಳನ್ನು ಕುರಿತು ಲೇಖಕಿ "ಅಸ್ಸಾಂ ರಾಜ್ಯದಲ್ಲಿ ಹಲವಾರು ಬುಡಕಟ್ಟು ಜನಾಂಗಗಳಿದ್ದು, ಅವುಗಳಲ್ಲಿ ಖಾಸಿಗಳು, ಗಾರೋಗಳು, ದಿಮಾಶ, ಕಛರಿಗಳು ಪ್ರಮುಖ ಸಮುದಾಯಗಳು. ಇದರಲ್ಲಿ ಖಾಸಿಗಳು ಪೂರ್ಣ ಮಾತೃಪ್ರಧಾನ ಕುಟುಂಬಗಳಾಗಿ ಉಳಿದಿಲ್ಲ. ಈ ಜನಾಂಗಗಳಲ್ಲಿ ತಾಯಿಯೇ ಕುಟುಂಬದ ಕೇಂದ್ರ ಬಿಂದು. ಒಬ್ಬ ತಾಯಿ ಅವಳ ಪುತ್ರಿಯರು ಅವರ ಮಕ್ಕಳೇ ಒಂದು ಕುಟುಂಬವಾಗುತ್ತಾರೆ. ಅಜ್ಜಿಯೇ ಆ ಕುಟುಂಬದ ಮೂಲ. ಮದುವೆಯ ನಂತರ ಗಂಡನೇ

ಹೆಂಡತಿಯ ಕುಟುಂಬದೊಂದಿಗೆ ಬಂದು ನೆಲೆಸುತ್ತಾನೆ. ಅವನ ಅತ್ತೆಯ ಮನೆಯ ಎಲ್ಲಾ ಸಂಪಾದನೆ, ವ್ಯವಹಾರಗಳನ್ನು ನೋಡಿಕೊಳ್ಳುತ್ತಾನೆ. ತನ್ನದೇ ಮಕ್ಕಳು ಪಡೆದ ನಂತರವಷ್ಟೇ ಗಂಡನಿಗೆ ಬೇರೆ ಮನೆ ಮಾಡಿ ಬದುಕಲು ಅವಕಾಶವಿದೆ."(ವಿಜಯಾದಬ್ಬೆ, ೧೯೯೮, ಪುಟ-೧೩೨) ಎಂದು ನಿರೂಪಿಸಿದ್ದಾರೆ. ಆದರೆ ಗಾರೋ ಜನಾಂಗದವರಲ್ಲಿ ಮಹಿಳೆಯೇ ಆಸ್ತಿಯಲ್ಲಿ ಹಕ್ಕುದಾರಳಾಗಿರುತ್ತಾಳೆ. ದಿಮಾಶ, ಕಛರಿ ಸಮುದಾಯಗಳಲ್ಲಿ ಮಗುವಿಗೆ ತಂದೆಯ ಆಯುಧಗಳು, ಹಣ, ಭೂಮಿ, ಪಶು ಸಂಪತ್ತುಗಳು ಸೇರಿದರೆ, ಮಗಳಿಗೆ ತಾಯಿಯ ಆಸ್ತಿಗಳಾದ ಕೈ ಮಗ್ಗ, ಹೆಂಗಸರ ವಸ್ತ್ರಗಳು, ಒಡವೆಗಳು, ಪಾತ್ರೆಗಳು ಇಬ್ಬರಿಗೂ ಸಮಾನವಾಗಿ ಹಂಚಲ್ಪಡುತ್ತವೆ. ಇವರಲ್ಲಿ ಹೆಣ್ಣು ಗಂಡಿನ ಸಮಾನ ಎಂದೇನೂ ಭಾವಿಸುವುದಿಲ್ಲ. ವಧು ಶುಲ್ಕ ಕಡ್ಡಾಯವಾಗಿದೆ. ಅಲ್ಲದೆ ಮದುವೆಗಳಲ್ಲಿ ವೈದಿಕ ವಿಧಿ ಮಂತ್ರಾದಿಗಳಿಂದ ನೆರವೇರಲ್ಪಡುವ ಜೊತೆಗೆ, ಮಹಿಳೆಯರೇ ವಿಧಿ ವಿಧಾನಗಳನ್ನು ನಿರ್ವಹಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ ಎಂದು ನಿರೂಪಿಸುತ್ತಾರೆ.

ಇಂದಿರಾ ಶಿವಣ್ಣ ಅವರ 'ಬದುಕಿಗೆ ಬಂಗಾರದ ಲೇಪನ' ಲಂಡನ್‌ನ ಸ್ಕಾಟ್ಲೆಂಡಿನ ಇತಿಹಾಸವನ್ನು ಒಂದನೇ ಶತಮಾನದ ರೊಮನ್ನರು ಬ್ರಿಟನ್ ಮೇಲೆ ನಡೆಸಿದ ದಾಳಿಯೊಂದಿಗೆ ಗುರುತಿಸಲಾಗುತ್ತದೆ. ಉತ್ತರ ಬುಡಕಟ್ಟು ಜನರನ್ನು ನಿಗ್ರಹಿಸುವಲ್ಲಿ ರೊಮನ್ನರು ಹಲವಾರು ವರ್ಷಗಳ ಕಾಲ ಕಾದಾಡಬೇಕಾಯಿತು. ನಲವತ್ತು ವರ್ಷಗಳ ಸತತ ಹೋರಾಟದಲ್ಲಿ ಬುಡಕಟ್ಟು ಮಹಿಳೆಯರು ಸಹ ಪಾಲ್ಗೊಂಡಿದ್ದರು. ಇಡೀ ಬುಡಕಟ್ಟು ಸಮುದಾಯದಲ್ಲಿ ಹೆಣ್ಣು ಗಂಡುಗಳ ಭೇದವಿಲ್ಲದೆ ಹೋರಾಟ ನಡೆಸಿಯೂ ಸ್ಕಾಟ್ಲೆಂಡಿನ ಸಂಸ್ಕೃತಿಯನ್ನು ಜೀವಂತವಾಗಿ ಉಳಿಸಿಕೊಂಡು ಬಂದಿದ್ದಾರೆ. ಅರೇಬಿಯಾ ದೇಶದ ಕುರಿತಾಗಿ ಲತಾಗುತ್ತಿ ಅವರು 'ನಾ ಕಂಡಂತೆ ಅರೇಬಿಯಾ' ಕೃತಿಯಲ್ಲಿ ಅಲ್ಲಿನ ಮೂಲನಿವಾಸಿ ಮಹಿಳೆಯರ ಬಗ್ಗೆ ಕೆಲ ಸಂಗತಿಗಳನ್ನು ದಾಖಲಿಸಿದ್ದಾರೆ. ಬುಡಕಟ್ಟು ಜನಾಂಗದವರ ಹಾಗೂ ಶ್ರೀಮಂತರ ಸಂಪರ್ಕದಿಂದ ದೂರವಿರುವ ಉದ್ದೇಶದಿಂದ ಈ ಪಡೆಯ ಯೋಧರು ಮರುಭೂಮಿಯ ಓಯಸಿಸ್‌ಗಳ ಸಮೀಪ 'ಹಿಜ್ರಾ' ಎಂಬ ಕಾಲೋನಿಯಲ್ಲಿ ವಾಸಿಸುತ್ತಿದ್ದರು. ಬುಡಕಟ್ಟು ಜನರು ಅಲೆಮಾರಿಗಳಾಗುವುದನ್ನು ತಪ್ಪಿಸಿ, ಅವರಿಗಾಗಿ ಮನೆಗಳು, ಶಾಲೆಗಳು, ವ್ಯವಸಾಯೋಪಕರಣಗಳನ್ನು ಬಳಸುವ ಜ್ಞಾನ, ಆಯುಧಗಳು, ಮದ್ದು ಗುಂಡುಗಳು ಇವೆಲ್ಲವನ್ನು ಒದಗಿಸಿದರು. ಇಸ್ಲಾಮಿನ ಮೂಲಭೂತವಾದವನ್ನು ಇವರಿಗೆ ಬೋಧಿಸಲು ಧಾರ್ಮಿಕ ಗುರುಗಳನ್ನು ಕರೆಸಲಾಯಿತು. ಇವೆಲ್ಲದರ ಪರಿಣಾಮವಾಗಿ ಅಲೆಮಾರಿ ಜನ ತೀವ್ರ ಸಂಪ್ರದಾಯಸ್ಥರಾದರು. ೧೯೧೮ರ ಹೊತ್ತಿಗೆ ಇವರು ಇಬ್ನಸೌಧನ ವಿದ್ಯಾವಂತರ ಪಡೆಯನ್ನು ಪ್ರವೇಶಿಸಲು ಸನ್ನದ್ಧರಾಗಿದ್ದರೆಂದು ತಿಳಿಸಿದ್ದಾರೆ.

ತ್ರಿವೇಣಿ ಶಿವಕುಮಾರ್ ಅವರ 'ಭುವನದ ಬೆರಗು' ಪ್ರವಾಸ ಕಥನದಲ್ಲಿ ನ್ಯೂಜಿಲ್ಯಾಂಡ್‌ನ ಶಾಕಾಲ್ಯಾಂಡ್ ಜನರ ಸಂಸ್ಕೃತಿ, ಭಾರತೀಯ ಸಂಸ್ಕೃತಿಯನ್ನು ಬಹುಮಟ್ಟಿಗೆ ಹೋಲುವುದನ್ನು ಹೇಳುತ್ತಾರೆ. ಶಾಕಾ ಸಂಸ್ಕೃತಿಯಲ್ಲಿ ಪುರುಷರು ಎಷ್ಟು ಹೆಣ್ಣುಗಳೊಂದಿಗೆ ಆದರೂ ಮದುವೆಯಾಗುವ

ಅವಕಾಶವಿದೆ. ಆದರೆ ವಧುವಿನ ತಂದೆಗೆ ಕನಿಷ್ಠ ಏಳು ಗೋವುಗಳನ್ನಾದರೂ ವಧುದಕ್ಷಿಣೆಯಾಗಿ ನೀಡುಬೇಕು. ಮದುವೆಗಳಲ್ಲಿ ತಾಳಿ ಕಟ್ಟುವ ಪದ್ಧತಿಯಿದ್ದು, ಒಬ್ಬ ಹುಡುಗ ಯಾವುದಾದರೂ ಹುಡುಗಿಯನ್ನು ಪ್ರೀತಿಸಿದರೆ, ಅವಳಿಗೊಂದು ನೆಕ್‌ಲೆಸ್ ಹಾಕಿ ಹುಡುಗಿಯನ್ನು ನಿಶ್ಚಯ ಮಾಡಿಕೊಳ್ಳಬೇಕು. ಹಾಗೆಯೇ ಹುಡುಗಿಯ ಮನೆಯ ಮೇಲೆ ಬಿಳಿ ಬಾವುಟವನ್ನು ಹಾರಿಸುತ್ತಾರೆ. ಹುಡುಗಿಯನ್ನು ನೋಡಲು ಯಾರು ಮನೆಗೆ ಬಾರದಿರಲು ಬಾವುಟವನ್ನು ಸಂಕೇತದಂತೆ ಬಳಸುತ್ತಾರೆ. ಅಲ್ಲಿನ ಪುರುಷರು ಐದಾರು ಜನ ಪತ್ನಿಯರನ್ನು ಹೊಂದಬಹುದಾಗಿದೆ. ಅಂತವರು ಪತ್ನಿಯರಿಗಾಗಿ ಪ್ರತ್ಯೇಕವಾದ ಗುಡಿಸಲು ಕಟ್ಟಿಸುತ್ತಾರೆ. ಪತ್ನಿಯ ಕೂಡಿಕೆಯ ಆತನಿಗೆ ಬಿಟ್ಟ ವಿಚಾರ. ಒಟ್ಟಿನಲ್ಲಿ ಶಾಕಾ ಬುಡಕಟ್ಟಿನ ಮಹಿಳೆಯರಿಗೆ ಪುರುಷ ಪ್ರಾಧಾನ್ಯತೆಯ ಕಟ್ಟುಪಾಡಿನಲ್ಲಿ ಬದುಕುವುದು ಇನ್ನು ತಪ್ಪಿಲ್ಲ ಎನ್ನುತ್ತಾರೆ.

ಗುಜರಾತಿನಲ್ಲಿ ಬಿಲ್ಲರ ಆದಿವಾಸಿ ಜನಾಂಗಗಳು ವಾಸಿಸುತ್ತಿದ್ದಾರೆ. ಬಸ್‌ಸ್ಟಾಂಡಿನಲ್ಲಿದ್ದಾಗ ಹೆಣ್ಣು ಮಕ್ಕಳು, ಮುದುಕಿಯರು ಮುಖ ಮುಚ್ಚಿಕೊಂಡು ಒಂದೇ ಗುಂಪಿನಲ್ಲಿ ಒತ್ತಟ್ಟಿಗೆ ಕೂರುತ್ತಾರೆ. ಈ ಬಗ್ಗೆ ಲೇಖಕಿ "ಇಲ್ಲಿನ ಮುದುಕಿಯರ ಕುಬುಸಗಳು, ಯುವತಿಯರ ಕುಬುಸಗಳೂ ಒಂದೇ ರೀತಿಯಲ್ಲಿ ಕಲಾತ್ಮಕವಾಗಿರುತ್ತವೆ. ಮುಖ ಮುಚ್ಚಿದ ಹೆಂಗಸರನ್ನು ಕಂಡು ಇವರು ಹುಡುಗಿಯಾ, ಹೆಂಗಸಾ, ಮುದುಕಿಯಾ ಎಂದು ಹೇಳಲು ಬರುವುದಿಲ್ಲ." (ಸಂಧ್ಯಾ ಎಸ್., ೧೯೯೭, ಪುಟ-೧೧೮) ಎನ್ನುತ್ತಾರೆ. ಇದು ಬುಡಕಟ್ಟು ವಾಸಿಗಳಲ್ಲಿರುವ ಕ್ರಿಯಾಶೀಲ ಬದುಕನ್ನು ತೋರಿಸುತ್ತದೆ. ಆದರೆ ಆದಿವಾಸಿಗಳು ಇಂದಿನ ನಾಗರಿಕತೆಗಳಲ್ಲಿ ವ್ಯಕ್ತಿಕೇಂದ್ರಿತ ನಿಲುವುಗಳ ವಿರೋಧಿ ಮನೋಭಾವವುಳ್ಳವರು. ಬಿಲ್ಲರ ಜನಾಂಗದವರು ಇದಕ್ಕೆ ವಿರುದ್ಧವಾಗಿ ವ್ಯಕ್ತಿಕೇಂದ್ರಿತ ನಿಲುವುಗಳಿಗೆ ಮನ್ನಣೆ ನೀಡುತ್ತಾರೆ. ಇದೇ ರೀತಿ ಸೋರರ್‌ನ ರಬ್ಬಾರಿಗಳು ದೃಢಕಾಯರು. ಆದರೆ ತೊಡುವುದು ಕೆಂಪು ಬಣ್ಣದ ದುಪ್ಪಟ್ಟುಗಳನ್ನೇ. ಇವರ ಕುಬಸಾಗಳು ವಿಶೇಷ. ತ್ಯಾಪೆ ಕುಬುಸಾಗಳು ಬೆನ್ನಿನ ಹಿಂದಿನ ಆಧುನಿಕ ಲೇಸ್‌ಗಳಂತೆ ಧರಿಸುತ್ತಾರೆ. ಬಣ್ಣ ಬಣ್ಣದ ದುಪ್ಪಟ್ಟಗಳು. ಮೈ ತುಂಬಾ ಚಿತ್ತಾರದ ಹಚ್ಚೆ ಹೊಯ್ದುಕೊಂಡಿರುತ್ತಾರೆ. ಹಚ್ಚೆ ಅವರ ಸೌಂದರ್ಯಕ್ಕೆ ಮೆರಗು ನೀಡುತ್ತದೆ ಎಂಬ ನಂಬಿಕೆ ಆದಿವಾಸಿಗಳಲ್ಲಿ ಈಗಲೂ ಇದೆ ಎಂದಿದ್ದಾರೆ. ತೆಲಂಗಾಣ ನೂತನ ರಾಜ್ಯ ಪ್ರವಾಸ ಮಾಡಿದ ತೇಜಸ್ವಿನಿ ಬಿ.ಯಕ್ಕುಂಡಿಮಠ ಅವರ 'ತಿರೆಯ ಮೇಲಣ ಸ್ವರ್ಗ' ಕೃತಿಯು ಬುಡಕಟ್ಟು ಸಮುದಾಯದ ಚಾರಿತ್ರಿಕ ಹಿನ್ನೆಲೆಯನ್ನು ಮಹಿಳೆಯರ ಮೂಲಕ ಗುರಿತಿಸುವ ಚರಿತ್ರೆ ಹೀಗಿದೆ. ೧೩ನೇ ಶತಮಾನದಲ್ಲಿ ವಾರಂಗಲ್ಲಿನಿಂದ ಬುಡಕಟ್ಟು ಜನಾಂಗದ ನಾಯಕರು ಭೇಟೆಗೆ ಹೋದಾಗ, ಕಾಂತಿಯುಕ್ತವಾದ ಹೆಣ್ಣು ಹಸುಗೂಸು ಕಾಡಿನಲ್ಲಿ ಭೇಟೆಯಾಡುವುದನ್ನು ಕಂಡರು. ಆ ಬುಡಕಟ್ಟು ನಾಯಕ ಆಕೆಯನ್ನು ಮಗಳಾಗಿ ಸ್ವೀಕರಿಸಿದನು. ಅಲ್ಲಿನ ಜನರಿಗೆ ಸುಖ, ಸಮೃದ್ಧಿ, ಸಂತೋಷಗಳು ಉಕ್ಕಿ ಹರಿದಿದ್ದರಿಂದ, ಅವರು ಬುಡಕಟ್ಟು ದೇವರಾದ ಕೊಂಡದೇವರೇ ಮಗುವಿನ ರೂಪದಲ್ಲಿ ಅರ್ಶಿವದಿಸಿದೆ ಎಂದು, ಆಕೆ ಕುಂಕುಮದಲ್ಲಿ ಲೀನವಾಗಿದ್ದಾಳೆ ಎಂದು ಭಾವಿಸಿ ಇಂದಿಗೂ

ಸಮ್ಮಕ್ಕಳ ಆಚರಣೆ ಮಾಡುತ್ತಾರೆ. ಗಂಡು ದೇವರ ಬದಲಾಗಿ, ಸಮ್ಮಕ್ಕ ಹೆಣ್ಣು ದೇವರಾಗಿ ವಾರಂಗಲ್ಲಿನ ಆದಿವಾಸಿಗಳ ಮೇಲೆ ಪ್ರಭಾವ ಬೀರಿರುವುದು ವಿಶೇಷವೆನಿಸುತ್ತದೆ.

ಅರುಣಾಚಲ ಪ್ರದೇಶದ ಅಪತಾನಿ ಬುಡಕಟ್ಟು ಮಹಿಳೆಯರ ಸೌಂದರ್ಯದ ಕುರಿತು ಲೇಖಕಿ ಅಂಜಲಿ ರಾಮಣ್ಣ ಅವರು "ಅಪತಾನಿ ಗುಂಪಿನ ಹೆಂಗಸರು ಅದೆಷ್ಟು ಚಲುವೆಯರು ಎಂದರೆ, ಅವರ ಚಲುವೇ ಅವರಿಗೆ ಮುಳುವಾಗದಿರಲಿ, ಎನ್ನುವ ಉದ್ದೇಶದಿಂದ ಅವರ ಮುಖವನ್ನು ವಿಕೃತಗೊಳಿಸಲು, ಅಲ್ಲಿನ ಪುರುಷ ವರ್ಗವು ಹೆಣ್ಣು ಮಕ್ಕಳ ಮೂಗಿನ ಎರಡು ಹೊಳ್ಳೆಗಳಿಗೂ ಲೋಹದಿಂದ ಮಾಡಿದ ಚಪ್ಪಟೆಯಾಕಾರದ ತಟ್ಟೆಯನ್ನು ಮೂಗು ಬೊಟ್ಟಿನಂತೆ ಚುಚ್ಚಿ ಸೇರಿಸಲಾಗುತ್ತದೆ. ಅವರು ಬೆಳೆಯುತ್ತಿದ್ದಂತೆ ಆ ತಟ್ಟೆಯ ಅಗಲ ಮತ್ತು ಭಾರದಿಂದ ಅವರುಗಳ ಮೂಗು ಜೋತು ಬಿದ್ದು ಸೌಂದರ್ಯವನ್ನು ಕುಗ್ಗಿಸಿ ಬಿಡುತ್ತದೆ ಎನ್ನುವ ವಿಷಯ ತಿಳಿಯಿತು"(ಅಂಜಲಿ ರಾಮಣ್ಣ, ೨೦೧೬, ಪುಟ-೫೫) ಎಂದು ತಮ್ಮ 'ಬೆಳಕಿನ ಸೆರಗು' ಕೃತಿಯಲ್ಲಿ ನಿರೂಪಿಸಿದ್ದಾರೆ. ಈ ವಿಚಾರಗಳು ಪ್ರವಾಸದಾಚೆಗೂ ಲೇಖಕಿಯ ಮನಸನ್ನು ಈಟಿಯಂತೆ ತಿವಿಯುತ್ತಿದ್ದವು. ಪುರುಷ ದೌರ್ಜನ್ಯಗಳು ಬುಡಕಟ್ಟಿನಿಂದ ಮುಕ್ತವಾಗದೇ ಹಾಗೆ ಉಳಿದು ಆಚರಣೆಗಳಲ್ಲಿ ಮಹಿಳೆಯರನ್ನು ಶೋಷಿಸುತ್ತಿರುವ ಅಂಶಗಳು ಇವತ್ತಿಗೂ ಬೇರೂರಿರುವುದು ತಿಳಿದು ಬರುತ್ತದೆ.

೫.೨. ದಲಿತ ಮಹಿಳಾ ಬದುಕು

ಕನ್ನಡದ ಪ್ರವಾಸ ಕಥನಗಳಲ್ಲಿ ದಲಿತ ಮಹಿಳೆ ಎಂಬ ಪ್ರಶ್ನೆಯೇ ಕುತೂಹಲಕಾರಿಯಾದದ್ದು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗುವ ಆಚರಣೆಗಳ ಒಳಗೆ, ಮಹಿಳೆಯ ಬದುಕು ಇನ್ನು ಭಿನ್ನವಾಗಿಯೇ ಇರುತ್ತದೆ. ದಲಿತ ಮಹಿಳೆಯರ ಸ್ಥಿತಿಗಳನ್ನು ವಿವರಿಸುವ ಅರಿಯುವ ಅಗತ್ಯವು ಇದೆ. ಹೇಮಾಮಾಲಾ.ಬಿ. ಅವರು ಹಿಮಾಲಯ ಪ್ರವಾಸ ಕೈಗೊಂಡ ಸಂದರ್ಭದಲ್ಲಿ, ಬಾರ್ಕೋಟ್‌ನಲ್ಲಿ ವಾಸ್ತವ್ಯಕ್ಕಿಳಿದಾಗ ಅಲ್ಲೇ ಇರುವ ದಲಿತ ಮಹಿಳೆಯೊಬ್ಬಳು 'ಬಿಸ್ ರೂಪಾಯೆ' ಎಂದು ಪದೇ ಪದೇ ಕೇಳಿದಾಗ ಅರ್ಥವಾಗದೆ ತಬ್ಬಿಬ್ಬಾಗುತ್ತಾರೆ. ಅಲ್ಲಿನ ಮಹಿಳೆಯರು ಪ್ರವಾಸಿಗರ ಬಳಿ ಬಿಸ್ ರೂಪಾಯಿ ಪಡೆದು ಜೀವನ ಸಾಗಿಸುತ್ತಿರುವುದನ್ನು ಕಂಡು ಅಶ್ಚರ್ಯ ವ್ಯಕ್ತಪಡಿಸುತ್ತಾರೆ. ಬಡತನದ ಕುಟುಂಬಗಳಿಂದ ಬಂದಂತಹವರು ಆ ಕುಟುಂಬದ ಪೋಷಣೆಗೆ ಮಹಿಳೆಯರೇ ಭಿಕ್ಷಾಟನೆ ಮಾಡುವುದನ್ನು ಕಂಡು ಲೇಖಕಿ ಸಂಕಟ ಪಡುತ್ತಾರೆ. ಸಹಯಾತ್ರಿಗಳ ಬಳಿ ಹಣವನ್ನು ಕೇಳುವುದೇ ಕಾಯಕ ಮಾಡಿಕೊಂಡಿರುವುದನ್ನು ಗಮನಿಸಿ, ಹಣ ಸಂಪಾದನೆಗೆ ದುಡಿಯುವ ಮಾರ್ಗ ಬಿಟ್ಟು ಭಿಕ್ಷಾಟನೆಗೆ ಇಳಿದಿರುವ ಬಗ್ಗೆ 'ಚಾರ್ ಧಾಮ್' ಕೃತಿಯಲ್ಲಿ ವಿಷಾದ ವ್ಯಕ್ತಪಡಿಸುತ್ತಾರೆ. ಇದು ಭಿಕ್ಷುಕಿಯೊಬ್ಬಳ ಕಥನದಂತೆ ಕಂಡರು. ದಲಿತ ಮಹಿಳೆಯರ ಸ್ಥಿತಿಗತಿಗಳು ಸುಧಾರಣೆಯಾಗದೆ ಇರುವುದನ್ನು ಗಮನಿಸಬಹುದಾಗಿದೆ.

'ಸಮನ್ವಿತೆ ಗೋಮಾಂತ' ಕೃತಿಯ ಲೇಖಕರಾದ ಸುಧಾ ಚಿದಾನಂದಗೌಡ ಅವರು ಗೋವಾದ ಶ್ರೀಮಂತ ಮಹಿಳೆಯರ ಜೊತೆಗೆ ಅಲ್ಲಿನ ದಲಿತ ವರ್ಗದ ಹೆಣ್ಣು ಮಕ್ಕಳ ಬದುಕನ್ನು ದಾಖಲಿಸಿದ್ದಾರೆ. ದಲಿತ ಮಹಿಳೆಯರ ಬದುಕು ಗೋವಾದ ಶ್ರೀಮಂತಿಕೆಯಲ್ಲಿ 'ದೀಪದ ಕೆಳಗೆ ಕತ್ತಲು' ಎಂಬ ಮಾತಿನಂತೆ ಅಲ್ಲಿನ ಗುಲಾಮ ಗಿರಿತನ ಹೇಳುತ್ತಿತ್ತು. ಗೋವಾವು ಸಮೃದ್ಧವೂ, ಶ್ರೀಮಂತವೂ, ಬಲಿಷ್ಠವೂ ಆಗಿದ್ದ ಗೋವಾದಲ್ಲಿ ಗುಲಾಮಗಿರಿಯು ಪೋರ್ಚ್‌ಗೀಸರಿಗೆ ಒಂದು ಮಾರುಕಟ್ಟೆಯಾಗಿತ್ತು. ಗುಲಾಮರು ಭಾರತೀಯ ತಳವರ್ಗದವರೇ ಆಗಿದ್ದರು. ಮಹಿಳೆಯರು ಈ ಶ್ರೀಮಂತ ಜಮೀನ್ದಾರಿ ಕುಟುಂಬಗಳಲ್ಲಿ ಕೆಳಗೆ ದುಡಿಯುತ್ತಿದ್ದರು. ಬಹುತೇಕ ದೈಹಿಕ ಸಾಮರ್ಥ್ಯವನ್ನು ಬೇಡುವ ಕೆಲಸಗಳಲ್ಲಿ ದಲಿತ ವರ್ಗದ ಹೆಣ್ಣು ಗಂಡುಗಳಿರುತ್ತಿದ್ದರು. ಗೋವಾದಲ್ಲಿ ಬಹುವರ್ಷಗಳ ಕಾಲ ಚಾಲ್ತಿಯಲ್ಲಿದ್ದ ಈ 'ಗುಲಾಮಗಿರಿ ಪದ್ಧತಿ'ಯಲ್ಲಿ ದಲಿತ ವರ್ಗಕ್ಕೆ ಸೇರಿದ ಮಹಿಳೆಯರನ್ನು ಹೀನಾಯವಾಗಿ ತಮ್ಮ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದರು. ಗೋವಾದ ಶ್ರೀಮಂತಿಕೆಯ ತಳಹದಿಯೊಳಗೆ ಉದುಗಿರುವ ಇಂತಹ ಸಂಗತಿಗಳು ದಲಿತ ಮಹಿಳೆಯರ ಬದುಕನ್ನು ಕಥೆಕಟ್ಟಿ ಹೇಳುವಂತಿವೆ.

ಬಯಲು ಸೀಮೆಯ ಪ್ರದೇಶಗಳಂತೆ ಹೊಟ್ಟೆಗಾಗಿ ಗೇಣುಬಟ್ಟೆಗಾಗಿ ಎನ್ನುವ ಪರಿಸ್ಥಿತಿಗಳು ಪ್ರವಾಸಿ ತಾಣಗಳಿಗೆ ಇರುವುದಿಲ್ಲ. ಶೋಷಣೆಗೊಳಪಡಿಸುವ ಪರಿಸ್ಥಿತಿಯಾಗಲಿ ಅಸ್ಪೃಶ್ಯತೆಯಂತಹ ಅನಿಷ್ಟ ಪದ್ಧತಿಗಳನ್ನಾಗಲಿ ಒಪ್ಪಿಕೊಂಡು ಬದುಕಬೇಕಾದಂತಹ ದೈನೇಸಿ ಪರಿಸ್ಥಿತಿ ಈಗ ಇಲ್ಲ. ಆದರೆ ಶೋಷಣೆಯ ಸ್ವರೂಪಗಳು ಬದಲಾಗಿವೆ. ಆಧುನಿಕತೆಯ ಕಾಲ್ದೆಸೆಯಲ್ಲಿ ವಿವಿಧ ರೀತಿಯ ಶೋಷಣೆಗಳ ಜೊತೆಗೆ, ಆರ್ಥಿಕ ಶೋಷಣೆ ಮಾತ್ರ ಇದ್ದೇ ಇದೆ. ಊಟವಿದೆ, ಬಟ್ಟೆಯಿದೆ, ಗುಡಿಸಲಿನಂತಹ ಸೂರಿದೆ. ಕುಟುಂಬವಿದೆ. ಎಲ್ಲಾ ಇದ್ದಂತೆ ಇದ್ದರೂ ಏನೋ ಒಂದಿಲ್ಲವೆಂಬ ಭಾವ ಇವರಲ್ಲಿ ಕಾಣಿಸುತ್ತದೆ. ದಲಿತ ಮಹಿಳೆಯೊಬ್ಬಳು ತನ್ನ ಅಳುತ್ತಿರುವ ಮಗುವನ್ನು ಟವೆಲಿನಿಂದ ಹೊದಿಸಿ ಎದೆಗೊತ್ತಿಕೊಂಡು ಬೋಟಿನೊಳಗೆ ಕೂತು ದುಡಿಮೆಗೆ ಹೋಗುತ್ತಿರುವ ದೃಶ್ಯ ಲೇಖಕಿಗೆ ಮನಕಲುಕುತ್ತದೆ. ಅಳುತ್ತಿದ್ದ ಮಗುವಿನ ಜೊತೆಗಿದ್ದ ಆ ತಾಯಿಗೆ ಜ್ವರ, ಕೆಮ್ಮುವಿನಿಂದ ಬಳಲುತ್ತಿದ್ದ ಶಬ್ಧ ಕೇಳಿಸಿಕೊಂಡು, ಲೇಖಕಿ ಕುಡಿಯಲು ನೀರು ಕೊಟ್ಟು ವಿಚಾರಿಸಿದಾಗ, ಅವಳು ಲಾಡ್ಜ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಸಂಗತಿ ತಿಳಿಯುತ್ತದೆ. ಆಕೆಗೆ ನಾಲ್ಕು ಮಕ್ಕಳು, ಹುಬ್ಬಳ್ಳಿಯಿಂದ ಗೋವಾಕ್ಕೆ ಬಂದು ಇಪ್ಪತ್ತು ವರ್ಷಗಳ ಕಾಲ ಲೈಂಗಿಕ ಕಾರ್ಯಕರ್ತೆಯಾಗಿ ಜೀವನ ಸಾಗಿಸಿದ್ದಳು. ಗೋವಾದಲ್ಲಿ ಬಡ ಹೆಣ್ಣುಮಕ್ಕಳ ಮಾರಾಟ ಮಾಡುವ ಸಂಗತಿಗಳು ಇಂದು ಗುಟ್ಟಾಗಿ ಉಳಿದಿಲ್ಲ. ಎಷ್ಟೋ ಟಿ.ವಿ. ಕಾರ್ಯಕ್ರಮಗಳಲ್ಲಿ ಈ ಕುರಿತು ಪ್ರಸಾರವಾಗಿವೆ. ಲೈಂಗಿಕ ಹಿತಾಸಕ್ತಿಗೆ ಹೆಣ್ಣುಮಕ್ಕಳನ್ನು ಅದರಲ್ಲೂ ಬಡತನದಲ್ಲಿರುವ ದಲಿತ ಮಹಿಳೆಯರನ್ನು ಬಳಸಿಕೊಳ್ಳುತ್ತಿರುವ ವಿಷಯ ತಿಳಿದು ಲೇಖಕಿಗೆ ಎದೆ ನಡುಗಿದ ಅನುಭವವಾಗುತ್ತದೆ. ಬೋಟಿನಲ್ಲಿ ಮಗುವನ್ನು ಅವುಚಿಕೊಂಡು ಕೂತ ಹೆಣ್ಣುಮಗಳನ್ನು ನೋಡಿದಾಗ ನಿರಂಜನರ 'ಕೊನೆಯ ಗಿರಾಕಿ' ಕತೆಯ 'ಕಾಣಿ'ಯನ್ನು ನೆನಪಿಗೆ ತಂದುಕೊಂಡು

ಕಣ್ಣನ್ನು ಒದ್ದೆಮಾಡಿಕೊಳ್ಳುತ್ತಾರೆ. ಆ ಮಹಿಳೆಯ ಬದುಕು ಇನ್ನೊಬ್ಬರ ಕೈಯಲ್ಲಿ ನಲುಗುತ್ತಿರುವುದನ್ನು ಕಂಡು ಆಕೆಯ ಒಂಟಿತನ, ಮಕ್ಕಳನ್ನು ಸಾಕಲಾರದ ಅಸಹಾಯಕತೆ ಎಲ್ಲವೂ ಲೇಖಕಿಯ ಕಣ್ಣುಮುಂದೆ ಬಂದಂತೆ ಭಾಸವಾಗುತ್ತವೆ.

ಲತಾಗುತ್ತಿ ಅವರ 'ನಾ ಕಂಡಂತೆ ಅರೇಬಿಯಾ' ಪ್ರವಾಸ ಕಥನವು ಅರೇಬಿಯಾ ದೇಶವನ್ನು ಕುರಿತಾಗಿದೆ. ಮನೆಗೆಲಸದ ಮಹಿಳೆಯರು ಸಿಗದಿರುವುದಕ್ಕೆ ಸುಡಾನ್, ಯಮನ್, ಜೋರ್ಡನ್ ದೇಶಗಳಲ್ಲಿ ತಳವರ್ಗದ ಮಹಿಳೆಯರನ್ನು ಕರೆಸುತ್ತಾರೆ. ಇಂಗ್ಲೀಷ್ ಬಲ್ಲಂತಹ ಮಹಿಳೆಯರನ್ನು ಫಿಲಿಪೈನ್ಸ್, ಇಂಡೋನೇಶಿಯ, ಥೈಲ್ಯಾಂಡ್ ಮೊದಲಾದ ಕಡೆಗಳಿಂದ ಮನೆಗೆಲಸಗಳಿಗೆ ಕರೆದುಕೊಂಡು ಬಂದು ದುಡಿಸುತ್ತಾರೆ. ಒಮ್ಮೆ ಪಾಸ್‌ಪೋರ್ಟ್ ಸಿಕ್ಕರೆ ನರಕದಲ್ಲಿ ಬಿದ್ದಂತಹ ಅನುಭವ ಈ ದಲಿತ ಮಹಿಳೆಯರಿಗೆ ಆಗುತ್ತದೆ. ಮನೆ ಒಡತಿಯ ಬೈಗುಳ, ಹೊಡೆತಗಳಿಗೆ, ಹಿಂಸೆಗಳಿಗೆ ಬಲಿಯಾಗುತ್ತಾರೆ. ಭಾರತದಲ್ಲಿ ದಲಿತ ಮಹಿಳೆಯರ ಮೇಲೆ ಅತ್ಯಾಚಾರ, ಶೋಷಣೆ, ದಬ್ಬಾಳಿಕೆಗಳು ನಡೆದ ಹಾಗೆ, ಅರೇಬಿಯಾ ದೇಶದಲ್ಲೂ ಸಾಕಷ್ಟು ನಡೆಯುತ್ತಿವೆ. ಅದು ಇತ್ತೀಚಿಗೆ ಸುಧಾರಿಸಿರುವ ಕುರಿತು ಲೇಖಕಿ ಲತಾಗುತ್ತಿ ಪ್ರಸ್ತಾಪಿಸುತ್ತಾರೆ.

ಕನ್ನಡದ ಮಹಿಳಾ ಪ್ರವಾಸ ಕಥನಗಳಲ್ಲಿ ಮಹಿಳೆಯರನ್ನು ಪ್ರತಿನಿಧಿಸುವಂತಹ ಅನೇಕ ಅಂಶಗಳಿವೆ. ದಲಿತ ಮಹಿಳೆಯರ ಸಂಸ್ಕೃತಿಯು ಹೆಚ್ಚಾಗಿ ಕಂಡುಬರುವುದಿಲ್ಲ. ದಲಿತರ ಬದುಕು ಬವಣೆಗಳ ವಿವರಗಳು ಮಾತ್ರ ಕಂಡುಬರುತ್ತವೆ. ಕೆಲವೇ ಕೆಲವು ಸ್ವದೇಶಿ ಪ್ರವಾಸ ಕಥನಗಳಲ್ಲಿ ದಲಿತ ಮಹಿಳೆಯ ಸ್ಥಿತಿಗತಿಗಳನ್ನು, ಅವರ ಬದುಕಿನ ಸ್ವರೂಪವನ್ನು ನೋಡಲಿಕ್ಕೆ ಸಾಧ್ಯವಾಗಿದೆ. ವಿದೇಶ ನೆಲಗಳಲ್ಲಿ ದಲಿತ ಎಂಬ ಪದವಿಲ್ಲ. ಹೀಗಾಗಿ ವಿದೇಶಿ ಪ್ರವಾಸ ಕಥನದಲ್ಲಿ ದಲಿತ ಮಹಿಳೆಯ ಬದುಕನ್ನು ಹೆಚ್ಚು ಕಾಣಲಿಕ್ಕೆ ಸಾಧ್ಯವಾಗಿಲ್ಲ. ಅಕಾಡೆಮಿಯಂತಹ ರಾಜ್ಯ ಅಧ್ಯಯನಗಳಲ್ಲೂ ದಲಿತ ಮಹಿಳೆಯರ ಸ್ಥಿತಿಗತಿಗಳು ಕಂಡುಬರುವುದಿಲ್ಲ.

೫.೩. ಮಹಿಳಾ ಶ್ರಮ ಸಂಸ್ಕೃತಿ

ಮಹಿಳಾ ಶ್ರಮ ಸಂಸ್ಕೃತಿ ಎನ್ನುವುದು ಪ್ರಾಚೀನ ಕಾಲದಿಂದ ಇಂದಿನ ವರೆಗೂ ನಿರಂತರವಾಗಿ ನಡೆಯುತ್ತಲೇ ಇರುವ ಪ್ರಕ್ರಿಯೆ. ಮಹಿಳಾ ಶ್ರಮಿಕ ಜೀವನದಲ್ಲಿ ಆರ್ಥಿಕ ಅಸಮಾನತೆಯನ್ನು ಅನುಭವಿಸಿದರು ಮಹಿಳೆಯರನ್ನು ಆದಾಯವಿಲ್ಲದ ದುಡಿಮೆಗೆ ದೂಡಿರುವುದನ್ನು ಚರಿತ್ರೆಗಳಲ್ಲಿ ದಾಖಲಾಗಿವೆ. ಇಂತಹ ಶ್ರಮ ಜೀವನವನ್ನು ದೇಶ-ವಿದೇಶದಲ್ಲಿ ಮಹಿಳೆಯರು ಅನುಭವಿಸುತ್ತಲೇ ಇರುವ ಸಂಗತಿಗಳನ್ನು ಮಹಿಳಾ ಪ್ರವಾಸ ಕಥನಗಳು ಕಟ್ಟಿಕೊಡುತ್ತವೆ. ಅನುಪಮಾ ನಿರಂಜನರ ಬರ್ಲಿನ್ ಪ್ರವಾಸದಲ್ಲಿ ಮಹಿಳೆಯರು ಏಪ್ರನ್ ಕಟ್ಟಿಕೊಂಡು ನೆಲ ಒರೆಸುವ ಅವರ ಮುಖದಲ್ಲಿ ತಾವು ಈ ಕೆಲಸ ಮಾಡುತ್ತಿದ್ದೇವೆ ಎನ್ನುವ ಬೇಸರದ ಭೀತಿಯಿರಲಿಲ್ಲ. ಖುಷಿಯಿಂದಲೇ ಕೆಲಸ ಮಾಡುತ್ತಿದ್ದ ಬರ್ಲಿನ್ ಮಹಿಳೆಯರು ದೊಡ್ಡ ಅಧಿಕಾರಿಗಳೊಡನೆ ಮುಕ್ತವಾಗಿ ಮಾತನಾಡುತ್ತಿದ್ದರು. ಮೇಲು-ಕೀಳು, ಭೇದ-ಭಾವ ಎನ್ನದೇ

ಕೆಲಸ ಮಾಡುವುದನ್ನು ಕಂಡು ಲೇಖಕಿ ಸಂತಸ ಪಡುತ್ತಾರೆ. ಅಲ್ಲಿನ ಗೈಡ್ ಕೆಲಸ ನಿರ್ವಹಿಸುತ್ತಿದ್ದ 'ರುತ್' ಎಂಬಾಕೆಯ ಬಗ್ಗೆ ಲೇಖಕಿ "ಶ್ರೀಮತಿ ರುತ್ ಕಷ್ಟಸಹಿಷ್ಣು, ಕೆಲಸ ಮಾಡಲು ಅತೀವ ಆಸಕ್ತಿ. ತಮ್ಮ ದೇಶದ ಮೇಲೆ, ಭಾಷೆಯ ಮೇಲೆ ಅತ್ಯಂತ ಅಭಿಮಾನ, ಜ್ಞಾನ ಪಿಪಾಸು". (ಅನುಪಮಾ ನಿರಂಜನ, ೧೯೯೭, ಪುಟ-೩೭) ಎಂದು ಶ್ಲಾಘಿಸಿದ್ದಾರೆ. ರುತ್‌ನ ನಡೆವಳಿಕೆಯಲ್ಲಿ ಅಲ್ಲಿನ ಮಹಿಳೆಯರು ದುಡಿಮೆಗೆ ಪುರುಷರಿಗಿರುವಷ್ಟೇ ಸರಿಸಮಾನವಾದ ಅವಕಾಶಗಳಿವೆ. ಹೀಗಾಗಿ ರುತ್‌ಳ ಅಭಿಪ್ರಾಯದಲ್ಲಿ ಶ್ರಮ ಸಂಸ್ಕೃತಿಯು ವ್ಯಕ್ತಿತ್ವ ವಿಕಸನ ವೈಯಕ್ತಿಕ ಆಗದೆ, ದೇಶದ ವಿಕಸನಕ್ಕೆ ಸಹಕಾರಿಯಾಗುತ್ತದೆ ಎಂದು ತಿಳಿಸುತ್ತಾಳೆ. ಅನುಪಮಾ ಅವರು ಜರ್ಮನ್ ಮಹಿಳೆಯೊಬ್ಬಳಿಗೆ ಹೆಂಗಸರೆಲ್ಲಾ ಮನೆಯ ಹೊರಗೆ ದುಡೀತಾರಾ ಎಂಬ ಪ್ರಶ್ನೆಗೆ ಅಲ್ಲಿನ ಮಹಿಳೆಯು "ಹೌದು ವೃದ್ಧೆಯರು ಮಾತ್ರ ಮನೇಲಿರುತ್ತಾರೆ, ಉಳಿದೋರೆಲ್ಲಾ ಕೆಲ್ಸ ಮಾಡ್ತಾರೆ. ಕೆಲ್ಸ ಮಾಡ್ದೆ ಇರೋದಾದ್ರು ಹೇಗೆ? ಉಸಿರಾಡಿದಷ್ಟೇ ಅಗತ್ಯ ನಮಗೆ ಕೆಲಸ ಮಾಡೋದು. ನಮ್ಮ ದೇಶ ಇನ್ನೂ ಮುಂದುವರೆಸಬೇಕು. ನಾವೆಲ್ಲಾ ದುಡೀಯದಿದ್ರೆ ಅದು ಸಾಧ್ಯವಾಗುತ್ತ?" (ಅದೇ, ಪುಟ-೩೭,೩೮) ಎಂದು ಶ್ರಮದ ಕೆಲಸವನ್ನು ದೇಶದ ಏಳಿಗೆಗೆ ಅರ್ಪಿಸಿದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ. ಇಲ್ಲಿನ ಮಹಿಳೆಯರಿಗೆ ದುಡಿಮೆಯ ಬಗೆಗಿರುವ ಆಸಕ್ತಿ ಅಪೂರ್ವವಾದದು ಎಂದು ಲೇಖಕಿಗೆ ಇದರಿಂದ ಸ್ಪಷ್ಟವಾಗುತ್ತದೆ. ಮನೆಯಲ್ಲಿ ಕಾಲ ಕಳೆಯದೆ ದೇಶದ ಎಲ್ಲಾ ಕ್ಷೇತ್ರಗಳಲ್ಲೂ ಗಂಡಸರಿಗೆ ಸರಿಸಮಾನರಾಗಿ ಕೆಲಸ ಮಾಡುತ್ತಿರುವ ಮಹಿಳೆಯರನ್ನು ಕಂಡು ಗೌರವದ ಭಾವನೆ ಮೂಡುತ್ತದೆ. 'ಅಂಗೈಯಲ್ಲಿ ಯುರೊ ಅಮೇರಿಕ' ಎಂಬ ಅನುಪಮಾ ನಿರಂಜನರ ಮತ್ತೊಂದು ಕೃತಿಯಲ್ಲಿ ಸ್ವೀಸ್ ದೇಶದ ಮಹಿಳೆಯರ ಶ್ರಮ ಸಂಸ್ಕೃತಿಯ ಬಗ್ಗೆ ಉಲ್ಲೇಖಿಸುತ್ತಾರೆ. ಅಲ್ಲಿನ ಎಲ್ಲಾ ಕೆಲಸಗಳು ಯಂತ್ರಗಳಿಂದ ನಿರ್ವಹಿಸುವುದರಿಂದ ಮಹಿಳೆಯರಿಗೆ ದೈಹಿಕ ಶ್ರಮವೇ ಇಲ್ಲವಾಗಿದೆ. ಆದರೂ ಅವರು ಅಷ್ಟು ಒಳ್ಳೆಯ ಮೈಮಾಟ ಉಳಿಸಿಕೊಂಡಿರೋದು ಹೇಗೆ ಎಂಬುದನ್ನು ಪ್ರಸ್ತಾಪಿಸುತ್ತಾರೆ. ಈ ಕೃತಿಯ 'ಸೀನ್ ನದಿಯ ಎಡದಂಡೆ' ಅಧ್ಯಾಯದಲ್ಲಿ, ಲೇಖಕಿ ಫ್ರಾನ್ಸ್‌ನ ಪರ್ವತ ಪ್ರದೇಶಗಳ ನಡುವೆ ಹಳ್ಳಿಯೊಂದರ ಹೊಲದಲ್ಲಿ ತಾಯಿ, ಮಗ ಹಸು ಕಟ್ಟಿ ಉಳುತ್ತಿದ್ದ, ಮಗಳು ಹಸುಕರುಗಳಿಗೆ ಹುಲ್ಲು ಮೇಯಿಸುತ್ತಿದ್ದಳು. ಲ್ಯಾಬ್ರಡಾರ್ ನಾಯಿಯೊಂದು ಕುಪ್ಪಳಿಸುತ್ತಿದ್ದ ದೃಶ್ಯ ಕಂಡ ಲೇಖಕಿಗೆ ಭಾರತದ ಹಳ್ಳಿಯೊಂದರ ಪರಿಸರವೇ ಕಣ್ಣಮುಂದೆ ಬಂದಂತಾಗುತ್ತದೆ. ಪ್ಯಾರಿಸ್‌ನ ಭವ್ಯ ಕಟ್ಟಡಗಳನ್ನು ಕಂಡಾಗಲೂ ಈ ಪುಟ್ಟ ಹಳ್ಳಿಯ ಶ್ರಮಿಕ ಜೀವಿಗಳ ಬದುಕು ಮಾಸದೇ ಹೋಗುತ್ತದೆ. ವೃದ್ಧೆಯೊಬ್ಬಳು ಸಾಮಾನುಗಳನ್ನು ಪುಟ್ಟ ಟ್ರಾಲಿಯೊಂದರಲ್ಲಿ ಹಾಕಿ, ನೂಕಿಕೊಂಡು ಹೋಗುತ್ತಿರುವುದು, ಭಿಕ್ಷೆ ಬೇಡುತ್ತಿರುವ ದೃಶ್ಯಗಳು, ವಿದೇಶಿ ನೆಲ ಹೊರ ಜಗತ್ತಿಗೆ ಶ್ರೀಮಂತಿಕೆ ತೊರ್ಪಡಿಕೆಯಾಗಿದ್ದರೂ ಎಲ್ಲಾ ಪ್ರದೇಶಗಳಲ್ಲೂ ಬಡತನವಿದೆ. ಅದರಲ್ಲೂ ಮಹಿಳೆಯರ ಸ್ಥಿತಿಗತಿಗಳನ್ನು ಕಂಡಾಗ ಶ್ರಮದ ವಿಧಾನಗಳು ಬೇರೆಯಾಗಿದ್ದರೂ, ಅದರ ಅನುಭವಗಳು ಒಂದೇ ತೆರನಾಗಿರುವುದು ಕಂಡುಬರುತ್ತದೆ.

ಮಹಿಳಾ ಶ್ರಮ ಸಂಸ್ಕೃತಿಯ ಕುರಿತು ಹೇಮಲತಾ.ಎಚ್.ಎಂ. ಅವರು ಹಂಗೇರಿಯ ಕಮ್ಯೂನಿಸ್ಟ್ ಆಡಳಿತವಿದ್ದ ಕಾಲದಲ್ಲಿ ಆರ್ಥಿಕತೆಗೆ ಮಹಿಳೆಯರ ಕೊಡುಗೆ ಅಪಾರವಾಗಿತ್ತು. ಬಿದ್ದು ಹೋದಮೇಲೆ ಮಹಿಳೆಯರು ಶ್ರಮದ ಮಾರುಕಟ್ಟೆಯಿಂದ ಹೊರಹಾಕಲ್ಪಟ್ಟಿದ್ದರು. ಆದರೆ ನಿರುದ್ಯೋಗದ ಸಮಸ್ಯೆ ಉಂಟಾದರೂ, ಮಹಿಳೆಯರಿಗೆ ಹೆಚ್ಚು ತಟ್ಟಲಿಲ್ಲ. ಮಹಿಳೆಯರು ಗೃಹಿಣಿಯರಾಗೆ ಉಳಿದರು. ಈ ಕುರಿತು ಸರ್ಕಾರದ ಅಂಕಿ ಅಂಶಗಳು ಹೀಗಿವೆ. "ಹಂಗೇರಿಯಲ್ಲಿ ದೈಹಿಕ ಶ್ರಮವಿಲ್ಲದ ವೃತ್ತಿಗಳಲ್ಲಿ ಮಹಿಳೆಯರ ಸಂಖ್ಯೆ ಅಧಿಕವಾಗಿದ್ದು, ಅದು ಶೇಕಡಾ ೭೪%ರಷ್ಟಿದೆ. ಸೇವಾವಲಯದಲ್ಲಿ ೫೪%ರಷ್ಟಿದೆ. ಕೃಷಿ, ಗಣಿ ಹಾಗೂ ಉತ್ಪಾದನಾ ಕ್ಷೇತ್ರದಲ್ಲಿ ಶೇಕಡಾ ೨೨% ರಷ್ಟಿದೆ. ಅವರ ದುಡಿಮೆಯ ಪ್ರಮಾಣ ಅಧಿಕವಾಗಿದ್ದರೂ ಪುರುಷರಿಗಿಂತ ಕಡಿಮೆಯಿದೆ. ಸ್ತ್ರೀಯರದು ಶೇ.೪೫ ಇದ್ದರೆ, ಪುರುಷರದು ಶೇ.೫೬ರಷ್ಟಿದೆ. ವೃತ್ತಿಪರ ಕೆಲಸಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಕಡಿಮೆಯಾಗಿದೆ. ಮಹಿಳೆಯರಲ್ಲಿ ಆತ್ಮವಿಶ್ವಾಸದ ಕೊರತೆ, ಪ್ರೇರಣೆಯಿಲ್ಲದಿರುವುದು, ಕುಟುಂಬದಲ್ಲಿ ಹಾಗೂ ಕೆಲಸದ ಸ್ಥಳದಲ್ಲಿ ಜಂಡರ್ ಶ್ರಮವಿಭಜನೆ, ಸಾಮಾಜಿಕ ಪೂರ್ವಗ್ರಹಿಕೆ ಮತ್ತು ಜಂಡರ್ ತಾರತಮ್ಯ ಇದಕ್ಕೆ ಕಾರಣ." (ಹೇಮಲತಾ.ಎಚ್.ಎಂ, ೨೦೧೧, ಪುಟ-೧೫೭-೧೫೮) ಭಾರತದಲ್ಲಿ ದೈಹಿಕ ಶ್ರಮದ ಕೆಲಸಗಳಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಕೃಷಿ, ಮನೆಗೆಲಸ, ಶಿಕ್ಷಣ, ಸಾಮಾಜಿಕ, ವೃತ್ತಿಪರವಾದ ಕೆಲಸಗಳಲ್ಲಿ ಹೆಚ್ಚು ಶ್ರಮ ಪಡುತ್ತಿರುವುದು ಕಂಡುಬರುತ್ತದೆ.

ಪಾರ್ವತಮ್ಮ ಮಹಾಲಿಂಗಶೆಟ್ಟಿ ಅವರ 'ಅಮೇರಿಕಾದ ಇತಿಹಾಸ ಮತ್ತು ಜನಜೀವನ' ಪ್ರವಾಸ ಕೃತಿಯಲ್ಲಿ ಅಮೇರಿಕಾದ ಕ್ಲೀನಿಂಗ್ ಲೇಡಿಯ ಸ್ವಚ್ಛತೆಯ ಕುರಿತು ತಿಳಿಸಿದ್ದಾರೆ. ಅವರ ಸ್ವಚ್ಛತೆಯ ಕಾಳಜಿ, ಶ್ರಮದಲ್ಲಿಯೂ ಸೌಂದರ್ಯದ ಬಗ್ಗೆ ಕಾಳಜಿವಹಿಸುವ ಆಕೆಯ ಬುದ್ಧಿವಂತಿಕೆ ಕಂಡು ಲೇಖಕಿಯು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಅಮೇರಿಕಾದ ಆಸ್ಪತ್ರೆಯಲ್ಲಿನ ಕ್ಲೀನಿಂಗ್ ಲೇಡಿಯನ್ನು ಕಂಡು ಡಾಕ್ಟರ್ ಎಂದೇ ಭಾವಿಸಿದ್ದಾರೆ. ಕ್ಲೀನಿಂಗ್ ಲೇಡಿ ಎಂದು ತಿಳಿದು ಭಾರತೀಯ ಮಹಿಳೆಯರ ಸ್ಥಿತಿಗತಿಯನ್ನು ನೆನೆಯುತ್ತಾರೆ. ಭಾರತದಲ್ಲಿ ಸ್ವಚ್ಛತೆಯ ಕೆಲಸಗಳನ್ನು ಮಾಡುವವರನ್ನು ನಿರ್ದಿಷ್ಟವಾಗಿ ಗುರುತಿಸಬಹುದು, ಅವರ ವಸ್ತ್ರ, ದೈಹಿಕ ಸ್ಥಿತಿಗತಿಗಳೇ ಕೂಲಿಕಾರರೆಂದು ಹೇಳಿಬಿಡುತ್ತವೆ. ಆದರೆ ಅಮೇರಿಕಾದಲ್ಲಿ ಇದಕ್ಕೆ ತದ್ವಿರುದ್ಧವಾಗಿದ್ದು, ಉನ್ನತ ನೌಕರಿಯಲ್ಲಿ ಇರುವವರಂತೆ ಕಂಡುಬರುತ್ತಾರೆ. ಅಮೇರಿಕಾದಲ್ಲಿ ಸಂಬಳವನ್ನು ನೀಡುವವರು, ಶ್ರಮವನ್ನು ನಂಬಿ ಬದುಕುವವರಿಗೂ ಸಮಾನ ಗೌರವದಿಂದ ಕಾಣುತ್ತಾರೆ. ಭಾರತದಲ್ಲಿ ಶ್ರಮ ಸಂಸ್ಕೃತಿ ಹಿನ್ನೆಲೆಯವರು ಯಜಮಾನನ ಸರಿಸಮಾನವಾಗಿ ಬದುಕುವುದನ್ನು ಸಹಿಸದೇ ಇರುವವರೆ ಹೆಚ್ಚು. ಈ ತಾರತಮ್ಯ ಹೋಗಿ ಸಮಾನತೆ, ಸ್ವಚ್ಛತೆಯ ಹಾದಿ ತುಳಿಬೇಕು ಎಂಬುದು ಲೇಖಕಿಯ ಆಶಯವಾಗಿದೆ.

ಇಂತಹ ಗುಲಾಮ ಪದ್ಧತಿಯ ವಿರುದ್ಧ ಬಂಡಾಯ ಸಾರಿದ್ದ ಪ್ರಥಮ ಸ್ತ್ರೀವಾದಿ ಬರಹಗಾರ್ತಿ ಅಫ್ರಾ ಬೆನ್ ಆಕೆಯ ಅನುಭವಗಳನ್ನು ತನ್ನ ಪ್ರಸಿದ್ಧ ಕೃತಿಯಾದ 'ಒರೊಂಕೋ'ದಲ್ಲಿ

ಬರೆದುಕೊಂಡಿದ್ದಾರೆ. ಜೀತಪದ್ಧತಿಯ ಭಯಾನಕ ಚಿತ್ರಣವನ್ನು ಮೊತ್ತ ಮೊದಲ ಬಾರಿಗೆ ಜನಸಾಮಾನ್ಯರಿಗೆ ತಲುಪಿಸಿದ್ದರು. ಆ ಮೂಲಕ ಅಲ್ಲಿನ ಜೀತಪದ್ಧತಿ, ಗುಲಾಮ ಪದ್ಧತಿಯ ವಿರೋಧವಾಗಿಯೂ, ಶ್ರಮವಹಿಸಿ ದುಡಿಯುವ ಮಹಿಳೆಯರ ಪರವಾಗಿಯೂ ಬರೆಯುವ ಲೇಖಕಿಯೂ ವಿಶ್ವದ ಭೂ ಭಾಗದ ಉದ್ದಕ್ಕೂ ಶೋಷಣೆಗಳು ನಡೆಯುತ್ತಲೇ ಇರುವುದು ದಾಖಲಿಸಿದ್ದಾರೆ. ಆಧುನಿಕ ಮಹಿಳೆಯರು ದಕ್ಷಿಣ ಅಮೇರಿಕಾದಲ್ಲಿ ವಾಣಿಜ್ಯ ವ್ಯವಹಾರಗಳಲ್ಲಿ, ಕಾರ್ಪೋರೇಟ್ ಸಂಸ್ಥೆಗಳಲ್ಲಿ, ವಿದ್ಯಾಸಂಸ್ಥೆಗಳಲ್ಲಿ, ಹೋಟೆಲ್‌ಗಳಲ್ಲಿ ಶ್ರಮವಹಿಸಿ ದುಡಿಯುತ್ತಿರುವುದನ್ನು ನೇಮಿಚಂದ್ರ ಅವರು 'ಪೆರುವಿನ ಪವಿತ್ರ ಕಣಿವೆಯಲ್ಲಿ' ಎಂಬ ಕೃತಿಯಲ್ಲಿ ಗುರುತಿಸಿದ್ದಾರೆ.

ಅಮೆರಿಕಾ ಪ್ರವಾಸ ಕೈಗೊಂಡ ಲೇಖಕಿ ಕೆ.ಆರ್.ಜಯಶ್ರೀ ಅವರು ಇಲ್ಲಿನ ಮಹಿಳಾ ಶ್ರಮ ಸಂಸ್ಕೃತಿ ಬಗ್ಗೆ ಮಾಹಿತಿ ಹಂಚಿಕೊಳ್ಳುತ್ತಾರೆ. ಅಮೇರಿಕಾದ ಹೊಟೇಲ್‌ಗಳಲ್ಲಿ ಮಹಿಳಾ ಸಪ್ಲೇಯರ್‌ಗಳೇ ಹೆಚ್ಚು ದುಡಿಯುತ್ತಿರುತ್ತಾರೆ. ಒಳಗೆ ಗಂಡಸರು ಅಡುಗೆ ಮಾಡುತ್ತಿದ್ದರೆ ಹೊರಗೆ ಹೆಣ್ಣು ಮಕ್ಕಳು ಸರ್ವ್ ಕೆಲಸಗಳನ್ನು ಮಾಡುತ್ತಾರೆ. ಹೊಟೇಲ್, ಬಾರ್‌ಗಳಲ್ಲಿ ಕೆಲಸ ಮಾಡುವ ಮಹಿಳೆಯರು ಸಹ ಕುರಿತು ಇಲ್ಲಿನ ಜನರಿಗೆ ತಿರಸ್ಕಾರ ಭಾವನೆ, ಹಗುರ ಭಾವನೆ ಇಲ್ಲದನ್ನು ಕಂಡು ಲೇಖಕಿಗೆ ಸಂತಸವಾಗುತ್ತದೆ. ಅಲ್ಲಿನ ಮನೆಗಳಲ್ಲಿ ಕೆಲಸ ಮಾಡುವ ಮಹಿಳೆಯರು ಕಾರುಗಳಲ್ಲಿ ಬಂದು, ಅಚ್ಚುಕಟ್ಟಾಗಿ ಕೆಲಸ ಮಾಡಿ ಸಂಬಳ ಪಡೆಯುತ್ತಾರೆ. ವಿದೇಶಿ ಮಹಿಳೆಯರ ಗಂಡಂದಿರರಿಗೆ ಒಳ್ಳೆಯ ಕೆಲಸವಿದ್ದರೂ ಮನೆಗೆಲಸಕ್ಕೆ ತಮ್ಮ ಹೆಂಡತಿಯರನ್ನು ಕಳಿಸುತ್ತಿರುವುದನ್ನು ಕಂಡು ಲೇಖಕಿ ಅಶ್ಚರ್ಯ ವ್ಯಕ್ತಪಡಿಸುತ್ತಾರೆ. ಬಹುಶಃ ವಿದೇಶಗಳಲ್ಲಿ ಸುಮ್ಮನೇ ಕೂತು ಉಣ್ಣುವ ಅಭ್ಯಾಸವಿರದ, ಏನಾದರೊಂದು ಕೆಲಸ ಮಾಡುವ ಮಹಿಳೆಯರು ಮನೆಗೆಲಸಗಳಲ್ಲಿ ತೊಡಗಿಕೊಳ್ಳುತ್ತಾರೆ. ಅಲ್ಲಿನ 'ತಾಲಿ ಟೂ' ಎನ್ನುವ ಹೊಟೇಲ್‌ನಲ್ಲಿ ದಕ್ಷಿಣ ಭಾರತದ ತಿಂಡಿಗಳು ದೊರೆಯುತ್ತವೆ. ಭಾರತದ ಮಚಲೀಪಟ್ನಂನ ಮಹಿಳೆಯು ಆ ಹೊಟೇಲ್‌ನಲ್ಲಿ ಸಪ್ಲೇಯರ್ ಕೆಲಸ ಮಾಡುತ್ತಿದ್ದಳು. ಆಕೆಯ ಕಪ್ಪು ಬಣ್ಣ, ಜೆನ್ಸ್ ಪ್ಯಾಂಟ್, ಟೀ ಷರ್ಟ್, ಉದ್ದ ಜಡೆ ನೋಡಿದರೇ ದಕ್ಷಿಣ ಭಾರತದ ಹೆಣ್ಣು ಮಗಳು ಎಂದು ನಿರ್ಧರಿಸಿ ಲೇಖಕಿ ವಿಚಾರಿಸದರು. ಎಂ.ಬಿ.ಎ. ವಿದ್ಯಾರ್ಥಿಯಾದ ಆಕೆ ಬಿಡುವಿನ ದಿನದಲ್ಲಿ ದುಡಿದು ಹಣ ಸಂಪಾದಿಸುವುದಾಗಿ ಹೇಳಿಕೊಳ್ಳುತ್ತಾಳೆ. ಅಮೆರಿಕಾದ ಮಹಿಳೆಯರು ದುಡಿಯುವ ಪ್ರವೃತ್ತಿ ಅಲ್ಲಿನ ವಾತಾವರಣದಿಂದಲೇ ಸಹಜವಾಗಿ ಬಂದಿರಬಹುದು. ಭಾರತದ ಮಟ್ಟಿಗೆ ವಿದ್ಯಾರ್ಥಿ ಜೀವನದಲ್ಲಿ ದುಡಿಯುವುದನ್ನು ಕೇವಲ ಬಡತನದಲ್ಲಿ ಬೆಳೆದಿರುವವರಲ್ಲಿ ಮಾತ್ರ ಕಾಣಬಹುದಾಗಿದೆ.

'ಚೆಗೆವಾರನ ನೆಲದಲ್ಲಿ' ಎಂಬ ಪ್ರವಾಸ ಕಥನದಲ್ಲಿ ಎಚ್.ಎಸ್.ಅನುಪಮಾ ಅವರು ಅಲ್ಲಿನ ಶ್ರಮಿಕ ವರ್ಗದ ಮಹಿಳೆಯನ್ನು ಬಹುತೇಕವಾಗಿ ಕಾಡುವುದು ಬದುಕಿನ ಒಂಟಿತನ. ನಾಗರಿಕ ಜಗತ್ತು ಮತ್ತು ಅಪರಾಧ ಜಗತ್ತುಗಳು ಬೇರು ಬಿಡಲು ಪ್ರಾರಂಭವಾದಾಗ, ಅಲ್ಲಿನ

ನಗರಗಳಲ್ಲಿ ವೇಶ್ಯಾವಾಟಿಕೆ ವೇಗವಾಗಿ ಬೆಳೆಯತೊಡಗಿತ್ತು. ಶ್ರಮಿಕ ಮಹಿಳೆಯರು ವೇಶ್ಯಾಗೃಹಗಳಿಗೆ ಬಲಿಯಾಗಿ, ನೃತ್ಯಕಲೆಗಳು ಕಲಿತರು. ಬುಡಕಟ್ಟು ಮಹಿಳೆಯರ ಅವಮಾನಗಳಿಗಿಂತ, ನಗರದ ಶಿಕ್ಷಿತ ಮಹಿಳೆಯರ ಕಷ್ಟ ನಷ್ಟಗಳು, ಅವಮಾನಗಳು ಬೇರೆ ರೀತಿಯಾಗಿವೆ. ಪೆರುವಿನಲ್ಲಿ ಶೇಕಡಾ ೬೫ರಷ್ಟು ಕೂಲಿಯಾಳುಗಳು ಬುಡಕಟ್ಟು ಮತ್ತು ನಗರದ ಮಹಿಳೆಯರಿದ್ದಾರೆ. ಅವರಿಗೆ ವೇತನ ಕಡಿಮೆ. ಅತಿ ಕಷ್ಟದ, ದೀರ್ಘಾವಧಿಯ ದೈಹಿಕ ಶ್ರಮ ಬೇಡುವ ಕೆಲಸಗಳಲ್ಲಿ ತೊಡಗಿಕೊಂಡಿರುವುದರಿಂದ ದೌರ್ಜನ್ಯವನ್ನು ಎದುರಿಸಬೇಕಾದ ಅನಿವಾರ್ಯತೆ ಸಹಜವಾಗಿರುತ್ತದೆ.

ಆಂಡೀಸ್ ಸಂಸ್ಕೃತಿಯು ಅಲ್ಲಿನ ಮಹಿಳಾ ಶ್ರಮ ಸಂಸ್ಕೃತಿಗೆ ನಿದರ್ಶನ. ಯಾವುದೇ ದೇಶದಲ್ಲಿ ಕೃಷಿ ಕೆಲಸ ಕಾರ್ಯಗಳು ಪುರುಷರ ಜೊತೆಗೆ ಮಹಿಳೆಯರ ಶ್ರಮವಿದ್ದಾಗ ಮಾತ್ರ ಬೆಳೆಯಲು ಸಾಧ್ಯ. ಆಂಡೀಸ್‌ನ ವ್ಯವಸಾಯದಲ್ಲೂ ಮಹಿಳೆಯರ ಪಾಲು ಅಧಿಕವಾಗಿದೆ. ಹೀಗಾಗಿ ವೈವಿಧ್ಯಮಯ ಬೆಳೆಗಳನ್ನು ಕಾಣಬಹುದು. ಕುಂಬಳ ಕಾಯಿ, ಆಲೂಗಡ್ಡೆ, ಶೇಂಗಾ, ಕಾಫಿ, ತರಕಾರಿಯ ಬಹುಪಾಲು ಬೆಳೆಗಳು, ವಿವಿಧ ಹಣ್ಣುಗಳು, ಮಸಾಲೆ ಪದಾರ್ಥಗಳು ಮುಂತಾದವುಗಳನ್ನು ಬೆಳೆಯುತ್ತಾರೆ. ಆಂಡೀಸ್‌ನಲ್ಲಿ ರಾಜರ ಖಾಸಗಿ ಕೃಷಿ ಭೂಮಿಯಲ್ಲಿಯೂ ಸಾಮಾನ್ಯ ಜನರು ಬೆಳೆಯಲಿಕ್ಕೆ ಅವಕಾಶವಿತ್ತು. ಈ ಕುರಿತು ಲೇಖಕಿ "ಒಟ್ಟಾರೆ ನೆಲವನ್ನು ಅವರ ತಾಯಿ, ಕೃಷಿಯೇ ಅಲ್ಲಿನ ಸಂಸ್ಕೃತಿ"(ಅನುಪಮಾ.ಎಚ್.ಎಸ್. ೨೦೧೭, ಪುಟ-೧೮೩) ಎಂದು ಲೇಖಕಿ ಅಭಿಪ್ರಾಯಪಡುತ್ತಾರೆ. ಈ ಹಿನ್ನೆಲೆಯಲ್ಲಿ ಅಲ್ಲಿನವರಿಗೆ ಶ್ರಮ ಸಂಸ್ಕೃತಿಯ ಮೇಲಿನ ನಂಬಿಕೆ ಸಹಜವಾಗಿ ಬಂದಿರಬಹುದಾಗಿದೆ. ಅಂಡಮಾನ್ ದ್ವೀಪವೊಂದರಲ್ಲಿ ತೆಂಗಿನಮರ ಏರಿ ಕೆಳಗೆ ಬಿದ್ದು, ಕೈಕಾಲು ಸ್ವಾಧೀನ ತಪ್ಪಿ ಮೂಲೆಗೆ ಬಿದ್ದ ಗಂಡನ ಸ್ಥಿತಿಯನ್ನು ಕಂಡು, ಪತ್ನಿಯೇ ಇಡೀ ಕುಟುಂಬದ ಪೋಷಣೆಗೆ ನಿಂತಳು. ಆ ಮಹಿಳೆಯ ಕೌಟುಂಬಿಕ ಕಥೆ, ಕುಟುಂಬವನ್ನು ಪೋಷಿಸಲು ಆಕೆ ಪಟ್ಟ ಶ್ರಮ, ಲೇಖಕಿಯ ಮನ ಕಲಕುವಂತೆ ಮಾಡುತ್ತದೆ. ಆಂಡೀಸ್ ಮಹಿಳಾ ಶ್ರಮಜೀವಿಗಳಿಗಿಂತ ಭಿನ್ನವಾಗಿ ಬದುಕು ಕಟ್ಟಿಕೊಂಡ ವಿಯೆಟ್ನಾಂನಲ್ಲಿ ಮಹಿಳೆಯರು ಕಂಡುಬರುತ್ತಾರೆ. ಕೃಷಿ ಅವಲಂಬಿತ ಬದುಕು, ಇಂಡೋಚೈನಾದಲ್ಲಿ ರೇಷ್ಮೆ ಕಸುಬು ಬೆಳೆ ಬಹುಮುಖ್ಯವಾಗಿದೆ. ಇಲ್ಲಿನ ಸ್ತ್ರೀಯರು ಸ್ಕಾರ್ಫ್, ಲಂಗದ ತರಹದ ಧಿರಿಸನ್ನು ನೇಯುತ್ತಾರೆ. ಇಲ್ಲಿನ ನೇಯ್ಗೆ ಕಾಯಕ ವಿಶೇಷವಾದ ಕಲೆಯಾಗಿದ್ದು, ಇಲ್ಲಿನ ಹೆಂಗಸರು ಕಡ್ಡಾಯವೆನ್ನುವಂತೆ ನೇಯ್ಗೆಯನ್ನು ಮಾಡುತ್ತಾರೆ. ಸಿಲ್ಕ್, ಹತ್ತಿ, ಜರಿ, ಬುಟ್ಟಿ, ಉಲ್ಲನ್ ಸ್ಕಾರ್ಫ್, ಚಿತ್ರ ವಿಚಿತ್ರ ಡಿಸೈನ್‌ಗಳು ನೇಯುತ್ತಾರೆ. ನೇಯ್ಗೆ ಕೆಲಸಗಳು ಈ ದೇಶದ ಗ್ರಾಮಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. 'ಕ್ಯಾರೊಜ್' ಎನ್ನುವ ಮಹಿಳೆ ನೇಯ್ಗೆಯ ಹೊಸ ವಿನ್ಯಾಸದ ಸ್ಕಾರ್ಫ್‌ಗಳನ್ನು ಅಲ್ಲಿನ ಹಿರಿಯ ರಾಜಕಾರಣಿಗಳು, ಪ್ರಭಾವಿ ಜನರು ಅಲ್ಲಿಗೆ ಬಂದು ತೆಗೆದುಕೊಳ್ಳುತ್ತಾರೆ. ೫ ಡಾಲರಿಗೆ ಸಿಗುವುದನ್ನು ೫೦೦ಡಾಲರಿಗೆ ಮಾರಾಟ ಮಾಡುತ್ತಾರೆ. ಇದು ಕ್ಯಾರೊಲ್‌ಳ ಶ್ರಮದ ಜೊತೆಗೆ, ಸ್ಕಾರ್ಫ್‌ನ ನೇಯ್ಗೆಯಲ್ಲಿ ಬಹು ಸುಂದರವಾದ, ಆಕರ್ಷಕವಾಗಿ ಕಾಣುವಂತೆ ನೇಯುವ ಆಕೆಯ ಜಾಣ್ಮೆಗೆ ಶ್ರಮಕ್ಕೆ ಸಿಕ್ಕ

ಪ್ರತಿಫಲ ಎಂದು ಲೇಖಕಿಯ ಅಭಿಪ್ರಾಯವಾಗಿದೆ. 'ಕಾವೇರಿಯಿಂದ ಮೆಕಾಂಗಿಗೆ' ಪ್ರವಾಸ ಕೈಗೊಂಡ ಸುಧಾಮೂರ್ತಿ ಅವರು ಶ್ರಮಿಕ ಮಹಿಳೆಯರನ್ನು ಗುರುತಿಸಿದ್ದು, ಥೈಲ್ಯಾಂಡಿನಲ್ಲಿ ಬೆಳಗಿನ ಜಾವ ನಾಲ್ಕು ಗಂಟೆಗೆ ಕೇವಲ ಹೆಣ್ಣು ಮಕ್ಕಳೇ ಟ್ಯಾಕ್ಸಿ ತೆಗೆದುಕೊಂಡು ಎಲ್ಲಿಯಾದರೂ ಸುರಕ್ಷಿತವಾಗಿ ಹೋಗಬಹುದಾಗಿದೆ. ಟ್ಯಾಕ್ಸಿ ಡ್ರೈವರ್‌ಗಳು ಪುರುಷರು ಮಾತ್ರವಲ್ಲದೇ, ಮಹಿಳೆಯರು ಡ್ರೈವರ್‌ಗಳಾಗಿ ತಮ್ಮ ತುತ್ತಿನ ಚೀಲವನ್ನು ತುಂಬಿಸಲಿಕ್ಕೆ ಶ್ರಮ ಪಡುತ್ತಾರೆ ಎಂದಿದ್ದಾರೆ. 'ಪಟುಮರಾಂಗ್' ಎನ್ನುವ ಆಕೆಯನ್ನು 'ಪದ್ಮ' ಎನ್ನುವ ಹೆಸರಿನಲ್ಲಿ ಕರೆಯುತ್ತಿದ್ದ ಸುಧಾಮೂರ್ತಿಯವರು, ಆಕೆಯ ಡ್ರೈವಿಂಗ್ ಸುರಕ್ಷಿತವಾಗಿರುವ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಶ್ರಮ ಸಂಸ್ಕೃತಿ ಬಹುತೇಕ ವಿಶ್ವದ ಉದ್ದಗಲಕ್ಕೂ ಎಲ್ಲರಿಗೂ ಹೊಟ್ಟೆ ತುಂಬಿಸುವ ಕಾಯಕ ಮಾಡುತ್ತಿದೆ. ಥೈಲ್ಯಾಂಡಿನ ಮಹಿಳೆಯರು ಗಟ್ಟಿಗಿತ್ತಿಯರಂತೆ ನಿರ್ವಹಿಸಬಲ್ಲರಾದ ಕಾರಣ ಮಹಿಳಾ ಡ್ರೈವರ್‌ಗಳಾಗಿ ಯಶಸ್ಸು ಕಂಡಿದ್ದಾರೆ.

ಪ್ರೇಮಾಭಟ್ ಅವರ 'ಪಶ್ಚಿಮದತ್ತ ಪಯಣ' ಪ್ರವಾಸ ಕೃತಿಯು ಲಂಡನ್‌ಗೆ ಸಂಬಂಧಿಸಿದ ಕಥನವಾಗಿದ್ದು, ಲೇಖಕಿಯು ನಗರ ಪರಿವೀಕ್ಷಣೆಗೆ ಹೋದ ಸಂದರ್ಭದಲ್ಲಿ ಬಸ್‌ವೊಂದರ ಡ್ರೈವರ್ ಆಗಿದ್ದವರು ಮಹಿಳೆಯಾಗಿದ್ದಳು. ಮೂವತ್ತರ ಆಸುಪಾಸಿನ ಆ ಮಹಿಳೆ ನೋಡಲು ಸುಂದರವಾಗಿದ್ದನ್ನು ಕಂಡ ಲೇಖಕಿಗೆ ಬೃಹತ್ ಬಸ್‌ನ್ನು ನಡೆಸಬಲ್ಲಳೇ ಎಂಬ ಅನುಮಾನ ಕಾಡಿತ್ತು. ಪ್ರಯಾಣಿಕರ ಆತಂಕವನ್ನು ನಿಭಾಯಿಸಿದ ಆಕೆ ತಿರುವುಗಳಲ್ಲಿ ಕೊಂಚ ಶ್ರಮವಹಿಸಿ ಸಾಹಸ ಮಾಡುತ್ತಿದ್ದಳು. ಲೇಖಕಿ ಪಯಣದ ವೇಳೆ ಇದ್ದ ಆತಂಕಗಳನ್ನೆಲ್ಲಾ ನಿರಾತಂಕಗೊಳಿಸಿದಾಗ, ಬ್ರಿಟನ್ ಮಹಿಳೆಯರು ಎಲ್ಲಾ ಕೆಲಸದಲ್ಲೂ ಎತ್ತಿದ ಕೈ ಎಂಬುದನ್ನು ಸಾಬಿತುಪಡಿಸಿದರು. ಶ್ರಮ ಪಡುವ, ದುಡಿದು ತಿನ್ನುವ ಮನೋಭಾವವು ಬ್ರಿಟನ್ ಮಹಿಳೆಯರಿಗೆ ಸಹಜವಾಗಿಯೇ ಮೂಡಿಬಂದಿದ್ದನ್ನು ನಿರೂಪಿಸುತ್ತಾರೆ.

ಉಮಾರಾವ್ ಅವರ 'ಇನ್ನು ಎಲ್ಲಿಗೋಟ' ಪ್ರವಾಸ ಕಥನದಲ್ಲಿ ಟಿಪ್ಪಣಿಗಳ ರೀತಿಯಲ್ಲಿ ತಮ್ಮ ಪ್ರವಾಸದ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಭೂತಾನ್‌ನ ಹೆಣ್ಣುಮಕ್ಕಳು ದುಡಿಯುವುದನ್ನೇ ನಂಬಿಕೊಂಡು ಜೀವನ ಸಾಗಿಸುವರಾಗಿದ್ದಾರೆ. ಭೂತಾನ್‌ನ ಗಡಿಭಾಗಗಳು ಪ್ರವಾಸಿತಾಣಗಳಿಂದ ಕೂಡಿರುವುದರಿಂದ ಜನವಸತಿಯಿಂದ ದೂರವಾದ, ಮೋಡ ಮುಸುಕಿದ ಪರ್ವತಗಳ ನಡುವೆ ಅಲ್ಲಿನ ಯುವತಿಯರು ಟೀ ಅಂಗಡಿಗಳನ್ನು ನಡೆಸುತ್ತಾರೆ. ಉತ್ಸಾಹದಿಂದ ಬೆಟ್ಟ ಹತ್ತುತ್ತಾ ಇಳಿಯುತ್ತಾರೆ, ಅಲ್ಲದೇ ಬಿಲ್ಲು ವಿದ್ಯೆ ಪರಿಣಿತಿ ಪಡೆದವರಾಗಿದ್ದಾರೆ. ಇಲ್ಲಿನ ಮಹಿಳೆಯರು ಕಾರ್ಮಿಕರಾಗಿ, ಕೈಮಗ್ಗಗಳ ಮೇಲೆ ಬಣ್ಣ ಬಣ್ಣದ ಚಿತ್ತಾರದ ಶಾಲುಗಳನ್ನು ಸೃಷ್ಟಿಸುವ ಕಲಾವಿದೆಯರಾಗಿದ್ದಾರೆ. ಬುದ್ಧನ ನಾಡಿನ ನಿಶ್ಯಬ್ಧ ವಿಹಾರಗಳಲ್ಲಿ ಜಪಮಾಲೆ ಹಿಡಿದು ಕೂತು, ನಗೆ ಮಾಸದ ವೃದ್ಧ ಸನ್ಯಾಸಿಯರು ಕಾಣಸಿಗುತ್ತಾರೆ. ಭೂತಾನ್‌ನ ದೇಶದಲ್ಲಿ ಹೆಣ್ಣು ಮಕ್ಕಳಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸ್ವಾತಂತ್ರ್ಯವಿದ್ದು, ಕಟ್ಟಡ ಕಟ್ಟುವ ಗಾರೆ ಕೆಲಸಗಳು,

ವ್ಯಾಪಾರಗಳಲ್ಲೂ ಗಂಡಸರಂತೆ ದೈಹಿಕ ಶ್ರಮವನ್ನು ಬೇಡುವ ಕೆಲಸಗಳಲ್ಲಿ ಇಷ್ಟಪಟ್ಟೆ ದುಡಿಯುತ್ತಾರೆ. ಗಂಡು ಹೆಣ್ಣು ಎಂದು ಭೇದವೆಣಿಸದ ಅಲ್ಲಿನ ದಂಪತಿಗಳಲ್ಲಿ ಹೆಣ್ಣು ಮಕ್ಕಳು ಆಗಲೆಂದು ಅನೇಕರು ಬಯಸುತ್ತಾರೆ.

ಸುಧಾ ಚಿದಾನಂದಗೌಡ ಅವರು 'ಸಮನ್ವಿತೆ ಗೋಮಾಂತ' ಎಂಬ ಕೃತಿಯಲ್ಲಿ ಗೋವಾದ ಮಹಿಳೆಯರ ಶ್ರಮ ಸಂಸ್ಕೃತಿಯ ಬಗ್ಗೆ ಬೆಳಕು ಚೆಲ್ಲುತ್ತಾರೆ. ಅಲ್ಲಿನ ಮಹಿಳೆಯರು ಯಾವುದಾದರೊಂದು ಕೆಲಸಗಳಲ್ಲಿ ನಿರತರಾಗಿರುವ ಉದಾಹರಣೆ ಈ ಕೃತಿಯಲ್ಲಿ ಸಾಕಷ್ಟು ಸಿಗುತ್ತವೆ. ಔದ್ಯೋಗಿಕವಾಗಿ ಜೀವನ ಕಂಡುಕೊಂಡವರು ಒಂದು ಕಡೆಯಾದರೆ, ಶ್ರಮವನ್ನು ನಂಬಿಕೊಂಡು ಬದುಕುವವರು ಒಂದು ಕಡೆಯಿದ್ದಾರೆ. ಗೋವಾದ ಮಹಿಳೆಯರಿಗೆ ಮತ್ಸ್ಯ ಮಾರಾಟವೇ ಆದಾಯದ ಮೂಲವಾಗಿದ್ದು, ಮೀನು ಮಾರಾಟದಿಂದಾಗಿ ಹೆಣ್ಣು ಮಕ್ಕಳು ಕುಟುಂಬವನ್ನು ಪೋಷಿಸುತ್ತಾರೆ. 'ಸೀಗಡಿ ಮೀನು' ತುಂಬಿದ ಒಂದು ಬುಟ್ಟಿಗೆ ೧೦೦೦ರೂ ಕೊಟ್ಟು ತಂದು, ಎರಡು ಮೂರು ತಾಸುಗಳಲ್ಲಿ ಅದೇ ಬುಟ್ಟಿಯಿಂದ ೨-೩ ಸಾವಿರ ರೂಪಾಯಿಗಳನ್ನು ಸಂಪಾದಿಸುತ್ತಾರೆ. ದುಡಿಯುವಂತಹ ಮಹಿಳೆಯರಿಗೆ ಇಲ್ಲಿನ ಕುಟುಂಬಗಳಲ್ಲಿ ಹೆಚ್ಚಿನ ಗೌರವವು ಸಿಗುತ್ತದೆ. ಮೀನು ಮಾರಾಟದ ಮಹಿಳೆಯರನ್ನು ಕಂಡ ಲೇಖಕಿ "ಎಲ್ಲರ ತಲೆ ಮೇಲೂ ಬುಟ್ಟಿಯಲ್ಲಿ ಕುಳಿತಿರುವ ವಿವಿಧ ರೂಪದ ಜೀವದಾಯಿನಿ ಮತ್ಸ್ಯಕನ್ನಿಕೆ, ಲಕ್ಷ್ಮಿಯ ರೂಪದಲ್ಲಿ ಮಿನುಗುತ್ತಿದ್ದಾಳೆ"(ಸುಧಾ ಚಿದಾನಂದಗೌಡ, ೨೦೧೭, ಪುಟ-೧೦೭) ಎಂದು ಹೇಳಿದ್ದಾರೆ. ಒಂದು ಸಿಗಡಿ ಬುಟ್ಟಿಯಿಂದಾಗಿ ೨-೩ ತಾಸುಗಳಲ್ಲಿ ಎರಡು ಪಟ್ಟು ಅಧಿಕ ಹಣಗಳಿಸುವ ಅಲ್ಲಿನ ಮಹಿಳೆಯರ ವ್ಯಾಪಾರ ಕೌಶಲತೆ ಮತ್ತು ದುಡಿಮೆಯ ದಾರಿ ಕಂಡಂತಹ ಯಾರಾದರೂ ಗೋವಾದ ಮಹಿಳಾ ಶ್ರಮ ಸಂಸ್ಕೃತಿಯನ್ನು ಮೆಚ್ಚಲೇ ಬೇಕಾಗುತ್ತದೆ.

ತ್ರಿವೇಣಿ ಶಿವಕುಮಾರ್ ಅವರ 'ಬಹುರೂಪೀ ಭಾರತ' ಪ್ರವಾಸ ಕಥನವು ಭಾರತದ ಹಲವು ರಾಜ್ಯಗಳನ್ನು ಸುತ್ತಾಡಿದ ಕಥನವಾಗಿದೆ. ಟಿಬೆಟಿಯನ್ ರೆಫ್ಯೂಜಿ ಸೆಂಟರ್‌ಗೆ ಹೋದ ಲೇಖಕಿಗೆ ಅಲ್ಲಿನ ಟಿಬೆಟಿಯನ್ನರು ತಯಾರಿಸಿದ ಸಾಮಾನುಗಳ ಮಾರಾಟ ಕೇಂದ್ರವಿದ್ದದು ಕಂಡುಬಂತು. ತುಂಬಾ ವಯಸ್ಸಾದ ಅಜ್ಜಿಯರು ಕೂಡ ನೆಲಗಂಬಳಿಗಳನ್ನು ನೇಯುತ್ತಾ ಕುಳಿತ್ತಿದ್ದರು. ಮೈ ಮುಖವೆಲ್ಲಾ ಸುಕ್ಕು, ಸುಕ್ಕಾಗಿದ್ದ ಎಂಬತ್ತೈದು ವಯಸ್ಸಾಗಿದ್ದ ಅಜ್ಜಿಯೊಂದು ನೇಯುತ್ತಾ ಕುಳಿತ್ತಿತ್ತು. ಆ ಊರಿನ ಬಹುತೇಕ ಮಹಿಳೆಯರ ಜೀವನೋಪಾಯವು ನೇಯುವ ಮಗ್ಗದ ಮೇಲೆಯೇ ಅವಲಂಬಿತವಾಗಿತ್ತು. ಅವರ ಪರಿಸ್ಥಿತಿ ಕಂಡ ಲೇಖಕಿಯು ಬದುಕಿನ ಅಂತ್ಯವು ಮಗ್ಗದಿಂದಲೇ ಎನ್ನುವ ಸಂಗತಿಯನ್ನು ದಾಖಲಿಸಿದ್ದಾರೆ.

ನೀಳಾದೇವಿ ಅವರ 'ನಾ ಕಂಡ ಆ ಖಂಡ' ಪ್ರವಾಸ ಕಥನವು ಅಮೇರಿಕಾ ದೇಶದ ಕುರಿತಾಗಿದೆ. ಅಲ್ಲಿನ ಬಹುತೇಕ ಮನೆಗಳಲ್ಲಿ ಯಂತ್ರಗಳೇ ಮನೆಗೆಲಸದಾಳುಗಳಾಗಿರುತ್ತವೆ. ಎಲ್ಲರ ಮನೆಯಲ್ಲೂ ಬಟ್ಟೆ ಒಗೆಯುವ, ಕಸ ತೆಗೆಯಲು ವ್ಯಾಕೊಂಕ್ಲಿನರ್, ಪಾತ್ರೆ ತೊಳೆಯಲು ಡಿಶ್‌ವಾಷರ್ ಹೀಗೆ ಉಪಕರಣಗಳು ಇರುವುದರಿಂದ ಕೆಲಸ ಕಾರ್ಯಗಳಿಗೆ ಯಾರ

ಸಹಾಯವು ಬೇಕಾಗುವುದಿಲ್ಲ. ಇಷ್ಟೆಲ್ಲ ಸೌಕರ್ಯಗಳಿದ್ದಾಗಿಯೂ ಅಲ್ಲಿನ ಜನತೆ ಗಂಡು ಹೆಣ್ಣು ಎಂಬ ಭೇದವಿಲ್ಲದೆ ಮನೆಗೆಲಸಗಳಿಗೆ ಸಹಾಯ ಮಾಡುತ್ತಾರೆ. ಇದು ಅಮೇರಿಕಾದ ಒಂದು ಮುಖವಾದರೆ. ಮತ್ತೊಂದು ಮುಖ ಅಮೇರಿಕಾದಲ್ಲಿ ತಲೆ ಎತ್ತಿರುವ ಬೃಹತ್ ಕಟ್ಟಡಗಳಲ್ಲಿ ಅಡಗಿದೆ. ಆಧುನಿಕತೆಯ ಪ್ರಭಾವದಿಂದ ಎಷ್ಟೇ ಯಂತ್ರಗಳನ್ನು ಬಳಕೆ ಮಾಡಿದರೂ, ಮನುಷ್ಯ ಶಕ್ತಿ ಬೇಕೆ ಬೇಕಾಗುತ್ತದೆ. ಬಹುಮಹಡಿ ಕಟ್ಟಡ ಕೆಲಸಗಳಲ್ಲಿ ಪುರುಷರಂತೆ ಮಹಿಳೆಯರು ತೊಡಗಿಕೊಂಡಿದ್ದಾರೆ. ಅಲ್ಲಿನ ಶ್ರಮಜೀವಿಗಳೆಲ್ಲಾ ಕಾರಿನಲ್ಲಿಯೇ ಬಂದಿಳಿದು. ಕೈಗಳಿಗೆ ಗ್ಲೋವ್ಸ್ ಹಾಕಿಕೊಂಡು ಕೆಲಸಕ್ಕೆ ಮುಂದಾಗುತ್ತಾರೆ. ಇಂತಹ ಆರ್ಥಿಕವಾಗಿ ಹಿಂದುಳಿದವರಿಗೆ 'ಗುಡ್ ವಿಲ್ ಬಾಕ್ಸ್' ಅಂದರೆ, ವಸ್ತ್ರದಾನ ಅಂಗಡಿಗಳಿವೆ. ಬೇಡವಾದ ವಸ್ತ್ರಗಳನ್ನು ಅದರಲ್ಲಿ ಹಾಕವುದು. ಬೇಕಾದವರಿಗೆ ಬೇಕಾದ ವಸ್ತ್ರಗಳನ್ನು ತೆಗೆದುಕೊಂಡು ಬರಬಹುದಾದ ಅಂಗಡಿಯಾಗಿದೆ. ಇಲ್ಲಿನ ಮಹಿಳೆಯರು ಎಷ್ಟೇ ಹಿರಿತನವಿದ್ದರೂ ದೇಹದಲ್ಲಿ ಶಕ್ತಿ ಇರುವವರೆಗೂ ಹಣ ಸಂಪಾದನೆಗಾಗಿ ಉದ್ಯೋಗಗಳನ್ನು ಬಯಸುತ್ತಾರೆ. ಸಾರ್ವಜನಿಕರ ಜನಸೇವೆ, ಆಸ್ಪತ್ರೆ ರೋಗಿಗಳ ಶುಶ್ರೂಷೆ, ಮಕ್ಕಳಿಗಾಗಿ ಬೇಬಿ ಸಿಟ್ಟಿಂಗ್, ವೃದ್ಧಾಶ್ರಮ ಮುಂತಾದವುಗಳನ್ನು ನಿರ್ವಹಿಸುತ್ತಾ ತಮ್ಮ ದೇಶದಲ್ಲಿನ ಶ್ರಮದ ಬೆಲೆಯನ್ನು ಎತ್ತಿಹಿಡಿಯುತ್ತಾರೆ.

'ಅಮೇರಿಕಾ: ವಾಸ ಪ್ರವಾಸ' ಕೃತಿಯ ಲೇಖಕಿ ಪದ್ಮಾಶಣೈ ಅವರು ಅಮೇರಿಕಾದ ಶ್ರಮಿಕ ಮಹಿಳೆಯನ್ನು ಈ ರೀತಿ ಗುರುತಿಸಿದ್ದಾರೆ. ಅಲ್ಲಿನ ವಿದ್ಯಾವಂತ ಮಹಿಳೆಯರು ೧೨ನೇ ವಯಸ್ಸಿನಲ್ಲಿ ಮದುವೆಯಾಗಿ ಹೋಮ್ ಲೆಸ್ ಆಗಿದ್ದಾರೆ. ೧೩ನೇ ವಯಸ್ಸಿನಲ್ಲಿ ದೈಹಿಕ ಹಿಂಸೆಗೆ ಒಳಪಟ್ಟು, ೧೪ನೇ ವಯಸ್ಸಿನಲ್ಲಿ ಗರ್ಭಿಣಿಯಾಗಿರುತ್ತಾರೆ. ಅರ್ಲಿಂಡಾ ಗೇಟನ್‌ಳ ಬಾಯ್‌ಫ್ರೆಂಡ್ ಕೊಕನ್ ವ್ಯಸನಿ, ಹತ್ತು ವರ್ಷ ಆತನ ಜೊತೆ ಕಳೆದಿದ್ದಾಳೆ. ಆತ ದಿನವೂ ನೆರೆಹೊರೆಯವರು ನೋಡುವಂತೆ ಅರ್ಲಿಂಡಾಳನ್ನು ಬಡಿಯುತ್ತಿದ್ದ. ಆಕೆ ದುಡಿದ ಹಣವನ್ನು, ಸೋಶಿಯಲ್ ಸೆಕ್ಯೂರಿಟಿ ಚೆಕ್ಸ್‌ಗಳನ್ನು ಒಯ್ಯುತ್ತಿದ್ದ, ಫುಡ್‌ಸ್ಟಾಂಪ್ಸ್‌ಗಳನ್ನು ಮಾರುತ್ತಿದ್ದ. ಆಕೆಗೂ ಸರಿಯಾಗಿ ಹೊಟ್ಟೆಗಿಲ್ಲ, ಬಟ್ಟೆಯಿಲ್ಲ, ಮಕ್ಕಳಿಗೂ ಹಾಸಿಗೆ ಹೊದಿಕೆಗಳಿಲ್ಲ. ಹಸಿವೆಯಿಂದಲೂ ನರಳುತ್ತಿದ್ದರು. ಆಕೆ ಏನಾದರೂ ಶ್ರಮವಹಿಸಿ ದುಡಿದ ಹಣವನ್ನು ಆತ ಕದಿಯುತ್ತಿದ್ದ ಎನ್ನುವ ಸಂಗತಿಯನ್ನು ಲೇಖಕಿ ದಾಖಲಿಸಿದ್ದಾರೆ. ಅಮೇರಿಕಾ ಭಾರತಕ್ಕೆ ಹೋಲಿಕೆ ಮಾಡಿಕೊಂಡರೆ ಊಹೆಗೆ ನಿಲುಕದ ದೇಶ ಎಂದು ಭಾವಿಸಿಕೊಂಡವರಿಗೆ, ಅಲ್ಲಿಯೂ ಸಂಸಾರದ ತಾಪತ್ರಯಗಳಿವೆ. ಶ್ರಮಪಡುವ ಸಮುದಾಯಕ್ಕೆ ಅಘಾತಕಾರಿ ಘಟನೆಗಳು ನಡೆಯುತ್ತಲೇ ಇವೆ. ಗಂಡ ಹೆಂಡತಿ ಉದ್ಯೋಗದಲ್ಲಿದ್ದರಂತೂ ಇನ್ನಿಲ್ಲದ ಸಮಸ್ಯೆಗಳು ಅಮೇರಿಕಾದಲ್ಲಿ ಉಂಟಾಗುತ್ತವೆ. ಈ ಕುರಿತು ಪರಮೇಶ್ವರಿ ಲೋಕೇಶ್ವರ್ ಅವರು 'ಅಮೇರಿಕಾದಲ್ಲಿ ಅರವತ್ತು ದಿನಗಳು' ಕೃತಿಯಲ್ಲಿಯೂ ನಿರೂಪಿಸಿದ್ದಾರೆ. ವಿದೇಶದಲ್ಲಿರುವ ಭಾರತೀಯ ದಂಪತಿಗಳು ನೌಕರರಾಗಿದ್ದು, ಗಂಡ ಹೆಂಡತಿ ಇಬ್ಬರೂ ಉದ್ಯೋಗಸ್ಥರಾದರೇ ಶ್ರಮಿಕ ಮಹಿಳೆಯರನ್ನೇ ನಂಬಿಕೊಳ್ಳಬೇಕಾದ ಅನಿವಾರ್ಯತೆ ಕಂಡುಬರುತ್ತದೆ. ಇಲ್ಲಿ ಮನೆಗೆಲಸಕ್ಕೆ ಸಿಗುವವರ ಸಂಖ್ಯೆ ಕಷ್ಟವಾದ್ದರಿಂದ ಪತ್ರಿಕೆಗಳಲ್ಲಿ

ಜಾಹೀರಾತುಗಳನ್ನು ನೀಡಿ, 'ವಾರಕ್ಕೊಂದು ದಿನ ಬೆಳಗ್ಗೆ ಒಂಬತ್ತು ಗಂಟೆಯಿಂದ ಸಂಜೆ ಮೂರರವರೆಗೆ ಮನೆಯ ಸಮಸ್ತ ಕೆಲಸಗಳನ್ನು ಮುಗಿಸಿ, ನಿಗದಿತ ಅರವತ್ತೊ ಎಪ್ಪತ್ತೊ ಡಾಲರ್ ಪಡೆದು ನೀಟಾಗಿ ಡ್ರೆಸ್ ಮಾಡಿ ಕಾರನ್ನೇರಿ ನಿರ್ಗಮಿಸುತ್ತಾರೆ. ಅವರ ಅಚ್ಚುಕಟ್ಟುತನ, ಕುಂದಿಲ್ಲದ ಕಾರ್ಯವೈಖರಿ ಎಲ್ಲಕ್ಕಿಂತ ಹೆಚ್ಚಾಗಿ ಅವರ ತೃಪ್ತ ಭಾವನೆ ಲೇಖಕಿಗೆ ಅಚ್ಚರಿ ಎನಿಸುತ್ತದೆ. ಈ ಎರಡರ ವೈರುಧ್ಯಗಳನ್ನು ಗಮನಿಸಿದಾಗ ಭಿನ್ನ ಭೂಪ್ರದೇಶವಾದರೂ ಮನುಷ್ಯನ ಸ್ವಭಾವಗಳು ಮಾತ್ರ ಒಂದೇ ಎನ್ನುವಂತೆ ಭಾಸವಾಗುತ್ತದೆ.

ಗುಜರಾತಿನ ಅನುಭವ ಕಥನವಾದ ಎಸ್.ಸಂಧ್ಯಾ ಅವರು 'ಹಲವು ಕಾಲಗಳ ನಾಡು: ಗುಜರಾತ್' ಕೃತಿಯಲ್ಲಿ ಕಲಾ ಶಾಲೆಗೆ ಸೇರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅತಿ ಶ್ರೀಮಂತರು, ಒಂದು ರೀತಿ 'ಮೋಟರ್ಸ್ ಈಟರ್ಸ್' ತರದ ಜನ ಎಂದಿದ್ದಾರೆ. ಕಲಾತ್ಮಕತೆಯನ್ನು ಅರಸುವ, ಜೀವನದಲ್ಲಿ ಅಳವಡಿಸಿಕೊಳ್ಳುವ ಧೋರಣೆ ಇವರಲ್ಲಿದೆ. ಆದರೆ ಬದುಕುವ ಕಲಾಕತ್ಮಕತೆಗೆ ಎಷ್ಟೇಷ್ಟು ಜನರ ಬೆವರು, ಹಸಿವು, ತೃಷೆ, ಎಷ್ಟೋ ಮಕ್ಕಳ ಅಳು, ಆಕ್ರಂದನಗಳು ಬಲಿಯಾಗಿರುವುದು ಇವರಿಗೆ ಬೇಡವಾಗಿದೆ. ಇವರು ಕೊಳ್ಳುವ ವಸ್ತ್ರ, ಸಾಮಾನುಗಳು ದುಪ್ಪಟ್ಟು ಬೆಲೆಯಾಗಿರುತ್ತವೆ. ಕಲಾತ್ಮಕವಾಗಿ ಕೈಕಸೂತಿಯಿಂದ ಎಣೆದಿರುವ ವಸ್ತುಗಳು ನಿರ್ಲಕ್ಷ್ಯಕ್ಕೆ ಗುರಿಯಾಗುತ್ತವೆ. ಆದಿವಾಸಿ ಕಷ್ಟಜೀವಿಗಳು ಸ್ವಲೋಲುಪತೆ ಅವರ ಸಂಸ್ಕೃತಿಯಲ್ಲೇ ಇಲ್ಲ. ಆದರೆ ಆಧುನಿಕ ನಾಗರಿಕ ಜನರಂತೆ ಆರ್ಥಿಕ ಗಳಿಕೆ ಅವರಿಗೆ ಮುಖ್ಯವೆಂದು ಇಂದಿಗೂ ಭಾವಿಸಿಲ್ಲ. ಅಲ್ಲಿನ ಜನರು ತಾಯಿ, ಮಗಳ ಮದುವೆಗೆಂದು ಶ್ರಮವಹಿಸಿ ವರ್ಷಗಟ್ಟಲೆ ಕೂತು ಕಸೂತಿ ವಸ್ತ್ರವನ್ನು ನೇಯ್ದು ಹಣ ಗಳಿಸುತ್ತಾರೆ. ಅಷ್ಟೆಲ್ಲಾ ಶ್ರಮದಿಂದಲೇ ತಯಾರಿಸಿದ ವಸ್ತುಗಳಿಗೆ ಆದಾಯವಿಲ್ಲದೆ ಆದಿವಾಸಿಗಳ ಬದುಕು ಇಂದಿಗೂ ದುಸ್ಥರವಾಗಿರುತ್ತದೆ. ಆಧುನಿಕತೆಯನ್ನು ಅಪ್ಪಿಕೊಳ್ಳದೇ, ಸ್ವಸಂಸ್ಕೃತಿಯನ್ನು ಸಂಪೂರ್ಣವಾಗಿ ತ್ಯಜಿಸದೇ, ಸರಕಾರದ ಸವಲತ್ತುಗಳನ್ನು ಬಯಸದೆ, ಆದಿವಾಸಿ ಮಹಿಳೆಯರು ತಮ್ಮ ಪರಂಪರೆಯಿಂದ ಬಂದಿರುವ ಕಸೂತಿ ಕೆಲಸಗಳಲ್ಲಿ ಈಗಲೂ ತೊಡಗಿದ್ದಾರೆ. ಉತ್ತರ ಭಾರತದ ಗುಜರಾತ್‌ನಂತೆ ದಕ್ಷಿಣದಲ್ಲಿ ತಮಿಳುನಾಡು ಮತ್ತು ತೆಲಂಗಾಣ ರಾಜ್ಯವು ನೇಯ್ಗೆಗೆ ಪ್ರಸಿದ್ಧಿಯನ್ನು ಪಡೆದಿದೆ. ಆದರೆ ನೇಕಾರಿಕೆಯಲ್ಲಿ ದುಡಿಯುವ ಮಹಿಳೆಯರ ಬದುಕು ಉತ್ತರದಿಂದ ದಕ್ಷಿಣಕ್ಕೂ ಯಾವುದೇ ವ್ಯತ್ಯಾಸವೇನೂ ಆಗಿಲ್ಲ. ಶೈಲಜಾ ಎನ್.ಬಾಗೇವಾಡಿ ಅವರು 'ದೇವಾಲಯಗಳ ನಾಡಿನಲ್ಲಿ' ಎಂಬ ಕೃತಿಯಲ್ಲಿ ತಮಿಳುನಾಡಿನ ನೇಕಾರಿಕೆಯಲ್ಲಿ ದುಡಿಯುವ ಮಹಿಳೆಯರ ಬದುಕನ್ನು ವಿವರಿಸಿದ್ದಾರೆ. 'ನೇಕಾರನ ಹೆಂಡತಿ ಬೆತ್ತಲೆ' ಎನ್ನುವ ಹಾಗೆ ಅವರ ಬದುಕು ಅಲ್ಲಿಯೂ ಸುಧಾರಿಸಿಲ್ಲ. ಬಣ್ಣ ಬಣ್ಣದ ಕಂಚಿನ ಸೀರೆ ನೇಯುವವರ ಬದುಕು ಹಸನಾಗಿರಬೇಕಿತ್ತು. ಅದನ್ನು ಮಾರಿಕೊಂಡವರ ಬದುಕು(ಮಧ್ಯವರ್ತಿಗಳು) ಶ್ರೀಮಂತವಾಗಿದೆ. ಒಂದು ಸೀರೆ ನೇಯ್ದರೆ ಎರಡರಿಂದ ಮೂರು ಸಾವಿರ ಸಿಕ್ಕರೆ, ಅದನ್ನು ಮಾರುಕಟ್ಟೆಗೆ ತಂದು ಮಾರುವ ವ್ಯಾಪಾರಿಗಳು ಹತ್ತು ಸಾವಿರಕ್ಕೂ ಅಧಿಕ ಹಣಗಳಿಸುತ್ತಾರೆ.

ಮಗ್ಗದಿಂದ ನೇಯುವವರ ಸಾವಿರಾರು ಕುಟುಂಬದ ಹೆಣ್ಣುಮಕ್ಕಳಿಗೆ ಸರಿಯಾದ ಸೀರೆಗಳಿಲ್ಲದೆ, ಮಾಸಲು ಬಟ್ಟೆಯಲ್ಲಿ ನೇಯುವುದನ್ನು ಕಂಡ ಲೇಖಕಿಗೆ ಇವರು ಜೀವಮಾನದಲ್ಲಿ ತಾವು ನೇಯ್ದ ಸೀರೆಯನ್ನು ಧರಿಸಬಹುದೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ತಮಿಳುನಾಡಿನಂತೆ ತೆಲಂಗಾಣ ರಾಜ್ಯದಲ್ಲೂ ಸೀರೆ ನೇಯುವ ಕಾಯಕವಿದ್ದು, ಮಹಿಳೆಯರೇ ತಮ್ಮ ಕುಟುಂಬಕ್ಕಾಗಿ ಅವಿರತ ಶ್ರಮ ಪಡುತ್ತಿದ್ದಾರೆ. ಭಾರತದಲ್ಲಿ ಒಳ್ಳೆಯ ಮಾರುಕಟ್ಟೆಯಿದ್ದು, ಅಲ್ಲಿನ ಮಹಿಳೆಯರ ಶ್ರಮ ವ್ಯರ್ಥವಾಗುವುದನ್ನು ತೇಜಸ್ವಿನಿ ಬಿ.ಯಕ್ಕುಂಡಿಮಠ ಅವರು ಗುರುತಿಸುತ್ತಾರೆ. ಅವರ 'ತಿರೆಯ ಮೇಲಣ ಸ್ವರ್ಗ' ಕೃತಿಯು ತೆಲಂಗಾಣ ಪ್ರವಾಸ ಕಥನವಾಗಿದ್ದು ಸೀರೆಯನ್ನು ನೇಯುವ ಮಹಿಳೆಯರ ಮತ್ತೊಂದು ಸಂಕಷ್ಟವನ್ನು ಹೇಳುತ್ತದೆ. ತೆಲಂಗಾಣದಲ್ಲಿ ಪ್ರಸಿದ್ಧವಾದ 'ಗದ್ವಾಲ್' ಸೀರೆಗಳಿಗೆ ದೇಶದ ಅನೇಕ ರಾಜ್ಯಗಳಲ್ಲಿ ಬೇಡಿಕೆಯಿದೆ. ಭಾರತದಲ್ಲಿ ಒಳ್ಳೆಯ ಮಾರುಕಟ್ಟೆಯನ್ನು ಸಂಪಾದಿಸಿದರೂ, ಅದನ್ನು ನೇಯುವ ಕುಟುಂಬಗಳು ಸಂಕಷ್ಟದಲ್ಲಿವೆ. ಸಹಜವಾಗಿ ಮನೆಗಳಲ್ಲಿ ಹೆಚ್ಚು ನೇಯುವುದರಿಂದ ಮಹಿಳೆಯರ ಶ್ರಮವೇ ಅಧಿಕವಾಗಿರುತ್ತದೆ. ಹಗಲು ರಾತ್ರಿ ಎನ್ನದೇ ನೇಯುವ ಇಲ್ಲಿನ ಮಹಿಳೆಯರ ದೇಹವು ಖಾಯಿಲೆಗಳ ಗೂಡಾಗಿರುತ್ತದೆ. ನೇಯುವ ಕಾಯಕದಲ್ಲಿ ದೇಹದ ಪ್ರತಿಯೊಂದು ಭಾಗವನ್ನು ಬಳಸಿಕೊಳ್ಳುವುದರಿಂದ ಬೆನ್ನು, ಕಣ್ಣು, ಕೈ ಕಾಲುಗಳ ಸಮಸ್ಯೆ ಎದುರಾಗುತ್ತದೆ. ಅಲ್ಲಿನ ಸರ್ಕಾರ ಗದ್ವಾಲ್ ಸೀರೆಯ ನೇಯ್ಗೆಯ ವಿಶೇಷ ಪರಿಣಿತಿಗಾಗಿ 'ಶ್ರೀದೇವಿ ಪ್ರಶಸ್ತಿ'ಯನ್ನು 'ಮೌಲನಬಿ' ಎನ್ನುವ ಮಹಿಳೆಗೆ ನೀಡಿದೆ. ಹಾಗೆಯೇ ಹೈದರಾಬಾದಿನಲ್ಲಿ 'ಸಲೀಮ' ಎನ್ನುವ ಮಹಿಳೆಗೆ ಬಳೆಗಳ ವಿಶಿಷ್ಟತೆಗೆ ರಾಜ್ಯ ಸರ್ಕಾರ ಪುರಸ್ಕಾರವನ್ನು ನೀಡಿದೆ. ತೆಲಂಗಾಣದ ಮಹಿಳೆಯರು ವಿಶಿಷ್ಟ ಸೀರೆ ಮತ್ತು ಬಳೆಗಳ ವ್ಯಾಪಾರದಲ್ಲಿ ತೊಡಗಿಕೊಂಡಿದ್ದರು. ಅವರ ಶ್ರಮಕ್ಕೆ ತಕ್ಕ ದುಡಿಮೆಯಾಗುತ್ತಿಲ್ಲ. ಬದುಕು ಬದಲಾಗಿಲ್ಲ. ಪ್ರಶಸ್ತಿ ಬದುಕನ್ನು ಬದಲಿಸದೇ ಇದ್ದದ್ದು ಅವರಲ್ಲಿನ ಕೊರಗಾಗಿದೆ. ಅವರ ಜೀವನ ನಿರ್ವಹಣೆಯೇ ಅದಕ್ಕೆ ನಿದರ್ಶನವಾಗಿ ಕಂಡುಬಂದಿದೆ ಎಂದು ಲೇಖಕಿ ತಿಳಿಸುತ್ತಾರೆ.

ರಾಜಾಸ್ಥಾನದ ಘೋಟಲಿಯಲ್ಲಿ ಬೆಟ್ಟದ ದೇವರಾದ ಮಾತಾ ದೇವಾಲಯಕ್ಕೆ ಕಲ್ಲು, ಮಣ್ಣು ಹೊರುವ ಮಹಿಳೆಯರನ್ನು ಕುರಿತು ಇಂದಿರಾ ಹೆಗ್ಗಡೆ ಅವರು 'ಇಂದ್ರಪ್ರಸ್ಥದಿಂದ ಐತಿಹಾಸಿಕ ನಡೆ' ಕೃತಿಯಲ್ಲಿ ದಾಖಲಿಸುತ್ತಾರೆ. ಬೆಟ್ಟದ ಮಾತಾ ದೇವಾಲಯವು ಭೂಮಿಯಿಂದ ಸುಮಾರು ೬೩೫ ಅಡಿಗಳಷ್ಟು ಎತ್ತರದ ಬೆಟ್ಟದಲ್ಲಿನ ಕಟ್ಟಡ ಕಾಮಗಾರಿಗೆ ಮಹಿಳೆಯರು ಸಹ ಕಲ್ಲು ಮಣ್ಣನ್ನು ಹೊರುವವರಾಗಿದ್ದರು. ಈ ಕುರಿತು ಲೇಖಕಿ ಕೂಲಿ ಕೆಲಸ ಮಾಡುವ ಮಹಿಳೆಯರನ್ನು ವಿಚಾರಿಸಿದಾಗ ದಿನಕ್ಕೆ ಐದು ಆರು ಭಾರಿ ಬೆಟ್ಟವನ್ನು ಅತ್ತುತ್ತಿರುವುದಾಗಿ ತಿಳಿಸುತ್ತಾರೆ. ಕಟ್ಟಡ ಕಾಮಗಾರಿಗೆ ಅಗತ್ಯವಾದ ಸಾಮಾನುಗಳನ್ನು ಹೊರುವ ಮಹಿಳೆಯರ ಅಗಾಧ ಶ್ರಮವನ್ನು ಲೇಖಕಿ ಕಂಡು ದಂಗಾಗುತ್ತಾರೆ. ಬೆಟ್ಟದ ಮೇಲಿನ ತಾಣಗಳಿಗೆ ಘೋಟಲಿ ಮಾತಾ ಮಂದಿರ ಒಂದು ಉದಾಹರಣೆಯಾಗಿ ಕಂಡಿದೆಯಷ್ಟೇ. ಭಾರತದ ಅನೇಕ ರಾಜ್ಯಗಳ

ಬೆಟ್ಟದ ಮೇಲಿನ ದೇವಾಲಯಗಳಲ್ಲಿ ದುಡಿಯುವ ವರ್ಗದ ಪರಿಸ್ಥಿತಿ ಇಂದಿಗೂ ಭಿನ್ನವಾಗಿಲ್ಲ. ಜಪಾನ್ ಮಹಿಳಾ ಶ್ರಮದ ಕುರಿತಾಗಿ ಗಂಗಾ ಬಿ.ರಾಜಪುರೋಹಿತ ಅವರು 'ನಮ್ಮ ಜಪಾನ್ ಪ್ರವಾಸ' ಕೃತಿಯಲ್ಲಿ ಜಪಾನ್‌ನಲ್ಲಿ ಮಹಿಳೆಯರ ಶ್ರಮವನ್ನು ಕಂಡು ದಂಗಾಗುತ್ತಾರೆ. ಈ ಕುರಿತು ಲೇಖಕಿ "ಟ್ರಾನ್ಸ್‌ಪೋರ್ಟ್ ಕಂಪನಿಯಿಂದ ಒಬ್ಬ ಹೆಂಗಸು ವ್ಯಾನನ್ನು ತಾನೇ ಡ್ರೈವ್ ಮಾಡಿಕೊಂಡು ಬಂದು, ಮೂರನೇ ಮಹಡಿಯ ಮೇಲೆ ಇದ್ದ ನಮ್ಮ ಮನೆಯಿಂದ ಮೂವತ್ತು ಕೆ.ಜಿ. ತೂಕದ ನಾಲ್ಕು ಸೂಟ್ ಕೇಸ್‌ಗಳನ್ನು ಎರಡು ಟ್ರಿಪ್‌ನಲ್ಲಿ, ಆ ಕೈಯಲ್ಲೊಂದು, ಈ ಕೈಯಲ್ಲೊಂದು ಹಿಡಿದು ದಡದಡನೆ ಮೆಟ್ಟಿಲಿಳಿದು ವ್ಯಾನಿನಲ್ಲಿಟ್ಟುಕೊಂಡು ತಾನೇ ಡ್ರೈವ್ ಮಾಡಿಕೊಂಡು ಹೊರಟಳು".(ಗಂಗಾ.ಬಿ.ರಾಜಪುರೋಹಿತ, ೨೦೦೧, ಪುಟ-೬೩) ಎಂದು ಅಚ್ಚರಿ ವ್ಯಕ್ತಪಡಿಸುತ್ತಾರೆ. ಭಾರತದಲ್ಲಿ ದೈಹಿಕ ಶ್ರಮವನ್ನು ಬೇಡುವ ಕೆಲಸಗಳಲ್ಲಿ ಪುರುಷರೇ ಮಾಡುವುದನ್ನು ಕಂಡಿದ್ದ ಲೇಖಕಿಗೆ, ಜಪಾನ್‌ನ ಮಹಿಳೆ ಮೂವತ್ತು ಕೆ.ಜಿ.ಯ ಭಾರವನ್ನು ಹೊರಿದ್ದನ್ನು ಕಂಡು 'ಕಾಯಕವೇ ಕೈಲಾಸ' ಎಂಬುದು ವಿದೇಶಿಯರಿಗೆ ಫಲಿಸಿದೆ ಎಂದು ಹೇಳುತ್ತಾರೆ.

೫.೪. ವಿದೇಶಿ ಮಹಿಳಾ ಸಂಸ್ಕೃತಿ

ಪ್ರವಾಸ ಮಾಡಿದ ಪ್ರವಾಸಿಗರಿಗೆ ಸ್ವದೇಶದಿಂದ ವಿದೇಶಕ್ಕೆ ಹೋದಾಗ ವಿದೇಶದಲ್ಲಿರುವವರ ಕುರಿತು ಕುತೂಹಲವಿರುತ್ತದೆ. ಸಂಸ್ಕೃತಿ-ಆಚಾರ-ವಿಚಾರ ಎಲ್ಲವೂ ಭಿನ್ನವಾಗಿರುವುದನ್ನು ಕಂಡ ಮೇಲೆ ಆ ಕುತೂಹಲ ಮತ್ತಷ್ಟು ಹೆಚ್ಚಾಗುತ್ತದೆ. ಕನ್ನಡ ಮಹಿಳಾ ಪ್ರವಾಸಿಗರಲ್ಲಿ ವಿದೇಶಿ ಮಹಿಳೆಯರ ಬದುಕಿನ ಕ್ರಮವನ್ನು ಬಹು ಆಯಾಮಗಳಿಂದಲೂ ಚಿತ್ರಿಸಿರುವುದು ಕಂಡುಬರುತ್ತದೆ. ಅನುಪಮಾ ನಿರಂಜನ ಅವರು 'ಸ್ನೇಹಯಾತ್ರೆ' ಪ್ರವಾಸ ಕಥನದಲ್ಲಿ ವಿದೇಶಿ ಮಹಿಳೆಯರ ಕುರಿತು ಅವರ ವೇಷ ಭೂಷಣಗಳ ಕುರಿತು ಮಾಹಿತಿಯನ್ನು ನೀಡುತ್ತಾರೆ. ಗ್ಯಾಲಾ ಮತ್ತು ರುತ್ ಎನ್ನುವ ಪ್ರವಾಸಿ ಸಹಾಯಕರ ಎತ್ತರ, ಶೂಗಳು, ನೀಳ ಕೂದಲು, ಮೋಹಕತೆ, ವಿನಯತೆ, ಚೂಟಿತನ, ಮಾತುಗಾರಿಕೆ, ಸಹಾಯ ಮಾಡುವ ರೀತಿಗಳನ್ನು ತಮ್ಮ ಕೃತಿಯುದ್ದಕ್ಕೂ ಪ್ರಸ್ತಾಪಿಸುತ್ತಲೇ ಬಂದಿದ್ದಾರೆ. ಇದು ಅಲ್ಲಿನ ಮಹಿಳಾ ಸಂಸ್ಕೃತಿಯ ಬಗ್ಗೆ ಬಿಂಬಿಸುತ್ತದೆ. ಅನುಪಮಾ ನಿರಂಜನರು ವಿದೇಶಿ ಮಹಿಳೆಯರನ್ನು ಪ್ರವಾಸದ ಉದ್ದಕ್ಕೂ ಅವರ ಉಡುಗೆ ತೊಡುಗೆಗಳನ್ನು ಗಮನಿಸುತ್ತಲೇ ನಿರೂಪಿಸುತ್ತಾರೆ. ವಿದೇಶಿ ಮಹಿಳೆಯ ಎತ್ತರ, ದೃಢಕಾಯ, ಕೆಂಜು ಕೂದಲು, ಕ್ರಾಪಿನ ಜಡೆ, ಸ್ಕರ್ಟ್ ಮತ್ತು ಸರಳ ಉಡುಗೆ, ಮಗುವಿನಂತ ನಗು, ಹೀಗೆ ಅವರ ವೇಷಭೂಷಣವನ್ನು ಅವರ ವ್ಯಕ್ತಿತ್ವವನ್ನು ನಿರೂಪಿಸುತ್ತ ವಿದೇಶಿ ಮಹಿಳೆಯ ಬಾಹ್ಯ ಮತ್ತು ಆಂತರಿಕತನಗಳ ಮಹಿಳಾ ಸಂಸ್ಕೃತಿಯನ್ನು ಪರಿಚಿಸುತ್ತಾರೆ.

ಎಚ್.ಎಸ್.ಅನುಪಮಾ ಅವರ 'ನೈಲ್ ದಾರಿಗುಂಟ' ಪ್ರವಾಸ ಕಥನವು ಒಂದು ಐತಿಹಾಸಿಕ ಪ್ರವಾಸ ಕಥನವಾಗಿದೆ. ಈಜಿಪ್ಟ್ ದೇಶಕ್ಕೆ ಪ್ರವಾಸ ಕೈಗೊಂಡ ಅವರು ಪ್ರವಾಸಿ ಕೇಂದ್ರಗಳ ಮಾಹಿತಿಯನ್ನೇ ಹೆಚ್ಚಾಗಿ ಕಲೆಹಾಕಿದ್ದಾರೆ. ಐಸಿಸ್, ಹೋರೆಸ್, ಸೆಬಕ್ ಮುಂತಾದ

ದೇವತೆಗಳ ಆಚರಣೆಗಳ ಬಗ್ಗೆ ವಿವರಿಸಿದ್ದಾರೆ. ಅಲ್ಲದೇ ಹಟ್ಶೆಪ್ಸುಟ್ ರಾಣಿಯ ಬಗ್ಗೆ ಅಂದಿನ ಕಾಲದ ಈಜಿಪ್ಟ್ ದೇಶದ ವಿವಾಹ ಸಂಬಂಧ, ಮಹಿಳಾ ಸಂಸ್ಕೃತಿ, ಆಡಳಿತವನ್ನು ಪರಿಚಯಿಸುತ್ತಾರೆ. ರಾಣಿ ಹಟ್ಶೆಪ್ಸುಟ್ ಚರಿತ್ರೆಯ ಮಾಹಿತಿ ಒದಗಿಸಿದ್ದಾರೆ. ೧೫ನೇ ಶತಮಾನದಲ್ಲಿಯೇ ಈಜಿಪ್ಟ್‌ನ ದೇಶದಲ್ಲಿ ಮಹಿಳೆಗೆ ಪ್ರಧಾನವಾದ ಸ್ಥಾನಮಾನಗಳು ಸಿಕ್ಕಿದ್ದವು. ಆಸ್ತಿ ಪಾಸ್ತಿಗಳಿಗೆ ವಂಶಪರಾಂಪರ್ಯವಾಗಿ ವಾರಾಸುದಾರಳಾಗಬಹುದಿತ್ತು. ಸಮಸ್ಯೆ ತಲೆದೊರಿದಲ್ಲಿ ನ್ಯಾಯಲಯಕ್ಕಾದರೂ ಹೋಗುವ ಸ್ವಾತಂತ್ರ್ಯ ಮಹಿಳೆಗೆ ನೀಡಿದ್ದರಾದರೂ, ಓದು ಬರಹ ಕಲಿಯುವ ಹಕ್ಕಾಗಲಿ, ರಾಜ್ಯಭಾರ ಮಾಡುವ ಹಕ್ಕಾಗಲಿ ಇರಲಿಲ್ಲ ಎಂದಿದ್ದಾರೆ. ರಾಜವಿವಾಹದ ಸಂಬಂಧಗಳು ವಿಚಿತ್ರವಾದ ಸಂಬಂಧಗಳನ್ನು ಹೊಂದುತ್ತಿದ್ದರು. ಸೋದರ–ಸೋದರಿಯರಲ್ಲಿ ಮದುವೆ ಆಗುವುದು ಈಜಿಪ್ಟ್‌ನ ರಾಜ ಕುಟುಂಬದಲ್ಲಿ ಒಪ್ಪಿ ನಡೆಯುವ ಪದ್ಧತಿಗಳಾಗಿದ್ದವು. ಸೋದರ–ಸೋದರಿ ಎಂಬ ಪದ ಬಳಕೆಯು ಅಲ್ಲಿ ಪ್ರಿಯತಮ–ಪ್ರಿಯತಮೆ ಎಂಬ ಅರ್ಥವನ್ನು ಕೊಡುತ್ತವೆ. ಫೆರೋಗಳ ವಂಶಾಡಳಿತದಲ್ಲಿ ರಕ್ತಶುದ್ಧತೆ ಉಳಿಸಿಕೊಂಡು ಬರುವುದಕ್ಕೆ ಒಂದೇ ತಾಯಿ ಮಕ್ಕಳಲ್ಲಿ ಮದುವೆಯಾಗುವ ಪದ್ಧತಿಯಿತ್ತು. ಥಟ್ಮೋಸ್ ಮಗಳಾದ ಹಟ್ಶೆಪ್ಸುಟ್‌ಳು ಅಪ್ಪನ ಮರಣಾನಂತರ ಉತ್ತರಾಧಿಕಾರಕ್ಕಾಗಿ ಮಲತಮ್ಮನಾದ ಇಮ್ಮಡಿ ಥಟ್ಮೋಸ್‌ನನ್ನು ಮದುವೆ ಆಗುವ ಮೂಲಕ ಮಕ್ಕಳನ್ನು ಪಡೆಯುತ್ತಾಳೆ. ಇವರ ವಿವಾಹ ಪದ್ಧತಿಯಲ್ಲಿ ಸಕಾರಣ ನೀಡಿ ವಿಚ್ಛೇದನವನ್ನು ಪಡೆಯಬಹುದಿತ್ತು. ಇದು ಈ ಕೃತಿಯಲ್ಲಿ ಅನಾವರಣಗೊಂಡ ಈಜಿಪ್ಟ್‌ನ ವಿದೇಶಿ ಮಹಿಳಾ ಸಂಸ್ಕೃತಿಯೊಂದನ್ನು ಪ್ರತಿನಿಧಿಸುವ ವಿಷಯವಾಗಿದೆ.

ಭಾರತೀಯ ಸಂಪ್ರದಾಯಗಳು ಮಹಿಳೆಯನ್ನು ತನ್ನ ಅಧೀನದಲ್ಲಿರಿಸಿಕೊಳ್ಳುವ ಸಲುವಾಗಿ ವ್ಯವಸ್ಥಿತವಾದ ಪುರುಷ ಪ್ರಧಾನ ರಾಜಕಾರಣವನ್ನು ನಡೆಸುತ್ತಿರುತ್ತದೆ. ಮಹಿಳೆಯನ್ನು ಕೆಲವೇ ವಲಯಗಳಿಗೆ ಸೀಮಿತಗೊಳಿಸುವಂತಹದ್ದನ್ನು ಸಹಜವಾಗಿ ಕಾಣುತ್ತೇವೆ. ಇದಕ್ಕೆ ವಿದೇಶಿ ಮಹಿಳೆಯರು ಹೊರತಾಗಿಲ್ಲ. ಅಲ್ಲಿನ ಕೌಟುಂಬಿಕತೆಯನ್ನು ಗಮನಿಸಿದಾಗ ಬಂಧುತ್ವವನ್ನು ಮೀರಿದಂತಹ ನೆಲೆಗಳಿರುವುದು ಕಂಡುಬರುತ್ತದೆ. ಈ ಕುರಿತು ಲೇಖಕಿ ಹೇಮಲತಾ ಮಹಿಷಿ ಅವರ 'ಯುರೋ ದರ್ಶನ' ಕೃತಿಯ 'ಕನಸಿನ ಲೋಕ–ವೆನಿಸ್' ಅಧ್ಯಾಯದಲ್ಲಿ ಅಲ್ಲಿನ ಮಹಿಳಾ ಸ್ವಾತಂತ್ರ್ಯ ಮತ್ತು ಬದುಕಿನ ವಿವರಗಳನ್ನು ಕಟ್ಟಿಕೊಡಲು ಯತ್ನಿಸಿದ್ದಾರೆ. ಹೈಸ್ಕೂಲ್ ವಿದ್ಯಾಭ್ಯಾಸ ಮುಗಿಸಿದ ಮಹಿಳೆಯರು ಕಾಲೇಜು ಶಿಕ್ಷಣ ಪಡೆಯುವ ವೇಳೆಗಾಗಲೇ ಮಹಿಳೆಗೆ ಸ್ವಾತಂತ್ರ್ಯ ಮುಕ್ತವಾಗಿದ್ದು, ಯಾರ ಮೇಲೂ ಅವಲಂಬನೆಯಾಗದೆ ಸ್ವಂತ ಜೀವನವನ್ನು ನಿರ್ವಹಿಸುವರು. ಒಂದು ಹಂತದ ಶಿಕ್ಷಣ ಮುಗಿದನಂತರ ಕುಟುಂಬಗಳಿಂದ ಪ್ರತ್ಯೇಕಗೊಳ್ಳುವುದು, ಸ್ವಾವಲಂಬಿಗಳಾಗುವುದು ಯುರೋಪ್‌ನ ಸಂಸ್ಕೃತಿಯ ಭಾಗವಾಗಿದೆ. ಅಲ್ಲದೆ 'ಬೇಬಿ ಸಿಟ್ಟಿಂಗ್'ನಂತಹ ಕೆಲಸದಲ್ಲಿ ಹುಡುಗಿಯರು ತಮ್ಮ ಪಕ್ವತೆಯಲ್ಲಿ ವ್ಯವಹರಿಸುವುದು ಮತ್ತು ಮದುವೆಯಾಗದೇ ಮಗು ಪಡೆಯುವ, ಹಣಗಳಿಸುವ ಅವಸ್ಥೆಯ ಬಗ್ಗೆಯು ಹೇಳಿದ್ದಾರೆ. ಲೇಖಕಿಯು ಮಹಿಳೆಯರ ಸ್ವಾತಂತ್ರ್ಯ ಬಗ್ಗೆ ಹೇಳುತ್ತಾರಾದರೂ, ಭವಿಷ್ಯದ ಬಗ್ಗೆ ಆತಂಕ

ವ್ಯಕ್ತಪಡಿಸಿದ್ದಾರೆ. ಒಂಟಿತನದ ಬದುಕಿಗೆ ಹಣ ಗಳಿಕೆಯೇ ಅಂತಿಮ ಎಂದು ಭಾವಿಸುವ ವೆನಿಸ್‌ನ ಮಹಿಳೆಯರಿದ್ದಾರೆ. ಭಾರತದಲ್ಲಿರುವಂತೆ ಮಕ್ಕಳ ವಿದ್ಯಾಭ್ಯಾಸ, ಮದುವೆ, ತಂದೆ ತಾಯಿಯರ ಜವಾಬ್ದಾರಿ, ಮಕ್ಕಳ ಸುರಕ್ಷತಾ ಭಾವನೆ, ಭವಿಷ್ಯ, ಸಮಾಜ, ಕುಟುಂಬ, ಬಂಧುತ್ವ, ಹೊಣೆಗಾರಿಕೆ, ಮನುಷ್ಯ ಸಂಬಂಧಗಳ ಅನುಭವಗಳನ್ನು ಅರಿಯದೆ ಹೋಗುತ್ತಾರೆ. ಇವೆಲ್ಲವು ಒಂದು ಕೌಟುಂಬಿಕ ಚೌಕಟ್ಟಿನಲ್ಲಿ ಅತ್ಯಂತ ಜವಾಬ್ದಾರಿತನಗಳಾಗಿರುತ್ತವೆ. ಈ ಜವಾಬ್ದಾರಿತನವು ವಿದೇಶಿ ಮಹಿಳೆಯರಿಗೆ ಸಿಗದೇ ಹೋದದ್ದರ ಬಗ್ಗೆ ಲೇಖಕಿಯು ಆತಂಕವನ್ನು ವ್ಯಕ್ತಪಡಿಸುತ್ತಾರೆ. ಹಣಗಳಿಕೆಯೇ ಜೀವನದ ಪರಮ ಗುರಿಯಂತೆ ಯಾಂತ್ರಿಕವಾಗಿ ದುಡಿಯುವ ವೆನಿಸ್‌ನ ಮಹಿಳೆಯರಲ್ಲಿ ಜೀವನದ ಅಂತ್ಯದಲ್ಲಿ ನಶ್ವರತೆ ಕಾಡಿಸಬಹುದಾಗಿದೆ.

'ಯುರೋ ದರ್ಶನ' ಕೃತಿಯ ಕನಸಿನ ಲೋಕ ವೆನಿಸ್ ಎಂಬ ಅಧ್ಯಾಯದಲ್ಲಿ ಲೇಖಕಿಯರು ಲೀಡೋ ದ್ವೀಪಕ್ಕೆ ಹೋದಾಗ, ಅಲ್ಲೆ ಇರುವ ಸಮುದ್ರದ ಬೀಚ್‌ಗೆ ಭೇಟಿ ನೀಡಿದರು. "ಆ ಬೀಚಿನ ದಾರಿಯಲ್ಲಿ ನಡೆದು ಹೋಗುತ್ತಿದ್ದಾಗ, ಮೂವರು ವಯಸ್ಸಾದ ಮಹಿಳೆಯರು ಸೈಕಲ್ ಮೇಲೆ ಬರುತ್ತಿದ್ದರು. ಅವರನ್ನು ಏನೋ ವಿಚಾರಿಸಲು ಹೊರಟಾಗ ವೃದ್ಧ ಮಹಿಳೆಯರು ನಿಂತು ಸ್ನೇಹಪೂರ್ವಕವಾಗಿ ಮಾತಾನಾಡಿಸಿದರು. ಮುದುಕಿಯರಾದರೂ ಸೈಕಲ್ ಹೊಡೆದುಕೊಂಡು ಜೀವನವನ್ನು ಅನುಭವಿಸಲು ತವಕಿಸುತ್ತಾರೆ."(ಹೇಮಲತಾ ಮಹಿಷಿ, ೧೯೯೯, ಪು-೧೩೫) ಆ ಮಹಿಳೆಯ ಜೀವನೋತ್ಸಾಹವನ್ನು ಕಂಡು ಲೇಖಕಿ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಭಾರತದಂತಹ ದೇಶದಲ್ಲಿ ಮದುವೆಯಾದಾಗಲೇ ಎಲ್ಲವೂ ಮುಗಿದು ಹೋಯಿತು ಎಂದು ಸೀಮಿತವಾಗುವ ಬಹುತೇಕ ಮಹಿಳೆಯರಿದ್ದಾರೆ. ಅದರಲ್ಲಿ ವಿದೇಶಿ ಮಹಿಳೆಯರು ಇಳಿವಯಸ್ಸಿನಲ್ಲೂ ಸದಾ ಚಟುವಟಿಕೆಯಿಂದಲೇ ಇರುತ್ತಾರೆ. ಹೇಮಲತಾ ಮಹಿಷಿಯವರ 'ಕಾಂಗರೂ ಕಿವಿಯ ನಾಡಿನಲ್ಲಿ' ಕೃತಿಯು ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ ದೇಶದ ಪ್ರವಾಸ ಕಥನವಾಗಿದ್ದು, ಲೇಖಕಿ ಅಲ್ಲಿನ ತಾಜ್ ಹೋಟೆಲ್‌ಗೆ ಊಟಕ್ಕೆ ಹೋದಾಗ ಭವ್ಯ ಸ್ವಾಗತ ದೊರೆತ್ತಿದ್ದರೂ ಹೆಚ್ಚು ಜನರೇ ಇರಲಿಲ್ಲ ಎನ್ನುತ್ತಾರೆ. ಇಂಡಿಯನ್ ಹೋಟೆಲ್‌ನಲ್ಲಿ ಬೇರರ್ ಕೆಲಸವನ್ನು ವಿದೇಶಿ ಹುಡುಗಿ ಮಾಡುತ್ತಿದ್ದಳು. ಇಂಡಿಯನ್ನರು ವಿದೇಶದಲ್ಲಿ ಸಿಕ್ಕರೇ ಪ್ರವಾಸ ಸುಲಭವಾಗುತ್ತದೆ ಎಂಬ ನಂಬಿಕೆಯನ್ನು ಆ ವಿದೇಶಿ ಬೇರರ್ ಹುಡುಗಿ ಸುಳ್ಳಾಗಿಸಿದಳು. ಹಿಂದಿ ಬಾರದ ಆಕೆ ಇಂಡಿಯನ್ ತರಹದ ಲಕ್ಷಣಗಳನ್ನು ಹೊಂದಿದ್ದಳು. ಅವಳೊಂದಿಗೆ ಲೇಖಕಿ ಮುಕ್ತವಾಗಿ ಬೆರತಾಗ 'ಫಿಜಿ ಇಂಡಿಯನ್' ಎಂದು ತಿಳಿಯುತ್ತಾರೆ. ಭಾರತಕ್ಕೆ ಭೇಟಿ ನೀಡಬೇಕೆಂಬುದು ತನ್ನ ಮಹಾದಸೆ ಎಂದು ಹೇಳಿಕೊಂಡಳು. ಲೇಖಕಿ ಇದ್ದ ಮೂರು ದಿನಗಳ ಕಾಲ ಚೆನ್ನಾಗಿ ನೋಡಿಕೊಂಡು ಭಾರತೀಯತನ ಮೆರೆದ ಬಗ್ಗೆ ಸಂತಸ ವ್ಯಕ್ತಪಡಿಸುತ್ತಾರೆ.

ಭಾರತದಂತಹ ರಾಷ್ಟ್ರಗಳಲ್ಲಿ ಹೆರಿಗೆಯ ನಂತರವು ಸುಮಾರು ೫-೬ ತಿಂಗಳವರೆಗೂ ಮನೆಯಲ್ಲಿ ಹಾರೈಕೆಯಲ್ಲಿರುತ್ತಾರೆ. ಆದರೆ ವಿದೇಶಗಳಲ್ಲಿ ಹೆರಿಗೆ ಆದ ತಿಂಗಳೊಳಗೆ ಮಕ್ಕಳ ಸಮೇತ ಶಾಪಿಂಗ್‌ಗಳಿಗೆ ಬರುವುದನ್ನು ಕಂಡ ಲೇಖಕಿಯು ವಿದೇಶಿ ಮಹಿಳಾ ಸಂಸ್ಕೃತಿ

ಮತ್ತು ಭಾರತೀಯ ಮಹಿಳಾ ಸಂಸ್ಕೃತಿಯನ್ನು ಹೋಲಿಸಿ ನೋಡಿ ಅಚ್ಚರಿ ಪಡುತ್ತಾರೆ. "ಇನ್ನೂ ತಿಂಗಳು ತುಂಬದ ಎಳೆಯ ಬತ್ತಿಗಳನ್ನು ಬಿಡದೆ ಪ್ರಾಮ್‌ಗಳಲ್ಲಿ ಮಲಗಿಸಿ ತಳ್ಳಿಕೊಂಡು ತಾಯಂದಿರು ಅತ್ತಿಂದತ್ತ ತಿರುಗಾಡುತ್ತಿದ್ದರು. ನಮ್ಮ ಅಜ್ಜಿಯರು ಇವರನ್ನು ಏನಾದರೂ ನೋಡಿದ್ದರೆ ಎದೆ ಒಡೆದುಕೊಂಡು ಬಿಡುವರೇನೋ" (ಪದ್ಮಾ ಗುರುರಾಜ್, ೨೦೧೦, ಪುಟ-೧೬) ಎಂದುಕೊಂಡರು. ಸಿಡ್ನಿ ಮಹಾನಗರದಲ್ಲಿ ಯಾರು ಯಾರಿಗೂ ಅವಲಂಬಿತರಾಗಿರುವುದಿಲ್ಲ. ಹೆಣ್ಣೇ ಆಗಲಿ, ಗಂಡೇ ಆಗಲಿ ತಮ್ಮ ಕೆಲಸ ಕಾರ್ಯಗಳನ್ನು ತಾವೇ ಮಾಡಿಕೊಳ್ಳುತ್ತಾರೆ. ಕಿರಿಯರಿಂದ ಹಿರಿಯರವರೆಗೂ ಅವರವರ ಕೆಲಸಗಳನ್ನು ಅನ್ಯರಿಗೆ ವಹಿಸದೇ ನಿರ್ವಹಿಸುವುದನ್ನು ಕಾಣುತ್ತೇವೆ. ಇವರ ಜೀವನ ವಿಧಾನವನ್ನು ಕುರಿತು ಲೇಖಕಿ "ತುಂಬು ಗರ್ಭಿಣಿಯರು ಹೆರಿಗೆಯ ದಿನದವರೆಗೂ ತುಂಬಾ ಕ್ರಿಯಾಶೀಲ ಬದುಕಿನಲ್ಲಿ ತೊಡಗಿಕೊಂಡಿರುತ್ತಾರೆ. ಅಲ್ಲದೇ ಶಾಪಿಂಗ್‌ಗಾಗಿ, ಬಿಲ್ ಕಟ್ಟುವುದಕ್ಕಾಗಿ, ಬ್ಯಾಂಕ್ ವ್ಯವಹಾರಕ್ಕಾಗಿ ತಾವೇ ಕಾರ್ ಡ್ರೈವಿಂಗ್ ಮಾಡಿಕೊಂಡು ಹೋಗುವುದು ಸಹಜವಾಗಿ ಕಂಡುಬರುತ್ತದೆ. ಸಿಡ್ನಿಯ ಬಹುತೇಕ ಮಹಿಳೆಯರು ಹೆರಿಗೆಯ ದಿನದವರೆಗೂ ತಮ್ಮ ಕೆಲಸವನ್ನು ನಿಭಾಯಿಸುವುದು ಕಾಣುತ್ತೇವೆ." (ಅದೇ, ಪು-೪೮) ಎಂದಿದ್ದಾರೆ. ಹಂಗೇರಿ ದೇಶದ ಗರ್ಭಿಣಿ ಮಹಿಳೆಯರ ಕುರಿತು ಹೇಮಲತಾ ಎಚ್.ಎಂ. ಅವರ 'ಹಂಗೇರಿಯಲ್ಲಿ ಹೇಮ' ಕೃತಿಯಲ್ಲಿ ಹಂಗೇರಿಯಲ್ಲಿ ವಿದೇಶಿ ಮಹಿಳೆಯು ಗರ್ಭಿಣಿಯಾದ ಸಂದರ್ಭದಲ್ಲಿ ಅನುಕೂಲವಾಗುವಂತೆ ವಿಶೇಷವಾದ ಸವಲತ್ತುಗಳನ್ನು ನೀಡುತ್ತಿರುವುದು ಹಾಗೂ ಒಂದು ವರ್ಷದ ಅವಧಿಗೆ ರಜೆ ಪಡೆಯುವ ಸೌಲಭ್ಯವನ್ನು ಹೊಂದಿದ್ದಾರೆ. ಅಲ್ಲದೇ ಹಾಲುಣಿಸುವ ರಜೆ, ವೇತನವಿಲ್ಲದ ರಜೆಗಳು ಸಿಕ್ಕುತ್ತವಂತೆ. ವಿದೇಶಿ ಮಹಿಳೆಯರು ದುಡಿಯುವ ಕಂಪನಿಗಳಲ್ಲಿ ಅನೇಕ ಸವಲತ್ತುಗಳನ್ನು ಕೊಡುತ್ತಿವೆ. ಅಲ್ಲದೇ ಮಹಿಳಾ ಉದ್ಯೋಗಿಗಳಿಗೆ ಪ್ರೋತ್ಸಾಹ ತುಂಬಲು 'ಫ್ಯಾಮಿಲಿ ಫ್ರೆಂಡ್ಲಿ ವರ್ಕ್‌ಪ್ರೇಸ್ ಅವಾರ್ಡ್' ಅನ್ನು ೨೦೦೦ರಿಂದ ನೀಡುತ್ತಿರುವುದನ್ನು ಲೇಖಕಿ ಪ್ರಸ್ತಾಪಿಸುತ್ತಾರೆ.

ಅಮೇರಿಕಾ ಜನರಲ್ಲಿ ಕೆಲಸ, ಸಂಬಳದಲ್ಲಿ ಎಷ್ಟೇ ಭಿನ್ನತೆ ಇದ್ದರೂ, ಸಮಾನವಾಗಿ ಕಾಣುವ ಮನೋಭಾವವಿದೆ ಎಂದು ಪಾರ್ವತಮ್ಮ ಮಹಾಲಿಂಗಶೆಟ್ಟಿ ಅವರು 'ಅಮೇರಿಕಾದ ಇತಿಹಾಸ ಮತ್ತು ಜನಜೀವನ' ಪ್ರವಾಸ ಕೃತಿಯಲ್ಲಿ ನಿರೂಪಿಸುತ್ತಾರೆ. ಅಮೇರಿಕಾದಲ್ಲಿ ಮನೆಗೆಲಸಕ್ಕೆ ಬಂದವರು ತಮ್ಮ ಸೌಂದರ್ಯದ ಕಡೆಗೂ ಗಮನ ಹರಿಸುತ್ತಲೇ, ಮನೆಯ ಸಣ್ಣ ಸಣ್ಣ ಭಾಗಗಳಿಗೂ ಆದ್ಯತೆ ಕೊಟ್ಟು ಕೆಲಸ ಮಾಡುತ್ತಾರೆ. ಅಲ್ಲಿನ ಶ್ರಮ ಜೀವಿಗಳಿಗೆ ಬೆಲೆ ಇದೆ ಎಂಬುದಕ್ಕೆ ಲೇಖಕಿ ಕೊಡುವ ಉದಾಹರಣೆ ಹೀಗಿದೆ, "ಕೂಲಿಕಾರರು ಎಂದು ವಿಭಾಗಿಸಿ ನೋಡುವುದಕ್ಕೆ ಆಗದಷ್ಟು ಸಮಾನ ನಾಗರಿಕತೆ ಅಮೇರಿಕಾದಲ್ಲಿ ಬೆಳೆದಿದ್ದರಿಂದ ಎಲ್ಲರೂ ಕಾರಿನಲ್ಲಿ ಓಡಾಡುತ್ತಾರೆ. ಉಡುಪುಗಳು ಕ್ಲೀನಾಗಿರುತ್ತವೆ. ಸಾಕ್ಸ್ ಶೂ ಹಾಕಿಕೊಂಡಿರುತ್ತಾರೆ. ಶ್ಯಾಂಪೂ ಮುಂತಾದವನ್ನು ಉಪಯೋಗಿಸುತ್ತಾರೆ. ಹೇರ್ ಡ್ರೇಸರ್ ಹತ್ತಿರವೂ ಹೋಗಿ ಬರುತ್ತಾರೆ. ಉಗುರು ಬಿಟ್ಟು ಬಣ್ಣ ಹಾಕಿರುತ್ತಾರೆ. ಕೆಲಸ ಮಾಡುವಾಗ ಕೈ ಚೀಲ

ಹಾಕಿಕೊಳ್ಳುತ್ತಾರೆ. ಎಲ್ಲಾ ಕೆಲಸ ಮಾಡಿದರೂ ಮೈ ಕೈ ಗಲೀಜು ಮಾಡಿಕೊಳ್ಳುವುದಿಲ್ಲ. ನಮ್ಮ ದೇಶದಲ್ಲೂ ಸಮಾನತೆ ಎಂದು ಮಾತಾನಾಡುತ್ತಿರುತ್ತೇವೆ. ಅಲ್ಲಿಯಂತೆ ನಿಜವಾದ ಸಮಾನತೆ ಎಂದು ಬರುತ್ತದೆ ಎಂದು ಯೋಚಿಸುವಂತಾಯಿತು." (ಪಾರ್ವತಮ್ಮ ಮಹಾಲಿಂಗಶೆಟ್ಟಿ, ೨೦೦೬, ಪುಟ-೧೪೪) ಅಮೇರಿಕಾ ಮಹಿಳೆಯರಿಗೆ ಸಿಕ್ಕ ಅಭಿವ್ಯಕ್ತತೆಯಿಂದಾಗಿಯೇ ಎಲ್ಲಾ ರಂಗಗಳಲ್ಲೂ ತಮ್ಮ ಛಾಪನ್ನು ಮುಂದುವರೆಸುತ್ತಿರಬಹುದು. ಸಮಾನತೆ ಎಂಬುದು ಭಾರತದ ಮಟ್ಟಿಗೆ ಮಾತಿನಲ್ಲಿಯೇ ಉಳಿದಿದೆಯೇ ಹೊರತು, ಮನಸ್ಸಿನವರೆಗೂ ನಾಟದೆ ಇರುವುದು ವಿಷಾದವಾಗಿ ಕಂಡುಬರುತ್ತದೆ. 'ಅಮೇರಿಕಾ ಪ್ರವಾಸ'ದ ಕೃತಿಯಲ್ಲಿ ಮಹಿಳೆಯರ ಸ್ಥಿತಿವಂತಿಕೆಯನ್ನು ನಿದರ್ಶನದಂತೆ ನಿರೂಪಿಸುವ ಕೆ.ಆರ್.ಜಯಶ್ರೀ ಅವರದು ವಿಭಿನ್ನ ಆಯಾಮ. ಅವರಿಗೆ ಅಣ್ಣನ ಮನೆಗೆ ಕೆಲಸಕ್ಕೆ ಬಂದ ಮಹಿಳೆ ಉತ್ತಮ ಸ್ಥಿತಿಯ ಕುಟುಂಬದವಳಾದರೂ, ದುಡಿಯುವುದು ಕಂಡು ಆಕೆಯನ್ನು ವಿಚಾರಿಸಿದಾಗ ಅನೇಕ ಪ್ರಶ್ನೆಗಳಿಗೆ ಉತ್ತರಗಳು ದೊರೆಯುತ್ತವೆ. ಭಾರತಕ್ಕೆ ಭೇಟಿ ನೀಡಿ, ಆಚರಣೆಯನ್ನು ಅರಿಯುವ ಉದ್ದೇಶ ಹೊಂದಿರುವದಾಗಿ ಹೇಳಿಕೊಳ್ಳುತ್ತಾಳೆ. ಅಲ್ಲದೇ ಮನೆಗೆಲಸಕ್ಕಾಗಿ ಕ್ಯಾಷ್ ಮೂಲಕವೇ ಹಣ ಪಡೆಯುತ್ತಾರೆ. ಏಕೆಂದರೆ ಚೆಕ್ ಮತ್ತು ಡಿ.ಡಿ.ಗಳ ಮೂಲಕ ಹಣ ಪಡೆದರೆ ತೆರಿಗೆ ಹೋಗುವುದೆಂಬ ಕಾರಣಕ್ಕೆ ಹಣವನ್ನು ನಗದಿನಲ್ಲಿ ಸ್ವೀಕರಿಸುತ್ತಾರೆ. ಆ ಮೂಲಕ ಹಣದ ಉಳಿತಾಯವನ್ನು ಅಮೇರಿಕದ ಮಹಿಳೆಯರು ಮಾಡುತ್ತಾರೆ. ಇದನ್ನ ಕಂಡ ಲೇಖಕಿಗೆ ಮಹಿಳೆಯರು ಯಾವ ಭೂಪ್ರದೇಶದಲ್ಲಿದ್ದರೇನು ಉಳಿತಾಯ ಮಾಡುವುದು ಆಕೆಯ ಹುಟ್ಟುಗುಣವಲ್ಲವೆ ಎಂದು ಹೊಗಳುತ್ತಾರೆ.

ವಿದೇಶಿ ಮಹಿಳೆಯ ಧೈರ್ಯವನ್ನು ಕಂಡು ಪ್ರಶಂಸಿಸುವ ಪ್ರಭಾಮೂರ್ತಿ ಅವರು 'ಹಸಿರು ಹವಳ' ಪ್ರವಾಸ ಕಥನದಲ್ಲಿ ಈ ರೀತಿ ಪ್ರಸ್ತಾಪಿಸುತ್ತಾರೆ. ಈ ಕುರಿತು ಲೇಖಕಿ "ಮಧ್ಯರಾತ್ರಿ ಒಂದು ಗಂಟೆಯ ಸುಮಾರಿಗೆ ಟ್ರಕ್‌ಗೆ ಪೆಟ್ರೋಲ್ ಹಾಕಿಸಿಕೊಳ್ಳಲು ಒಂಟಿಯಾಗಿ ಬಂದಿದ್ದಳು. ಇದು ಆ ಮಹಿಳೆಯ ಧೈರ್ಯ ತೋರುತ್ತದೆಯೋ, ಆಸ್ಟ್ರೇಲಿಯಾದಲ್ಲಿರುವ ಸುಭದ್ರತೆ ತೋರುತ್ತದೋ, ಮಹಿಳೆಯರನ್ನು ಬೆಳೆಸುವ ರೀತಿಯನ್ನು ತೋರತ್ತದೋ ಅಥವಾ ಇವೆಲ್ಲವನ್ನೂ ಒಟ್ಟಾಗಿ ತೋರುತ್ತದೋ" (ಪ್ರಭಾಮೂರ್ತಿ, ೨೦೦೨, ಪುಟ-೨೭) ಎಂದಿದ್ದಾರೆ. ಇದು ವಿದೇಶಿ ಮಹಿಳೆಯರಲ್ಲಿನ ದುಡಿಮೆಯ ಛಲವನ್ನು ತೋರ್ಪಡಿಸುತ್ತದೆ. ಗಂಡು-ಹೆಣ್ಣು ಸಮಾನವಾಗಿ ದುಡಿಯುವ, ದುಡಿಯುವವರ ಬಗ್ಗೆ ಗೌರವದ ಮನೋಭಾವ ಹೊಂದಿದ್ದರಿಂದಲೇ ವಿದೇಶದಲ್ಲಿನ ಮಹಿಳೆಯರು ಶ್ರಮದ ಕೆಲಸಗಳಲ್ಲಿ ಆಸಕ್ತಿ ತೋರಿಸುತ್ತಾರೆ.

ಪೆರುವಿನ ಮಹಿಳೆಯರ ಕುರಿತು ಅನೇಕ ಸಂಗತಿಗಳನ್ನು ತಿಳಿಸುವ ನೇಮಿಚಂದ್ರ ಅವರ 'ಪೆರುವಿನ ಪವಿತ್ರ ಕಣಿವೆಯಲ್ಲಿ' ಎಂಬ ಕೃತಿಯು ಮಹತ್ವವಾಗುತ್ತದೆ. ಲೀಮಾದ ದಕ್ಷಿಣ ದಿಕ್ಕಿಗೆ ನಾಸ್ಕಾ ಗೆರೆಗಳನ್ನು ನೋಡುವುದು ಲೇಖಕಿಗೆ ಮಹತ್ವಕಾಂಕ್ಷೆಯಾಗಿದ್ದು, ನಾಸ್ಕಾ ಗೆರೆಗಳನ್ನು ರಕ್ಷಿಸುವಲ್ಲಿ ದುಡಿದ ಮಹಿಳಾ ವಿಜ್ಞಾನಿ ಮರಿಯಾ ರೇಕಿ ಕೊಡುಗೆ ಅಪಾರವಾಗಿದೆ.

ಪೆರುವಿನಲ್ಲಿ ಮರಿಯಾ ರೇಕಿ ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿ ಹೆಸರಾದವರು. ಇವರಲ್ಲದೇ ಪೆರು ದೇಶದಲ್ಲಿ ತುಳಿತಕ್ಕೆ ಒಳಗಾದವರ ಪರವಾಗಿ ಅನೇಕ ಶಕ್ತ ಮಹಿಳೆಯರು ಮುಖಂಡರಾಗಿ ಜನರ ಹಕ್ಕುಗಳಿಗಾಗಿ ಮಹಿಳಾ ಸಮಾನತೆಗಾಗಿ ಹೋರಾಡಿದರು. ಇದರ ಫಲವಾಗಿ ಲೀಮಾದ ಶಾಂಟಿ ಟೌನ್‌ನ ಹೋರಾಟಗಾರ್ತಿ ಎಲಿನಾ ಧಾರುಣವಾಗಿ ಹತ್ಯೆಗೀಡಾಗಿದ್ದಳು. ಈಕೆಯ ಈ ಹತ್ಯೆ ಕುರಿತು ಆ ನೆಲವೇ ನೊಂದು ಆಕೆಯ ಕತೆಯನ್ನು ಹೇಳುತಲಿತ್ತು ಎಂದು ವಿದೇಶಿ ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಬಗ್ಗೆ ದಾಖಲಿಸಿದ್ದಾರೆ. ಪೆರುವಿನ ಪ್ರಸಿದ್ಧ ಧಾರ್ಮಿಕ ಸ್ಥಳಗಳಲ್ಲಿ ಸಂತ ಕ್ಯಾರೋಲಿನಾ ಮೊನೆಸ್ಟರಿಯೂ ಒಂದು. ೧೬ನೇ ಶತಮಾನದಲ್ಲಿ ಶ್ರೀಮಂತ ಮನೆತನದ ಮಕ್ಕಳಿಗೆ ಕಾನ್ವೆಂಟ್ ಆಗಿದ್ದ ಈ ಸಂಸ್ಥೆಯಲ್ಲಿ ಸಂನ್ಯಾಸಿ ಮಹಿಳೆಯರಾಗಿ ಇರಬೇಕಾಗಿತ್ತು. ಈ ಕುರಿತು ಲೇಖಕಿ "ಚಿಕ್ಕ ವಯಸ್ಸಿಗೆ ಹೆಣ್ಣು ಮಕ್ಕಳನ್ನು ಕರೆತಂದು ಬಿಡುತ್ತಿದ್ದರಂತೆ. ಸಂನ್ಯಾಸಿಯ ದೀಕ್ಷೆ ಕೊಟ್ಟ ಹೆಣ್ಣು ಮಕ್ಕಳನ್ನು ಯಾರು ನೋಡುವಂತಿಲ್ಲ. ಮಾತನಾಡುವಂತಿಲ್ಲ. ಸಂಪೂರ್ಣ ತನ್ನ ಕೋಣೆಯಲ್ಲಿ ಏಕಾಂಗಿಯಾಗಿ ಬಂಧಿ. ಹೊರಗೆ ಹೆಜ್ಜೆ ಇಡುವಂತಿಲ್ಲ. ಜನರ ಸಂಪರ್ಕವಿಲ್ಲ. ಸದಾ ಪ್ರಾರ್ಥನೆಯಲ್ಲಿ ಸಮಯ ಕಳೆಯಬೇಕು. ಅವರ ಕುಟುಂಬ ವರ್ಗ, ಸ್ನೇಹ ವರ್ಗ ಬಂದಾಗಲೂ ಪರದೆಯ ಮರೆ."(ನೇಮಿಚಂದ್ರ, ೨೦೧೫, ಪುಟ-೮೧) ಎಂದಿದ್ದಾರೆ. ಇಲ್ಲಿನ ಸನ್ಯಾಸಿ ಹೆಣ್ಣುಮಕ್ಕಳ ಬದುಕು ಬಹಳ ಕಠಿಣವಾಗಿದ್ದು, ಸಂಪೂರ್ಣವಾಗಿ ಏಕಾಂತದ ಬದುಕು ಸನ್ಯಾಸಿಯರದ್ದಾಗಿತ್ತು. ಇಲ್ಲಿನ ಮಹಿಳೆಯರಿಗೆ ಹೊರಗಿನ ಪ್ರಪಂಚ ಸಂಪೂರ್ಣ ಮುಚ್ಚಿ ಹೋಗಿತ್ತು. ಹೊರಗೆ ಹೆಜ್ಜೆ ಇಡುವಂತಿರಲಿಲ್ಲ. ಕಾನ್ವೆಂಟಿಗೆ ಮೊಡೆಸಾ ಎಂಬ ಶ್ರೀಮಂತ ವಿಧವೆ, ತನ್ನ ಒಬ್ಬ ಮಗಳೊಂದಿಗೆ ಸೇರಿ, ತನ್ನೆಲ್ಲ ಆಸ್ತಿಯನ್ನು ಕಾನ್ವೆಂಟಿಗೆ ನೀಡಿ, ಅಲ್ಲೇ ವಾಸಿಸಿ ಸುಧಾರಣೆ ತಂದಳು. ಪೆರು ದೇಶದಲ್ಲಿನ ಮಹಿಳೆಯರಿಗೆ ಅಲ್ಲಿನ ಕಾನ್ವೆಂಟ್‌ಗಳೇ ಮಹಿಳಾ ಸನ್ಯಾಸಿಯರಿಗೆ ಅನೇಕ ನಿರ್ಬಂಧಗಳನ್ನು ಹೇರುವುದನ್ನು ನಿರೂಪಿಸುತ್ತಾರೆ. ಭಾರತದ ಈಶಾನ್ಯ ರಾಜ್ಯಗಳ ಗುಡ್ಡುಗಾಡಿನ ಹೆಣ್ಣು ಮಕ್ಕಳಂತೆ ಕಾಣುವ ದಕ್ಷಿಣ ಅಮೇರಿಕಾದ ಕಾಸ್ಕೋ ನಗರದಲ್ಲಿ ಗಿಡ್ಡಮಹಿಳೆಯರ ಬಣ್ಣ ಬಣ್ಣದ ದಪ್ಪ ಲಂಗ, ಓವರ್ ಕೋಟ್, ಎರಡು ಜಡೆ, ಹ್ಯಾಟು, ಮೈತುಂಬಾ ಮುಚ್ಚುವ ಬಟ್ಟೆ ಕವಚಿಕೊಂಡು ಲಾಮಾಗಳನ್ನು ಅವುಗಳ ಮರಿಗಳನ್ನು ಹಿಡಿದು ಪ್ರವಾಸಿಗರ ಜೊತೆ ಪೋಟೋ ತೆಗೆಸಿಕೊಳ್ಳುತ್ತಿದ್ದಾರೆ. ಈ ವಿದೇಶಿ ಮಹಿಳೆಯರ ಉಡುಪು, ದುಪ್ಪಟ್ಟ ವರ್ಣರಂಜಿತವಾಗಿದ್ದವು. ಈ ವಿದೇಶಿ ಹೆಣ್ಣುಮಕ್ಕಳ ಉಡುಪು ಭಾರತೀಯ ಹೆಣ್ಣುಮಕ್ಕಳಂತೆ ಕಂಡುಬರುತ್ತಿರುವುದನ್ನು ಗಮನಿಸಿದ ಲೇಖಕಿ ಆಪ್ತರ ಬಳಿ ವಿದೇಶಿಯರ ಬೇರೊಂದು ಸಂಸ್ಕೃತಿಯ ಬಗೆಗಿನ ಅಭಿಮಾನವನ್ನು ಮೆಚ್ಚಿಕೊಂಡರು.

ಚೀನಾದ ವಿಯಟ್ನಾಂನಲ್ಲಿ ರಾಜನ ಉಪಟಳಕ್ಕೆ ಹೆದರಿಹೋದ ಮಹಿಳೆ ರಾಜನ ಸಂಗ ತೊರೆದು ಪರಾರಿಯಾದಳು. ನಂತರ ನಿಷೇಧ ನಗರವನ್ನು ಜೀವಂತವಾಗಿ ದಾಟಿದ್ದಕ್ಕಾಗಿ ತಲೆದಂಡ ತೆರಬೇಕಾಯಿತು. ಮುಂದೆ ರಾಜನು ಅಧಿಕಾರ ಕಳೆದುಕೊಂಡನು. ಆ ತರುಣಿಯು

ಸಾಮಾನ್ಯನನ್ನು ಮದುವೆ ಮಾಡಿಕೊಂಡು ೨೨ ಮಕ್ಕಳನ್ನು ಹೆತ್ತು, ತಮ್ಮ ಆರು ತಿಂಗಳ ರಾಣಿವಾಸದ ಕಥೆಯನ್ನು ತನ್ನ ಮಕ್ಕಳು, ಮೊಮ್ಮಕ್ಕಳಿಗೆ ಹೇಳುವ ಕಥನವಿದೆ. ರಾಜನ ಸೇವಕರು, ಅಡುಗೆಯವರು ಸೇವೆ ಮಾಡಲು ಎಲ್ಲರೂ ಸ್ತ್ರೀಯರೇ ಇರುತ್ತಿದ್ದರು. ಈ ಸುಂದರವಾದ ಸ್ತ್ರೀಯರನ್ನು ಅಂತಃಪುರದಲ್ಲಿ ನೋಡಿಕೊಳ್ಳಲು ನಪುಂಸಕರನ್ನು ಆಯ್ದುಕೊಳ್ಳುತ್ತಿದ್ದರು. ಯಾರಿಗಾದರೂ ನಪುಂಸಕ ಮಕ್ಕಳು ಹುಟ್ಟಿದರೆ ಅವರಿಗೆ ಸನ್ಮಾನಿಸಿ ಸೇವೆಗೆ ಕೇಳುತ್ತಿದ್ದರಂತೆ. ರಾಜನು ಮಹಿಳೆಯರ ಮೇಲೆ ಕನ್ಯತ್ವದ ಪರಪುರುಷರು ರಾಣಿಯನ್ನು ನೋಡುವುದು ಅಪರಾಧದಂತೆ ಭಾವಿಸಿದ್ದ. ಈ ಅಂಶವು ಬಹುತೇಕ ದೇಶಗಳಲ್ಲಿ ವಾಡಿಕೆಯಿದೆ. ಮಹಿಳೆಯನ್ನು ನಾಲ್ಕು ಗೋಡೆಗೆ ಸೀಮಿತಗೊಳಿಸಿ ನೋಡುವ ಪರಿಪಾಠವು ಎಲ್ಲ ದೇಶಗಳಲ್ಲಿದೆ.

ಅಮೇರಿಕಾ ಶ್ರೀಮಂತಿಕೆಯ ದೇಶವಾದರೂ, ಅಲ್ಲೂ ಸಾಕಷ್ಟು ಹಿಂದುಳಿದ ಅಂಶಗಳಿವೆ. ಆ ದೇಶದ ರಕ್ಷಣಾ ವಿಚಾರ ಬಲಿಷ್ಠವಾಗಿದ್ದರೂ, ಒಂದಲ್ಲಾ ಒಂದು ಯುದ್ಧದಲ್ಲಿ ತೊಡಗಿಕೊಳ್ಳುತ್ತದೆ. ಯುದ್ಧದಲ್ಲಿ ಸಾವನ್ನಪ್ಪಿದ ಯೋಧರ ಪತ್ನಿಯರು ವಿಧವೆಯಾಗಿ ಪಡುವ ಪಾಡು, ಯಾತನೆ ಹೇಳತೀರದು. ಅಮೇರಿಕಾದ ಹಿರಿಯ ಸೈನ್ಯಾಧಿಕಾರಿಯಾದ ಪಿಟರ್‌ಸನ್‌ನು ವಿವಾಹಿತ ನವತರುಣನಾಗಿದ್ದಾಗ, ಅವನು ವಿಯೆಟ್ನಾಂ ಯುದ್ಧಕ್ಕೆ ತೆರಳುವಾಗ ಪತ್ನಿ ಗರ್ಭಿಣಿಯಾಗಿದ್ದಳು. ಪತಿಯ ನಿರ್ಗಮನದ ನಂತರ ಮಗುವಿಗೆ ಜನ್ಮವಿತ್ತಳು. ಮುಂದಿನ ಆರು ವರ್ಷ ವಿರಹವನ್ನು ಅನುಭವಿಸಿದಳು. ಪತಿಯ ಶವವಾಗಲಿ, ಜೀವಂತವಾಗಿರುವ ಯಾವುದೇ ಸುಳಿವಾಗಲಿ ತಿಳಿಯಲಿಲ್ಲ. ಸರಕಾರಕ್ಕೂ ತಿಳಿದುಬರಲಿಲ್ಲ. ಆಕೆ ಒಂದು ಭಾರಿ ಟಿ.ವಿ. ಹಾಕಿದಾಗ ಕ್ರಿಸ್‌ಮಸ್ ಹಬ್ಬದ ಸಡಗರ ನೋಡುವಾಗ ಪೀಟರ್‌ಸನ್ ಕಾಣಿಸಿಕೊಂಡನು. ಈ ಬಗ್ಗೆ ಮಹಿಳೆಯು ಸರ್ಕಾರಕ್ಕೆ ತಿಳಿಸಿದಳು. ಈ ನಡುವೆ ಆ ಮಹಿಳೆಯ ಒಂಟಿತನ, ಸರ್ಕಾರದ ಮಟ್ಟಿಗೆ ಗಂಡನನ್ನು ಬಿಡಿಸಲು ಪಟ್ಟ ಪಾಡು, ಅಸಹಾಯಕತೆ ಆಕೆಯನ್ನು ಇನ್ನಿಲ್ಲದಂತೆ ಕಾಡಿಸಿತ್ತು, ದೇಶ ಯಾವುದೇ ಇರಲಿ. ಸಂಸ್ಕೃತಿ, ವೇಷ, ಭಾಷೆ ಎಷ್ಟೇ ಭಿನ್ನತೆಯಿಂದ ಕೂಡಿರಲಿ ಮಹಿಳೆಯ ಅಂತಃಕರಣಗಳು ಮಾತ್ರ ಒಂದೇ ತೆರನಾದ ಮತ್ತು ಸಂಬಂಧಗಳನ್ನು ಬೆಸೆಯುವ ಕಡೆಗೆ ಆಲೋಚಿಸುತ್ತವೆ ಎಂಬುದಕ್ಕೆ ಅಮೇರಿಕಾದ ಈ ವಿದೇಶಿ ಮಹಿಳೆಯ ಕಥೆಯೇ ಸಾಕ್ಷಿಯಾಗಿ ನಿಲ್ಲುತ್ತದೆ.

'ಮಾಇ ಇಲಿಯಟ್' ಉನ್ನತ ವಿದ್ಯಾಭ್ಯಾಸಕ್ಕಾಗಿ ಅಮೇರಿಕಾಕ್ಕೆ ಹೋದವಳು. ಕಾಲೇಜಿನ ಸಹಪಾಠಿ ಜೊತೆ ಪ್ರೇಮ ವಿವಾಹವಾಗಿ ಅಲ್ಲಿಯೇ ನೆಲೆಸಿದಳು. ಪೌರತ್ವ ಪಡೆದಳು. ಮಾಇಯ ಹದಿನಾರು ಸಹೋದರಿಯರು ಅಮೇರಿಕಾ ಮತ್ತು ವಿಯೆಟ್ನಾಂ ಯುದ್ಧದಲ್ಲಿ ಆಕೆ ಕುಟುಂಬವು ಭಾಗವಹಿಸಿದ್ದರಿಂದಾಗಿ ವಿವಿಧ ಮನೋಭಾವವು ಮನೆಯಲ್ಲಿ ಬೆಳೆಯಿತು. ಆದ್ದರಿಂದ ಅಕ್ಕತಂಗಿ, ಅಣ್ಣ ತಮ್ಮ ಬೇರೆ ಬೇರೆ ಉದ್ಯೋಗ ಹರಸಿ ಹೋದಾಗ ಮನೆ ಅವನತಿಗೆ ಇಳಿಯಿತು. ಆ ದೇಶದ ಇತಿಹಾಸದೊಂದಿಗೆ ತಮ್ಮ ಮನೆತನದ ಕಥೆಯನ್ನು ಮಾಇ ಇಲಿಯಟ್‌ಳು ಪುಸ್ತಕ ವಾಗಿ ದಾಖಲಿಸುತ್ತಾಳೆ. ಆಕೆಯು ವಿದೇಶಿ ಮಹಿಳಾ ಸಂಸ್ಕೃತಿಗೆ ಉತ್ತಮ ನಿದರ್ಶನವಾಗಿ

ಕಾಣುತ್ತಾಳೆ. ಲೇಖಕಿಯು ವಿಯೆಟ್ನಾಂ ದೇಶವನ್ನು ಸುತ್ತವ ಸಂದರ್ಭದಲ್ಲಿ, ಅಲ್ಲಿನ ವಿದೇಶಿ ಮಹಿಳೆಯರ ವಾಸ್ತವ ಬದುಕಿನ ಚಿತ್ರಣವನ್ನು ದಾಖಲಿಸಿದ್ದಾರೆ. ವಿಯೆಟ್ನಾಂನಲ್ಲಿ ಭಾರತದಂತೆ ತೆಂಗು, ಅಡಿಕೆ, ಭತ್ತ, ಕಿತ್ತಳೆ, ವೀಳ್ಯದ ಎಲೆಗಳನ್ನು ಬೆಳೆಯುತ್ತಾರೆ. ಭಾರತದಂತೆ ಕೃಷಿಯಲ್ಲಿ ಮಹಿಳೆಯರು ದುಡಿಯುತ್ತಿದ್ದರು, ಕೃಷಿ ಕ್ಷೇತ್ರಕ್ಕೆ ಮಹಿಳೆಯ ಶ್ರಮ ಅಪಾರವಾಗಿರುವುದು ಕಂಡುಬರುತ್ತಿತ್ತು. ಅಲ್ಲದೇ ಹಳ್ಳಿಗಳಲ್ಲಿ ಹೆಂಗಸರು ಅಡಿಕೆ ಮೆಲ್ಲುವುದು ಸಾಮಾನ್ಯ ಚಿತ್ರಣವಾಗಿದ್ದು, ಭಾರತದ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಸಾಮಾನ್ಯವಾಗಿ ಕಾಣುತ್ತದೆ ಎಂದು ಲೇಖಕಿ ಅಭಿಪ್ರಾಯ ಪಡುತ್ತಾರೆ.

ದಲೈಲಾಮ ಆಶ್ರಮದ ಗುರು ತನ್ವಿರ್ ಪಾಲ್ ಮೋ ಭೇಟಿಗಾಗಿ ಬಂದ ವಿದೇಶಿ ಮಹಿಳೆಯೊಬ್ಬಳು ಬೌದ್ಧ ಸನ್ಯಾಸಿಯಾಗಿರುವ ಕುರಿತು ಉಮಾರಾವ್ ಅವರು ತಮ್ಮ 'ಇನ್ನು ಎಲ್ಲಿಗೋಟ' ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಹುಟ್ಟಿನಿಂದ ಬ್ರಿಟನ್ ಮಹಿಳೆಯಾಗಿದ್ದ ಈಕೆ ಬೌದ್ಧ ಧರ್ಮದ ತತ್ವ ಸಿದ್ಧಾಂತಗಳನ್ನು ಒಪ್ಪಿ ಬೌದ್ಧಧರ್ಮದವಳಾಗಿ ಭಾರತಕ್ಕೆ ಭೇಟಿಕೊಟ್ಟಳು. ೧೨ವರ್ಷಗಳ ಕಾಲ ಹಿಮಾಲಯದ ನಿರ್ಜನ ಪ್ರದೇಶದ ಹಿಮತುಂಬಿದ ಗುಹೆಯೊಂದರಲ್ಲಿ ಒಬ್ಬಳೇ ತಪಸ್ಸು ಮಾಡಿದಳು. ತಾಶಿ ಜೋಂಗ್ ಹತ್ತಿರವಿರುವ ಸನ್ಯಾಸಿಯರ ಆಶ್ರಮವನ್ನು ಕಟ್ಟಿದಳು. ಈಕೆಯ ಚಾರಿತ್ರಿಕವಾದ ಸಂಗತಿಗಳನ್ನು ಕುರಿತು ಉಮಾರಾವ್ ಅವರು "ಲಂಡನ್ನಿನಲ್ಲಿ ಹುಟ್ಟಿದ ಅವಳ ಪೂರ್ವಾಶ್ರಮದ ಹೆಸರು ಡಿಯೋನ ಪೆರ್ರಿ, ಅಪ್ಪ ಮೀನು ವ್ಯಾಪಾರಿ, ಮನೆಯಲ್ಲಿ ಧಾರ್ಮಿಕ, ಆಧ್ಯಾತ್ಮಿಕವಾದಂತಹ ಚರ್ಚೆಗಳಿಂದ. ಬೌದ್ಧಧರ್ಮದ ಪುಸ್ತಕಗಳನ್ನು ಓದಿದ್ದರಿಂದ ತನ್ನ ೨೦ನೇ ವಯಸ್ಸಿನಲ್ಲಿ ಭಾರತಕ್ಕೆ ಬಂದು ಧರ್ಮಗುರು ಖಮ್ತುಲ್ ರಿಂಪೋಚೆಯವರ ಶಿಷ್ಯಳಾಗಿ ಟಿಬಿಟನ್ ಬೌದ್ಧಧರ್ಮದ ಬಗ್ಗೆ ನಿರಂತರ ಅಭ್ಯಾಸ ಮಾಡಿದಳು. ೧೯೭೩ರಲ್ಲಿ ಅದರಲ್ಲಿ ಉನ್ನತ 'ಶ್ರಮನೇರಿಕಾ' ದೀಕ್ಷೆ ಪಡೆದ ಪ್ರಥಮ ಪಾಶ್ಚಾತ್ಯ ಮಹಿಳೆಯಾಗಿ ಮುಖ್ಯವಾಗುತ್ತಾಳೆ. ಈಕೆ ಪುರಾತನ ಬೌದ್ಧಧರ್ಮದ ಶೈಲಿ ಆಳವಾಗಿ ಅಧ್ಯಯನ ಮಾಡಿ, ವರ್ಷದಲ್ಲಿ ೬-೮ ತಿಂಗಳು ಹಿಮ ಕವಿದ ವಾತಾವರಣ, ಕಾಡು ಪ್ರಾಣಿಗಳ ಭಯ, ಅಪ್ಪಳಿಸುವ ಚಂಡಮಾರುತಗಳು, ಕಾಡುವ ಹಸಿವು, ನೀರಡಿಕೆ, ೩೫ ಡಿಗ್ರಿ ತಾಪಮಾನ ಎಲ್ಲವನ್ನು ಎದುರಿಸಿ ತಪಸ್ಸನ್ನು ಮುಂದುವರೆಸಿದ್ದಳು. ನೂರಾರು ವರ್ಷಗಳ ಕಾಲ ಆಚರಣೆಯಲ್ಲಿರುವ ದಿನ, ರಾತ್ರಿ ೩ಗಂಟೆಗಳ ಕಾಲ ಮರದ ಧ್ಯಾನದ ಪೊಟರೆಯಲ್ಲಿ ಕುಳಿತೇ ನಿದ್ರಿಸಬೇಕಾಗಿತ್ತು. ಆಕೆಯ ಗುರಿ ಎಷ್ಟು ನಿಚ್ಚಳವಾಗಿತ್ತು ಎಂದರೆ ಪೂರ್ಣಜ್ಞಾನ ಪಡೆಯಲು ನಿರಾಕರಿಸಿದ ಪುರುಷ ಆಧ್ಯಾತ್ಮದ ವಿರುದ್ಧ ತಾನು ಹೆಣ್ಣಿನ ದೇಹದಲ್ಲಿದ್ದುಕೊಂಡೇ 'ಜ್ಞಾನೋದಯ' ಪಡೆಯುವುದಾಗಿತ್ತು"(ಉಮಾರಾವ್, ೨೦೧೫, ಪುಟ-೭೦) ಎಂದು ವಿದೇಶಿ ಮಹಿಳೆಯು ಭಾರತದಲ್ಲಿ ಆಧ್ಯಾತ್ಮದ ಬಗ್ಗೆ ತೋರಿದ ಒಲವಿನ ಬಗ್ಗೆ ಅಭಿಪ್ರಾಯ ಪಡುತ್ತಾರೆ. ಆಧ್ಯಾತ್ಮದ ನಾಡಲ್ಲಿ ಬೆಳೆದವರಿಗಿಂತಲೂ ಮಿಗಿಲಾಗಿ, ಪುರುಷ ಆಧ್ಯಾತ್ಮವನ್ನು ಧಿಕ್ಕರಿಸಿ ಆಕೆ ಸಾಧಿಸುವ ಪರಿ ಆಶ್ಚರ್ಯದಾಯಕವಾಗಿದೆ.

'ಪಶ್ಚಿಮದತ್ತ ಪಯಣ' ಕೃತಿಯಲ್ಲಿ ಬರ್ಮಿಂಗ್ ಹ್ಯಾಮ್‌ನಲ್ಲಿ ನಾಟಕವನ್ನು ನೋಡಲು ಹೋದ ಲೇಖಕಿ ಪ್ರೇಮಾಭಟ್‌ರಿಗೆ ವೆನಿಸ್ ಮಹಿಳೆಯರು ಅತ್ಯಂತ ರೂಪಸಿಯರು ಎನಿಸುತ್ತದೆ. ಅಂಗಡಿ, ರೆಸ್ಟೋರೆಂಟ್‌ಗಳಲ್ಲಿ ಕಂಡುಬರುವ ಅಲ್ಲಿನ ಮಹಿಳೆಯು ಲಕಲಕನೆ ಹೊಳೆಯುವ ದೇಹ ಸೌಂದರ್ಯ. ತೆಳ್ಳಗೆ ಬೆಳ್ಳಗೆ ಬಳಕುವಂತಹ ದೇಹ ಸೌಂದರ್ಯ ಹೊಂದಿದ್ದಳು. ವೆನಿಸ್‌ನ ಮಹಿಳೆಯರ ಜೊತೆಗೆ ಇಟಲಿಯ ಮಹಿಳೆಯರನ್ನು ರೂಪಸಿಯರೆಂದೇ ಲೇಖಕಿ ಕರೆಯುತ್ತಾರೆ. ಬೆಣ್ಣೆಯಂತೆ ನುಣುಪಾದ ಚರ್ಮ ಹೊಂದಿದ್ದರು. ನೆಟ್ಟ ನೋಟ ಚಂಚಲಿಸುವ ಬೆಡಗಿಯರಾಗಿದ್ದರು ಎಂದು ಹೇಳುತ್ತಾರೆ. ಇಟಲಿ ಹುಡುಗಿಯರು ಅಂಗಾಂಗ ಪ್ರದರ್ಶಿಸಿದರೆ, ಪ್ಯಾರೀಸ್ ರೆಸ್ಟೋರೆಂಟ್‌ಗಳಲ್ಲಿ ಕೆಲ ಹುಡುಗಿಯರು ಬರೀ ಒಳ ಉಡುಪು ಧರಿಸಿ, ಟೀ, ಕಾಫಿ ಸರಬರಾಜು ಮಾಡುತ್ತಾರೆ. ಅಲ್ಲಿನ ಮಹಿಳೆಯರ ಈ ವರ್ತನೆ, ಉಡುಪು ಲೇಖಕಿಗೆ ಮುಜುಗರ ತರಿಸಿದ್ದು, ಲೇಖಕಿಯ ಜೊತೆ ಪ್ರವಾಸ ಹೋದ ಗಂಡಸರು ಆ ವಿದೇಶಿ ಹುಡುಗಿಯರನ್ನು ನೋಡಲಿಕ್ಕೆ ಹೋಗುವ ಕಾಯಿಲೆ ಕುರಿತು ವ್ಯಂಗ್ಯವಾಡುತ್ತಾರೆ. ವಿದೇಶಿ ಮಹಿಳೆಯರು ತಮಗೆ ಎದುರಾದ ಮಹಿಳೆಯರಿಗೆ ನಗು ಮುಖದಿಂದಲೇ 'ಹಾಯ್' ಎನ್ನುವ ಮೂಲಕ ಸ್ನೇಹದ ನಗುವನ್ನೇ ಬೀರುವವರಾಗಿದ್ದಾರೆ. ವೆನಿಸ್ ಮಹಿಳೆಯರ ಈ ಸಂಸ್ಕೃತಿ ಭಾರತೀಯರಲ್ಲೂ ಬರಲಿ ಎಂದುಕೊಳ್ಳುತ್ತಾರೆ. ಲೇಖಕಿ ಅಲ್ಲಿನ ಮಹಿಳೆಯರ ಮೆಚ್ಚುಗೆಯ ಗುಣ ಸಂಬಂಧಗಳನ್ನು ಬೆಸೆಯುವಲ್ಲಿ ನಿಜಕ್ಕೂ ಆಶಾದಾಯಕವಾದದ್ದು. ಧರ್ಮ, ರಾಜಕೀಯ ಭಿನ್ನತೆಗಳನ್ನೇ ಸಹಿಸದೆ, ಸಂಸ್ಕೃತಿಯನ್ನೇ ವಿಕೃತಿ ಮಾಡ ಹೊರಟವರಿಗೆ ಸಂವಿಧಾನದಲ್ಲಿರುವ ಸಹೋದರತ್ವ, ಭ್ರಾತೃತ್ವ ಪದಗಳ ಅರ್ಥವಾದರೂ ತಿಳಿದುಬರುತ್ತದೆ. ಇದರ ನಡುವೆ ವಿದೇಶಿ ಮಹಿಳೆಯ ಬೈಗುಳ ಪರ್ವಗಳನ್ನೇ ನೋಡಿದ ಪ್ರೇಮಾಭಟ್ ಅವರಿಗೆ ಆಕೆಯ ಬೈಗುಳಗಳನ್ನು ಕೇಳಿ ಎಸ್.ಎಲ್.ಭೈರಪ್ಪನವರ 'ಗೃಹಭಂಗ' ಕೃತಿ ನೆನಪಿಗೆ ಬರುತ್ತದೆ. ಈ ಕೃತಿಯಲ್ಲಿ ನಿರೂಪಿಸಿದ ಬೈಗುಳಗಳು ಅಸಹಜತೆಯಿಂದ ಕೂಡಿದೆ ಎಂದುಕೊಂಡಿದ್ದ ಲೇಖಕಿಗೆ, ವಿದೇಶಿ ನೆಲದ, ಭಾಷೆಗಳಲ್ಲಿ ವ್ಯಕ್ತವಾಗುವ ಸಹಜತೆಯೆಂದು ಅರಿವಾಗುತ್ತದೆ. ಪ್ರೇಮಾಭಟ್ ಅವರ ಈ ಅಭಿಪ್ರಾಯ ಗಮನಿಸಿದಾಗ, ವಾಸ್ತವ ಸಮಾಜವು ಭಾಷೆಯ ಬಗ್ಗೆ ಹೆಚ್ಚು ಅರಿಯದೇ ಇರುವ ಮತ್ತು ಪ್ರವಾಸ ಸಂದರ್ಭದಲ್ಲಿ ಸಾಹಿತ್ಯ ಕೃತಿಯಲ್ಲಿ ಬಳಕೆಯಾದ ಭಾಷೆ ಬಗ್ಗೆ ತಿಳಿದಿದ್ದು ಗಮನಿಸಿದಾಗ, ಪ್ರವಾಸ ಲೇಖಕಿಗೆ ಭಾಷೆಯ ಜೀವಂತಿಕೆಯ ಮಜಲುಗಳನ್ನು ತಿಳಿಸಿದೆ ಎನ್ನಬಹುದಾಗಿದೆ. ಜಗತ್ತಿನ ಯಾವುದೇ ಭಾಷೆಗಳಲ್ಲಿ ಮನುಷ್ಯನ ಆಂಗಿಕ ಚಟುವಟಿಕೆಗಳ ಜೊತೆಗೆ, ಕೋಪ ತಾಪಗಳ ಜೊತೆಗೆ ಬೈಗುಳದ ಮಾತುಗಳು ಸಹಜವಾಗಿ ಹುಟ್ಟಿಕೊಂಡಿರುತ್ತವೆ. ಅರಬ್ ಮಹಿಳೆಯರು ಶೃಂಗಾರ ಪ್ರಿಯರು. ವಿವಿಧ ಆಭರಣಗಳನ್ನು ಧರಿಸುವುದರಲ್ಲಿ ಅವರನ್ನು ಬಿಟ್ಟರೆ ಬೇರೆಲ್ಲೂ ಅಂತಹ ಶೃಂಗಾರ ಪ್ರಿಯ ಮಹಿಳೆಯರು ಸಿಗುವುದಿಲ್ಲ ಎನ್ನುತ್ತಾರೆ. ಮೂಗು ಮತ್ತು ಕಿವಿಯ ಉದ್ದಕ್ಕೂ ವಿಧವಿಧದ ಆಭರಣಗಳನ್ನು ಧರಿಸುತ್ತಾರೆ. ಕೊರಳ ತುಂಬ ಚೈನುಗಳು, ಕಾಲಿನ ಸರಪಳಿ, ಕೈ ತುಂಬಾ ಬಳೆಗಳು, ಭಾರತೀಯ ಮಹಿಳೆಯರಂತೆ ಬಂಗಾರದ ವ್ಯಾಮೋಹವುಳ್ಳ ಇವರು ಭಾರತೀಯರಂತೆ ಒಮ್ಮೆ ಕೊಂಡ

ಬಂಗಾರದ ಆಭರಣಗಳನ್ನು ಶಾಶ್ವತವಾಗಿಟ್ಟು ಕೊಳ್ಳುವವರಲ್ಲ. ಹಳೆಯ ಆಭರಣಗಳನ್ನು ಕೊಟ್ಟು ಹೊಸ ಹೊಸ ಆಭರಣಗಳನ್ನು ಕೊಳ್ಳುವವರಾಗಿದ್ದಾರೆ. ನಿತ್ಯವು ಬಂಗಾರದ ಅಂಗಡಿಗಳಲ್ಲಿ ಅಲಂಕಾರ ಪ್ರಿಯ ಮಹಿಳೆಯರ ಮೆರವಣಿಗೆಯೇ ಇರುವುದನ್ನು ಸಾಮಾನ್ಯ ಚಿತ್ರಣವಾಗಿ ನೋಡಬಹುದಾಗಿದೆ ಎನ್ನುತ್ತಾರೆ.

ಲತಾಗುತ್ತಿಯವರ 'ಯುರೋ ನಾಡಿನಲ್ಲಿ' ಎಂಬ ಕೃತಿಯಲ್ಲಿ ಅರೇಬಿಯನ್ ಕುಟುಂಬಗಳು ಪ್ರವಾಸಕ್ಕೆ ಬಂದ ಸಂದರ್ಭದಲ್ಲಿ ಅಲ್ಲಿನ ಮಹಿಳೆಯರು ಬುರ್ಕಾದಲ್ಲಿಯೇ ಇರುತ್ತಾರೆ. ಗಂಡಸರು ತಮ್ಮ ಹೆಂಡತಿಯೊಂದಿಗೆ ಬಿರುಸಾಗಿ ವರ್ತಿಸುತ್ತಾರೆಂಬಂತೆ ಕಂಡುಬಂದರೆ, ಅವರ 'ನಾ ಕಂಡಂತೆ ಅರೇಬಿಯಾ'ದಲ್ಲಿ ಲಿಂಡಾ ಬ್ರೌನ್ ಎನ್ನುವ ಮಹಿಳೆ ಅಲ್ಲಿನ 'ಲೇಡಿಸ್ ಕ್ಲಬ್'ನಲ್ಲಿ ತನ್ನ ಮಾತುಗಳಿಂದಲೇ ಆಕರ್ಷಿತಳಾಗಿದ್ದಳು. ಪ್ರತಿಯೊಬ್ಬರನ್ನು ಮಾತನಾಡಿಸುವುದು, ಸುದ್ಧಿಸಮಾಚಾರಗಳನ್ನು ಕೇಳುವುದು, ಹರಟುವುದು, ನಗಿಸುವುದು ಮಾಡುವ ಆಕೆ ಎದುರಿನವರನ್ನು ನೂರರಷ್ಟು ಕಳೆಗಟ್ಟಿಸುತ್ತಿದ್ದಳು. ಕ್ಲಬ್‌ನಲ್ಲಿ ಪರ ವಿರೋಧದ ಚರ್ಚೆಗಳು ನಡೆಯುತ್ತಿದ್ದವು. ಸಾಂಸ್ಕೃತಿಕವಾದ ರಂಗಗಳಲ್ಲಿ ಸಕ್ರಿಯರಾಗಿರುತ್ತಿದ್ದ ಬಗ್ಗೆ ಹೇಳುತ್ತಾರೆ. ಅಮೇರಿಕಾದಲ್ಲಿ ಹೆಣ್ಣು ಗೊಂಬೆಗಳನ್ನು ನೋಡಿದ ಲೇಖಕಿಗೆ ಅವು ಚಲಿಸಲಾರಂಭಿಸಿದಂತೆ ಕಾಣಿಸಿದಾಗ ಎಲೆಕ್ಟ್ರಾನಿಕ್ ಗೊಂಬೆಗಳೆಂದು ಭಾವಿಸಿದ್ದರು. ಕೈ ಬೀಸಿದಾಗ, ಹತ್ತಿರಕ್ಕೆ ಹೋಗಿ ನೋಡಿದಾಗ ಜೀವಂತ ತರುಣಿಯರು ಎಂದು ಲೇಖಕಿಗೆ ತಿಳಿಯಿತು. ಕೋಣೆಗೆ ಪುಷ್ಪಧಾನಿಯ ಹೂ ಜೋಡಣೆ ಅಂಧ ಹೆಚ್ಚಿಸುವಂತೆ ಅಲಂಕಾರ ಮಾಡಿಟ್ಟ 'ಚಿಯರ್ಸ್ ಲೀಡರ್ಸ್'ಗಳಂತೆ, ಜಲಾಂತರವೊಂದರಲ್ಲಿ ವೀಕ್ಷಕರ ಆಕರ್ಷಣೆಗಾಗಿ ಜಲಾಂತರ ಮಹಿಳೆಯರೇ, ಅಂದರೆ ಜಲಕನ್ಯೆಯಂತೆ ಉಡುಪು ಧರಿಸಿದ ತರುಣಿಯರು ನಾನಾ ರೀತಿ ಬೆಡಗು ಭಿನ್ನಾಣ ತೋರುತ್ತ, ಈಜುತ್ತಾ ಮನ ತಣಿಸುವ ಮಹಿಳೆಯರು ಅಮೇರಿಕಾದ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಕಂಡು ಬರುತ್ತಾರೆ. ಆರ್ಥಿಕ ಲಾಭಕ್ಕಾಗಿ ಮತ್ತು ಆಕರ್ಷಿಸುವ ಸಲುವಾಗಿ ವಿದೇಶಿ ಮಹಿಳೆಯರು ಬಳಕೆಯಾಗುತ್ತಿರುವ ರೀತಿಯನ್ನ ಕಂಡು ಲೇಖಕಿಗೆ ನಿಜಕ್ಕೂ ಸೋಜಿಗವೆನಿಸುತ್ತದೆ.

ಇಂಗ್ಲೆಂಡಿನ ಪ್ರವಾಸ ಮಾಡಿದ ಇಂದಿರಾ ಶಿವಣ್ಣ ಅವರು ಅಲ್ಲಿನ ಇತಿಹಾಸದಲ್ಲಿ ಅನೇಕ ರಾಜರು ಅಧಿಕಾರ ಮಾಡಿದ್ದಾರೆ. ಆದರೆ 'ಮೇರಿ' ರಾಣಿಯಾದ ನಂತರ ಪ್ರೊಟೇಸ್ಟೆಂಟ್ ಧರ್ಮವನ್ನು ವಿರೋಧಿಸಿ ಕ್ಯಾಥೋಲಿಕ್ ಧರ್ಮವನ್ನು ಬೆಂಬಲಿಸಿದರು. ಇಂಗ್ಲೆಂಡಿನ ರಾಣಿ ಎಲೆಜಬೆತ್ ಅಧಿಕಾರವಧಿಯನ್ನು ಕುರಿತು ಲೇಖಕಿ "ಪ್ರಾಟೆಂಸ್ಟೆಂಟ್ ಧರ್ಮದ ಮೂರು ಧರ್ಮಗುರುಗಳನ್ನು, ನೂರಾರು ಅನುಯಾಯಿಗಳನ್ನು ಕೊಲ್ಲಿಸಿ, ಇತಿಹಾಸ ಪುಟಗಳಲ್ಲಿ 'ಬ್ಲಡ್ ಮೇರಿ' ಎಂದೇ ಕುಖ್ಯಾತಿ ಗಳಿಸಿದ್ದಾಳೆ. ಇವಳ ನಂತರ ಇಂಗ್ಲೆಂಡ್‌ನ್ನ ಆಳಿದವರು ರಾಣಿ ಎಲಿಜಬೆತ್ ಶೂರಳೂ, ಧೀರಳೂ, ಪರಾಕ್ರಮಿ, ಜನಪರ ನೀತಿಗಳನ್ನು ಅಳವಡಿಸಿಕೊಂಡು ಖ್ಯಾತಿಯನ್ನು ಪಡೆದಳು. ಇವಳ ಕಾಲದಲ್ಲಿ ಇಂಗ್ಲೆಂಡ್ ಜಗತ್ತಿನೆಲ್ಲೆಡೆ ತನ್ನ ರಾಜಕೀಯ ವಸಾಹತುಗಳನ್ನು ಸ್ಥಾಪಿಸತೊಡಗಿದಳು. ಇವಳ ಕಾಲ ಇತಿಹಾಸದ ಪುಟಗಳಲ್ಲಿ ಪುನರುಜ್ಜೀವನದ

ಸುವರ್ಣ ಕಾಲ ಎನ್ನಲಾಗಿದೆ."(ಇಂದಿರಾ ಶಿವಣ್ಣ, ೨೦೧೨, ಪುಟ-೧೩) ಎಂದು ಪ್ರಸ್ತಾಪಿಸಿದ್ದಾರೆ. ೧೮ನೇ ಶತಮಾನದಲ್ಲಿ ಯುರೋಪಿನ ಪುನರುಜ್ಜೀವನ ಕಾಲ, ಕೈಗಾರಿಕ ನೀತಿ, ಯುರೋಪಿನ ಜನಜೀವನವನ್ನೇ ಬದಲಾಯಿಸುತ್ತಿದ್ದ ಕಾಲ. ಅತ್ಯಂತ ಜನಪ್ರಿಯತೆ ಪಡೆದ ವಿಕ್ಟೋರಿಯಾ ರಾಣಿಯ ಆಳ್ವಿಕೆಯ ಕಾಲದಲ್ಲಿ ಇಂಗ್ಲೆಂಡ್ ಸುವರ್ಣಯುಗವಾಗಿತ್ತು. ಮಾರ್ಗರೇಟ್ ಥ್ಯಾಚರ್ ಅಧಿಕಾರಕ್ಕೆ ಬಂದ ಕಾಲದಲ್ಲಿ ಇಂಗ್ಲೆಂಡ್ ಪ್ರಗತಿಯ ಪಥಕ್ಕೆ ಸಾಗಿತ್ತು. ಇಂಗ್ಲೆಂಡಿನ ಚರಿತ್ರೆಯಲ್ಲಿ 'ಬ್ಲಡ್ ಮೇರಿ' ಎಂದು ಕುಖ್ಯಾತಿ ಗಳಿಸಿದ ಮಹಿಳೆಯ ಅಧಿಕಾರ ಒಂದು ಕಡೆಯಾದರೆ. ತಮ್ಮ ಆಡಳಿತದ ವೈಖರಿಯಿಂದಲೇ ಜಗತ್ತನ್ನೇ ತನ್ನತ್ತ ದೃಷ್ಟಿ ಆಯಿಸಿಕೊಂಡು, ಅಭಿವೃದ್ಧಿಯ ಪಥವನ್ನು ಬದಲಿಸಿ ಗುರುತರವಾದ ಎಲಿಜಬೇತ್, ವಿಕ್ಟೋರಿಯಾ ರಾಣಿಯರು ಪುರುಷ ಆಡಳಿತಗಾರರಾಗಿ ಮಹಿಳೆಯಾಗಿ ಜನರ ವಿಶ್ವಾಸಗಳಿಸಿದ ವಿದೇಶಿ ಮಹಿಳೆಯರಾಗಿದ್ದಾರೆ.

ಪದ್ಮಾಗುರುರಾಜ್ ಅವರ 'ಕಾಂಗರೂಗಳ ನಾಡಿನಲ್ಲಿ' ಪ್ರವಾಸ ಕೃತಿಯೂ ಆಸ್ಟ್ರೇಯಾದಲ್ಲಿ 'ಈಸ್ಟರ್' ಪ್ರದರ್ಶನಕ್ಕೆ ಹೋದ ಸಂದರ್ಭದಲ್ಲಿ ಕಿಕ್ಕಿರಿದ ಜನರಲ್ಲಿ ಹುಡುಗರು, ಹುಡುಗಿಯರು, ದಂಪತಿಗಳು ತಂಡ ತಂಡವಾಗಿ ಮೋಜಿನ ವಿಹಾರ ನಡೆಸಿದ್ದರು. ಇನ್ನೂ ತಿಂಗಳು ತುಂಬಿಲ್ಲದ ಮಕ್ಕಳನ್ನು ಬುಟ್ಟಿಗಳಲ್ಲಿ ಮಲಗಿಸಿ ತಳ್ಳಿಕೊಂಡು ತಿರುಗಾಡುತ್ತಿದ್ದರು. ನಮ್ಮ ಅಜ್ಜಿಯರು ಇವರನ್ನು ಏನಾದರೂ ನೋಡಿದರೆ ಎದೆ ಬಡಿದುಕೊಂಡೇ ಬಿಡುವರೇನೋ ಎಂದುಕೊಂಡು ಅಲ್ಲಲ್ಲಿ ಯುವ ಪ್ರೇಮಿಗಳು ಬಹಿರಂಗ ಚುಂಬನ, ಆಲಿಂಗನಗಳಲ್ಲಿ ಮೈಮರೆತು ಚೇಷ್ಟೆ, ಪ್ರಣಯವನ್ನು ಮಾಡುತ್ತಿರುವುದು ಅಲ್ಲಿನವರಿಗೆ ಸಾಮಾನ್ಯ ಸಂಗತಿ. ಅದು ಮುಕ್ತ ಲೈಂಗಿಕ ಜೀವನದ ಸಮಾಜದ ಸರ್ವೆ ಸಾಮಾನ್ಯ ದೃಶ್ಯದಂತೆ ಲೇಖಕಿಗೆ ಕಂಡುಬಂದಿತ್ತು.

ಉಮಾರಾವ್ ಅವರ 'ರಾಕೀ ಪರ್ವತಗಳ ನಡುವೆ ಕ್ಯಾಬರೆ' ಕೃತಿಯು ಕೆನಡಾ ದೇಶ ಪ್ರವಾಸದ ಕೃತಿಯಾಗಿದೆ. ಅಲ್ಲಿನ ವ್ಯಾಂಕೋವರ್ ವಿಶ್ವವಿದ್ಯಾಲಯದಲ್ಲಿ ಓದಲು ಬಂದಿದ್ದ ಹುಡುಗಿ ಲೇಖಕಿಗೆ ಆಕರ್ಷಕವಾಗಿ ಕಂಡು 'ಅಲಸ್ಕಾದ ಹುಡುಗಿ' ಎಂತಲೇ ವಿದೇಶಿ ಮಹಿಳೆಯ ಕುರಿತಾದ ಒಂದು ಅಧ್ಯಾಯವನ್ನೇ ಲೇಖಕಿ ಬರೆದಿದ್ದಾರೆ. ಅಲಸ್ಕಾದ ಆ ಹುಡುಗಿಯ ಸ್ನೇಹಮಯ, ಭಾವಜೀವಿ, ತಂದೆ ತಾಯಿಗಳನ್ನು ನೆನಪಿಸಿಕೊಳ್ಳುವ ರೀತಿ, ಗೆಳೆಯನನ್ನು ಪರಿಚಯಿಸುವ ಆ ತುಂಟತನ ಲೇಖಕಿಗೆ ಆಪ್ತವಾಗುತ್ತವೆ. ವಿಶ್ವವಿದ್ಯಾಲಯದಲ್ಲಿ ಒಂಬತ್ತು ತಿಂಗಳು ಕಳೆದು ರಜೆಯ ಮೂರು ತಿಂಗಳಲ್ಲಿ 'ಫಿಶ್ ಪ್ಯಾಕಿಂಗ್' ಕೆಲಸವಾಗಿತ್ತು. ದಿನಕ್ಕೆ ೧೪ಗಂಟೆಗಳ ಕಾಲ ಬೆನ್ನು ಮುರಿಯುವ ಕೆಲಸ ಮಾಡುತ್ತಿದ್ದಳು. ಅದರಿಂದ ಒಂದು ವರ್ಷ ಪೂರ್ತಿ ಖರ್ಚಿಗೆ, ಪ್ರಯಾಣಕ್ಕೂ ಸರಿಹೋಗುವಷ್ಟು, ಆ ಮೂರು ತಿಂಗಳಲ್ಲಿ ಸಂಪಾದಿಸುತ್ತಿದ್ದಳು. ಸಾಂಸ್ಕೃತಿಕವಾದ ಚಟುವಟಿಕೆಯಲ್ಲಿ ಕ್ರಿಯಾಶೀಲವಾಗಿದ್ದ ಆಕೆ 'ರೈಟಿಂಗ್ ಫಾರ್ ಚಿಲ್ಡ್ರನ್'ನ ಕಾದಂಬರಿಯನ್ನು ಕುರಿತು ಉಪನ್ಯಾಸ ಮಾಡಿರುವುದನ್ನು ನೆನೆಯುತ್ತಾರೆ. ಆಕೆಯು ಲೇಖಕಿ ಉಮಾರಾವ್ ಅವರಿಗೆ ಮರೆಯಲಾರದ ವಿದೇಶಿ ಮಹಿಳೆಯಾಗಿ ಅವರ ಪ್ರವಾಸ ಕಥನದಲ್ಲಿ ಪ್ರತ್ಯೇಕವಾಗಿ ಗುರುತಿಸುವಷ್ಟು ಸ್ಥಾನವನ್ನು ಈ ಕೃತಿಯಲ್ಲಿ ಪಡೆದಿದ್ದಾಳೆ.

ಜಲಜಾ ಗಂಗೂರು ಅವರ 'ಅವನಿಯ ಅಪ್ಸರೆ ಅಮೇರಿಕಾ' ಕೃತಿಯಲ್ಲಿ ವಿದೇಶಿ ಮಹಿಳೆಯರ ಮನಸ್ಥಿತಿಗಳ ಮತ್ತೊಂದು ಆಯಾಮವನ್ನು ಅರಿಯಬಹುದಾಗಿದೆ. ಅಲ್ಲಿನ ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಹದಿನಾಲ್ಕು ವರ್ಷಕ್ಕೆ ಗರ್ಭಿಣಿಯಾಗಿ, ಹುಡುಗ ಹುಡುಗಿಯರು ಚಿಕ್ಕವರಿದ್ದಾಗಲೇ ಒಟ್ಟಿಗೆ ಓಡಾಡುವುದು, ಮಲಗುವುದು ಎಲ್ಲಾ ಮಾಡುವ ಅಲ್ಲಿನ ಸಂಸ್ಕೃತಿಯನ್ನು ಹುಡುಗಿಯ ತಾಯಿಂದಿರರು ಗೌರವಿಸುತ್ತಾರೆ. ಈ ಕುರಿತು ಲೇಖಕಿ "ವಯಸ್ಸಿಗೆ ಬರುವ ಮುಂಚೆಯೇ ಗರ್ಭಿಣಿಯಾದ ಮಗಳನ್ನು ಪಾರ್ಟಿಯಲ್ಲಿ ಪರಿಚಯಿಸುತ್ತಾ, ಬಾಯ್ ಫ್ರೆಂಡ್ ಎಂದು ಸುಮ್ಮನಿದ್ದೆ ಎನ್ನುತ್ತಾಳೆ. ದೂರದರ್ಶನದಲ್ಲಿ ಗರ್ಭಿಣಿಯಾದ ಬಗ್ಗೆ ಸಂದರ್ಶನ ಬೇರೆ ಮಾಡಿಸುತ್ತಾಳೆ. ಹೆತ್ತ ತಾಯಿಯೇ ಅನೈತಿಕ ಸಂಬಂಧಗಳಿಗೆ ಅವಕಾಶವೀಯುವಾಗ, ಆಸ್ಪದ ಕೊಡುವಾಗ ಮಕ್ಕಳು ಸ್ವೇಚ್ಛೆಯಿಂದ ವಯಸ್ಸಿಗೆ ಬರುವ ಮುಂಚೆಯೇ ಸಂಸಾರದ ಬಂಧನಗಳನ್ನು ಅನುಭವಿಸುವ ಅಲ್ಲಿನ ಹುಡುಗಿಯರ ಸ್ಥಿತಿಗತಿಗಳನ್ನು ನೆನದು, ನಗಬೇಕೊ? ಅಳಬೇಕೊ? ಮರಮರ ಮರಗಬೇಕೊ? ಅಯ್ಯೋ ಅನ್ನಬೇಕೊ? ಅಸಹ್ಯ ಪಡಬೇಕೊ? ನಾಚಿಕೆ ಪಡಬೇಕೊ? ನನಗಂತೂ ಒಂದು ತಿಳಿಯದಾಗಿದೆ."(ಜಲಜಾ ಗಂಗೂರು, ೨೦೦೧, ಪುಟ-೧೭೭) ಎನ್ನುತ್ತಾರೆ. ಲೇಖಕಿ ಅವರದು ಸಂಪ್ರದಾಯಸ್ಥ ಮನಸ್ಥಿತಿ. ಆದರೆ ಅಮೇರಿಕಾದ ಕಾನೂನು ಅದನ್ನು ಅಭಿವ್ಯಕ್ತಿ, ಸ್ವಾತಂತ್ರ್ಯ ಹಕ್ಕು ಎಂದು ಭಾವಿಸುತ್ತದೆ. ಹೀಗಾಗಿಯೇ ಅಮೇರಿಕದ ನೆಲದಲ್ಲಿ ಮಹಿಳೆಯರಿಗೆ ಸ್ವೇಚ್ಛೆ ಲಭಿಸಿದ್ದರಿಂದ, ಯಾವೊಬ್ಬ ಮಹಿಳೆಯು ಅಧೀನದಲ್ಲಿಲ್ಲದೆ ಬದುಕಿನ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳುತ್ತಾರೆ.

ಅಮೇರಿಕಾ ಮಹಿಳೆಯರ ಈ ಸ್ವೇಚ್ಛಾಚಾರದ ಬದುಕಿನ ಅಪಾಯಗಳನ್ನು ವ್ಯಕ್ತಪಡಿಸುವ ಲೇಖಕಿ ಪದ್ಮಾಶಣೈ. ಅವರ 'ಅಮೇರಿಕಾ: ವಾಸ ಪ್ರವಾಸ' ಕೃತಿಯಲ್ಲಿ ವಿದೇಶಿ ಮಹಿಳೆಯರು ಸಂಸಾರಿಕವಾಗಿ ಭದ್ರತೆ ಇಲ್ಲದ ಜೀವನ ಅನುಭವಿಸುವವರು ಇದ್ದಾರೆ ಎಂಬುದನ್ನು ನಿರೂಪಿಸಿದ್ದಾರೆ. ತಾಯಿ ಮಗಳಿಬ್ಬರು ಅಳುತ್ತಾ ಕೂರುವಾಗ, ಆಕೆಯ ಎರಡನೇ ಗಂಡ ವಿಚ್ಛೇದನ ಕೊಟ್ಟಿದ್ದಾನೆ. ನೌಕರಿ ಬಿಟ್ಟು, ಮಗಳ ಸೇವೆಗೆ ಟೊಂಕಕಟ್ಟಿ ನಿಂತ ತನ್ನ ಕರುಳ ಕುಡಿಯನ್ನು ಉಳಿಸಿಕೊಳ್ಳಲು ರಾತ್ರಿ ಹಗಲು ಹೆಣಗಾಡಿ ಸೋತ ಆಕೆ ಮಾನಸಿಕ ಒತ್ತಡಗಳಿಗೆ ಸಿಲುಕಿದ್ದಾರೆ. ಮುಕ್ತ ಲೈಂಗಿಕತೆ, ಸಂಬಂಧಗಳು, ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದ ದೇಶಗಳಲ್ಲೂ ಭಾರತದಲ್ಲಂತೆ ಮನುಷ್ಯ ಸಂಬಂಧಗಳಲ್ಲಿ, ಸಂಸಾರಿಕ ಸಂಬಂಧಗಳಲ್ಲಿ ಒಡಕು ಮೂಡಿರುವ ಇಂತಹ ಘಟನೆಗಳೂ, ಅಮೇರಿಕದಲ್ಲಿ ಸಾಕಷ್ಟು ನಡೆದಿವೆ. ಅಲ್ಲಿನ ಮಹಿಳೆಯರು ಎಷ್ಟು ಸ್ವತಂತ್ರವಾಗಿ ಜೀವಿಸುವವರಾಗಿದ್ದಾರೋ ಹಾಗೆ ಹದಿಹರೆಯದ ವಯಸ್ಸಿನಲ್ಲಿ ಮಕ್ಕಳನ್ನ ಪಡೆದು ಸ್ವಂತ ಕುಟುಂಬವಿಲ್ಲದೆ, ನಿರ್ಗತಿಕರಾಗಿ ಬದುಕುವ ವಿದೇಶಿ ಮಹಿಳೆಯರು ಸಾಕಷ್ಟು ಪ್ರಮಾಣದಲ್ಲಿದ್ದಾರೆ.

ತ್ರಿವೇಣಿ ಶಿವಕುಮಾರ್ ಅವರ 'ಭುವನದ ಬೆರಗು' ಕೃತಿಯಲ್ಲಿ ಹಲವು ದೇಶಗಳನ್ನು ಸುತ್ತಾಡಿದ ಅನುಭವಗಳಿವೆ. ಅದರಲ್ಲಿ ಒಂದಾದ ಮಾರಿಷಸ್‌ನಲ್ಲಿ ಬಹಳಷ್ಟು ಸ್ತ್ರೀಯರು ಭಾರತೀಯ ಮಹಿಳೆಯರಂತೆಯೇ ಕಾಣುತ್ತಾರೆ. "ಹಣೆಗೆ ಬಿಂದಿಯಿಟ್ಟು, ಕೊರಳಿಗೆ ತಾಳಿಸರವನ್ನು

ಹಾಕಿಕೊಂಡಿರುವುದನ್ನು ಕಂಡು ಲೇಖಕಿ ಭಾರತೀಯರಾ? ಎಂದು ಕೇಳಿದಾಗ, ಇಲ್ಲ ನಾನು ಮೇರಿ ಕ್ರಿಶ್ಚಿಯನ್ ಎನ್ನುತ್ತಿದ್ದರು. ಬ್ರಿಟಿಷರ ಆಳ್ವಿಕೆಯಲ್ಲಿ ಸಾವಿರಾರು ಭಾರತೀಯರು ಕೂಲಿಯಾಳುಗಳಾಗಿ ಮಲೇಷಿಯಾ, ಸಿಂಗಾಪುರ್, ಬ್ಯಾಂಕ್ಯಾಂಗ್, ಇಂಡೋನೆಷಿಯ, ಮಾರಿಷಸ್‌ಗಳಿಗೆ ಹೋದರು. ಕೆಲವರು ಭಾರತೀಯರೆಂದು ಒಪ್ಪಿಕೊಂಡರು"(ತ್ರಿವೇಣಿ ಶಿವಕುಮಾರ್,೨೦೧೨, ಪುಟ-೧೭೭) ವಿದೇಶಗಳಿಗೆ ವಿದ್ಯಾಭ್ಯಾಸಕ್ಕಾಗಿ, ಉದ್ಯೋಗಕ್ಕಾಗಿ ಹೋದ ಭಾರತೀಯರನ್ನು ಕಂಡಿದ್ದ ಲೇಖಕಿಗೆ, ಚರಿತ್ರೆಯಲ್ಲಾದ ಅವಘಡಗಳಿಂದಾಗಿ ತಮ್ಮ ಪರಂಪರೆಯನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದಾರೆ. ವಿದೇಶಿ ಮಹಿಳೆಯರ ವೇಷದಲ್ಲಿದ್ದ ಅವರನ್ನು ಭಾರತೀಯತೆಯ ಸಂಕೇತವಾಗಿ ಕಾಣುವ ತಾಳಿ ಮತ್ತು ಕುಂಕುಮದ ಬಿಂದಿಯು ಇವರನ್ನ ಕುರಿತು ಪರಿಚಯಿಸುವಂತಾಯಿತು.

ವಸಂತಿ ವೆಂಕಟರಂಗನ್ ಅವರ 'ನಾ ಕಂಡ ಮಹಿಳೆ' ಪೂರ್ವ ಆಫ್ರಿಕನ್ ಪ್ರವಾಸದ ಕೃತಿಯಾಗಿದೆ. ವಿದೇಶಿ ಮಹಿಳೆಯರು ಆಫ್ರಿಕನ್ನರಲ್ಲಿ ಕೆಲವು ಹೆಂಗಸರು ಮಂತ್ರವಾದಿಗಳಾಗಿರುವುದು ಉಂಟು. ಇವರು ಮಂತ್ರ ತಂತ್ರಗಳನ್ನಲ್ಲದೇ ನಾರು ಬೇರುಗಳ ಔಷಧವನ್ನು ಮಾಡುವ ವೈದ್ಯರೂ ಆಗಿದ್ದಾರೆ. ಗಂಡಸರು ಮಂತ್ರವಾದಿಯೊಬ್ಬನಿಗೆ ಸಲ್ಲುವ ಮರ್ಯಾದೆಯೇ ಮಂತ್ರವಾದಿ ಹೆಂಗಸಿಗೂ ಸಲ್ಲುತ್ತದಂತೆ. ಭಾರತದಲ್ಲಿ ಮಾತ್ರವಲ್ಲದೇ ವಿದೇಶಗಳಲ್ಲೂ ಮಹಿಳೆಯರು ಮಂತ್ರ, ತಂತ್ರ, ವೈದ್ಯ ಇವೆಲ್ಲಾ ಆಲೋಚನಾ ಕ್ರಮಗಳು ಇದೆಯೆನ್ನುತ್ತಾರೆ. ಮೀನಾ ಮೈಸೂರು ಅವರ 'ಎತ್ತಣಿಂದೆತ್ತ'ದಲ್ಲಿ ಲೇಖಕಿ ಭೇಟಿ ನೀಡಿದ ಪಾರ್ಟಿ ಒಂದರಲ್ಲಿ ವಿದೇಶಿ ಮಹಿಳೆಯಾದ ಮ್ಯಾರಿಜೋಳು ಆಕರ್ಷಕವಾದ ಸೌಂದರ್ಯ ಹೊಂದಿದ್ದಳು. ಅಲ್ಲಿನ ವಿದೇಶಿ ಮಹಿಳೆಯನ್ನು ಕುರಿತು ಲೇಖಕಿ "ತಾನು ಸುಂದರಿ ಎಂಬ ಸಣ್ಣ ಎಳೆ ಆಕೆಯ ಮುಖದಲ್ಲಿತ್ತು. ಮೇಲ್ನೋಟಕ್ಕೆ ನಗುತ್ತಿದ್ದರು. ವೃಥಾ ಆಗಾಗ್ಗೆ ಗಂಡನನ್ನು ತಬ್ಬಿಕೊಳ್ಳುವುದು, ದೀರ್ಘ ಚುಂಬನ ಇತ್ಯಾದಿ. ನಮ್ಮೆದುರೆ ತಮ್ಮ ಪ್ರೀತಿಯನ್ನು ಪ್ರದರ್ಶಿಸುತ್ತಿದ್ದರು. ಆಕೆ ಉದ್ದದ ಬಳಕುವ ಸಿಗರೇಟು ಸೇದುತ್ತಾ, ಬಹಳ ರಮ್ಯವಾಗಿ ರಸಿಕತೆಯನ್ನು ಹರಿಸುತ್ತಿದ್ದದ್ದು ಕಂಡು ಇದೇನು ನೈಜ ಪ್ರೀತಿಯೋ ಇಲ್ಲಾ ತೋರಿಕೆಯೋ ಅರ್ಥವಾಗುತ್ತಿರಲಿಲ್ಲ." (ಮೀನಾ ಮೈಸೂರು, ೨೦೦೩, ಪುಟ-೧೧೮) ಎಂದಿದ್ದಾರೆ. ಈ ವಿದೇಶಿ ಜೋಡಿಗಳು ಅಕ್ಕಪಕ್ಕದವರ ಅರಿವೆಯಿಲ್ಲದಂತೆ, ಪ್ರೀತಿಯನ್ನು ಪ್ರದರ್ಶನಕ್ಕಿಟ್ಟವರಂತೆ ವರ್ತಿಸುವುದನ್ನು ಕಂಡು ಲೇಖಕಿ ಇರಿಸುಮುರಿಸಾದರು.

೫.೫. ಭಾರತೀಯ ಮತ್ತು ವಿದೇಶಿ ಮಹಿಳಾ ಸಂಸ್ಕೃತಿ ಪರಸ್ಪರ ಮುಖಾಮುಖಿಯ ನೆಲೆಗಳು

ಕನ್ನಡ ಪ್ರವಾಸ ಕಥನಗಳಲ್ಲಿ ಮುಖ್ಯವಾದ ಅಂಶಗಳಲ್ಲಿ ಭಾರತೀಯ ಮತ್ತು ವಿದೇಶಿ ಸಂಸ್ಕೃತಿಗಳನ್ನು ತೌಲನಿಕವಾಗಿ ಗಮನಿಸಿರುವುದು. ಇದರಲ್ಲಿ ಮಹಿಳಾ ಪ್ರವಾಸಿಗರು ಹಿಂದೆ ಬಿದ್ದಿಲ್ಲ. ಸ್ವದೇಶಿ-ವಿದೇಶಿ ಮಹಿಳೆಯರ ಜೀವನ ವಿಧಾನವನ್ನು, ಸಂಸ್ಕೃತಿಯನ್ನು ಪರಸ್ಪರ

ಮುಖಾಮುಖಿಗೊಳಿಸುವ ನಿರೂಪಣೆಗಳೇ ಹೆಚ್ಚಾಗಿ ಪ್ರಸ್ತಾಪಿಸಿದ್ದಾರೆ. ಇಂತಹ ಅಂಶಗಳಿಂದಾಗಿ ಮಹಿಳಾ ಸಂವೇದನೆಗಳನ್ನು ಅರಿಯುವಲ್ಲಿ ಸಹಾಯಕವಾಗಿವೆ. ಭಾರತೀಯ ಮತ್ತು ಮಹಿಳಾ ಸಂಸ್ಕೃತಿಗಳನ್ನು ಪರಸ್ಪರ ಮುಖಾಮುಖಿಗೊಳಿಸುವ ಪ್ರಮುಖ ಕೃತಿಯಾಗಿ ಅನುಪಮಾ ನಿರಂಜನ ಅವರ 'ಸ್ನೇಹಯಾತ್ರೆ' ಪ್ರವಾಸ ಕಥನವು ಮುಖ್ಯವಾಗುತ್ತದೆ. ಬರ್ಲಿನ್‌ನಲ್ಲಿ ಅಂತರರಾಷ್ಟ್ರೀಯ ಮಹಿಳಾ ಕಾಂಗ್ರೆಸ್‌ನಲ್ಲಿ ಭಾಗವಹಿಸಲು ಲೇಖಕಿಯನ್ನು ಒಳಗೊಂಡಂತೆ ಭಾರತದ ವಿವಿಧ ಪ್ರದೇಶಗಳಿಂದ ಆರವತ್ತು ಮಹಿಳೆಯರು ಬಂದಿದ್ದರು. ಈ ಸಮಾರಂಭವು ವಿವಿಧ ವೃತ್ತಿ, ಭಾಷೆ, ಕಲೆ ಮುಂತಾದ ಬಹುತ್ವದ ಸಂಸ್ಕೃತಿಯನ್ನು ಸಾರುವ ಭಾವೈಕ್ಯತೆಯ ಸಂಕೇತದಂತೆ ಕಂಡುಬರುತ್ತವೆ. ಈ ಸಮಾವೇಶವು ಬರ್ಲಿನ್ ಮಹಿಳೆಯರು ಭಾರತದ ಸಂಸ್ಕೃತಿಯನ್ನು ತಮ್ಮ ಸಂಸ್ಕೃತಿಯೊಂದಿಗೆ ಮುಖಾಮುಖಿಗೊಳಿಸಿ ತಿಳಿಯಲು ಸಹಾಯಕವಾಯಿತು. ಅಲ್ಲದೇ ಇವರ ಸೀರೆ ಉಡುಪನ್ನು ಕಂಡ ಅಲ್ಲಿನ ಮಹಿಳೆಯರು 'ನೀವು ಇಂಡಿಯಾ ದೇಶದವರಲ್ಲವೇ' ಎನ್ನುವ ಸಹಜ ಪ್ರಶ್ನೆಗಳು, ಭಾರತದ ಸಂಸ್ಕೃತಿಗೆ ದೊರೆತ ಉಡುಪಿನ ಅಸ್ಮಿತೆಯು ಗೌರವವನ್ನು ತಂದುಕೊಡುತ್ತಿತ್ತು. ಲೇಖಕಿಗೂ ಈ ಕುರಿತು ಹೆಮ್ಮೆ ಅನಿಸುತ್ತಿತ್ತು. ಈ ಕುರಿತು ಪಾಕಿಸ್ತಾನದ ನಾಸಿಮಾಳು ಪ್ರಸ್ತಾಪಿಸಿದನ್ನು ಲೇಖಕಿ ನಿರೂಪಿಸುವುದು ಹೀಗೆ. "ನಮ್ಮ ದೇಶದ ಹೆಂಗಸರು ತುಂಬಾ ಮುಂದುವರಿದಿದ್ದಾರೆ ಅಂತ ಪ್ರಚಾರ ಮಾಡ್ತಾರೆ. ಆದ್ರೆ ಅಜ್ಞಾನ, ಅನಕ್ಷರತೆ, ದಾರಿದ್ರ್ಯ ನಮ್ಮನ್ನು ಹರಿದು ತಿನ್ತಿವೆ, ನಮ್ಮ ಎಷ್ಟೋ ಜನ ಮಹಿಳೆಯರು ಇನ್ನೂ ಬುರಖಾ ಹಾಕಿಕೊಳ್ತಾರೆ. ಇದೆಲ್ಲಾ ನಿವಾರಣೆಯಾಗೋದು ಯಾವಾಗ?"(ಅನುಪಮಾ ನಿರಂಜನ, ೧೯೭೭, ಪುಟ-೨೦) ಪಾಕಿಸ್ತಾನ ಭಾರತದ ಪಕ್ಕದ ರಾಷ್ಟ್ರವಾದರೂ, ಅಲ್ಲಿನ ಕೆಲವು ಸಮಸ್ಯೆಗಳು ಭಾರತದಲ್ಲೂ ಇರುವುದನ್ನು ಲೇಖಕಿ ಚರ್ಚಿಸುತ್ತಾರೆ. ಹಿಂದುಳಿದ ರಾಷ್ಟ್ರ ಹಾಗೂ ಬೆಳೆಯುತ್ತಿರುವ ರಾಷ್ಟ್ರಗಳಲ್ಲಿ ಇಂತಹ ಸಮಸ್ಯೆಗಳು ಸಾರ್ವತ್ರಿಕವಾಗಿವೆ. ಸಮಾನತೆ ಎಲ್ಲ ಕ್ಷೇತ್ರಗಳಲ್ಲೂ ಒದಗಿದಾಗ ಮಾತ್ರ ಈ ಸಮಸ್ಯೆಗಳೆಲ್ಲವೂ ಬಗೆ ಹರಿಯುವ ಸಾಧ್ಯತೆಯು ಅನುಪಮಾರ ನಿರೂಪಣೆಯಲ್ಲಿ ಎದ್ದು ಕಾಣುವಂತಹ ಅಂಶಗಳಾಗಿದೆ.

ಈಜಿಪ್ಟ್‌ನ ಪ್ರವಾಸ ಕಥನದಲ್ಲಿ ಲೇಖಕಿಯೊಡನೆ ವಿದೇಶಿ ಮಹಿಳೆ ನಡೆಸಿದ ಪ್ರಸ್ತಾಪವನ್ನು ಎಚ್.ಎಸ್.ಅನುಪಮಾ ಅವರು 'ನೈಲ್ ದಾರಿಗುಂಟ' ಎಂಬ ಕೃತಿಯಲ್ಲಿ ವಿವರಿಸಿದ್ದಾರೆ. ಭಾರತದವರೆಂದು ತಿಳಿದ ಗೈಡ್ ಸಾರಾಳ ಪ್ರಸ್ತಾಪವನ್ನು ಕುರಿತು ಲೇಖಕಿ ಹೀಗೆ ನಿರೂಪಿಸುತ್ತಾರೆ. "ನೀವೊಬ್ಬ ಮಹಿಳಾ ಪ್ರಧಾನಿ ಹೊಂದಿದ್ದಿರಿ, ಈಗ ಮಹಿಳಾ ರಾಷ್ಟ್ರಪತಿ ಹೊಂದಿರುವಿರಿ ಅಲ್ಲವೆ? ಎಂದು ಕಣ್ಣರಳಿಸಿ ಕೇಳಿದಳು. ಈಜಿಪ್ಟ್‌ನಲ್ಲಿ ಬಹುಶಃ ನನ್ನ ಜೀವಿತಾವಧಿಯಲ್ಲಿ ಮಹಿಳಾ ರಾಷ್ಟ್ರಪತಿ ಬರಲಾರಳು. ಮಹಿಳೆಯಷ್ಟೇ ಅಲ್ಲ ಮ್ಯಾಡಂ, ಹೊಸ್ನಿ ಮುಬಾರಕ್ ಇರುವವರೆಗೂ ಮತ್ತೊಬ್ಬ ಗಂಡಸು ಕೂಡ ಬರಲಾರ. ಅವೆಲ್ಲ ನಿಮ್ಮ ದೇಶದಲ್ಲಿ ಮಾತ್ರ ಸಾಧ್ಯ ಎಂದು ತಣ್ಣಗಿನ ದನಿಯಲ್ಲಿ ಹೇಳಿದ್ದಳು"(ಅನುಪಮಾ.ಎಚ್.ಎಸ್, ೨೦೧೬, ಪುಟ-೧೪೦) ಸಾರಾಳ ಈ ದನಿಯಲ್ಲಿ ಪ್ರಜಾಪ್ರಭುತ್ವದ ನಿಜದ ಅರ್ಥವನ್ನು ಹುಡುಕತೊಡಗಿದಂತಿದೆ.

ಈಜಿಪ್ಟ್ ನೆಪ ಮಾತ್ರಕ್ಕೆ ಪ್ರಜಾಪ್ರಭುತ್ವದಂತೆ ವರ್ತಿಸಿ ಸರ್ವಾಧಿಕಾರಿ ಧೋರಣೆ ಬಗ್ಗೆ ಹೇಳುತ್ತಿದೆ. ಭಾರತದಂತಹ ದೇಶದಲ್ಲಿ ಮಹಿಳೆಯರಿಗೆ ನೀಡುವ ಸ್ಥಾನಮಾನಗಳ ಕುರಿತು ಅಲ್ಲಿನ ಮಹಿಳೆಯರಿಗೆ ಗೌರವದ ಭಾವನೆಯಿದೆ. ಸಾರಾಳ ಈ ಮಾತುಗಳು ಅಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ ವಿದ್ಯಾಮಾನಗಳ ಬಗ್ಗೆ ಭಾರತ ಬಹುತ್ವದ ಹೆಸರಿನಲ್ಲಿ ಸರ್ವ ಪ್ರಜೆಗಳಿಗೂ ಕೊಡುವ ಮುಕ್ತ ಅವಕಾಶಕ್ಕೂ, ಈಜಿಪ್ಟ್ ದೇಶದ ಸರ್ವಾಧಿಕಾರ ಧೋರಣೆಯ ಆಡಳಿತಕ್ಕೂ, ಎರಡರ ನಡುವಿನ ಪ್ರಜಾಪ್ರಭುತ್ವದ ಮುಖಾಮುಖಿ ನೆಲೆಗಳಲ್ಲಿ ಇರುವ ವ್ಯಾತ್ಯಾಸವನ್ನು ತೋರಿಸುತ್ತದೆ. ಅಲ್ಲದೇ ಇದನ್ನು ಈಜಿಪ್ಟ್ ಚರಿತ್ರೆಯುದ್ದಕ್ಕೂ ಪಾಲಿಸಿಕೊಂಡು ಬಂದಿದ್ದು, ಶ್ರೀಮಂತ ಸಂಸ್ಕೃತಿಯೊಂದು ಫೆರೋನಿಂದ ಇಂದಿನ ಹೊಸ್ನಿ ಮುಬಾರಕ್‌ವರೆಗೂ ಏಕರೂಪ ಆಡಳಿತದಿಂದಾಗಿ ನಾಶವಾಯಿತೆ ಎಂದು ಪ್ರಶ್ನೆಯನ್ನು ಹಾಕಿಕೊಳ್ಳುತ್ತಾರೆ. ತಕ್ಷಣಕ್ಕೆ ಲೇಖಕಿಗೆ ನೆನಪಾದದ್ದು ಭಾರತದ ಸಂಸ್ಕೃತಿ. ಇಲ್ಲಿನ ನೆಲ, ನಾಡು, ನುಡಿ, ಸಂಸ್ಕೃತಿ, ಎಲ್ಲವೂ ಭಿನ್ನವಾಗಿ ಆಚರಿಸುವ ಮತ್ತು ಬಹುತ್ವವನ್ನು ಗೌರವಿಸುವ ಪ್ರಜಾಪ್ರಭುತ್ವದ ಆಡಳಿತದಿಂದಾಗಿ ಭಾರತ ಸುಭದ್ರವಾಗಿದೆ ಎಂದು ಎರಡು ದೇಶಗಳು ಅಪ್ಪಿಕೊಂಡಿರುವ ನೀತಿಯನ್ನು ಅನುಪಮಾ ಅವರು ಮುಖಾಮುಖಿಗೊಳಿಸುತ್ತಾರೆ.

ವಿದೇಶಿ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಪ್ರವಾಸಗಾರರಿಗೆ ಎದುರಾಗುವ ಪ್ರಶ್ನೆಗಳೆಂದರೆ, ಭಾರತಕ್ಕಿಂತಲೂ ಪರದೇಶಗಳು ಹಲವಾರು ವಿಷಯಗಳಲ್ಲಿ ಮುಂದಿರುವರೆದಿರುವುದು. ಸ್ವಚ್ಛತೆಯ ಬಗ್ಗೆ ಅರಿವು, ಸುವ್ಯವಸ್ಥಿತವಾದ ನಗರಗಳ ಪರಿಚಯ. ವಿದೇಶಿಗನೊಬ್ಬ ತಿಂಡಿ ತಿಂದ ನಂತರ ಪೇಪರ್‌ನ್ನು ದುಂಡಾಗಿ ಮಡಚಿ ಡಸ್ಟ್ ಬಿನ್‌ಗೆ ಎಸೆಯುತ್ತಾನೆ. ಇದನ್ನು ಗಮನಿಸುವಾಗಲೇ ಭಾರತೀಯ ಮಹಿಳೆ, ಬಾಯಿ ತುಂಬಾ ಕಫಾವನ್ನು ಉಗುಳಿದಾಗ ಅಲ್ಲಿನ ವಿದೇಶಿ ಮಹಿಳೆ ತೀಕ್ಷ್ಣ ನೋಟದಿಂದಲೇ ಡಸ್ಟ್ ಬಿನ್ ಇರುವ ಕಡೆ ಕೈ ತೋರಿಸುತ್ತಾಳೆ. ಇದನ್ನು ಕಂಡ ನಮಗೆಲ್ಲ ತಲೆತಗ್ಗಿಸುವಂತಾಯಿತು ಎಂದು ಹೇಳುತ್ತಾರೆ. ಈ ಘಟನೆಯು ಸ್ವಚ್ಛತೆ ಬಗ್ಗೆ ಇರುವ ಎರಡು ದೇಶಗಳ ವ್ಯತ್ಯಾಸವನ್ನು ತಿಳಿಸುತ್ತದೆ. ಅಲೆಗ್ಸಾಂಡ್ರಾ ಎಂಬಾಕೆಯು ಸೋಷಿಯಲಿಸ್ಟ್ ಪಾರ್ಟಿಯ ಮುಖ್ಯಸ್ಥೆಯಾಗಿದ್ದು, ಮದುವೆ, ಮಕ್ಕಳು, ಕುಟುಂಬ, ಸ್ವಬದುಕು ಬಗ್ಗೆ ಮಾತಾನಾಡುವ ಲೇಖಕಿಯು, 'ವೃದ್ಧರು ಒಂಟಿಯಾಗಿ ಓಲ್ಡ್ ಮೆನ್ ಹೋಮ್‌ನಲ್ಲಿರಲು ಬೇಸರ ಪಡೊಲ್ವೆ' ಎಂದಾಗ ಅಲೆಗ್ಸಾಂಡ್ರಾ ಹಣೆ ನಿರಿಗೆಗಟ್ಟುತ್ತೆ. ಭಾರತದ ಕೌಟುಂಬಿಕ ವ್ಯವಸ್ಥೆಯಲ್ಲಿ ವೃದ್ಧಾಪ್ಯಕ್ಕೆ ಇರುವ ಮಾನ್ಯತೆ ಜರ್ಮನ್ ಜನರಲ್ಲಿ ಲೇಖಕಿಗೆ ಕಾಣಲಿಲ್ಲ. ಎಷ್ಟೇ ದುಡಿಯಲು ಹವಣಿಸಿದರು ತಂದೆ ತಾಯಿಯನ್ನು ನೋಡಲಾಗದ ಸ್ಥಿತಿಯಲ್ಲಿ ಜರ್ಮನ್‌ನವರಿದ್ದಾರೆ. ಭಾರತದ ಮಟ್ಟಿಗೆ 'ಸಂಬಂಧ ಅನ್ನೊದು ದೊಡ್ಡದು ಕಣಾ' ಎನ್ನುವ ದೊಡ್ಡ ಮಾತು, ಜರ್ಮನ್‌ನಲ್ಲಿನ ಮನುಷ್ಯ ಸಂಬಂಧಗಳು ಚಿಕ್ಕದಾಗಿ ಕಾಣುತ್ತವೆ. ಈ ಬಂಧುತ್ವದ ಭಾರತೀಯ ಸಂಸ್ಕೃತಿಯನ್ನು ಲೇಖಕಿ ಒಂದೇ ಪ್ರಶ್ನೆಯಲ್ಲಿ ಎದ್ದುಕಾಣುವಂತೆ ಮಾಡುತ್ತಾರೆ.

ವಿದೇಶಿ ಮಹಿಳೆಯ ಜೊತೆಗೆ ಸಂವಾದಕ್ಕೆ ಬಿದ್ದಂತೆ ತೋರುವ, ಭಾರತೀಯ ಮತ್ತು

ಪೆರು ದೇಶದ ಸಾಂಸ್ಕೃತಿಕ ಮುಖಾಮುಖಿಯಾಗಿಸುವ ಅಂಶಗಳ ಕುರಿತು ಲೇಖಕಿ ನೇಮಿಚಂದ್ರ ಅವರು 'ಪೆರುವಿನ ಪವಿತ್ರ ಕಣಿವೆಯಲ್ಲಿ' ಎಂಬ ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ನರ್ಸ್ ಕೆಲಸ ಮಾಡುವ ಮಹಿಳೆಯೊಬ್ಬಳಿಗೆ ಭಾರತೀಯ ಮಹಿಳೆಯರು ಗಂಡನನ್ನು ಬಿಟ್ಟು ದೇಶ ಸುತ್ತಲು ಬಂದದ್ದು ಆಕೆಗೆ ಆಶ್ಚರ್ಯ ಮೂಡಿಸಿದೆ. ನೇಮಿಚಂದ್ರ ಅವರು ಗಂಡನನ್ನು ಬಿಟ್ಟು ಪ್ರವಾಸ ಕೈಗೊಂಡಿರುವುದು, ತನ್ನ ಮಕ್ಕಳ ಜವಾಬ್ದಾರಿ ಗಂಡನೇ ನೋಡಿಕೊಳ್ಳುತ್ತಿರುವುದು ಹೇಳಿದ್ದನ್ನು ಕೇಳಿ ತಲೆದೂಗಿದಳು. ಭಾರತದಲ್ಲಿ ಮಹಿಳೆಯರನ್ನು ವರದಕ್ಷಿಣೆಗಾಗಿ ಹೆಂಗಸರನ್ನು ಸುಡುವ, ಮಹಿಳೆಯರನ್ನು ಬಚ್ಚಿಡುವ, ಮೂಢನಂಬಿಕೆಗಳಿಂದಾಗಿ ಶೋಷಣೆಗೆ ಗುರಿ ಮಾಡುವುದನ್ನೇ ಕೇಳಿದ್ದ ಆ ವಿದೇಶಿ ಮಹಿಳೆಗೆ ಲೇಖಕಿಯ ಮಾತುಗಳು ಮತ್ತೊಂದು ಮುಖವನ್ನು ತೋರಿಸಿತು. ಇನ್ನೊಬ್ಬ ಮಹಿಳೆಯು "ಭಾರತದಲ್ಲಿ ಮಹಿಳೆಗೆ ಪಾರ್ಸ್‌ಪೋರ್ಟ್ ಬೇಕು ಎಂದರೆ ಸೀರೆ ಹುಟ್ಟೇ ಸಂದರ್ಶನಕ್ಕೇ ಹೋಗಬೇಕಂತೆ ಹೌದೇ? ಎಂದಳು. ಇಂತಹ ಮಾಹಿತಿ ಇವರಿಗೆಲ್ಲಿಂದ ಸಿಕ್ಕಿತಪ್ಪಾ ಅನಿಸಿ. ನಾನು ನೋಡಿ ಸೀರೆ ಉಟ್ಟಿದ್ದೇ ಇಲ್ಲ. ಹುಡುಗಿಯರು ತಮಗೆ ಬೇಕಾದ ಉಡುಪು ತೊಟ್ಟು ತಿರುಗುತ್ತಾರೆ. ನೀವು ಜೀನ್ಸ್ ಹಾಕಿ ಹೋದರು ಪಾರ್ಸ್‌ಪೋರ್ಟ್ ಸಿಗುತ್ತೆ. ಪಾಸ್‌ಪೋರ್ಟ್ ಕಛೇರಿಗೆ ಹೋಗದೇ ಅರ್ಜಿ ಹಾಕಿ ಅಂಚೆಯಲ್ಲೇ ನಿಮಗೆ ಪಾಸ್‌ಪೋರ್ಟ್ ಬರುತ್ತೆ ಎಂದೆಲ್ಲ ವಿವರಿಸಿದೆ. ಇವರಿಗೆ ಸೀರೆ ಎಂಬುದು ಬುರಖಾದಷ್ಟು ಬಂಧನದ ಮತ್ತು ಕಡ್ಡಾಯದ ಉಡುಪಾಗಿ ಕಂಡಿತ್ತು. ಗೆಳತಿ ಮಾಲತಿ ಸೀರೆ ಉಟ್ಟಿದ್ದರು. ಈ ಉಡುಪು ನಮ್ಮ ಆಯ್ಕೆಯಷ್ಟೇ. ಈಕೆಗೆ ಸೀರೆ ಉಟ್ಟು ಅಭ್ಯಾಸವಾಗಿ, ಸೀರೆ ಅನುಕೂಲಕರವಾಗಿ ಕಂಡಿದೆ. ಅದಕ್ಕಾಗಿ ಸದಾ ಸೀರೆ ಉಟ್ಟೇ ಬರುತ್ತಾರೆ" (ನೇಮಿಚಂದ್ರ, ೨೦೧೫, ಪುಟ-೧೨೫) ಎಂದು ಆಕೆಗೆ ವಿವರಿಸಿದ್ದಾಗಿ ಹೇಳಿಕೊಂಡಿದ್ದಾರೆ. ಲೇಖಕಿಯ ಸೀರೆ ಕುರಿತಾದ ಅನುಭವಗಳು ಬಹುತೇಕ ವಿದೇಶಿ ಪ್ರವಾಸ ಹೊರಟ ಲೇಖಕಿಯರಿಗೂ ಆಗಿದೆ. 'ಭಾರತೀಯ ಮಹಿಳೆ ಎಂದರೆ ಸೀರೆಯಲ್ಲಿ ಕಟ್ಟಿಟ್ಟ ಪತಿಯ ದಾಸಾನುದಾಸಿ' ಎಂದು ಆಕೆಯ ತಲೆಯಲ್ಲಿರುವ ಸಂಗತಿಯನ್ನು ತೊಲಗಿಸಿ ಭಾರತದ ಮಹಿಳೆಯೆಂದರೆ ಮುಂದುವರೆದ, ವಿದ್ಯಾವಂತ, ಎಲ್ಲವನ್ನು ತಿಳಿಯುವ ಆಸಕ್ತಿ ಹೊಂದಿದವರೆಂಬುದನ್ನು ನೇಮಿಚಂದ್ರ ಹೇಳಿಕೊಳ್ಳುತ್ತಾರೆ.

'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎಂಬ ಗಾದೆ ಮಾತಿನಂತೆ ಮದುವೆಯಾದ ನಂತರ ಹೆಣ್ಣು ಮಗಳು ಗಂಡನ ಮನೆಗೆ ಹೋಗುವುದು ರೂಢಿಯಲ್ಲಿದೆ. ಆದರೆ ಲಕ್ಷದ್ವಿಪದಲ್ಲಿರುವ 'ಮಿನಿಕ್ಕೊ' ಎಂಬ ಚಿಕ್ಕ ದ್ವೀಪದಲ್ಲಿ ವಿವಾಹ ಪದ್ಧತಿಯೇ ಬೇರೆ ತರವಾದದ್ದು. ಅಲ್ಲಿನ ಜನರು ತಮ್ಮದೇ ಆದಂತಹ ರೂಢಿ, ಸಂಪ್ರದಾಯದ ಬುಡಕಟ್ಟು ಸಂಸ್ಕೃತಿಯನ್ನು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾರೆ. ಕಾರಣ ಅಲ್ಲಿನ ಜನತೆಗೆ ನಾಗರಿಕತೆಯ ಅರಿವು ತಿಳಿದುಬಂದರೂ, ತಮ್ಮ ಬುಡಕಟ್ಟು ಸಂಸ್ಕೃತಿ ಮುಖ್ಯ ಎಂದು ನಿರೂಪಿಸುತ್ತಾರೆ. ಈ ಕುರಿತು ಲೇಖಕಿ "ಇಲ್ಲಿ ವಿವಾಹದ ನಂತರ ಸ್ತ್ರೀಯು ಗಂಡನ ಮನೆಗೆ ಹೋಗುವ ಆಗಿಲ್ಲ. ಬದಲಾಗಿ

ತವರು ಮನೆಯಲ್ಲಿಯೇ ಇರುತ್ತಾಳೆ. ಗಂಡನೇ ರಾತ್ರಿ ಹೊತ್ತು ಮಲಗಲು ಹೆಂಡತಿಯ ಮನೆಗೆ ಹೋಗಬೇಕು. ಪತ್ನಿಯ ಮನೆಯಲ್ಲಿ ಬೆಳಗಿನ ಉಪಾಹಾರ ಮುಗಿಸಿ ಆತ ತನ್ನ ಮನೆಗೆ ಹೋದರೆ ಮತ್ತೆ ಬರುವುದು ರಾತ್ರಿಯೇ, ಹಾಗಾಗಿ ಎರಡು ಮನೆಗಳ ನಡುವೆ ಅವನೊಬ್ಬನದ್ದೇ ಓಡಾಟ, ಮಗುವಾದರೆ ಹಗಲು ಹೊತ್ತಿನಲ್ಲಿ ತಂದೆಯ ಮನೆಯಲ್ಲಿರಬೇಕು, ತಾಯಿ ಆಗಾಗ ಹೋಗಿ ಹಾಲೂಣಿಸಿ ವಾಪಸು ತಾಯಿ ಮನೆಗೆ ಬರಬೇಕು. ಪತ್ನಿಗೆ ಪತಿ ಗೃಹದ ಸಂಪರ್ಕವೇ ಕಡಿಮೆ. ಇಲ್ಲಿ ಗಂಡ ಹೆಂಡತಿಯರ ಮಧ್ಯೆ ಜಗಳಗಳು ಅಪರೂಪ, ಅತ್ತೆ ಸೊಸೆಯರ ಮಧ್ಯೆ ಜಗಳಗಳು ಇಲ್ಲವೆಂದೇ ಹೇಳಬಹುದು"(ಉಷಾ.ಪಿ.ರೈ, ೨೦೦೪, ಪುಟ-೫೯.೬೦) ಎಂದು ದಾಖಲಿಸಿದ್ದಾರೆ. ಅಲ್ಲದೆ ಮದುವೆಯಾದ ಹೆಣ್ಣು ತಾಯಿಯ ಮನೆಯಲ್ಲಿಯೇ ಇರುವುದರಿಂದ ಹೆಚ್ಚಿನ ಜವಾಬ್ದಾರಿಗಳೇ ಇಲ್ಲದೇ, ಆರಾಮಾದ ಜೀವನ ಸಾಗಿಸುವ ಕುರಿತು ನಿರೂಪಿಸುತ್ತಾರೆ.

'ಅಮೇರಿಕಾದ ಇತಿಹಾಸ ಮತ್ತು ಇಂದಿನ ಜನಜೀವನ' ಪ್ರವಾಸ ಕಥನದಲ್ಲಿ ಲೇಖಕಿಯು ಅಮೇರಿಕಾದಲ್ಲಿನ ಹತ್ತು ಹಲವು ಸೂಕ್ಷ್ಮ ಸಂಗತಿಗಳ ಕುರಿತು ಕೇಂದ್ರೀಕೃತವಾದ ಬರವಣಿಗೆ ಮಾಡಿದ್ದಾರೆ. ಈ ಕಥನವು ಹೊರದೇಶದ ಬಗ್ಗೆ ಇರಬಹುದಾದಂತಹ ಕುತೂಹಲವನ್ನು ಪರಿಹರಿಸುವಂತಹ ಕೃತಿಯಾಗಿ ಮುಖ್ಯವಾಗುತ್ತದೆ. ಮಹಿಳೆಯರ ಕುರಿತು ಅಷ್ಟಾಗಿ ಮಹತ್ವದ ವಿಚಾರಗಳ ಚರ್ಚೆಗಳಿಲ್ಲದಿದ್ದರೂ, ಕೌಟುಂಬಿಕ, ಸಾಮಾಜಿಕ, ಸಂಸ್ಕೃತಿಗಳ ಮುಖಾಮುಖಿ ಇಲ್ಲಿ ಕಾಣಬಹುದಾಗಿದೆ. ಅಮೇರಿಕಾದಲ್ಲಿ ಮದುವೆ ವಿಚಾರಗಳಿಗೆ ಬಂದಾಗ ಲೇಖಕಿಯ ನಿಲುವು ಈ ರೀತಿಯಾಗಿದೆ. "ಭಾರತೀಯ ಹುಡುಗಿ ಅಮೇರಿಕಾದ ಹುಡುಗನನ್ನು ಮದುವೆಯಾಗಿ ಹೊಂದಿಕೊಳ್ಳುವುದು ಸುಲಭ. ಆದರೆ ಭಾರತೀಯ ಹುಡುಗ ಅಮೇರಿಕಾದ ಹುಡುಗಿಯನ್ನು ಮದುವೆಯಾಗುವುದು ಸುಲಭವಾದರೂ, ಹೊಂದಿಕೊಳ್ಳುವುದು ಕಷ್ಟವೆಂದು ನನ್ನ ಅನಿಸಿಕೆ. ಭಾರತೀಯ ಗಂಡಸರಿಗೆ ಹೆಂಡತಿಯಿಂದ ಕೆಲಸ ಮಾಡಿಕೊಳ್ಳುವುದು ಗೊತ್ತೇ ಹೊರತು, ಹೆಂಡತಿಗೆ ಉಪಚಾರ ಮಾಡುವುದು (ಅಮೇರಿಕಾದ ಗಂಡಸರಷ್ಟು) ಕಷ್ಟದ ಕೆಲಸವೇ." (ಪಾರ್ವತಮ್ಮ ಮಹಾಲಿಂಗಶೆಟ್ಟಿ, ೨೦೦೬, ಪುಟ-೯೬) ಎಂಬ ಲೇಖಕಿಯ ಈ ಅಭಿಪ್ರಾಯವು ಸೂಕ್ತವಾಗಿದೆ. ಭಾರತೀಯ ಹುಡುಗಿ ಅಮೇರಿಕಾದ ಹುಡಗನನ್ನು ಮದುವೆ ಮಾಡಿಕೊಂಡಾಗ ಭಿನ್ನ ಅನುಭವ ಪಡೆಯುತ್ತಾಳೆ. ಆಕೆಗೆ ಮುಕ್ತವಾದ ಬದುಕು ಸಿಕ್ಕುವುದು. ಆದರೆ ಭಾರತದ ವಿವಾಹ ವ್ಯವಸ್ಥೆಯನ್ನು ಮಹಿಳೆಗೆ ಬಂಧನದಂತೆ ಭಾವಿಸುವ ಗಂಡಸರು ದುಡಿಸಿಕೊಂಡು, ತಮ್ಮ ಅಗತ್ಯತೆಗಳಿಗೆ ಅನುಕೂಲವಾಗುವಂತೆ ಕೂಲಿ ಆಳುಗಳಂತೆ ಭಾವಿಸುತ್ತಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ, ಅಮೇರಿಕಾದ ಮಹಿಳೆಯರು ಸಮಾನತೆಯ ಬದುಕಿನಲ್ಲಿ ಜೀವಿಸಿದವರು. ಇವರಿಗೆ ಭಾರತೀಯ ಗಂಡಸರ ಸಂಪ್ರದಾಯದ ಮನೋಭಾವ ಸಹಜವಾಗಿಯೇ ಹೊಂದಿಕೆಯಾಗದೆ ಸಂಸಾರದಲ್ಲಿ ತಿಕ್ಕಾಟಗಳು ಶುರುವಾಗುತ್ತವೆ. ಹೀಗಾಗಿ ಲೇಖಕಿಯ ಅಭಿಪ್ರಾಯಗಳು ಅರ್ಥಪೂರ್ಣವಾಗಿ ಕಂಡುಬರುತ್ತವೆ.

ಕೆ.ಆರ್.ಜಯಶ್ರೀ ಅವರ 'ಅಮೇರಿಕಾ ಪ್ರವಾಸ' ಕೃತಿಯಲ್ಲಿ ಲೇಖಕಿಯ ಕುಟುಂಬದವರು

ಅಮೇರಿಕಾ ಪ್ರವಾಸ ಕೈಗೊಂಡಾಗ ಒಂದೆರಡು ಸಂದರ್ಭಗಳಲ್ಲಿ ಅಲ್ಲಿನ ಸಂಸ್ಕೃತಿ ಪರಿಚಯ ಮಾಡಿಕೊಡುತ್ತಾರೆ. ಲೇಖಕಿ ಹೊಟೇಲ್‌ನಲ್ಲಿ ಉಳಿದುಕೊಂಡ ಸಂದರ್ಭದಲ್ಲಿ ಬಿಳಿಯ ಬೆಡ್ ಮೇಲೆ ಡಿಕಾಕ್ಷನ್ ಬಿದ್ದು ಒದ್ದೆಯಾದಾಗ, ಸಹಜವಾಗಿ ಸ್ವಚ್ಛವಾಗಿರುವ ದೇಶದಲ್ಲಿ ಏನೆಂದು ಕೊಂಡಾರೊ ಎಂದು ಚಿಂತಗೆ ಬಿದ್ದಾಗ, ಅಲ್ಲಿನ ಹೊಟೇಲ್‌ನ ಮಹಿಳಾ ಸಿಬ್ಬಂದಿ ನಗು ಮುಖದಿಂದಲೇ ನಾವು ಸ್ವಚ್ಛವಾಗಿಸಿಕೊಳ್ಳುತ್ತೇವೆ ಎಂದಾಗ ಸಂತೋಷಪಡುತ್ತಾರೆ. ಭಾರತದ ಯಾವುದೇ ಹೊಟೇಲ್‌ನಲ್ಲಿ ದಂಡ ತೆತ್ತು ಬರಬೇಕಾಗುತ್ತಿತ್ತು. ಆದರೆ ಪ್ರೀತಿಯಿಂದಲೇ ಕಳಿಸಿದ್ದು ಅಮೇರಿಕಾದ ಜನರಲ್ಲಿನ ಸಂಸ್ಕೃತಿಯ ಬಗ್ಗೆ ಗೌರವ ಹೆಚ್ಚುವಂತೆ ಮಾಡಿತು. ಅಮೇರಿಕಾದಲ್ಲಿ ವೆಂಕಟರಮಣ ದೇವಸ್ಥಾನ ಕಂಡು, ಅಲ್ಲಿನ ಪೂಜಾ ವಿಧಾನಗಳು, ಪ್ರಸಾದ, ಸ್ವಚ್ಛತೆ, ಸ್ವತಃ ಅಮೆರಿಕಾದ ಜನರು ವೆಂಕಟರಮಣನ ದೇವಸ್ಥಾನಕ್ಕೆ ಬಂದು ಪ್ರಸಾದ ಸ್ವೀಕರಿಸಿದರು. ಅಮೇರಿಕಾದ ಉಡುಪಿ ಹೊಟೇಲ್‌ನಲ್ಲಿ ಭಾರತೀಯರ ಜೊತೆಗೆ ಅಮೆರಿಕಾದವರು ಇಡ್ಲಿ–ವಡೆ, ಮಸಾಲೆದೋಸೆ, ಉತ್ತಪ್ಪ, ಪೂರಿ–ಸಾಗು ಇಷ್ಟಪಟ್ಟು ತಿನ್ನುವುದನ್ನು ಕಂಡರು. ಭಾರತೀಯ ಆಹಾರ ಪದ್ಧತಿಯ ಸಂಸ್ಕೃತಿಗಳ ಸಂಕರಶೀಲತೆಯ ಬಗ್ಗೆ ಅಲ್ಲಿನವರು ಸಂತಸ ವ್ಯಕ್ತಪಡಿಸುತ್ತಾರೆ. ಕೆ.ಆರ್.ಜಯಶ್ರೀ ಅವರು ಹುಷಾರ್ ಇಲ್ಲವೆಂದು ಡಾಕ್ಟರ್ ಬಳಿ ಹೋದಾಗ ತುಂಬಾ ಅಕ್ಕರೆಯಿಂದ ಮಾತಾಡಿದ ಡಾಕ್ಟರ್ ಭಾರತದಲ್ಲಿರುವ ಭಾಷೆಗಳೆಷ್ಟು? ನಿಮಗೆ ಎಷ್ಟು ಭಾಷೆಗಳು ಗೊತ್ತು? ಅವೆಲ್ಲವು ಬರುತ್ತೇವೆಯೇ? ಎಂದು ಪ್ರಶ್ನಿಸಿ, ಅಮೆರಿಕಾದಲ್ಲಿ ಏನು ಇಷ್ಟ ಎಂದು ಡಾಕ್ಟರ್ ಕೇಳಿದಾಗ ಲೇಖಕಿ 'ಇಲ್ಲಿನ ಸ್ವಚ್ಛತೆ ಮತ್ತು ಸ್ನೇಹಪರತೆ' ಎಂಬ ಉತ್ತರವನ್ನು ಕೊಡುತ್ತಾರೆ.

ಲಂಡನ್ ಪ್ರವಾಸ ಕೈಗೊಂಡ ಲೇಖಕಿ ಪ್ರೇಮಾಭಟ್ ಅವರು ಭಾರತೀಯ ಮತ್ತು ವಿದೇಶಿಯರ ನಡುವಿನ ಬಾಂಧವ್ಯಗಳನ್ನು ಕುರಿತು "ನಾನು ಪಾರ್ಕ್‌ಗಳಲ್ಲಿ ಸಕುಟುಂಬ ಪರಿವಾರವಾಗಿ ಬರುವ ಯುವತಿ ಯುವಕರನ್ನು ನೋಡಿದೆ. ಜೊತೆಗೆ ಮುಪ್ಪಿನ ತಂದೆ ತಾಯಿ, ಮಕ್ಕಳು ಮರಿಗಳನ್ನು ಕರೆದುಕೊಂಡು ಬರುತ್ತಿದ್ದರು. ಆ ಮಕ್ಕಳಾದರೂ ದೇವಲೋಕದ ಕಿನ್ನರಿಯರಂತೆ ಕಾಣುತ್ತಿದ್ದರು. ಎಷ್ಟು ಚಂದದ ಅಂದದ ರೂಪ. ಅರಳು ಗಣ್ಣಿನ ಆ ಮುದ್ದು ಮುದ್ದಾದ ಮಕ್ಕಳು ನಮ್ಮ ಗಮನವನ್ನು ಸೆಳೆಯುತ್ತಿದ್ದವು. ಇವರೆನ್ನಲ್ಲಾ ಒಟ್ಟಾಗಿ ನೋಡಿದಾಗ ನನಗೆ ತುಂಬಾ ಸಂತೋಷವಾಯಿತು. ಇದನ್ನು ಗಮನಿಸಿದ ಲೇಖಕಿಗೆ ಭಾರತದ ಅವಿಭಕ್ತ ಕುಟುಂಬ ನೆನಪಿಗೆ ಬಂತು. ಇಲ್ಲಿರುವ ಅವಿಭಕ್ತ ಕುಟುಂಬವನ್ನು ಕಂಡಾಗ ನಮ್ಮ ಸಂಸ್ಕೃತಿಗೆ ಏನಾಗಿದೆ? ಯಾಕೆ ಪ್ರೀತಿ, ಪ್ರೇಮ, ಸೌಜನ್ಯ ಆದರ್ಶವನ್ನು ಕಳೆದುಕೊಂಡು ಬರಿದಾಗುತ್ತಿದ್ದೇವೆ ಎನಿಸಿತು. ದಾಂಪತ್ಯ ಜೀವನವೆಂದರೆ ಇಬ್ಬರನ್ನು ಒಂದಾಗಿಸುವ ಪ್ರಕ್ರಿಯೆ. ಇವತ್ತು ನಮ್ಮಲ್ಲಿ ಬಹಳಷ್ಟು ಮುರಿದು ಬೀಳುತ್ತಿದೆ. ಕಾಯಿಲೆಗಾದರೆ ಔಷಧಿಯಿದೆ. ಇದಕ್ಕೇನು ಮಾಡುವುದು. ಪ್ರೀತಿ, ಪ್ರೇಮ, ಸೌಜನ್ಯ ಎನ್ನುವುದು ದೊರಕುವ ಮಾಲಲ್ಲ. ಹೃದಯಂತರಾಳದಿಂದ

ಸ್ಫುರಿಸುವ ರಸ. ಇಂದು ನಮ್ಮಲ್ಲಿ ಬತ್ತಿದೆ ಎಂದುಕೊಂಡೆ." (ಪ್ರೇಮಾಭಟ್, ೨೦೧೦, ಪುಟ-೮೩) ಎಂಬುದಾಗಿ ವಿವರಿಸುತ್ತಾರೆ.

ಸುಧಾಮೂರ್ತಿಯವರು 'ಕಾವೇರಿಯಿಂದ ಮೆಕಾಂಗಿಗೆ' ಎಂಬ ಕೃತಿಯಲ್ಲಿ ವಿದೇಶಿಯರು ಭಾರತೀಯರಿಗೆ ಗೌರವ ಭಾವನೆಯಿಂದ ನೋಡಿದ ಉದಾಹರಣೆಯನ್ನು ಹೇಳುತ್ತಾರೆ. ಲೇಖಕಿಗೆ ಇಂಡೋಚೈನಾ ಪ್ರದೇಶದಲ್ಲಿ ಕೇಸರಿ ವಸ್ತ್ರಧಾರಿಯಾದ ಭಿಕ್ಷುಗಳು, ಶ್ವೇತವಸ್ತ್ರಧಾರಿಯಾದ ಭಿಕ್ಷುಣಿಯರು ಸಿಗುತ್ತಾರೆ. ಕೆಲವರು ಸಿಗರೇಟು ಸೇದುವುದು, ಮಾಂಸಾಹಾರ ಸೇವಿಸುವುದು ಸಾಮಾನ್ಯವಾಗಿತ್ತು. ಸುಧಾಮೂರ್ತಿಯವರು ಸೀರೆ ಉಟ್ಟಿದ್ದನ್ನು ಕಂಡಾಗ, ಗೌರವದಿಂದ ಕೆಲವರು ತಲೆಬಾಗಿದ್ದನ್ನು ಕಂಡರು. ತಥಾಗತನ ನಾಡಿನಿಂದ ಬಂದವರು ಎಂಬ ಕಾರಣಕ್ಕೆ ಈ ಗೌರವ ಸಲ್ಲಿಸಿರಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಇಂತಹದ್ದೇ ಸನ್ನಿವೇಶ ಮಲೇಶಿಯಾದಲ್ಲಿ ನಡೆಯುತ್ತದೆ. ಎರಡು ತಲೆಮಾರಿನಿಂದಲೂ ಮಲೇಶಿಯಾದಲ್ಲಿ ಹೋಟೆಲ್ ನಡೆಸುತ್ತಿರುವ ತಮಿಳಿಗ ಶಂಕರನ್ ಎಂಬುವರು ಸೀರೆಯನ್ನು ಗಮನಿಸಿ ಭಾರತೀಯರೆಂದು ನಕ್ಕು ಉಪಚರಿಸಿದನು. ಆತನು ಮೂಲ ಭಾರತೀಯನಾಗಿದ್ದು, ಎಷ್ಟೇ ವರ್ಷಗಳು ದೂರವಿದ್ದರೂ, ತನ್ನ ನೆಲದವರನ್ನು ಕಂಡಾಗ ಆತ ತೋರುವ ಔದರ್ಯ, ಅಭಿಮಾನಕ್ಕೆ ಲೇಖಕಿಗೆ ನಮ್ರತೆಯ ಭಾವ ಉಂಟಾಗುತ್ತದೆ. ಈ ಕುರಿತು ಲೇಖಕಿ "ವಿಯೆಟ್ನಾಂ ದೇಶದ ಮಹಿಳೆಯರು ಅಲಂಕಾರ ಪ್ರಿಯರು ಬೆಳ್ಳಿಯ ಚಿನ್ನದ ಆಭರಣ ಧರಿಸುತ್ತಾರೆ. ಇವರದು ತೇಟು ಭಾರತೀಯ ಸೀರೆಯನ್ನು ಹೋಲುತ್ತದೆ. ಅಂಚಿನ ಒಂದು ಮೀಟರ್ ಅಗಲದ, ಎರಡು ಮೀಟರ್ ಉದ್ದದ, ಸೆರಗಿಲ್ಲದ ಸೀರೆಗೆ ಕಡಿಮೆ ಉದ್ದದ ಲಂಗ ಧರಿಸುತ್ತಾರೆ. ಅದು ಬಿಗಿಯಾಗಿರಲೆಂದು ಒಳ್ಳೆಯ ಒಡ್ಯಾಣ ಧರಿಸುತ್ತಾರೆ. ಕೈಗೆ ಕೆತ್ತನೆಯ ಬಳೆಗಳನ್ನು, ಹಾರವನ್ನು, ಕಿವಿಗೆ ಒಲೆಗಳನ್ನು ಧರಿಸುತ್ತಾರೆ." (ಸುಧಾಮೂರ್ತಿ, ೨೦೧೩, ಪುಟ-೭೩) ಎಂದಿದ್ದಾರೆ. ಭಾರತದಲ್ಲಿ ಮಹಿಳೆಯರಿಗೆ ಸೀರೆ ಎನ್ನುವುದು ಪರಂಪರೆ, ಸಂಪ್ರದಾಯವಾಗಿದೆ. ಹಾಗೆಯೇ ವಿಯೆಟ್ನಾಂ ದೇಶದಲ್ಲಿಯೂ ಇಂತಹದ್ದೇ ಪರಂಪರೆಯೊಂದು ನೆಲಗೊಂಡಿದೆ. ಸೀರೆಯನ್ನು ಧರಿಸಿರುವುದನ್ನು ಗಮನಿಸಿದಾಗ ಸೀರೆಯ ವಿವಿಧ ವಿನ್ಯಾಸಗಳು, ಚಿನ್ನದ ಆಭರಣಗಳನ್ನು ತೊಡುವುದನ್ನು ಗಮನಿಸಿದಾಗ ಭಾರತದ ನೆಲದಂತೆ, ಜಗತ್ತೇ ವಿವಿಧತೆಯಲ್ಲಿ ಏಕತೆಯನ್ನು ಸಾರ ಹೊರಟಿದೆ ಎನ್ನಬಹುದಾಗಿದೆ. ಸೀರೆಯ ಉಡುಪಿನ ಬಗ್ಗೆ ಮೆಕಾಂಗಿಯ ಮಹಿಳೆಯರು ಲೇಖಕಿ ಹೀಗೆ ಪ್ರಸ್ತಾಪಿಸುತ್ತಾರೆ. "ಎಷ್ಟು ಚಿತ್ತಾಕರ್ಷಕವಾದ ಸೀರೆ ಉಡುತ್ತೀರಿ? ನಮ್ಮ ಥರ ಪ್ಯಾಂಟ್, ಶರ್ಟ್, ಸ್ಕರ್ಫ್‌ಗಳಲ್ಲಿ ವಿವಿಧ ವಿನ್ಯಾಸವೇ ಇಲ್ಲ ಅನ್ನುವರು. ಸೀರೆಯ ಸೆರಗಿಗೆ ಮಾರು ಹೋಗಿದ್ದರು. ನಮ್ಮ ಸಾಲ್ವರ್ ದುಪ್ಪಟ್ಟ ತಮ್ಮ ಸ್ಕಾರ್ಫ್‌ಗಿಂತ ಸುಂದರವಾಗಿದೆ" (ಅದೇ, ಪುಟ-೯೮) ಬಾಹ್ಯವಾಗಿ ಕಾಣುವ ಸೌಂದರ್ಯದಂತೆ ಕಾಂಬೋಡಿಯಾದಲ್ಲಿ ರಾಜಕುಮಾರಿಯ ಬಗ್ಗೆ ಹೇಳುತ್ತಾ, ಸಣ್ಣಗೆ, ಕುಳ್ಳಗೆ, ಕಪ್ಪಾಗಿದ್ದರು. ಅವರಿಗೆ ಇಂಗ್ಲೀಷ್ ಬರುವುದಿಲ್ಲ. ಫ್ರೆಂಚ್ ಮಾತ್ರ ತಿಳಿದಿದ್ದ ಆಕೆ ವಿನಯ ವಿನಮ್ರತೆಯ ಸಂಕೇತದಂತಿದ್ದಳು. ಬಾಹ್ಯ ಸೌಂದರ್ಯಕ್ಕಿಂತಲೂ ಆಂತರಿಕ

ಸೌಂದರ್ಯ ಬಹುಮುಖ್ಯ ಎಂಬುದಕ್ಕೆ ನಿದರ್ಶನದಂತಿದ್ದಳು ಎನ್ನುವ ಲೇಖಕಿ ಈ ಎರಡರಲ್ಲಿ ಮಹಿಳಾ ಮುಖಾಮುಖಿ ಮಾತುಕತೆಗಳು ಎಲ್ಲಿದ್ದರೂ ಒಂದೇ ಎನ್ನುವ ಭಾವ ಮೂಡುತ್ತದೆ.

ಕಾಂಬೋಡಿಯಾದಲ್ಲಿ ವಿಷ್ಣು, ಆನೆ, ಇಂದ್ರ, ಲಕ್ಷ್ಮೀ, ಸರಸ್ವತಿ ಅನೇಕ ವಿಗ್ರಹಗಳು ಇಟ್ಟಿಗೆಗಳಲ್ಲಿ ಕೊರೆದಿದ್ದಾರೆ. ಮಹಿಳೆಯನ್ನು ಮೆಕಾಂಗ್‌ನಲ್ಲಿ ಭಾರತದಂತೆ ದೇವತೆಯ ಸ್ಥಾನದಲ್ಲಿಟ್ಟು ನೋಡುವ ದೃಷ್ಟಿಕೋನ ಬೆಳೆಸಿಕೊಂಡಿರುವುದು ಕಂಡುಬರುತ್ತದೆ. ವಿಯೆಟ್ನಾಂನಲ್ಲಿ ಅತ್ಯಂತ ಜನಪ್ರಿಯ ಹಬ್ಬವೆಂದರೆ 'ಟೀಟ್'. ಈ ಹಬ್ಬದ ಹಿಂದಿನ ಕಥೆಯೂ ಭಾರತದ ಜಾನಪದ ಕಥೆಯನ್ನು ಹೋಲುತ್ತದೆ. ಗಂಡನ ಹಿಂಸೆ ತಾಳಲಾರದ ಹೆಣ್ಣು, ಗಂಡನನ್ನು ತ್ಯಜಿಸಿ ಬೇಟೆಗಾರರನ್ನು ಮದುವೆಯಾಗುತ್ತಾಳೆ. ಮುಂದೊಂದು ದಿನ ಮರಳಿ ಗಂಡನನ್ನು ನೋಡಿ ಆಶ್ಚರ್ಯ ವ್ಯಕ್ತಡಿಸುತ್ತಾಳೆ. ಬೆಂಕಿ ಹಚ್ಚಿದ ಬಣವೆಯೊಂದರಲ್ಲಿ ಬೆಂಕಿಗೆ ಆಹುತಿಯಾಗುತ್ತಾರೆ. ಹೀಗೆ ಮೂವರು ತಮ್ಮ ತಮ್ಮ ನಿಷ್ಠೆಗಾಗಿ ಬಲಿದಾನ ಮಾಡಿದರು. ಇವರ ತ್ಯಾಗದಿಂದಾಗಿ ಸ್ವರ್ಗದಲ್ಲಿಯ ದೇವರು ದೇವತೆಗಳ ಸ್ಥಾನಕೊಟ್ಟನು. ಈ ಕಥೆ ಭಾರತೀಯ ಪುರಾಣದ ಕಥೆಗಳನ್ನು ನೆನಪಿಸುತ್ತದೆ. ಸಾಮಾನ್ಯ ಮಹಿಳೆಯೊಬ್ಬಳು ತನ್ನ ಔದಾರ್ಯ ಮತ್ತು ಭಕ್ತಿಯಿಂದಾಗಿ, ದೇವತೆಯಾಗಿ ನಿಲ್ಲುವ, ದಂತ ಕಥೆಗಳು ಇಂದಿಗೂ ಜನಜನಿತವಾಗಿರುವುದನ್ನು ಕಾಣುತ್ತೇವೆ. ಹೇಮಲತಾ.ಎಚ್.ಎಂ. ಅವರು 'ಹಂಗೇರಿಯಲ್ಲಿ ಹೇಮ' ಪ್ರವಾಸ ಕಥನದಲ್ಲಿ ಹಂಗೇರಿ ಮಹಿಳೆಯರು ಮತ್ತು ಭಾರತದ ಮಹಿಳೆಯರ ಕುರಿತು ಮಾಡಬೇಕಿರುವ ತುಲನಾತ್ಮಕ ಅಧ್ಯಯನ ಬಗ್ಗೆ ತಿಳಿಸುತ್ತಾರೆ. ಅಲ್ಲಿನ ಮಹಿಳೆಯರ ಸ್ಥಾನ, ಅವರು ಎದುರಿಸುತ್ತಿರುವ ಸಮಸ್ಯೆಗಳು, ರಾಜಕೀಯದಲ್ಲಿ ಭಾಗವಹಿಸುವಿಕೆ ಹಾಗೂ ಜಂಡರ್ ವಿಷಯಗಳಲ್ಲಿ ದೇಶ, ಭಾಷೆ, ಸಂಸ್ಕೃತಿ ಯಾವುದೇ ಇದ್ದರೂ ಸ್ತ್ರೀಯರ ಮೇಲಿನ ದೌರ್ಜನ್ಯ ಮುಂದುವರೆದಿದೆ. ಜಾಗತಿಕ ಅಂಶಗಳನ್ನು ಮೀರಿ ಹಂಗೇರಿಯ ಮಹಿಳೆಯರು ಪುರುಷ ಪ್ರಧಾನತೆಯ ನಿರ್ಬಂಧಕ್ಕೆ ಸಿಲುಕಿದ್ದಾರೆ ಎಂಬುದನ್ನು ನಿರೂಪಿಸಿದ್ದಾರೆ.

ಇಂದಿರಾ ಶಿವಣ್ಣ ಅವರ 'ತನ್ಮಯತೆ ಉನ್ಮತ್ತತೆ' ಎಂಬ ಕೃತಿಯಲ್ಲಿ ಬರ್ಮಿಂಗ್ ಹ್ಯಾಮ್‌ಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅಲ್ಲಿನ ಕುಟುಂಬಗಳನ್ನು, ಭಾರತೀಯ ಕುಟುಂಬಗಳ ಮುಖಾಮುಖಿಗೊಳಿಸಿದ ಸನ್ನಿವೇಶದ ಚಿತ್ರಣವಿದೆ. ಭಾರತೀಯರು ವಿದೇಶಗಳಿಗೆ ವಿದ್ಯೆ, ಉದ್ಯೋಗ ಹರಸಿ ಹೋದವರು. ಅಲ್ಲಿನ ಬಿಳಿ ಹುಡುಗಿಯರನ್ನು ತಂದಾಗ ಸಹಜವಾಗಿ ಪೋಷಕರಲ್ಲಿ ಭ್ರಮನಿರಸನ ಉಂಟಾಗುತ್ತದೆ. ಮುಂದಿನ ತಲೆಮಾರಿನ ಮೊಮ್ಮಕ್ಕಳನ್ನು ಇಲ್ಲಿಯ ಹಾಗೆ ನಿರ್ಬಂಧಿಸುವ ಶಕ್ತಿ ಇಲ್ಲವಾಗುತ್ತದೆ. ಅದೇ ಮಕ್ಕಳು ತಾವು ನೋಡಿದ ಸಂಬಂಧದಲ್ಲೋ ಅಥವಾ ಭಾರತೀಯ ಮೂಲದವರೊಂದಿಗೆ ಮದುವೆಯಾದಾಗ ಸಮಾಧಾನದ ನಿಟ್ಟುಸಿರು ಬಿಡುತ್ತಾರೆ. ಸಹಜವಾಗಿ ವಿದೇಶದಲ್ಲಿರುವ ಮಕ್ಕಳೊಂದಿಗೆ ತಂದೆ ತಾಯಿಯರ ನಿರೀಕ್ಷೆಗಳು ಕ್ಷೀಣಗೊಳ್ಳುತ್ತವೆ. ಇಬ್ಬರ ವೈಯಕ್ತಿಕ ಬದುಕುಗಳು ತಾಳೆಯಾಗದೆ ಪೋಷಕರೇ ಮಕ್ಕಳನ್ನು ಅನುಸರಿಸುತ್ತಾರೆ. ಭಾರತೀಯ ಮತ್ತು ವಿದೇಶದಲ್ಲಿರುವ ಸಂಸ್ಕೃತಿಗಳು ಪರಸ್ಪರ ಭಿನ್ನ

ನೆಲೆಯಾದ್ದರಿಂದ ಹೊಂದಿಕೊಂಡು ಬಾಳುವುದು ಅನೇಕ ಕುಟುಂಬಗಳಿಗೆ ಕಷ್ಟವಾಗಿದೆ. ವಿದೇಶಕ್ಕೆ ಹೋದ ಪೋಷಕರು ಹೊಂದಿಕೊಳ್ಳಲಾರದೆ ವಾಪಾಸು ಬಂದು ಮಕ್ಕಳ ಪುನಾರಾಗಮನಕ್ಕೆ ಕಾಯುವ, ಬಂದರೇ ಚೈತನ್ಯಶೀಲರಾಗುವ, ನಿರೀಕ್ಷೆಯಲ್ಲಿ ಕೊರಗುವ ಅದೇಷ್ಟು ಕುಟುಂಬಗಳು ಭಾರತದಲ್ಲಿವೆ. ಅದು ಕೂಡ ಲೇಖಕಿ ಹೇಳುವ ಹಾಗೆ ವಾಸ್ತವದ ಸಂಗತಿಗಳೇ ಆಗಿವೆ. ಭಾರತದ ಉದ್ದಗಲಕ್ಕೂ ಯಾವುದೇ ಪ್ರದೇಶದಲ್ಲಿ ಮಕ್ಕಳು ವಾಸವಿದ್ದಾಗ ಈ ಸಮಸ್ಯೆ ಉಂಟಾಗುವುದಿಲ್ಲ. ಪರಸ್ಪರ ವಿಭಿನ್ನ ಸಂಸ್ಕೃತಿಯಲ್ಲಿನ ಪ್ರದೇಶಗಳಲ್ಲಿ ನೆಲೆಗೊಂಡಾಗ ಅದನ್ನು ಸ್ವೀಕರಿಸಲಾರದೆ. ತಮ್ಮತನವನ್ನು ಬಿಡಲಾರದೆ ಹಿರಿಕರು ಅತಂತ್ರತೆಯಲ್ಲಿ ಸಿಲುಕುತ್ತಾರೆ.

ಬರ್ಮಿಂಗ್ ಹ್ಯಾಮ್‌ನ ರಂಗಮಂದಿರದಲ್ಲಿ 'ಗಾಂಧಿ' ನಾಟಕ ನಡೆಯುತ್ತಿದ್ದಾಗ ಹಿಂದಿನ ಬದಿಯಲ್ಲಿ ಕುಳಿತ್ತಿದ್ದ ಆಂಗ್ಲ ಯುವಕ ಯುವತಿಯರು ಕುಳಿತು ನೋಡಲು ಚಡಪಡಿಸುತ್ತಿದ್ದರು. ಅವರು ಒದ್ದಾಡುತ್ತಿದನ್ನು ಕಂಡು ಲೇಖಕಿಗೆ ಮನವರಿಕೆಯಾಯಿತು. ಶತಮಾನಗಳ ಹಿಂದೆ ಬಿಳಿಯರ ನಡುವೆ ಗಾಂಧೀಜಿ ಅನುಭವಿಸಿದ ಯಾತನೆ ಮತ್ತು ಭಾರತೀಯರ ಸ್ಥಿತಿಗಳನ್ನು, ವರ್ಣಭೇದ ನೀತಿಯಿಂದಾದ ತೊಂದರೆಗಳನ್ನು ಜನರ ನಡುವೆ ವೀಕ್ಷಿಸುವುದು ಅವರಿಗೆ ಮುಜುಗರ ತರುವ ವಿಚಾರವಾಗಿ ಕಂಡಿದ್ದರಿಂದ ಎದ್ದುಹೋದರೆಂದು ಲೇಖಕಿ ಪ್ರಸ್ತಾಪಿಸುತ್ತಾರೆ. ಅಲ್ಲಿನ ಮಹಿಳೆಯರು ಎದ್ದು ಹೋದದ್ದು ಲೇಖಕಿಗೆ ಆಶ್ಚರ್ಯವಾಗುತ್ತದೆ. ಭಾರತೀಯ ಸಮುದಾಯವನ್ನು ಅವಮಾನಕರವಾಗಿ ನಡೆಸಿಕೊಂಡಿದ್ದಕ್ಕಾಗಿ ತಮ್ಮ ತಪ್ಪಿನ ಬಗ್ಗೆ ಅರಿತವರಂತೆ ಅವರಲ್ಲಿನ ಭಾವ ತೋರುತ್ತಿತ್ತು.

ಎಚ್.ಎನ್.ಆರತಿ ಅವರ 'ಬೆಟ್ಟದಡಿಯ ಬಿದಿರ ಹೂ' ಪ್ರವಾಸ ಕೃತಿಯು ತ್ರಿಪುರ ರಾಜ್ಯ ಪ್ರವಾಸವಾಗಿದ್ದು, ಅಲ್ಲಿನ ಬಸ್ಸಿನ ಪ್ರಯಾಣಗಳಲ್ಲಿ ಮುಕ್ತ ವಾತಾವರಣವಿರುವುದು ಕಂಡುಬಂದಿದೆ. ಗಂಡ ಹೆಂಡತಿ ಒಟ್ಟಿಗೆ ಬಸ್ ಹತ್ತಿದಾಗ ಹೆಂಡತಿ ಎಲ್ಲಿ ಬೇಕಾದರೂ ಜಾಗವಿದ್ದ ಕಡೆ ಕೂಡಬಹುದು. ಇಬ್ಬರ ಗಂಡಸರ ಮಧ್ಯೆಯು ಕೂರಬಹುದು. ಹೆಣ್ಣು ಗಂಡು ಭೇದವಿಲ್ಲದ ಒಂದು ತರಹದ ಮುಕ್ತತೆ ಆ ರಾಜ್ಯದಲ್ಲಿತ್ತು. ಇವರು ಪ್ರವಾಸ ಕೈಗೊಂಡಿದ್ದ ೨೦ದಿನಗಳಲ್ಲಿ ಹೆಣ್ಣು ಮಕ್ಕಳನ್ನು ಛೇಡಿಸುವ, ಅವರ ಮೈಮೇಲೆ ಅಸಹ್ಯವಾಗಿ ಕಣ್ಣಾಡಿಸುವ ಗಂಡಸರನ್ನು ಕಾಣಲಿಲ್ಲ. ನೆರೆ ದೇಶ ನೇಪಾಳದಲ್ಲಿಯೂ ಲೇಖಕಿಗೆ ಇದೇ ರೀತಿ ಅನುಭವವಾಗಿತ್ತು. ತ್ರಿಪುರದಲ್ಲಿ ಅತ್ಯಾಚಾರಗಳು, ಹೆಂಗಸರನ್ನು ಛೇಡಿಸುವ ಅಪರಾಧದ ಸಂಖ್ಯೆ ಇಲ್ಲಿ ಬಹಳಷ್ಟು ಕಡಿಮೆಯಾಗಿದೆ ಎಂದು ದಾಖಲೆಗಳು ಹೇಳುತ್ತವೆ.

ಪ್ರೇಮಾಭಟ್‌ರ 'ಪಶ್ಚಿಮದತ್ತ ಪಯಣ' ಕೃತಿಯಲ್ಲಿ ಬ್ರಿಟನ್ನರ ಮತ್ತು ಭಾರತೀಯ ಮಹಿಳೆಯರ ಶ್ರಮಿಕ ಜೀವನವನ್ನು ಮುಖಾಮುಖಿಗೊಳಿಸುವ ಸನ್ನಿವೇಶ ಈ ರೀತಿಯಿದೆ. ಸಾರ್ವಜನಿಕ ಹಿತಾಸಕ್ತಿಯನ್ನು ಅರಿತು ಯಂತ್ರೋಪಕರಣಗಳನ್ನು ತಯಾರಿಸುತ್ತಾರೆ. ಭಾರತದಲ್ಲಿ ಈ ಹಿತಾಸಕ್ತಿ ಕಂಡುಬರುವುದಿಲ್ಲ. ಕೆಳದರ್ಜೆಯ ಕೆಲಸಗಳನ್ನು ಶ್ರಮ ಜೀವಿಗಳೇ ಮಾಡುತ್ತಾರೆ. ಸಾರ್ವಜನಿಕ ಸ್ಥಳಗಳ ಶುಭ್ರತೆಗಾಗಿ ಸಹಾಯಕವಾಗುವ ಯಂತ್ರೋಪಕರಣಗಳು ಬಹುತೇಕ

ಇಲ್ಲವಾಗಿವೆ. ಬ್ರಿಟನ್‌ನಲ್ಲಿ ಗಂಡು ಹೆಣ್ಣು ವ್ಯತ್ಯಾಸವಿಲ್ಲದೆ ಈ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಾರೆ. ಯಂತ್ರಗಳಿಂದ ಕೆಲಸವನ್ನು ಸುಲಭವಾಗಿ ಕೆಲಸಕಾರ್ಯಗಳನ್ನು ನಿರ್ವಹಿಸುವುದನ್ನು ಮಹಿಳೆಯರು ಕರಗತ ಮಾಡಿಕೊಂಡಿದ್ದಾರೆ. ಅಲ್ಲಿನ ಜನರಿಗೂ ಈ ಕುರಿತು ಕೀಳಿರಿಮೆಯ ಭಾವನೆ ಇಲ್ಲ. ಶೌಚಾಲಯವನ್ನು ಶುಚಿಮಾಡುವಾಗಲೇ ಹೋಟೆಲ್‌ನಲ್ಲಿ ಆಹಾರ ಬಡಿಸುವ ಕೆಲಸ ಮಾಡಬಲ್ಲರು, ತಟ್ಟೆ ತೊಳೆಯಬಲ್ಲರು, ಭಾರತದಲ್ಲಿ ಉನ್ನತ ಉದ್ಯೋಗದಲ್ಲಿರುವವರು ಎಂದೂ ಸಣ್ಣ ಕೆಲಸಕ್ಕೆ ಕೈಹಾಕುವುದಿಲ್ಲ, ಅಂತವುಗಳನ್ನು ಕೀಳರಮೆಯ ಕೆಲಸಗಳೆಂದು ಭಾವಿಸುತ್ತಾರೆ. ಆದರೆ ಬ್ರಿಟನ್‌ನಲ್ಲಿ ಪ್ರಮಾಣಿಕತೆ, ಮಾನವೀಯತೆ ಮುಖ್ಯವೆಂದು ಭಾವಿಸುತ್ತಾರೆ. ಅಲ್ಲಿನ ಅಧಿಕಾರಿಗಳು ಕರ್ತವ್ಯವನ್ನು ಕೌಟುಂಬಿಕ ಕೆಲಸಗಳಿಗೆ ದುರುಪಯೋಗಪಡಿಸಿಕೊಂಡರೂ, ಕರ್ತವ್ಯ ಲೋಪವಾದರೂ ಮರುದಿನವೇ ಪತ್ರಿಕೆಗಳಲ್ಲಿ ಟೀಕೆಗಳ ಸುರಿಮಳೆ ಎದುರಿಸುತ್ತಾರೆ. ಈ ಹಿನ್ನೆಲೆಯನ್ನು ಗಮನಿಸಿದ ಶಿವರಾಮ ಕಾರಂತರ 'ಅಪೂರ್ವ ಪಶ್ಚಿಮ' ಪ್ರವಾಸ ಕಥನದಲ್ಲಿ ಬ್ರಿಟನ್ ದೇಶ ಮುಂದುವರೆಯಲು ಇದೊಂದು ಕಾರಣವೆಂದೆ ಪ್ರಸ್ತಾಪಿಸುತ್ತಾರೆ. ಈ ಮೂಲಕ ಪಶ್ಚಿಮದ ದೇಶಗಳು ಕಾಯಕಕ್ಕೆ ಕೊಡುವ ಮಹತ್ವ ಭಾರತದಲ್ಲಿ ಬರಬೇಕಿದೆ. ಗಂಡ ಹೆಂಡತಿಯರ ನಡುವಿನ ಪ್ರೀತಿ ಸಂಬಂಧ ಸೌಹಾರ್ದತೆ ನೋಡಿದ್ದ ಲೇಖಕಿ ಪ್ರೇಮಾಭಟ್‌ರಿಗೆ ವೆನಿಸ್ ನಗರದ ಹೋಟೆಲ್‌ವೊಂದರಲ್ಲಿ ವಿದೇಶಿ ದಂಪತಿಗಳಲ್ಲಿ ಸಿಟ್ಟುಸೆಡವಿನ ಬಿರುಸುತನ ದರ್ಶನವಾಗುತ್ತದೆ. ಗಂಡ ಹೆಂಡತಿಯ ನಡುವೆ ಬಹಿರಂಗವಾಗಿ ಜಗಳವಾಗುತ್ತದೆ. ಹೆಂಡತಿ ಮಾತಿಗೆ ಪ್ರತ್ಯುತ್ತರ ಹೇಳಿದ ಗಂಡನ ನಡುವಳಿಕೆ ದಾಂಪತ್ಯವನ್ನು ಸೂಚಿಸುತ್ತಿತ್ತಾದರೂ, ಗಂಡ ಹೆಂಡತಿಯರ ಜಗಳ ಭಾರತದಲ್ಲಿ ಸರ್ವೆಸಾಮಾನ್ಯವಾಗಿರುತ್ತವೆ. 'ಬೆಚ್ಚನೆಯ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ ಇಚ್ಛೆಯನರಿದ ಸತಿಯಾಗಿ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ' ಎನ್ನುವ ಸರ್ವಜ್ಞನ ತ್ರಿಪದಿ ಬರೀ ಭಾರತದ ನೆಲಕ್ಕೆ ಅಲ್ಲ. ಇಡೀ ಜಗತ್ತಿಗೆ ಅನ್ವಯಿಸುವಂತಹದ್ದು ಎನ್ನುವ ಸತ್ಯವನ್ನು ಲೇಖಕಿ ನೆನಪಿಸಿಕೊಳ್ಳುತ್ತಾರೆ.

ಲತಾಗುತ್ತಿಯವರ 'ಯುರೋ ನಾಡಿನಲ್ಲಿ' ಪ್ರವಾಸ ಕಥನದಲ್ಲಿ ಫ್ರೆಂಚ್ ನಾಡಿನ ಅಂಗಡಿಯೊಂದರಲ್ಲಿ ಸಹಾಯಕ್ಕಾಗಿ ಕೂಗುತ್ತಾ ಟೇಬಲ್ಲಿನಡಿಗೆ ಬಚ್ಚಿಟ್ಟುಕೊಂಡಾಗ, ಮಹಿಳೆ ಮೇಲೆ ಪುರುಷನೊಬ್ಬ ಪರ್ಸ್ ಕಿತ್ತು ಹಣವನ್ನೆಲ್ಲಾ ತೆಗೆದುಕೊಂಡು ಪರ್ಸ್ ಬಿಸಾಡಿದ್ದನ್ನು ನೋಡಿ ಲೇಖಕಿಗೆ ಗಾಬರಿಯಾಗುವ ಸನ್ನಿವೇಶವಿದೆ. ಅಲ್ಲಿನ ಜನರು ಆ ಪುರುಷನನ್ನು ಬೆದರಿಸತೊಡಗಿದಾಗ, ಆತ ಶೀ ಇಸ್ ಮೈ ವೈಫ್ ಎನ್ನತೊಡಗುತ್ತ ಆಕೆಯ ಬಳಿ ಹೋದ. ಇಬ್ಬರು ಜಗ್ಗಾಡಿ ಜಗಳ ಹೆಚ್ಚಾದಾಗ ಅಲ್ಲಿನ ಜನಸಮೂಹ ಮಾಮೂಲಿ ಎಂಬಂತೆ ಹೊರ ನಡೆದರು. ಆದಾದ ಸ್ವಲ್ಪ ಹೊತ್ತಿಗೆ ಒಬ್ಬರನ್ನೊಬ್ಬರು ಮುದ್ದಿಸುತ್ತಾ ಬರುತ್ತಿದ್ದನ್ನು ಕಂಡ ಲೇಖಕಿ ಆ ಸನ್ನಿವೇಶವನ್ನು ಹೀಗೆ ದಾಖಲಿಸುತ್ತಾರೆ. "ಬಹಳ ಸುಧಾರಿತ ದೇಶಗಳಲ್ಲಿ ಗಂಡ ಹೆಂಡರು ಈ ತರಹ ಸಾರ್ವಜನಿಕವಾಗಿ ಜಗಳವಾಡುವುದಿಲ್ಲ. ಜಗಳವಾಡುವವರು ಹಳ್ಳಿಯ ಅನಾಗರಿಕರು ಎಂದು ನಾವು ತಿಳಿದಿದ್ದೆವು. ಈಗ ಇಲ್ಲಿ ಗೊತ್ತಾಯಿತು. ಭಾರತೀಯರಿಗಿಂತ ಪ್ಯಾರಿಸ್ಸೇನೊ ಹೊರತಲ್ಲವೆಂದೂ ಎಂದು ಅಂದುಕೊಳ್ಳುತ್ತಿರುವಾಗಲೇ, ನಾನು ನಿಜಕ್ಕೂ ಸ್ವಲ್ಪ ಹೊತ್ತು

ಗಲಿಬಿಲಿಗೊಂಡೆ. ಇದೆಂಥಾ ಜನ ಇವರು? ಅದೆಷ್ಟು ಬೇಗ ಘಟನೆ ಮರೆತು ಬಿಡುತ್ತಾರೆ. ಅದ್ಹೇಗೆ ಮುಖದ ಮೇಲಾದರೂ ನಗು ಬರುತ್ತದೆ? ಅಬ್ಬಬ್ಬ ಎಂದು ನಾನೇ ಪ್ರಶ್ನೆಗೆ ಉತ್ತರ ಹುಡುಕುತ್ತಾ ಅವರು ಹೋದ ಕಡೆಗೆ ನೋಡುತ್ತಾ ನಿಂತೆ."(ಲತಾಗುತ್ತಿ, ೧೯೯೩, ಪುಟ-೯೦) ಎಂದು ನಿರೂಪಿಸುತ್ತಾರೆ.

ಇದೇ ಲೇಖಕಿಯ 'ನಾ ಕಂಡಂತೆ ಅರೇಬಿಯಾ' ಕೃತಿಯಲ್ಲಿ ಲೇಖಕಿ ತಂಗಿದ್ದ ಕ್ಯಾಂಪಿನಲ್ಲಿ ಪಾಶ್ಚಾತ್ಯ ಜನರು ತಿನ್ನುವುದನ್ನು ನೋಡಿ ಅದನ್ನು ನಮ್ಮ ದೇಶಕ್ಕೆ ಹೋಲಿಸಿದರೆ ವಿಷಾದವಾಗುತ್ತದೆ ಎನ್ನುತ್ತಾರೆ. ಹೆಂಡತಿ ಮಕ್ಕಳು ಟೋಣಪು ಟೋಣಪಾಗಿದ್ದು, ಒಬ್ಬರೂ ಕೂಡ ಬಡಕಲು, ಆಶಕ್ತರು ಅನ್ನಿಸುವುದಿಲ್ಲ. ಮುದುಕಿಯರು ಕೂಡ ನೆಟ್ಟಗೆ ಮಿಲಟರಿಯವರ ಹಾಗೆ ವಾಕ್ ಮಾಡುತ್ತಾರೆ. ಇಲ್ಲಿನ ಸ್ತ್ರೀಯರು ತುಂಬಾ ಸುಂದರಿಯರಾಗಿದ್ದು, ೩೦-೩೫ವರ್ಷದ ಮಹಿಳೆಯರು ಆರೋಗ್ಯದ ಕಡೆ ಗಮನವಹಿಸದೇ ಗುಂಡು ಗುಂಡಾಗಿರುತ್ತಾರೆ. ಮಕ್ಕಳು ಮೊಮ್ಮಕ್ಕಳನ್ನು ಬೆನ್ನು ಹಚ್ಚಿಕೊಂಡು ದೊಡ್ಡ ಸಂಸಾರ ಸಾಗರದಲ್ಲಿ ಬಿದ್ದವರಂತಿದ್ದಾರೆ. ಇಲ್ಲಿಯ ಸ್ತ್ರೀಯರು ಮುಖ್ಯ ವಸ್ತುವಿನ ಜಾಹೀರಾತುಗಳಲ್ಲಿ ಕಾಣಸಿಗುವುದಿಲ್ಲ. ಈ ಕುರಿತು ಲೇಖಕಿ "ಯಾವುದೇ ಅಂಗಡಿ, ಪೇಟೆ, ಶೋ ರೂಂಗಳು, ಹೋಟೆಲ್‌ಗಳು ಬೇಕಾದಲ್ಲಿ ಹೋದರೂ ಸುಂದರಿಯರ ಜಾಹೀರಾತುಗಳಿರುವುದಿಲ್ಲ. ಬದಲಾಗಿ ಆಯಾ ವಸ್ತುಗಳದೇ ನೇರವಾದ ಜಾಹೀರಾತು ಚೆನ್ನಾಗಿರುತ್ತದೆ. ನಮ್ಮಲ್ಲಿ ಗಂಡಸರ ಬೀಡಿ ಸಿಗರೇಟುಗಳು, ಬನಿಯನ್, ಚಡ್ಡಿ, ಬ್ಲೇಡ್‌ಗಳಿಗೂ ಕೂಡ ಅರೆನಗ್ನ ಹೆಣ್ಣಿನ ಚಿತ್ರ ಇರಲೇ ಬೇಕೆನ್ನುವಷ್ಟರ ಮಟ್ಟಿಗೆ ಇಳಿದಿದ್ದರಲ್ಲ ಎಂದು ನೆನಸಿಕೊಂಡರೆ ಬೇಸರವೆನಿಸುತ್ತದೆ."(ಲತಾಗುತ್ತಿ,೧೯೯೫, ಪುಟ-೪೫) ಎಂದು ಹೇಳುತ್ತಾರೆ. ಇದು ಒಂದು ರೀತಿಯಲ್ಲಿ ಯಾವುದೇ ಉತ್ಪನ್ನವನ್ನು ಅತಿರೇಕವಾಗಿ ತೋರಿಸದೇ, ಸಹಜ ಜಾಹೀರಾತಿನಲ್ಲಿ ಪ್ರದರ್ಶಿಸುವುದು ಒಳ್ಳೆಯದು. ಉತ್ಪನ್ನಗಳ ವೈಭವೀಕರಣ ಕಂಡುಬರುವುದಿಲ್ಲ. ಇಲ್ಲಿಯ ಮಹಿಳೆಯರಿಗೆ ಅನೇಕ ನಿರ್ಬಂಧಗಳಿವೆ ಎಂಬುದನ್ನು ಮನವರಿಕೆ ಮಾಡಿ ಕೊಡುವಂತಿದೆ. ಇದಕ್ಕೆ ವಿರುದ್ಧವಾಗಿ ಭಾರತದಲ್ಲಿ ಮಹಿಳೆಯರ ಅಂಗಸೌಷ್ಟವವೇ ಮಾರುಕಟ್ಟೆಯ ಸರಕಾಗಿರುವಂತೆ ಚಿತ್ರಿಸುತ್ತಾರೆ.

ನೀಳಾದೇವಿ ಅವರ 'ನಾ ಕಂಡ ಅಖಂಡ' ಕೃತಿಯಲ್ಲಿ ಅಮೇರಿಕಾದಲ್ಲಿ ಅನೇಕ ಸಂಖ್ಯೆಯ ಭಾರತೀಯರಿದ್ದು ಅಲ್ಲೇ ನೆಲಸಿ ಪೌರತ್ವ ಪಡೆದಿರುವುದನ್ನು ವಿವರಿಸುತ್ತಾರೆ. ಭಾರತೀಯ ಸಂಸ್ಕೃತಿಯನ್ನು ಹೊತ್ತು ಗಂಡನ ಹಿಂದೆ ಬಂದ ಹೆಣ್ಣು, ಇಂದು ತನ್ನ ಹಳೆಯ ಸಂಸ್ಕಾರದೊಂದಿಗೆ ಬೆಸುಗೆ ಹಾಕಬೇಕಾಗಿದೆ. ಅವರಿಗೆ ಸಾಧ್ಯವಾದಷ್ಟು ಭಾರತೀಯತನವನ್ನು ಹೇರುವ ಅಭಿಲಾಷೆಯಿದ್ದರು ಅಮೇರಿಕಾದ ಸಂಸ್ಕೃತಿ ಭಿನ್ನವಾಗಿ ಅದುವರೆಗೆ ಕಂಡೆ ಇರದ ನೀತಿಗಳು-ಪದ್ಧತಿಗಳು ಮಕ್ಕಳಿಗೆ ಅಲ್ಲಿ ಭಾರವಾಗಿ ಕಾಣುತ್ತವೆ. ಪಾಶ್ಚಾತ್ಯ ಸಂಸ್ಕೃತಿಯ ಡೇಟಿಂಗ್, ಡ್ರೆಸ್‌ಗಳ ಅನುಕರಣೆ ಭಾರತೀಯ ತಾಯಿಂದರರಿಗೆ ಹಿಡಿಸದಿರಬಹುದು. ಹೂ ಬಿಟ್ಟಿರುವ ತನ್ನ ಸಂಸಾರದ ಹಳೆಯ ಬೇರನ್ನೇ ತಾಯಿ ನೆನೆದುಕೊಳ್ಳುತ್ತಾಳೆ. ಮಕ್ಕಳ

ಮದುವೆಯು ಹಿಂದಿನಂತೆ ಹಿರಿಯರ ಆಯ್ಕೆಯಲ್ಲಿ ನಡೆಯಬೇಕೆಂದು ಆಶಿಸುತ್ತಾಳೆ. ಅಮೇರಿಕಾದ ಸಮಾಜದ ಮುಕ್ತವಾದ ವಾತಾವರಣ ಇಷ್ಟವಾಗದೇ, ಭಾರತೀಯತೆಯನ್ನು ಬೆಳಸದೇ ಮನೋವೇದನೆಯಲ್ಲಿ ಸಿಲುಕಿ ಒದ್ದಾಡುವ ಸ್ಥಿತಿ ಅಲ್ಲಿನ ಭಾರತೀಯ ಮಹಿಳೆಯರಲ್ಲಿ ಕಂಡುಬರುತ್ತದೆ.

ತ್ರಿವೇಣಿ ಶಿವಕುಮಾರ್ ಅವರ 'ಬಹುರೂಪೀ ಭಾರತ' ಕೃತಿಯಲ್ಲಿ ಅಂಡಮಾನಿಗೆ ಪ್ರವಾಸ ಕೈಗೊಂಡಾಗ ಲೇಖಕಿಗೆ ಇಷ್ಟವಾದದ್ದು ಅಲ್ಲಿನ ಜಾತ್ಯಾತೀತತೆ. ಈ ಕುರಿತು ಲೇಖಕಿ "ಜಾತಿಯಿಲ್ಲದೆ ಅಂಡಮಾನ್ ನನಗೆ ಬಹು ಸೇರಿತು. ಒಂದು ಮನೆಯಲ್ಲಿ ಮೂರು ಜನ ಗಂಡು ಮಕ್ಕಳಿದ್ದರೆ ಒಬ್ಬ ಸೊಸೆ ಕ್ರಿಶ್ಚಿಯನ್, ಇನ್ನೊಬ್ಬಳು ಮುಸ್ಲಿಮ್, ಮತ್ತೊಬ್ಬಳು ಹಿಂದೂ ಸೊಸೆ. ಇಲ್ಲಿರುವುದು ಅತೀ ಸಾಮಾನ್ಯರಂತೆ ಎಲ್ಲರೂ ಎಲ್ಲ ಹಬ್ಬಗಳನ್ನು ಆಚರಿಸುತ್ತಾರೆ. ಮಸೀದಿ, ಚರ್ಚು, ದೇವಸ್ಥಾನಗಳು ಅಂಡಮಾನಿನಲ್ಲಿ ಇಲ್ಲವೆಂದಲ್ಲ, ಆದರೆ ತಮ್ಮ ತಮ್ಮ ಮೂಲದ ಕುಲಗೋತ್ರಗಳು ಅಲ್ಲಿ ಜನಗಳಿಗೆ ಗೊತ್ತೇ ಇಲ್ಲ ಅಥವಾ ಮರೆತು ಹೋಗಿದ್ದಾರೆ ಎಲ್ಲರೂ ಕಲೆಬೆರಕೆಯಾಗಿದ್ದಾರೆ."(ತ್ರಿವೇಣಿ ಶಿವಕುಮಾರ್, ೨೦೧೦, ಪುಟ-೩೪೪) ಎಂದು ದಾಖಲಿಸಿದ್ದಾರೆ. ಅಂಡಮಾನಿನ ಜಾತಿಯತೆಯಿಲ್ಲದ ಈ ಕುಟುಂಬಗಳು ಭಾರತದ ಬಹುತ್ವದ, ವಿವಿಧತೆಯಲ್ಲಿ ಏಕತೆಯನ್ನು ಪ್ರತಿನಿಧಿಸುವಂತೆ ಕಾಣುತ್ತದೆ. ಅಂಡಮಾನಿನಲ್ಲಿ ಬಹುತೇಕ ವಲಸಿಗರು ವಾಸಿಸುವುದರಿಂದಾಗಿ ಜಾತಿಯತೆ ಮುಖ್ಯವಾಗಿ ಕಂಡಿಲ್ಲ. ಹೀಗಾಗಿ ಮಹಿಳೆಯರು ಸಾಂಸ್ಕೃತಿಕವಾಗಿ ಕ್ರಿಯಾಶೀಲರಾಗಿದ್ದಾರೆ. ಸರ್ವಧರ್ಮ ಸಮನ್ವಯವನ್ನು ಕಂಡುಕೊಂಡಿದ್ದಾರೆ.

ಲಂಡನ್ ಪ್ರವಾಸ ಕೈಗೊಂಡ ಇಂದಿರಾ ಶಿವಣ್ಣ ಅವರ 'ಹಾಲೆಂಡ್‌ನಿಂದ ಲಂಡನ್‌ವರೆಗೆ' ಕೃತಿಯಲ್ಲಿ ಡಚ್ಚರ ನಾಡಾದ ಅಮ್‌ಸ್ಟರ್ ಡ್ಯಾಂನಲ್ಲಿ ಇರುವ ಮಹಿಳಾ ಶೌಚಾಲಯದ ಬಗ್ಗೆ ವಿವರಿಸುತ್ತಾ, ಅದನ್ನು ಭಾರತೀಯ ಶೌಚಾಲಯದೊಂದಿಗೆ ಮುಖಾಮುಖಿಗೊಳಿಸುವ ಸನ್ನಿವೇಶವಿದೆ. ಸಾರ್ವಜನಿಕ ಶೌಚಾಲಯದಲ್ಲಿ ಪ್ರವಾಸ ಹೋದವರೆಲ್ಲರಿಗೂ ಅಲ್ಲಿನ ಶೌಚಾಲಯ ನೋಡಿ ಗಾಬರಿ ಹುಟ್ಟಿಸಿತ್ತು. ಮಹಿಳೆಯರೆಲ್ಲ ಸೀರೆ ಉಡುವುದು, ಕೂದಲು ಸರಿ ಪಡಿಸಿಕೊಳ್ಳುವುದು, ಒಟ್ಟಿನಲ್ಲಿ ಆ ಸ್ಥಳವು ಭಾರತೀಯ ಮೀನು ಮಾರುಕಟ್ಟೆಯಂತಾಗಿತ್ತು. ಟಾಯ್ಲೆಟ್‌ಗಳನ್ನು ಸ್ವಚ್ಛಗೊಳಿಸುವ ವಿದೇಶಿ ಮಹಿಳೆಯರು ಇವರ ಗುಂಪು, ಮಾತುಗಾರಿಕೆ, ಗದ್ದಲ ನೋಡಿ ದೂಷಿಸುತ್ತಿದ್ದರು. ಆಕೆಯ ಸಿಡುಕತನ ನೋಡಿಯೇ ಲೇಖಕಿ ನಿಸ್ಸಾಹಯಕಳಾಗಿದ್ದಳು. ಯುರೋಪಿಯನ್ ಮಹಿಳೆಯರು ಒಳಬಂದು ಲಿಪ್‌ಸ್ಟಿಕ್ ಹಚ್ಚುತ್ತಾ ಕನ್ನಡಿಯಲ್ಲಿ ದಿಟ್ಟಿಸಿ ನೋಡಿ ಅಸಮಾಧಾನ ಹೊರಹಾಕುತ್ತಿದ್ದರು. ಭಾರತದಲ್ಲಿ ಗುಂಪು ಜನರಿದ್ದಾಗ ಮಾತುಕತೆ, ಹರಟೆ, ಕುಹುಕಗಳು ಸಹಜವಾಗಿರುತ್ತವೆ. ಈ ಗಜಿಬಿಜಿಯು ವಿದೇಶಿಯರಿಗೆ ಇರಿಸುಮುರುಸು ತಂದಿರಬಹುದು. ಸ್ವಚ್ಛತೆಗೆ ಆದ್ಯತೆ ನೀಡುವ ವಿದೇಶಿಯರು ಬಹುತೇಕ ಒಂಟಿ ಕುಟುಂಬ ಅಥವಾ ಒಂಟಿಯಾಗಿ ಬದುಕುವವರಾಗಿದ್ದಾರೆ. ತುಂಬು ಕುಟುಂಬ, ಸಂಬಂಧಿಕರನ್ನು

ಕಂಡವರಲ್ಲ. ಗುಂಪಾಗಿಯೇ ಬೆಳೆದ ಭಾರತೀಯರ ಧೋರಣೆಗಳು ನೋಡಿದಾಗ ವಿದೇಶಿಯರಿಗೆ ಸಹಜವಾಗಿಯೇ ಇರಿಸುಮುರಿಸಾಗುತ್ತದೆ.

ಜಲಜಾ ಗಂಗೂರು ಅವರ 'ಅವನಿಯ ಅಪ್ಸರೆ ಅಮೇರಿಕೆ'ದಲ್ಲಿ ಭಾರತ ಮತ್ತು ವಿದೇಶಿಯರ ನಡುವಿನ ವ್ಯತ್ಯಾಸಗಳನ್ನು ದಾಖಲಿಸುತ್ತಾರೆ. ಪ್ರವಾಸದ ಸಂದರ್ಭದಲ್ಲಿ ಮೊದಲ ಬಾರಿಗೆ ಕುರೂಪಿ ಜನರನ್ನು ನೋಡಿದ್ದರ ಬಗ್ಗೆ ಪ್ರಸ್ತಾಪಿಸುವ ಲೇಖಕಿಯು ಅವರನ್ನು ಪುರಾಣಗಳಲ್ಲಿ ಬರುವ ರಾಕ್ಷಸ ಸಂತತಿಗಳೆಂದಿದ್ದಾರೆ. ಲೇಖಕಿಯನ್ನು ವೀಲ್ ಛೇರಿನಿಂದ ಕರೆದುಕೊಂಡು ಬಂದ ಮಹಿಳೆಯು 'ಖುಷಿ'ಯನ್ನು ಕೇಳಲಿಲ್ಲ. ಈ ಬಗ್ಗೆ ಆಕೆಯನ್ನು ಪ್ರಶ್ನಿಸಿದಾಗ, ಇಲ್ಲಿ ಯಾರು ಹಣ ಕೇಳುವುದಿಲ್ಲ, ಇಲ್ಲಿ ಇದೆಲ್ಲಾ ಇಲ್ಲ ಎನ್ನುತ್ತಾಳೆ. ಭಾರತದ ಆಸ್ಪತ್ರೆಗಳಲ್ಲಿ ನರ್ಸ್‌ಗಳು ರೋಗಿಗಳಿಂದ ಹಣ ಕೇಳುವುದನ್ನು ಲೇಖಕಿ ನೆನಪಿಸಿಕೊಂಡು ಬೇಸರಿಸಿಕೊಳ್ಳುತ್ತಾರೆ. ವಿಮಾನ ನಿಲ್ದಾಣದಲ್ಲಿ ಲೇಖಕಿಗೆ ಆದ ಅನುಭವವನ್ನು ದಾಖಲಿಸುವಲ್ಲಿ ಎರಡು ದೇಶಗಳ ಸಂಸ್ಕೃತಿಗಳನ್ನು ಮುಖಾಮುಖಿಯಾಗಿಸುತ್ತಾರೆ. ಅಲ್ಲಿನ ವಿಮಾನ ನಿಲ್ದಾಣವೊಂದರಲ್ಲಿ ಪ್ರಶ್ನೆಗಳನ್ನು ಕೇಳಿ ಉತ್ತರಕೊಟ್ಟ ಸಮಾಧಾನವಾಗಿದ್ದ ಲೇಖಕಿಗೆ ಕೈಚೀಲ ತಪಾಸಣೆಯ ಸಂದರ್ಭದಲ್ಲಿ, ದೇಹದ ಪ್ರತಿಯೊಂದು ಅವಯವವನ್ನು ಮುಟ್ಟಿ ಪರೀಕ್ಷೆ ಮಾಡುವ ರೀತಿ, ಲೇಖಕಿ ಮನಸ್ಸಿಗೆ ಮುಜುಗರವನ್ನು, ನಾಚಿಕೆಯನ್ನು ಉಂಟುಮಾಡುತ್ತದೆ. ಹೆಂಗಸರಿಗೆ ಹೆಂಗಸರೇ ಪರೀಕ್ಷಿಸಲಿದ್ದರೂ ಸಂಪ್ರದಾಯಸ್ಥ ಮನೆತನದಿಂದ ಬಂದವರಿಗೆ ಇದೊಂದು ಮುಜುಗರದ ಉಂಟು ಮಾಡುತ್ತದೆ ಎನ್ನುತ್ತಾರೆ. ಪಾಶ್ಚಿಮಾತ್ಯ ಮತ್ತು ಭಾರತದಲ್ಲಿ ದೇಹದ ಕುರಿತಾಗಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಸಹಜವಾಗಿ ಇಂತಹ ಪರೀಕ್ಷೆಗಳಿಂದಾಗಿ ಭಾರತೀಯ ಹೆಣ್ಣುಮಕ್ಕಳು ವಿದೇಶಗಳ ಭೇಟಿ ಸಂದರ್ಭದಲ್ಲಿ ಗೊಂದಲಕ್ಕಿಡುಗುತ್ತಾರೆ.

ಲೇಖಕಿಯ ಸೀರೆಯ ಉಡುಗೆ ನೋಡಿದ ಅಲ್ಲಿನ ಜನರು ವಿಚಿತ್ರವಾದ ಸರ್ಕಸ್ ಪ್ರಾಣಿ ಎಂದು ನೋಡಿದ ಬಗ್ಗೆ ಹೇಳಿಕೊಂಡಿದ್ದಾರೆ. 'ಅಮೇರಿಕಾ: ವಾಸ-ಪ್ರವಾಸ' ಕೃತಿಯಲ್ಲಿ ಪದ್ಮಾಶಣೈ ಅವರು ಅಮೇರಿಕಾದಲ್ಲಿನ ಮಹಿಳೆಯರಿಗೂ ಅಲ್ಲಿನ ಪುರುಷ ಸಮಾಜದಿಂದಾಗುವ ವಿರೋಧಭಾಸದ ಅನುಭವಗಳನ್ನು ದಾಖಲಿಸಿದ್ದಾರೆ. ಜಾಗಿಂಗ್‌ನಲ್ಲಿ ಸರ್ವೆ ಸಾಮಾನ್ಯವಾಗಿ ಮಕ್ಕಳಿಂದ ಹಿಡಿದು ಮುದುಕರವರೆಗೂ ರಸ್ತೆಯಲ್ಲಿ ಓಡಾಡುತ್ತಾರೆ. ಪಾರ್ಕಿನಲ್ಲಿ ಹುಡುಗನೊಬ್ಬ ಆಶ್ಲೀಲವಾಗಿ ಹೆಂಗಸರನ್ನು ಬೈದು, ಮಹಿಳೆಯೊಬ್ಬಳನ್ನು ಅಡ್ಡಬೀಳಿಸಿ, ಬಟ್ಟೆ ಬರೆ ಹರಿದಿದ್ದಾನೆ. ಇದು ಭಾರತದಲ್ಲಿ ಕೆಲವು ಕಡೆ ಇಂತಹ ಘಟನೆಗಳು ಸಂಭವಿಸುತ್ತವೆ. ಅಮೇರಿಕಾದಲ್ಲೂ ಇಂತಹ ಘಟನೆಗಳು ನಡೆಯುವುದು ಲೇಖಕಿ ಪದ್ಮಾಶಣೈ ಅವರಿಗೆ ಆಶ್ಚರ್ಯವನ್ನುಂಟು ಮಾಡುತ್ತದೆ.

ಟಿಬೇಟಿಯನ್ನರ ಸಾಂಸ್ಕೃತಿಕ ಲೋಕವನ್ನು ಮಮತಾರಾವ್ ಅವರು 'ಕೈಲಾಸಾಧಿಪತಿಯ ಮನೆಯಂಗಳದಲ್ಲಿ' ಎಂಬ ಕೃತಿಯಲ್ಲಿ ನಿರೂಪಿಸಿದ್ದಾರೆ. ಪಕಲಾಕೋಟೆಯಲ್ಲಿ ಟಿಬೇಟಿಯನ್ನರಗಿಂತ

ಚೀನಾದವರೇ ಹೆಚ್ಚಿನವರಿದ್ದು, ಚೀನಿ ಪುರುಷರ ತೋಳಿಗೆ ತೆಕ್ಕೆಬಿದ್ದವರಂತೆ ಚೀನಿ ಮಹಿಳೆಯರು ವರ್ತಿಸುತ್ತಾರೆ. ಅವರ ಹಾವಭಾವಗಳು ಕಂಡ ಲೇಖಕಿಯು ಬಹುಶಃ ವೇಶ್ಯೆರಾಗಿರಬೇಕು ಎಂದುಕೊಳ್ಳುತ್ತಾರೆ. ಹೆಣ್ಣು ಗಂಡೆಂಬ ಭೇದವಿಲ್ಲದೆ ಎಲ್ಲರ ಬಾಯಲ್ಲೂ ಉರಿಯುವ ಸಿಗರೇಟುಗಳಿದ್ದವು. ವೇಶ್ಯಾವಾಟಿಕೆ ಜೋರಾಗಿ ನಡೆಯುತ್ತಿತ್ತು. ಬಡತನ ಕಣ್ಣಿಗೆ ರಾಚುವಂತಿತ್ತು. ಟಿಬೇಟಿನ ಅಶಿಕ್ಷಿತ ಯುವ ಜನಾಂಗದ ಬಗ್ಗೆ ಲೇಖಕಿಗೆ ತುಂಬಾ ಖೇಧವೆನಿಸಿತ್ತದೆ. ಚೀನಿ ಸರ್ಕಾರವೇ ಆಧುನಿಕತೆಯ ಹೆಸರಲ್ಲಿ ಸಂಸ್ಕೃತಿಯನ್ನು ನಾಶಗೊಳಿಸುವ ಪರಿಯನ್ನು ಮಾಡುತ್ತದೆ ಎಂದು ಹೇಳುತ್ತಾರೆ.

ಜರ್ಮನ್ ದೇಶದಲ್ಲಿನ ಭಾರತೀಯ ಉಡುಗೆಗಳನ್ನು ಕಂಡು ಆಸಕ್ತಿ, ಕುತೂಹಲ ಅವರಿಗೆ ಮೂಡಿದ್ದಾಗಿ ಸುಭಾಷಿಣಿ ಅವರು 'ಜರ್ಮನಿಯ ಒಡಲಿಲ್ಲ' ಎಂಬ ಕೃತಿಯಲ್ಲಿ ಲೇಖಕಿ ಹೇಳುತ್ತಾರೆ. ಲೇಖಕಿಯ ಸೀರೆಯನ್ನು ಗಮನಿಸಿದ ವಿದೇಶಿ ಪರಿಚಿತ ಮಹಿಳೆಯು ಸೀರೆಯು ಸಭ್ಯ ಉಡುಗೆ ಎನ್ನುತ್ತಾರೆ. ಆದರೆ ಅದು ಮೈ ತೋರಿಸುತ್ತಲ್ಲ ಎನ್ನುವ ಪ್ರಶ್ನೆಗಳನ್ನು ಕೇಳುತ್ತಾಳೆ. ಇದಕ್ಕೆ ಲೇಖಕಿ ಅದೊಂದು ಬೇಲಿಯಿದ್ದ ಹಾಗೆ, ಸುಂದರ ಹೂದೋಟದ ನೋಟ ಸಿಕ್ಕರೂ, ಉಡುವಲ್ಲಿ ಮಿತಿಯನ್ನು ದಾಟುವಂತಿಲ್ಲ ಎಂದು ಲೇಖಕಿ ಉತ್ತರಿಸುತ್ತಾರೆ. ತೆಳ್ಳಗಿನ ಮೈಮಾಟವಿಲ್ಲದೇ ಭಾರತದಲ್ಲಿ ಮಧ್ಯ ವಯಸ್ಸಿನ ದಡೂತಿ ಮಹಿಳೆಯರು ಚೂಡಿದಾರ್ ಧರಿಸುವ ಕುರಿತು ಪ್ರಶ್ನೆಗಳು ಎತ್ತಿದ್ದರು. ಅಲ್ಲದೇ ಈಗೀಗ ಸೀರೆ ಫ್ಯಾಷನಬಲ್ ಅಲ್ಲ ಎಂದಾಗ, ಸೀರೆ ಭಾರತದ ಸಂಪ್ರದಾಯಸ್ಥ ಉಡುಗೆಯಾಗಿದೆ. ಹಬ್ಬ, ಕಾರ್ಯಕ್ರಮಗಳಲ್ಲಿ ಸೀರೆಯನ್ನು ಕೊಡುಗೆಯಾಗಿ ನೀಡುವುದು ಸಂಪ್ರದಾಯವಾಗಿದೆ ಎನ್ನುತ್ತಾರೆ. ಆ ವಿದೇಶಿ ಮಹಿಳೆಗೆ ಸೀರೆ ಉಡಿಸಿದ ಲೇಖಕಿ, ಅವರಿಗೆ ಸೀರೆ ಚೆನ್ನಾಗಿ ಒಪ್ಪುತ್ತಿತ್ತು. ಮಹಾರಾಣಿಯ ಹಾಗೆ ಕಾಣಿಸುತ್ತಿದ್ದೀರಾ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಜರ್ಮನಿಯ ಮಹಿಳೆಯರು ಅಮೇರಿಕಾದ ಮಹಿಳೆಯರಂತೆ ಮುಕ್ತ ಸಮಾಜದಲ್ಲಿರುವುದು ಲೇಖಕಿಗೆ ಕಂಡುಬರುತ್ತದೆ. ಗಂಡು ಹೆಣ್ಣುಗಳಲ್ಲಿ ಸ್ವೇಚ್ಚೆ ಪ್ರಣಯ ಪ್ರವೃತ್ತಿ ಸರ್ವೆಸಾಮಾನ್ಯವಾದದ್ದು. ಮದುವೆಯಾಗದೇ ಒಟ್ಟಿಗೆ ಬಾಳುವೆ ನಡೆಸುತ್ತಾರೆ. ಸಾರ್ವಜನಿಕ ಸ್ಥಳದಲ್ಲೇ ಮೈಮರೆತು ಮತ್ತು ಲೈಂಗಿಕ ಕ್ರಿಯೆಗೆ ತೊಡಗುವುದು ಎಲ್ಲೆಡೆ ಕಂಡು ಬರುವ ದೃಶ್ಯ. ನೋಡಲು ಜರ್ಮನರು ಎತ್ತರವಾಗಿ, ಬೆಳ್ಳಗೆ, ದೃಢವಾದ ಮೈಕಟ್ಟು ಹೊಂದಿರುವಂತವರಾಗಿದ್ದರೆಂದು ಹೇಳುತ್ತಾರೆ.

ಪ್ರವಾಸ ಕಥನಗಳೆಂದರೆ ವಿಭಿನ್ನ ಸಂಸ್ಕೃತಿಯ ನೆಲೆಗಳನ್ನು ಪರಿಚಯಿಸುವ ಕಥನಗಳಾಗಿರುತ್ತವೆ. ಏಕಮುಖ ಸಂಸ್ಕೃತಿಯ ಚಹರೆಗಳು ಪ್ರವಾಸ ಕಥನಗಳಲ್ಲಿ ಕಾಣಲಿಕ್ಕೆ ಸಾಧ್ಯವಿಲ್ಲ. ಚಾರಿತ್ರಿಕ ಅಧ್ಯಯನಗಳ ಜಾಡಿನಿಂದ ಪ್ರವಾಸ ಕಥನಗಳು ಸಾಗಿದ ದಾರಿ ಈಗ ಭಿನ್ನವಾಗಿದೆ. ಅದರಲ್ಲೂ ಮಹಿಳಾ ಪ್ರವಾಸ ಕಥನಗಳಲ್ಲಿ ಬಹುಸಂಸ್ಕೃತಿಯನ್ನು ಪ್ರತಿನಿಧಿಸುವ ಅಂಶಗಳೇ ಹೆಚ್ಚಿರುತ್ತವೆ. ಒಂದು ಪ್ರದೇಶದಲ್ಲಿ ಬದುಕಿದವರಿಗೆ ಮತ್ತೊಂದು ಪ್ರದೇಶದ ಬಗ್ಗೆ ವಿಭಿನ್ನ ಊಹೆಗಳಿರುತ್ತವೆ. ಅವುಗಳನ್ನು ಬುಡಕಟ್ಟು ಮಹಿಳಾ ಸಂಸ್ಕೃತಿ, ದಲಿತ ಮಹಿಳಾ

ಸಂಸ್ಕೃತಿ, ಮಹಿಳಾ ಶ್ರಮ ಸಂಸ್ಕೃತಿ, ವಿದೇಶಿ ಮಹಿಳಾ ಸಂಸ್ಕೃತಿ, ಭಾರತೀಯ ಮತ್ತು ಮಹಿಳಾ ಸಂಸ್ಕೃತಿ ಪರಸ್ಪರ ಮುಖಾಮುಖಿಯ ನೆಲೆಗಳಲ್ಲಿ ನೋಡಿದಾಗ ಮಹಿಳಾ ಜಗತ್ತು ಭೌಗೋಳಿಕವಾಗಿ ಭಿನ್ನವಾದರೂ, ಮಹಿಳೆಯರ ಸ್ಥಿತಿಗತಿಗಳು ಹೆಚ್ಚು ಕಡಿಮೆ ಒಂದೇ ದಾರಿಯಲ್ಲಿ ಸಾಗುತ್ತವೆ. ಜಾಗತಿಕವಾಗಿ ಮುಂದುವರೆದ ದೇಶಗಳಲ್ಲಿ ಮಹಿಳೆಯರನ್ನು ಸಾಮಾನವಾಗಿ ಕಂಡರೇ, ಮುಂದುವರೆಯುತ್ತಿರುವ ದೇಶಗಳಲ್ಲಿ ಸಮಾನತೆ ಎಂಬುದು ಮರಿಚಿಕೆಯಾಗಿಯೇ ಇದೆ. ಬುಡಕಟ್ಟು ಸಮುದಾಯದ ಮಹಿಳೆಯರ ಬದುಕು ಆಧುನಿಕ ಕಾಲಕ್ಕೂ ಬೆಳಕನ್ನು ಕಂಡಿಲ್ಲ. ದಲಿತ ಮಹಿಳೆಯ ಜೀವನಾನುಭವ ಕನ್ನಡದ ಪ್ರವಾಸ ಕಥನಗಳಲ್ಲಿ ಬಹುತೇಕ ವಿರಳವಾಗಿದೆ. ಸಾಂಸ್ಕೃತಿಕ ವಲಯದಲ್ಲಿ ಮುಂದುವರೆದಿರುವ ವಿದೇಶಿ ಮಹಿಳೆಯರಿಗೆ ಸ್ವತಂತ್ರ ಸಿಕ್ಕು ಮುಕ್ತ ವಾತಾವರಣದಿಂದಾಗಿ ಅವರು ಸಾಮಾಜಿಕವಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಶ್ರಮಿಕ ಮಹಿಳೆಯರ ಜೀವನ ಕ್ರಮ ವಿದೇಶಗಳಲ್ಲಿ ಭಿನ್ನವಾದರೆ, ಭಾರತದಲ್ಲಿ ಶ್ರಮ ಪಡುವ ಮಹಿಳೆಯರ ಜೀವನಕ್ರಮ ಹೆಚ್ಚೇನು ಬದಲಾವಣೆಯಾಗಿಲ್ಲ. ದೇಶ-ವಿದೇಶಗಳಲ್ಲಿ ಪ್ರವಾಸ ಕೈಗೊಂಡ ಬಹುಪಾಲು ಭಾರತೀಯ ಮಹಿಳೆಯರು ವಿದೇಶಿ ಸಂಸ್ಕೃತಿಯನ್ನು ಕಂಡು ಮುಜುಗರಕ್ಕಿಡಾದ ಸನ್ನಿವೇಶಗಳೇ ಮಹಿಳಾ ಪ್ರವಾಸ ಕಥನಗಳಲ್ಲಿ ಹೆಚ್ಚಾಗಿ ದಾಖಲಾಗಿವೆ.

❑❑❑

ಅಧ್ಯಾಯ ಆರು

ಪ್ರವಾಸ ಕಥನಗಳಲ್ಲಿ ಮಹಿಳೆಯರ ಕ್ರಿಯಾಶೀಲ ಬದುಕಿನ ಅಭಿವ್ಯಕ್ತಿ

೬.೧ ಕೌಟುಂಬಿಕ ನೆಲೆಯಲ್ಲಿ ಮಹಿಳೆಯರ ಕ್ರಿಯಾಶೀಲತೆ

೬.೨. ಔದ್ಯೋಗಿಕ ರಂಗದಲ್ಲಿ ಮಹಿಳೆಯರ ಕ್ರಿಯಾಶೀಲತೆ

೬.೩. ಸಾಮಾಜಿಕ ವಲಯದಲ್ಲಿ ಮಹಿಳೆಯರ ಕ್ರಿಯಾಶೀಲತೆ

೬.೪. ಸಾಂಸ್ಕೃತಿಕ-ಶೈಕ್ಷಣಿಕ ಕ್ಷೇತ್ರದಲ್ಲಿ ಮಹಿಳೆಯರ ಕ್ರಿಯಾಶೀಲತೆ

ಅಧ್ಯಾಯ ಆರು

ಪ್ರವಾಸ ಕಥನಗಳಲ್ಲಿ ಮಹಿಳೆಯರ ಕ್ರಿಯಾಶೀಲ ಬದುಕಿನ ಅಭಿವ್ಯಕ್ತಿ

ಮಹಿಳಾ ಪ್ರವಾಸ ಕಥನಗಳಲ್ಲಿ ಬಹುಮುಖ್ಯವಾಗಿ ಎದ್ದು ಕಾಣುವುದು ಲೇಖಕಿಯರ ಅಂತಃಕರಣ. ಪ್ರವಾಸದ ಅನುಭವಗಳಲ್ಲಿ ಜಗತ್ತಿನ ವಿವಿಧ ದೇಶಗಳಲ್ಲಿನ ಮಹಿಳೆಯರ ಬದುಕು ಹೇಗೆ ಅಭಿವ್ಯಕ್ತವಾಗಿದೆ ಎಂಬುವುದರ ಜೊತೆಗೆ ನಿರೂಪಿಸುವ ಹಲವು ವಿಷಯಗಳು ಇಲ್ಲಿ ಮುಖ್ಯವಾಗುತ್ತವೆ. ಅಲ್ಲದೇ ಮಹಿಳೆಗೆ ಈಗ ಇರುವುದು ಸಂಸಾರಿಕ ಜವಾಬ್ದಾರಿಯೊಂದೇ ಅಲ್ಲ. ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಔದ್ಯೋಗಿಕ ರಂಗಗಳಲ್ಲಿಯೂ ಮಹತ್ವದ ಸ್ಥಾನವಿದೆ. ಎಲ್ಲಾ ರಂಗಗಳಲ್ಲಿ ದುಡಿಯುವ ಕಾರಣಕ್ಕೆ ಮಹಿಳೆಯ ಕ್ರಿಯಾಶೀಲ ಬದುಕು ಇಂದು ಪ್ರಾಧಾನ್ಯತೆ ಪಡೆದಿದೆ. ಅಲ್ಲದೇ ಬೇರೆ ಬೇರೆ ದೇಶಗಳಲ್ಲಿ ಮಹಿಳಾ ಬದುಕಿನ ಅಭಿವ್ಯಕ್ತಿಗಳು ಮುಖ್ಯವಾಗುತ್ತವೆ. ಮಹಿಳಾ ಪ್ರವಾಸಿಗರು ಭಿನ್ನವಾದರೂ, ತಾವು ಪ್ರವಾಸ ಕೈಗೊಳ್ಳುವ ಭೌಗೋಳಿಕತೆಯಲ್ಲಿ ಭಿನ್ನತೆಯಿದ್ದರೂ, ಆಚರಣೆಗಳಲ್ಲಿ ಎಷ್ಟೇ ವೈಶಿಷ್ಟ್ಯವಿದ್ದರೂ ಮಹಿಳೆಯರ ಬದುಕಿನ ಕ್ರಿಯಾಶೀಲತೆ ಎಂದಾಗ ಒಂದು ಪರಿಧಿಯಲ್ಲಿ ನಿಂತು ಬಿಡುತ್ತವೆ. ಆ ಪರಿಧಿಯ ಒಳಗೆ ಬದುಕುವ ಮಹಿಳೆಯರ ಕ್ರಿಯಾಶೀಲತೆ ಸ್ವಾಸ್ಥ್ಯ ಸಮಾಜದ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಸ್ವದೇಶಿ ಮತ್ತು ವಿದೇಶಿ ಮಹಿಳಾ ಪ್ರವಾಸ ಕಥನಗಳಲ್ಲಿ ಮಹಿಳೆಯರ ಕ್ರಿಯಾಶೀಲ ಬದುಕಿನ ವಿನ್ಯಾಸಗಳು ಬಹು ಆಯಾಮಗಳಿಂದ ನಿರೂಪಿಸಲಾಗಿದೆ.

೬.೧. ಕೌಟುಂಬಿಕ ವಲಯದಲ್ಲಿ ಮಹಿಳೆಯರ ಕ್ರಿಯಾಶೀಲತೆ

ಮನುಷ್ಯರು ಸಂಘ ಜೀವಿಗಳು. ಸಮುದಾಯ ಜೀವಿಗಳು. ಸಂಘಟನಾತ್ಮಕವಾಗಿ ಬದುಕುವ ಅವರ ಸಂಸ್ಕೃತಿ ನಿರಂತರವಾಗಿರುತ್ತದೆ. ಮನುಷ್ಯರು ಸಂಘ ಜೀವಿಗಳಾಗಿ ಜೀವಿಸಲು ಶುರು ಮಾಡಿದಂದಿನಿಂದ ಹಲವು ಕಟ್ಟುಪಾಡುಗಳನ್ನು ಮಾಡಿಕೊಂಡರು. ಅದರಲ್ಲಿ ಕುಟುಂಬ ವ್ಯವಸ್ಥೆಯು ಒಂದು. ಇಂತಹ ಕುಟುಂಬ ವ್ಯವಸ್ಥೆಯ ಪದ್ಧತಿಗಳು ಜಗತ್ತಿನ ಹಲವು

ದೇಶಗಳಲ್ಲಿ ಭಿನ್ನವಾದ ಆಚರಣೆಗಳನ್ನು ಹೊಂದಿವೆ. ಮುಂದುವರೆದ, ಹಿಂದುಳಿದ ಹಾಗೂ ಸಂಪ್ರದಾಯಸ್ಥ ದೇಶಗಳಲ್ಲಿ ಕುಟುಂಬಗಳ ರಚನಾ ವಿಧಾನ ಬೇರೆ ಬೇರೆಯಾಗುತ್ತಾ ಹೋಗುತ್ತವೆ. ಪ್ರಾಚೀನ ಕಾಲದಲ್ಲಿದ್ದ ಮಾತೃಪ್ರಧಾನ ಕುಟುಂಬಗಳು ಆಧುನಿಕ ಕಾಲಕ್ಕೆ ಬರುವ ಹೊತ್ತಿಗೆ ಪುರುಷ ಪ್ರಧಾನ ಕುಟುಂಬಗಳಾಗಿ ಮಾರ್ಪಟ್ಟಿವೆ. ಕೆಲವು ಭಾಗಗಳಲ್ಲಿ ಸ್ತ್ರೀ ಪ್ರಧಾನವಾದ ಆಚರಣೆಗಳನ್ನೇ ಗೌರವಿಸಿಕೊಂಡು ಬರುತ್ತಿವೆ. ದೇಶದಿಂದ ದೇಶಕ್ಕೆ ಕೌಟುಂಬಿಕ ವಲಯದಲ್ಲಿ ಮಹಿಳೆಯರು ನಿರ್ವಹಿಸುವ ಜವಾಬ್ದಾರಿಗಳು ಮಹತ್ವವೆನಿಸುತ್ತವೆ.

ಜರ್ಮನ್ ದೇಶದ ಕುಟುಂಬಗಳಲ್ಲಿ ಪುರುಷರಿಗೆ ಸರಿಸಮಾನವಾಗಿ ಮಹಿಳೆಯರೂ ದುಡಿಯುವುದಕ್ಕೆ ಅವಕಾಶಗಳು ಇರುವ ಕುರಿತು ಅನುಪಮಾ ನಿರಂಜನ ಅವರು 'ಸ್ನೇಹಯಾತ್ರೆ' ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಇಲ್ಲಿನ ಮಹಿಳೆಯರಿಗೆ ಕುಟುಂಬ, ಸಮಾಜ, ಮನೆ, ಮಕ್ಕಳನ್ನು ನಿಭಾಯಿಸುವುದು ಸುಲಭವೆಂದು ಭಾವಿಸುತ್ತಾರೆ. ಅಲ್ಲದೇ ಕುಟುಂಬ ನಿರ್ವಹಣೆಗಾಗಿ ಅನೇಕ ಸೌಕರ್ಯಗಳನ್ನು ಸರ್ಕಾರವೇ ಒದಗಿಸುತ್ತದೆ. ಅರ್ಸುಲಾ ಎಂಬಾಕೆ ಅಡುಗೆ ಮಾಡುವುದು ಸಮಸ್ಯೆಯೇ ಅಲ್ಲ, ಗಂಡನೂ ಮನೆ ಕೆಲಸದಲ್ಲಿ ಸಹಾಯ ಮಾಡುತ್ತಾನೆ ಎನ್ನುತ್ತಾಳೆ. ಆಕೆಯ ದೃಷ್ಟಿಯಲ್ಲಿ ಮದುವೆ ಅಂದರೆ ಪರಸ್ಪರ ಪ್ರೀತಿಸೋರು ಒಟ್ಟಿಗೆ ಇರೋದು ಅನ್ನುವ ಅವರು ಆರ್ಥಿಕ ಭದ್ರತೆಗಾಗಿ ಖಂಡಿತ ಮದುವೆ ಮಾಡಿಕೊಳ್ಳುವವರಲ್ಲ. ಮದುವೆ ಆದ ಮೇಲೆ ನಮಗೆ ಆರ್ಥಿಕ ಸ್ವಾತಂತ್ರ್ಯ ಇರುತ್ತದೆ. ಆಕೆಯ ಈ ಮಾತುಗಳಲ್ಲಿ ಕುಟುಂಬದ ಮೇಲಿನ ಪ್ರೀತಿಯನ್ನು ತೋರ್ಪಡಿಸುತ್ತದೆ. ಕುಟುಂಬವನ್ನು ಮುನ್ನೆಡೆಸಲು ಬೇಕಿರುವುದು ಅಧಿಕಾರವಲ್ಲ, ಹಣವೂ ಅಲ್ಲ, ಪ್ರೀತಿ ಎನ್ನುತ್ತಾರೆ. ಲೇಖಕಿಗೆ ಅರ್ಸುಲಾಳ ಮಾತುಗಳು ಅರ್ಥಪೂರ್ಣವೆನಿಸುತ್ತವೆ. ಕುಟುಂಬದೊಳಗೆ ಕ್ರಿಯಾಶೀಲ ಮನೋಭಾವವನ್ನು ಬೆಳೆಸಿಕೊಂಡಲ್ಲಿ ಸಮಾಜದಲ್ಲೂ ಕ್ರಿಯಾಶೀಲರಾಗುತ್ತಾರೆ. ಹೀಗಾಗಿ ಜರ್ಮನ್ ಮಹಿಳೆಯರು ನಿರಂತರವಾಗಿ ದುಡಿಯುವವರಾಗಿದ್ದಾರೆ ಎಂದು ಹೇಳುತ್ತಾರೆ. ಯಾವುದೇ ವಿವಾಹಿತ ಮಹಿಳೆಯರು ಕೌಟುಂಬಿಕವಾಗಿ ಸಕ್ರಿಯವಾಗಿದ್ದಾಗ ಮಾತ್ರ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುತ್ತದೆ. ಅರ್ಸುಲಾಳ ಈ ಮಾತುಗಳು ಜರ್ಮನ್ ಮಹಿಳೆಯ ಸ್ತ್ರೀವಾದಿ ದೃಷ್ಟಿ-ಧೋರಣೆಗಳಿಗೆ ಮಾತಿನ ರೂಪಕೊಟ್ಟಂತೆ ಲೇಖಕಿಗೆ ಭಾಸವಾಗುತ್ತದೆ. ಇಲ್ಲಿನ ಮಹಿಳೆಯರಿಗೆ ಮದುವೆಯಾದ ಮೇಲೆ ಎಲ್ಲವೂ ಮುಗಿಯಿತು ಎನ್ನುವ ಮನೋಭಾವವಿಲ್ಲದೇ, ಕುಟುಂಬ, ಮನೆ, ಮಕ್ಕಳಿಗೆ ಕೊಟ್ಟ ಪ್ರಾಮುಖ್ಯತೆಯನ್ನು ಉದ್ಯೋಗಕ್ಕೂ ಕೊಟ್ಟಿರುತ್ತಾರೆ. ಮಹಿಳೆಯರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಒಂದು ಗೌರವವಾಗಿ ಭಾವಿಸುತ್ತಾರೆ. ಇಲ್ಲಿನ ಕುಟುಂಬಗಳಲ್ಲಿ ಹೆಣ್ಣು ಗಂಡು ಸಮಾನವಾದ ಚಿಂತನೆಗಳನ್ನು ಹೊಂದಿದ್ದರಿಂದಲೇ ಜರ್ಮನ್ ಮಹಿಳೆಯರು ಕುಟುಂಬಗಳಾಚೆಗೂ ತಮ್ಮ ಕ್ರಿಯಾಶೀಲತೆಯನ್ನು ಹೊಂದಿದ್ದಾರೆ.

ಭಾರತದಲ್ಲಿ ಗರ್ಭಿಣಿಯರಿಗೆ ಏಳು ತಿಂಗಳಾದಾಗ ಬಯಕೆಶಾಸ್ತ್ರ ಮಾಡುವಂತೆ ಅಮೇರಿಕದಲ್ಲೂ 'ಬೇಬಿ ಶವರ್' ಎನ್ನುವ ಸೀಮಂತ ಶಾಸ್ತ್ರವು ಆಚರಿಸುತ್ತಾರೆಂದು ಸಾರಾ

ಅಬೂಬಕ್ಕರ್ ಅವರು 'ಐಷಾರಾಮದ ಆಳದಲ್ಲಿ' ಎಂಬ ಕೃತಿಯಲ್ಲಿ ನಿರೂಪಿಸುತ್ತಾರೆ. ಅಮೇರಿಕದಲ್ಲಿ ವಿಶೇಷವಾಗಿ ನಡೆಯುವ ಬೇಬಿ ಶವರ್ ಕಾರ್ಯಕ್ರಮವು ಅಲ್ಲಿನ ಭಾರತೀಯರನ್ನು ಒಂದುಗೂಡಿಸುತ್ತದೆ. ಆಹ್ವಾನಿಸಿರುವರೆಲ್ಲರೂ ಹುಟ್ಟಲಿರುವ ಮಗುವಿಗಾಗಿ ಕಾಣಿಕೆಗಳು, ಆಟಿಕೆಗಳು ಮಗುವಿನ ಉಪಯೋಗಕ್ಕೆ ಬೇಕಾದ ವಸ್ತುಗಳನ್ನು ಕೊಡುವ ಮೂಲಕ ಸಂಭ್ರಮವನ್ನು ಪಡುತ್ತಾರೆ. ಪದ್ಮಾಗುರುರಾಜ್ ಅವರು 'ಕಾಂಗರೂಗಳ ನಾಡಿನಲ್ಲಿ' ಎಂಬ ಕೃತಿಯಲ್ಲಿ ಆಸ್ಟ್ರೇಲಿಯಾದಲ್ಲಿ ತಮ್ಮ ಕುಟುಂಬದ ಗರ್ಭಿಣಿಯ ಸೀಮಂತ ಶಾಸ್ತ್ರದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದನ್ನು ದಾಖಲಿಸುತ್ತಾರೆ. ಇಲ್ಲಿನ ಕುಟುಂಬಸ್ಥರು, ಗೆಳತಿಯರು ಕೂಡಿ ಗರ್ಭಿಣಿ ಮಹಿಳೆಗೆ ತಿಳಿಯದಂತೆ ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ. ಅದ್ದೂರಿಯಾದ ಔತಣಕೂಟ, ಬಸುರಿ ಮಹಿಳೆಗೆ ರೇಷ್ಮೆ ಸೀರೆ, ಹುಟ್ಟುವ ಮಗುವಿಗೆ ಉಡುಗೊರೆ, ಬಾಗಿನಗಳನ್ನು ಮತ್ತು ಕಾಣಿಕೆಗಳನ್ನು ನೀಡುತ್ತಾರೆ. ಭಾರತೀಯ ಹಿರಿಯ ದಂಪತಿಗಳ ಸೇರಿ ಈ ಕಾರ್ಯಕ್ರಮವನ್ನು ನೇರವೇರಿಸುತ್ತಾರೆ. ಮಹಿಳೆಯರು ರೇಷ್ಮೆ ಸೀರೆಗಳನ್ನು, ಹೆಣ್ಣು ಮಕ್ಕಳು ರೇಷ್ಮೆ ಉಡುಪುಗಳನ್ನು ಧರಿಸಿ ಕಾರ್ಯಕ್ರಮಗಳಲ್ಲಿ ಸದಾ ಚಟುವಟಿಕೆಯಿಂದ ಓಡಾಡುತ್ತಾ ಕೌಟುಂಬಿಕ ವಾತಾವರಣವನ್ನು ನೆನಪಿಸುತ್ತಾರೆಂದು ಲೇಖಕಿ ದಾಖಲಿಸುತ್ತಾರೆ.

ಬ್ರಿಟನ್ ದೇಶದಲ್ಲಿನ ಮಹಿಳೆಯರು ಭಾರತೀಯರಂತೆ ಕಾರ್ಯಕ್ರಮಗಳಲ್ಲಿ ಚಟುವಟಿಕೆಯಿಂದಿರುವ ಕುರಿತು ಪ್ರೇಮಾಭಟ್ ಅವರು 'ಪಶ್ಚಿಮದತ್ತ ಪಯಣ' ಕೃತಿಯಲ್ಲಿ ನಿರೂಪಿಸುತ್ತಾರೆ. ಬ್ರಿಟನ್‌ನಲ್ಲಿನ ಕುಟುಂಬಗಳು ಪಾರ್ಕ್‌ಗಳಾಗಲಿ, ಕಾರ್ಯಕ್ರಮಗಳಿಗಾಗಲಿ ಬಂದರೆ ಒಬ್ಬರೇ ಬರದೇ, ಭಾರತೀಯರಂತೆ ಕುಟುಂಬದ ಎಲ್ಲಾ ಸದಸ್ಯರು ಬರುವುದಾಗಿ ಹೇಳುತ್ತಾರೆ. ಅಲ್ಲಿನ ಕುಟುಂಬಸ್ಥರು ತಂದೆ, ತಾಯಿಗಳ ಜೊತೆ ಇರುವುದನ್ನು ಕಂಡ ಲೇಖಕಿಗೆ ಭಾರತದಲ್ಲಿ ಕೌಟುಂಬಿಕ ಪ್ರೀತಿ, ಸ್ನೇಹ, ಸೌಹರ್ದತೆ ಕ್ಷೀಣಿಸುತ್ತಿರುವುದನ್ನು ಕಂಡು ವಿಷಾದ ವ್ಯಕ್ತಪಡಿಸುತ್ತಾರೆ. ಇದೇ ಸ್ನೇಹ, ಸೌಹಾರ್ದ, ಪ್ರೀತಿ ಬ್ರಿಟನ್‌ನಲ್ಲಿ ಚಿಗುರೊಡೆಯುತ್ತಿರುವುದು ಕಂಡ ಹರ್ಷ ವ್ಯಕ್ತಪಡಿಸುತ್ತಾರೆ. ಮನೆಯ ಸದಸ್ಯರ ಬಂಧುತ್ವವನ್ನು ಗಟ್ಟಿಗೊಳಿಸುವ ಕೌಟುಂಬಿಕ ಪ್ರೀತಿಗೆ ಎಲ್ಲರನ್ನು ಸೆಳೆಯುವ ಅತೀತವಾದ ಶಕ್ತಿ ಇರುತ್ತದೆ. ಕೌಟುಂಬಿಕ ಮಹತ್ವವನ್ನು ಸಾರುವಲ್ಲಿ ಮಹಿಳೆ ಪಾತ್ರ ಮಹತ್ವದ್ದಾಗಿದೆ. ಮಹಿಳೆಯನ್ನು ಕುಟುಂಬದ ಅವಿಭಾಜ್ಯ ಅಂಗವೆಂದು ಭಾವಿಸುವ ಗಂಡಂದಿರು ವಿದೇಶದಲ್ಲಿರುವ ಕುರಿತು ಲೇಖಕಿ ಒಂದು ಪ್ರಸಂಗವನ್ನು ಉದಾಹರಿಸುತ್ತಾರೆ. ಮಾರಿಷಸ್ ದಂಪತಿಗಳು ಪ್ರವಾಸ ಹೋದಲೆಲ್ಲ ಕುರ್ಚಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಇದನ್ನು ಗಮನಿಸಿ ವಿಚಾರಿಸಿದ ಲೇಖಕಿಗೆ ಆ ದಂಪತಿಗಳಲ್ಲಿ ವಿಷಾಧದ ಕತೆಯೇ ಅಡಗಿತ್ತು. ಆತನ ಹೆಂಡತಿಗೆ ಮೊಣಕಾಲಿನ ಚಿಪ್ಪು ಸವೆದಿದ್ದು, ಅಪರೇಷನ್ ಯಶಸ್ವಿಯಾದರೆ ಸಹಜವಾಗಿ ನಡೆಯುತ್ತಾರೆ. ಇಲ್ಲದೇ ಹೋದರೆ ಕುರ್ಚಿಯಲ್ಲಿ ಕೂರಬೇಕಾದ ಅನಿವಾರ್ಯತೆ ಒದಗುತ್ತದೆ ಎಂದು ತಿಳಿದು, ಅಪರೇಷನ್ ಪೂರ್ವದಲ್ಲಿ ಆತ ಹೆಂಡತಿಗಾಗಿಯೇ ಪ್ರವಾಸ ಕೈಗೊಂಡಿರುವುದಾಗಿ ಹೇಳುತ್ತಾನೆ. ಹೆಚ್ಚು ಹೊತ್ತು ನಿಲ್ಲದ ಸ್ಥಿತಿಯಲ್ಲಿರದ ಆಕೆಗೆ,

ಹೋದಲೆಲ್ಲಾ ಕುರ್ಚಿ ತೆಗೆದುಕೊಂಡು ಹೋಗುವುದು, ಅದನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುವ ಆತನ ಕುರಿತು ಲೇಖಕಿಗೆ ಆ ದಾಂಪತ್ಯದ ಮೇಲೆ ಅಭಿಮಾನವೇ ಉಕ್ಕುತ್ತದೆ. ವಯಸ್ಸಾದ ನಂತರ ಕುಟುಂಬಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುವ ದಂಪತಿಗಳ ಮಧ್ಯೆ ಈ ಮಾರಿಷಸ್ ಜೋಡಿಯ ವಯೋಸಹಜ ಕಾಯಿಲೆಯಿಂದಾಗಿ ಪರಸ್ಪರ ಪ್ರೀತಿಸುವ ಗುಣ ಮೆಚ್ಚುವಂತಹದ್ದಾಗಿದೆ. ಆ ಇಳಿವಯಸ್ಸಿನ ದಾಂಪತ್ಯದಲ್ಲಿ ಆತ ತೋರುವ ಪ್ರೀತಿಯ ಹಿಂದೆ ಮಹಿಳೆಯ ಕೌಟುಂಬಿಕವಾಗಿ ಕ್ರಿಯಾಶೀಲವಾಗಿರುವ ಬಗ್ಗೆ ತಿಳಿಯುತ್ತದೆ. ಅರಬ್ ಹೆಂಗಸರು ಶೃಂಗಾರ ಪ್ರಿಯರು. ಅಲ್ಲಿನ ಮಹಿಳೆಯರಂತೆ ವಿಧವಿಧದ ಆಭರಣಗಳನ್ನು ಧರಿಸುವ ಮಹಿಳೆಯರು ಬೇರೆಲ್ಲೂ ಕಾಣಸಿಗಲಾರರು. ಅರಬ್‌ನ ಚಿನ್ನದ ಅಂಗಡಿಗಳ ಮುಂದೆ ಮಹಿಳೆಯರ ಲವಲವಿಕೆ ಕಂಡುಬರುತ್ತದೆ. ಅವರು ಚಿನ್ನದ ಮೋಹಿಗಳಾಗಿದ್ದು ಹಳೆಯ ಆಭರಣಗಳನ್ನು ನೀಡಿ ಹೊಸ ಆಭರಣಗಳನ್ನು ಕೊಳ್ಳುವುದು ಹೆಚ್ಚು. ಕೌಟುಂಬಿಕ ಕಟ್ಟುಪಾಡುಗಳ ನಡುವೆಯೂ ಮಹಿಳೆಯರು ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುವ ಕ್ರಿಯಾಶೀಲತೆ ಕಂಡು ಲೇಖಕಿ ಅಚ್ಚರಿ ವ್ಯಕ್ತಪಡಿಸುತ್ತಾರೆ.

ಭಾರತದಂತಹ ಊರುಗಳಲ್ಲಿ ಮಹಿಳೆಯರು ಗುಂಪು ಗೂಡಿ ಏನಾದರೂ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡ ಹಾಗೇ, ವೆನ್ನಿಸ್ ನಗರದಲ್ಲೂ ಕಂಡುಬರುವ ಕುರಿತು ಹೇಮಲತಾ ಮಹಿಷಿ ಅವರು 'ಯುರೋ ದರ್ಶನ' ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಈ ಕುರಿತು ಲೇಖಕಿ 'ಕನಸಿನ ಲೋಕ ವೆನಸ್' ಅಧ್ಯಾಯದಲ್ಲಿ "ಬುರಾನೋ ಲೇಸಿನ ಕೆಲಸಕ್ಕೆ ಹೆಸರುವಾಸಿ. ಬಾಗಿಲಿಗೆ ಕಿಟಕಿ ಪರದೆಗಳು ಮೇಜಿನ ಹಾಸಿಗೆಯ ಮೇಲಿನ ಮೇಲ್ಹಾಸುಗಳು ಹಾಕಿಕೊಳ್ಳುವ ಉಡುಪುಗಳು ಇತ್ಯಾದಿಗಳನ್ನು ಸೂಕ್ಷ್ಮವಾದ ದಾರದ ಒಂದೇ ಎಳೆಯ ಲೇಸಿನಲ್ಲಿ ಮಾಡುತ್ತಾರೆ. ಇದನ್ನು ಮಾಡುವವರು ಬುರಾನೋವ ಮಹಿಳೆಯರು. ನಾಲ್ಕಾರು ಮಹಿಳೆಯರು ಒಂದು ಮನೆಯಲ್ಲಿ ಸೇರಿ ಹರಟೆ ಹೊಡೆಯುತ್ತಾರೆ. ಲೇಸನ್ನು ಹೆಣೆಯುತ್ತಾರೆ."(ಹೇಮಲತಾ ಮಹಿಷಿ, ೧೯೯೯, ಪು-೧೩೬) ಎಂದಿದ್ದಾರೆ. ಲೇಖಕಿ ಹೇಳುವ ಪ್ರಸಂಗಗಳು ಭಾರತದಲ್ಲಿ ಸರ್ವೆಸಾಮಾನ್ಯವಾಗಿ ಕಂಡುಬರುತ್ತವೆ. ನೆರೆಹೊರೆಯ ಹೆಣ್ಣುಮಕ್ಕಳು ಒಂದು ಗೂಡಿ ಕರಕುಶಲ ವಸ್ತುಗಳನ್ನು, ಗೃಹ ಉಪಯೋಗಿ ವಸ್ತುಗಳನ್ನು ತಯಾರಿಸುವುದನ್ನು ಗಮನಿಸಿದರೆ ಬುರಾನೋವ ಮಹಿಳೆಯರು ಕುಟುಂಬಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವುದು ತಿಳಿದುಬರುತ್ತದೆ. ಇದನ್ನು ಗಮನಿಸಿದ ಲೇಖಕಿ ಭಾರತೀಯ ಮಹಿಳೆಯರೂ ತಮ್ಮ ಕುಟುಂಬಗಳಿಗೋಸ್ಕರ ಒಂದೇ ಎಳೆಯ ದಾರದಲ್ಲಿ ಲೇಸನ್ನು ಹಾಕಿ, ಅಷ್ಟೇ ಸೂಕ್ಷ್ಮವಾದ, ಕಲಾತ್ಮಕವಾದ ವಸ್ತುಗಳನ್ನು ಮಾಡುವುದನ್ನು ಲೇಖಕಿ ನೆನೆಯುತ್ತಾರೆ.

ಅಮೇರಿಕಾದ ಕುಟುಂಬಗಳಲ್ಲಿ ಅಪ್ಪ-ಅಮ್ಮನ ಜೊತೆಯಲ್ಲಿ ಮಕ್ಕಳನ್ನು ಮಲಗಿಸಿಕೊಳ್ಳುವುದಿಲ್ಲ. ಚಿಕ್ಕ ಮಗವಾದರೂ ಅದನ್ನು ಪ್ರತ್ಯೇಕ ಕೋಣೆಯಲ್ಲಿ ಮಲಗಿಸುತ್ತಾರೆ. ಇದರಿಂದ ತಾಯಿಯ ಮಮತೆ, ವಾತ್ಸಲ್ಯದ ಅಪ್ಪುಗೆಯಿಂದ ಮಕ್ಕಳು ವಂಚಿತರಾಗುತ್ತಾರೆಂದು ಜಯಶ್ರೀ.ಕೆ.ಆರ್.

ಅವರು 'ಅಮೆರಿಕಾ ಪ್ರವಾಸ' ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಹದಿಹರೆಯದ ೧೨-೧೮ವರ್ಷದ ಹೆಣ್ಣು ಮಕ್ಕಳ ಪೋಷಕರು ಅಲ್ಲಿನ ಗಂಡು ಹೆಣ್ಣುಗಳ ಸ್ವಚ್ಛಂದತೆಯನ್ನು ಕಂಡು ತಾವು ಬೆಳೆದ ವಾತಾವರಣವನ್ನು ನೆನಸಿಕೊಂಡಾಗ ಅವರ ಬಾಯಲ್ಲಿ ಬಿಸಿತುಪ್ಪ ಇಟ್ಟುಕೊಂಡ ಅನುಭವ ಆಗುತ್ತದೆ. ಅಲ್ಲಿನ ಹೆಣ್ಣುಮಕ್ಕಳು ಸದಾ ಚಟುವಟಿಕೆಗಳಿಂದ ಕೂಡಿದವರಾಗಿದ್ದರ ಕುರಿತು ಅಮೇರಿಕಾ ವಾಸಿಯೊಬ್ಬರ ಮಾತುಗಳನ್ನು ಲೇಖಕಿ ಹೀಗೆ ಪ್ರಸ್ತಾಪಿಸುತ್ತಾರೆ. "ನಾನು ವಿವಾಹಿತ, ೨೬ ವರ್ಷಗಳ ಹಿಂದೆ ಮದುವೆಯಾದೆ. ೨೫ ವರ್ಷದ ಮಗನಿದ್ದಾನೆ. ಜೊತೆಯಲ್ಲೇ ಇದ್ದಾನೆ. ಇಲ್ಲಿಯ ವಿವಾಹಗಳೆಲ್ಲ ಪ್ರೇಮ ವಿವಾಹಗಳೆ. ಹುಡುಗ ಹುಡುಗಿಯರು ತಮ್ಮ ಸಂಗಾತಿಯನ್ನು ಆಯ್ದುಕೊಳ್ಳುತ್ತಾರೆ. ಆದರೆ ತಾಯ್ತಂದೆಯರನ್ನು ನೋಡಿಕೊಳ್ಳುತ್ತಾರೆ. ವಿವಾಹಗಳು ಒಂದಿಷ್ಟು ಭದ್ರವಾಗಿವೆ. ಎಂದೆಲ್ಲ ವಿವರಿಸುತ್ತಾರೆ." (ಜಯಶ್ರೀ.ಕೆ.ಆರ್. ೨೦೧೪, ಪುಟ-೫೪) ಅವರ ಈ ಅಭಿಪ್ರಾಯಗಳಲ್ಲಿ ಅಮೇರಿಕದ ಜನರು ಕೌಟುಂಬಿಕವಾಗಿ ಕ್ರಿಯಾಶೀಲತೆಯಿಂದ ಕೂಡಿರುವುದು ಕಂಡುಬರುತ್ತದೆ. ಅಮೇರಿಕಾವು ಮುಕ್ತ ಅಭಿವ್ಯಕ್ತಿ ದೇಶವಾದರೂ, ತಮ್ಮ ಸಂಗಾತಿಗಳ ತಾವೇ ಆರಿಸಿಕೊಂಡರು ಮದುವೆ ಕಾರ್ಯಕ್ರಮಗಳಲ್ಲಿ ತಂದೆ, ತಾಯಿಗಳನ್ನು ಮುಖ್ಯವೆಂದು ಭಾವಿಸುತ್ತಾರೆ. ಇಂತಹ ಅಂಶಗಳಿಂದಾಗಿಯೇ ಅಲ್ಲಿನ ಹುಡುಗಿಯರು ಔದ್ಯೋಗಿಕವಾಗಿಯೂ ತುಂಬಾ ಕ್ರಿಯಾಶೀಲವಾಗಿದ್ದಾರೆಂದು ಹೇಳುತ್ತಾರೆ.

ವಿದೇಶಿ ವಧು-ವರರಲ್ಲಿ ಮದುವೆಗಳು ಏರ್ಪಟ್ಟಾಗ ಎರಡು ಸಂಪ್ರದಾಯಗಳು, ಸಂಸ್ಕೃತಿಗಳನ್ನು ಸರಿಹೊಂದಿಸಿಕೊಂಡು ಸಂಸಾರ ನಡೆಸುವ ಕುರಿತು ಪಾರ್ವತಮ್ಮ ಮಹಾಲಿಂಗಶೆಟ್ಟಿ ಅವರು 'ಅಮೇರಿಕಾದ ಜನಜೀವನ ಮತ್ತು ಇತಿಹಾಸ' ಕೃತಿಯಲ್ಲಿ ನಿರೂಪಿಸಿದ್ದಾರೆ. ಭಾರತೀಯ ಕುಟುಂಬಗಳು ಅಲ್ಲಿನವರೊಂದಿಗೆ ಮದುವೆಗಳನ್ನು ಏರ್ಪಡಿಸಿದಾಗ ಸಂಪ್ರದಾಯಗಳ ಪಾಲನೆ ಕಷ್ಟವಾಗುತ್ತದೆ. ಆದರೂ ಪಾಲಿಸುವುದನ್ನು ಮರೆಯುವುದಿಲ್ಲ ಎಂದಿದ್ದಾರೆ. ಏಕೆಂದರೆ ಸಂಪ್ರದಾಯಗಳಲ್ಲಿ ಹಬ್ಬದ ವಾತಾವರಣವನ್ನು ಆಚರಿಸುವುದರಿಂದ, ಎಲ್ಲರೂ ಸಕ್ರಿಯವಾಗಿ ಭಾಗವಹಿಸುವುದರಿಂದ ಆಚರಣೆಗಳು ಮುಖ್ಯವೆನ್ನುತ್ತಾರೆ. ಆದರೆ ಅವರ ಮಕ್ಕಳಿಗೆ ಈ ತಾಪತ್ರಯಗಳಿರುವುದಿಲ್ಲ. ಮುಂದಿನ ಪೀಳಿಗೆಯು ಅಮೇರಿಕಾದ ಪ್ರಜೆಗಳಾಗಿಯೇ ಹುಟ್ಟುವುದರಿಂದ ಸಂಪ್ರದಾಯಗಳ ಪ್ರಶ್ನೆಯೇ ಉದ್ಭವಿಸದು. ಅಲ್ಲಿನ ಕೌಟುಂಬಿಕ ಸಂಬಂಧಗಳು ಹೆಚ್ಚು ಜಟಿಲವಾಗುವುದಿಲ್ಲ. ಭಾರತದ ಮಟ್ಟಿಗೆ ಕುಟುಂಬ ಸಂಬಂಧವನ್ನು ಹೋಲಿಸಿದ ಲೇಖಕಿಯು ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಗುರುತಿಸುತ್ತರಾದರೂ, ಅಮೇರಿಕಾದಲ್ಲೂ ಕೌಟುಂಬಿಕ ಪ್ರೀತಿ ಭಾರತದಷ್ಟೇ ಗಟ್ಟಿಯಾದದ್ದು ಎನ್ನುತ್ತಾರೆ. ತಂದೆ, ತಾಯಿಗಳೇ ಹೆಣ್ಣು, ಗಂಡುಗಳನ್ನು ನಿಶ್ಚಯಿಸುವುದಿದೆ. ಅಲ್ಲಿನ ಮದುವೆಗಳು ಬಹುತೇಕ ರಿಜಿಸ್ಟರ್ ಆಫೀಸಿನಲ್ಲಿಯೇ ನಡೆಯುತ್ತವೆ. ಗಂಡ ಹೆಂಡತಿ ಇಬ್ಬರು ದುಡಿಯುವುದು ಸಹಜವಾಗಿರುತ್ತದೆ. ಕೆಲಸ ಮುಗಿಸಿ ಬಂದ ದಂಪತಿಗಳು ಮನೆ ಕೆಲಸಗಳಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ. ವಿರಳವಾಗಿ ಗಂಡ ಹೆಚ್ಚು ದುಡಿಯುತ್ತಿದ್ದರೇ ಹೆಂಡತಿ ಮನೆಯಲ್ಲಿರಲು ಇಷ್ಟಪಡುವವರು ಇದ್ದಾರೆ. ಸ್ವತಂತ್ರ

ನಿರ್ಧಾರ ಮಾತ್ರ ಮಹಿಳೆಯರಿಗೆ ಇರುತ್ತದೆ. ಗಂಡನ ಒತ್ತಡವು ಇರುವುದಿಲ್ಲ. ಇಂತಹ ಹೆಣ್ಣುಮಕ್ಕಳು ಕುಟುಂಬದ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಗಂಡ ಕಾಲೇಜಿಗೆ ಹೋಗುವುದಕ್ಕೆ ಹೆಂಡತಿಯರು ಕೆಲಸ ಮಾಡಿ ಆರ್ಥಿಕ ಸಹಾಯ ಮಾಡುವ ಮನೋಭಾವ ಅಮೇರಿಕಾದ ಮಹಿಳೆಯರಲ್ಲಿದೆ. ಗಂಡ ಹೆಂಡತಿ ಹೊಂದಿಕೊಳ್ಳುವುದಕ್ಕೆ ಪ್ರಾಮುಖ್ಯತೆ ನೀಡುತ್ತಾರೆ. ಹೊಂದಿಕೆಯಾಗದೇ ಹೋದರೆ ಪ್ರತಿದಿನ ಮನಶ್ಯಾಂತಿ ಕಳೆದುಕೊಂಡು ಒದ್ದಾಡುವುದಕ್ಕಿಂತ ವಿಚ್ಛೇದನವೇ ಮೇಲು ಎನ್ನುವ ಮನೋಭಾವ ಅಲ್ಲಿನವರದು. ಹಣಕ್ಕಾಗಿ ಕೋರ್ಟ್ ಮೆಟ್ಟಿಲು ಹೇರುವುದು, ಮಕ್ಕಳಾದ ಮೇಲು ವಿಚ್ಛೇದನ ಪಡೆಯುವುದು ಸಾಮಾನ್ಯವಾಗಿರುತ್ತವೆ. ಈ ಕುರಿತು ಲೇಖಕಿ "ಪತಿಯೇ ಪರದೈವ ಎಂದು, ನರಕ ಯಾತನೆಯನ್ನು ಅನುಭವಿಸುವ ಕಾಲ ಹೋಗಿದೆ. ಮೊದಲು ಮರಣವೇ ಮೋಕ್ಷವಾಗಿತ್ತು, ಈಗ ವಿಚ್ಛೇದನ ಬಂದಿದೆ."(ಪಾರ್ವತಮ್ಮ ಮಹಾಲಿಂಗಶೆಟ್ಟಿ, ೨೦೦೬, ಪುಟ-೧೩೭) ಎಂದಿದ್ದಾರೆ. ಅವರ ಈ ಮಾತುಗಳಲ್ಲಿ ವಿಚ್ಛೇದನದ ಮಹತ್ವ ಮತ್ತು ಮನಶ್ಯಾಂತಿ ಬಯಸುವುದಕ್ಕೆ ಏಕೈಕ ಮಾರ್ಗವೆಂದು ಒಪ್ಪುವಂತಹದ್ದಾಗಿದೆ. ಇಂತಹ ಬಂಧಗಳಲ್ಲಿರುವುದಕ್ಕಿಂತ ಮರಳಿ ತಮ್ಮನ್ನು ಸಮಾಜದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದಕ್ಕೆ ಸಹಾಯಕವಾಗುತ್ತದೆ. ವಿಚ್ಛೇದನ ಪಡೆದು ಸಮಾಜದಲ್ಲಿ ಉನ್ನತ ಮಟ್ಟಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ ಎಂದಿದ್ದಾರೆ. ಈಗ ಇದು ಭಾರತ ಸೇರಿದಂತೆ ಎಲ್ಲಾ ದೇಶಗಳಲ್ಲಿಯೂ ಸರ್ವೆ ಸಾಮಾನ್ಯವಾಗಿ ಹೋಗಿದೆ. ಇಂತಹ ಸಂಬಂಧಗಳಲ್ಲಿ ಕೌಟುಂಬಿಕ ಕ್ರಿಯಾಶೀಲತೆಯನ್ನು ಹೊಂದಿರುವ ಅಲ್ಲಿನ ಮಹಿಳೆಯರನ್ನು ಕುರಿತು ಲೇಖಕಿ "ಅವರಲ್ಲಿ ಕುಟುಂಬ ಪ್ರೇಮ ಇರುತ್ತದೆ. ಜೊತೆಗೇ ವಾಸವಾಗಿರುವವರು ಗಂಡ ಹೆಂಡತಿ ಮಕ್ಕಳು ಮಾತ್ರ, ತಂದೆ ತಾಯಿ ಅಪರೂಪಕ್ಕೆ ಜೊತೆಯಾಗಿರುತ್ತಾರೆ. ಅವರು ನಮ್ಮ ಕುಟುಂಬ ಎಂದು ಎಷ್ಟು ಹೆಮ್ಮೆಯಿಂದ ಹೇಳುತ್ತಾರೆ ಕೇಳಬೇಕು. ಅಣ್ಣ-ತಮ್ಮ, ಅಕ್ಕ-ತಂಗಿ ಎಂದು ಸಂಪರ್ಕ ಇಟ್ಟುಕೊಂಡಿರುತ್ತಾರೆ. ಯಾರದಾದರೂ ಹುಟ್ಟು ಹಬ್ಬವಿದ್ದರೆ, ಎಲ್ಲರೂ ಸೇರಿ ಅನುಕೂಲವಾದ ಕಡೆ ಆಚರಿಸುತ್ತಾರೆ. ಅದು ಅವರ ಮನೆಯೇ ಆಗಬೇಕೆಂದಿಲ್ಲ. ಎಲ್ಲಾರಿಗೂ ಹೋಗಿ ಬರಲು ಅನುಕೂಲವಾದರಾಯಿತು" (ಅದೇ, ಪುಟ-೧೩೬) ಎಂದಿದ್ದಾರೆ. ಅಮೇರಿಕದ ಕೌಟುಂಬಿಕ ಪ್ರೀತಿಯನ್ನು ಗ್ರಹಿಸಿದಾಗ ಭಾರತದಲ್ಲಿನ ಕೌಟುಂಬಿಕತೆಯ ಗಾಢ ಸಂಬಂಧಗಳನ್ನು ನೆನಪಿಸುತ್ತವೆ. ಭೂಭಾಗವು ಎಷ್ಟೇ ವಿಶಾಲವಾಗಿರಲಿ, ಸಂಸ್ಕೃತಿಗಳು ಎಷ್ಟೇ ಭಿನ್ನವಾಗಿರಲಿ, ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆಯಲಿ ಕೌಟುಂಬಿಕ ಪ್ರೀತಿ ಎನ್ನುವಂತಹದ್ದು ಯಾರನ್ನು ಬಿಟ್ಟಿಲ್ಲ ಎನ್ನುವುದು ಲೇಖಕಿಯ ಮಾತುಗಳಲ್ಲಿ ಸ್ಪಷ್ಟವಾಗುತ್ತದೆ.

ಚಿಲಿ, ಪೆರು, ಅರ್ಜೆಂಟೆನಿಯಾದಲ್ಲಿ ಮಹಿಳೆಯರ ಕೌಟುಂಬಿಕ ಸ್ಥಾನಮಾನಗಳು, ಭಾರತದ ಮಹಿಳೆಯರ ಸ್ಥಾನಮಾನಗಳಿಗಿಂತ ಭಿನ್ನವಾಗಿಲ್ಲವೆಂದು ಎಚ್.ಎಸ್.ಅನುಪಮಾ ಅವರು 'ಚೆಗೆವಾರನ ನೆಲದಲ್ಲಿ' ಎಂಬ ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಅಲ್ಲಿನ ಕೌಟುಂಬಿಕ ಜವಾಬ್ದಾರಿಯು ಬಹುತೇಕ ಭಾರತದ ಸಂಸ್ಕೃತಿಯನ್ನೇ ಹೋಲುತ್ತವೆ. 'ಭಾರತಕ್ಕೆ ಸೀತಾಮಾತೆ

ಮಾದರಿಯಿದ್ದಂತೆ, ಚಿಲಿಯಲ್ಲಿ ವರ್ಜಿನ್ ಮೇರಿ ಮಾದರಿ' ಎನ್ನುತ್ತಾರೆ. ಇಲ್ಲಿನ ವಿವಾಹಗಳು, ವಿಚ್ಛೇದನಗಳು ಕಾನೂನುಬದ್ಧವಾಗಿದ್ದು, ಹೋರಾಟಗಳಿಂದಾಗಿ ಹೆರಿಗೆ ಭತ್ಯೆಗಳು ಲಭಿಸುತ್ತವೆ. ಕೌಟುಂಬಿಕವಾಗಿಯೂ ಸಾಮಾಜಿಕ ರಂಗಗಳಲ್ಲಿ ಗುರುತಿಸಿಕೊಳ್ಳುತ್ತಿರುವ ಮಹಿಳೆಯರು ಪುರುಷರ ಸರಾಸರಿ ಆಯಸ್ಸು ೭೪ ವರ್ಷಗಳಾದರೆ, ಮಹಿಳೆಯರದು ೮೦ ವರ್ಷ, ಅಂದರೆ ಮಹಿಳೆಯರ ಆಯಸ್ಸು ಪುರುಷರಿಗಿಂತ ೬ ವರ್ಷ ಹೆಚ್ಚಾಗಿದೆ. ಪುರುಷರಿಗಿಂತಲೂ ಚಿಲಿಯ ಮಹಿಳೆಯರು ಕ್ರಿಯಾಶೀಲತೆಯಿಂದ ಬದುಕುವುದು ಸ್ಪಷ್ಟವಾಗುತ್ತದೆ. ಇಲ್ಲಿನ ಕುಟುಂಬಗಳಲ್ಲಿ ಮಹಿಳೆಯರು ಕ್ರಿಯಾಶೀಲ ಚಟುವಟಿಕೆ ಉಳ್ಳವರಾಗಿದ್ದಾರೆ. ಚಿಲಿ, ಪೆರುವಿನ ಪ್ರದೇಶಗಳಲ್ಲಿ ರಾಜಕೀಯವಾಗಿ ಗುರುತಿಸಿಕೊಳ್ಳಲು ಕುಟುಂಬದ ಸಹಕಾರ ಮುಖ್ಯವೆಂದು ಹೇಳುತ್ತಾರೆ. ಅಲ್ಲಿನ ಗ್ರಾಮಗಳಲ್ಲಿ ಕೃಷಿ ಕೆಲಸಗಳಲ್ಲಿ ತೊಡಗಿಕೊಳ್ಳುವ ಮೂಲಕ ಕುಟುಂಬವನ್ನು ಆರ್ಥಿಕವಾಗಿ ಸದೃಢವಾಗಿಸುವುದಕ್ಕೆ ಮಹಿಳೆಯರು ಸಹಕಾರಿಯಾಗಿವುದನ್ನು ಲೇಖಕಿ ಗುರುತಿಸುತ್ತಾರೆ.

ಭೂತಾನ್ ದೇಶದಲ್ಲಿ ಮಹಿಳೆಯರಿಗೆ ಇರುವಷ್ಟು ಪ್ರಾಧಾನ್ಯತೆ ಬಹುತೇಕ ಯಾವ ದೇಶಗಳಲ್ಲಿ ಕಾಣಲಾರೆವು ಎಂದು ಉಮಾರಾವ್ ಅವರು 'ಇನ್ನು ಎಲ್ಲಿಗೋಟ' ಪ್ರವಾಸ ಕಥನದಲ್ಲಿ ಗುರುತಿಸುತ್ತಾರೆ. ಅಲ್ಲಿನ ಕುಟುಂಬಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಮಟ್ಟದ ಪ್ರಾಮುಖ್ಯತೆಯಿದೆ. ಗ್ರಾಮೀಣ ಪ್ರದೇಶಗಳಿಂದ ದೂರವಾಗಿರುವ ಕೂಡು ಕುಟುಂಬಗಳು ಭೂತಾನ್‌ನಲ್ಲಿ ಕಂಡುಬರುತ್ತವೆ. ದುಡಿಮೆಯಲ್ಲಿ ಸಮಾನ ಹಕ್ಕು ಪ್ರಸ್ತಾಪಿಸುವ ಈ ದೇಶದಲ್ಲಿ, ಗಂಡು ಹೆಣ್ಣುಗಳು ಸಮಾನವಾಗಿ ದುಡಿಯುತ್ತಾರೆ. ಗಂಡ-ಹೆಂಡತಿ ಇಬ್ಬರೇ ಇರುವ ಕುಟುಂಬಗಳಲ್ಲಿಯೂ ಹೆಂಡತಿ ಕೆಲಸಕ್ಕೆ ಹೋದಾಗ ಗಂಡಂದಿರು ಮಕ್ಕಳನ್ನು ನೋಡಿಕೊಳ್ಳುತ್ತಾರೆ. ಹೆಂಡತಿ ಕೆಲಸಕ್ಕೆ ಹೋದಾಗ ಗಂಡ ಮಧ್ಯಾಹ್ನ ಮಗುವಿಗೆ ಊಟ ಮಾಡಿಸಿ ಮಲಗಿಸಿ, ಮನೆ ಕೆಲಸ ಮುಗಿಸಿ ಗೆಳೆಯರೊಂದಿಗೆ ಹರಟುತ್ತಾ ಕಾದು ಕುಳಿತಿರುವುದು ಅಲ್ಲಿ ಸಾಮಾನ್ಯ ಸಂಗತಿಯಾಗಿ ಕಂಡುಬರುತ್ತವೆ. ಭೂತಾನ್ ಮಹಿಳೆಯರು ಕುಟುಂಬದಲ್ಲಿಯೂ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಜಿಡುವ ಸಿಕ್ಕ ದಿನಗಳಲ್ಲಿ ಕುಟುಂಬಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾರೆ. ದಾಂಪತ್ಯದಲ್ಲಿಯೂ ನಂಜಿಕೆಯಿರುವ ಇಲ್ಲಿನ ಮಹಿಳೆಯರು ಕಷ್ಟದ ದಿನಗಳಲ್ಲಿಯೂ ಕುಟುಂಬವನ್ನು ಪೋಷಿಸುವ, ದಿಟ್ಟತನದ ವ್ಯಕ್ತಿತ್ವ ಹೊಂದಿರುವುದಾಗಿ ಲೇಖಕಿ ಪ್ರಸ್ತಾಪಿಸುತ್ತಾರೆ. ಬರ್ಮಿಂಗ್ ಹ್ಯಾಂನಲ್ಲಿ ಕುಟುಂಬ ವಲಯದಲ್ಲಿ ಮಹಿಳೆಯರದು ಒಂಟಿ ಮನೆತನಗಳೇ ಹೆಚ್ಚು ಎಂದು ಇಂದಿರಾ ಶಿವಣ್ಣ ಅವರು 'ತನ್ಮಯತೆ ಉನ್ಮತ್ತತೆ' ಕೃತಿಯಲ್ಲಿ ದಾಖಲಿಸುತ್ತಾರೆ. ವಯಸ್ಸಾದ ತಂದೆ ತಾಯಿಗಳು ಮಕ್ಕಳಿಗೆ ಹೊರೆಯಾಗದೆ ಸ್ವಂತ ಬದುಕನ್ನು ನಿರ್ವಹಿಸುತ್ತಾರೆ. ಮಕ್ಕಳು ಮದುವೆಯಾದ ಕೆಲವೇ ದಿನಗಳಲ್ಲಿ ಬೇರೆ ಮನೆ ಮಾಡಿ ದೂರಾಗುತ್ತಾರೆ. ತಂದೆ ತಾಯಿಗಳನ್ನು ಒಂಟಿ ಮಾಡಿದ ತಮ್ಮನ್ನು ಸಮರ್ಥಿಸಿಕೊಳ್ಳಲು ಅವರಿಗೆ ಹತ್ತಾರು ಕಾರಣಗಳಿವೆ. ಕೆಲಸದ ನಿಮಿತ್ತ ಬೇರೆ ಊರಲ್ಲಿ ನೆಲೆಸುವುದು, ಮನೆಯಿಂದ ಕೆಲಸ ಮಾಡುವ ಸ್ಥಳ ದೂರವೆಂದು ಬೇರೆ ಮನೆ ಮಾಡುವುದು, ಮಕ್ಕಳನ್ನು ನೋಡಿಕೊಳ್ಳಲು ಹೆಂಡತಿಯ ತಂದೆ

ತಾಯಿಯರನ್ನು ಆಶ್ರಯಿಸಿ ಬೇರೆ ಮನೆ ಮಾಡುವುದು, ಇದು ಬಿಟ್ಟರೆ ಮುಖ್ಯವಾಗಿ ಹೊಂದಿಕೊಂಡು ಬಾಳುವ ಸಂಯಮ, ತಾಳ್ಮೆ, ಆಸಕ್ತಿ, ಆಸೆಗಳಿಲ್ಲದೇ ನಿಸ್ವಾರ್ಥ ಮನಸ್ಸಿನಿಂದ ಕೂಡಿರುವುದಾಗಿ ಲೇಖಕಿ ಹೇಳುತ್ತಾರೆ.

ಗೋವಾದ ಬಹುತೇಕ ಕುಟುಂಬದ ವಿವಾಹಗಳು ವೈಷ್ಣವ ಪದ್ಧತಿಯಲ್ಲಿ ನಡೆಯುತ್ತವೆ. ವೈಷ್ಣವ ಪದ್ಧತಿಯ ಆಚರಣೆಗಳನ್ನು ಕೆಲವು ಬುಡಕಟ್ಟು ಜನಾಂಗದವರು ಇಂದಿಗೂ ಮುಂದುವರೆಸಿದ್ದಾರೆ. ಆದರೆ ನಗರಗಳಲ್ಲಿ ಇದು ಕಣ್ಮರೆಯಾಗಿವೆ. ಈ ಮದುವೆಗಳು ಮಧ್ಯವರ್ತಿಗಳ ಮೂಲಕವೇ ನಿರ್ಧಾರವಾಗುತ್ತವೆ. ಕರ್ನಾಟಕದಲ್ಲಿರುವಂತೆ ಗೋವಾದಲ್ಲೂ ವೀಳ್ಯ ಬದಲಾಯಿಸಿಕೊಂಡು ಹೆಣ್ಣನ್ನು ತನ್ನವಳನ್ನಾಗಿಸಿಕೊಳ್ಳುವ ಪದ್ಧತಿಯನ್ನು ಅನುಸರಿಸುತ್ತಾರೆ. ನಿಶ್ಚಿತಾರ್ಥವಾಗಿ ಆರು ತಿಂಗಳೊಳಗೆ ಮದುವೆಗಳು ನಡೆಯುತ್ತವೆ. ಮಾಂಗಲ್ಯಧಾರಣೆ, ಮೂಗುತಿ, ಮೆಹಂದಿಗಳು ಮದುವೆಯ ಅವಿಭಾಜ್ಯ ಪದ್ಧತಿಗಳಾಗಿವೆ. ಇಲ್ಲಿನ ಮಹಿಳೆಯರು ವೈಭವದ ಮದುವೆಗಳನ್ನು ಆಗುವ ಮೂಲಕ ಕುಟುಂಬಕ್ಕೆ ತಮ್ಮ ಜೀವನವನ್ನು ತೆರೆದುಕೊಳ್ಳಲು ಬಯಸುತ್ತಾರೆ. ಗೋವಾದ ಮಹಿಳೆಯರು ದುಡಿಯುವ ಪ್ರವೃತ್ತಿಯುಳ್ಳವರಾದ ಕಾರಣ ಸಾಮಾಜಿಕವಾಗಿ ಕೆಲಸಕಾರ್ಯಗಳಲ್ಲಿಯೂ ತೊಡಗಿಸಿಕೊಳ್ಳುತ್ತಾರೆ. ಅಲ್ಲಿನ ಮೀನುಗಾರಿಕೆ ವ್ಯವಹಾರಗಳು ಅನೇಕ ಕುಟುಂಬಗಳನ್ನು ಪೋಷಿಸುತ್ತವೆ. ಇದರಿಂದಾಗಿ ಬಡತನದಿಂದ ನರಳುವುದಿಲ್ಲ. ಮಹಿಳೆಯರೇ ಮೀನು ಮಾರಾಟ ಮಾಡಿ ಕುಟುಂಬಗಳ ವರಮಾನವನ್ನು ಹೆಚ್ಚಿಸುತ್ತಾರೆ. ಗೋವಾದ ಮತ್ಸ್ಯ ಸಂಪತ್ತು ಅವರನ್ನು ಮಧ್ಯಮವರ್ಗದ ಕುಟುಂಬದವರನ್ನಾಗಿ ಮಾಡುತ್ತದೆ. ಈ ಕಾರಣಕ್ಕಾಗಿ ಬಡತನದಲ್ಲಿ ಇರಬೇಕಾದ ಅನಿವಾರ್ಯತೆ ಅಲ್ಲಿನ ಮಹಿಳೆಯರಿಗಿಲ್ಲ. ಗೋವಾದ ಮಹಿಳೆಯರು ಸದಾ ಕ್ರಿಯಾಶೀಲ ಮನೋಭಾವದವರಾಗಿದ್ದಾರೆ. ಎಲ್ಲಾ ವಯೋಮಾನದ ಹೆಂಗಸರು ಆಕರ್ಷಕ ಉಡುಪುಗಳನ್ನೇ ಧರಿಸುತ್ತಾರೆ. ಕೌಟುಂಬಿಕ ವ್ಯವಹಾರಗಳಲ್ಲಿ ಚಾತುರ್ಯವನ್ನು ತೋರಿಸುತ್ತಾರೆಂದು ಲೇಖಕಿ ಅಭಿಪ್ರಾಯಪಟ್ಟಿದ್ದಾರೆ.

ಇಂದಿರಾ ಶಿವಣ್ಣ ಅವರ 'ಬದುಕಿಗೆ ಬಂಗಾರದ ಲೇಪನ' ಕೃತಿಯು ವಿವಿಧ ದೇಶಗಳ ಪ್ರವಾಸದ ಅನುಭವದ ಕಥನವಾಗಿದೆ. ಅದರಲ್ಲಿ ಲಂಡನ್ ದೇಶವು ಒಂದು. ಲಂಡನ್‌ನಲ್ಲಿ ವಾಸವಾಗಿರುವ ಮಗನ ಸಂಸಾರ, ಮನೆ, ಮಕ್ಕಳು ಎಂದು ತನ್ನದೇ ಗೂಡು ಕಟ್ಟಿಕೊಂಡಿರುವ ಬಗ್ಗೆ ಸಂತಸದ ಜೊತೆಗೆ, ತಾನು ಕೈಹಿಡಿದ ಬೆಳೆಸಿದ ಮಗ ವಿದೇಶದಲ್ಲಿ ಬದುಕುತ್ತಿರುವ ಜೀವನ ಶೈಲಿಯನ್ನು ಕುರಿತು ಲೇಖಕಿಯು "ಮಗನ ಸಂಸಾರವನ್ನು ಕಾಣಲು ನನಗೂ ಸಡಗರವನ್ನು ತರಿಸಿದ್ದವು. ಅಂತರಂಗದಲ್ಲಿ ಸೊಸೆ ಹಾಕುತ್ತಿದ್ದ ಹೆಜ್ಜೆಗಳು ಅಲ್ಲಿಯ ಮನೆಯ ಹೆಜ್ಜೆಗಳಿಗಿಂತ ಹಗುರವಾಗಿದ್ದವು. ಅವಳನ್ನು ಅನುಸರಿಸಿ ನಡೆಯುತ್ತಾ ನಾ ಕೈ ಹಿಡಿದು ಕಲಿಸಿದ ಹೆಜ್ಜೆಗಳು ಇವೆ ಏನು? ಎಂಬ ಸಂಶಯ ನನ್ನನ್ನು ಕಾಡದೆ ಇರಲಿಲ್ಲ."(ಇಂದಿರಾಶಿವಣ್ಣ, ೨೦೧೨, ಪುಟ-೨೯) ಎಂದು ಆತಂಕವನ್ನು ವ್ಯಕ್ತಪಡಿಸುತ್ತಾರೆ. ಆದರೆ ಲೇಖಕಿ ಸೊಸೆಯು ವೃತ್ತಿಯಲ್ಲಿ ವೈದ್ಯೆಯಾಗಿದ್ದು, ಕುಟುಂಬದ ಬಗ್ಗೆ ಕಾಳಜಿ ಉಳ್ಳವರಾಗಿದ್ದಳು. ಮನೆ, ಗಂಡ,

ಮಕ್ಕಳ ಕೆಲಸಗಳ ಜೊತೆಗೆ ವೃತ್ತಿಯ ಕೆಲಸಗಳಲ್ಲಿ ಆಕೆ ತೋರುವ ಶ್ರದ್ಧೆ ಲೇಖಕಿಯನ್ನು ಬಹುವಾಗಿ ಕಾಡಿಸುತ್ತದೆ. ಕುಟುಂಬ ಮತ್ತು ವೃತ್ತಿಯಿಂದಾಗಿಯೇ ದಾಂಪತ್ಯದಲ್ಲಿ ಬಿರುಕು ಮೂಡುವವರ ಮಧ್ಯೆ ವಿದೇಶಿ ಸೊಸೆಯ ಕ್ರಿಯಾಶೀಲ ವ್ಯಕ್ತಿತ್ವದಿಂದಾಗಿ ಲೇಖಕಿಗೆ ಇದ್ದ ಆತಂಕಗಳು ದೂರವಾಗುತ್ತವೆ. ಲಂಡನ್‌ನ ಕುಟುಂಬಗಳಲ್ಲಿ ಗರ್ಭಿಣಿಯರನ್ನು, ವಯಸ್ಸಾದವರನ್ನು ಮಕ್ಕಳನ್ನು ನೋಡಿಕೊಳ್ಳಲು ಕೇರ್‌ಸೆಂಟರ್‌ಗಳಿವೆ. ಅಲ್ಲಿ ಕುಟುಂಬದ ವಾತಾವರಣವಿದ್ದು, ಗರ್ಭಿಣಿಯರು ಯಾವುದೇ ಸಮಸ್ಯೆಗಳಿರದೇ ಸದಾ ಚಟುವಟಿಕೆಗಳಲ್ಲಿರುತ್ತಾರೆಂದು ಲೇಖಕಿ ನಿರೂಪಿಸುತ್ತಾರೆ.

ಆಸ್ಟ್ರೇಲಿಯಾದ ವಿಭಕ್ತ ಕುಟುಂಬಗಳಲ್ಲಿ ಮಹಿಳೆಯರ ಕ್ರಿಯಾಶೀಲತೆಯನ್ನು ಕುರಿತು ಪದ್ಮಾ ಗುರುರಾಜ್ ಅವರು 'ಕಾಂಗರೂಗಳ ನಾಡಿನಲ್ಲಿ' ಎಂಬ ಕೃತಿಯಲ್ಲಿ ದಾಖಲಿಸುತ್ತಾರೆ. ಅಲ್ಲಿನ ಕುಟುಂಬಗಳಲ್ಲಿ ಮಕ್ಕಳು ಬೆಳೆದಂತೆ ತಂದೆ ತಾಯಿಯವರನ್ನು ವೃದ್ಧಾಪ್ಯದಲ್ಲಿ ಒಂಟಿಯಾಗಿಸುತ್ತಾರೆ. ಲೇಖಕಿಗೆ ಪರಿಚಯವಾದ ಎಲಿಜಬೆತ್ ಎಂಬಾಕೆಯು ನಾಲ್ಕು ಮಕ್ಕಳನ್ನು ಹೆತ್ತು ಬೆಳೆಸಿದರೂ ವೃದ್ಧಾಪ್ಯದಲ್ಲಿ ಒಂಟಿಯಾಗಿರುವ ಬಗ್ಗೆ ತಿಳಿಸುತ್ತಾರೆ. ಆದರೆ ಅಲ್ಲಿನ ಹಿರಿಯರೇ ಮಕ್ಕಳೊಂದಿಗೆ ಇರಲು ಬಯಸುವುದಿಲ್ಲ. ವಿದೇಶದಲ್ಲಿ ಸಹಜವಾಗಿ ಅವಿಭಕ್ತ ಕುಟುಂಬಗಳಿರದೇ, ವಿಭಕ್ತ ಕುಟುಂಬಗಳೇ ಹೆಚ್ಚು. ಇದರಿಂದಾಗಿಯೇ ಭಾರತದ ಕುಟುಂಬಗಳಲ್ಲಿರುವ ಸಮಸ್ಯೆಗಳು ವಿದೇಶಿ ಕುಟುಂಬಗಳಲ್ಲಿ ಕಂಡುಬರುವುದಿಲ್ಲ. ಅವು ಮಕ್ಕಳ ಬೆಳವಣಿಗೆಗೆ ಸಹಕಾರಿ ಎಂದು ನಿರ್ಧರಿಸಿದಂತಿದೆ. ಫಾದರ್ಸ್ ಡೇ, ಮದರ್ಸ್ ಡೇ, ಈಸ್ಟರ್ ಡೇಗಳಿಗೆ ಕಾಣಿಕೆಗಳನ್ನು, ಹೂಗುಚ್ಛಗಳನ್ನು ಆಯಾ ಸಂದರ್ಭದಲ್ಲಿ ಹೆತ್ತವರಿಗೆ ಕೊಟ್ಟು, ಭೇಟಿ ಮಾಡಿ ಶುಭ ಹಾರೈಸುತ್ತಾರೆ. ವೃದ್ಧಾಪ್ಯದಲ್ಲಿರುವರಿಗೆ ಸರ್ಕಾರವೇ ವೃದ್ಧಾಪ್ಯ ವೇತನ ನೀಡುತ್ತದೆ. ಯುವಕ–ಯುವತಿಯರು ಮದುವೆ ಬಂಧನವಿಲ್ಲದೇ ಸಹಜೀವನ ನಡೆಸುತ್ತಾರೆ. ಉದ್ಯೋಗವಿಲ್ಲದ ಮಹಿಳೆಯರಿಗೆ ನಿರುದ್ಯೋಗ ಭತ್ಯೆ ನೀಡುತ್ತಿರುವುದು ಸಹಕಾರಿಯಾಗಿದೆ. ವಿದೇಶದಲ್ಲಿ ವಿಭಕ್ತ ಕುಟುಂಬಗಳಿಂದಾಗಿಯೇ ಮಹಿಳೆಯರು ಕೌಟುಂಬಿಕ ಸಮಸ್ಯೆಗಳನ್ನು ಕಾಣದೇ ಕುಟುಂಬ, ಸಮಾಜ, ಉದ್ಯೋಗ, ವ್ಯವಹಾರಗಳಲ್ಲಿ ಕ್ರಿಯಾಶೀಲರಾಗಿ ಕಂಡುಬರುತ್ತಾರೆ. ಇಂತಹ ಕುಟುಂಬಗಳಲ್ಲಿ ಗಂಡು–ಹೆಣ್ಣು ಸ್ವಾವಲಂಬಿ ಜೀವನ ನಡೆಸುವುದಾಗಿ ಅಲ್ಲಿನವರ ಅಭಿಪ್ರಾಯವಾಗಿದೆ. ಇಂತಹ ಭಾವನೆಗಳನ್ನೇ ವ್ಯಕ್ತಪಡಿಸುವ ಸಾರಾ ಅಬೂಬಕ್ಕರ್ ಅವರು 'ಐಷಾರಾಮದ ಆಳದಲ್ಲಿ' ಎಂಬ ಕೃತಿಯಲ್ಲಿ ಅಮೇರಿಕಾ ಜನರ ಕೌಟುಂಬಿಕ ಬದುಕು ಸುಖಕರವಾಗಿಲ್ಲ. ಅಮೇರಿಕಾದ ಮಕ್ಕಳು ಹದಿನಾರು ವರ್ಷದ ಪ್ರಾಯ ಬಂದೊಡನೆ ಮನೆಯಿಂದ ಹೊರ ನಡೆಯುತ್ತಾರೆ. ಇವರಲ್ಲಿನ ಸಂಬಂಧಗಳು ನಿರ್ಲಕ್ಷ್ಯಕ್ಕೆ ಗುರಿಯಾಗುತ್ತಾರೆ ಎಂದು ಹೇಳಿದರೂ ಇದು ಪೂರ್ಣ ಸತ್ಯವಲ್ಲ ಎಂದು ಹೇಳಿದಾರೆ. ಇಲ್ಲಿನ ಕೆಲ ಕುಟುಂಬಗಳು ಮಕ್ಕಳ ಕಾಲೇಜು ಶಿಕ್ಷಣಕ್ಕಾಗಿ ಹುಟ್ಟಿನಿಂದಲೇ ನಿಧಿ ಕೂಡಿಡುವ ಹೆತ್ತವರಿದ್ದಾರೆ. ಬೆಳೆದ ನಂತರ ಬಾಳ ಸಂಗಾತಿಯ ಆಯ್ಕೆ ಮಾತ್ರ ಅವರವರದ್ದೇ ಆಗಿರುತ್ತದೆ. ಹೆತ್ತವರು

ಏರ್ಪಡಿಸಿರುವ ಮದುವೆಗಳು ತೀರಾ ವಿರಳವಾಗಿವೆ. ಹಿರಿಯರು ಗೊತ್ತು ಮಾಡಿದ ಮದುವೆಯಾದರೂ ಸರಿ, ಮದುವೆಯ ಬಳಿಕ ತಂದೆ ತಾಯಿಗಳೊಡನೆ ಇರುವುದಿಲ್ಲ. ಹೆತ್ತವರು ಅದನ್ನು ಇಷ್ಟಪಡುವುದಿಲ್ಲ. ಮಕ್ಕಳ ವೈವಾಹಿಕ ಬದುಕಿನಲ್ಲಿ ತಂದೆ ತಾಯಿಗಳು ತಲೆ ತೂರಿಸುವುದಿಲ್ಲ. ವಿಶೇಷ ಕಾರ್ಯಕ್ರಮಗಳಲ್ಲಿ ಎಲ್ಲರೂ ಸೇರಿ ಸಂಭ್ರಮಿಸುತ್ತಾರೆ. ಭಾರತದ ಮಟ್ಟಿಗೆ ಈ ಸಂಗತಿಗಳು ನಕಾರಾತ್ಮಕವಾಗಿ ಕಂಡರು, ವಿದೇಶಗಳಲ್ಲಿ ಇಂತಹ ಕುಟುಂಬಗಳಿಂದಾಗಿಯೇ ಸ್ವಾವಲಂಬಿತನದಿಂದ ದುಡಿಯುವುದಕ್ಕೆ ಮುಂದಾಗುತ್ತಾರೆ. ಅಲ್ಲದೇ ಇಳಿವಯಸ್ಸಿನಲ್ಲೂ ಕ್ರಿಯಾಶೀಲವಾಗಿ ಜೀವನ ಸಾಗಿಸುವ ದಂಪತಿಗಳು ವಿದೇಶಗಳಲ್ಲಿರುವುದಾಗಿ ಲೇಖಕಿ ಅಭಿಪ್ರಾಯಪಟ್ಟಿದ್ದಾರೆ.

ನೀಳಾದೇವಿ ಅವರು 'ನಾ ಕಂಡ ಅಖಂಡ' ಎಂಬ ಕೃತಿಯಲ್ಲಿ ವಿದೇಶಿ ಕುಟುಂಬಗಳಲ್ಲಿ ಮಹಿಳೆಯರ ಚಟುವಟಿಕೆಗಳ ಕುರಿತು "ಅಮೇರಿಕಾದ ಮನೆಗಳಲ್ಲಿ ತಮ್ಮ ಆಹಾರವನ್ನು ತಾವೇ ಮಾಡಿಕೊಳ್ಳುತ್ತಾರೆ. ಹೊತ್ತು ಕಳೆಯಲು ಕಷ್ಟವಾದರೆ ಯಾವುದಾದರೂ ಸಂಸ್ಥೆಗೆ ಹೋಗಿ ಉಚಿತ ಸಹಾಯ ಮಾಡಿ ಬರುತ್ತಾರೆ. ಹೀಗೆ ಯಾರ ಆಧಾರವನ್ನು ಇಟ್ಟುಕೊಳ್ಳದೇ ಒಬ್ಬರೇ ಮನೆಯಲ್ಲಿ ಕುರ್ಚಿ, ಮೇಜು, ಸಹಾ ಬಿಸಿಲಿಗಿಟ್ಟು, ಧೂಳು ತೆಗೆದು, ಕೊಳೆ ಬಟ್ಟೆ ಸ್ವಚ್ಛ ಮಾಡಿಕೊಟ್ಟು, ದಿನಸಿ ಸಾಮಾನುಗಳನ್ನು ತುಂಬಿ, ರಿಪೇರಿ ಕೆಲಸ ಮಾಡಿಕೊಟ್ಟು ಅವರನ್ನು ನಕ್ಕು ನಗಿಸಿ ಹೊರಟು ಹೋಗುತ್ತಾರೆ. ವಾರದ ಮಿಕ್ಕ ಐದು ದಿನಗಳು ಒಬ್ಬರಿಗೊಬ್ಬರು ಅಪರಿಚಿತರೇ"(ನೀಳಾ ದೇವಿ, ೧೯೮೫, ಪುಟ-೪೨) ಎಂದು ನಿರೂಪಿಸುತ್ತಾರೆ. ಪರಮೇಶ್ವರಿ ಲೋಕೇಶ್ವರ್ ಅವರು 'ಅಮೇರಿಕಾದಲ್ಲಿ ಅರವತ್ತು ದಿನಗಳು' ಕೃತಿಯಲ್ಲಿ ಲೇಖಕಿ ಅಮೇರಿಕದ 'ಡಿಸ್ನಿ ವರ್ಲ್ಡ್' ವೀಕ್ಷಣೆಗೆ ಹೊರಟ ಸಂದರ್ಭದಲ್ಲಿ ಕುಟುಂಬದಲ್ಲಿ ಮಹಿಳೆಯರ ಪಾತ್ರವನ್ನು ಕುರಿತು ನಿರೂಪಿಸುತ್ತಾರೆ. ಅಲ್ಲಿನ ಪ್ರಾಣಿ ಪಕ್ಷಿಗಳ ವೀಕ್ಷಣೆಯು ಪ್ರಮುಖ ದೃಶ್ಯವಾಗಿತ್ತು, ಮೂರು ನಾಲ್ಕು ರೆಡ್ ಇಂಡಿಯನ್ ಕುಟುಂಬಗಳು ತಮ್ಮ ಜೋಪಡಿಯ ಹೊರಗು ಒಳಗೂ ಓಡಾಡುತ್ತಾ, ೧೬ನೇ ಶತಮಾನದ ಉಡುಗೆ ತೊಡುಗೆಯಲ್ಲಿದ್ದರು. ಮಕ್ಕಳನ್ನು ಎತ್ತಿ ಆಡಿಸುತ್ತಿರುವ, ಹೆಣ್ಣು ಮಕ್ಕಳಿಗೆ ಜಡೆ ಎಣೆಯುತ್ತಿರುವ, ಮತ್ತೆ ಕೆಲವರು ಒಲೆಯ ಮೇಲೆ ಅಡಿಗೆಗೆ ಇಟ್ಟು ಬೆಂಕಿ ಊದುತ್ತಿದ್ದರು. ಇವೆಲ್ಲಾ ಜೀವಂತ ದೃಶ್ಯದಂತೆ ಕಂಡಿತು. ಆಮೇಲೆ ಇವೆಲ್ಲಾ ಭ್ರಮಾ ಲೋಕವೆಂದು ಲೇಖಕಿಗೆ ತಿಳಿಯುತ್ತದೆ. ಭಾರತದ ಗ್ರಾಮೀಣ ಪ್ರದೇಶದ ಕುಟುಂಬಗಳಲ್ಲಿ ಮಹಿಳೆಯರು ಜವಾಬ್ದಾರಿಯುತ ಕೆಲಸಗಳು, ಮಕ್ಕಳ ಪೋಷಣೆ, ಪಾಲನೆ, ಆಹಾರ, ಉದ್ಯೋಗಗಳಿಂದ ಕ್ರಿಯಾಶೀಲವಾಗಿದ್ದನ್ನು ಆ ದೃಶ್ಯ ನೆನಪಿಸುವಂತಿತ್ತು. ಆ ಚಿತ್ರಣವು ದೃಶ್ಯವೆಂಬಂತೆ ನಿರ್ಮಿಸಿರುವುದು ಆಕರ್ಷಣೆಯ ಕೇಂದ್ರವಾಗಿತ್ತು. ಕುಟುಂಬದಲ್ಲಿ ಮಹಿಳೆಯರ ಪ್ರಾಮುಖ್ಯತೆಯನ್ನು ತಿಳಿಸುವ ಉದ್ದೇಶದಿಂದಲೇ ಇಂತಹ ದೃಶ್ಯವನ್ನು ನಿರ್ಮಿಸಿದ್ದ ಬಗ್ಗೆ ಲೇಖಕಿ ದಾಖಲಿಸುತ್ತಾರೆ.

ವಿವಿಧ ದೇಶಗಳ ಪ್ರವಾಸದ ಅನುಭವ ಕಥನವಾದ 'ಹಕ್ಕಿಯ ತೆರೆಯಲಿ' ಎಂಬ ಕೃತಿಯಲ್ಲಿ ಸ್ಕಾಂಡಿನೇವಿಯಾ ದೇಶದ ಮಹಿಳೆಯರ ಕೌಟುಂಬಿಕ ಸ್ಥಿತಿಗತಿಗಳನ್ನು ಕುರಿತು ಹೀಗೆ ಹೇಳಿದ್ದಾರೆ. "ಈ ಮುಂದುವರೆದ ದೇಶದಲ್ಲಿ ಸ್ತ್ರೀಯು ಗರ್ಭಿಣಿಯಾದ ಕೂಡಲೇ ಸರ್ಕಾರವು ಕಡ್ಡಾಯವಾಗಿ ಉಚಿತ ಆರೋಗ್ಯ ತಪಾಸಣೆ ಸೌಲಭ್ಯವನ್ನು ನೀಡಿ, ಹೆರಿಗೆಯ ನಂತರ ಮಹಿಳೆಗೆ ಒಂದು ವರ್ಷವಿಡಿ ಹಕ್ಕಿನ ರಜೆ ನೀಡುತ್ತದೆ. ಈ ರಜೆಯನ್ನು ಗಂಡನೊಂದಿಗೆ ಹಂಚಿಕೊಳ್ಳಬಹುದು. ಹುಟ್ಟಿದ ಮಗುವಿಗೆ ಎಲ್ಲ ರೀತಿ ಸೌಲಭ್ಯವನ್ನು ಸರ್ಕಾರ ನೀಡುತ್ತದೆ. ಮಕ್ಕಳಿಗೆ ವಿದ್ಯಾಭ್ಯಾಸ ಹನ್ನೆರಡನೆಯ ತರಗತಿಯವರೆಗೆ ಕಡ್ಡಾಯ ಮತ್ತು ಉಚಿತ, ಆಕಸ್ಮಾತ್ ಮಕ್ಕಳು ಶಾಲೆಗೆ ಸೇರದಿದ್ದರೆ ತಾಯಿತಂದೆಯರು ಶಿಕ್ಷೆಗೆ ಒಳಪಡುತ್ತಾರೆ" (ಸುಧಾಮೂರ್ತಿ, ೨೦೦೩, ಪುಟ-೯೨) ಈ ಹೇಳಿಕೆಯು ಸ್ಕಾಂಡಿನೇವಿಯಾದ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರ ತಾಯ್ತತನ, ಕುಟುಂಬ ಮತ್ತು ಮಕ್ಕಳ ಪೋಷಣೆಗೆ ಕೊಟ್ಟಿರುವ ಮಹತ್ವವನ್ನು ಸೂಚಿಸುತ್ತದೆ. ಭಾರತದಲ್ಲಿರುವ ಹದಿನೈದು ದಿನಗಳ ರಜೆ, ವಿದೇಶದಲ್ಲಿ ಒಂದು ವರ್ಷದ ಹಕ್ಕಿನ ರಜೆ ನಿಜಕ್ಕೂ ಸೋಜಿಗವನ್ನುಂಟು ಮಾಡುತ್ತದೆ. ದೇಶದ ಸೀಮಿತ ಜನಸಂಖ್ಯೆಯು ಈ ಪಿತೃತ್ವ ರಜೆ ಪಡೆಯಲು ಕಾರಣವಾಗಿರಬಹುದಾಗಿದೆ.

ಉತ್ತರ ಭಾರತದ ಪ್ರಸಿದ್ಧ ತಾಣಗಳಾದ ಕೇದಾರ, ಯಮುನೋತ್ರಿ, ಗಂಗೋತ್ರಿ, ಬದರಿನಾಥ ಕ್ಷೇತ್ರಗಳ ಪ್ರವಾಸದ ಅನುಭವವನ್ನು ಹೇಮಾಮಾಲಾ.ಬಿ. ಅವರು ತಮ್ಮ 'ಚಾರ್ ಧಾಮ್' ಕೃತಿಯಲ್ಲಿ ದಾಖಲಿಸಿದ್ದಾರೆ. ಅನೇಕ ಕುಟುಂಬಗಳು ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಿದ್ದು, ದೇವರ ಭಜನೆ ಶಿವಸ್ತುತಿಯಲ್ಲಿ ಮಹಿಳೆಯರು ಭಾಗವಹಿಸುತ್ತಾರೆ. ಮಹಿಳೆಯರೇ ತಂಡವಾಗಿ ರಚನೆಗೊಂಡು ಕೇದಾರನಾಥದಲ್ಲಿ ಭಜನೆ, ಶಿವಸ್ತುತಿ ಹಾಡಲಾರಂಭಿಸಿದ್ದು ವಿಶೇಷವೆನಿಸುತ್ತದೆ. ಕುಟುಂಬ, ಸಂಸಾರ, ಅಡುಗೆ ಮನೆಗಳಿಗೆ ಸೀಮಿತಗೊಂಡ ಮಹಿಳೆಯರು ಆಧ್ಯಾತ್ಮಿಕ ವಿಚಾರಗಳಲ್ಲೂ ಕ್ರಿಯಾಶೀಲವಾಗಿದ್ದಾರೆ. ಪ್ರವಾಸ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಕ್ರಿಯಾಶೀಲವಾದ ಕೌಟುಂಬಿಕ ಮಹಿಳೆಯರನ್ನು ಕಂಡು ಅಲ್ಲಿನ ಪ್ರವಾಸಿಗರು ಮೆಚ್ಚುಗೆ ವ್ಯಕ್ತಪಡಿಸಿದರೆಂದು ಲೇಖಕಿ ಪ್ರಸ್ತಾಪಿಸುತ್ತಾರೆ.

ಪ್ರವಾಸ ಕಥನಗಳಲ್ಲಿ ನಿರೂಪಿತವಾದ ಮಹಿಳೆಯರ ಕೌಟುಂಬಿಕ ನೆಲೆಯಲ್ಲಿನ ಕ್ರಿಯಾಶೀಲತೆಗೆ ಹಲವು ಆಯಾಮಗಳಿವೆ. ಅವಿಭಕ್ತ ಕುಟುಂಬಗಳು ಹೊಡೆದು ವಿಭಕ್ತ ಕುಟುಂಬಗಳಾಗಿವೆ. ವಿಭಕ್ತ ಕುಟುಂಬಗಳು ವಿದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ವಿಭಕ್ತ ಕುಟುಂಬಗಳಲ್ಲಿಯೂ ಮಹಿಳೆಯರು ಹೆಚ್ಚು ಕ್ರಿಯಾಶೀಲರಾಗಿ ಕಂಡುಬರುತ್ತಾರೆ. ಅವರ ಸಂಸಾರ, ಉದ್ಯೋಗ, ಮಕ್ಕಳ ಕಡೆ ಗಮನ ಉಳ್ಳವರಾಗಿದ್ದಾರೆ. ಅಲ್ಲಿನ ಕಾರ್ಯಕ್ರಮಗಳಲ್ಲಿ ಭಾರತೀಯ ಮಹಿಳೆಯರು ಒಟ್ಟಾಗಿ ಸೇರಿ ನಾಟಕ, ಕವನ, ಕಥೆ, ಕಲಾ ಪ್ರದರ್ಶನ ನೀಡುತ್ತಿರುವುದು ಸಾಂಸ್ಕೃತಿಕವಾದ ಕ್ರಿಯಾಶೀಲತೆಗೆ ದ್ಯೋತಕವಾಗಿದೆ. ಒಂದರ್ಥದಲ್ಲಿ ಇಂತಹ ಸಾಂಸ್ಕೃತಿಕವಾದ ಕ್ರಿಯಾಶೀಲತೆ ಮತ್ತು ಕೌಟುಂಬಿಕ ಕ್ರಿಯಾಶೀಲತೆಯೂ ಪರಸ್ಪರ ಪೂರಕವೆಂದು ಹೇಳಬಹುದಾಗಿದೆ. ವಿದೇಶಿ

ಸೊಸೆಯರು ಕುಟುಂಬಕ್ಕೆ ನೀಡುವ ಒತ್ತನ್ನು ಲೇಖಕಿ ಶ್ಲಾಘಿಸಿದ್ದಾರೆ. ಕುಟುಂಬ ಪೋಷಿಸುವುದಕ್ಕೆ ದುಡಿಯುವ ಮಹಿಳೆಯರಿದ್ದಾರೆ. ಭಾರತದ ಸಂಪ್ರದಾಯಸ್ಥ ಕುಟುಂಬಗಳಲ್ಲಿ ಮಹಿಳೆಯರು ಶಿವಸ್ತುತಿಯನ್ನು ರಾಗಬದ್ಧವಾಗಿ ಹಾಡುವಲ್ಲಿ ಆಧ್ಯಾತ್ಮಿಕ ಕ್ರಿಯಾಶೀಲತೆ ಕಂಡುಬರುತ್ತವೆ. ಕುಟುಂಬಕ್ಕೆ ಸೀಮಿತವಾಗದ ಮಹಿಳೆಯರು ಎಲ್ಲಾ ರಂಗಳಲ್ಲೂ ತಮ್ಮನ್ನು ತೊಡಗಿಸಿಕೊಂಡು, ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸುವ ಜಾಣ್ಮೆಯನ್ನು ಇಂದಿನ ಆಧುನಿಕ ಮಹಿಳೆಯರು ತೋರುತ್ತಿರುವುದು ಗಮನಾರ್ಹವೆನಿಸಿದೆ.

೬.೨. ಔದ್ಯೋಗಿಕ ರಂಗದಲ್ಲಿ ಮಹಿಳೆಯರ ಕ್ರಿಯಾಶೀಲತೆ

ಪ್ರಾಚೀನ ಕಾಲದಿಂದ ಮಹಿಳೆಯ ಚರಿತ್ರೆಯನ್ನು ಗಮನಿಸಿದಾಗ, ಮಾತೃ ಪ್ರಧಾನ ಸಮಾಜದಲ್ಲಿ ಮಹಿಳೆಯನ್ನು ಪ್ರತಿನಿಧಿಸುವ ಸಂಗತಿಗಳು ಸಾಕಷ್ಟಿದ್ದವು. ಗಂಡು ಹೆಣ್ಣಿನ ನಡುವೆ ಯಾವುದೇ ಭಿನ್ನತೆಯಿಲ್ಲದೆ ಸಮಾನತೆಯಿತ್ತು. ಅಲೆಮಾರಿ ಜೀವನದಿಂದ ಒಂದು ಕಡೆ ನೆಲೆನಿಲ್ಲುವುದಕ್ಕೆ ಕೃಷಿ ಕೆಲಸಗಳು ಸಹಕಾರಿಯಾದವು. ಮಕ್ಕಳು, ಮನೆ, ಕುಟುಂಬವೆಂದು ಹಂತ ಹಂತವಾಗಿ ಪುರುಷನ ಅಧೀನಕ್ಕೆ ಒಳಗಾದಳು. ಆರ್ಥಿಕ ನಿರ್ವಹಣೆಯು ಪುರುಷನಿಗೆ ಸೀಮಿತವಾಗಿ ಮಹಿಳೆ ಕುಟುಂಬಕ್ಕೆ ಸೀಮಿತವಾದಳು. ಕಟ್ಟುಪಾಡುಗಳು, ಧಾರ್ಮಿಕತೆಗಳು, ನಂಬಿಕೆಗಳು ಹೆಚ್ಚಾದಂತೆಲ್ಲಾ ಪುರುಷರ ಕೈಕೆಳಗೆ ಬದುಕು ಬೇಕಾದ ಪರಿಸ್ಥಿತಿ ಉಂಟಾಗಿ ತನ್ನ ಅಭಿವ್ಯಕ್ತಿಯನ್ನು ಕಳೆದುಕೊಂಡಳು. ಇಂತಹ ಪುರುಷ ಸಂಸ್ಕೃತಿಯ ಕಪಿಮುಷ್ಟಿಯಿಂದ ಬಿಡಿಸಿಕೊಂಡು, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮೇಲೆದ್ದ ಮಹಿಳೆ ಇಂದು ವಿಶ್ವದ ಗಮನವನ್ನು ಸೆಳೆಯುತ್ತಿದ್ದಾಳೆ. ಆಧುನಿಕ ಕನ್ನಡ ಪ್ರವಾಸ ಕಥನಗಳಲ್ಲಿ ಔದ್ಯೋಗಿಕ ರಂಗದಲ್ಲಿನ ಮಹಿಳೆಯ ಕ್ರಿಯಾಶೀಲತೆಯು ದ್ಯೋತಕ ವ್ಯಕ್ತವಾಗಿರುವ ಕುರಿತು ಅನುಪಮಾ ನಿರಂಜನ ಅವರ 'ಸ್ನೇಹಯಾತ್ರೆ' ಕೃತಿಯಲ್ಲಿ ಮಹಿಳೆಯರ ಕ್ರಿಯಾಶೀಲತೆ ಅಂಶಗಳು ದಟ್ಟವಾಗಿ ಕಾಣಿಸಿಕೊಳ್ಳುತ್ತವೆ. ಜರ್ಮನ್ ಶಿಕ್ಷಣವು ಕೇವಲ ಜ್ಞಾನಕ್ಕಾಗಿ ಅಲ್ಲದೆ, ದೇಶವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆ ಇರುವುದು ಕಂಡುಬರುತ್ತದೆ. ಇಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣದಿಂದಾಗಿ ಅಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಗಳು ಸೆಕೆಂಡರಿ ಶಿಕ್ಷಣ ಪಡೆಯುತ್ತಾರೆ. ನಂತರದಲ್ಲಿ ಔದ್ಯೋಗಿಕ ಶಿಕ್ಷಣ ಪಡೆಯುತ್ತಾರೆ. ಇದಕ್ಕಾಗಿ ಸರ್ಕಾರವು ೩೦೦ ಔದ್ಯೋಗಿಕ ಶಿಕ್ಷಣ ಸಂಸ್ಥೆಗಳನ್ನು ತೆರೆದಿದೆ. ತಮಗೆ ಉದ್ಯೋಗ ಮಾಡುವ ಇಚ್ಚೆಯ ಅನುಗುಣವಾಗಿ ಔದ್ಯೋಗಿಕ ತರಬೇತಿಗಳನ್ನು ನೀಡುತ್ತಾರೆ. ತಮ್ಮ ಆಸಕ್ತಿ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಸದಾ ಒಂದಲ್ಲಾ ಒಂದು ಕೆಲಸದಲ್ಲಿ ನಿರತರಾಗಿರುವಂತೆ ಸರ್ಕಾರವೇ ಸಹಕಾರಿಯಾಗುತ್ತದೆ. ಇದು ಪುರುಷರಿಗೆ ಮಾತ್ರ ಸೀಮಿತವಾಗದೇ ಮಹಿಳೆಯರಿಗೂ ಉದ್ಯೋಗ ಮಾಡುವ ಅವಕಾಶ ಮಾಡಿಕೊಟ್ಟಿದೆ. ಅಲ್ಲಿನ ಮಹಿಳೆಯೊಬ್ಬಳಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದು ಉದ್ಯೋಗದಲ್ಲಿದ್ದರೂ, ಶಿಕ್ಷಣ ಮುಂದುವರೆಸುವುದಕ್ಕೆ ಪ್ಯಾಕ್ಟರಿಯೇ ಉಚಿತ ಪುಸ್ತಕಗಳನ್ನು ಒದಗಿಸಿ, ಸಂಬಳ ನೀಡಿದ್ದರಿಂದ ಉದ್ಯೋಗಸ್ಥಳಾಗಿದ್ದನ್ನು ಲೇಖಕಿ ಪ್ರೀತಿಯಿಂದಲೇ ನೆನೆಯುತ್ತಾರೆ. ಅಲ್ಲಿನ ದುಡಿಯುವ

ಜನರನ್ನು ಕಂಡು ಲೇಖಕಿಗೆ ಬಾಂಬ್ ದಾಳಿಯಿಂದ ನುಚ್ಚು ನೂರಾಗಿದ್ದ ದೇಶವನ್ನು ಪುನಃ ಬಲಿಷ್ಠವಾಗಿ ಕಟ್ಟುವುದಕ್ಕೆ ಇಂತಹ ಅವಿರತ ಶ್ರಮದ ಫಲವೆಂಬಂತೆ ಗೋಚರಿಸುತ್ತದೆ ಎಂದಿದ್ದಾರೆ.

ವಿದೇಶಿ ಮಹಿಳೆಯರಲ್ಲಿ ಉದ್ಯೋಗದ ಮೇಲಿರುವ ಬದ್ಧತೆ ಬಗ್ಗೆ ಲೀಡಾ ಎನ್ನುವ ಜರ್ಮನ್ ಮಹಿಳೆಯನ್ನು ವಿಚಾರಿಸುತ್ತಾರೆ. ಆಕೆ ಔದ್ಯೋಗಿಕ ಶಿಕ್ಷಣ ಪಡೆದು ಆಫ್‌ಸೆಟ್ ಮುದ್ರಣ ತರಬೇತಿ ಪಡೆದು ಉದ್ಯೋಗ ಮಾಡುತ್ತಿದ್ದಳು. ಮದುವೆಯಾಗಿ ಮಕ್ಕಳನ್ನು ಪಡೆದ ನಂತರ ಎಂಟು ವರ್ಷಗಳ ಕಾಲ ಕೆಲಸ ಬಿಟ್ಟಾಗಲೂ ಆಕೆ ಉನ್ನತ ಪರೀಕ್ಷೆ ಬರೆದು ತರಬೇತಿ ಪಡೆಯುತ್ತಾಳೆ. ಆಕೆ ಬೇರೆ ಸ್ಥಳಕ್ಕೆ ಹೋಗುವುದನ್ನು ಕೇಳಿದ ಲೇಖಕಿ ಗಂಡ, ಮಕ್ಕಳ ಪೋಷಣೆಯ ಹೊಣೆಗಾರಿಕೆಯ ಬಗ್ಗೆ ವಿಚಾರಿಸಿದಾಗ ನನ್ನ ಗಂಡ ನೋಡಿಕೊಳ್ಳುತ್ತಾರೆ. ಎಂಟು ವರ್ಷ ನಾನು ನೋಡಿಕೊಂಡಿಲ್ಲವೇ ಎಂದು ಉತ್ತರಿಸಿದಳು. ಮನೆಕೆಲಸ ಮತ್ತು ಮಕ್ಕಳ ಕೆಲಸವನ್ನು ಮಾಡುವ ಇಲ್ಲಿನ ಗಂಡಸರು ಕೀಳೆಂದು ಭಾವಿಸುವುದಿಲ್ಲ. ಜರ್ಮನ್ ಮಹಿಳೆಯರು ಮುಕ್ತ ಮನಸ್ಸಿನಿಂದಲೇ ವ್ಯವಹರಿಸುವುದು, ವ್ಯಥಾ ಕಾಲಹರಣ ಮಾಡುವುದನ್ನು ಅವರು ಎಂದಿಗೂ ಇಷ್ಟಪಡಲಾರರು. ಅಲ್ಲದೇ ಹಿರಿಯ ಮಹಿಳೆಯಾದ ಅಲೆಗ್ಸಂಡ್ರಾ ಪೋಲೆಕ್ಸ್ ದುಡಿಯುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾಳೆ. ಆ ಸಂಸ್ಥೆಯ ಕಿರಿಯ ಸದಸ್ಯರಿಗೆ ಮಾದರಿಯಾಗಿದ್ದರು. ಹೇಮಲತಾ.ಎಚ್.ಎಂ. ಅವರ 'ಹಂಗೇರಿಯಲ್ಲಿ ಹೇಮ' ಕೃತಿಯಲ್ಲಿ ಮಹಿಳೆಯರು ಉದ್ಯೋಗದಿಂದ ಹೊರಬರುತ್ತಿದ್ದು, ಪಿಂಚಣಿ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ ಎಂದಿದ್ದಾರೆ. ದೀರ್ಘಾವಧಿ ಸೇವೆ ಸಲ್ಲಿಸದಿದ್ದರೇ ಪಿಂಚಣಿ ಸೌಲಭ್ಯ ಲಭಿಸುವುದಿಲ್ಲ. ಅನೇಕ ಕಾರಣಗಳಿಂದಾಗಿ ಇಲ್ಲಿನ ಮಹಿಳೆಯರು ದೀರ್ಘಾವಧಿಯವರಿಗೆ ಕಾರ್ಯನಿರ್ವಹಿಸದೇ, ಪಿಂಚಣಿ ಸೌಲಭ್ಯ ಪಡೆಯದೇ ತೊಂದರೆಗಳಿಗೆ ಸಿಲುಕಿಕೊಂಡಿದ್ದಾರೆ. ಉದ್ಯೋಗಸ್ಥ ಮಹಿಳೆಯರ ಸಾಮಾಜಿಕ, ಕೌಟುಂಬಿಕ ಸಂಕಷ್ಟಗಳಿಗೆ ಅಲ್ಲಿನ ಸರ್ಕಾರ ಸ್ಪಂದಿಸಿದ್ದರೆ ಮತ್ತಷ್ಟು ವಲಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ಆಗುತ್ತಿತ್ತು.

ಎಚ್.ಎಸ್.ಅನುಪಮಾ ಅವರು 'ಚೆಗೆವಾರನ ನೆಲದಲ್ಲಿ' ಪ್ರವಾಸ ಕಥನದಲ್ಲಿ ಪೆರು ದೇಶದ ಮಹಿಳೆಯರ ಔದ್ಯೋಗಿಕತೆ ಕುರಿತು ಮಹತ್ವದ ಸಂಗತಿಗಳನ್ನು ಚರ್ಚಿಸಿದ್ದಾರೆ. ಅಲ್ಲಿನ ಮಹಿಳೆಯರು ಬರೀ ಉದ್ಯೋಗಗಳಲ್ಲಿ ಕಾಲಕಳೆಯುವುದಕ್ಕಿಂತ ರಾಜಕಾರಣದಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳುತ್ತಾರೆ. ಅವರು ಅದನ್ನು ಒಂದು ಔದ್ಯೋಗಿಕ ಕ್ಷೇತ್ರದಂತೆ ಭಾವಿಸಿ, ರಾಜಕೀಯದಲ್ಲಿ ಪ್ರಾತಿನಿಧ್ಯ ಪಡೆಯುತ್ತಿದ್ದಾರೆ. ಅರ್ಜೆಂಟೀನಾ, ಕೊಸ್ಟರೀಕಾ, ಪೆರುವಿನಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. "ರಾಜಕೀಯದಲ್ಲಿ ೪೪% ಸ್ಥಾನಗಳಲ್ಲಿ ಕ್ರಿಯಾಶೀಲರಾಗಿದ್ದರೆ. ಸ್ಥಳೀಯ ಮತ್ತು ಪ್ರಾಂತೀಯ ಸಂಸ್ಥೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ೧೨%ರಷ್ಟಿದೆ. ಅದನ್ನು ಉತ್ತಮಗೊಳಿಸುವಂತಹ ಪ್ರಯತ್ನಗಳು, ಯೋಜನೆಗಳು ಆ ದೇಶದಲ್ಲಿ ನಿರಂತರವಾಗಿ ನಡೆಯುತ್ತಲೇ ಇವೆ. 'ಮಹಿಳೆಯರು ಹೆಚ್ಚು ಡೆಮೋಕ್ರಟಿಕ್' ಎನ್ನುವ ಕಾರಣಕ್ಕಾಗಿ ಅವರಿದ್ದಲ್ಲೆಲ್ಲ ಪಾರದರ್ಶಕತೆ, ಪ್ರಮಾಣಿಕತೆ

ಹೆಚ್ಚಿರುತ್ತದೆ."(ಅನುಪಮಾ.ಎಚ್.ಎಸ್. ೨೦೧೭, ಪುಟ-೧೧೪) ಹೀಗಾಗಿ ದೇಶಗಳನ್ನು ಪ್ರಮಾಣಿಕವಾಗಿ ಕಟ್ಟಲು ಅನುಕೂಲವಾಗುತ್ತದೆ ಎಂಬ ದೃಷ್ಟಿಕೋನಗಳು ಅಲ್ಲಿನ ದೇಶಗಳಲ್ಲಿದೆ. ದಕ್ಷಿಣ ಅಮೇರಿಕಾದ ಸ್ಯಾನ್ ಪೆಡ್ರೊ ಮಾರ್ಕೆಟ್‌ನಲ್ಲಿ ಮಹಿಳೆಯರೇ ಸ್ವಯಂ ಉದ್ಯೋಗದ ರೀತಿಯಲ್ಲಿ ಅಲ್ಲಿನ ವೈವಿಧ್ಯವಾದ ಆಹಾರದ ಸರಕುಗಳನ್ನು ಮಾರುತ್ತಿದ್ದರು. ಹಂದಿಯ ತಲೆ, ದೇಹವನ್ನು ಅರೆ ಬರೆ ಕಡಿದ ಮಾಂಸಗಳು, ಬೃಹತ್ ಮೀನು ರಾಶಿಗಳು ಅಲ್ಲಿನ ಪ್ರಾಣಿಯ ಮಾಂಸ, ತಲೆಗಳ ರಾಶಿ ರಾಶಿಯಲ್ಲಿ ಮಾರಾಟ ಮಾಡುತ್ತಿದ್ದರು. ಕಪ್ಪೆ ಚರ್ಮ ಸುಲಿದ ದೇಹ, ಬೃಹತ್ ಮಾಂಸದ ರಾಶಿಗಳ ಮುಂದೆ ಕೂತು ಮಾಂಸವನ್ನು ಕಡಿದು ಮಾರಲು ಕಟ್ಟುಮಸ್ತಿನ ಹೆಂಗಸರು ಇರುವ ಬಗ್ಗೆ ಲೇಖಕಿ ಪ್ರಸ್ತಾಪಿಸುತ್ತಾರೆ. ದಕ್ಷಿಣ ಆಫ್ರಿಕಾದ ಮಾರುಕಟ್ಟೆಗಳಲ್ಲಿ ಹೆಂಗಸರೇ ವಿವಿಧ ಪ್ರಾಣಿಗಳ ಮಾಂಸ ಮಾರುವ ಉದ್ಯೋಗವನ್ನು ನಂಬಿಕೊಂಡಿದ್ದಾರೆ. ಮಾಂಸಪ್ರಿಯರು ಹೆಚ್ಚಿರುವ ಕಾರಣಕ್ಕೆ, ಮಾಂಸ ಮಾರುವುದನ್ನು ಲಾಭದಾಯಕ ಉದ್ಯೋಗವಾಗಿ ಸ್ವೀಕರಿಸಿದ್ದಾರೆ.

ಉಮಾರಾವ್ ಅವರ 'ಇನ್ನು ಎಲ್ಲಿಗೋಟ' ಪ್ರವಾಸ ಕಥನವು ಥೈಲ್ಯಾಂಡ್‌ಗೆ 'ಸೆಕ್ಸ್ ಕ್ಯಾಪಿಟಲ್' ಎಂಬ ಹೆಸರಿದ್ದು ಲೈಂಗಿಕ ಕಾರ್ಯಕರ್ತರಿಂದ ಈ ನಗರಕ್ಕೆ ಕೆಟ್ಟ ಹೆಸರು ಬಂದಿದೆ. ಲೈಂಗಿಕ ದಾಹಕ್ಕೆ ಹೆಸರುವಾಸಿಯಾದ ಪಟ್ಟಾಯದಲ್ಲಿ ಸ್ವಾಭಿಮಾನದ ಬದುಕನ್ನು ಕಟ್ಟಿಕೊಂಡ ಮಹಿಳೆಯರಿದ್ದಾರೆ. ಲೇಖಕಿಗೆ ಪರಿಚಯವಾದ 'ಟಸ್ಸಾಮಿ' ಎನ್ನುವ ಟ್ಯಾಕ್ಸಿ ಚಾಲಕಿ ಸ್ವಾಭಿಮಾನದ ಬದುಕನ್ನು ಕಂಡುಕೊಂಡಿದ್ದಾಳೆ. ಟಸ್ಸಾಮಿ ಹೇಳುವ ಪ್ರಕಾರ 'ಬಟ್ಟೆ ಅಂಗಡಿಗಳಲ್ಲಿ ಪ್ಲೋಂಟಿಗ್ ಮಾರ್ಕೆಟ್‌ಗಳಲ್ಲಿ, ಡಿಪಾರ್ಟ್‌ಮೆಂಟ್ ಸ್ಟೋರ್‌ಗಳಲ್ಲಿ, ಪುಟ್ ಮಸಾಜ್ ಪಾರ್ಲರ್‌ಗಳಲ್ಲಿ, ಹೋಟೆಲ್‌ಗಳಲ್ಲಿ, ಕಪ್ಪುಪಟ್ಟು ಬೆಳಗ್ಗೆಯಿಂದ ರಾತ್ರಿಯವರೆಗೂ ದುಡಿಯುವ ಮಹಿಳೆಯರಿದ್ದಾರೆ. ಅಲ್ಲದೇ ಬ್ಯಾಂಕಾಂಗ್‌ನಲ್ಲಿ ಜನಪ್ರಿಯ ತಿಂಡಿ ಗಾಡಿಗಳನ್ನು ನಡೆಸುತ್ತಾರೆ. ಇಲ್ಲಿನ ದುಡಿಯುವ ಮಹಿಳೆಯರು ವಾರದುದ್ದಕ್ಕೂ ಅಡುಗೆ ಮಾಡುವುದಿಲ್ಲ. ಬಿಸಿ ಶುಚಿಯಾದ ಅಡುಗೆ ಗಾಡಿಗಳಲ್ಲಿ ತಿನ್ನುತ್ತಾರೆ. ಎಲ್ಲಾ ವಯಸ್ಸಿನ ಮಹಿಳೆಯರು ಒಂದಲ್ಲಾ ಒಂದು ಉದ್ಯೋಗವನ್ನು ಮಾಡುತ್ತಿದ್ದರಿಂದ ಅಡುಗೆ ವಿಚಾರಗಳಿಂದ ದೂರವಿದ್ದಾರೆ. ಥೈಲ್ಯಾಂಡಿನ ಮಹಿಳೆಯರ ಮೇಲೆ ಇರುವ ಕೆಟ್ಟ ಅಭಿಪ್ರಾಯಕ್ಕೆ ವಿರುದ್ಧವಾಗಿ, ಸ್ವಾವಲಂಬಿಯಾಗಿ ಸಮಾಜದ ವಿವಿಧ ಔದ್ಯೋಗಿಕ ರಂಗಗಳಲ್ಲಿ ತನ್ನ ಸ್ವಂತ ಶಕ್ತಿಯಿಂದಲೇ ಬದುಕನ್ನು ಕಟ್ಟಿಕೊಂಡಿರುವ ಮಹಿಳೆಯರ ಬಗ್ಗೆ ಲೇಖಕಿ ಹರ್ಷ ಹೆಮ್ಮೆಯಿಂದಲೇ ಬರೆದುಕೊಂಡಿದ್ದಾರೆ.

ಎಚ್.ಎನ್.ಆರತಿ ಅವರ 'ಬೆಟ್ಟದಡಿಯ ಬಿದಿರ ಹೂ' ಎಂಬ ಕೃತಿಯಲ್ಲಿ ಅವರು ಬಂಗಾಳಿ ಕತೆಗಾರನ ಮಗಳಾದ ಅಂತರ್‌ಲೀನ ಎಂಬಾಕೆ ಪಿಯುಸಿ ವಿದ್ಯಾಭ್ಯಾಸ ಮಾಡುವಾಗಲೇ ಪತ್ರಿಕಾ ರಂಗದಲ್ಲಿ ಆಸಕ್ತಿ ಹೊಂದಿದ್ದಳು. ಆಕೆಗೆ ತನ್ನ ಹದಿನೇಳನೆಯ ವಯಸ್ಸಿಗೆ ಇಂಗ್ಲೀಷ್ ಪತ್ರಿಕೆಯ ಸಂಪಾದಕಿಯಾಗಿ, ಕವನಗಳನ್ನು ರಚಿಸುವ ಈಕೆಯ ಬರವಣಿಗೆಯ ಶೈಲಿಗೆ ಹದಿಹರೆಯದವರು ಮನಸೋತಿದ್ದರು. ಆಕರ್ಷಕ ಮುಖಪುಟ, ವಿಷಯ, ವರ್ಣಮಯ

ಪುಟಗಳಿರುವ ಈ ಪತ್ರಿಕೆಯಲ್ಲಿ ಅಂತರ್‌ಲೀನಾ ಸಾಮಾಜಿಕ ದೃಷ್ಟಿಕೋನವನ್ನು ಹೇಗೆ ನಿರೂಪಿಸುತ್ತಿದ್ದಳು ಎಂಬುದಕ್ಕೆ ಲೇಖಿಕಿ ಆರತಿಯವರು ಒಂದು ಉದಾಹರಣೆಯನ್ನು ನೀಡುತ್ತಾರೆ. ಪಾನಿಪುರಿ ಮಾಡುವವನ ಬಗ್ಗೆ ಲೇಖನ ಬರೆಯಲು ನಿರ್ಧರಿಸಿ, ಆತನ ಹೆಸರನ್ನು ಕೇಳಿದಾಗ ಆತ ಉತ್ತರಿಸದೇ ಗಲಿಬಿಲಿಯಾಗುತ್ತಾನೆ. ಆತನ ಬಗ್ಗೆ ಚಿತ್ರಕ ಶೈಲಿಯಲ್ಲಿ ಬರೆದು ಆಕರ್ಷಕಗೊಳಿಸಿದ್ದಾಳೆ ಎಂದು ಲೇಖಿಕಿ ಪ್ರಸ್ತಾಪಿಸುತ್ತಾರೆ. ದಿನವಹಿ ಪಾನಿಪುರಿ, ಮಸಾಲಪುರಿ, ಬೆಲ್ ಪುರಿ ಕೊಡಿ ಎನ್ನುವವರ ಮಧ್ಯೆ ತನ್ನ ಹೆಸರನ್ನು ಕೇಳಿದಾಗ ತಕ್ಷಣಕ್ಕೆ ಆಶ್ಚರ್ಯವಾಗುತ್ತದೆ. ಇಂತಹ ಅನೇಕ ಸಂಗತಿಗಳು ಅಂತರ್‌ಲೀನಾ ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುವ ಸಂಗತಿಗಳನ್ನು ತೆಗೆಯುವ ಕೆಲಸವನ್ನು ಮಾಡಿರುವುದಾಗಿ ಹೇಳುತ್ತಾಳೆ.

ಸುಧಾ ಚಿದಾನಂದಗೌಡ ಅವರ 'ಸಮನ್ವಿತೆ ಗೋಮಾಂತ' ಪ್ರವಾಸ ಕಥನವು ಗೋವಾ ರಾಜ್ಯ ಕುರಿತಾದ ಕಥನವಾಗಿದೆ. ಗೋವಾದ ಮಹಿಳೆಯರ ಔದ್ಯೋಗಿಕ ಬದುಕನ್ನು ಕಟ್ಟಿಕೊಂಡ ಬಗ್ಗೆ ವಿವರಿಸುತ್ತಾರೆ. ದೇಶದ ಪ್ರಮುಖ ಪ್ರವಾಸಿ ತಾಣವಾದ ಗೋವಾದಲ್ಲಿ ಸ್ವದೇಶಿ ಮತ್ತು ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ. ಪ್ರವಾಸಿಗರ ಅಭಿರುಚಿಗೆ ತಕ್ಕಂತಹ ಕಲೆಗಳನ್ನು ಅಲ್ಲಿನ ಮಹಿಳೆಯರು ಕಲಿತುಕೊಂಡಿದ್ದಾರೆ. ಗೋವಾದ ಬೀಚ್‌ಗಳಲ್ಲಿ ಟ್ಯಾಟೊ ಹಾಕುವ ಮಹಿಳೆಯರ ಗುಂಪೆಯಿತ್ತು. ಒಳ್ಳೆಯ ಟ್ಯಾಟೊ ಹಾಕುತ್ತೇವೆ ಎಂದು ಕೊಂಕಣಿ, ತೆಲುಗು, ಕನ್ನಡ, ಮಿಶ್ರಿತ ಭಾಷೆಯಲ್ಲಿ ಕೂಗುತ್ತಿರುವ ಹುಡುಗಿಯರ ಗುಂಪು ಪ್ರವಾಸಿಗರನ್ನು ಆಕರ್ಷಿಸಿತ್ತು. ಹದಿನೈದು ದಿನಗಳಲ್ಲಿ ಅಳಿಸಿ ಹೋಗುವ ಟ್ಯಾಟೂ ಹಾಕುತ್ತಾರೆ. ಇದನ್ನು ಹೆಚ್ಚಿನ ಮಟ್ಟದ ಹುಡುಗಿಯರಲ್ಲಿ ಕಲಿತಿದ್ದಾರೆ. ಟ್ಯಾಟೊ ಹಾಕುವ ವೃತ್ತಿ ಮಾಡುತ್ತಿರುವ ಹುಡುಗಿಯರು ಬಹುತೇಕರು ವಿದ್ಯಾವಂತರಾಗಿದ್ದು, ಕಾಲೇಜು ಓದುತ್ತಿರುವ ಹುಡುಗಿಯರು ರಜೆದಿನಗಳಲ್ಲಿ ಹಣ ಸಂಪಾದನೆಗಾಗಿ ಈ ಉದ್ಯೋಗ ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಾರೆ. ಅರ್ಧಕ್ಕೆ ಶಾಲೆ ಬಿಟ್ಟ ಹುಡುಗಿಯರ ಬಾಯಲ್ಲೂ ಇಂಗ್ಲೀಷ್ ಸುಲಲಿತವಾಗಿ ಮಾತಾನಾಡುವುದನ್ನು ಕಂಡು ಲೇಖಿಕಿ ಬೆರಗಾಗಿದ್ದರು. ಇಂಗ್ಲೀಷನ ಸೊಗಸುಗಾರಿಕೆಗೆ ಅಲ್ಲಿನ ಕ್ರಿಶ್ಚಿಯನ್ ಮಿಶನರಿ ಶಾಲೆಯಲ್ಲಿ ಕಲಿತದ್ದು ಕಾರಣವಾಗಿತ್ತು. ಅಲ್ಲಿನ ಹುಡುಗಿಯರ ದುಡಿಯುವ ಮನೋಭಾವ, ಉದ್ಯೋಗದಲ್ಲಿ ಸಕ್ರಿಯರಾಗಿರಬೇಕೆಂಬ ಯೋಚನೆಗಳು ನಿಜಕ್ಕೂ ಪ್ರಶಂಸಾರ್ಹವಾದದ್ದಾಗಿದೆ. ಲೇಖಿಕಿಗೆ ಗೋವಾದ ಕೋಲ್ವಾ ಬೀಚ್‌ನಲ್ಲಿ ಲೇಖಿಕಿಗೆ ಟ್ಯಾಟೊ ಅಂಗಡಿಗಳು, ಸ್ವದೇಶಿ, ವಿದೇಶಿ ಎಲ್ಲಾ ಬಗೆಯ ಬಣ್ಣ ಬಣ್ಣದವು ಕಂಡುಬಂದವು. ಈ ಬಣ್ಣಗಳು ತರಕಾರಿ, ಹಣ್ಣುಗಳಿಂದ ತಯಾರಿಸಿದ ಬಣ್ಣಗಳಿಂದ ಟ್ಯಾಟೊ ಹಾಕುತ್ತಿದ್ದರು. ಈ ಕುರಿತು ಲೇಖಿಕಿ "ಇಲ್ಲಿನ ಹೆಚ್ಚಿನ ಮಹಿಳೆಯರ ಕೈಯಲ್ಲಿ ಚೀಲ, ಪುಸ್ತಕಗಳನ್ನು ಹಿಡಿದು ಟ್ಯಾಟೊಗೋಸ್ಕರ ಕೂಗುತ್ತಾರೆ. ಕೆಲವರಿಗೆ ಉದ್ಯೋಗವಾದರೆ. ಕೆಲವು ಮಹಿಳೆಯರಿಗೆ ಹವ್ಯಾಸವಾಗಿದೆ. ಲೇಖಿಕಿಗೆ ಚಿಕ್ಕ ಅಧ್ಯಾಯದಲ್ಲಿರುವ ದೊಡ್ಡ ತೃಪ್ತಿ ನನ್ನ ಗಮನ ಸೆಳೆಯಿತು. ಎಲ್ಲಕ್ಕಿಂತ ಹೆಚ್ಚಾಗಿ ಈ ಡಿಸೈನು ಆ ಮಹಿಳೆಯರಿಗೆ ಮತ್ತು ಬಾಲಕಿಯರಿಗೆ ಸ್ವಾವಲಂಬನೆಯ ದಾರಿ ತೋರಿಸುವ ಪರಿ ಮನಮುಟ್ಟುತ್ತದೆ" (ಸುಧಾ ಚಿದಾನಂದಗೌಡ,

೨೦೧೭, ಪುಟ-೧೦೪) ಎಂದು ಸಂತಸ ಪಡುತ್ತಾರೆ. ಪ್ರವಾಸದ ನಂತರವು ಬೀಚ್‌ನಲ್ಲಿ ಟ್ಯಾಟೊ ಹುಡುಗಿಯರು ನಿಂತಿರುವ ದೃಶ್ಯಗಳು ಮರೆಯದೇ, ಲೇಖಕಿಯ ಕಣ್ಣಲ್ಲಿ ಗೊಂಬೆಯಂತೆ ನಿಂತಿರುವಂತೆ ಭಾಸವಾಗಿದ್ದನ್ನು ಬರೆದುಕೊಂಡಿದ್ದಾರೆ.

'ಯುರೋ ನಾಡಿನಲ್ಲಿ' ಲತಾಗುತ್ತಿಯವರ ಲಂಡನ್ ಪ್ರವಾಸದ ಕಥನವಾಗಿದೆ. ಲಂಡನ್ ಜಗತ್ತಿನಲ್ಲಿ ಪ್ರಮುಖ ಔದ್ಯೋಗಿಕ ಕೇಂದ್ರಗಳಲ್ಲಿ ಒಂದು. ಅಲ್ಲಿನ ಪ್ರವಾಸಿ ಬಸ್‌ನ ಮಾರ್ಗದರ್ಶಕಿ ಒರ್ವಳು ಪ್ರವಾಸಿಗರನ್ನು ಒಳ್ಳೆಯ ಹಾಸ್ಯ ಮಾಡುತ್ತ, ಐವತ್ತು ವರ್ಷ ವಯಸ್ಸಿನಲ್ಲೂ ಇಪತ್ತರ ಹುಡುಗಿಯಂತೆ ಸದಾ ಕ್ರಿಯಾಶೀಲವಾದಂತಹ ಆಕೆ ನಡೆ ಎಲ್ಲರಿಗೂ ಆಕರ್ಷಣೆ ತಂದಿತ್ತು. ಪ್ರವಾಸಿಗರಿಗೆ ಮಾರ್ಗದರ್ಶನ ಮಾಡುವುದನ್ನೇ ಜೀವನೋಪಾಯ ಮಾಡಿಕೊಂಡ ಆ ಮಹಿಳೆ ತಾನು ನಿರ್ವಹಿಸುವ ಕೆಲಸದಿಂದಲೇ ಸದಾ ಪ್ರವಾಸಿಗರಲ್ಲಿ ಉತ್ಸಾಹ ತುಂಬುತ್ತಿದ್ದ ಬಗ್ಗೆ ನಿರೂಪಿಸುತ್ತಾರೆ. ಲತಾಗುತ್ತಿ ಅವರು ಆ ಔದ್ಯೋಗಿಕ ಮಹಿಳೆಯನ್ನು ಕುರಿತು 'ದಿನನಿತ್ಯ ಪ್ರವಾಸ ವಿಪರೀತ ಸಿಗರೇಟು ಸೇದುವಿಕೆಯಿಂದಲೇ ಧ್ವನಿ ಮಾತ್ರ ಗಡಸು ಅನಿಸಿತು. ಆಕೆಯ ಸರಸಗಾತಿ ತನಕ್ಕೆ ಆಕೆಯ ಧ್ವನಿ ಒಂದಕ್ಕೊಂದು ಒಪ್ಪುತ್ತಿರಲಿಲ್ಲ ಎನ್ನುತ್ತಾ ಆಕೆಯನ್ನು ಹೊಗಳುತ್ತಾರೆ. ವಿದೇಶಿ ಮಹಿಳೆಯರಲ್ಲಿ ಸಮಯ ಪ್ರಜ್ಞೆ, ಕ್ರಿಯಾಶೀಲವಾದ ನಡುವಳಿಕೆ, ವಿದೇಶ ಪ್ರವಾಸ ಮಾಡಿದ ಲೇಖಕಿಯರಿಗೆ ಮೆಚ್ಚುಗೆಯಾಗುತ್ತವೆ. ಅಮೇರಿಕಾ ಪ್ರವಾಸ ಕೈಗೊಂಡ ಪದ್ಮಾಶಣೈ ಅವರು 'ಅಮೇರಿಕಾ: ವಾಸ ಪ್ರವಾಸ' ಕೃತಿಯಲ್ಲಿ ಅಮೇರಿಕಾದ ತನ್ನ ಉದ್ಯೋಗಸ್ಥ ಸೊಸೆ, ವೃತ್ತಿಯಲ್ಲಿ ವೈದ್ಯಯಾಗಿದ್ದಳು. ಬೆಳಗ್ಗೆ ಏಳು ಗಂಟೆಗೆ ಮನೆಯಿಂದ ಹೊರಟು ರಾತ್ರಿ ಮನೆ ಸೇರುತ್ತಾರೆ. ಆಸ್ಪತ್ರೆಯಿಂದ ಮನೆಗೆ ಒಂದು ತಾಸಿನ ಪ್ರಯಾಣದ ದಾರಿಯಿದ್ದು, ಅವರ ಸಮಯ ಪ್ರಜ್ಞೆ, ಪುರಸೊತ್ತಿಲ್ಲದ ಜೀವನ, ತನ್ನ ನೌಕರಿಯಲ್ಲಿ ತೋರುವ ಪ್ರಮಾಣಿಕತೆಗೆ ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ.

ಫ್ರಾನ್ಸ್ ಪ್ರವಾಸ ಮಾಡಿದ ಮೀನಾ ಕುಮಾರಿಯವರ 'ಎತ್ತಣಿಂದೆತ್ತ' ಕೃತಿಯಲ್ಲಿ ಮಹಿಳಾ ಉದ್ಯೋಗಿಗಳ ಕ್ರಿಯಾಶೀಲತೆಯ ಬಗ್ಗೆ ಮೆಚ್ಚುವ ಮಾತುಗಳನ್ನಾಡಿದ್ದಾರೆ. ಅಲ್ಲಿನ ಮಹಿಳೆಯರದು ದುಬಾರಿ ಜೀವನ, ದುಬಾರಿ ತೆರಿಗೆ ಪದ್ಧತಿ ಮತ್ತು ಸ್ವಕೇಂದ್ರಿತವಾದ ಜೀವನ ಶೈಲಿಗಳಿಂದಾಗಿ ಒತ್ತಡದ ಜೀವನ ಅವರಲ್ಲಿದೆ. ಫ್ರಾನ್ಸ್‌ನ ಮಹಿಳೆಯರು ಯಾವ ರೀತಿಯಿಂದಲೂ ಸುಲಭಕ್ಕೆ ತ್ಯಾಗ ಮಾಡುವುದಿಲ್ಲ ಎನ್ನುವ ಲೇಖಕಿ, ಭಾರತೀಯ ಉದ್ಯೋಗಸ್ಥ ಮಹಿಳೆಯರಂತೆ ಮನೆಕೆಲಸ, ಅಡುಗೆ ಕೆಲಸಗಳ ಒತ್ತಡಗಳಿಲ್ಲ. ಅಲ್ಲಿನ ಹೆಂಗೆಳೆಯರೆಲ್ಲ ಉದ್ಯೋಗಿಗಳೆ ಆಗಿದ್ದರಿಂದ ಅವರಲ್ಲಿ ತಿಂಡಿಯ ಪರಿಕಲ್ಪನೆಯೇ ಇಲ್ಲ. ಅಳಸಲು ಮುಖವನ್ನೇ ಸಾರಿಸಿ ಸಿಂಗರಿಸಿಕೊಂಡು. ಕಾಫಿ ಕುಡಿದು, ಕಾರು ಚಲಾಯಿಸಿಕೊಂಡು ಹೋಗುತ್ತಾರೆ. ಅವರಲ್ಲಿನ ಸಮಯ ಪಾಲನೆ ಮತ್ತು ದುಡಿಯುವ ಮನೋಭಾವದಿಂದಾಗಿ ಸದಾ ಜಾಗೃತಿಯನ್ನುಂಟು ಮಾಡುತ್ತಿರುತ್ತದೆ ಎಂದು ಲೇಖಕಿ ನಿರೂಪಿಸುತ್ತಾರೆ.

೬.೩. ಸಾಮಾಜಿಕ ವಲಯದಲ್ಲಿ ಮಹಿಳೆಯರ ಕ್ರಿಯಾಶೀಲತೆ

ವಿಶ್ವದ ವಿವಿಧ ಭೂ ಪ್ರದೇಶದ ಸಾಮಾಜಿಕ ವಲಯವು ಪ್ರವಾಸ ಕಥನಗಳಲ್ಲಿ ಬಹುಮುಖ್ಯವಾಗುತ್ತದೆ. ಭೌಗೋಳಿಕತೆಯಲ್ಲಿನ ವೈಶಿಷ್ಟ್ಯದಿಂದಾಗಿ ಸಾಮಾಜಿಕ ವಲಯದಲ್ಲಿ ಮಹಿಳಾ ಬೆಳವಣಿಗೆ ಎಂಬುದು ಮುಖ್ಯ. ಆ ದೇಶದ ಅಭಿವೃದ್ಧಿಯನ್ನು ನಿರ್ಧರಿಸುತ್ತದೆ. ಹೀಗಾಗಿ ಮಹಿಳಾ ಶಕ್ತಿ ಇಂದಿನ ಜಾಗತೀಕರಣದಲ್ಲಿ ಅತ್ಯಾವಶ್ಯವಾಗಿರುತ್ತದೆ. ಸಾಮಾಜಿಕ ವಲಯದಲ್ಲಿ ಮಹಿಳೆಯರ ಕ್ರಿಯಾಶೀಲ ಬದುಕನ್ನು ಗುರುತಿಸುವ ಅನುಪಮಾ ನಿರಂಜನ ಅವರ 'ಸ್ನೇಹಯಾತ್ರೆ' ಪ್ರವಾಸ ಕೃತಿಯಲ್ಲಿ ಹಿಟ್ಲರ್‌ನ ಹಿಂಸಾತ್ಮಕ ಕೃತ್ಯಕ್ಕೆ ಸಾಕ್ಷಿಯಾಗಿದ್ದ ರ‍್ಯಾವೆನ್ಸ್ ಬ್ರುಕ್‌ನ ಕ್ಯಾಂಪ್‌ವೊಂದರ ಸಮಾರಂಭದ ಮುಖ್ಯಸ್ಥೆಯೊಬ್ಬರು ಸಾಮಾಜಿಕವಾಗಿ ಮಹಿಳೆಯರ ಗಟ್ಟಿತನವನ್ನು ಹೇಳುವ ಮಾತುಗಳು ಹೀಗಿವೆ. "ನಾವು ಈ ಜಾಗದಲ್ಲಿ ಹಿಂದೆ ನಡೆದುದನ್ನು ಸದಾ ನೆನೆಸಿಕೊಳ್ಳುತ್ತಿರುತ್ತೇವೆ ಮತ್ತು ಜರ್ಮನಿಯ ಹೆಂಗಸರ ಹೋರಾಟವನ್ನು ಮೆಚ್ಚುತ್ತೇವೆ. ಶಾಂತಿ ಮತ್ತು ಪ್ರಗತಿಗೆ ನಾವು ಸದಾ ಬದ್ಧರು. ರ‍್ಯಾವೆನ್ಸ್‌ಬ್ರುಕ್‌ನಲ್ಲಿ ಹಿಂದೆ ಆದಂತಹ ಅಮಾನುಷ ಕೃತ್ಯಗಳು ಇನ್ನು ಮುಂದೆ ಎಂದಿಗೂ ಆಗಬಾರದು. ಅಂಥದನ್ನು ಮಹಿಳೆಯರು ಎಂದಿಗೂ ಸಹಿಸಲಾರರು...."(ಅನುಪಮಾ ನಿರಂಜನ, ೧೯೯೭, ಪುಟ-೫೦) ಈ ಮಾತುಗಳಲ್ಲಿ ಮಹಿಳೆಯರ ಸಾಮಾಜಿಕ ಬದುಕಿನಲ್ಲಿರುವ ಪಲ್ಲಟಗಳಿಗೆ ಪ್ರತಿಕ್ರಿಯಿಸುವ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಮಾತುಗಳಲ್ಲಿ ಪ್ರಗತಿಪರ ನಿಲುವು ವ್ಯಕ್ತವಾಗುತ್ತದೆ. ಸರ್ಕಾರದ ಅಂಕಿಅಂಶಗಳ ಪ್ರಕಾರ ಜರ್ಮನ್ ದೇಶದಲ್ಲಿ ಜಿಡಿಆರ್‌ನಲ್ಲಿ ಶೇಕಡಾ ೨೧.೪ ಮಹಿಳಾ ಮೇಯರ್‌ಗಳಿದ್ದು, ಪ್ರತಿ ಮೂವರು ನ್ಯಾಯಧೀಶರಲ್ಲಿ ಒಬ್ಬಳು ಮಹಿಳೆ, ಆರೋಗ್ಯ ಮತ್ತು ವಿಜ್ಞಾನ ಇಲಾಖೆ ಹಾಗೂ ಸಂಶೋಧನಾ ಕ್ಷೇತ್ರ, ಸಹಕಾರಿ ಕ್ಷೇತ್ರ, ಕೃಷಿ ವಲಯ, ಪ್ರವಾಸಿ ಗೈಡ್ ಮುಂತಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ಮಹಿಳೆಯರು ಕ್ರಿಯಾಶೀಲತೆಯಿಂದಲೇ ದುಡಿಯುತ್ತಿದ್ದಾರೆ. ಅಲ್ಲದೇ ೧೯೭೫ರ ಹೊತ್ತಿಗೆ ೨೫.೦೦೦ ಮಹಿಳೆಯರು ಡ್ರೈವಿಂಗ್ ಲೈಸನ್ಸ್ ಪಡೆದಿದ್ದರು. ಔದ್ಯೋಗಿಕ ತರಬೇತಿಯಿಂದಾಗಿ ಇಲ್ಲಿನ ಮಹಿಳೆಯರು ವೃತ್ತಿಯಲ್ಲಿ ಮೇಲು ಕೀಳು ಎನ್ನದೇ ಸಾಮಾಜಿಕ ವಲಯದಲ್ಲಿ ಸದಾ ಕ್ರಿಯಾಶೀಲವಾಗಿರುವುದು ಕಂಡುಬರುತ್ತದೆ.

ಲೇಖಕಿ ಲಂಡನ್ನಿಗೆ ಹೋದಾಗ ಅಲ್ಲಿನ ಕನ್ನಡಿಗರನ್ನು ಕುರಿತು ಮಾತಾನಾಡುವ ಸನ್ನಿವೇಶದಲ್ಲಿ ಶ್ರೀಗೂಡ್ಸೆಯವರು ಶ್ರೀಮತಿ ಗೋರೆ ಹಾಗೂ ಅವರೊಂದಿಗಿದ್ದ ಹೆಲನ್ ಸೆಲ್ಫ್ ಎಂಬುವರು ಲೇಖಕಿಯರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಭಾರತೀಯ ಮಹಿಳೆಯರ ಬಗ್ಗೆ ಪ್ರಶ್ನೆ ಕೇಳಿದ ನಂತರ ಲೇಖಕಿಯರ ಪ್ರವಾಸದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ತಾವು ಮಾಡುತ್ತಿದ್ದ ಸಮಾಜ ಸೇವೆಯ ಬಗ್ಗೆಯೂ ತಿಳಿಸಿದರು. ಮುಖ್ಯವಾಗಿ ಅವರು ವೇಶ್ಯಾವೃತ್ತಿ ನಿರ್ಮೂಲನೆಯ ಸಂಬಂಧವಾಗಿ ಕೆಲಸ ಮಾಡುತ್ತಾರೆಂದು ತಿಳಿಯಿತು. ಈ ಸಂಘಟನೆಯ ಸದಸ್ಯರಾದ ಜೋಸಫೈನ್ ಅವರ 'ಬಟ್ಲರ್ ಸೊಸೈಟಿ' ಎನ್ನುವುದು ಬಹಳ ಹಿಂದೆಯೇ

ವೇಶ್ಯಾವೃತ್ತಿಯ ನಿರ್ಮೂಲನೆಗಾಗಿ ಹುಟ್ಟಿಕೊಂಡ ಸಂಸ್ಥೆಯಾಗಿದೆ. ವೇಶ್ಯೆಯರನ್ನು ಅಧಿಕೃತಗೊಳಿಸಿ ಕಾನೂನುಬದ್ಧವಾಗಿಸುವುದರಿಂದ ವೇಶ್ಯಾವೃತ್ತಿಗೆ ಕಾನೂನುಬದ್ಧ ಮಾರುಕಟ್ಟೆ ಒದಗಿಸಿದಂತಾಗುತ್ತದೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯಕ್ತಿಗಳ ದೇಹ ವಿಕ್ರಯಕ್ಕೆ ಅವಕಾಶ ಕಲ್ಪಿಸಿದಂತಾಗುತ್ತದೆ ಎಂಬ ಅಭಿಪ್ರಾಯ ಈ ಸಂಸ್ಥೆಯದ್ದಾಗಿದೆ. ಆದರೆ ಮಹಿಳೆಯರು ಮಾರಾಟದ ಪದಾರ್ಥಗಳಾಂತಾಗುತ್ತಾರೆ. ಇಂತಹ ಮಾರಾಟಗಾರರು ಪ್ರಬಲರಾಗುವುರಿಂದ ಅನೇಕ ಹಿಂಸಾತ್ಮಕ ಕೃತ್ಯಗಳು ನಡೆಯುತ್ತವೆ. ಕಾನೂನು ಮತ್ತು ಆಚರಣೆಯಲ್ಲಿ ಪುರುಷರು ಮಹಿಳೆಯರಿಗೆ ಉನ್ನತ ಮಟ್ಟದ ಮತ್ತು ಸಮಾನ ಜವಾಬ್ದಾರಿ ಬರುವಂತೆ ಮಾಡುವುದು ಅಂತರಾಷ್ಟ್ರೀಯ ಮಟ್ಟದಲ್ಲಿ ಈ ವೃತ್ತಿಯನ್ನು ತಡೆಗಟ್ಟುವುದು, ಶೋಷಣೆಯನ್ನು ತಪ್ಪಿಸುವುದು, ಸಾಮಾಜಿಕ, ಶಾಸನೀಯ, ಆಡಳಿತಾತ್ಮಕ ಸುಧಾರಣೆಗಳನ್ನು ತರುವುದು ಈ ಸಂಸ್ಥೆಯ ಧ್ಯೇಯವಾಗಿದೆ. ಚಳವಳಿಯ ಮೂಲಕವೇ ಇಂಗ್ಲೆಂಡಿನ ಕಾನೂನಿನಲ್ಲಿ ಅನೇಕ ತಿದ್ದುಪಡಿಗಳಾಗಿವೆ. ಲಂಡನ್ನಿನ ಸಂಸ್ಥೆಯವರು ತಾಯಂದಿರ ಬಗ್ಗೆ ಅನುಕಂಪ ಹೊಂದಿದ್ದರು. ಮಹಿಳಾ ವಿಮೋಚನೆಗಾಗಿ ಸಕ್ರಿಯವಾಗಿ ದುಡಿಯುವ ಸಲುವಾಗಿ ಜೋಸೆಫೈನ್ ಬಟ್ಲರ್ ಎಂಬ ಮಹಿಳೆ ಸಂಸ್ಥೆಯನ್ನು ಸ್ಥಾಪಿಸಿದಳು. ಇದು ಈಗ ತನ್ನ ಕಾರ್ಯ ಚಟುವಟಿಕೆಗಳಿಂದಾಗಿ ಯುನೆಸ್ಕೋ, ಯುನಿಸೆಫ್, ಐ.ಎಲ್.ಓ, ಕೌನ್ಸಿಲ್ ಆಫ್ ಯುರೋಪ್ ಮೊದಲಾದ ಸಂಸ್ಥೆಗಳಲ್ಲಿ ಸಮಾಲೋಚಕ ಸ್ಥಾನಮಾನವನ್ನು ಪಡೆದಿದೆ ಎಂದು ಲೇಖಕಿ ದಾಖಲಿಸಿದ್ದಾರೆ.

ಉಷಾ.ಪಿ.ರೈ ಅವರು ಲಕ್ಷದ್ವೀಪಕ್ಕೆ ಪ್ರವಾಸ ಕೈಗೊಂಡಾಗ ಅಲ್ಲಿನ ಮಿನಿಕ್ಕೊ ಎಂಬ ದ್ವೀಪದಲ್ಲಿ ಸಾಮಾಜಿಕ ಆಡಳಿತ ವಿಧಾನವನ್ನು ಗಮನಿಸಿದಾಗ, ಅಲ್ಲಿನ ಆಡಳಿತ ಮಾದರಿಯು ನಮ್ಮ ಹಳ್ಳಿಗಳ ಮಂಡಲ ಪಂಚಾಯತಿ ವ್ಯವಸ್ಥೆಯನ್ನೇ ಹೋಲುವಂತಿತ್ತು. ಆ ದ್ವೀಪದಲ್ಲಿ ಹಳ್ಳಿಮನೆಗಳ ಸ್ವರೂಪದ ಕುರಿತು ಲೇಖಕಿ ಹೀಗೆ ವಿವರಿಸಿದ್ದಾರೆ. "ಅಲ್ಲಿನ ಪುರುಷರಿಗೆ ಪುರುಷರೇ ಮುಖಂಡರು, ಸ್ತ್ರೀಯರಿಗೆ ಸ್ತ್ರೀಯರೇ ಮುಖಂಡರು ಅವರ ಆಡಳಿತ ಕಛೇರಿಗಳನ್ನು ಹಳ್ಳಿಮನೆಗಳೆನ್ನುತ್ತಾರೆ. ಪುರುಷರ ಹಳ್ಳಿಮನೆಯ ಎದುರಿಗೆ ಸ್ತ್ರೀಯರ ಹಳ್ಳಿಮನೆಗಳು ಇರುತ್ತದೆ". (ಉಷಾ.ಪಿ.ರೈ, ೨೦೦೪, ಪುಟ-೫೯) ಹೀಗೆ ಭಾರತದ ಗ್ರಾಮಗಳಲ್ಲಿ ಅನೇಕ ವರ್ಷಗಳ ಕಾಲ ಪ್ರಾಧಾನ್ಯತೆ ದೊರೆತು ಉಳಿದೆಡೆಗಳಲ್ಲೂ ಮಹಿಳೆಯರಿಗೆ ಸರಿಯಾದ ಸೌಕರ್ಯಗಳು ಸಿಗದೇ ಹೋದವು. ಮಿನಿಕ್ಕೊ ದ್ವೀಪದಂತಹ ವ್ಯವಸ್ಥೆ ಜಾರಿಗೆ ತಂದರೇ ಮಹಿಳಾ ಸಮಸ್ಯೆಗಳು ಬಗೆಹರಿಯುತ್ತಿದ್ದವು.

ಸಾಮಾಜಿಕ ವಲಯದಲ್ಲಿ ಮಹಿಳೆಯರ ಕ್ರಿಯಾಶೀಲತೆಯ ಹಲವು ವಿಚಾರಗಳ ಬಗ್ಗೆ ಪಾರ್ವತಮ್ಮ ಮಹಾಲಿಂಗಶೆಟ್ಟಿ ಅವರು 'ಅಮೇರಿಕಾದ ಇತಿಹಾಸ ಮತ್ತು ಜನಜೀವನ' ಕೃತಿಯಲ್ಲಿ ದಾಖಲಿಸಿದ್ದಾರೆ. ಅಮೇರಿಕೆಯಲ್ಲಿ ಕನ್ನಡ ಕೂಟಗಳ ಜೊತೆಗೆ ವೀರಶೈವ ಸಂಘಟನೆಗಳಿವೆ. ಅಲ್ಲದೇ ಮಹಿಳೆಯರು ಈ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ಕ್ರಿಯಾಶೀಲರಾಗಿರುವುದು ಕಂಡುಬರುತ್ತದೆ. ಅಮೇರಿಕಾದ ಸಾಮಾಜಿಕ ವಲಯದಲ್ಲಿ ಗಂಡು ಹೆಣ್ಣುಗಳಲ್ಲಿ ಸಲಿಗೆ

ಬೆಳೆದಾಗ ಏಕಾಂತ ಸಿಕ್ಕರೆ ಲೈಂಗಿಕ ಕ್ರಿಯೆ ಸಾಮಾನ್ಯವಾಗಿರುತ್ತದೆ. ಈ ಕುರಿತು ಲೇಖಕಿ "ಹೆಣ್ಣು ಮಕ್ಕಳು ದೊಡ್ಡವರಾಗಿನಿಂದ ಪ್ರತಿದಿನ ಗರ್ಭನಿರೋಧಕ ಗುಳಿಗೆ ಕೊಡುವುದು ತಾಯಿಯ ಕರ್ತವ್ಯಗಳಲ್ಲೊಂದಾಗಿದೆ. ಆದರೂ ಸಾವಿರ ಗಟ್ಟಲೇ ಗರ್ಭಪಾತಗಳು ಪ್ರತಿವರ್ಷ ಪ್ರತಿ ಊರಿನ ಪ್ರತಿಯೊಂದು ಆಸ್ಪತ್ರೆಯಲ್ಲಿ ನಡೆಯುತ್ತಲೇ ಇರುತ್ತವೆ ಎನ್ನುವುದು ಸೂರ್ಯಪ್ರಕಾಶದಷ್ಟೇ ಸತ್ಯ. ಅಮೇರಿಕಾದವರಿಗೆ ಲೈಂಗಿಕ ದಾಹವನ್ನು ನಿಗ್ರಹಿಸುವ ಮನೋಭಾವ ಇಲ್ಲ"(ಪಾರ್ವತಮ್ಮ ಮಹಾಲಿಂಗಶೆಟ್ಟಿ,೨೦೦೬,ಪುಟ-೧೩೮) ಎಂದಿದ್ದಾರೆ. ಈ ಪ್ರಕ್ರಿಯೆಯಿಂದಾಗಿ ಮಹಿಳೆಯರು ಸಣ್ಣವಯಸ್ಸಿನಲ್ಲಿಯೇ ತಾಯಂದಿರರಾಗಿ ಕೌಟುಂಬಿಕ ಹೊರೆ ಹೊರುವುದರಿಂದ ತಮ್ಮ ಶಿಕ್ಷಣ, ಉದ್ಯೋಗ ಮುಂತಾದ ವಿಷಯಗಳಲ್ಲಿ ಮುಂದುವರೆಯದೇ, ಬದುಕಿನಲ್ಲಿಯೂ ಕ್ರಿಯಾಶೀಲರಾಗದೇ ಸಾಮಾನ್ಯವಾದ ದುಡಿಮೆಗಾರರಾಗಿ ಉಳಿಯುತ್ತಾರೆ. ಬಹುಶಃ ಈ ಕಾರಣದಿಂದಲೇನೊ ಅಮೇರಿಕಾದಲ್ಲಿ ವಲಸಿಗರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಪಡೆಯುತ್ತಿದ್ದಾರೆ ಎನ್ನಬಹುದಾಗಿದೆ. ಅಮೇರಿಕಾ ಪ್ರವಾಸ ಮಾಡಿದ ಮತ್ತೊರ್ವ ಲೇಖಕಿ ಕೆ.ಆರ್.ಜಯಶ್ರೀ ಅವರು ಅಮೇರಿಕಾದ ಸಾಮಾಜಿಕ ವಲಯವು ಅತೀ ಶ್ರೀಮಂತಿಕೆಯಿಂದ ಕೂಡಿದ್ದಾಗಿದೆ ಎನ್ನುತ್ತಾರೆ. ಅಲ್ಲಿನ ಸಾಮಾಜಿಕ ಸ್ಥಿತಿಗತಿಗಳಿಗೆ ಹೊಂದಿಕೊಂಡವರು ಭಾರತದ ಪ್ರಾದೇಶಿಕ ವಲಯಗಳಲ್ಲಿ ಬದುಕಲು ಇಚ್ಚಿಸದೇ ತಂದೆ ತಾಯಿಗಳ ಜವಾಬ್ದಾರಿ ಹೊರದೇ ತ್ರಿಶಂಕು ಸ್ಥಿತಿಯಲ್ಲಿ ಉಳಿದಿರುವ ಸಂಗತಿಗಳನ್ನು ಗುರುತಿಸುತ್ತಾರೆ. ಕೆಲವರು ಭಾರತಕ್ಕೆ ವಾಪಸು ಆಗಲು ಬಯಸಿ ಅಲ್ಲಿನ ನಾಗರಿಕ ಹಕ್ಕನ್ನು ಪಡೆಯದೇ ಸ್ಥಿತಿವಂತರಾದಾಗ ವಾಪಸು ಬರುತ್ತಾರೆ. ಕೆಲವರು ಆ ದೇಶದ ನಾಗರೀಕರಾಗಿ ಉಳಿಯುವುದು ಸರ್ವೆ ಸಾಮಾನ್ಯವಾದ ಸಂಗತಿಯಾಗಿದೆ.

ಅಮೇರಿಕಾದ ಮಹಿಳೆಯರನ್ನು ಕುರಿತು ಸುಶೀಲ ಕೊಪ್ಪರ್ ಅವರ 'ಪಡುವಣ ಪತ್ರಮಾಲೆ' ಕೃತಿಯಲ್ಲಿ ಅಮೇರಿಕವನ್ನು ಒಳಗಿಂದ ನೋಡಿದ ಅನುಭವವನ್ನು ಹೇಳುತ್ತಾರೆ. ನೋಡಲು ಸ್ವರ್ಗ ಎನ್ನುತ್ತಾ ಅದರೊಳಗಿನ ನರಕದ ಅಂಶಗಳ ಕುರಿತು ಚರ್ಚಿಸುತ್ತಾರೆ. ಚಿಕ್ಕವಯಸ್ಸಿನಲ್ಲೇ ಸ್ವತಂತ್ರ ಜೀವನ ನಡೆಸುವ ಸಮಾಜ ವ್ಯವಸ್ಥೆಯಲ್ಲಿ ಮನಬಂದವರೊಡನೆ ಮದುವೆ, ಲೈಂಗಿಕ ಸಂಬಂಧ, ಆತ್ಮಹತ್ಯೆ ಎಲ್ಲವೂ ಇದೆ ಎನ್ನುತ್ತಾರೆ. ಇದರಿಂದಾಗಿಯೇ ಅಮೇರಿಕಾದ ಮಹಿಳೆಯರು ಸಾಮಾಜಿಕವಾಗಿ ಮುಂದುವರೆಯದೇ ಚಿಕ್ಕವಯಸ್ಸಿನಲ್ಲಿಯೇ ವಿದ್ಯಾಭ್ಯಾಸದಿಂದ ದೂರವಾಗುತ್ತಾರೆ. ಮದುವೆಯ ಬಂಧಗಳು ಬದಲಾಗುತ್ತಲೇ ಇರುತ್ತವೆ. ಹೈಸ್ಕೂಲ್ ಮಟ್ಟದಲ್ಲೇ ಮಗುವಿನ ತಾಯಿಯಾಗಿರುತ್ತಾರೆ. ಕೆಲವರು ಮಕ್ಕಳನ್ನು ಸಾಕುವ ಜವಾಬ್ದಾರಿಯಿಂದ ದೂರವಾಗಿ ಅನಾಥಾಶ್ರಮಗಳಿಗೆ ಬಿಡುತ್ತಾರೆ. ವಸಂತಿಚಂದ್ರ ಅವರ 'ಭೋಗಭೂಮಿಯ ಮಡಿಲಲ್ಲಿ' ಎಂಬ ಕೃತಿಯಲ್ಲಿ ಅಮೇರಿಕವನ್ನು ಕುರಿತು "ಅಮೇರಿಕಾದ ಧ್ವನಿಗಳನ್ನು, ಮಧುರ ಗೀತೆಗಳನ್ನು ಪಿಸುಗುಟ್ಟುವಿಕೆಯನ್ನು, ರಹಸ್ಯಗಳನ್ನು ಅಕ್ಷರಸ್ಥರ ನಡುವಿನ ವ್ಯತ್ಯಾಸವನ್ನು, ಬರೀ ಹಾಳೆಯಲ್ಲಿ ಮೂಡಿಸಲು ಸಾಧ್ಯವಿಲ್ಲ. ಹಗಲು ಮುಗಿಯದ ದೇಶವಿದು. ಕುತೂಹಲಕ್ಕೆ ತಣಿಸುವ ಸಾಮ್ರಾಜ್ಯ, ಬೆಳಕು ಮತ್ತು ವೈವಿಧ್ಯಮಯ ಚಿತ್ರ ವರ್ಣಮಯ

ನಗರವಿದು ಇಲ್ಲಿನ ನಿತ್ಯೋತ್ಸವದಲ್ಲಿ ಆಯಾಸವಿಲ್ಲ"(ವಸಂತಿಚಂದ್ರ, ೧೯೯೯, ಪುಟ-೧೪) ಎಂದಿದ್ದಾರೆ. ಎಲ್ಲಿ ಆರ್ಥಿಕ ಸುಭದ್ರತೆ, ವರ್ಣರಂಜಿತ ಬದುಕಿನ ಹಿಂದೆ ಮನುಷ್ಯ ಇದ್ದಾಗ ಅವನ ಕಣ್ಣು ಕಾಣದಾಗುತ್ತದೆ. ಈ ಹಿನ್ನೆಲೆಯನ್ನು ಗಮನಿಸಿದಾಗ ಅಮೇರಿಕಾದಲ್ಲೂ ಸಹ ಮಹಿಳೆಯರು ಬೌದ್ಧಿಕವಾಗಿ ಬೆಳೆಯದೇ ಬದುಕಿನ ಅವಗಡಗಳಲ್ಲಿ ಸಿಲುಕಿಕೊಂಡವರಂತೆ ಕಂಡುಬರುತ್ತಾರೆ.

ನೇಮಿಚಂದ್ರ ಅವರ 'ಪೆರುವಿನ ಪವಿತ್ರ ಕಣಿವೆಯಲ್ಲಿ' ಪ್ರವಾಸ ಕಥನದಲ್ಲಿ ಮಹಿಳಾ ವಿಜ್ಞಾನಿಯಾದ ಮರಿಯಾ ರೇಕಿ ಕುರಿತು ಹೆಚ್ಚಿನ ಮಾಹಿತಿ ಕಲೆಹಾಕುವ ದೃಷ್ಟಿಯಿಂದಾಗಿ ಖಂಡ ಖಂಡಗಳನ್ನು ದಾಟಿ ನಾಸ್ಕಾಗೆ ಭೇಟಿ ನೀಡುತ್ತಾರೆ. ನಾಸ್ಕಾ ಗೆರೆಗಳು ಖಗೋಳ ವೀಕ್ಷಣೆಗೆ, ಗ್ರಹ, ನಕ್ಷತ್ರಗಳ ಅಧ್ಯಯನಕ್ಕೆ ಬಳಸಿದ ಸಲಕರಣೆಗಳು ಎಂಬ ಸಿದ್ಧಾಂತವನ್ನು ಮಂಡಿಸಿದ ಮರಿಯಾ ರೇಕಿ ಮಹಿಳಾ ವಿಜ್ಞಾನಿಯಾಗಿ ಶೈಕ್ಷಣಿಕ ವಲಯದಲ್ಲಿ ಗುರುತಿಸಿಕೊಂಡವರು. ೧೯೪೦ ರಿಂದ ೧೯೯೮ರವರೆಗೆ, ಅಂದರೆ ನಾಲ್ಕು ದಶಕಗಳ ಕಾಲಕ್ಕೂ ಹೆಚ್ಚು ಕಾಲ ನಾಸ್ಕಾದಲ್ಲಿ ನೆಲಸಿ, ಅಳಿವಿನ ಅಂಚಿನಲ್ಲಿದ್ದ ಐತಿಹಾಸಿಕ ನಾಸ್ಕಾ ಗೆರೆಗಳನ್ನು ರಕ್ಷಿಸಿ ಸಾಂಸ್ಕೃತಿಕ ವಲಯದಲ್ಲೂ ಹೆಸರಾದವರು. ಈ ಬರಡು ನೆಲದಲ್ಲಿ ಕಾಲು ನಡಿಗೆಯಲ್ಲಿಯೇ ನಡೆದವರು. ಬಿರುಗಾಳಿ, ಬೀಸುಗಾಳಿ, ಸಣ್ಣ ಗುಂಡುಕಲ್ಲು ಶತಮಾನದ ಭೂಚಿತ್ರವನ್ನು ಮುಚ್ಚಿಹಾಕಿದ್ದವು. ಮರಿಯಾ ಅವರು ಸ್ವಚ್ಛಗೊಳಿಸಿ ಆಕಾಶದಿಂದ ಸ್ಪಷ್ಟವಾಗಿ ಕಾಣುವಂತೆ ಮಾಡಿದಳು. ಸ್ಥಳೀಯ ಆಂಡಿಯನ್ ಜನರ ಜ್ಯಾಮಿತಿ ಜ್ಞಾನವನ್ನು ಜಗತ್ತಿಗೆ ಸಾರಿದಳು. 'ಲೇಡಿ ಆಫ್ ದಿ ಲೈನ್ಸ್' ಎಂಬ ಬಿರುದಿಗೆ ಪಾತ್ರವಾದಳು. ಈ ಸ್ಥಳ ಖಗೋಳದ ಅಧ್ಯಯನಕ್ಕೆ ಸಹಾಯಕವಾಗಿ ಸೂರ್ಯನನ್ನು ಕಟ್ಟಿಹಾಕಿರುವ ಸ್ಥಳವೆಂದೇ ಹೆಸರಾಯಿತು. ಇಂತಹ ಒಂದು ಐತಿಹಾಸಿಕ ಸ್ಥಳವನ್ನು ಸಂರಕ್ಷಿಸುವ ಜೊತೆಗೆ ವೈಜ್ಞಾನಿಕ ಸಂಶೋಧನೆಗೆ ಕಾರಣವಾದ ಮರಿಯಾ ರೇಕಿ ಪೆರುವಿನ ಸಾಂಸ್ಕೃತಿಕತೆಯನ್ನು ಎತ್ತಿ ತೋರಿಸಿದ ಮಹಿಳೆಯಾಗಿ ಆಕೆಯ ಸಾಧನೆ ನಿಜಕ್ಕೂ ಶ್ಲಾಘನೀಯವಾಗಿದೆ. ಈಕೆಯ ಗೌರವಾರ್ಥವಾಗಿ ಸರ್ಕಾರವು ನಾಸ್ಕಾ ಗೆರೆಗಳನ್ನು ಐತಿಹಾಸಿಕ ಪ್ರವಾಸತಾಣವಾಗಿಸಿದೆ. ಅಲ್ಲದೆ ಪ್ಲಾನಿಟೋರಿಯಂ, ಪುಟ್ಟ ವಿಮಾನದ ಸೌಲಭ್ಯ ಕಲ್ಪಿಸಿದೆ. ಈಕೆಯ ಬಗ್ಗೆ ಹೆಚ್ಚಿನ ಮಾಹಿತಿ ಸ್ಪಾನಿಷ್ ಭಾಷೆಯಲ್ಲಿವೆ. ಇಂಗ್ಲೀಷ್ ಭಾಷೆಯಲ್ಲಿ ಒಂದು ಪುಸ್ತಕವು ಕಾಣದೆ ಲೇಖಕಿ ನೇಮಿಚಂದ್ರ ಅವರಿಗೆ ನಿರಾಸೆ ಉಂಟಾಗುತ್ತದೆ.

ಎಚ್.ಎಸ್.ಅನುಪಮಾ ಅವರ 'ಚೆಗೆವಾರನ ನೆಲದಲ್ಲಿ' ಎಂಬ ಕೃತಿಯಲ್ಲಿ ಸಾಮಾಜಿಕವಾಗಿ ಗುರುತಿಸಿಕೊಳ್ಳುವ ಮಹಿಳೆಯರ ಕುರಿತು ಬರೆದಿದ್ದಾರೆ. ವಿಶ್ವದ ಮೊತ್ತಮೊದಲ ಮಹಿಳಾ ಅಧ್ಯಕ್ಷೆ ಅರ್ಜೆಂಟೀಯಾದ ಇಸಾಬೆಲ್ಲ ಪೆರೋನ್ ಆಗಿದ್ದರು. ನಂತರ ಕ್ರಿಸ್ಟಿನಾ ಫರ್ನಾಂಡೆಸ್ ಅಧ್ಯಕ್ಷರಾಗಿದ್ದರು. ಇಲ್ಲಿನ ಮಹಿಳಾ ಪ್ರಾತಿನಿಧ್ಯವು ಇತರೆ ದೇಶಗಳಿಗಿಂತ ಹೆಚ್ಚಾಗಿದೆ. ಅರ್ಜೆಂಟೀಯಾದ ಪಾರ್ಲಿಮೆಂಟಿನಲ್ಲಿ ಶೇ.೩೭.೭% ಮಹಿಳೆಯರಿದ್ದಾರೆ. ಲ್ಯಾಟೀನ್ ಅಮೇರಿಕಾದಲ್ಲಿಯೇ ಅತಿ ಹೆಚ್ಚು ಮಹಿಳಾ ಪ್ರಾತಿನಿಧ್ಯವಿರುವ ದೇಶವಾಗಿದೆ. ೧೯೮೩ರಲ್ಲಿ

ಪ್ರಜಾಪ್ರಭುತ್ವ ಮರುಸ್ಥಾಪನೆಯಾದ ಬಳಿಕ ಒಂದಷ್ಟು ಸಮಾನತೆ ಸಾಧಿಸುತ್ತ ಬಂದಿದೆ. ಈ ಪೂರ್ವದಲ್ಲಿ ಅಂದರೆ, 'ಡರ್ಟಿ ವಾರ್' ಎಂದು ಗುರುತಿಸಲ್ಪಡುವ ೧೯೭೬-೮೩ರವರೆಗಿನ ಕಾಲದಲ್ಲಿ ಜೀವಗಳು ಹರಣವಾಗಿ, ಕುಟುಂಬಗಳು ಛಿದ್ರವಾಗಿ, ಮಾನವೀಯತೆ ಕಳೆದುಕೊಳ್ಳುವ ಮಟ್ಟದಲ್ಲಿತ್ತು. ಇದರಿಂದಾಗಿ ಈ ದೇಶದಲ್ಲಿ ಸಾಕಷ್ಟು ಮಹಿಳೆಯರಿಗೆ ನಷ್ಟವಾಗಿತ್ತು. ಪ್ರಾಚೀನ ಕಾಲದಲ್ಲಿ ವೇಶ್ಯೆಪದ್ಧತಿ, ಧಾರ್ಮಿಕ ವೇಶ್ಯೆಪದ್ಧತಿ ಇತ್ತು. ಇವುಗಳು ಕಾಲಾಂತರದಲ್ಲಿ ಇಲ್ಲವಾದವು. ಇಂದು ಪ್ರಜಾಪ್ರಭುತ್ವ ನೆಲೆಗೊಂಡಿದ್ದರಿಂದ ಹಲವು ಅನಿಷ್ಟ ಪದ್ಧತಿಗಳು ಮತ್ತು ಸಾಮಾಜಿಕವಾಗಿ ಮಹಿಳೆಯನ್ನು ಕಾಣುವ ದೃಷ್ಟಿಕೋನಗಳು ಬದಲಾದವು. ಈ ಹಿನ್ನೆಲೆಯಲ್ಲಿ ಅಲ್ಲಿನ ಮಹಿಳೆಯರು ಸಾಮಾಜಿಕವಾಗಿ ಪ್ರಗತಿ ಸಾಧಿಸಲು ಕಾರಣವಾಯಿತು ಎಂದಿದ್ದಾರೆ.

ಅರ್ಜೆಂಟೆನಿಯಾದಂತೆ ಚಿಲಿ ದೇಶದಲ್ಲೂ ಮಹಿಳೆಯರಿಗೆ ಮತದಾನದ ಹಕ್ಕು ದೊರಕಿದ್ದು ೧೯೫೨ರಲ್ಲಿ. ಈಗಲೂ ಮಹಿಳೆಯರು ಸಾಮಾಜಿಕವಾಗಿ ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೂ ಶೇಕಡಾ ೫೧% ಕಾರ್ಮಿಕ ಮಹಿಳೆಯರಿದ್ದಾರೆ. ಈ ದೇಶದಲ್ಲಿ ಮಹಿಳಾ ಹೋರಾಟದ ಫಲವಾಗಿ 'ಮಿಷಲ್ ಬಚೆಲೆತ್' ಎರಡನೆಯ ಬಾರಿಗೆ ಅಧ್ಯಕ್ಷೆಯಾಗಿದ್ದಾಳೆ. ಮಕ್ಕಳ ತಜ್ಞೆಯಾದ ಮಿಷಲ್‌ರು ೧೫.೮% ಮಹಿಳಾ ಪ್ರಾತಿನಿಧ್ಯ ಇರುವ ಈ ದೇಶದಲ್ಲಿ, ಪಾರ್ಲಿಮೆಂಟಿನಲ್ಲಿ ಶೇ.೫೦% ಮಹಿಳೆಯರಿರುವಂತೆ ನೋಡಿಕೊಂಡಿದ್ದಾರೆ. ಈ ಮೂಲಕ ಮಹಿಳೆಯರು ಸಾಮಾಜಿಕವಾಗಿ ಮೀಸಲಾತಿ ನಿರ್ಬಂಧದಂತಹ ವಿಷಯಗಳಾಚೆಗೂ ಸಾಮಾಜಿಕ ವಲಯದಲ್ಲಿ ಸಮರ್ಥವಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ ದೇಶವನ್ನು ಕಟ್ಟುವ ಕಾರ್ಯದಲ್ಲಿ ತೊಡಗಿರುವುದು ಶ್ಲಾಘನೀಯವಾಗಿದೆ. ಭಾರತದಂತಹ ಅತೀ ದೊಡ್ಡ ಪ್ರಜಾಪ್ರಭುತ್ವದಲ್ಲಿ ಮಹಿಳೆಯರನ್ನು ಪೂಜಿಸುವ ದೇಶವೆಂದು ನಂಬಲಾಗುವ ಭಾರತದಂತಹ ಅತೀ ದೊಡ್ಡ ದೇಶದಲ್ಲಿ ಪಾರ್ಲಿಮೆಂಟಿನ ಮಹಿಳೆಯರ ಸಂಖ್ಯೆ ಶೇಕಡಾ ೩೦ರಷ್ಟು ದಾಟಿಲ್ಲ. ಇದಕ್ಕೆ ಭಿನ್ನ ಎಂಬಂತೆ ಚಿಲಿ ದೇಶದಲ್ಲಿ ಪುರುಷ ಪ್ರಾಧಾನ್ಯತೆಯಿದ್ದರೂ, ಸಾಮಾಜಿಕವಾಗಿ ಮಹಿಳೆಯರ ಸಾಧನೆ ಗಮನಾರ್ಹವಾಗಿದೆ.

ಪೆರು, ಅರ್ಜೆಂಟೆನಿಯಾ. ಚಿಲಿದೇಶಗಳಲ್ಲಿ ಮಹಿಳೆಯ ಪ್ರಾತಿನಿಧ್ಯ ಕುರಿತು ಲೀಮಾದ ಮೆಯರ್ ಮಿರ್ಥಾ ಕೊರಿಯಾಳು ಹೇಳುವ ಮಾತುಗಳನ್ನು ಲೇಖಕಿ ಹೀಗೆ ಉಲ್ಲೇಖಿಸುತ್ತಾಳೆ. "ಅಧಿಕಾರದ ಸ್ಥಾನಗಳಿಗೆ ಅವಕಾಶ ಸಿಗಲು ರಾಜಕಾರಣ ಮೊದಲ ಅವಕಾಶ ಒದಗಿಸುತ್ತದೆ. ರಾಜಕಾರಣವೇ ತನ್ನ ಬಾಗಿಲನ್ನು ಮಹಿಳೆಯರಿಗೆ ಮುಚ್ಚಿಕೊಂಡರೆ ಉಳಿದ ದಾರಿಗಳು ದುರ್ಗಮವಾಗುತ್ತದೆ ಎಂದಿದ್ದಾರೆ."(ಅನುಪಮಾ.ಎಚ್.ಎಸ್., ೨೦೧೭, ಪುಟ-೧೧೪) ಈ ಮಾತು ಸಾಮಾಜಿಕವಾಗಿ ಬೆಳೆಯಬೇಕಾದ ಮಹಿಳೆಯರಿಗೂ ಅನ್ವಯವಾಗುತ್ತದೆ. ರಾಜಕಾರಣವು ಸಮಾಜದ ಅತ್ಯಂತ ಪ್ರಭಾವಶಾಲಿ ವಲಯವಾಗಿದ್ದು, ಸಮಾಜದ ಮುನ್ನೆಲೆಗೆ ಬರಲು, ಗುರುತಿಸಿಕೊಳ್ಳಲು, ಮಹಿಳೆಗೆ ಸಮಾಜದ ಎಲ್ಲಾ ರಂಗಗಳಲ್ಲೂ ಸಹಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ರಾಜಕಾರಣದಲ್ಲಿ ಮಹಿಳೆಯರು ಹೆಚ್ಚು ಹೆಚ್ಚು ಅಧಿಕಾರ ಪಡೆಯುತ್ತ ಹೋಗುವುದರಿಂದ ಸಮಾನತೆ ಸಾಧಿಸಲು ಸಾಧ್ಯವಾಗುತ್ತದೆ. ವಿದೇಶಿ ಮಹಿಳಾ ಪ್ರವಾಸ

ಕಥನಗಳಲ್ಲಿ ಮಹಿಳೆಯರ ಕ್ರಿಯಾಶೀಲ ಬದುಕಿನ ಅಭಿವ್ಯಕ್ತಿಯು ಪ್ರಾಚೀನ ಕಾಲ ಮತ್ತು ವರ್ತಮಾನದ ಕಾಲವನ್ನು ತೂಗಿ ನೋಡುವ ಸ್ವರೂಪದಲ್ಲಿದೆ.

ವಿಜಯಾ ದಬ್ಬೆ ಅವರ ಪ್ರವಾಸ ಕಥನದಲ್ಲಿ ಅಲ್ಲಿನ ಇಂಕಾ ದೇಶದ ಮಹಿಳೆಯರನ್ನು ಸಂದರ್ಶನ ಮಾಡಿ ಮಹಿಳಾ ವಿವೇಚನೆಯನ್ನು ಪ್ರಸ್ತಾಪಿಸುತ್ತಾರೆ. ಒರಿಸ್ಸಾದ ಸಮಾಜಶಾಸ್ತ್ರಜ್ಞೆ ಪ್ರಾಧ್ಯಾಪಕಿಯಾದ ರೀತಾರಾಯ್ ಅವರು ಮಹಿಳಾ ಚಳುವಳಿ, ಮಹಿಳಾ ಅಧ್ಯಯನ, ಮಹಿಳಾ ಯೋಜನೆಗಳ ಕುರಿತಾಗಿ ಸಮಾಜದಲ್ಲಿ ಬೀರಿದ ಪ್ರಭಾವ ತಿಳಿದಿದ್ದ ಲೇಖಕಿ ಅವರಲ್ಲಿ ಹೋದಾಗ ಅನೇಕ ಸಂಗತಿಗಳು ತಿಳಿದುಬಂದವು. ಒರಿಯಾದ ಸಂಸ್ಕೃತಿ ಮಹಿಳಾ ಪರವಾಗಿದ್ದರೂ ಬ್ರಾಹ್ಮಣಶಾಹಿಯಿಂದ ಹೆಂಗಸರು ತುಂಬಾ ಹಿಂದಕ್ಕೆ ಸರಿಯಲ್ಪಟ್ಟಿರುವ ಸಂಗತಿ ತಿಳಿದುಬರುತ್ತದೆ. ಮಹಿಳಾ ಆಯೋಗದ ಸದಸ್ಯರು ಜಯಪುರದಲ್ಲಿ ಅರವತ್ನಾಲ್ಕು ಪ್ರಕರಣಗಳನ್ನು ಇತ್ಯರ್ಥಗೊಳಿಸಿದ್ದರು. ಈ ಘಟನೆಯನ್ನು ನೆನಪಿಸಿಕೊಂಡು ಆಕೆಯನ್ನು ಪ್ರಶ್ನಿಸಿದಾಗ ಮಹಿಳಾ ಅಭಿವೃದ್ಧಿ ಮತ್ತು ಸಮಾಜದ ಅಭಿವೃದ್ಧಿ ಬಗ್ಗೆ ಪರಿಚಯವೇ ಇಲ್ಲದವರ ಕೈಗೆ ಬಹುತೇಕ ರಾಜ್ಯಗಳ ಮಹಿಳಾ ಆಯೋಗಗಳು ಸಿಲುಕಿರುವುದನ್ನು ಹೇಳುತ್ತಾರೆ. ಅಲ್ಲದೇ ಮಹಿಳೆಯರೇ ಮಹಿಳಾ ವಿಷಯಗಳನ್ನು ಕುರಿತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ ಜನಜಾಗೃತಿಗಾಗಿ ಪ್ರಯತ್ನಿಸುತ್ತಿದ್ದಾರೆ. ಎಡಪಂಥೀಯ ರಾಜಕೀಯ ಪಕ್ಷಗಳಲ್ಲಿ ಮಹಿಳೆಯರು ಸಕ್ರಿಯರಾಗಿದ್ದರೂ ಆಕೆ ಸಹ ಸ್ತ್ರೀ ಶೋಷಣೆಗಳ ವಿರುದ್ಧವಾದ ಅಂಶಗಳು ಕಂಡುಬಂದಲ್ಲಿ ಚಳುವಳಿಗಳಲ್ಲಿ ಭಾಗಿಯಾಗುತ್ತಾರೆ ಎಂಬುದನ್ನು ವಿವರಿಸುತ್ತಾರೆ.

ಒರಿಸ್ಸಾದ ಭವಗ್ರಹಿಯವರು ಸಾಮಾಜಿಕ ಕ್ಷೇತ್ರದಲ್ಲಿ ಗುರುತಿಸಿಕೊಂಡ ಮಹಿಳೆಯಾಗಿದ್ದಾರೆ. ಇಂದಿರಾ ಗಾಂಧಿಯವರು 'ತುರ್ತುಪರಿಸ್ಥಿತಿ ಏರಿದಾಗ ಕಟುವಾಗಿ ಪತ್ರ ಬರೆದಿದ್ದರು. ಭವಗ್ರಹಿಯವರ ಅಭಿಪ್ರಾಯಗಳನ್ನು ಲೇಖಕಿ ಹೀಗೆ ಪ್ರಸ್ತಾಪಿಸುತ್ತಾರೆ. "ಯಾವ ಹೆಂಗಸಿಗೂ ಅಷ್ಟೊಂದು ಕೆಟ್ಟ ಪತ್ರ ಬರೆದಿರಲಿಲ್ಲ. ಆಕೆಯಷ್ಟು ವಿನಮ್ರವೂ, ನಯವೂ, ಕೋಮಲವೂ ಆದ ನಡವಳಿಕೆಯುಳ್ಳವರೇ ಇಲ್ಲವೆನ್ನುವಷ್ಟು ಅಪರೂಪದ ಮಾರ್ದನತೆ, ಆದರೆ ಅದೇ ಬೆನ್ನ ಹಿಂದೆ ಅಷ್ಟೇ ಕ್ರೂರವಾಗಿ ಇರಿಯಬಲ್ಲ ಕ್ರೌರ್ಯ ಆಕೆಯದ್ದಾಗಿತ್ತು. ಅಖಂಡ ಭಾರತದ ಪ್ರಗತಿ ಬಗ್ಗೆ ಉತ್ತಮ ತಿಳುವಳಿಕೆ ಹೊಂದಿದ್ದರು."(ವಿಜಯಾದಬ್ಬೆ, ೧೯೯೮, ಪುಟ-೧೪೪೮) ಹೆಣ್ಣು ಮಕ್ಕಳು ಸಾಮಾಜಿಕ ವಲಯದಲ್ಲಿ ಹೆಚ್ಚು ಹೆಚ್ಚಾಗಿ ಗುರುತಿಸಿಕೊಳ್ಳಬೇಕೆಂಬ ಬಯಕೆ ಒರಿಸ್ಸಾ ಲೇಖಕಿಯಾದ ಭವಗ್ರಹಿಯವರದ್ದಾಗಿತ್ತು. ಮಹಿಳೆಯಾಗಿ ಆಗಿನ ಪ್ರಧಾನಿ ಇಂದಿರಾಗಾಂಧಿಯವರನ್ನು ವಿರೋಧಿಸುತ್ತಿದ್ದರೂ ಸಮಾಜದಲ್ಲಿ ಗಂಡಸ್ಸಿನಂತೆ ಆಕೆ ತೋರುವ ದಿಟ್ಟತನಕ್ಕಾಗಿ ಮೆಚ್ಚುಗೆಯನ್ನು ಹೊಂದಿದ್ದರು.

ಬಿ.ಎನ್.ಸುಮಿತ್ರಾಬಾಯಿ ಅವರ 'ಬ್ರಹ್ಮಪುತ್ರದ ಕಣಿವೆಯಲ್ಲಿ' ಪ್ರವಾಸ ಕೃತಿಯಲ್ಲಿ ಮಹಿಳೆಯರು ಸಾಮಾಜಿಕ ರಂಗಗಳಲ್ಲಿ ತೋರಿಸಿದ ಕ್ರಿಯಾಶೀಲ ಬದುಕನ್ನು ಅನಾವರಣಗೊಳಿಸಿದ್ದಾರೆ. ಕರ್ನಾಟಕದ ಚರಿತ್ರೆಯಲ್ಲಿ ರಾಣಿ ಚೆನ್ನಮ್ಮ, ಅಬ್ಬಕ್ಕ, ಅಕ್ಕಮಹಾದೇವಿ,

ಓಬವ್ವರಂತಹ ಭಾರತದ ಮಹಿಳೆಯರಿಗೆ ಗೌರವ, ಅವಕಾಶಗಳ ಸಿಗುವ ಬಗ್ಗೆ ಅಸ್ಸಾಂ ಲೇಖಕಿ ಸ್ವರ್ಣಲತಾ ಅವರು ಹೇಳಿದಾಗ ಲೇಖಕಿ ಅಚ್ಚರಿ ವ್ಯಕ್ತಪಡಿಸುತ್ತಾರೆ. ದಕ್ಷಿಣ ಭಾರತದಲ್ಲಿ ಬರೀ ಜಾತಿವಾರು ವರದಕ್ಷಿಣೆ ಇದೆ. ವರದಕ್ಷಿಣೆಗಾಗಿ ಹೆಂಗಸರನ್ನು ತುಂಬಾ ಅಮಾನವೀಯವಾಗಿ ಸುಡುವುದು ಇದೆ ಎಂದಷ್ಟೇ ಅಸ್ಸಾಮಿನ ಬಹುಪಾಲು ಜನರ ನಂಬಿಕೆಯಾಗಿತ್ತು. ಬುಡಕಟ್ಟು ಮೂಲ ಅಸ್ಸಾಂನಲ್ಲಿ ಮಾತ್ರವೇ ಮಾತೃಪ್ರಧಾನ ಅಂಶಗಳು ನೆಲೆಗೊಂಡಿದ್ದವೆಂದು ಭಾವಿಸಿದ್ದರು. ಲೇಖಕಿ ಸುಮಿತ್ರಾ ಅವರ ಪ್ರಕಾರ ಅಸ್ಸಾಂ ರಾಜ್ಯವು ಸ್ತ್ರೀಪ್ರಧಾನ ಸಮಾಜ ವ್ಯವಸ್ಥೆಯಿತ್ತು. ನಂತರದಲ್ಲಿ ಪುರುಷ ಪ್ರಧಾನ ಸಮಾಜವಾದ ಬಗ್ಗೆ ಲೇಖಕಿ ಸಂಕಟ ಪಡುತ್ತಾರೆ. ಅಲ್ಲದೇ ೧೬೭೦ರಲ್ಲಿ ಅಸ್ಸಾಂನಲ್ಲಿ ಗದಾಧರಸಿಂಹನ ಪಟ್ಟದರಾಣಿ ಜಯಮತಿಯನ್ನು ಸೆರೆಹಿಡಿದು ತಲೆಮರಿಸಿಕೊಂಡಿದ್ದ ಅವಳ ಗಂಡನ ನೆಲೆಯ ಗುಟ್ಟನ್ನು ಹೊರಹಾಕಿಸಲು ನಾನಾ ರೀತಿಯಲ್ಲಿ ಆಕೆಗೆ ಚಿತ್ರಹಿಂಸೆ ನೀಡಿದ್ದರು. ಆಕೆ ಅವನಿಗೆ ಬಲಿಯಾಗದೆ, ಆ ಧೀರತನ ತೋರಿ ಅವನ ಹಿಂಸೆಗೆ ಪ್ರಾಣಬಿಟ್ಟಳು. ಇದು ಅಸ್ಸಾಂನ ಚರಿತ್ರೆಯಲ್ಲಿ ಬಹು ಹೆಮ್ಮೆಯಿಂದ ನೆನಪಿಸಿಕೊಳ್ಳುವ ಮಹಿಳಾ ಪ್ರಧಾನ ಚರಿತ್ರೆಯಾಗಿದೆ. ಇದು ಒಂದು ಘಟನೆ ಮಾತ್ರವಾಗಿರದೆ, "ಜಯಮತಿಯ ತ್ಯಾಗ, ಧೈರ್ಯ, ಆತ್ಮ ಬಲಿದಾನದ ಬಗ್ಗೆ ವಿಪುಲವಾದ ಶಿಷ್ಟ ಸಾಹಿತ್ಯ ಅಸ್ಸಾಮೀ ಭಾಷೆಯಲ್ಲಿ ರಚಿತವಾಗಿದೆ. ರಾಣಿ ಜಯಮತಿ ಅಸ್ಸಾಮೀ ಜನರ ಬಹುದೊಡ್ಡ ಸ್ತ್ರೀಮಾದರಿ ಎನಿಸಿದ್ದಾರೆ" (ಸುಮಿತ್ರಾಬಾಯಿ.ಬಿ.ಎನ್. ೧೯೯೮, ಪುಟ-೬೧) ಎಂದು ಬಿ.ಎನ್.ಸುಮಿತ್ರಾಬಾಯಿ ಹೇಳುತ್ತಾರೆ. ಅಲ್ಲಿನ ಚಾರಿತ್ರಿಕ ಘಟನೆಯೊಂದು ನಾಲ್ಕು ಶತಮಾನಗಳು ಕಳೆದರು ಮಹಿಳೆಯರಿಗೆ ಮಾದರಿಯಾದದ್ದು, ಸಾಮಾಜಿಕವಾಗಿ ಜಯಮತಿ ಸ್ಥಾನ ಪಡೆದಿರುವುದು ಗಮನಸೆಳೆಯುತ್ತದೆ.

ಅಸ್ಸಾಂನ ಸಾಮಾಜಿಕ ವಲಯದಲ್ಲಿ ಮಹಿಳೆಯರು ಯಾವ ನಿರ್ಧಾರಗಳನ್ನು ಬೇಕಾದರೂ ಕೈಗೊಳ್ಳಬಹುದಾಗಿದೆ. ಯಾವ ಉದ್ಯೋಗವನ್ನಾದರೂ ಆಯ್ಕೆ ಮಾಡಬಹುದು. ಕುಲವೃತ್ತಿ ಮೂಲವಾದ ಜಾತಿ ಭೇದಗಳು ಅವುಗಳೊಳಗಿನ ತಾರತಮ್ಯಗಳೇನೂ ಅಡ್ಡಿಯಿಲ್ಲ. ಎಲ್ಲಾ ಜಾತಿಯ ಮಹಿಳೆಯರೂ ಉತ್ತಮ ನೇಕಾರರಾಗಿರಲೇ ಬೇಕು. ಒಳ್ಳೆಯ ವಧುವೆಂದು ಜನ ಬಂದು ಕೈ ಹಿಡಿಯಲು ನೇಯ್ಗೆಯ ಕಲೆ ಸಿದ್ಧಿಸಿರಲೇಬೇಕು ನಂಬಿಕೆ ಜನರಲ್ಲಿದೆ. ಲತಾಗುತ್ತಿ ಅವರ 'ನಾ ಕಂಡಂತೆ ಅರೇಬಿಯಾ'ದಲ್ಲಿ ಸ್ತ್ರೀಯರು ಸಾಮಾಜಿಕ ಚಟುವಟಿಕೆಗಳಿಗೆ ಬಹುತೇಕ ವಿಮುಖರಾದಂತೆ ಕಂಡುಬರುತ್ತಾರೆ. ಇಸ್ಲಾಂ ಧರ್ಮದ ವೈವಾಹಿಕ, ತಲಾಖ್, ಕೌಟುಂಬಿಕ ಕಟ್ಟಲೇಗಳೇ ಇದಕ್ಕೆ ಪ್ರಮುಖ ಕಾರಣಗಳಾಗುತ್ತವೆ. ಚೀನಾದ ಸಾಮಾಜಿಕ ವಲಯದಲ್ಲಿ ಮಹಿಳೆಗೆ ಸಿಗುವ ಸೌಲಭ್ಯಗಳನ್ನು ಸುಧಾಮೂರ್ತಿ ಅವರ 'ಹಕ್ಕಿಯ ತೆರೆಯಲಿ' ಎಂಬ ಕೃತಿಯಲ್ಲಿ "೧೯೭೩ರಿಂದ 'ಒಂದೇ ಮಗುವಿನ ಕುಟುಂಬ ಅದೇ ಸುಖೀ ಕುಟುಂಬ' ಎನ್ನುವುದು ಸರ್ಕಾರದ ಘೋಷಣೆಯಾಗಿದೆ. ಅದಕ್ಕಾಗಿ ಒಂದೇ ಮಗು ಹೆರುವ ದಂಪತಿಗಳಿಗೆ ಬಹುಬೇಗ ಉದ್ಯೋಗದಲ್ಲಿ ಬಡ್ತಿ ಕೊಡುತ್ತಾರೆ. ಸರ್ಕಾರಿ ಮನೆಗಳಲ್ಲಿ ಆದ್ಯತೆ ನೀಡುತ್ತಾರೆ. ಎರಡು ಖಾಲಿ ನಿವೇಶನ ನೀಡುತ್ತಾರೆ. ತಾಯಿಗೆ ಮಗು ಹದಿನಾಲ್ಕು ವರ್ಷ ಆಗುವವರೆಗೆ

ಅನೇಕ ಸಹಾಯ ಮಾಡುತ್ತಾರೆ. ಹೆಚ್ಚಿನ ರೇಶನ್ ಕೊಡುತ್ತಾರೆ. ಸ್ಕೂಲ್‌ನಲ್ಲಿ ಆಡ್ಮಿಶನ್‌ಗೆ ಪ್ರಾಶಸ್ತ್ಯ ನೀಡುತ್ತಾರೆ." (ಸುಧಾಮೂರ್ತಿ, ೨೦೦೩, ಪುಟ-೩೯) ಎಂದು ಹೇಳಿದ್ದಾರೆ. ಚೀನಾದ ಸಾಮಾಜಿಕ ವಲಯದಲ್ಲಿ ಮಹಿಳೆಯರಿಗೆ ಬೆಳೆಯಲು ಅಲ್ಲಿನ ಸರ್ಕಾರವು ಅನೇಕ ಸವಲತ್ತುಗಳನ್ನು ನೀಡಿದೆ. ಮಹಿಳೆಯ ಕುಟುಂಬ ಪೋಷಣೆಯ ಸಮಸ್ಯೆಗಳು ಸ್ವಲ್ಪಮಟ್ಟಿಗೆ ಬಗೆಹರಿದರೆ ಸಾಮಾಜಿಕವಾಗಿ ಏನನ್ನಾದರೂ ಮಾಡಲು ಸಾಧ್ಯವಿದೆ ಎಂಬ ಮನೋಭಾವದಿಂದಲೇ ಈ ಆದ್ಯತೆಗಳನ್ನು ಕಲ್ಪಿಸಲಾಗುತ್ತದೆ.

ಚೀನಾದಲ್ಲಿ ಮಹಿಳೆಯರನ್ನು ಬಹುಕಾಲ ಕಾಡಿದ ಪಾದ ಕಟ್ಟುವಿಕೆಯಂತ ಹೀನ ಆಚರಣೆ ವಿರುದ್ಧ ಹೋರಾಡಿದಂತಹ ಡೊವೆಜರ್ ಶಿಕ್ಸಿ ಕುರಿತು ಇಂದಿರಾ ಶಿವಣ್ಣ ಅವರ 'ನಿಗೂಢಗಳ ನಿಚ್ಚಣಿಕೆ ಏರಿ' ಎಂಬ ಕೃತಿಯಲ್ಲಿ ನಿರೂಪಿಸುತ್ತಾರೆ. ಆಂಗ್ಲ ಲೇಖಕಿಯಾದ ಆಕೆ ಸದಾ ಕ್ರಿಯಾಶೀಲೆ, ರೂಪಾವತಿ ಹಾಗೂ ಅಸಾಮಾನ್ಯ ಆಕರ್ಷಕ ವ್ಯಕ್ತಿತ್ವ ಹೊಂದಿದವಳು. 'empress orchid', 'the lost empress sterling seagrane', 'the dragon lady', 'pearl's suck', 'imperial women' ಮುಂತಾದ ಕೃತಿಗಳಲ್ಲಿ ಶಿಕ್ಸಿಯ ಕುರಿತು ಬರೆದಿದ್ದಾರೆ. ಈ ಕೃತಿಗಳೇ ಆಕೆಯ ಪ್ರಸಿದ್ಧಿಗೆ ಸಾಕ್ಷಿಯಾಗಿವೆ. ಇಂದಿಗೂ ಚೀನಾದಲ್ಲಿ ಶಿಕ್ಸಿಯ ಬಗ್ಗೆ ಚರ್ಚೆಗಳು ಆಗುತ್ತಿವೆ. ಆದರೆ ತನ್ನ ವಿವೇಚನಾ ರಹಿತ ಆಡಳಿತದಿಂದಾಗಿ ಚೀನಾದ ಅವನತಿಗೆ ಕಾರಣವಾದಳು. 'ಪ್ರಭಾವಿ ಮಹಿಳೆಯನ್ನು ನಂಬುವಂತಿಲ್ಲ ಅವಳು ಬಹಳ ಅಪಾಯಕಾರಿ' ಎನ್ನುವ ಕನ್‌ಫ್ಯೂಷಿಯಸ್‌ನ ಮಾತು ಚೀನಾದಲ್ಲಿ ಪ್ರಚಲಿತವಾಗಿದೆ. ಈ ಮಾತಿಗೆ ಉದಾಹರಣೆ ಎಂಬಂತೆ ಆಕೆಯ ಆಡಳಿತ ಚೀನಾದಲ್ಲಿ ವಿಧ್ವಂಸಕ ಕೃತ್ಯಗಳನ್ನೇ ಸೃಷ್ಟಿಸಿದವು. ಚೀನಾದ ಸೈನ್ಯ ಬಲವನ್ನು ನಿಯಂತ್ರಣಕ್ಕೆ ತೆಗೆದುಕೊಂಡು ವೈಜ್ಞಾನಿಕ, ನವೀನ ತಾಂತ್ರಿಕತೆಗಳನ್ನು ಅಳವಡಿಸಿ ಪಾಶ್ಚಾತ್ಯರಂತೆ ಬಲಪಡಿಸಲು ಯೋಚಿಸಿದಳು. ಇದಕ್ಕಾಗಿ ಯುವಕರಿಗೆ ಇಂಗ್ಲೀಷ್ ಕಲಿಯಲು ಆದೇಶಿದಳು ಮತ್ತು ವಿಶೇಷ ಅಧ್ಯಯನಕ್ಕಾಗಿ ವಿದೇಶಕ್ಕೆ ಕಳಿಸಿದಳು. ಸಾಮಾಜಿಕ ಮೇಲೆತ್ತರಕ್ಕೆ ಚೀನಾವನ್ನು ತರುವ ಈಕೆಯ ಯೋಚನೆ, ಪೂರ್ವ ಯೋಜನೆಯಿಲ್ಲದೆ ನಗೆಪಾಟಲಿಗೆ ಒಳಗಾಯಿತು. ಅಧಿಕಾರವನ್ನು ಉಳಿಸಿಕೊಳ್ಳಲು ಅತೀ ಒತ್ತಡಕ್ಕೆ ಸಿಲುಕಿದಳು. ತನ್ನ ಮಗನ ಮೇಲೆ ಹಿಡಿತದಿಂದಾಗಿ ಕಾಮಾಂಧನಾದನು. ದೇಶದ ರಕ್ಷಣೆಯ ಹಣವನ್ನು ಅರಮನೆಯ ನಿರ್ಮಾಣಕ್ಕೆ ಬಳಸಿಕೊಂಡು ಚೀನಾದ ಆರ್ಥಿಕ ಅವನತಿಗೆ ಕಾರಣವಾದಳು. ಚಳಿ ಕಾಯಿಸಲು ಶ್ರೀಗಂಧದ ಕಟ್ಟಿಗೆಯನ್ನು ಬಳಸುತ್ತಿದ್ದು ಶಿಕ್ಸಿಯ ವೈಭವಕ್ಕೆ ನಿದರ್ಶನವಾಗಿತ್ತು. ಆಕೆಯ ವ್ಯಕ್ತಿತ್ವ, ವೈಭವ, ಆಡಳಿತ ವೈಖರಿ, ಸಾಮಾಜಿಕ ನಿಷ್ಠೆಯಿಂದ ಪ್ರಯತ್ನಿಸಿದ ಕೆಲವು ನಿರ್ಧಾರಗಳಿಂದಾಗಿ ಹೆಸರುವಾಸಿಯಾದ ಶಿಕ್ಸಿ ಚೀನಾದ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದವಳಾಗಿದ್ದಾಳೆ.

ಗೋವಾದ ಮಹಿಳೆಯರ ಸಾಮಾಜಿಕ ಜೀವನ ಅನ್ಯ ರಾಜ್ಯಗಳಿಗಿಂತ ಸುಧಾರಿಸಿದೆ ಎಂದು ಎಚ್.ಎಸ್.ಮುಕ್ತಾಯಕ್ಕ ಅವರ 'ಮದಿರೆಯ ನಾಡಿನಲ್ಲಿ' ಎಂಬ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ವರದಕ್ಷಿಣೆಯನ್ನು ನೀಡಿಯೇ ಮದುವೆ ಮಾಡುವ ಪದ್ಧತಿ ಗೋವಾದಲ್ಲಿದೆ. ಇದರಿಂದಾಗಿ

ಮಹಿಳೆಯರ ಮೇಲೆ ಕಿರುಕುಳ ತಪ್ಪಿದ್ದಾವೆ ಎಂದು ಅಲ್ಲಿನವರ ನಂಬಿಕೆಯಾಗಿದೆ. ಅಂತರ ಜಾತಿಯ ವಿವಾಹಗಳು ಸಾಮಾನ್ಯವಾಗಿದ್ದು, ಜಾತಿಯತೆಯ ಕಟ್ಟುಪಾಡುಗಳು ಕಂಡುಬರುವುದಿಲ್ಲ. ಪೋರ್ಚ್‌ಗೀಸರ ಕಾಲದಿಂದಲೂ ಹಿಂದೂ ಕ್ರಿಶ್ಚಿಯನ್ನರು ಬೆರತೇ ಬಂದಿದ್ದರಿಂದ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವವು ದಟ್ಟವಾಗಿದೆ. ಹುಡುಗ ಹುಡುಗಿಯರು ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸ್ನೇಹಗಳಿಸುತ್ತಾರೆ. ಅಂತರಜಾತಿಯ ವಿವಾಹಗಳು ಸರ್ವಸಾಮಾನ್ಯವಾಗಿದೆ. ಕೆಲ ಸಂಪ್ರದಾಯವಾದಿಗಳು ತಮ್ಮ ಮಕ್ಕಳನ್ನು ತಮ್ಮಂತೆ ಆಚಾರ ವಿಚಾರ ಮಡಿ ಮೈಲಿಗೆಯಲ್ಲಿ ಬೆಳೆಸಬೇಕೆಂದಿದ್ದರೂ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಕಷ್ಟ ಸಾಧ್ಯವಾಗಿದೆ. ಪಶ್ಚಿಮ ಸಂಸ್ಕೃತಿಯ ಅನುಕರುಣೆ ಹೆಚ್ಚಾಗಿರುವುದರಿಂದ ಅವರಿಗೆ ಸಾಧ್ಯವಾಗುತ್ತಿಲ್ಲ. ಮಕ್ಕಳು ಆ ಪರಿಸರಕ್ಕೆ ಹೊಂದಿಕೊಂಡು ಅಂತರ್ ಜಾತಿಯ ವಿವಾಹಗಳಿಂದ ಮುಕ್ತ ವಾತಾವರಣವನ್ನು ಇಷ್ಟಪಡುತ್ತಾರೆ. ಹೀಗಾಗಿ ಮಹಿಳೆಯರು ಮದುವೆಯಾದಾಗ, ಮಕ್ಕಳಾದಾಗ ಎಲ್ಲವೂ ಇಲ್ಲಿಗೆ ಮುಗಿಯಿತು ಎಂದು ಭಾವಿಸದೆ ಲವಲವಿಕೆಯಿಂದ ಇರುತ್ತಾರೆ. ಅಲ್ಲಿನ ಅಜ್ಜಿಯರ ಉಡುಪುಗಳು ಲೇಖಕಿಗೆ ಬೆರಗುತರಿಸಿದ್ದವು. ಅವರ ಸೌಂದರ್ಯ, ಉಲ್ಲಾಸ, ಉಡುಗೆ ತೊಡುಗೆಗಳು ಜೀವನವನ್ನು ಅನುಭವಿಸಿಯೇ ತೀರಬೇಕು ಎನ್ನುವ ಮನೋಭಾವದಿಂದಾಗಿ, ಸಾಮಾಜಿಕ ವಲಯದಲ್ಲಿ ಸದಾ ಸಕ್ರಿಯರಾಗಿ ಕಂಡುಬರುತ್ತಾರೆಂದು ಲೇಖಕಿ ಅಭಿಪ್ರಾಯಪಟ್ಟಿದ್ದಾರೆ.

೧೭ನೇ ಶತಮಾನದಲ್ಲಿ ಅಮೇರಿಕಾದಂತಹ ಅಭಿವೃದ್ಧಿ ಹೊಂದಿದ ದೇಶದಲ್ಲಿ ವರದಕ್ಷಿಣೆ ಸಾಮಾಜಿಕ ಪಿಡಾಗಿದ್ದ ಬಗ್ಗೆ ಸಾರಾ ಅಬೂಬಕ್ಕರ್ ಅವರು 'ಐಷಾರಾಮದ ಆಳದಲ್ಲಿ' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಅಲ್ಲದೆ ಅಮೇರಿಕಾದಲ್ಲೆ ಸ್ತ್ರೀವಾದದ ಚಳುವಳಿಯ ಬಗ್ಗೆ ಪ್ರಸ್ತಾಪಿಸುತ್ತಾರೆ. ಯಹೋದ್ಯರ ಬದುಕಿನ ಕುರಿತ ವರ್ಜೀನಿಯಾ ವೂಲ್ಫ್ ಅವರ 'A Room of one's own', ಅರುಂಧತಿ ಅವರ 'God of small things' ಕೃತಿಗಳಿಂದ ಯಹೋದ್ಯ ಮಹಿಳೆಯರ ಸಾಮಾಜಿಕ ಬದುಕಿನ ಬಗ್ಗೆ ಓದಿ ತಿಳಿದಿದ್ದರು. ಹಲಾದೀಬ್ ಜಬೂರ್ ಅವರ 'A Women of najarath' ಎಂಬ ಕೃತಿಯಿಂದ ಪ್ಯಾಲೆಸಿಯನ್ ಮಹಿಳೆಯರ ಬಗ್ಗೆಯೂ ತಿಳಿದುಕೊಂಡಿದ್ದರು. ಯಹೋದ್ಯರನ್ನು ತಯ್ನಾಡಿನಿಂದ ಓಡಿಸಿದಂದಿನಿಂದ ತಮ್ಮ ಅಸ್ತಿತ್ವಕ್ಕಾಗಿ, ಸ್ವಂತ ನೆಲಕ್ಕಾಗಿ ಮತ್ತು ರಾಷ್ಟ್ರೀಯತೆಗಾಗಿ ಹೋರಾಡಿದ್ದರು. ಈ ಹೋರಾಟದಲ್ಲಿ 'ಅಮಾಲ್' ಎಂಬ ಮಹಿಳೆ ಸಾಮಾಜಿಕವಾಗಿ ಗುರುತಿಸಿಕೊಂಡಿದ್ದಳು. ಹೋರಾಟದಿಂದಾಗಿ ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಾಳೆ. ಆಕೆಯ ಸೌಂದರ್ಯಕ್ಕೆ ಸೋತ ರಾಜಕುಮಾರ ಮದುವೆಯಾಗುತ್ತಾನೆ. ರಾಜಾಡಳಿತದಿಂದ ಬೇಸತ್ತು ಜನರಿಗಾಗಿ ಹೋರಾಡವ ಇಚ್ಛೆಯೊಂದಿಗೆ ರಾಜನಿಗೆ ತಲಾಖ್ ನೀಡುತ್ತಾಳೆ, ರಾಜನಿಂದ ಪರಿಹಾರವಾಗಿ ಸಂಪತ್ತು ಪಡೆದರೂ ಅಮೇರಿಕಾಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಾಳೆ. ಸ್ವಂತ ನೆಲಕ್ಕಾಗಿ ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸಿದಾಗ ಭಯೋತ್ಪಾದಕ ಪಟ್ಟ ಕಟ್ಟುತ್ತಾರೆ. ಛಲ ಬಿಡದೆ ಅಮಾಲ್ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿ ಸಾವಿಗಿಡಾಗುತ್ತಾಳೆ. ಅಮೇರಿಕಾದ 'ಲಿಬರ್ಟಿ ಆಫ್ ಸ್ಟಾಚ್ಯೂವ್'

ಮಹಿಳಾ ಅಭಿವ್ಯಕ್ತಿ, ಸ್ವಾತಂತ್ರ್ಯ ಸಮಾನತೆಯ ದ್ಯೋತಕವಾಗಿದೆ. ಮಾನವ ಹಕ್ಕುಗಳ ರಕ್ಷಣೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಇಲ್ಲಿನ ಜನತೆ ಗೌರವಿಸುತ್ತಾರೆ. ಅಮೇರಿಕಾದ ನ್ಯಾಯಲಯದಲ್ಲಿ ನ್ಯಾಯವಾದಿಗಳು ನೀನು ಯಾಕೆ ಬುರ್ಕಾ ಧರಿಸಿಲ್ಲ ಎಂದು ಪ್ರಶ್ನಿಸಿದರೆ, ನ್ಯಾಯವಾದಿಗಳೇ ಸೆರೆಮನೆಗೆ ಹೋಗಬೇಕಾಗುತ್ತದೆ. ಅಮೇರಿಕಾದ ಅಧ್ಯಕ್ಷರೂ ಸಹ ತಮ್ಮ ಲೈಂಗಿಕ ಹಗರಣಗಳ ಕುರಿತು ನ್ಯಾಯಲಯಕ್ಕೆ ವಿವರಣೆ ನೀಡಬೇಕಾಯಿತು. ಇಂತಹ ಕಾನೂನಿನಿಂದಲೇ ಅಮೇರಿಕಾದಲ್ಲಿ ಮಹಿಳೆಯ ಅಭಿವ್ಯಕ್ತಿತನಕ್ಕೆ, ಆಕೆಯ ಕ್ರಿಯಾಶೀಲತೆಗೆ ಸದಾ ಸಾಮಾಜಿಕ ಮನ್ನಣೆ ಇರುತ್ತದೆ ಎಂಬುದು ಸಾರಾ ಅವರ ಅಭಿಪ್ರಾಯವಾಗಿದೆ. ಅಮೇರಿಕಾ ಪ್ರವಾಸ ಮಾಡಿದ ಲೇಖಕಿ ಉಮಾರಾವ್ ಅವರ 'ರಾಕೀ ಪರ್ವತಗಳ ನಡುವೆ ಕ್ಯಾಬರೆ' ಕೃತಿಯಲ್ಲಿ ಪ್ರಪಂಚದ ಸಿರಿವಂತ ಮಹಿಳೆಯರಲ್ಲಿ ಒಬ್ಬರಾಗಿರುವ ಓಫ್ರಾ ವಿನ್ ಫ್ರಿಯವರು ಮಿಸಿಸಿಪ್ಪಿಯ ಸಾಮಾಜಿಕ ಹೋರಾಟಗಾರ್ತಿಯ ಬಗ್ಗೆ ಪ್ರಸ್ತಾಪಿಸುತ್ತಾರೆ. ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದ ಓಫ್ರಾಳು ಅತ್ಯಾಚಾರಕ್ಕೆ ಗುರಿಯಾಗುತ್ತಾಳೆ. ನಂತರದ ಬದುಕಿನಲ್ಲಿ ಸಾಮಾಜಿಕವಾಗಿ ಆಕೆ ತಲುಪಿದ ಎತ್ತರ ಕಪ್ಪು ಹೆಣ್ಣು ಮಕ್ಕಳಿಗೆ ಸ್ಫೂರ್ತಿಯಾಗುತ್ತದೆ. ಅಮೇರಿಕಾದ ವರ್ಣಭೇದ ನೀತಿಯ ವಿರುದ್ಧ ಕಪ್ಪು ಮಹಿಳೆಯಾಗಿ ಹೋರಾಡಿದ್ದ ಓಫ್ರಾಳ ಚರಿತ್ರೆ ಪುರುಷ ಕ್ರೂರತ್ವಕ್ಕೆ ಸಾಕ್ಷಿ ಎನ್ನುವಂತಿತ್ತು ಎಂದು ಲೇಖಕಿ ಹೇಳುತ್ತಾರೆ. ಎರಡರ ವೈರುಧ್ಯವನ್ನು ಗಮನಿಸಿದಾಗ ಇಂದಿನ ಅಮೇರಿಕಾ ಮಹಿಳೆಯರಿಗೆ ನೀಡಿದ ಮುಕ್ತ ಸಾಮಾಜಿಕ ವಾತಾವರಣವು ಕಪ್ಪು ಮಹಿಳೆಯರು ಹೋರಾಡಿದ ಫಲವಾಗಿ ಪ್ರಾಪ್ತವಾದದ್ದು ಎನ್ನಬಹುದಾಗಿದೆ.

ತಮಿಳುನಾಡಿನ ರಾಜ್ಯ ಪ್ರವಾಸ ಮಾಡಿದ ಶೈಲಜಾ ಎನ್.ಬಾಗೇವಾಡಿ ಅವರು 'ದೇವಾಲಯಗಳ ನಾಡಿನಲ್ಲಿ' ಎಂಬ ಕೃತಿಯಲ್ಲಿ ಸಾಮಾಜಿಕ ವಲಯದಲ್ಲಿ ಮಹಿಳೆಯರ ಪಾತ್ರವು ಜನರಲ್ಲಿ ಚರಿತ್ರೆಯಾದ ಬಗ್ಗೆ ಪ್ರಸ್ತಾಪಿಸುತ್ತಾರೆ. ಲೇಖಕಿಗೆ ತಮಿಳು ಪ್ರವಾಸಿಯೊಬ್ಬರು ಕರ್ನಾಟಕ ರಾಜ್ಯ ಮುಖ್ಯಮಂತ್ರಿಯಾಗಿದ್ದ ಸಿದ್ಧರಾಮಯ್ಯನವರು ಹಸಿದವರಿಗೆ ಅನ್ನಭಾಗ್ಯ ಯೋಜನೆ ನೀಡಿರುವುದರಿಂದ ಸೋಮಾರಿತನ ಸೃಷ್ಟಿಸಿರುವುದಾಗಿ ಹೇಳಿದಾಗ ಲೇಖಕಿ ವ್ಯಂಗ್ಯವಾಗಿ ತಮಿಳುನಾಡಿನ ರಾಜಕಾರಣವನ್ನು ಉದಾಹರಿಸುತ್ತಾರೆ. ಜಯಲಲಿತ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಕ್ಯಾಂಟೀನ್, ಇಡ್ಲಿ, ಸಿಮೆಂಟ್, ಕುಡಿಯುವ ನೀರು, ಮಿನಿಬಸ್, ಔಷಧಿ, ಕಿರಾಣಿ ಮತ್ತು ಹೆಣ್ಣು ಮಕ್ಕಳಿಗೆ ಹಸು-ಕುರಿ ನೀಡುವುದು, ಶಾಲಾ ಬ್ಯಾಗ್ ಪುಸ್ತಕಗಳ ಮೇಲು ಅಮ್ಮ ಭಾವಚಿತ್ರ ಹೀಗೆ ತಮಿಳುನಾಡಿನಲ್ಲಿ ಎಲ್ಲವೂ ಅಮ್ಮ ಮಾಯವಾದ ಬಗ್ಗೆ ಹೇಳುತ್ತಾರೆ. ಭ್ರಷ್ಟಚಾರದಿಂದಾಗಿ ಜೈಲು ಸೇರಿದರೂ ಅದು ತಮಿಳರಿಗೆ ತಪ್ಪಾಗಿ ಕಂಡಿಲ್ಲ. ಅವರಿಗೆ ಮುಖ್ಯವಾದದ್ದು ತಮ್ಮ ಅನುಕೂಲತೆ. ಭ್ರಷ್ಟಚಾರದಿಂದಾಗಿ ಶಿಕ್ಷೆಯಾದರೂ ಆಕೆಯ ಸಾಮಾಜಿಕ ನ್ಯಾಯವನ್ನು, ಮೂಲಭೂತ ಸೌಕರ್ಯಗಳನ್ನು ಸಾಮಾನ್ಯ ಜನರಿಗೆ ಕಲ್ಪಿಸಿಕೊಟ್ಟಿದ್ದಕ್ಕೆ ಆಕೆ ಜನಮಾನಸದಲ್ಲಿ ಉಳಿದ ಬಗ್ಗೆ ನಿರೂಪಿಸಿದ್ದಾರೆ.

ಆಧುನಿಕ ಮಹಿಳೆಯರು ಶಿಕ್ಷಣ, ಉದ್ಯೋಗ, ಕಲೆ, ಕೃಷಿ, ಹೋರಾಟ ಮುಂತಾದ ರಂಗಗಳಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ. ಸಮಾಜದ ಬಹುತೇಕ ರಂಗಗಳಲ್ಲಿ ಮಹಿಳೆಯರು ದುಡಿಯುತ್ತಿರುವ ಕಾರಣಕ್ಕೆ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯ ಹೆಜ್ಜೆ ಇಡುತ್ತಿದ್ದಾರೆ. ಉನ್ನತ ಮಟ್ಟಕ್ಕೇರಲು ಶಿಕ್ಷಣವನ್ನೇ ಒಂದು ಅಸ್ತ್ರದಂತೆ ಭಾಸಿದ್ದರಿಂದ ಮತ್ತು ತಮ್ಮ ಬುದ್ಧಿಶಕ್ತಿ, ಕೌಶಲ್ಯ, ನಿರಂತರ ಶ್ರಮ ಮತ್ತು ಕ್ರಿಯಾಶೀಲತೆಯಿಂದಾಗಿ ಮಹಿಳೆಯರು ದಿನದಿಂದ ದಿನಕ್ಕೆ ಮತ್ತಷ್ಟು ಪ್ರಭಾವಶಾಲಿಯಾಗುತ್ತಿದ್ದಾರೆ.

೬.೪. ಸಾಂಸ್ಕೃತಿಕ-ಶೈಕ್ಷಣಿಕ ಕ್ಷೇತ್ರದಲ್ಲಿ ಮಹಿಳೆಯರ ಕ್ರಿಯಾಶೀಲತೆ

ಒಂದು ದೇಶವು ವೈಶಿಷ್ಟ್ಯಪೂರ್ಣವಾಗುವುದು ಮಹಿಳೆಯರು ಸಾಂಸ್ಕೃತಿಕ-ಶೈಕ್ಷಣಿಕ ಕ್ಷೇತ್ರಗಳಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಳ್ಳುವುದರಿಂದ. ಮಹಿಳಾ ಶಕ್ತಿ ಎಂಬುದು ವಿಶ್ವದ ಹಲವು ಕಡೆ ಇಂದು ಸಾಬಿತಾಗಿರುವ ಕಾರಣ, ಹಲವು ರಂಗಗಳಲ್ಲೂ ಸಮರ್ಥವಾಗಿ ನಿಭಾಯಿಸುವ ಕಲೆಗಾರಿಕೆ, ಬುದ್ದಿಶಕ್ತಿ, ಕ್ರಿಯಾಶೀಲ ಮನೋಭಾವ ವಿಶ್ವಕ್ಕೆ ಅತ್ಯವಶ್ಯವಾಗಿದೆ. ಈ ಕುರಿತು ಕನ್ನಡದ ಮಹತ್ವದ ಲೇಖಕಿ ಅನುಪಮಾ ನಿರಂಜನ ಅವರು 'ಸ್ನೇಹಯಾತ್ರೆ' ಪ್ರವಾಸ ಕಥನದಲ್ಲಿ ಮಹಿಳಾ ಅನನ್ಯತೆಯ ಚಹರೆಗಳ ಬಗ್ಗೆ ವಿವರಿಸುತ್ತಾರೆ. ಲೇಖಕಿ ಸ್ನೇಹಿತರ ಮನೆಗೆ ಹೋದಾಗ ಕಲಾಕೃತಿಯೊಂದರ ವರ್ಣನೆ ಹೀಗಿದೆ. "ಮನೆಯೊಂದರಲ್ಲಿ ಬೃಹತ್ ಚಿತ್ರವೊಂದಿತ್ತು, ಮಧ್ಯದಲ್ಲಿ ಸೂರ್ಯ, ಒಂದು ಕಡೆ ಸಿತಾರ ಬಾರಿಸುತ್ತಿರುವಾತ, ಈತ ಕಲಾಪ್ರತಿನಿಧಿ, ಹೆಣ್ಣು ಒಂದು ಬದಿಗೆ, ಅವಳು ಸೃಷ್ಟಿಯ ಸಂಕೇತ. ಅವಳ ಹೊಟ್ಟೆಯಲ್ಲಿ ಮಗುವಿದೆ. ಆಕೆ ತೆನೆ ಹಿಡಿದಿದ್ದಾಳೆ. ಇನ್ನೊಂದು ಕಡೆ ಯುವಕನೊಬ್ಬ-ಇವನು ದುಡಿಮೆಯ ಸಂಕೇತ". (ಅನುಪಮಾ ನಿರಂಜನ, ೧೯೭೭, ಪುಟ-೩೫) ಈ ಚಿತ್ರಣವನ್ನು ನೋಡಿದ ಲೇಖಕಿ ವಿಸ್ಮಯಗೊಂಡು ಮನೆಮಂದಿಯ ಕಲಾಪ್ರಜ್ಞೆಯ ಜೊತೆಗೆ ಕಲಾಪ್ರಜ್ಞೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಆ ಕಲಾಕೃತಿಯಲ್ಲಿ ಪುರುಷನಷ್ಟೇ ಸರಿಸಮಾನವಾಗಿ ಮಹಿಳೆಯನ್ನು ಸೃಷ್ಟಿಯ ಸಂಕೇತವಾಗಿ ಗೌರವಿಸುವುದನ್ನು ಕಾಣುತ್ತಾರೆ. ಜರ್ಮನ್ನಿನಲ್ಲಿ ಮಹಿಳೆಯರು ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡುತ್ತಾರೆ. ಇಲ್ಲಿನ ವಿದ್ಯಾರ್ಥಿಗಳು ವ್ಯಾಸಾಂಗದ ಅವಧಿಯಲ್ಲಿ ವೇತನ ಪಡೆಯುತ್ತಾರೆ. ಜರ್ಮನ್ ನಗರಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳಿದ್ದರೇ, ಹಳ್ಳಿಗಳಿಗೆ ಪುಸ್ತಕ ಒದಗಿಸುವ ಕೆಲಸವನ್ನು 'ಸಂಚಾರಿ ಪುಸ್ತಕಾಲಯ' ಮಾಡುತ್ತದೆ. ಈ ಪುಸ್ತಕಾಲಯವು ಪುಕ್ಕಟೆಯಾಗಿ ಪುಸ್ತಕ ಒದಗಿಸುವ ಮತ್ತು ಎರವಲು ಪಡೆಯುವ ಸೌಲಭ್ಯ ಮಾಡುತ್ತದೆ. ಇಲ್ಲಿನ ಮಹಿಳೆಯರು ಶೇಕಡಾ ೬೦ರಷ್ಟು ಓದುವ ಹವ್ಯಾಸ ಹೊಂದಿರುವುದನ್ನು ಗಮನಿಸಿದರೆ, ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿದ ಮಹತ್ವವು ತಿಳಿದುಬರುತ್ತದೆ.

ಲೇಖಕಿ ಅನುಪಮಾ ನಿರಂಜನ ಅವರಿಗೆ ಪರಿಚಯವಾದ ಆ್ಯನಾಳಿಂದಾಗಿ ಜರ್ಮನ್‌ನ ಸಾಹಿತ್ಯಾಭಿವ್ಯಕ್ತಿ ತಿಳಿದುಬರುತ್ತದೆ. ಗಯೆಟೆಯ 'ಫೌಸ್ಟ್' ಮತ್ತು 'ಡೆತ್ ಆಫ್ ವೆನಿಸ್', ಹರ್ಮನ್ ಹೌಸ್‌ನ 'ಸಿದ್ಧಾರ್ಥ', ಥಾಮಸ್ ಮೆನ್‌ನ 'ಡಾಕ್ಟರ್ ಫೌಸ್ಟಸ್', ಬ್ರೆಕ್ಟ್‌ನ ನಾಟಕಗಳ

ಬಗ್ಗೆ ಚರ್ಚೆಗಳಾಗುತ್ತವೆಂದು, ಯುದ್ಧದ ಸಂದರ್ಭದಲ್ಲಿ ಅಲ್ಲಿನ ಯೋಧರು ಗಯೆಟೆಯ 'ಪೌಸ್ಟ್' ಕೃತಿಯನ್ನು ಓದಲಿಕ್ಕೆ ತೆಗೆದುಕೊಂಡು ಹೋಗುವುದನ್ನು ಆ್ಯನಾಳು ಹೇಳುತ್ತಾಳೆ. ಭಾರತಕ್ಕೆ 'ರಾಮಾಯಣ', 'ಮಹಾಭಾರತ'ಗಳಿದ್ದ ಹಾಗೆ, ಗ್ರೀಕ್‌ನಲ್ಲಿ 'ಇಲಿಯಡ್', 'ಒಡೆಸ್ಸಿ' ಕೃತಿಗಳು ಸಾಂಸ್ಕೃತಿಕವಾಗಿಯೂ, ಶೈಕ್ಷಣಿಕವಾಗಿಯೂ ಮಹಿಳೆಯರು ಸ್ವಸಂಸ್ಕೃತಿಯ ಸ್ವೀಕಾರದ ಮನೋಭಾವ ಹೊಂದಿರುವ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಸಾಕ್ಷಿಯಾಗುತ್ತದೆ. ಅಲ್ಲದೇ ಕ್ರೀಡೆ, ನೃತ್ಯ, ರಂಗಭೂಮಿಯಲ್ಲೂ ಇಂತದೆ ಆಸಕ್ತಿ ಹೊಂದಿದ್ದಾರೆ. ತರುಣ-ತರುಣಿಯರು ಮೇಳವೊಂದರಲ್ಲಿ ಹಾಡುವ, ಗುಂಪುಗೂಡಿ ನರ್ತಿಸುವ, ಪಾಪ್ ಸಂಗೀತದ ಕಾರ್ಯಕ್ರಮಗಳಿಂದ ಎಡಬಿಡದೆ ಚಪ್ಪಾಳೆ ತಟ್ಟುವುದು ಕಲಾವಿದರಿಗೆ ಗೌರವ ಕೊಡುವ ಸಂಪ್ರದಾಯವಾಗಿದೆ ಎಂದು ಲೇಖಕಿ ನಿರೂಪಿಸುತ್ತಾರೆ.

'ಪ್ಯಾರಿಸ್ ಸೀನಿದರೆ ಯುರೋಪಿನಲ್ಲೆಲ್ಲಾ ನೆಗಡಿಯಾಗುತ್ತೆ' ಎನ್ನುವ ಮಾತಿನಂತೆ ಪ್ಯಾರಿಸ್‌ನ ಉತ್ಪನ್ನಗಳು ಜಗತ್ತಿನ ಗಮನ ಸೆಳೆಯುತ್ತವೆ. ಟಾಕುಟೀಕಾದ ದಟ್ಟ ಕಂದು ಬಣ್ಣದ ಸ್ಕರ್ಟ್, ಅದರ ಮೇಲೊಂದು ಸಡಿಲವಾದ ಬ್ಲೌಸ್, ತಲೆಗೆ ಹ್ಯಾಟ್. ಪ್ಯಾರಿಸ್‌ನ ಉಡುಗೆ ತೊಡುಗೆ ಜಗತ್ತಿನಲ್ಲೆಲ್ಲಾ ಪ್ರಸಿದ್ಧಿ ಪಡೆಯುತ್ತವೆ. ಉಡುಗೆ-ತೊಡುಗೆ ಮತ್ತು ಪ್ಯಾರಿಸ್‌ನ ಸುಗಂಧದ್ರವ್ಯ ಪ್ಯಾಶನಬಲ್ ಮತ್ತು ಸಾಂಸ್ಕೃತಿಕ ಸಂಕೇತದಂತೆ ಭಾವಿಸುತ್ತಾರೆ. ಪ್ರವಾಸಿಗರು ಸಹ ಅವುಗಳನ್ನ ಕೊಳ್ಳುವ ಆಸಕ್ತಿ ಹೊಂದಿರುವ ಬಗ್ಗೆ ಅನುಪಮಾ ನಿರಂಜನ ಅವರು 'ಅಂಗೈಯಲ್ಲಿ ಯುರೋ ಅಮೇರಿಕಾ' ಎಂಬ ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಸಾಂಸ್ಕೃತಿಕತೆಯನ್ನು ಸಾರುವ ಅನೇಕ ಕೇಂದ್ರಗಳಿಗೆ ಭೇಟಿ ನೀಡಿದ ಲೇಖಕಿಗೆ ನಾಲ್ಕನೇ ಹೆನ್ರಿ ದೊರೆಯ ಹೆಂಡತಿ ಮೇರಿ ಮೇದಿಚಿಗೋಸ್ಕರ ಕಟ್ಟಿಸಿದ ಲುಕ್ಸೆಂಬರ್ಗ್ ಅರಮನೆ, (ಅದೀಗ ಸೆನೆಟ್ ಸಭೆಯಾಗಿ ಮಾರ್ಪಟ್ಟಿದೆ) ಶಿಲ್ಪಾಕಲಾ ಕೇಂದ್ರ, ಚಿತ್ರಕಲಾ ಶಾಲೆ, ಶಿಲ್ಪಕಲಾ ಶಾಲೆ, ರೋಡಿನ್, ಮಾನೆ, ರೇನಾಯಿಲ್, ಪಿಕಾಸೋ, ಡೇಗಾ ಅವರ ಕೆತ್ತನೆಗಳು, ಆಧುನಿಕ ವರ್ಣಚಿತ್ರಗಳು ಮುಂತಾದ ಕಲಾಕೃತಿಗಳಲ್ಲಿ ಮಹಿಳೆಯರ ಕ್ರಿಯಾಶೀಲತೆ ಎದ್ದುಕಾಣುತ್ತದೆ ಎಂದಿದ್ದಾರೆ.

ಉಷಾ.ಪಿ.ರೈ. ಅವರು ಲಕ್ಷದ್ವೀಪಗಳಾದ ಉಕ್ಷೀವ್ಸ್, ಮಿನಿಕೋ, ಅಮಿನಿಡಿವ್ಸ್, ಚೆಟ್ಲಟ್ಸ್, ಬಿಟ್ರ ಮೊದಲಾದ ದ್ವೀಪ ಸಮೂಹಗಳಲ್ಲಿ ಭೇಟಿಕೊಟ್ಟಿದ್ದಾರೆ. ಅಲ್ಲಿನ ಮೂಲ ನಿವಾಸಿಗಳಿಂದ ಜನಜೀವನ ಮತ್ತು ಸಂಸ್ಕೃತಿಯನ್ನು ತಿಳಿದುಕೊಂಡರು. ವಾಣಿಜ್ಯ ಬೆಳೆಯಾದ ತೆಂಗು ಅತೀ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಕವರಟ್ಟಿ ಎಂಬ ದ್ವೀಪ ಸಮೂಹದಲ್ಲಿನ ಒಂದು ಜನಪದ ಸಂಸ್ಕೃತಿಯ ನೃತ್ಯದಲ್ಲಿ ಹೆಂಗಸರು ಭಾಗವಹಿಸುತ್ತಾರಾದರೂ, ಗಂಡಸರ ಪಾತ್ರವೇ ಮುಖ್ಯವಾಗಿದೆ. ಇಲ್ಲಿನ ಮಹಿಳೆಯರು ಮುಗ್ಧರು. ಯಾವುದೇ ಕೆಲಸಕ್ಕೆಂದು ಹೊರ ಜಗತ್ತಿಗೆಂದು ಹೋಗದೆ ಮನೆಯಲ್ಲಿಯೇ ಇದ್ದು ತಮ್ಮ ಮಕ್ಕಳ ಲಾಲನೆ, ಪಾಲನೆಯಲ್ಲಿ ತೊಡಗಿಕೊಂಡಿರುತ್ತಾರೆ. ಮೈತುಂಬಾ ಒಡವೆ ಹೇರಿಕೊಂಡಿರುವ ಇವರು ತಮ್ಮ ಮಕ್ಕಳು, ಬಟ್ಟೆಗಳಿಲ್ಲದೇ ಬರಿ ಮೈಯಲ್ಲಿ ನಿಂತಿರುವುದನ್ನು ಲೇಖಕಿ ಗಮನಿಸುತ್ತಾರೆ. ಇಲ್ಲಿನ ಜನ ಸಮೂಹಕ್ಕೆ ನಾಗರಿಕತೆಯ

ಸೋಂಕು ಸೊಕದೇ ಇಂದಿಗೂ ಸಹ ಅಲ್ಲಿನ ಸಂಸ್ಕೃತಿಯನ್ನೆ ಉಳಿಸಿಕೊಂಡಿದ್ದಾರೆ. ಇವರು ಮುಗ್ಧ ಜನರಾಗಿದ್ದು, ಅಮಾಯಕರಂತೆ ಕಾಣುತ್ತಾರೆ. ಏಕೆಂದರೆ ಲಕ್ಷದ್ವೀಪದ ಸುತ್ತಮುತ್ತಲಿನ ಜನರು ಕಳ್ಳತನ, ಮೋಸ, ವಂಚನೆ, ದೊಂಬಿ, ಗಲಾಟೆ, ಕೊಲೆ, ಸುಲಿಗೆಗಳ ಬಗ್ಗೆ ತಿಳಿಯದ ಮುಗ್ಧ ಜನರಾಗಿದ್ದಾರೆ. ಜನಪದ ನೃತ್ಯ ಇವರ ಸಂಸ್ಕೃತಿಯ ಜೀವಾಳವಾದ ಬಗ್ಗೆ ಲೇಖಕಿ ತಮ್ಮ 'ಲಕ್ಷದ್ವೀಪಕ್ಕೆ ಲಗ್ಗೆ ಇಟ್ಟಾಗ' ಕೃತಿಯಲ್ಲಿ ತಿಳಿಸುತ್ತಾರೆ.

ಹಂಗೇರಿ ಮಹಿಳೆಯರ ಸಾಂಸ್ಕೃತಿಕ-ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಅಲ್ಲಿನ ಸರ್ಕಾರವು ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ ಎಂದು ಹೇಮಲತಾ ಎಚ್.ಎಂ. ಅವರು 'ಹಂಗೇರಿಯಲ್ಲಿ ಹೇಮ' ಕೃತಿಯಲ್ಲಿ ವ್ಯಕ್ತಪಡಿಸುತ್ತಾರೆ. ಭಾರತದ ಶಿಕ್ಷಣ ಪದ್ಧತಿಯಂತೆ, ಹದಿನೆಂಟು ವರ್ಷದವರೆಗೆ ಹುಡುಗ-ಹುಡಿಗಿಯರಿಗೆ ಉಚಿತ ಶಿಕ್ಷಣವಿದೆ. ಶ್ರೀಮಂತರ ಮಕ್ಕಳು ಖಾಸಗಿ ಶಾಲೆಗಳಲ್ಲೂ, ಬಡ, ಮಧ್ಯಮ ಕುಟುಂಬದವರ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಸಾಹಿತ್ಯ ಮತ್ತು ಸಿನಿಮಾ ರಂಗಗಳಲ್ಲಿ ಮಹಿಳೆಯರು ಸಕ್ರಿಯವಾಗಿಲ್ಲ. ಹಂಗೇರಿಯ ಶಾಲಾ ಕಾಲೇಜುಗಳ ಪಠ್ಯಕ್ರಮವು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಲಿಂಗ ತಾರತಮ್ಯವನ್ನು ಉಂಟುಮಾಡುತ್ತಿವೆ. ಮಹಿಳೆಯರು ಬರೆದ ಕತೆ, ಕವನ, ಪಾಠಗಳು ಪಠ್ಯಗಳಲ್ಲಿ ಕಂಡುಬರುವುದಿಲ್ಲ. ಅಲ್ಲದೇ ಉನ್ನತ ಶಿಕ್ಷಣದಲ್ಲೂ ಮಹಿಳೆಯರಿಗೆ ಅವಕಾಶಗಳು ನೀಡಿಲ್ಲವೆಂದು ಲೇಖಕಿ ಪ್ರಸ್ತಾಪಿಸುತ್ತಾರೆ.

ಅರ್ಜೆಂಟೈನ್, ಪೆರು, ಚಿಲಿ, ಬ್ರೆಜಿಲ್ ದೇಶಗಳ ಸಾಂಸ್ಕೃತಿಕ ರಂಗಗಳನ್ನು ಪರಿಚಯಿಸಿದ ಕೃತಿಯಾಗಿ 'ಚೆಗೆವಾರನ ನೆಲದಲ್ಲಿ' ಮುಖ್ಯವಾಗುತ್ತದೆ. ಈ ದೇಶಗಳಲ್ಲಿ ನೃತ್ಯ ಕಲೆಗಳು ಪ್ರಮುಖವಾಗಿವೆ. ಹೆಣ್ಣು ಗಂಡುಗಳ ಜೊತೆ ಎದುರುಬದುರಾಗಿ ಆಡುವಂತಹ ಕಲಾಪ್ರಕಾರಗಳಿವೆ. ವಿಯೆನ್ನೀಸ್ ವಾಲ್ಟ್, ಪೊಲ್ಕಾ, ಟ್ಯಾಂಗೊಗಳೆಂಬ ನೃತ್ಯ ಪ್ರಕಾರಗಳಿವೆ. ಅಲ್ಲಿನ ಯುವಕರಿಗೆ ಟ್ಯಾಂಗೊ ನೃತ್ಯಶೈಲಿ ಅಚ್ಚುಮೆಚ್ಚಿನದಾಗಿದೆ. ಅಲ್ಲಿನ ಎಳಸು ಚಲುವೆಯರು ಚಪ್ಪಾಳೆ ತಟ್ಟುತ್ತಾ ಶೃತಿಬದ್ಧವಾಗಿ, ಲಯಬದ್ಧವಾಗಿ, ಮಧುರವಾಗಿ ಹಾಡುತ್ತಾ ಅದಕ್ಕೆ ತಕ್ಕಂತೆ ನೃತ್ಯದ ಶೈಲಿಯ ಬಗ್ಗೆ ವಿಶೇಷವಾಗಿ ಬರೆಯುತ್ತಾರೆ. ಈ ನೃತ್ಯ ಪ್ರಕಾರಗಳು ವೇಶ್ಯೆಯರ ಗೃಹದಲ್ಲಿ ಹುಟ್ಟಿದ ಪ್ರಕಾರಗಳಾಗಿವೆ ಎಂಬ ಕಥೆಗಳಿವೆ. ಆದರೂ ಒಂದು ದೇಶದ ಸಾಂಸ್ಕೃತಿಕತೆಯನ್ನು ಬಿಂಬಿಸುವ ಕಲೆಯಾಗಿ ಈ ನೃತ್ಯಪ್ರಕಾರಗಳು ಪ್ರಸಿದ್ಧಿಪಡೆದಿವೆ. ಅಮೇರಿಕಾದಲ್ಲಿ ವಾಸವಿರುವ ಕೆಲವು ಭಾರತೀಯ ಮಹಿಳೆಯರಲ್ಲಿ ಕನ್ನಡವನ್ನು ತಮ್ಮ ಮಕ್ಕಳಿಗೆ ಹೆಮ್ಮೆಯಿಂದ ಕಲಿಸಿದರೆ, ಕೆಲವು ಕುಟುಂಬಗಳು ಕನ್ನಡವನ್ನು ಕಲಿಸಲಿಕ್ಕೂ ಆಗದ ಬಿಡಲಿಕ್ಕೂ ಬಾರದ ಸ್ಥಿತಿಯಲ್ಲಿ ಒದ್ದಾಡುತ್ತಾರೆ. ಕನ್ನಡ ಸಂಘಟನೆ ಮಾಡಿ, ಕಥೆ, ಕವನ, ವಿಮರ್ಶೆಗಳನ್ನು ಬರೆಯುವ ಮೂಲಕ ಅಲ್ಲಿನ ಕುಟುಂಬಗಳು ಮಕ್ಕಳಿಗೆ ಕನ್ನಡದ ಬಗೆಗೆ ಆಸಕ್ತಿಯನ್ನು ಹುಟ್ಟಿಸುತ್ತಾರೆ. ಈ ಸಂಘಟನೆಯ ಕಾರ್ಯಕ್ರಮಗಳಲ್ಲಿ ಭಾರತೀಯ ಪರಂಪರೆಯನ್ನು ಪ್ರದರ್ಶಿಸುವ ಹೆಣ್ಣು ಮಕ್ಕಳು ರೇಷ್ಮೆ ಬಟ್ಟೆಗಳನ್ನು ಧರಿಸಿರುತ್ತಾರೆ. ಭರತನಾಟ್ಯ, ಶಾಸ್ತ್ರೀಯ ಸಂಗೀತ ಅಭ್ಯಾಸವನ್ನು ಮಾಡಿಸುತ್ತಾರೆ.

ಮಹಾಭಾರತ ಮತ್ತು ರಾಮಾಯಣದ ಪ್ರಸಂಗದ ದೃಶ್ಯಗಳ ನಾಟಕಗಳನ್ನು ಪ್ರದರ್ಶಿಸುತ್ತಾರೆ. ಈ ಮೂಲಕ ವಿದೇಶದಲ್ಲಿ ತಮ್ಮ ಸಾಂಸ್ಕೃತಿಕತೆಯ ಮೂಲವನ್ನು ಎತ್ತಿಹಿಡಿಯುವ ಕೆಲಸವನ್ನು ಅಲ್ಲಿನ ಭಾರತೀಯರು ಮಾಡುತ್ತಿದ್ದಾರೆ. ಸಂಸ್ಕೃತಿ ಚಿಂತಕರಾದ ಜಿ.ಎನ್.ದೇವಿ ಅವರು ಭಾಷೆಯ ಅಳಿವಿನೊಂದಿಗೆ ಒಂದು ಸಂಸ್ಕೃತಿಯು ನಾಶವಾಗುವುದರ ಕುರಿತು ಹೇಳಿದ ಮಾತುಗಳನ್ನು ಲೇಖಕಿ ಈ ರೀತಿ ಪ್ರಸ್ತಾಪಿಸುತ್ತಾರೆ. "ಭಾಷೆಯ ಮೂಲಕ ನಮ್ಮದೇ ಆದ ಲೋಕವನ್ನು ಕಟ್ಟಿಕೊಳ್ಳಲು ಸಾಧ್ಯವಿದೆ. ಅಲ್ಲಲ್ಲಿನ ಹವಾಮಾನ, ವಿದ್ಯಾಮಾನ, ಬದುಕಿಗೆ ತಕ್ಕ ಹಾಗೆ ಅಲ್ಲಿಯ ಭಾಷೆಯೂ ನುಡಿಗಟ್ಟೂ ಅದರ ಪದಕೋಶವೂ ರೂಪಗೊಂಡಿರುತ್ತದೆ. ಸಂಸ್ಕೃತಿಯ ಬಹುಮುಖ್ಯ ಭಾಗ ಭಾಷೆಯೇ ಆಗಿರುತ್ತದೆ. ಭಾಷೆ ನಾಶವಾದರೆ ಆ ಭಾಷೆಯಲ್ಲಿದ್ದ ತಲೆತಲಾಂತರಗಳ ಜ್ಞಾನವು ನಾಶವಾಗುತ್ತದೆ. ಭಾಷೆ ಮನುಷ್ಯನಂತೆ ಹುಟ್ಟುತ್ತದೆ ಮತ್ತು ಸಾಯುತ್ತದೆ"(ಅನುಪಮಾ ಎಚ್.ಎಸ್., ೨೦೧೭, ಪುಟ-೪೬) ಜಿ.ಎನ್.ದೇವಿಯವರ ಹೇಳಿಕೆಯಂತೆ ಅಂಡಮಾನಿನ ಬೋವಾ ಜನಾಂಗದ ಭಾಷೆ ಬಲ್ಲ ಆ ಮಹಿಳೆಯು ಸತ್ತ ನಂತರ, ಆ ಜನಾಂಗದ ಭಾಷೆಯ ಜೊತೆಗೆ ಸಾಂಸ್ಕೃತಿಕತೆಯು ಕಣ್ಮರೆಯಾಯಿತು. ಆ ವೃದ್ಧೆ ಬೋವಾ ಭಾಷೆ ಬಲ್ಲ ಏಕೈಕ ಮಹಿಳೆಯಾಗಿದ್ದಳು. ತನ್ನ ಬದುಕಿನ ಕೊನೆಯ ದಿನಗಳಲ್ಲಿ ಮಾತನಾಡಲು ಯಾರೂ ಸಿಗದೆ ಹಕ್ಕಿಗಳೊಡನೆ ಬೊವಾ ಭಾಷೆಯಲ್ಲಿ ಸಂಭಾಷಿಸುತ್ತಿದ್ದಳಂತೆ. ಅವಳೊಡನೆ ಆ ಭಾಷೆ, ತಲೆತಲಾಂತರದಿಂದ ಹರಿದು ಬಂದ ಆ ಜನಾಂಗದ ಪರಂಪರೆ, ಜ್ಞಾನ ಎಲ್ಲವೂ ಇಲ್ಲವಾಯಿತು. ಒಂದು ಭಾಷೆ ಮತ್ತು ಸಮುದಾಯದ ಸಾಂಸ್ಕೃತಿಕವಾದ ಆಚರಣೆಗಳು, ಜೀವನಪದ್ಧತಿಗಳಂತಹ ಸಂಗತಿಗಳನ್ನು ನಿದರ್ಶನಗೊಳಿಸುವ ಮಹಿಳೆಯಾಗಿ ಆಕೆ ಮುಖ್ಯವಾಗುತ್ತಾಳೆ.

ಯುರೋಪಿನಲ್ಲಿ ಪಿರಾಮಿಡ್‌ಗಳೆಂದರೆ ಅವು ಪುರುಷರಿಗೆ ಮಾತ್ರ ಸೀಮಿತವಾದವು. ೨೦೦೬ ರಲ್ಲಿ 'ಲೇಡಿ ಆಫ್ ಕ್ಯಾವೊ' ಎಂಬ ಮಹಿಳೆಯರ ಅತೀ ಸುರಕ್ಷಿತ ಪಿರಾಮಿಡ್ ದೊರೆತವು. ಈ ಮಹಿಳೆಯರು ಹೆರಿಗೆ ಅಥವಾ ತತ್ಸಂಬಂಧಿ ಕಾಯಿಲೆಯಿಂದ ಮರಣಹೊಂದಿದ್ದಾಗಿಯೂ, ಇಪ್ಪತ್ತು ವಯಸ್ಸಿನ ಕಲೀನ ಮನೆತನದ ರಾಣಿಯರದೇ ಆಗಿದ್ದವೆಂದು ಸಂಶೋಧನೆಯ ಮೂಲಕ ತಿಳಿದುಬಂದವು. ಇವುಗಳು ಸಿಕ್ಕನಂತರ ಪುರುಷ ಪಿರಾಮಿಡ್ ಎಂಬ ನಂಬಿಕೆ ಹೊರಟು ಹೋದವು. ಮಹಿಳಾ ಪಿರಾಮಿಡ್‌ಗಳು ಒಂದೇ ಕುಲದ, ಕಾಲಮಾನದ ಗೋರಿಗಳಾಗಿವೆ. ಈ ಪಿರಾಮಿಡ್‌ಗಳ ಚರಿತ್ರೆಯಲ್ಲಿ ಪ್ರಾಚೀನ ಮಹಿಳೆಯರು ಅನುಭವಿಸಿದ ನೋವುಗಳು ಅಡಗಿಕೊಂಡಿವೆ. ಮಹಿಳಾ ಪಿರಾಮಿಡ್‌ಗಳು ದೊರೆತ ನಂತರ ಯುರೋಪ್ ದೇಶವು ಸಾಂಸ್ಕೃತಿಕವಾಗಿ ಪ್ರಸಿದ್ಧಿಗೆ ಬಂದಿತು, ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೆಳೆಯಿತು. ಲೀಮಾದ 'ಲಾರ್ಕೋ' ಮ್ಯೂಸಿಯಂನಲ್ಲಿ ಪಿಂಗಾಣಿ ವಸ್ತುವಿನ ಮೇಲೆ ಮಹಿಳೆಯರ ಚಿತ್ರಗಳೂ ಇವೆ. ಅಲ್ಲದೇ ಯುದ್ಧ, ಬೇಟೆ, ನೇಯುವಿಕೆ, ಲೈಂಗಿಕ ಕ್ರಿಯೆ ಮತ್ತು ಹೆರಿಗೆ ಮಾಡಿಸುತ್ತಿರುವ ಚಿತ್ರಗಳು ಕಂಡುಬರುತ್ತವೆ. ಪಿಂಗಾಣಿಯ ಮೇಲೆ ಮೂಡಿದ

ಲೈಂಗಿಕ ಚಿತ್ರಣಗಳು ವಿಶೇಷವಾಗಿ ಗಮನ ಸೆಳೆಯುತ್ತಿದ್ದು ಪೆರು ದೇಶದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹಿಳೆಯರು ಬಳಕೆಗೊಳ್ಳುತ್ತಿರುವ ವಿಧಾನವನ್ನು ಹೇಳುತ್ತವೆ.

ಮೆಕಾಂಗಿ ದೇಶದಲ್ಲಿನ ಸಾಂಸ್ಕೃತಿಕ ಶೈಕ್ಷಣಿಕ ಕ್ಷೇತ್ರದಲ್ಲಿ ಮಹಿಳೆಯರ ಚಟುವಟಿಕೆಗಳ ಕುರಿತಾಗಿ ಅನೇಕ ಕುತೂಹಲಕಾರಿ ಸಂಗತಿಗಳನ್ನು ಸುಧಾಮೂರ್ತಿ ಅವರು 'ಕಾವೇರಿಯಿಂದ ಮೆಕಾಂಗಿಗೆ' ಎಂಬ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾರೆ. ಇನ್ಫೋಸಿಸ್‌ನ ಕತೆ ಕೇಳಿದ ಥೈಲ್ಯಾಂಡಿನ ತಕ್ಸಿನ್ ಎಂಬುವರು ಕಂಪ್ಯೂಟರ್ ಜ್ಞಾನದಿಂದ ಥೈಲ್ಯಾಂಡನ್ನು ಪ್ರಗತಿಪಥದತ್ತಕೊಂಡೊಯ್ಯಲು ಯೋಚಿಸಿದರು. ಲೇಖಕಿಯನ್ನು ನೋಡಿದ ತಕ್ಷಣಕ್ಕೆ ಕೈ ಮುಗಿದು ನಮಸ್ಕರಿಸಿ. ಇನ್ಫೋಸಿಸ್ ಸಂಸ್ಥೆಗಳನ್ನು ಕೇವಲ ಹತ್ತು ಸಾವಿರದಿಂದ ಕಟ್ಟಿದ ಕತೆ ಕೇಳಿ, ಲಾಭದ ಭಾಗವನ್ನು ದಾನ ಧರ್ಮಕ್ಕೆ ವಿನಿಯೋಗಿಸುತ್ತಿದ್ದು ಕೇಳಿ ಆಶ್ಚರ್ಯಪಟ್ಟರು. ಶೈಕ್ಷಣಿಕ ಕ್ಷೇತ್ರದಲ್ಲಿ ಮಹಿಳೆಯ ಸಹಭಾಗಿತ್ವದಿಂದ ಪ್ರಪಂಚದಾದ್ಯಂತ ಸ್ಥಾಪನೆಯಾದ ಇನ್ಫೊಸಿಸನ್ನು ಕಟ್ಟಿದ ಕತೆಯು ಜಗತ್ತಿನ ಬಹುತೇಕ ಮಹಿಳೆಯರಿಗೆ ಪ್ರೇರಣೆಯಾಗಿದೆ. ಮೆಕಾಂಗಿಯು ಸಾಂಸ್ಕೃತಿಕವಾಗಿಯೂ ಹೆಸರುವಾಸಿಯಾಗಿದ್ದು, ಭಾರತದ ಜನಪದ, ಪೌರಾಣಿಕ ಕಥೆಗಳು ಕಾಂಬೋಡಿಯಾದಲ್ಲಿವೆ. 'ಫಿಮೇನಿಕಾ' ಎಂಬ ಅರಮನೆಯ ಅರಸ ಏಳನೇ ಜಯವರ್ಮ ಅವನಿಗೆ ನೂರು ರಾಣಿಯರು. ಒಂದು ಸರ್ಪ ರಾತ್ರಿ ಸ್ತ್ರೀರೂಪ ಧರಿಸಿ. ರಾಜನೊಡನಿದ್ದು, ಮರುದಿನ ಸರ್ಪ ಆಗುತ್ತಿತ್ತು. ರಾಜ ರಾತ್ರಿ ಅವಳೊಡನೆ ಇರದಿದ್ದರೆ ಸರ್ಪರೂಪ ಧರಿಸಿ ಹೆದರಿಸುತ್ತಿದ್ದ ದಂತಕಥೆ ಇದೆ. ಈ ಕತೆಯು ಭಾರತದಲ್ಲಿ ಹರಡಿರುವ ಜಾನಪದ ಕತೆಗಳಂತೆ ಕಂಡುಬರುತ್ತದೆ. ಇಂತಹದ್ದೇ ಮತ್ತೊಂದು ಕತೆಯಿದೆ. ನಾಮ್ ಎಂದರೆ 'ಎತ್ತರದ ದಿಬ್ಬ', ಪೆನ್ ಎನ್ನುವ ಹೆಂಗಸಿಗೆ ಮೆಕಾಂಗ್ ನದಿಯಲ್ಲಿ ನಾಲ್ಕು ಮುಖವುಳ್ಳ ಬುದ್ಧನ ವಿಗ್ರಹ ದೊರೆಯುತ್ತದೆ. ಅದನ್ನು ಅವಳು ದಿಬ್ಬದ ಮೇಲೆ ಸ್ಥಾಪಿಸುತ್ತಾಳೆ. ಈ ಸಮತಟ್ಟಾದ ಪ್ರದೇಶಕ್ಕೆ 'ನಾಮ್ ಪೆನ್' ಎಂಬ ಹೆಸರು ಬಂದಿತೆಂದು, ಮಹಿಳೆಯಿಂದಲೇ ವಿಶಿಷ್ಟ ಸ್ಥಳವಾದ ಬಗ್ಗೆ ಹೆಮ್ಮೆಯಿಂದ ಹೇಳುತ್ತಾರೆ. ಕಾಂಬೋಡಿಯಾದಲ್ಲಿ ಭಾರತೀಯ ಪುರಾಣದ ಕಾವ್ಯಗಳ ಪರಿಚಯವಿದ್ದು ಅಲ್ಪಸ್ವಲ್ಪ ಬದಲಾವಣೆಗೊಂಡು ಈಗಲೂ ಪ್ರಚಲಿತದಲ್ಲಿವೆ. ಭಾರತದ ರಾಮಾಯಣಕ್ಕಿಂತ ಸ್ವಲ್ಪ ಭಿನ್ನವಾಗಿದ್ದು, ಇಲ್ಲಿನ ಸೀತೆ ರಾವಣನ ಮಗಳಾಗಿದ್ದಳು. ಲಂಕೆಯನ್ನು ನಾಶ ಮಾಡಲು ಹುಟ್ಟಿದವಳೆಂದು ಭವಿಷ್ಯ ನುಡಿದಿದ್ದರಿಂದ ಮಗಳನ್ನು ಕೊಲ್ಲಲು ಹೇಳಿದನಂತೆ. ಮಂಡೋದರಿ ತಾಯಿ ವಾತ್ಸಲ್ಯ ತೋರಿ ಪೆಟ್ಟಿಗೆಯಲ್ಲಿ ಹಾಕಿದಳು. ಮುಂದೆ ಜನಕನಿಗೆ ಸಿಕ್ಕು ರಾಮಾಯಣಕ್ಕೆ ಕಾರಣವಾಯಿತು. ಇಷ್ಟಲ್ಲದೇ ಲವಕುಶರು ಪೆಟ್ಟಿಗೆಯಲ್ಲಿ ಸಿಗುವ ಕತೆಗಳಿದ್ದು, ಈ ಕತೆ ಸೀತೆಯ ಬಾಲ್ಯವನ್ನು ನೆನಪಿಸುತ್ತದೆ. ರಾಮಾಯಣ ಮತ್ತು ಉತ್ತರ ರಾಮಾಯಣದ ಕತೆಗಳು ಇಲ್ಲಿ ಚಾಲ್ತಿಯಲ್ಲಿವೆ. ಇಲ್ಲಿನ ಸಾಂಸ್ಕೃತಿಕ ಲೋಕದ ಕಲೆಗೆ ಒತ್ತು ನೀಡುವ ಮಹಿಳೆಯರು ಕಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ನೃತ್ಯಗಾರ್ತಿಯರ ವೇಷದಲ್ಲಿ ಜರಿಯ ಸೀರೆಯುಟ್ಟು ಸರಳವಾಗಿ ಅಲಂಕಾರಗೊಂಡು ತಲೆಗೆ ಕಿರೀಟ, ತೋಳುಬಂದಿ,

ಕೊರಳಿಗೆ ಹಾರ, ಮುಡಿಯಲ್ಲಿ ಹೂ ಮುಡಿದುಕೊಂಡು ನೃತ್ಯ ಪ್ರದರ್ಶನ ಮಾಡುತ್ತಾರೆ. ಕಾಂಬೋಡಿಯಾ ದೇಶದ ಮತ್ತು ಭಾರತದ ಈ ಕತೆಗಳು ಗಮನಿಸಿದಾಗ ಎರಡು ದೇಶದ ಸಾಂಸ್ಕೃತಿಕ ವಲಯಗಳು ಒಂದೇ ತೆರನಾಗಿವೆ ಎಂದು ತಿಳಿಯಬಹುದಾಗಿದೆ. ಭಾರತದ ಪ್ರಧಾನಿ ಇಂದಿರಾ ಗಾಂಧಿಯವರು ವಿಯೆಟ್ನಾಂ ದೇಶಕ್ಕೆ ಭೇಟಿಕೊಟ್ಟ ಸ್ಮರಣೆಗಾಗಿ ಅಲ್ಲಿನ ಸರ್ಕಾರವು ಉದ್ಯಾನವನವೊಂದನ್ನು ನಿರ್ಮಿಸಿದ್ದಾರೆ. ಈ ದೇಶದ ಭಾರತೀಯರ ಸಾಂಸ್ಕೃತಿಕವಾದ ಕುರುಹನ್ನು ನಿರ್ಮಿಸಿ ಹೆಮ್ಮೆ ಪಡುವಂತೆ ಇಲ್ಲಿನ ಸರ್ಕಾರ ಮಾಡಿದ್ದ ಬಗ್ಗೆ ಲೇಖಕಿ ದಾಖಲಿಸಿದ್ದಾರೆ.

ಉಮಾರಾವ್ ಅವರ 'ಇನ್ನು ಎಲ್ಲಿಗೋಟ' ಕೃತಿಯಲ್ಲಿ ಥೈಲ್ಯಾಂಡ್ ವೇಶ್ಯಾವಾಟಿಕೆಯಿಂದಾಗಿ ಕೆಟ್ಟ ಹೆಸರು ಪಡೆದಿದ್ದ ಬಗ್ಗೆ ಪ್ರಸ್ತಾಪಿಸುತ್ತಾರೆ. ಇಂತಹ ಜಾಲದಿಂದ ಹೊರಬರುತ್ತಿರುವ ಹೆಣ್ಣುಮಕ್ಕಳು ಮತ್ತು ಸ್ಥಳೀಯ ಮಹಿಳೆಯರು ಶ್ರಮವಹಿಸಿ ದುಡಿಯುವ ಮೇಲೆ ನಂಬಿಕೆಯುಳ್ಳವರಂತೆ ದುಡಿಮೆಯಲ್ಲಿ ತೊಡಗಿಕೊಂಡಿದ್ದಾರೆ. ಮಹಿಳೆಯರಂತೂ ಸಾಂಸ್ಕೃತಿಕ ಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಹುಟ್ಟಿನಿಂದ ಗಂಡಾಗಿದ್ದು ನಂತರ ದೈಹಿಕವಾಗಿ ಬದಲಾಗಿ ಹೆಣ್ಣಾದವರು ಇದ್ದಾರೆ. ಇವರನ್ನು ಕುರಿತು 'ಇನ್ನು ಎಲ್ಲಿಗೋಟ' ಎಂಬ ಕೃತಿಯಲ್ಲಿ "ಗಂಡು ದೇಹದಲ್ಲಿ ತಮ್ಮ ಸ್ತ್ರೀತ್ವ ಸಿಕ್ಕಿಬಿದ್ದಿದೆ ಎಂಬ ಅರಿವು ಮೂಡಿದಾಗ ಅದನ್ನು ಅದುಮಿಟ್ಟು ಉಸಿರುಗಟ್ಟಿಸುವ ಗೂಡಿನಲ್ಲಿ ಇವರು ಕೂತಿರಲಿಲ್ಲ. ಸಮಾಜದ ನೂರಾರು ವರ್ಷಗಳ ಕಟ್ಟುಪಾಡುಗಳಿಂದ ಹೊರಬಂದು ಮುಕ್ತರಾಗಿ ಬದುಕಿದ್ದರು. ಪ್ರಕೃತಿ ತಮಗೆ ನೀಡಿದ್ದ 'ಸಹಜ ವೈಶಿಷ್ಟ್ಯತೆ'ಯನ್ನು ಸಹಜವಾಗಿ ಅಭಿವ್ಯಕ್ತಿಸುತ್ತಿದ್ದರು. ಲಿಂಗಾಧಾರಿತ ಪಾತ್ರಗಳ ಬಗ್ಗೆ ಇಷ್ಟೊಂದು ಜಾಗೃತಿ ಮೂಡಿರುವ ಇಂದಿನ ದಿನಗಳಲ್ಲಿ ಈ ದಿಟ್ಟ 'ಹೆಣ್ಣು ಹುಡುಗರು' ಇಟ್ಟಿರುವ ಹೆಜ್ಜೆ ತುಂಬಾ ಮುಖ್ಯವಾದದ್ದು ಮೆಚ್ಚುವಂತಹದ್ದಾಗಿದೆ."(ಉಮಾರಾವ್, ೨೦೧೫, ಪುಟ-೧೦೬) ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇವರ ನೃತ್ಯದ ಪ್ರಕಾರಕ್ಕೆ ನೂರಾರು ವರ್ಷಗಳ ಪರಂಪರೆಯಿದೆ. ಗಂಡು ಹೆಣ್ಣಾದಾಗ ಸಮಾಜದ ಅವಮಾನಗಳನ್ನು ಮೀರಿ ಕಲಾತಂಡಗಳನ್ನು ಸೇರಿ ನೃತ್ಯ ಪ್ರದರ್ಶನ ಮಾಡಿ, ಥೈಲ್ಯಾಂಡಿನ ನೃತ್ಯದ ಸಾಂಸ್ಕೃತಿಕತೆಯನ್ನು ಇಮ್ಮಡಿಗೊಳಿಸಿದ್ದಾರೆಂದು ಲೇಖಕಿ ಹೇಳುತ್ತಾರೆ.

ತ್ರಿಪುರದ ವಿಶಿಷ್ಟವಾದ 'ಖಾರ್ಜಿ ಪೂಜಾ' ಹಬ್ಬವು ಪುರಾತನ ಕಾಲದಿಂದಲೂ ಜಾರಿಯಲ್ಲಿದೆ. ತ್ರಿಪುರದ ಕುಲದೇವತೆಗಳನ್ನು ಕಾಡುಕೋಣಗಳು ಅಟ್ಟಿಸಿಕೊಂಡು ಬಂದಾಗ ತ್ರಿಪುರದ ದೊರೆಯಾಗಿದ್ದ ತ್ರಿಲೋಚನ ರಾಜಮಾತೆಯು ಅವುಗಳನ್ನು ಅಡ್ಡಗಟ್ಟಿ ಕೊಂದಳಂತೆ, ೭೧ಳ ಕುಲದೇವತೆಗಳ ಮೂರ್ತಿಯನ್ನು ಹೌರ ನದಿಯಲ್ಲಿ ತಂದು ಇಂದಿಗೂ ವಿಜೃಂಭಣೆಯಿಂದ ಪೂಜಿಸುತ್ತಾರೆ. ಈ 'ಖಾರ್ಜಿ ಪೂಜಾ'ವು ತ್ರಿಪುರದಲ್ಲಿ ರಾಷ್ಟ್ರೀಯ ಹಬ್ಬದ ಸ್ವರೂಪವನ್ನು ಪಡೆದಿದೆ. ಈ ಹಬ್ಬದ ಹಿನ್ನೆಲೆಯೂ ಸಹ ಮಹಿಳೆಯರಿಂದಲೇ ಆರಂಭಗೊಳ್ಳುತ್ತದೆ. ಕವಿರಾಜ ವೀರಚಂದ್ರರ ಮಗಳು 'ಅನಂಗ ಮೋಹಿನ ದೇವಿ'ಯನ್ನು ಹೊಸ ತಲೆಮಾರಿನ ಆಧುನಿಕ

ಕಾವ್ಯದ ಜನಕಳೆಂದು ಕರೆಯಲಾಗಿದೆ. ರಾಜಮನೆತನದ ಯುವರಾಣಿ ತನ್ನ ಮೊದಲ ಕವನ ಸಂಕಲನವಾದ 'ಕನ್ನಿಕಾ', ಮತ್ತು 'ಶೋಕಗಾಥಾ', 'ಪತಿವ್ರತಾ' ಎಂಬ ನಾಟಕಗಳನ್ನು ರಚಿಸಿ ಪ್ರಸಿದ್ಧಿ ಪಡೆದಿದ್ದಳು. ಲೇಖಕಿಗೆ ಬಹುವಾಗಿ ಕಾಡಿದ್ದು ಅಗರ್‌ತಲಾದಲ್ಲಿನ ಪ್ರಸಿದ್ಧ ಬಂಗಾಲಿ ಕತೆಗಾರರೊಬ್ಬರ ಮಗಳು ಅಂತರ್‌ಲೀನಾಳು ಓದುತ್ತಿದ್ದು ಪಿ.ಯು.ಸಿ. ಆದರೂ, ಇಂಗ್ಲೀಷ್ ಸಾಹಿತ್ಯ ಪತ್ರಿಕೆಗೆ ಸಂಪಾದಕಿಯಾಗಿದ್ದಳು. ಸಾಹಿತ್ಯದಲ್ಲಿ ಅಪಾರ ಆಸಕ್ತಿಹೊಂದಿದ್ದಳು. ಆಕೆಯ ಹುಟ್ಟುಹಬ್ಬದಲ್ಲಿ ಬರುವ ನಗದು ರೂಪದ ಹಣವನ್ನು ಮತ್ತು ಕಾಣಿಕೆಯನ್ನು ಪತ್ರಿಕೆ ಹೊರತರಲು ಬಳಸಿಕೊಳ್ಳುತ್ತಿದ್ದಳು. ಸಂಗೀತ, ನೃತ್ಯ, ಸಾಹಿತ್ಯದಲ್ಲಿ ಅಪಾರ ಆಸಕ್ತಿ ಇರುವುದನ್ನು ಕಂಡು ಎಚ್.ಎನ್.ಆರತಿ ಅವರು ಅಂತರ್‌ಲೀನಾ ಬಗ್ಗೆ ಬರೆಯದೆ ನನ್ನ ಜೀವವು ನಿಲ್ಲುವುದಿಲ್ಲವೆಂದು ತಮ್ಮ 'ಬೆಟ್ಟದಡಿಯ ಬಿದಿರ ಹೂ' ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಸಾಹಿತ್ಯ, ಕಲೆ, ಸಂಸ್ಕೃತಿಯಲ್ಲಿ ಸಕ್ರಿಯವಾಗಿ ದುಡಿಯುವ ಇಲ್ಲಿನ ಅನೇಕ ಮಹಿಳೆಯರಿಗೆ ಅಂತರ್‌ಲೀನಾಳು ಮಾದರಿಯಾಗಿ ಬದುಕುತ್ತಿರುವುದಕ್ಕೆ ಲೇಖಕಿ ಸಂತಸ ವ್ಯಕ್ತಪಡಿಸುತ್ತಾರೆ.

ವಿದೇಶಿಗರು ಕಲೆಗೆ ಬಹಳ ಮಹತ್ವ ಕೊಡುತ್ತಾರೆ. ಆ ಬಗೆಗೆ ಪ್ರೀತಿ ಹೊಂದಿದ್ದು ಕಲೆ, ಸಾಹಿತ್ಯ, ಸಾಮಾಜಿಕ ಕ್ಷೇತ್ರಗಳಲ್ಲಿ ಹೆಸರು ಮಾಡಲು ಆಸಕ್ತಿ ವಹಿಸುತ್ತಾರೆಂದು ಪ್ರೇಮಾಭಟ್ ಅವರು ತಮ್ಮ 'ಪಶ್ಚಿಮದತ್ತ ಪಯಣ' ಕೃತಿಯಲ್ಲಿ ದಾಖಲಿಸಿದ್ದಾರೆ. ಸಾಮಾಜಿಕವಾಗಿ ಗಣ್ಯರ ಮತ್ತು ಕೀರ್ತಿಶೇಷರ ಸ್ಮಾರಕಗಳನ್ನು ಸ್ಥಾಪಿಸುವ ಉದ್ದೇಶದಿಂದ ಮೇಣದ ಬತ್ತಿಯಿಂದ ಪುತ್ಥಳಿಗಳನ್ನು ನಿರ್ಮಿಸುವ 'ಮೇಡಮ್ ಟೂಸ್ಯಾಡ್' ಸಂಸ್ಥೆ ಇಂದು ಜಗತ್ತಿಗೆ ಹೆಸರುವಾಸಿ ಆಗಿದೆ. 'ಮ್ಯಾಡಮ್ ಟುಸ್ಯಾಡ್' ಮೂಲತಃ ಫ್ರೆಂಚ್ ಮಹಿಳೆಯಾಗಿದ್ದು, ತಾನು ಕುಟುಂಬಸ್ಥರೊಂದಿಗೆ ತಯಾರಿಸಿದ ಗೊಂಬೆಗಳ ಪ್ರಚಾರಕ್ಕಾಗಿ ದೇಶಗಳಾಚೆ ಸುತ್ತಿದ್ದಳು. ಇಂಗ್ಲೆಂಡಿನಲ್ಲಿ ಹೆಚ್ಚು ಹೆಸರುವಾಸಿಯಾಗಿ ಇದೀಗ ಅನೇಕ ದೇಶಗಳ ಖ್ಯಾತನಾಮರ ಮೇಣದ ಪ್ರತಿಮೆಗಳನ್ನು ಸುಂದರ ಗೊಂಬೆಗಳಾಗಿಸುವ ಕಲೆ ವಿಶ್ವಪ್ರಸಿದ್ಧಿಯನ್ನು ಪಡೆದಿದೆ. ಮ್ಯಾಡಮ್ ಟುಸ್ಯಾಡ್‌ಳ ಮೇಣದ ಈ ಕಲೆಯು ಇಂಗ್ಲೆಂಡಿನ ಸಾಂಸ್ಕೃತಿಕ ಲೋಕದಲ್ಲಿ ಒಂದಾಗಿ ಗಮನಸೆಳೆದ ಬಗ್ಗೆ ಅನುಪಮಾ ನಿರಂಜನರು ತಮ್ಮ 'ಅಂಗೈಯಲ್ಲಿ ಯುರೋ ಅಮೇರಿಕಾ' ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಕರ್ಮವೀರ ಪತ್ರಿಕೆಯಲ್ಲಿ ಪ್ರಕಟವಾದ 'ಕೆಲವು ದಿನಗಳ ಪ್ರವಾಸ ಕಥನಗಳು' ಎಂಬ ಲೇಖನದಲ್ಲಿ ಮಂಗಳೂರಿನ ಕದ್ರಿ ಬಳಿ ಜೋಗಿನಿಯ ಪ್ರತಿಮೆ ಕಂಡಿದ್ದ ಲೇಖಕಿ ಒರಿಸ್ಸಾದಲ್ಲಿ ಜೋಗಿನಿಯರ ದಂಡೆ ಇದೆ ಎಂದಿದ್ದಾರೆ. ಯೋಗ ಮಾರ್ಗದ ತಾಂತ್ರಿಕ ಮಾರ್ಗದ, ಚಕ್ರಪೂಜೆಯ ಜ್ಯೋತಿಷ್ಯದ, ತಂತ್ರರೋಗದ, ಶ್ರೀಚಕ್ರ ಜೋಗಿನಿಯರು ಶಾಕ್ತಪಂಥದಲ್ಲಿ ಮಹಾಜೋಗಿನಿಯರಾಗಿದ್ದಾರೆ. ದೇವಾಲಯಗಳಲ್ಲಿ ಭತ್ತದ ಗದ್ದೆಗಳ ನಡುವೆ ಶ್ರಮವಹಿಸಿ ದುಡಿಯುವ ಯೋಗಿನಿಯರಿದ್ದಾರೆ. ಜೋಗಿನಿಯರ ಕುರಿತು ಚಾರಿತ್ರಿಕ ದಾಖಲೆಗಳಿದ್ದು ದೇವಾಲಯಗಳಲ್ಲಿಯೂ ಸ್ತ್ರೀ ವಿಗ್ರಹಗಳಿವೆ. ವಿಶೇಷ ರಕ್ಷಣಾ ದೇವತೆಗಳಾಗಿ ಕಾತ್ಯಾಯಿನಿರಾದ ಸಂಗತಿಗಳನ್ನು ಲೇಖಕಿ ದಾಖಲಿಸಿದ್ದಾರೆ.

ಸಾಂಸ್ಕೃತಿಕವಾಗಿ ರಾಜ್ಯಕ್ಕೆ ಹೆಸರು ತಂದು ಕೊಟ್ಟ ಕೀರ್ತಿಯಲ್ಲಿ ಮಹಿಳೆಯರ ಕ್ರಿಯಾಶೀಲತೆ ತುಂಬಾ ದೊಡ್ಡದಿದೆ ಎಂದು ಲೇಖಕಿ ಸುಮಿತ್ರಾಬಾಯಿ ಅವರು 'ಬ್ರಹ್ಮಪುತ್ರದ ಕಣಿವೆಯಲ್ಲಿ' ಎಂಬ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಅಸ್ಸಾಮೀ ಹೆಣ್ಣುಮಕ್ಕಳು 'ಮೇಖಲಾ' ಎನ್ನುವ ಉದ್ದನೆಯ ಲಂಗವನ್ನು, 'ರಿಹಾ' ಎನ್ನುವ ಒಂದು ರೀತಿಯ ಕುಂಚಕವನ್ನು ಮೇಲೊಂದು 'ಛಾದರ'ವನ್ನು ಧರಿಸುತ್ತಾರೆ. ಬಟ್ಟೆಗಳ ನೇಯ್ಗೆಯಲ್ಲಿ ಹೆಂಗಸರದೇ ಮುಖ್ಯ ಪಾತ್ರವಾಗಿದ್ದು, ರೇಷ್ಮೆ ಹತ್ತಿಗಳೆರಡನ್ನು ತುಂಬಾ ಕಲಾತ್ಮಕ ಕಸೂತಿಗಳೊಂದಿಗೆ ಸುಂದರವಾಗಿ ನೇಯುವವರಾಗಿದ್ದಾರೆ. ಅಸ್ಸಾಂನ ಪ್ರತಿಯೊಬ್ಬ ಹೆಣ್ಣುಮಕ್ಕಳು ಹುಟ್ಟು ನೇಕಾರಳಾಗಿರುತ್ತಾಳೆ. ನೇಯುವ ಬಟ್ಟೆಯೊಳಗೆ ಗಂಧರ್ವ ಕಥೆಗಳನ್ನು ಹೆಣೆಯುವ ಕಲೆಗಾರಿಕೆ ಹೊಂದಿರುತ್ತಾರೆ. ಅಸ್ಸಾಮೀ ಹೆಂಗಸರು ಸೌಂದರ್ಯ ಪ್ರಿಯರಾಗಿದ್ದು, ಅತ್ಯಂತ ಕಡಿಮೆ ಆಭರಣ ತೊಡುವವರಾಗಿದ್ದು, ನಿರಾಭರಣರಾಗಿರುತ್ತಾರೆ. ಅವರ ನೇಕಾರಿಕೆಯು ಅತ್ಯಂತ ಉನ್ನತ ಸಂಸ್ಕೃತಿಯ ಚಿಹ್ನೆಯಾಗಿ ತೋರುತ್ತದೆ ಎಂದು ಗಾಂಧೀಜಿಯವರು ಹೇಳಿದ್ದರೆಂದು, ಅಸ್ಸಾಮೀ ಹೆಣ್ಣು ಮಕ್ಕಳ ಕರಕುಶಲತೆಯ ಬಗ್ಗೆ ಲೇಖಕಿ ಅಭಿಪ್ರಾಯ ಪಡುತ್ತಾರೆ. ರಾಷ್ಟ್ರಪಿತ ಗಾಂಧೀಜಿಯೇ ಅಸ್ಸಾಮೀ ಹೆಣ್ಣು ಮಕ್ಕಳ ಕರಕೌಶಲ್ಯತೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವುದು ಅಲ್ಲಿನ ಮಹಿಳೆಯರಿಗೆ ನೇಯ್ಗೆಯ ಕಲೆಗಾರಿಕೆ ಸಿದ್ಧಿಸಿರುವುದೇ ಸಾಕ್ಷಿ ಎನಿಸುತ್ತದೆ.

ಉತ್ತರ ಭಾರತದ ಪ್ರಸಿದ್ಧ ತಾಣಗಳಾದ ಕೇದಾರ, ಯಮುನೋತ್ರಿ, ಗಂಗೋತ್ರಿ, ಬದರಿನಾಥ ಕ್ಷೇತ್ರಗಳ ಪ್ರವಾಸದ ಅನುಭವವನ್ನು ಹೇಮಾಮಾಲಾ.ಬಿ. ಅವರು ತಮ್ಮ 'ಚಾರ್ ಧಾಮ್' ಕೃತಿಯಲ್ಲಿ ದಾಖಲಿಸಿದ್ದಾರೆ. ಎಲ್ಲಾ ಯಾತ್ರಿಕರು ಸೇರಿ ಒಂದು ಕಡೆ ವಾಸ್ತವ್ಯ ಹೂಡಿದಾಗ ಧಾರ್ಮಿಕ ಕ್ಷೇತ್ರಗಳಲ್ಲಿ ಬಹುತೇಕವಾಗಿ ದೇವರ ಭಜನೆ ಶಿವಸ್ತುತಿ ಸಾಮಾನ್ಯವಾಗಿರುತ್ತದೆ. ಮಹಿಳೆಯರೇ ತಂಡವಾಗಿ ರಚನೆಗೊಂಡು ಕೇದಾರನಾಥದಲ್ಲಿ ಭಜನೆ, ಶಿವಸ್ತುತಿ ಹಾಡಲಾರಂಭಿಸಿದ್ದು ವಿಶೇಷವೆನಿಸುತ್ತದೆ. ಈ ಶಿವಸ್ತುತಿಯಲ್ಲಿ ಭಾಗವಹಿಸಿದ್ದ ಲೇಖಕಿಗೂ ವಿಶೇಷ ಅನುಭವ ಆಗುತ್ತದೆ. ಕುಟುಂಬ, ಸಂಸಾರ, ಅಡುಗೆ ಮನೆಗಳಿಗೆ ಸೀಮಿತಗೊಂಡ ಮಹಿಳೆಯರು ಪ್ರವಾಸ ಸಂದರ್ಭದಲ್ಲಿ ಸಾಂಸ್ಕೃತಿಕವಾದ ಆಚರಣೆಗಳನ್ನು ಸಮರ್ಪಕವಾಗಿ ನಿಭಾಯಿಸಿರುವುದನ್ನು ಕಂಡು ಪ್ರವಾಸಿಗರು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಸುಧಾ ಚಿದಾನಂದಗೌಡ ಅವರು 'ಸಮನ್ವಿತೆ ಗೋಮಾಂತ' ಕೃತಿಯಲ್ಲಿ ಗೋವಾದ ಸಾಂಸ್ಕೃತಿಕ ಲೋಕದಲ್ಲಿ ಮೀರಾಬಾಯಿ ಬೆರೆತಿರುವ ಕುರಿತು ಪ್ರಸ್ತಾಪಿಸುತ್ತಾರೆ. ಜನರು ಸಮನ್ವಯತೆಯಿಂದ ಕೂಡಿ ಬದುಕಿದ ನಾಡಲ್ಲಿ, ಮೀರಾಬಾಯಿಯ ಜೀವನ ವಿಧಾನ. ಆಕೆಯ ಬೋಧನೆಗಳು ಇಲ್ಲಿನ ಮಹಿಳೆಯರಿಗೆ ಆದರ್ಶಪ್ರಾಯವಾಗಿದೆ. ಆಕೆಯ ಪ್ರಭಾವದಿಂದಾಗಿಯೇ ಆಕೆಯ ಮೂರ್ತಿಯನ್ನು ಗೋವಾದ ಬೀಚಿನ ಕಲ್ಲಿನಲ್ಲಿ ಬೃಹತ್ ಆಕಾರವಾಗಿ ಕೆತ್ತಲಾಗಿದೆ. ಪ್ರವಾಸಿಗರಿಗೆ ಆಕರ್ಷಕವಾದ ತಾಣವಾಗಿದೆ. ಸಮಾಜದ ಸುಧಾರಣೆಗಾಗಿ ತನ್ನ ಜೀವನವನ್ನೇ ಮೂಡುಪಾಗಿಟ್ಟ ಮೀರಾಳನ್ನು ಗೋವಾದಲ್ಲಿ ದೇವರಂತೆ ಭಾವಿಸುವುದನ್ನು ಕಾಣಬಹುದಾಗಿದೆ.

ಕೇರಳ ಗಂಡು ಹೆಣ್ಣು ಮಕ್ಕಳ ಸರಾಸರಿ ಗಮನಿಸಿದಾಗ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿದೆ. ಮಹಿಳೆಯರು ಶೈಕ್ಷಣಿಕ, ಸಾಂಸ್ಕೃತಿಕವಾದ ಎಲ್ಲಾ ರಂಗಗಳಲ್ಲಿ ಕ್ರಿಯಾಶೀಲರಾಗಿದ್ದ ಬಗ್ಗೆ ಪ್ರಜ್ಞಾ ಮತ್ತಿಹಳ್ಳಿ ಅವರು 'ದೇವರ ಸ್ವಂತ ನಾಡಿನಲ್ಲಿ' ಎಂಬ ಕೃತಿಯಲ್ಲಿ ನಿರೂಪಿಸಿದ್ದಾರೆ. ಕೇರಳ ವೈವಿಧ್ಯಮಯ ನಿಸರ್ಗದ ಜೊತೆಗೆ ಸಾಂಸ್ಕೃತಿಕವಾಗಿಯೂ ವಿಭಿನ್ನವಾದ ನಾಡು, ಕೊಚಿಯಾಟ್ಟಂ, ಮೋಹಿನಿಅಟ್ಟಂ, ತುಳ್ಳಲನೃತ್ಯ ಕೈಕೊಟ್ಟ ಕಳಿ/ತಿರುವತ್ತಿರಕಳಿ, ಮಾರ್ಗಂ ಕಳಿ, ಒಪ್ಪಾಣ, ಅರವನ ಮುಟ್ಟು ಮುಂತಾದ ನೃತ್ಯ ಕಲೆಗಳು ಕಂಡುಬರುತ್ತವೆ. ನಾಟಕ ಪ್ರಸಂಗಗಳಾದ 'ಸುಭದ್ರಾಹರಣ', 'ತಪತಿ ಸಂವರಣ' ಈಗಲೂ ಪ್ರದರ್ಶನ ಕಾಣುತ್ತದೆ. ನಾಟ್ಯದಲ್ಲಿ ಮಹಿಳೆಯರ ಪಾತ್ರವನ್ನು ಕುರಿತು ಲೇಖಕಿ "ಸ್ತ್ರೀ ಪಾತ್ರಗಳನ್ನು ಅಂಬಲವಾಸಿ ಜಾತಿಯ ಹೆಂಗಳೆಯರಾದ ನಂಗ್ಯಾರಮ್ಮ ಮಾಡುತ್ತಿದ್ದರು. ಚಾಕ್ಯಾರ ಹೆಣ್ಣು ಮಕ್ಕಳು ಅಂದರೆ ಇಲ್ಲೊತಮ್ಮಗಳು ಭಾಗವಹಿಸುವಂತಿಲ್ಲ ಅಂದರೆ ಸಮಾಜದ ಮೇಲ್ವರ್ಗದ ಜನ ತಮ್ಮ ಹೆಣ್ಣುಮಕ್ಕಳನ್ನು ಒಳಗಿಡಲು ಅಪೇಕ್ಷಿಸುತ್ತಿದ್ದರು ಎಂದೇ ಭಾಸವಾಗುತ್ತದೆ. ನಾಟ್ಯಶಾಸ್ತ್ರದ ಆಂಗಿಕ, ವಾಚಕ, ಸಾತ್ವಿಕ, ಆಹಾರ್ಯಗಳನ್ನು ಸಮರ್ಪಕವಾಗಿ ಬಳಸಲಾಗುತ್ತದೆ" (ಪ್ರಜ್ಞಾ ಮತ್ತಿಹಳ್ಳಿ, ೨೦೧೫, ಪುಟ-೭೨) ಎಂದಿದ್ದಾರೆ. ಕಥಕ್ಕಳಿಯಲ್ಲಿ ಮಿಣಕ್ಕು ಎಂದರೆ, 'ಸ್ತ್ರೀ ವೇಷ' ಇಲ್ಲಿ ಬಳಕೆಯಾಗುವ ಸಂಗೀತವನ್ನು 'ಸೋಪಾನ ಸಂಗೀತಂ' ಎನ್ನುತ್ತಾರೆ. ಮೋಹಿನಿ ಅಟ್ಟಂನಲ್ಲಿ ವಿಷ್ಣು, ಮೋಹಿನಿ ರೂಪ ಧರಿಸಿ ಬಂದು ನರ್ತನ ಮಾಡಿದ ಕತೆಗಳಿವೆ. ನೃತ್ಯಗಳನ್ನು ಮಹಿಳೆಯರಿಗೆ ವಿಶಿಷ್ಟವಾದ ಕಲಿಕೆಯಾಗಿದೆ, ಭಾವ ಪ್ರಧಾನ ನರ್ತನ, ನಾಯಕಿಯ ಅಸೀಮ ಪ್ರೀತಿ, ವಿರಹ, ತಲ್ಲಣ, ಕಾತರ ಹಾಗೂ ಕೆಲಮಟ್ಟಿಗೆ ಶೃಂಗಾರದ ಅಭಿವ್ಯಕ್ತಿಗಳು ಈ ನೃತ್ಯಗಳಲ್ಲಿ ಪ್ರಧಾನವಾಗಿರುವುದನ್ನು ದಾಖಲಿಸಿದ್ದಾರೆ.

ಹಿಂದೂ ಸ್ತ್ರೀಯರು ಓಣಂ ಹಬ್ಬದಲ್ಲಿ ಹಾಗೂ ಧನುರ್ಮಾಸದ 'ತಿರುವತ್ತಿರ ದಿನ' ಎಂಬ ಹಬ್ಬದಲ್ಲಿ ಹಾಸ್ಯ ಪ್ರಧಾನವಾದ ನೃತ್ಯ ಮಾಡುತ್ತಾರೆ. ಹೂವಿನ ಅಲಂಕಾರ ಮಾಡಿ, ದೀಪ ಇಟ್ಟು ಅದರ ಸುತ್ತಲೂ ವೃತ್ತಾಕಾರವಾಗಿ ಚಪ್ಪಾಳೆ ತಟ್ಟುತ್ತಾ ಜಾನಪದ ಹಾಡುಗಳನ್ನು ಹಾಡುತ್ತಾರೆ. ಮಲಭಾರ ಭಾಗದಲ್ಲಿ ಮದುವೆ ಹಿಂದಿನ ದಿನ ಮದುಮಗಳನ್ನು ರಂಜಿಸಲು, ರೇಗಿಸಲು ಮುಸ್ಲಿಂ ಯುವತಿಯರು ಒಪ್ಪಣ ನೃತ್ಯವನ್ನು ಪ್ರದರ್ಶಿಸುತ್ತಾರೆ. ಮಾಪಿಳ್ಳಪ್ಪಾಟ್ಟು ಹಾಡುತ್ತ ಯುವತಿಯರು ನರ್ತಿಸುತ್ತಾರೆ. ಕೇರಳದ ಮಹಿಳೆಯರಲ್ಲಿ ಸಾಂಸ್ಕೃತಿಕವಾದ ಕಲೆ ರಕ್ತಗತವಾಗಿ ಬಂದಿದೆ ಎನ್ನುವಷ್ಟರ ಮಟ್ಟಿಗೆ ಸಕ್ರಿಯರಾಗಿರುತ್ತಾರೆ. ಮೋಹಿನಿಯಟ್ಟಂ ಮೂಲೆಗುಂಪಾಗಿ ನಶಿಸುವ ಹೊತ್ತಿನಲ್ಲಿ ಮರುಜೀವ ತುಂಬಿದವರು ವಳ್ಳಕೊಳ್ಳ ಮೆನನ್, ಕಲ್ಯಾಣಿಯಮ್ಮ, ತೊಟ್ಟಶ್ಶೆರಿ ಚಿನ್ನಮ್ಮ, ಸತ್ಯಭಾಮಾ ಮುಂತಾದವರು ಪ್ರಸಿದ್ಧರಾಗಿದ್ದಾರೆ. ಈ 'ದೇವಕಿ' ಎಂಬಾಕೆ ಈ ನೃತ್ಯ ಕಲೆಯನ್ನು ಕಲಿತ ಮೊದಲ ಮಹಿಳೆಯಾಗಿದ್ದಾಳೆ. ಇವರು ಕೇರಳದಲ್ಲಿ ನೃತ್ಯಶಾಲಾ ಅಕಾಡಮಿಯನ್ನು ತೆರೆದು ಹಲವಾರು ಮಕ್ಕಳಿಗೆ ಕಲಿಸುತ್ತಿದ್ದಾರೆ.

ಇಟಲಿಯ ಪ್ರವಾಸ ಕಥನವಾದ 'ಯುರೋ ನಾಡಿನಲ್ಲಿ' ಎಂಬ ಕೃತಿಯಲ್ಲಿ ಪ್ರಸಿದ್ಧ ರಾಜಮನೆತನಗಳಿಗೆ ಸೇರಿದ ಪ್ರತಿಮೆಗಳ ವಿವರಗಳನ್ನು ಲತಾಗುತ್ತಿ ಅವರು ನಿರೂಪಿಸಿದ್ದಾರೆ. ಇಟಲಿಯಲ್ಲಿ ರಾಜರ, ರಾಣಿಯರ, ಧರ್ಮಗುರುಗಳ ಮತ್ತು ಮಕ್ಕಳ ಶಿಲಾಪ್ರತಿಮೆಗಳಿವೆ. ಡೋಮಿನಿಕೋನ, ಮಡೋನಾ, ಆಯಂಡ್ ಚೈಲ್ಡ್‌ದಲ್ಲಿ ಎತ್ತರದ ದೈವಿಕಳೆಯ ಶಿಲಾಪ್ರತಿಮೆಗಳನ್ನು ಕೆತ್ತಲಾಗಿದೆ. ಆ್ಯಂತೋವಿಯರ 'ಬ್ಯೂಟಿಪುಲ್ ವುಮೇನ್' ಚಿತ್ರದಲ್ಲಿ ಸ್ತ್ರೀಯರ ಮುಖದ ಭಾವಗಳನ್ನು ಅತೀ ಕೌಶಲ್ಯದ ಕೆತ್ತಲಾಗಿದೆ. 'ಮೇರಿ ಆ್ಯಂಡ್ ಚೈಲ್ಡ್' ಎಂಬ ಶಿಲ್ಪವು ಅತ್ಯಂತ ಆಕರ್ಷಣೀಯವಾಗಿದೆ. ಈ ಕುರಿತು ಲೇಖಕಿ "ಪ್ರೆಂಚ್ ವಿಭಾಗದಲ್ಲಿ ನೆನಪಿನಲ್ಲಿ ಉಳಿಯುವಂತಹ ಚಿತ್ರಗಳು 'ಲಿಬರ್ಟಿ ಗೈಡಿಂಗ್ ದಿ ಪೀಪಲ್' ಮತ್ತು 'ಕಾರೋನೇಷನ್ ಆಫ್ ನೆಪೋಲಿಯನ್'. ಲಿಬರ್ಟಿಗೈಡಿಂಗ್ ದ ಪೀಪಲ್‌ದಲ್ಲಿ ದಿಟ್ಟ ಮಹಿಳೆಯೊಬ್ಬಳು ಕೈಯಲ್ಲಿ ಧ್ವಜ ಹಿಡಿದು, ಜನರಿಗೆ ಸ್ವಾತಂತ್ರ್ಯದ ಬಗ್ಗೆ ಎಚ್ಚರಿಸಿದ್ದಾಳೆ. ಸುತ್ತೆಲ್ಲಾ ವಿರೋಧಿಗಳು ಬಂದಿದ್ದಾರೆ. ಹಿಂದೆ ಆ ದೇಶದ ಸೈನ್ಯ ಬರುತ್ತಿದೆ. ಅದರ ಹಿಂದೆ ಬೆಂಕಿ ಗಾಳಿ ಬಾಂಬಿಗೂ ತುತ್ತಾದಂತೆ ತೋರುವ ಮನೆಗಳು, ಅವು ಹೊತ್ತಿ ಉರಿಯುವಂತೆ ಭಾಸವಾಗುತ್ತದೆ. ಈ ಮಧ್ಯೆ ಅಂಜದೇ ಹೊರಟಿರುವ ಧೀರ ವನಿತೆ ಈ ಕೃತಿ ನಿಜಕ್ಕೂ ಶ್ಲಾಘನೀಯವಾದುದು" (ಲತಾಗುತ್ತಿ, ೧೯೯೩, ಪುಟ-೭೯) ಎಂದಿದ್ದಾರೆ. ಈ ಚಿತ್ರದಲ್ಲಿನ ಮಹಿಳೆಯು ಹೋರಾಟದ ಸಂಕೇತದಂತೆ ಕಂಡುಬರುತ್ತಾಳೆ. ಸಾಂಸ್ಕೃತಿಕ ಮತ್ತು ಶೈಕ್ಷಣಿಕವಾಗಿ ಮಹಿಳೆಯರಿಗೆ ವಿಶೇಷವಾದ ಸ್ಥಾನಮಾನಗಳನ್ನು ಈ ನಾಡಿನಲ್ಲಿ ನೀಡಿರುವುದು ಕಂಡುಬರುತ್ತದೆ.

ಬ್ರಿಟನ್‌ನ ಪ್ರೇಮಕವಿ ಬರ್ನ್ಸ್‌ನು ಸಾಂಸ್ಕೃತಿಕ ಲೋಕದಲ್ಲಿ ದೊಡ್ಡ ಹೆಸರನ್ನು ಪಡೆದವರು. ಅವರ ಪ್ರೇಮ ಕವನಗಳ ಹಿಂದೆ ಹೆಣ್ಣು ಪ್ರೇರಣೆಯಾಗಿದ್ದಾಳೆ. ಹೆಂಡತಿಯನ್ನು ಪ್ರೀತಿಸುವ ಗುಣವಿದ್ದ ಬರ್ನ್ಸ್‌ನಿಗೆ ಹಲವು ಪ್ರೇಮ ಪ್ರಕರಣಗಳಿವೆ. ತನ್ನ ಜೀವಿತಾವಧಿಯಲ್ಲಿ ಎರಡು ಮೂರು ಮದುವೆಯಾದ ಬರ್ನ್ಸ್‌ನು, ಮೊದಲ ಹೆಂಡತಿಯಿಂದ ದೂರವಾಗಿ ಕ್ಯಾಪಬೆಲ್ ಎನ್ನುವ ಹುಡುಗಿಯನ್ನು ಪ್ರೀತಿಸಿ ಮದುವೆಯಾದನು. ಆಕೆಗೆ ಪ್ರೇಮ ಕವಿತೆಗಳನ್ನು ಬರೆದು ಅರ್ಪಿಸುತ್ತಾನೆ. ಬರ್ನ್ಸ್‌ನ ಕವಿತೆಗಳಲ್ಲಿ ಕವಿಯ ಜೀವನಾನುಭವ ಸಾರ ಮತ್ತು ಪ್ರೇಮ ಪ್ರೀತಿಗಳ ಲೋಕವೇ ನಿರೂಪಿತಗೊಂಡಿವೆ. ಪ್ರಕೃತಿಯ ರಮ್ಯಲೋಕ, ಜಾನಪದ ಸೊಗಡು ಇವುಗಳು ಆತನ ಗೀತೆಗಳ ಅಂತರ್ಯದಲ್ಲಿರುವ ಕಾರಣಕ್ಕೆ ಜನಪ್ರಿಯ ಪ್ರೇಮ ಕವಿಯಾಗುತ್ತಾನೆ. ಬರ್ನ್ಸ್‌ನ ಕವಿತೆಗಳ ರಚನೆಗೆ ಹೆಣ್ಣೇ ಮೂಲ ಕಾರಣವಾಗುತ್ತಾಳೆ. ಕವಿಯೇ ಹೇಳಿಕೊಂಡ ಹಾಗೆ ತನ್ನ ಕವಿತ ಶಕ್ತಿ ತನ್ನ ಪ್ರೇಯಸಿಯಿಂದಲೇ ಪಡೆದಿದ್ದಾಗಿ, ಹೆಣ್ಣಿನ ಪ್ರಭಾವದಿಂದ ಆಕೆಯ ಮೇಲಿನ ಪ್ರೀತಿಯಿಂದ ಅಷ್ಟೇಲ್ಲಾ ಸಾಧನೆ ಸಾಧ್ಯವಾಯಿತು ಎಂದಿದ್ದಾನೆ. ಮುಂದೆ ಬರ್ನ್ಸ್‌ನು ಸಾಂಸ್ಕೃತಿಕ ಲೋಕದ ಮಿನುಗು ತಾರೆಯಾಗುತ್ತಾನೆ ಎಂದು ಲೇಖಕಿ ಪ್ರಸ್ತಾಪಿಸುತ್ತಾರೆ.

ಲಾಂಟಾನು ಹಬ್ಬ ಚೀನಿಯರಿಗೆ ವಸಂತ ಋತುವಿನ ಹಬ್ಬವನ್ನು ಹದಿನೈದು ದಿನಗಳ ಕಾಲ ಸಂಭ್ರಮದಿಂದ ಆಚರಿಸುತ್ತಾರೆಂದು ಇಂದಿರಾ ಶಿವಣ್ಣ ಅವರು 'ನಿಗೂಢಗಳ ನಿಚ್ಚಣಿಕೆ

ಏರಿ' ಎಂಬ ಕೃತಿಯಲ್ಲಿ ನಿರೂಪಿಸುತ್ತಾರೆ. ಹಬ್ಬದ ಮೊದಲನೇ ದಿನ ಪರಲೋಕದಿಂದ ಬರುವ ದೇವತೆಗಳನ್ನು ಸ್ವಾಗತಿಸಲು ದೀಪಗಳನ್ನು ಬೆಳಗಿಸಿದರೇ, ಎರಡನೇ ದಿನ ಹೆಣ್ಣುಮಕ್ಕಳು ತವರಿಗೆ ಬಂದು ಹಬ್ಬದ ಸಂಭ್ರಮ ಹೆಚ್ಚಿಸುತ್ತಾರೆ. ಉಳಿದ ದಿನಗಳು ಧನದೇವತೆಯನ್ನು ಪೂಜಿಸುತ್ತಾರೆ. ಹದಿನೈದು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕೆಂಪು ಬಣ್ಣದ ಈ ಲಾಂಟನುಗಳನ್ನು ಬೆಳಗಿಸಿ ಊರೆಲ್ಲಾ ಸಂಭ್ರಮಿಸುತ್ತಾರೆ. ಚೀನಾದ ಸಾಂಸ್ಕೃತಿಕತೆಯನ್ನು ಬಿಂಬಿಸುವ ಈ ಹಬ್ಬದಲ್ಲಿ ಮಹಿಳೆಯರಿಗೆ ಮಹತ್ವದ ಸ್ಥಾನವಿದೆ. ಚೀನಾದ ತತ್ವಜ್ಞಾನಿ ಕನ್‌ಫ್ಯೂಷಿಯಸ್ ತನ್ನ ೧೯ನೇ ವಯಸ್ಸಿನಲ್ಲಿ ಚೈನ್ ಕ್ವಾನ್ ವಂಶದ ಹುಡುಗಿಯೊಂದಿಗೆ ಮದುವೆಯಾದ. ಕ್ರಿ.ಪೂ.೫೨೮ರಲ್ಲಿ ಅವನ ತಾಯಿ ವಿಧಿವಶಳಾದಳು. ತಾಯಿ ಸಾವಿನ ದುಃಖ ಕನ್‌ಫ್ಯೂಷಿಯಸ್‌ನನ್ನು ತತ್ವಬೋಧಕನನ್ನಾಗಿ ಪರಿವರ್ತಿಸುತ್ತದೆ. ಸಾರ್ವಜನಿಕರೊಂದಿಗೆ ತತ್ವ ಬೋಧನೆ ಮಾಡುತ್ತಾ ತನ್ನನ್ನು ತಾನು ಸಮಾಜದ ಒಳಿತಿಗಾಗಿ ಅರ್ಪಿಸಿಕೊಳ್ಳುವಂತಾಯಿತು. ಕನ್‌ಫ್ಯೂಷಿಯಸ್ ತತ್ವಜ್ಞಾನಿಯಾಗುವುದರ ಹಿಂದೆ ತಾಯಿಯ ಮೇಲಿದ್ದ ಪ್ರೀತಿಯೇ ಕಾರಣವಾಗಿದೆ. ಈಗಾಗಿಯೇ ಚೀನಾದ ಸಂಸ್ಕೃತಿಯಲ್ಲಿ ಗುರುತಿಸಿಕೊಳ್ಳುವಂತಾಯಿತು. ಚೀನಾದ ಮಹಾಗೋಡೆಯ ಹಿಂದೆಯೂ ಸ್ತ್ರೀ ದುರಂತ ಕಥೆಗಳಿವೆ. ಅಲ್ಲಿನ ಜಾನಪದ ಕಥೆಯ ಪ್ರಕಾರ 'ಶಿಂಗಿಲೀ' ಎಂಬ ಮಹಿಳೆಯ ದುರಂತದ ಕತೆ ಹೀಗಿದೆ. ಚೀನಾದ ರಾಜ 'ಝುಬಿ'ಯ ಕಾಲದಲ್ಲಿ ರಾಜ ಕೋಟೆ ಕಟ್ಟಲು ಆದೇಶ ಹೊರಡಿಸಿದ್ದನು. ಮಹಾಗೋಡೆಯನ್ನು ಕಟ್ಟಲು ಕೆಲಸ ಮಾಡಲು ನಿರಾಕರಿಸಿದವರಿಗೆಲ್ಲ ಶಿಕ್ಷೆ ವಿಧಿಸುತ್ತಿದ್ದರು. ಶಿಂಗಿಲೀಯನ್ನು ಮದುವೆಯಾದ ಮರುದಿನವೇ ತರುಣನು ಕೋಟೆ ಕಟ್ಟುವ ಕೆಲಸಕ್ಕೆ ಹೋಗಲು ನಿರಾಕರಿಸಿದ್ದಕ್ಕಾಗಿ ಎಳೆದೊಯ್ದು ಗಲ್ಲು ಶಿಕ್ಷೆ ವಿಧಿಸಿದರು. ಪತಿಗಾಗಿ ಕಾದು ಆಕೆ ಹುಚ್ಚಿಯಾದಂತಾಗಿ ಹುಡುಕುತ್ತ ಹೊರಟಾಗ, ಕೋಟೆಯ ಅಡಿಯಲ್ಲಿ ಅವನ ಶವ ಊಳಲಾದ ಸಂಗತಿ ತಿಳಿದುಬರುತ್ತದೆ. ಶಿಂಗಿಲೀಯ ಸೌಂದರ್ಯಕ್ಕೆ ಮಾರುಹೋದ ಸಾಮ್ರಾಟನು ಮದುವೆಗೆ ಒತ್ತಾಯಿಸುತ್ತಾನೆ. ಶಿಂಗಲೀ ಗಂಡನಿಗಾಗಿ ಸಮಾಧಿ ಕಟ್ಟುವ ಉಪಾಯದಿಂದ, ರಾಜನ ಮದುವೆ ಆಗುವುದಾಗಿ ಒಪ್ಪುತ್ತಾಳೆ. ಪೂರ್ಣಗೊಂಡ ಸಮಾಧಿಯನ್ನು ಕಣ್ಣು ತುಂಬಿಕೊಂಡು ಸಮುದ್ರದಲ್ಲಿ ಮುಳುಗಿ ಪ್ರಾಣ ಬಿಡುತ್ತಾಳೆ. ಚೀನಾದ ಮಹಾಗೋಡೆ ನಿರ್ಮಾಣದ ಹಿಂದೆ ಇಂತಹ ಮಹಿಳೆಯರ ಹಲವು ಕಣ್ಣೀರಿನ ಕಥೆಗಳಿವೆ. ಸಾಂಸ್ಕೃತಿಕವಾದ ಹೆಸರುಗಳ ನೆಪದಲ್ಲಿ ಮಹಿಳಾ ಬದುಕನ್ನು ಕ್ರಿಯಾಶೀಲವಾಗದೇ ಸಮಾಧಿಗೊಳಿಸಿದ ಕಥೆಗಳು ಚೀನಾದಲ್ಲಿವೆ ಎಂದು ಲೇಖಕಿ ಅಭಿಪ್ರಾಯಪಡುತ್ತಾರೆ.

ಆಸ್ಟ್ರೇಲಿಯಾದಲ್ಲಿ ಇಂದಿರಾ ವಿಶ್ವರಾಧ್ಯ ದಂಪತಿಗಳ ನೂತನ ಗೃಹಪ್ರವೇಶ ಮಾಡಿದಾಗ ಭಾರತೀಯ ಸಂಸ್ಕೃತಿಯನ್ನು ಸಾವಿರಾರು ಮೈಲಿಗಳಾಚೆ ಉಳಿಸಿಕೊಂಡಿರುವುದನ್ನು ಪದ್ಮಾಗುರುರಾಜ್ ಅವರು 'ಕಾಂಗರೂಗಳ ನಾಡಿನಲ್ಲಿ' ಎಂಬ ಕೃತಿಯಲ್ಲಿ ನಿರೂಪಿಸಿದ್ದಾರೆ. ಭಾರತೀಯರು ಒಂದು ಕಡೆ ಸೇರಿ ಸಾಂಸ್ಕೃತಿಕ ಕಲೆಗಳನ್ನು ಪ್ರದರ್ಶಿಸಲು ವೇದಿಕೆಯನ್ನೇ ನಿರ್ಮಿಸಿಕೊಳ್ಳುತ್ತಾರೆ. ಭರತನಾಟ್ಯ, ಕೂಚಿಪುಡಿ, ಮೋಹಿನಿಅಟ್ಟಂ ಜೊತೆಗೆ, ಜನಪದ ಶೈಲಿಯ ನೃತ್ಯಗಳನ್ನು ಅಲ್ಲಿನ

ಮಕ್ಕಳು, ಯುವಕ-ಯುವತಿಯರು ಪ್ರದರ್ಶಿಸುತ್ತಾರೆ. ಪುಟ್ಟ ಮಕ್ಕಳಿಂದ ಹಿಡಿದು ಎಲ್ಲಾ ಬಗೆಯ ವಯೋಮಾನದವರು ವೇದಿಕೆಯನ್ನು ಅಲಂಕರಿಸಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಉತ್ಸಾಹದಿಂದಲೇ ಭಾಗವಹಿಸುತ್ತಾರೆ. ತಮ್ಮ ಸಂಸ್ಕೃತಿಯ ಬಗೆಗೆ ಇದ್ದ ಅಭಿಮಾನವನ್ನು ವಿದೇಶಿ ನೆಲದಲ್ಲಿ ಸಾರುತ್ತಾರೆ. ಭಾರತಿ ಭಟ್ ಅವರು ಬೆಲ್ಜಿಯಂ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಪ್ರೊ.ಪ್ಲಾಂಕ್ ಅವರು ಸಾಕಷ್ಟು ಸಹಾಯ ಮಾಡುತ್ತಾರೆ. ಪ್ಲಾಂಕ್ ಅವರು ಬರೆದ ಒಂದು ಕೃತಿಯನ್ನು ಲೇಖಕಿಯ ಪತಿಗೆ ಕೊಟ್ಟು, ಭಾರತಿ ಅವರು ಎರಡು ಪುಸ್ತಕಗಳನ್ನು ಬರೆದಿದ್ದಾರೆ, ನನಗೆ ಕೊಟ್ಟರೆ ಬೆಲ್ಜಿಯಂ ಭಾಷೆಯಲ್ಲಿ ಅನುವಾದಿಸುತ್ತೇನೆ ಎನ್ನುತ್ತಾರೆ. ಬೆಲ್ಜಿಯಂ ಭಾಷೆ ಹೊರತಾಗಿ ಇತರೆ ಭಾಷೆಗಳನ್ನು ಇಷ್ಟಪಡದ ಅಲ್ಲಿನ ಜನಕ್ಕೆ ಕನ್ನಡದ ಕೃತಿಯನ್ನು ಬೆಲ್ಜಿಯಂ ಭಾಷೆಗೆ ಪರಿಚಯಿಸುವ ಪ್ಲಾಂಕ್ ಅವರ ಸಾಂಸ್ಕೃತಿಕ ಕಾಳಜಿಯನ್ನು ಕುರಿತು ಲೇಖಕಿ 'ನನ್ನ ಬೆಲ್ಜಿಯಂ ಪ್ರವಾಸ' ಎಂಬ ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ.

ಗುಜರಾತಿನ ಸಂಸ್ಕೃತಿಯನ್ನು ಪರಿಚಯಿಸುವಲ್ಲಿ 'ಹಲವು ಕಾಲಗಳ ನಾಡು: ಗುಜರಾತ್' ಎಂಬ ಕೃತಿ ಮುಖ್ಯವಾಗುತ್ತದೆ. ಅಲ್ಲಿನ ಲೂನಾವಾಡ ಎಂಬ ಹಳ್ಳಿಯಲ್ಲಿ ಸಣ್ಣ ವೇದಿಕೆಯ ಮೇಲೆ ಕಾಳಿ ಮತ್ತು ದುರ್ಗೆ ಮಾತೆಯರ ಚಿತ್ರ ಪ್ರತಿಷ್ಠಾಪಿಸುತ್ತಾರೆ. ಅದರ ಸುತ್ತ ೨೦-೨೫ ಹುಡುಗ-ಹುಡುಗಿಯರು ಸೇರುವ 'ಗರ್ಬಾ' ಎಂಬ ಕುಣಿತದ ಪ್ರಸಂಗವನ್ನು ಪ್ರದರ್ಶಿಸುತ್ತಾರೆ. ಆ ಗುಂಪಿನ ಹಿರಿಯ ಮಹಿಳೆಯ ಮೇಲೆ ಕಾಳಿದೇವಿ ಬಂದಿದ್ದಳು. ಆಕೆ ಮೊಣಕೈ ಮಡಿಸದೇ ಕೈ ಚಾಚಿ ಕುಣಿಯುವ ನೃತ್ಯವು ಆಕರ್ಷಿಸುತ್ತಿತ್ತು. ಗರ್ಬಾ ಕುಣಿತಕ್ಕೂ ಹಿಮ್ಮೇಳವಿದ್ದು, ಬಿಲ್ಲವ ಬುಡಕಟ್ಟುಗಳ ಸಾಂಸ್ಕೃತಿಕ ಹಿನ್ನೆಲೆ ಈ ನೃತ್ಯಗಳಿಗಿದೆ. ಇವರಲ್ಲಿ ರಾಮಾಯಣ ಮತ್ತು ಮಹಾಭಾರತ ಕಥನಗಳು ಭಿನ್ನವಾದ ಕತೆಯ ಕುರಿತು ಲೇಖಕಿಯು "ರಾವಣ ಖಳನಲ್ಲ. ವಾಸುಕಿ ನಾಗನ ಶಾಪದಿಂದ ತನ್ನ ಮಗಳನ್ನು(ಸೀತೆ) ವರಿಸಬೇಕಾದ ಪ್ರಮೇಯ ಬಂದಾಗ ದೂರ ಮಾಡಿರುತ್ತಾನೆ. ಅನಂತರ ಜನಕ ಮಹಾರಾಜನಿಗೆ ಸಿಕ್ಕ ಸೀತೆ ಜಾನಕಿಯಾಗುತ್ತಾಳೆ. ಇವರ ರಾಮಾಯಣದಲ್ಲಿ ಮಂಥರೆಯ ಪಾತ್ರ ಬರುವುದಿಲ್ಲ. ರಾವಣನಿಗೆ ಸೀತೆಯನ್ನು ವರಿಸುವ ಉದ್ದೇಶವಿರಲಿಲ್ಲ. ಬಿಲ್ಲರ ರಾಮಾಯಣ ರಚಿಸಿದ ಸ್ವಸ್ಥ ಆದಿವಾಸಿಗಳಿಗೂ, ಆಧುನಿಕ ಕತೆಗಳಿಗೆ ಹೋಲಿಸಿದರೆ ಯಾರಿಗಿಂತ ಯಾರು ಹೆಚ್ಚು ನಾಗರಿಕರು ಎಂಬುದು ತಿಳಿಯುತ್ತದೆ. ಮಹಾಭಾರತದಲ್ಲೂ ಇಂತಹ ವ್ಯತ್ಯಾಸಗಳು ಇವರ ಸಂಸ್ಕೃತಿಗಳಲ್ಲಿವೆ. ದ್ರೌಪದಿಯು ನಾಗನೊಬ್ಬನಿಗೆ ಸವಾಲ್‌ನ್ನು ಎಸೆಯುತ್ತಾಳೆ. ತನ್ನ ಗಂಡಂದಿರನ್ನು ಸೋಲಿಸಿದರೇ ಅವರನ್ನು ವರಿಸುವುದಾಗಿ ಹೇಳಿದಾಗ, ನಾಗನು ನಾಲ್ಕು ಜನ ಗಂಡಂದಿರನ್ನು ಸೋಲಿಸಿ ಅಟ್ಟಿ, ಅರ್ಜುನನ್ನು ಸೋಲಿಸಿ ತಲೆ ಕೆಳಗೆ ನೇತು ಹಾಕಿ ಅವನ ಸಮ್ಮುಖದಲ್ಲೇ ದ್ರೌಪದಿಯನ್ನು ಸಂಭೋಗಿಸುತ್ತಾನೆ." (ಸಂಧ್ಯಾ.ಎಸ್, ೧೯೯೭, ಪುಟ-೨೨) ಎಂದು ಹೇಳುತ್ತಾರೆ. ಈ ಭಿನ್ನ ನಿರೂಪಣೆ ಹೊಂದಿದ ಪುರಾಣಗಳು ಮಹಿಳೆಯರ ಸುತ್ತಲೇ ನಡೆಯುವ ಕತೆಗಳಾಗಿದ್ದರಿಂದ ಆದಿವಾಸಿಗಳಲ್ಲಿ ಭಿನ್ನ ಸ್ವರೂಪ ತಾಳಿರಬಹುದು. ಈ ಪುರಾಣದ ಕಥೆಗಳು ಯಾರ ಪರವಾಗಿಯೂ ಇಲ್ಲದೇ, ಕಥಾವಸ್ತುವೇ ಮುಖ್ಯವಾಗಿ ನಿರೂಪಣೆಗೊಂಡಿದೆ.

ಕೆನಡಾದ ಮಹಿಳೆಯರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ ರೀತಿಯನ್ನು ಕುರಿತು ಉಮಾರಾವ್ ಅವರು 'ರಾಕೀ ಪರ್ವತಗಳ ನಡುವೆ ಕ್ಯಾಬರೆ' ಎಂಬ ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಕಣ್ಣಿಗೆ ತೀಡಿದ ಕಪ್ಪುಕಾಣಿಕೆ, ಉದ್ದನೆಯ ನುಣುಪಾದ ತೆರೆದು ಬಿಟ್ಟ ಕಪ್ಪುಕೂದಲು, ಆ ಬೆಳಕಿನಲ್ಲಿ ಥಳ ಥಳ ಹೊಳೆಯುವ ಆಭರಣಗಳು, ಕೆಂಪು ಉಡುಪುಗಳು, ಹೊಕ್ಕಳು ಕೆಳಗಿನ ಸೀರೆಯ ನೆರಿಗೆ, ತೊಳಲಾಡುತ್ತಿದ್ದ ಉಡುಗೆ, ರಬ್ಬರಿನಂತ ಸೊಂಟ ಕುಲಕಿಸುತ್ತಾ, ಪಾದರಸದಂತೆ ನಲಿಸುತ್ತಾ ಎಲ್ಲರೊಡನೆ ಬರುವ ಆಕೆಯ ಮಾದಕತೆ, ಹಾವಭಾವಗಳು ಎಲ್ಲರಿಗೂ ಆಕರ್ಷಿತವಾಗಿ ಕಂಡವು. "ಕೆನಡಾದ 'ಫ್ರೆಡರಿಕ್ ವುಡ್ ಥಿಯೆಟರಿ'ನಲ್ಲಿ 'ದಿ ಲವರ್' ನಾಟಕ ನೋಡಲು ಹೋದಾಗ 'ಲಿಂಡಾ' ಅವಳು ರಂಗನಟಿ, ನರ್ತಕಿಯ ಹೊಂಗೂದಲು, ಹಸಿರು ಕಣ್ಣಿನ ಚಲುವೆಯಾಗಿದ್ದಳು. ಅಲೆಮಾರಿಯಾಗಿದ್ದ ಆಕೆ ಮಾಂಟ್ರಿಯಲ್ ಪ್ರದೇಶದಿಂದ ಬಂದಿದ್ದಳು. ತನ್ನ ಹದಿನೇಳು ವರ್ಷಗಳಿಂದ ಪ್ರಪಂಚವನ್ನು ಸುತ್ತುವ ಅವಳ ಹವ್ಯಾಸದಿಂದಾಗಿ ಭಾರತವನ್ನು ನೋಡುವ ಕುತೂಹಲ ಹೊಂದಿದ್ದಳು. ಭಾರತದ ಬಗ್ಗೆ ಮಾತಾನಾಡೋಣ, ಒಟ್ಟಿಗೆ ಊಟ ಮಾಡೋಣ' ಎನ್ನುತ್ತಿದ್ದಳು. ತನ್ನ ಕೃತಿ 'ಫಸ್ಟ್ ವರ್ಲ್ಡ್ ಎನ್ವಿ' ಬಗ್ಗೆ ಕೇಳಿದಳು"(ಉಮಾರಾವ್, ೨೦೦೨, ಪುಟ-೫೨) ಆಕೆಯ ಕ್ರಿಯಾಶೀಲವಾದ ವ್ಯಕ್ತಿತ್ವ, ಮಾದಕ ಚಲುವು ಜೊತೆಗೆ ಜಗತ್ತಿನ ವಿವಿಧ ಸಂಸ್ಕೃತಿಗಳನ್ನು ಅರಿಯುವ ಆಕೆಯ ಬೌದ್ಧಿಕತೆ ಯಾರಿಗಾಗಲೀ ಇಷ್ಟವಾಗದೇ ಇರಲಾರದು ಎಂಬ ಅಭಿಪ್ರಾಯವನ್ನು ಲೇಖಕಿ ತಿಳಿಸುತ್ತಾರೆ. ಸುಭಾಷಿಣಿ ಅವರು 'ಜರ್ಮನಿಯ ಒಡಲಲ್ಲಿ' ಎಂಬ ಕೃತಿಯಲ್ಲಿ ಜರ್ಮನ್ ಮಹಿಳೆಯರ ವಿದ್ಯಾಭ್ಯಾಸದ ನ್ಯೂನ್ಯತೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಭಾರತದ ಶಿಕ್ಷಣ ವ್ಯವಸ್ಥೆಗಿಂತಲೂ ಜರ್ಮನಿಯ ಶಿಕ್ಷಣ ವ್ಯವಸ್ಥೆಯು ದೀರ್ಘವಾಗಿದ್ದು, ವಿಶ್ವವಿದ್ಯಾಲಯದ ಮೊದಲ ವರ್ಷದ ವಿದ್ಯಾರ್ಥಿಗೆ ಇಪ್ಪತ್ತೇಳು ವರ್ಷ ವಯಸ್ಸಾಗಿರುತ್ತದೆ. ಪದವಿಯ ಪ್ರವೇಶ ಪರೀಕ್ಷೆಯನ್ನು ತಡವಾಗಿ ತೆಗೆದುಕೊಳ್ಳುತ್ತಾರೆ. ಕಾಲೇಜು ಮೆಟ್ಟಿಲು ಏರುವ ಮುನ್ನವೇ ಸಮಾಜ ಸೇವೆ ಅಥವಾ ಮಿಲಟರಿಗೆ ಸೇರಿಕೊಂಡು ಬಿಡುತ್ತಾರೆ. ಜರ್ಮನ್ನಿಯರು ಪದವಿ ನಂತರದಲ್ಲಿ ವಿದ್ಯಾಭ್ಯಾಸ ಮುಂದುವರಿಸುವುದು ವಿರಳವಾಗಿದೆ. ಉನ್ನತ ಶಿಕ್ಷಣ ಓದುವವರು ಜರ್ಮನಿಯ ಬದಲಾಗಿ ಅಮೇರಿಕಾ, ಇಂಗ್ಲೆಂಡ್, ಪ್ರಾನ್ಸ್ ದೇಶಗಳಿಗೆ ಹೋಗಿ ಓದುತ್ತಾರೆ. ಇಲ್ಲಿನ ಕಠಿಣ ಕಾನೂನುಗಳಿಂದಾಗಿ ದೀರ್ಘಕಾಲಿಕ ವಿದ್ಯಾಭ್ಯಾಸಗಳಿಂದಾಗಿ ವಿದೇಶಿಯರು ಜರ್ಮನ್‌ಗೆ ಬರುವುದಿಲ್ಲ ಎಂಬುದು ಲೇಖಕಿಯ ಅನಿಸಿಕೆಯಾಗಿದೆ. ಆದರೆ ಇಲ್ಲಿನ ಮಹಿಳೆಯರು ಸಾಂಸ್ಕೃತಿಕವಾಗಿ ಬೆಳೆದುಬಂದಿರುವ ಕುರಿತು ಹೆಚ್ಚಾಗಿ ದಾಖಲಿಸುವುದಿಲ್ಲ.

ಪ್ರೇಮಾಭಟ್ ಅವರು 'ಪೂರ್ವಾಂಚಲದಲ್ಲಿ ಕೆಲವು ದಿನಗಳು' ಕೃತಿಯಲ್ಲಿ ಮಹಿಳೆಯರನ್ನು ಕುರಿತು "ಅವರ ಹಾವಭಾವ, ಮೈಮಾಟದ ಬಳುಕು, ವೈಯ್ಯಾರ ನನಗೆ ಕೃತ್ರಿಮವಾಗಿ ಕಾಣುತ್ತಿತ್ತು. ಹೆಚ್ಚು ಹೊತ್ತು ಅಲ್ಲಿ ಕುಳಿತುಕೊಳ್ಳಲಾರೆ ಎನಿಸಿತು. ಸ್ವಲ್ಪ ಹೊತ್ತಿನಲ್ಲಿ ವಿವಿಧ ಆಟಗಳಲ್ಲಿ ಮುಳುಗುತ್ತಿದ್ದರು. ಪುರುಷರು ಸ್ತ್ರೀಯರೆಂಬ ಭಾವನೆಗೆ ಅಲ್ಲಿ ಅವಕಾಶವೇ

ಇರಲಿಲ್ಲ. ಹೆಂಗಸರು ಗಂಡಸರು ಭೇದವಿಲ್ಲದೆ ಪ್ರತಿಯೊಬ್ಬರು 'ವೈನ್' ಕುಡಿಯುತ್ತಿದ್ದರು. ನರ್ತಿಸುತ್ತಿದ್ದರು. ಪಾರ್ಟಿಯಲ್ಲಿ ಭಾಗವಹಿಸಿದ ಹೆಣ್ಣು ಮಕ್ಕಳಿಗೆ ಉಡುಗೆ ತೊಡುಗೆಯ ಕಡೆಗೆ ಗಮನವಿದ್ದಂತೆ ಕಾಣಲಿಲ್ಲ. ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿದ ದಕ್ಷಿಣದ ಹೆಣ್ಣು ಮಕ್ಕಳು ಇಂಥ ಪಾರ್ಟಿಗೆ ಹೊಂದಿಕೊಳ್ಳಬಲ್ಲರೇ ಎನಿಸಿತು"(ಪ್ರೇಮಾಭಟ್,೨೦೦೨, ಪುಟ-೨೮) ಎಂದಿದ್ದಾರೆ. ಉತ್ತರ ಭಾರತ ಮಹಿಳೆಯರಿಗೂ ದಕ್ಷಿಣ ಭಾರತದ ಮಹಿಳೆಯರಿಗೂ ವಿದೇಶಿ ಮಹಿಳೆಯರಿಗೂ ಇರುವ ವ್ಯತ್ಯಾಸವನ್ನು ಲೇಖಕಿ ಹೇಳುತ್ತಿದ್ದಾರೆ. ಬೇರೊಂದು ಸಂಸ್ಕೃತಿಯನ್ನು ಸುಲಭವಾಗಿ ಅಳವಡಿಸಿಕೊಳ್ಳುವ ಉತ್ತರ ಭಾರತದವರಂತೆ ದಕ್ಷಿಣದವರು ಸುಲಭಕ್ಕೆ ಸ್ವೀಕರಿಸುವುದಿಲ್ಲ. ಆದರೆ ನಗರಗಳಲ್ಲಿ ಈ ಬದಲಾವಣೆ ಕಾಣಬಹುದಾಗಿದೆ. ಆದರೆ ದಕ್ಷಿಣ ಭಾರತದ ಮಹಿಳೆಯರು ಬೇರೊಂದು ಸಂಸ್ಕೃತಿಯನ್ನು ಅನುಕರಿಸುವುದಿಲ್ಲ. ಹೀಗಾಗಿಯೇ ಸಾಂಸ್ಕೃತಿಕವಾಗಿ ಗಟ್ಟಿಯಾದ ಆಚರಣೆಗಳನ್ನು ಇವೊತ್ತಿಗೂ ಹೊಂದಿದ್ದಾರೆ.

ಅರುಣಾಚಲ ಪ್ರದೇಶ ರಾಜ್ಯದ ಅನುಭವ ಕಥನವಾದ ಅಂಜಲಿ ರಾಮಣ್ಣ ಅವರು 'ಬೆಳಕಿನ ಸೆರಗು' ಕೃತಿಯಲ್ಲಿ ಅಲ್ಲಿನ ಶೈಕ್ಷಣಿಕ ವ್ಯವಸ್ಥೆಯು ಬೇರೆ ರಾಜ್ಯಗಳಿಗಿಂತ ಭಿನ್ನವಾಗಿರುವುದನ್ನು ಪ್ರಸ್ತಾಪಿಸುತ್ತಾರೆ. ಪದವಿ ಪೂರ್ವ ಹಂತದಲ್ಲಿ ವಿಜ್ಞಾನ ವ್ಯಾಸಾಂಗಕ್ಕೆ ಅಷ್ಟೊಂದು ಪ್ರಾಮುಖ್ಯತೆ ಇರುವುದಿಲ್ಲ. ಕಲೆ, ಸಮಾಜವಿಜ್ಞಾನ, ವಾಣಿಜ್ಯ ವಿಭಾಗದೆಡೆಗೆ ಹೆಚ್ಚಿನ ಗಮನ ಕೊಡುತ್ತಾರೆ. ಇಲ್ಲಿನ ನೆಲ ಜಲದ ಬಗ್ಗೆ ಅಭಿಮಾನವಿರುವ ಇವರು ಹೊರರಾಜ್ಯಗಳಿಗೆ ವಿದ್ಯಾಭ್ಯಾಸಕ್ಕೆ ಹೋಗದೇ ತಮ್ಮದೇ ರಾಜ್ಯದಲ್ಲಿ ಓದಲು ಇಚ್ಚಿಸುತ್ತಾರೆ. ಈ ಕಾರಣಕ್ಕಾಗಿ ಅರುಣಾಚಲ ಪ್ರದೇಶದ ಯುವ ಜನತೆ ದಿನೇ ದಿನೇ ಪ್ರಬಲವಾಗುತ್ತಿದೆ. ಅಲ್ಲದೇ ಇಲ್ಲಿನ ಬುಡಕಟ್ಟು ಜನಾಂಗವು ಮುಖ್ಯವಾಗಿದ್ದು, ಯುವತಿಯರು ಬುಡಕಟ್ಟು ಜನಾಂಗಗಳ ಬಗ್ಗೆ ಪಿಎಚ್.ಡಿ. ಅಧ್ಯಯನ ನಡೆಸಿದ್ದಾರೆ. ಅಲ್ಲದೇ ಇಲ್ಲಿನ ಮಹಿಳೆಯರು ಐ.ಎ.ಎಸ್., ಐ.ಪಿ.ಎಸ್. ಪರೀಕ್ಷೆಗಳಲ್ಲಿ ಹೆಚ್ಚಿನ ಒಲವು ಉಳ್ಳವರಾಗಿದ್ದರಂತೆ. ಸಮಾಜ ವಿಜ್ಞಾನಗಳ ನಿಕಾಯವು ಸಮಾಜದ ಬಗ್ಗೆ ಒಲವುಳ್ಳ ವಿಷಯಗಳಾಗಿದ್ದರಿಂದ, ಸಾಂಸ್ಕೃತಿಕವಾಗಿ ದೇಶವನ್ನು ಕಟ್ಟುವ, ಆಡಳಿತದಿಂದಾಗಿಯೇ ದೇಶದ ಸುಧಾರಣೆ ಸಾಧ್ಯವಿರುವ ಕಾರಣಕ್ಕೆ ಇಂತಹ ವಿಷಯಗಳನ್ನು ಹೆಚ್ಚು ಜನರು ಆಯ್ದುಕೊಳ್ಳುತ್ತಿದ್ದರೆಂದು ಅಂಜಲಿ ರಾಮಣ್ಣ ಅವರು ಅಭಿವ್ಯಕ್ತಿಸುತ್ತಾರೆ.

'ಅಮೇರಿಕಾದಲ್ಲಿ ಅರವತ್ತೇಳರ ಹುಟ್ಟುಹಬ್ಬ' ಕೃತಿಯು ಜಯ ಕಲ್‌ಬಾಗಲ್ ಅವರು ಅಮೇರಿಕಾದಲ್ಲಿನ ಮದುವೆ ವಿಧಿಗಳ ಬಗ್ಗೆ ಬರೆಯುವ ಜಯ ಕಲ್‌ಬಾಗಲ್ ಅವರು ಅಲ್ಲಿನ ಮಹಿಳೆಯರು ಸಾಂಸ್ಕೃತಿಕವಾಗಿ ಕ್ರಿಯಾಶೀಲವಾದ ಬಗ್ಗೆಯೂ ನಿರೂಪಿಸುತ್ತಾರೆ. ಅಲ್ಲಿನ ಮದುವೆಯ ಸಂದರ್ಭದಲ್ಲಿ ಮದುಮಗಳು ಮದುವೆಯಾದ ನಂತರ ಹೊರಬಾಗಿಲಿಗೆ ಎದುರಾಗಿ ನಿಂತು, ತನ್ನ ಕೈಯಲ್ಲಿರುವ ಹೂಗುಚ್ಛವನ್ನು ಹಿಂದು ಮುಂದಾಗಿ ಎಸೆಯಬೇಕು. ಅದನ್ನು ಅವಳ ಹಿಂದುಗಡೆ ಮದುವೆಯಾಗದ ಹುಡುಗಿಯರು ನಿಂತು ಹಿಡಿಯಬೇಕು. ಯಾರಿಗೆ ಹೂಗುಚ್ಛ ಸಿಗುತ್ತದೋ ಅವರಿಗೆ ಬೇಗ ಮದುವೆ ಆಗುತ್ತದೆ ಎಂಬುದು ಅವರಲ್ಲಿನ

ನಂಬಿಕೆಯಾಗಿದೆ. ಗರ್ಭಿಣಿಯರ ಬೇಬಿ ಶವರ್‌ಗಳಲ್ಲಿ(ಸೀಮಂತಶಾಸ್ತ್ರ) ಆಕೆಗೆ ತಿಳಿಯದಂತೆ ಸ್ನೇಹಿತರು ಮನೆಯವರು ನೆರವೇರಿಸುತ್ತಾರೆ. ಸಾಕಷ್ಟು ಕಾಣಿಕೆಗಳು ಹುಟ್ಟುವ ಮಗುವಿಗೂ ಲಭಿಸುತ್ತವೆ. ಕ್ಯಾಲಿಪೋರ್ನಿಯಾದ ಭಾರತೀಯ ಮಹಿಳೆಯರು ಸೀರೆ ಉಟ್ಟುಕೊಂಡು ಆಫೀಸಿಗೆ ಹೋಗುವುದಿಲ್ಲ. ಭಾರತೀಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮಾತ್ರ ಸೀರೆ ಉಟ್ಟು ಹೋಗುವ ಸಂಪ್ರದಾಯ ಅಲ್ಲಿನ ಭಾರತೀಯ ಮಹಿಳೆಯದ್ದಾಗಿದೆ. ಅಲ್ಲಿನ ಯುವತಿಯರು ಅಲಂಕಾರಕ್ಕೆ ಹೆಚ್ಚಿನ ಗಮನ ಕೊಡುವುದಿಲ್ಲ. ಲಿಪ್‌ಸ್ಟಿಕ್ ಕೂಡ ಉಪಯೋಗಿಸುವುದಿಲ್ಲ. ಎಲ್ಲಾದರೂ ಪಾರ್ಟಿ ಇದ್ದರೆ ಮಾತ್ರ ಸ್ವಲ್ಪ ಅಲಂಕೃತರಾಗುತ್ತಾರೆ. ಉಳಿದಂತೆ ಸಹಜ ಉಡುಪಾದ ಹರಕಲು ಪ್ಯಾಂಟು ಚಡ್ಡಿಯಲ್ಲೇ ತಿರುಗಾಡುತ್ತಾರೆ ಎಂದಿದ್ದಾರೆ.

ಕನ್ನಡ ಮಹಿಳಾ ಪ್ರವಾಸ ಕಥನಗಳಲ್ಲಿ ಮಹಿಳೆಯರ ಕ್ರಿಯಾಶೀಲ ಬದುಕಿನ ಅಭಿವ್ಯಕ್ತಿಯು ವಿಭಿನ್ನ ಆಯಾಮಗಳಿಂದ ಕೂಡಿದೆ. ಕೌಟುಂಬಿಕ ಬದುಕಿನಲ್ಲಿ ವಿದೇಶಿ ಮಹಿಳೆಯರು ವಿಭಿನ್ನವಾಗಿರುತ್ತಾರೆಂದು ಊಹಿಸುತ್ತೇವೆ. ಆದರೆ ಭಾರತದಲ್ಲಿರುವಂತೆ ಅಲ್ಲಿಯೂ ಗಂಡ, ಹೆಂಡತಿ, ಮಕ್ಕಳು, ಸಂಸಾರದ ತಾಪತ್ರಯಗಳಿವೆ. ಆದರೆ ಬಹುತೇಕವಾಗಿ ಅವಿಭಕ್ತ ಕುಟುಂಬಗಳು ಕಂಡುಬರುವುದಿಲ್ಲ. ವಿಭಕ್ತ ಕುಟುಂಟಗಳೇ ಹೆಚ್ಚಾಗಿವೆ. ಅಲ್ಲಿನ ಯುವಜನತೆಯು ಮದುವೆ ನಂತರದಲ್ಲಿ ಪ್ರತ್ಯೇಕವಾಗಿ ವಾಸಿಸುವ ಪರಿಪಾಠಗಳಿವೆ. ಒಟ್ಟಿನಲ್ಲಿ ಕುಟುಂಬ ರಚನೆಯಿಂದ ಆಧುನಿಕ ಕಾಲದಲ್ಲಿ ವಿಮುಖರಾಗುತ್ತಿದ್ದಾರೆ. ಉದ್ಯೋಗದ ಕಾರಣಕ್ಕಾಗಿ ಹೋದ ಭಾರತೀಯರು ಮಾತ್ರ ಭಾರತದಲ್ಲಿರುವ ತಂದೆ ತಾಯಿಗಳಿಗೆ ವಿದೇಶದ ನೆಲ ಒಗ್ಗದೆ, ಕುಟುಂಬದ ಜೊತೆ ಸೇರದೆ ಒದ್ದಾಡುವ ಭಾರತೀಯರು ಇದ್ದಾರೆ. ಆಧುನಿಕ ಕಾಲದ ವೇಗಕ್ಕೆ ತಕ್ಕಂತೆ ಆಲೋಚಿಸುವ ಮಹಿಳೆಯರು ಔದ್ಯೋಗಿಕ ವಲಯದಲ್ಲಿ ಸಾಕಷ್ಟು ಯಶಸ್ಸನ್ನು ಸಾಧಿಸಿದ್ದಾರೆ. ಆದರೆ ನಗರ ಮತ್ತು ಗ್ರಾಮಗಳಲ್ಲಿ ಮಹಿಳೆಯರ ಸ್ಥಿತಿಗತಿಗಳು ಭಿನ್ನವಾಗಿಯೇ ಇವೆ. ಪುರುಷನಿಗೆ ಮಾತ್ರಯಿದ್ದ ಕೌಟುಂಬಿಕ ನಿರ್ವಹಣೆಯ ಜವಾಬ್ದಾರಿ ಈಗ ಮಹಿಳೆಯರ ಮೇಲೆಯೂ ಇದೆ. ಅಲ್ಲದೇ ಮಹಿಳೆಯರು ಇಂದು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಬೆಳೆದು ಸಾಮಾಜಿಕ ವಲಯಗಳಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ. ರಾಜಕೀಯ, ಆರ್ಥಿಕ, ಶೈಕ್ಷಣಿಕ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ತಮ್ಮ ಕ್ರಿಯಾಶೀಲ ವ್ಯಕ್ತಿತ್ವದಿಂದಲೇ ಏನ್ನನಾದರೂ ಸಾಧಿಸುವ ಸಾಮರ್ಥ್ಯ ಮಹಿಳೆಯರಗಿದೆ ಎಂದು ಅನೇಕ ಲೇಖಕಿಯರು ತಮ್ಮ ಪ್ರವಾಸ ಕಥನಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

❑❑❑

ಅಧ್ಯಾಯ ಏಳು

ಪ್ರವಾಸ ಕಥನಗಳಲ್ಲಿ ಆಧುನಿಕ ಮಹಿಳಾ ಪ್ರಜ್ಞೆಯ ಅಭಿವ್ಯಕ್ತಿ

೭.೧. ಪ್ರವಾಸ ಕಥನಗಳಲ್ಲಿ ಸ್ತ್ರೀವಾದಿ ದೃಷ್ಟಿ-ಧೋರಣೆಗಳು

೭.೨. ಪ್ರವಾಸ ಕಥನಗಳಲ್ಲಿ ಪಾರಂಪರಿಕ ಪುರುಷ ಪ್ರಧಾನ ಮೌಲ್ಯ-ಮಡಿವಂತಿಕೆಗಳ ಪ್ರಶ್ನೆ

೭.೩. ಮಹಿಳಾ ಸಬಲೀಕರಣದ ತುಡಿತಗಳು

ಅಧ್ಯಾಯ ಏಳು

ಪ್ರವಾಸ ಕಥನಗಳಲ್ಲಿ ಆಧುನಿಕ ಮಹಿಳಾ ಪ್ರಜ್ಞೆಯ ಅಭಿವ್ಯಕ್ತಿ

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಮಹಿಳಾ ಪ್ರಜ್ಞೆಯನ್ನು ವಿಭಿನ್ನ ನೆಲೆಗಳಲ್ಲಿ ನಿರೂಪಿಸುವ ಸಾಹಿತ್ಯ ಪ್ರಕಾರವೆಂದರೆ ಪ್ರವಾಸ ಸಾಹಿತ್ಯ ಕತೆ, ಕಾದಂಬರಿ, ಸಣ್ಣಕಥೆ, ನಾಟಕಗಳಿಗಿಂತಲೂ ಪ್ರವಾಸ ಕಥನವು ಮಹಿಳಾ ಪ್ರಜ್ಞೆಯನ್ನು ಭಿನ್ನವಾಗಿ ಕಟ್ಟಿಕೊಡುತ್ತವೆ. ಈ ಕಥನಗಳು ಒಬ್ಬ ಮಹಿಳೆ, ಒಂದು ಕುಟುಂಬದ ಚಿತ್ರಣದಂತಿರದೆ ಒಂದು ರಾಜ್ಯ, ದೇಶ, ವಿದೇಶದ ಮಹಿಳಾ ಲೋಕವನ್ನು ಪರಿಚಯಿಸುತ್ತವೆ. ಭಾರತದ ಮಹಿಳಾ ಸಮಸ್ಯೆಗಳಿಗೂ ಇತರೆ ದೇಶಗಳ ಸಮಸ್ಯೆಗಳಿಗೂ ಹೆಚ್ಚು ಕಡಿಮೆ ಸಾಮ್ಯತೆಗಳಿವೆ. ಭೌಗೋಳಿಕವಾಗಿ ವಿಭಿನ್ನ ಆಚರಣೆಗಳು, ಸಂಪ್ರದಾಯಗಳು ಬೇರೆ ಬೇರೆ ಆಗಿದ್ದರೂ ಮಹಿಳೆಯರ ಮಾನಸಿಕ ಸ್ಥಿತಿ ಒಂದೇ ತೆರನಾಗಿದೆ. ಆದರೆ ಪ್ರಾಚೀನ ಕಾಲದಿಂದಲೂ ಮಹಿಳೆ ಸಾಂಸ್ಕೃತಿಕವಾಗಿ ಗುರುತಿಸಿಕೊಂಡಿದ್ದು ವಿರಳವಾಗಿದೆ. ಜಗತ್ತಿನೆಲ್ಲೆಡೆ ಎರಡನೇ ದರ್ಜೆಯ ಪ್ರಜೆಯಾಗಿ ಮಹಿಳೆ ಕಾಣಲಾಗಿದೆ. ಇದಕ್ಕೆ ಕಾರಣ ಪುರುಷ ಪ್ರಧಾನ ಮೌಲ್ಯಗಳು. ಇವುಗಳು ಆಧುನಿಕತೆಯ ಹೆಸರಿನಲ್ಲಿಯೂ ಮುಂದುವರೆದಿವೆ. ಆದರೆ ಇಂದು ಈ ಸಿಕ್ಕುಗಳಿಂದ ಬಿಡುಗಡೆಗೊಳ್ಳುವುದಕ್ಕೆ ಶಿಕ್ಷಣವನ್ನು ಪ್ರಧಾನ ಅಸ್ತ್ರದಂತೆ ಮಹಿಳೆ ಭಾವಿಸಿದ್ದಾಳೆ. ತನ್ನ ಮಾನಸಿಕ ಭಾವನೆಗಳ ತೋಳಲಾಟಗಳನ್ನು ಅದುಮಿಟ್ಟುಕೊಳ್ಳುವ ಪರಿಸ್ಥಿತಿಯಿಂದ ಹೊರಬಂದು, ಗಟ್ಟಿಧ್ವನಿಯಿಂದ ಪ್ರಶ್ನಿಸುವ ಮೂಲಕ ಪುರುಷನ ಸಮಾನವಾಗಿ ನಿಂತಿದ್ದಾಳೆ. ಸರ್ಕಾರಗಳು ಸಹ ಮಹಿಳೆಯರ ಪ್ರಾಮುಖ್ಯತೆ ಅರಿತು ಸಬಲೀಕರಣಕ್ಕಾಗಿ ಜನಪರವಾದ ಯೋಜನೆಗಳನ್ನು ಹಾಕಿಕೊಳ್ಳುತ್ತಲೇ ಇವೆ. ಅದರ ಫಲಿತಗಳು ಇನ್ನೂ ಸಂಪೂರ್ಣ ಯಶಸ್ಸು ಗಳಿಸುತ್ತಿಲ್ಲವಾದರೂ, ಸಮಸಮಾಜದ ಹಕ್ಕನ್ನು ಮಂಡಿಸುವುದೇ ಸ್ತ್ರೀವಾದ ಧೋರಣೆಗಳ ಪ್ರಮುಖವಾದ ಧ್ಯೇಯವಾಗಿದೆ. ಜಾಗತೀಕರಣ ಯುಗದಲ್ಲಿ ಆರ್ಥಿಕವಾಗಿ ಮಹಿಳೆಯರು ಸಬಲರಾದರೂ ಮಾನಸಿಕವಾಗಿ ಪರಂಪರೆಯ ಸಮಸ್ಯೆಗಳು ತಮ್ಮ ಶೋಷಣೆಯ ಆಯಾಮಗಳನ್ನೇ ಬದಲಾಯಿಸಿಕೊಂಡಿವೆ. ಅಂತಹ

ದೃಷ್ಟಿಕೋನಗಳನ್ನು ಬದಲಾಯಿಸಬೇಕಾದ ಸವಾಲುಗಳಿವೆ. ಅನೇಕ ರಂಗಗಳಲ್ಲಿ ಯಶಸ್ವಿಯಾಗಿ ತೊಡಗಿಕೊಂಡಿರುವ ಮಹಿಳೆಯರು ಇಂದು ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದುಕೊಂಡು ವಿಶ್ವದ ಗಮನ ಸೆಳೆಯುತ್ತಿದ್ದಾರೆ. ಇದು ಆಧುನಿಕತೆಯ ಒಂದು ಭಾಗವಾದರೆ, ಮತ್ತೊಂದು ಆಧುನಿಕತೆಯ ಮುಖ ಗ್ರಾಮೀಣ ಮಹಿಳೆಯರ ಜೀವನವನ್ನೇ ಸಂಕಷ್ಟಕ್ಕೆ ದೂಡಿದೆ. ನಗರ ಮತ್ತು ಗ್ರಾಮೀಣ ಮಹಿಳೆಯರ ಜೀವನ ವಿಧಾನವು ಬಹುತೇಕ ವಿರುದ್ಧ ದಿಕ್ಕಿನಲ್ಲಿಯೇ ಇದೆ. ಭಾರತಕ್ಕೆ ಮಾತ್ರ ಸೀಮಿತವಾಗದೆ ವಿದೇಶಿ ಮಹಿಳೆಯರ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಮಹಿಳಾ ಪ್ರವಾಸ ಕಥನಗಳನ್ನು ಗಮನಿಸಿದಾಗ ಇದು ಹೆಚ್ಚು ಸ್ಪಷ್ಟವಾಗುತ್ತದೆ. ಸ್ತ್ರೀವಾದದ ದೃಷ್ಟಿ ಧೋರಣೆಗಳಿಂದಾಗಿ ಆಧುನಿಕತೆಯಲ್ಲಿ ಪುರುಷ ಮೌಲ್ಯಗಳನ್ನು ಪ್ರಶ್ನಿಸುವ ಮೂಲಕ ಸಮಾಜದಲ್ಲಿ ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡ ಮಹಿಳೆಯು ಸಬಲೀಕರಣದತ್ತ ದಿಟ್ಟ ಹೆಜ್ಜೆ ಇಟ್ಟಿದ್ದಾಳೆ.

೭.೧. ಪ್ರವಾಸ ಕಥನಗಳಲ್ಲಿ ಸ್ತ್ರೀವಾದಿ ದೃಷ್ಟಿ-ಧೋರಣೆಗಳು

ಅಂತರರಾಷ್ಟ್ರೀಯ ಕಾಂಗ್ರೆಸ್ ಸಮಾವೇಶಕ್ಕೆ ಜರ್ಮನ್‌ಗೆ ಹೋದ ಲೇಖಕಿ ಅನುಪಮಾ ನಿರಂಜನರು ಆರೋಗ್ಯ ಇಲಾಖೆಯಲ್ಲಿ ಹೆಂಗಸರೇ ಹೆಚ್ಚಾಗಿರುವುದನ್ನು ತಮ್ಮ 'ಅಂಗೈಯಲ್ಲಿ ಯುರೋ ಅಮೇರಿಕ' ಎಂಬ ಕೃತಿಯಲ್ಲಿ ಗುರುತಿಸುತ್ತಾರೆ. ಜರ್ಮನ್‌ನ ಸಭೆಯೊಂದರಲ್ಲಿ ಆರೋಗ್ಯ ಇಲಾಖೆಯಲ್ಲಿ ಹೆಂಗಸರೇ ಹೆಚ್ಚು ಅನ್ನುತಾರೆ ನಿಜವೇ? ಎಂಬ ಪ್ರಶ್ನೆಗೆ ಅಲ್ಲಿನ ಆರೋಗ್ಯ ಮಂತ್ರಿಗಳು ಹೌದು ಶೇಕಡಾ ೮೫% ಮಹಿಳೆಯರೇ ಇದ್ದಾರೆ. ಯಾಕೆ ಅಂತ ನೀವು ಕೇಳಬಹುದು. ಅವರಿಗೆ ವಿಶೇಷವಾದ ಶಕ್ತಿಯಿದೆ. ಪ್ರತಿಯೊಂದನ್ನು ಕೂಲಂಕಷವಾಗಿ ವಿಚಾರ ಮಾಡೋ ಸಾಮರ್ಥ್ಯವಿದೆ ಸೇವಾತತ್ಪರತೆಯಿದೆ ಎಂದು ಉತ್ತರಿಸುತ್ತಾರೆ. ಇಲ್ಲಿನ ಮಹಿಳೆಯರು ಒಳ್ಳೆಯ ಉಪಾಧ್ಯಾಯರು ಹಾಗೂ ಸಂಶೋಧಕರು ಆಗಿದ್ದಾರೆ. ಈಗಾಗಿ ಅವರ ಮಾತಿಗೆ ಜರ್ಮನ್‌ನಲ್ಲಿ ಮನ್ನಣೆಯಿದೆ. ಈ ಕುರಿತು ಲೇಖಕಿ "ಸ್ತ್ರೀಯರ ಬಗ್ಗೆ ಪೂರ್ವಾಗ್ರಹಪೀಡಿತರಾಗದೆ ಅವರ ಸಾಧನೆಗಳನಷ್ಟೇ ಗಮನಿಸಿದ ಜರ್ಮನ್ ದೇಶವು ಸಾಮಾಜಿಕ ಮೌಲ್ಯಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಈ ಜನ ನಿಜವಾಗಿಯೂ ದೊಡ್ಡವರು"(ಅನುಪಮಾ ನಿರಂಜನ,೧೯೮೪, ಪುಟ-೯೪) ಎಂದಿದ್ದಾರೆ. ಜರ್ಮನ್ ದೇಶವು ಸ್ತ್ರೀಯರ ಶಕ್ತಿ ಸಾಮರ್ಥ್ಯ, ಪ್ರಾಮಾಣಿಕತೆಗಳನ್ನು ಅರಿತಿರುವ ಕಾರಣಕ್ಕೆ ಹೆಚ್ಚಿನ ಅವಕಾಶವನ್ನು ನೀಡಿದೆ. ಹಾಗೆಯೇ ಅಮೇರಿಕಾ ದೇಶದ ಅನೇಕ ಮಹಿಳಾವಾದಿಗಳಾದ ಸಿಮೋನ್ ದ ಬೋವಾ, ವರ್ಜಿನಿಯ ವುಲ್ಫ್, ಪ್ರಾನ್ಸಿಸ್ ವಿಲ್ಲರ್ಡ್‌ರ ಬಗ್ಗೆ ಮಾಹಿತಿ ನೀಡಿದ್ದಾರೆ. ಕ್ಯಾಪಿಟೋಲ್ ಭವನದ ಪ್ರತಿಮಾ ಗೃಹದಲ್ಲಿ ಸ್ತ್ರೀ ವಿಮೋಚನ ಚಳುವಳಿಯ ಪ್ರಾನ್ಸಿಸ್ ವಿಲ್ಲರ್ಡ್‌ರ ಪ್ರತಿಮೆಯಿದೆ. ಇಂದಿಗೂ ಈ ಪ್ರತಿಮೆಯು ಸ್ತ್ರೀವಾದದ ಸಂಕೇತದಂತಿದೆ ಎಂದಿದ್ದಾರೆ. ಸ್ತ್ರೀವಾದಿ ಚಳುವಳಿಯನ್ನು ವಿಶ್ವದ ಉದ್ದಗಲಕ್ಕೂ ಪರಿಚಯಿಸಿದ ಈ ಮಹಿಳೆಯರ ವಿಚಾರಧಾರೆಗಳನ್ನು ಅರಿಯಬೇಕಾದ ಅಗತ್ಯವಿದೆ ಎಂದು ಲೇಖಕಿ ಪ್ರಸ್ತಾಪಿಸುತ್ತಾರೆ.

ಹವ್ಯಾಸಿ ಪ್ರವಾಸಿಗರಾದ ಎಚ್.ಎಸ್.ಅನುಪಮಾ ಅವರು ಐರಿಸ್ ನಗರದಲ್ಲಿ ಸುತ್ತಾಡುವಾಗ ಅಲ್ಲಿನ 'ಅಮ್ಮಂದಿರ ಚೌಕ'ವು ಸ್ತ್ರೀವಾದಿ ಧೋರಣೆಯನ್ನು ಕಲಿಸುವ ಮುಖ್ಯ ವೇದಿಕೆಯಾದ ಬಗ್ಗೆ ದಾಖಲಿಸುತ್ತಾರೆ. ನಗರದ ಮುಖ್ಯ ಚೌಕ 'ಪ್ಲಾಜಾ ಡಿ ಮೇಯೊ' ಬಳಿ ೪೦ ವರ್ಷಗಳಿಂದಲೂ ಪ್ರತಿ ಗುರುವಾರ ಸಂಜೆ ಅಮ್ಮಂದಿರು ಬಂದು ಸೇರುತ್ತಾರೆ. ವಿಶ್ವದಾದ್ಯಂತ ನಡೆದ ಮಾನವ ಹಕ್ಕುಗಳ ಉಲ್ಲಂಘನೆಗಳ ಬಗ್ಗೆ ಚರ್ಚಿಸಿ ಪ್ರತಿಭಟನೆಗೆ ಇಳಿಯುತ್ತಾರೆ. ಬಹುತೇಕ ಮಧ್ಯಮ ವಯಸ್ಸಿನ ಮಹಿಳೆಯರೇ ಸೇರುವುದರಿಂದ ಈ ಸ್ಥಳವು 'ಅಮ್ಮಂದಿರ ಚೌಕ' ಎಂದು ಹೆಸರು ಬಂದಿದೆ. ವಿಶ್ವದಾದ್ಯಂತ ಮಹಿಳೆಯರ ಮೇಲೆ ನಡೆಯುವ ಶೋಷಣೆಯ ವಿಷಯಗಳು ಇಲ್ಲಿ ಚರ್ಚಿತವಾಗುತ್ತವೆ. ಈ ಚೌಕದ ಉದ್ದೇಶವೆಂದರೆ, ಮಹಿಳೆಯರ ಮೇಲೆ ನಡೆಯುವ ದುರ್ಘಟನೆಗಳನ್ನು ಜಗತ್ತಿಗೆ ಸಾರುವ ಮೂಲಕ ಪುರುಷ ಹಿಂಸಾತ್ಮಕ ನಡೆಗಳನ್ನು ವಿರೋಧಿಸುವುದಾಗಿದೆ. ಅವರ 'ಚೆಗೆವಾರನ ನೆಲದಲ್ಲಿ' ಎಂಬ ಪ್ರವಾಸ ಕಥನದಲ್ಲಿ ಮಹಿಳಾ ಚಳುವಳಿಯ ಸ್ವರೂಪ, ಸಂಘಟನೆಯ ಶಕ್ತಿ, ದೃಷ್ಟಿ ಧೋರಣೆಗಳು, ಚಳುವಳಿಯನ್ನು ಕಟ್ಟಿಬೆಳೆಸುವ ಕುರಿತು "ರಾಜಕೀಯ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಬದಿಗಿರಿಸಿ ಮಹಿಳೆಯರು ಜೀವಪರ ಸಂಘಟನೆ ಕಟ್ಟಬೇಕಿದೆ. ಸ್ತ್ರೀವಾದವೆಂಬುದು ಕೇವಲ ಹಕ್ಕಿನ ಹೋರಾಟವಷ್ಟೇ ಅಲ್ಲ, ಎಲ್ಲವನ್ನು ಒಳಗೊಂಡು ನೇರ್ಪಡಿಸುವ ಭರವಸೆಯ ತಾಯ್ತನ. ಹಾಗಿರುತ್ತ ತಮ್ಮ ತರುಣ ಪ್ರತಿಭಾವಂತ ಮಕ್ಕಳನ್ನು ಸಮಾಜದ ಅಸೂಕ್ಷ್ಮ, ಅನ್ಯಾಯಗಳಿಗೆ ಕಳಕೊಂಡ ಭಾರತದ ತಾಯಂದಿರಿಗೆ ಅರ್ಜೆಂಟೀನಾ ಅಮ್ಮಂದಿರ ಮಾದರಿ ಕೈದೀಪವಾಗಬಹುದು". (ಅನುಪಮಾ.ಎಚ್.ಎಸ್., ೨೦೧೭, ಪುಟ-೬೪) ಎಂದಿದ್ದಾರೆ. ಅರ್ಜೆಂಟೀನಾದಲ್ಲಿ ಮಹಿಳೆ ಮತ್ತು ತಾಯಂದಿರ ಮೇಲಾದ ಶೋಷಣೆ, ಅಮಾನುಷ ಹತ್ಯೆಗಳು ಅಲ್ಲಿನ ಮಹಿಳಾ ಚಳುವಳಿಗಳಿಗೆ ಕಾರಣವಾದವು. ಲೇಖಕಿಯ ಸ್ತ್ರೀವಾದದ ದೃಷ್ಟಿ-ಧೋರಣೆಗಳ ಬಗೆಗಿನ ಈ ಅಭಿಪ್ರಾಯಗಳು ವಾಸ್ತವ ಸಮಾಜಕ್ಕೆ ಹೆಚ್ಚು ಅರ್ಥಪೂರ್ಣವಾದ ಮಾತುಗಳಾಗಿ ಕಾಣುತ್ತವೆ.

ಕೇರಳ ರಾಜ್ಯದ ಧಾರ್ಮಿಕ ಆಚರಣೆಗಳಲ್ಲಿ ಮಹಿಳೆಯರು ಮುಖ್ಯವಾದ ಬಗ್ಗೆ ಶಾಂತಾದೇವಿ ಮಾಳವಾಡ ಅವರು 'ಶ್ರೀಗಿರಿಯಿಂದ ಹಿಮಗಿರಿಗೆ' ಎಂಬ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಕೇರಳ ರಾಜ್ಯ ಸ್ತ್ರೀ ಪ್ರಧಾನವಾದ ರಾಜ್ಯವಾದ ಬಗ್ಗೆ ಪುರಾಣ ಕಥೆಯ ಕುರಿತು ಲೇಖಕಿಯ ಅನಿಸಿಕೆಗಳು ಹೀಗಿದೆ. "ಪರುಶುರಾಮನ ತಂದೆ ಜಮದಗ್ನಿಯ ಆಜ್ಞೆಯಂತೆ ತಾಯಿ ರೇಣುಕಾಂಬೆಯನ್ನು ಕೊಲೆ ಮಾಡಿದನು. ಆಕೆ ದೇವರ ಅನುಗ್ರಹದಿಂದ ಪುನರ್ಜನ್ಮ ತಳೆದಾಗ, ಪರಶುರಾಮ ತಾಯಿಯ ಬಳಿ ಬಂದು ಕ್ಷಮೆ ಕೇಳಿದನಂತೆ. ತಾಯಿ ನನ್ನಿಂದ ಅಪರಾಧವಾಗಿದೆ ಪ್ರಾಯಶ್ಚಿತ್ತವಾಗಿ ನಾನೇನು ಮಾಡಲಿ? ಅದಕ್ಕೆ ರೇಣುಕಾದೇವಿ ಮಗನೇ! ಈ ನಾಡಿನಲ್ಲಿ ಸ್ತ್ರೀಯರನ್ನು ಗೌರವದಿಂದ ಕಾಣಬೇಕು, ಮಾತೃ ಪ್ರಧಾನವಾದ ದೇಶವಾಗಬೇಕು ಎಂದು ಆದೇಶವಿತ್ತುದ್ದರಿಂದ ಕೇರಳ ರಾಜ್ಯದಲ್ಲಿ ಸ್ತ್ರೀಯರಿಗೆ ಹೆಚ್ಚಿನ ಮಾನ್ಯತೆ

ದೊರೆತಿದೆ."(ಶಾಂತಾದೇವಿ ಮಾಳವಾಡ, ೧೯೮೫, ಪುಟ-೧೧೫) ಪುರಾಣದ ಈ ವಿವರಗಳು ದೇವರ ನಾಡು ಎಂದು ಹೆಸರಾದ ಕೇರಳ ರಾಜ್ಯದಲ್ಲಿ ಮಹಿಳೆಯರಿಗೆ ಗೌರವ ಆದರಗಳು ಕೊಡುವುದಕ್ಕೆ ಕಾರಣವಾಗಿದೆ ಎನ್ನುತ್ತಾರೆ. ಒಂದು ಪ್ರದೇಶದ ಸ್ತ್ರೀಯರ ಬಗೆಗಿನ ದೃಷ್ಟಿಧೋರಣೆಗಳ ದ್ಯೋತಕವಾಗಿ ಅಲ್ಲಿನ ಪುರಾಣ, ಜನಪದ ಕಥೆಗಳು, ಧಾರ್ಮಿಕ ನಂಬಿಕೆಗಳು ಪ್ರಧಾನ ಪಾತ್ರ ವಹಿಸುವ ಭಾರತದಲ್ಲಿ, ಸ್ತ್ರೀ ಪ್ರಾಧಾನ್ಯತೆಗೆ ಪುರಾಣ ಪರಂಪರೆ ಕಾರಣವಾಗಿರಬಹುದಾಗಿದೆ. ಹೀಗಾಗಿಯೇ ಏನೋ ಅಲ್ಲಿನ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಅಧಿಕವಾಗಿದೆ. ಪುರಾಣದ ಕಥೆ ಸ್ತ್ರೀಪ್ರಧಾನತೆಯನ್ನು ಸೂಚಿಸಿದರೂ, ತದನಂತರದ ಕಾಲದಲ್ಲಿ ಪುರುಷ ಪ್ರಧಾನ ರಾಜ್ಯವಾಗಿ ಮಾರ್ಪಟ್ಟಿದೆ.

ಓರಾನ್ ದೇಶದ ಹೆಂಗಸರು ತಮ್ಮ ಬಳಿ ಯಾರಾದರೂ ಅನುಚಿತ ವರ್ತನೆ ಮಾಡಿದರೆ, ರಕ್ಷಣೆಗಾಗಿ ತಮ್ಮ ತಲೆ ಕೂದಲಿನ ಗಂಟಿನಲ್ಲಿ ಚಾಕುಗಳನ್ನಿಟ್ಟು ಕೊಂಡಿರುತ್ತಾರೆ. ಕೆಟ್ಟ ವರ್ತನೆ ತೋರಿದರೆ, ರಕ್ಷಣೆಗಾಗಿ ಚಾಕುವಿನಿಂದ ತಿವಿಯುತ್ತಾರೆ ಎಂದು ವಿಜಯಾ ದಬ್ಬೆ ಅವರು 'ಉರಿಯ ಚಿಗುರು ಉತ್ಕಲೆ' ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಈ ಅಂಶವನ್ನು ಗಮನಿಸಿದಾಗ ಅಲ್ಲಿನ ಮಹಿಳೆಯರಲ್ಲಿ ಅಭದ್ರತೆ ಎನ್ನುವುದು ಎಷ್ಟರಮಟ್ಟಿಗಿತ್ತು ಎಂದು ಸೂಚಿಸುತ್ತದೆ. ಓರಾನ್ ಮಹಿಳೆಯರ ಮೇಲೆ ಅತ್ಯಾಚಾರ ಹೆಚ್ಚಾಗಿ ನಡೆಯುವ ಪ್ರದೇಶವಾಗಿರಬೇಕು, ಇಲ್ಲವಾದಲ್ಲಿ ಮಹಿಳೆಯರು ಸ್ವರಕ್ಷಣೆಗೆ ತಲೆ ಕೂದಲಿನಲ್ಲಿ ಚಾಕು ಇಟ್ಟುಕೊಂಡು ಓಡಾಡುವ ಪರಿಸ್ಥಿತಿಯೇ ಇರುತ್ತಿರಲಿಲ್ಲ. ಅಲ್ಲದೇ ಓರಾನ್ ಮಹಿಳೆಯರು 'ಹಾಂಡಿ' ಎನ್ನುವ ಮತ್ತು ಬರಿಸುವ ಪಾನೀಯವನ್ನು ಕುಡಿಯುತ್ತಾರೆ. ದೇಶೀಯ ಗರ್ಭ ನಿರೋಧಕ ಔಷಧಿ ಮತ್ತು ಹಾಂಡಿ ಕುಡಿತ ಸಾಮಾನ್ಯವಾಗಿದೆ. ಈ ಮತ್ತಿನ ಪಾನೀಯವು ಮಹಿಳೆಯರನ್ನು ಲೈಂಗಿಕ ಹಿತಾಸಕ್ತಿಗೆ ಪ್ರೇರೆಪಿಸುವುದರಿಂದ ಗರ್ಭಕ್ಕೆ ಕಾರಣರಾಗುತ್ತಿದ್ದಾರೆ. ಈ ಕುಡಿತದ ದುಶ್ಚಟಗಳಿಗೆ ಬಲಿಯಾಗಿರುವ ಕಾರಣಕ್ಕೆ ಅವರಿಗೆ ಸರಿಯಾದ ಶಿಕ್ಷಣ, ಲೈಂಗಿಕ ಶಿಕ್ಷಣ, ಸ್ತ್ರೀವಾದತನದ ಮನೋಭಾವಗಳನ್ನು ಬೆಳಸಬೇಕಿದೆ. ಮಹಿಳಾ ದೃಷ್ಟಿಧೋರಣೆಗಳ ಬಗ್ಗೆ ಜಾಗೃತಿಯನ್ನುಂಟು ಮಾಡಲು ಅಲ್ಲಿನ ಸಂಘ ಸಂಸ್ಥೆಗಳು, ಸರ್ಕಾರಗಳು ಗಮನಹರಿಸಬೇಕಿದೆ ಎಂದು ಲೇಖಕಿ ಅಭಿಪ್ರಾಯಪಡುತ್ತಾರೆ.

ಬಿ.ಎನ್.ಸುಮಿತ್ರಾಬಾಯಿ ಅವರು ಅಸ್ಸಾಂನ ಖ್ಯಾತ ಲೇಖಕಿ ಅನಿಮಾದತ್ತ ಅವರನ್ನು ಭೇಟಿ ಮಾಡಿದಾಗ, ಅಲ್ಲಿನ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ತಮ್ಮ 'ಬ್ರಹ್ಮಪುತ್ರದ ಕಣಿವೆಯಲ್ಲಿ' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಅಸ್ಸಾಂನಲ್ಲಿ ಸ್ತ್ರೀಯರಿಗೆ ಎಷ್ಟೇ ಗೌರವ ಆದರಗಳಿದ್ದಾಗ್ಯೂ ಶಿಕ್ಷಣದಿಂದ ಹೆಚ್ಚು ಪ್ರಜ್ಞಾವಂತರಾಗಿದ್ದಂತೆ ಕಂಡುಬರುವುದಿಲ್ಲ. ಅಲ್ಲಿನ ಶಿಕ್ಷಣ ವ್ಯವಸ್ಥೆಯಲ್ಲಿ ಏನೋ ಕೊರತೆ ಉಳಿದಂತೆ ಲೇಖಕಿಗೆ ಭಾಸವಾಗಿದೆ. ಏಕಾಕಿತನ, ಪ್ರತ್ಯೇಕತೆ ಹಾಗೂ ನಿರ್ಲಕ್ಷಿತ ನೋಟಗಳನ್ನು ಅನುಭವಿಸಿದಂತೆ ಅಲ್ಲಿನ ಮಹಿಳೆಯರು ಕಂಡುಬಂದಿದ್ದಾರೆ. ಅಸ್ಸಾಂ ಸಾಂಸ್ಕೃತಿಕವಾಗಿ ವೈವಿಧ್ಯಮಯ ನಾಡಾಗಿದ್ದು, ಮಹಿಳೆಯರು ಸಾಮಾಜಿಕವಾಗಿ ಗುರುತಿಸಿಕೊಳ್ಳದೇ,

ಅಕ್ಷರಸ್ಥೆಯರು ಕೂಡ ಸ್ತ್ರೀವಾದಿ ಧೋರಣೆಗಳನ್ನು ಹೊಂದದೆ ನಿರ್ಲಕ್ಷತೆಗೆ ಒಳಗಾಗಿರುವ ಕುರಿತು ಲೇಖಕಿ "ಮಹಿಳೆಯರ ವಿಮರ್ಶಾ ಮಾನದಂಡಗಳೇ ಮುಖ್ಯವಾಗಿರುವಾಗ ಕನ್ನಡದ ಲೇಖಕಿಗಾಗಲಿ ಅಸ್ಸಾಮೀ ಲೇಖಕಿಗಳಿಗಾಗಲಿ ಭೇದವಿಲ್ಲ ಎಂದು ಇದರಿಂದ ನಿಮಗೆ ಅರ್ಥವಾಗಬಲ್ಲದು ಎನ್ನುತ್ತಾರೆ. ಆದರೆ ಕನ್ನಡ ಸಾಹಿತ್ಯ ಅಕಾಡಮಿಯ ಪ್ರಶ್ನೆ ಬಂದಾಗ ನಮ್ಮವರೇ ಕನ್ನಡ ಅಕಾಡಮಿಯಲ್ಲೂ ಇದ್ದರು. ಆದರೆ ಅವರಿಗೆ ನಮ್ಮಲ್ಲಿ ಯಾವೊಬ್ಬ ಲೇಖಕಿಯಲ್ಲೂ ಲೇಖಕಿಯನ್ನು ಸಮಾನರೆಂದು ಕಾಣಬಲ್ಲ ರೀತಿ ಮನಸುಗಳಿಲ್ಲ. ಅದ್ದರಿಂದ ಕನ್ನಡದ ಲೇಖಕಿಯರಾರಿಗೂ ಅಖಿಲ ಭಾರತದ ಮಟ್ಟದಲ್ಲಿ ಪುರಸ್ಕಾರ ಸಿಕ್ಕಿಲ್ಲದಿದ್ದರೆ ಲೇಖಕಿಯರ ಅನರ್ಹತೆಯೊಂದೇ ಕಾರಣ ಅಲ್ಲ. ನಮ್ಮದು ಎಂದು ಸ್ತ್ರೀ ಪ್ರಧಾನ ಸಮಾಜವಾಗಿತ್ತು ತಿಳಿಯದು. ಈಗಂತೂ ನಾವು ಬದುಕುತ್ತಿರುವುದು ಪುರುಷ ಪ್ರಧಾನ ಸಮಾಜದಲ್ಲೇ ಎನ್ನುವುದರಲ್ಲಿ ನನಗೆ ವ್ಯಥೆಯಾಗಿತ್ತು. ಕನ್ನಡತಿಯ ಹೆಮ್ಮೆ ಕೇವಲ ಪರಂಪರೆಯ ನೆನಪಿನಲ್ಲಷ್ಟೇ ಉಳಿದಿದ್ದು, ಇಂದಿನ ವಾಸ್ತವ ಬದುಕಿನಲ್ಲಿ ಆ ಹೆಮ್ಮೆಗೆ ಏನು ಅರ್ಥವಿದೆ ಎಂದು ನಾನು ಯೋಚಿಸತೊಡಗಿದೆ." (ಸುಮಿತ್ರಾಬಾಯಿ.ಬಿ.ಎನ್., ೧೯೯೮, ಪುಟ-೫೫) ಎನ್ನುತ್ತಾರೆ.

ಅಸ್ಸಾಂನ ಗ್ರಾಮೀಣ ಹಾಗೂ ನಗರದ ಹೆಣ್ಣು ಮಕ್ಕಳ ಬದುಕಿನ ನಾನಾ ನೋವು ನಲಿವುಗಳನ್ನು ಕುರಿತು 'ನಿರುಪಮಾ ಬರ್‌ಗೊಹೈನ್' ತನ್ನ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಅವರು ಸಮಾಜವಾದಿ ದೃಷ್ಟಿಕೋನದಿಂದಾಗಿ ಅದರಲ್ಲೂ ಕುಟುಂಬ ವ್ಯವಸ್ಥೆಯೊಳಗಿನ ಹೆಣ್ಣಿನ ದಿಗ್ಬಂಧನಗಳ ಸೂಕ್ಷ್ಮ ಒಳನೋಟಗಳನ್ನು ಬರೆಯುವವರಾಗಿದ್ದಾರೆ. ಹೆಣ್ಣಿಗೆ ಕುಟುಂಬ ಮಾತ್ರವಲ್ಲದೇ ಸಮಾಜದ ಹಲವು ರಂಗಗಳಲ್ಲಿಯೂ ದಿಗ್ಬಂಧನಗಳಿವೆ. ಈ ಸ್ತ್ರೀವಾದಿ ಧೋರಣೆಗಳಿರುವ ಲೇಖಕಿಯರಲ್ಲೂ ಇಂತಹ ತಾರತಮ್ಯಗಳಿರುವ ಬಗ್ಗೆ ಕಾದಂಬರಿಕಾರ್ತಿ ನಿರುಪಮಾ ಬರ್‌ಗೊಹೈನ್‌ರು ಪ್ರಸ್ತಾಪಿಸಿರುವುದನ್ನು ಬಿ.ಎನ್.ಸುಮಿತ್ರಾಬಾಯಿ ಅವರು ತಮ್ಮ ಪ್ರವಾಸ ಕಥನದಲ್ಲಿ ಹೀಗೆ ಉಲ್ಲೇಖಿಸಿರುತ್ತಾರೆ. "ವಿಮರ್ಶೆಯಲ್ಲಿ ಮಹಿಳೆಯರಲ್ಲಿ ಮಹಿಳೆಯರನ್ನು ಗಂಭೀರವಾಗಿ ಪರಿಗಣಿಸುವುದರಲ್ಲಿ ಮತ್ತು ಸಾಹಿತ್ಯ ಪರಂಪರೆಯಲ್ಲಿ ತಕ್ಕ ಸ್ಥಾನ ನೀಡುವುದರಲ್ಲಿ ಇಲ್ಲಿ ಕೂಡ ತಾರತಮ್ಯ, ಉದಾಸೀನತೆಗಳು ಇದ್ದೇ ಇದೆ."(ಅದೇ, ಪುಟ-೭೫) ಆಡಳಿತ, ಅಧಿಕಾರದ ಸ್ಥಾನಮಾನಗಳು ಮಹಿಳೆಯರಿಗೂ ಮುಖ್ಯವಾಗಿದ್ದರೂ, ಪುರುಷರ ಅಧಿಕಾರದ ದಾಹಕ್ಕೆ ಸಿಲುಕಿ ಕೈತಪ್ಪಿಹೋಗುತ್ತಿವೆ. ಈ ಬಗ್ಗೆ ಚಿಂತಿಸದೆ ಮಹಿಳಾ ಲೇಖಕಿಯ ಯಶಸ್ಸಿನ ಹಿಂದೆ ಪರಿಶ್ರಮ, ಮಾಡಿದ ಪ್ರಯತ್ನಗಳಿಂದಲೇ ಓದುಗರ ಮನಸಿನಲ್ಲಿ ಸ್ಥಾನ ಪಡೆಯುವುದೇ ಮುಖ್ಯವೆಂದು ಲೇಖಕಿ ಭಾವಿಸುತ್ತಾರೆ. ಯಾವುದೇ ಪುರುಷರ ಅನುಗ್ರಹವಾಗಲೀ, ಆಶ್ರಯದಂತ ಧೋರಣೆಯಾಗಲೀ ಅಗತ್ಯವಿಲ್ಲವೆಂದು ಸಾರುವ ಲೇಖಕಿಯು ಸ್ವಪ್ರಯತ್ನದಿಂದ ಮುಂದೆ ಬಂದು ಪ್ರಭಾವಶಾಲಿ ಜನರ ಸಂಪರ್ಕದಿಂದ ಜನಪ್ರಿಯರಾದ ಬಗ್ಗೆ ಹೆಮ್ಮೆಪಡುತ್ತಾರೆ.

ಗೋವಾದ ಹೋಟೆಲ್‌ನಲ್ಲಿ ಯುವತಿಯರು ಲೈಂಗಿಕ ಕಾರ್ಯಕರ್ತೆಯಾಗಿ ದುಡಿದು, ಗರ್ಭಿಣಿಯಾಗಿ ಮಕ್ಕಳನ್ನು ಪಡೆಯುವವರ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ಸುಧಾ ಚಿದಾನಂದ

ಗೌಡ ಅವರು 'ಸಮನ್ವಿತೆ ಗೋಮಾಂತ' ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಅಲ್ಲಿನ ಹೋಟೆಲ್‌ಗಳಲ್ಲಿ ಊಟ, ಬಟ್ಟೆ, ಉಡುಪು, ಮೇಕಪ್ಪು, ಇರಲು ರೂಮು ನೀಡಿ ಹೆಣ್ಣುಮಕ್ಕಳನ್ನು ವೇಶ್ಯೆರಾಗಿಸುತ್ತಾರೆ. ಅಂತಹ ಹುಡುಗಿಯರು ಗರ್ಭಿಣಿಯರಾಗಿ, ಮಗು ಹುಟ್ಟಿ, ದೊಡ್ಡವರಾದ ಬಳಿಕ ತನ್ನ ತಂದೆಯನ್ನು ಕೇಳಿದರೆ, ತನ್ನ ಹುಟ್ಟಿನ ಗುಟ್ಟು ಗೋತ್ತಾದರೆ? ಆಕೆ ಉತ್ತರಿಸಬಲ್ಲಳೇ? ವಯಸ್ಸು ಆಕೆಯ ದೇಹವನ್ನು ಆಕ್ರಮಿಸಿದ ಬಳಿಕ ದುಡಿಯುವ ಮಾರ್ಗ ಹುಡುಕಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಲಾಭದ ಆಸೆಗಾಗಿ ದೇಹವನ್ನೇ ವ್ಯಾಪಾರಕ್ಕೆ ಇಳಿಸಿದ ಸಮಾಜವು ಯಾಕಿಷ್ಟು ಕ್ರೂರವಾಗುತ್ತದೆ. ಈ ಕುರಿತು ಫೆಮಿನಿಸ್ಟರು ಏನು ಹೇಳಬಲ್ಲರು? ಎನ್ನುವ ಪ್ರಶ್ನೆಗಳು ಲೇಖಕಿಗೆ ಕಾಡಿಸುತ್ತವೆ. ಹೋಟೆಲ್‌ಗಳು ಗ್ರಾಹಕರನ್ನು ಆಕರ್ಷಿಸುವುದಕ್ಕೆ, ವ್ಯವಹಾರಿಕವಾಗಿ ಲಾಭ ಗಳಿಕೆಗೋಸ್ಕರ ಮಹಿಳೆಯರನ್ನು ಕೆಲಸದ ಆಸೆ, ಹಣದ ಆಸೆಗಳಿಗೆ ಬಲಿಕೊಡುವುದನ್ನು ಕಂಡಾಗ ಗೋವಾದಲ್ಲಿ ಹೆಣ್ಣುಮಕ್ಕಳನ್ನು ಮಾರಾಟದ ಸರಕಿನಂತೆ ಕಾಣುತ್ತಾರೆಂದು ಲೇಖಕಿ ಆತಂಕ ವ್ಯಕ್ತಪಡಿಸುತ್ತಾರೆ. ಈ ಕುರಿತು ಫೆಮಿನಿಸ್ಟ್ ಸಂಘಟನೆಗಳು ಹೋರಾಟಗಳ ಮುಖಾಂತರ ಗೋವಾ ಸರ್ಕಾರದ ಕಣ್ಣು ತೆರೆಸಬೇಕಿದೆ. ಇಲ್ಲವಾದರೆ ಮಹಿಳೆಯರನ್ನು ನಿರ್ಲಕ್ಷ್ಯಕ್ಕೆ ದೂಡಿದಾಗ ಆಕೆಯ ಬದುಕು ಯಾತನಮಯವಾಗುತ್ತದೆ. ಕುರಿತು ಲೇಖಕಿಯು "ಸ್ತ್ರೀವಾದಿಗಳೆನಿಸಿಕೊಂಡವರು ಮೊದಲು ವಿರೋಧಿಸಬೇಕಾದದ್ದು ಟೂರಿಸ್ಟ್ ಬ್ರೋಷರ್‌ಗಳಲ್ಲಿ ಹೆಣ್ಣು ಮಕ್ಕಳು ಅರೆಬೆತ್ತಲೆಯಾಗಿ ಬೀಚ್‌ನಲ್ಲಿ ಓಡಾಡುತ್ತಿರುವ ದೃಶ್ಯಗಳನ್ನು, ಬೇಕಾಬಿಟ್ಟಿ ಬಳಸಿಕೊಳ್ಳುವುದಕ್ಕಾಗಿ ಅಲ್ಲಿ ಹೆಣ್ಣಿನ ದೇಹವೆಂಬುದೂ ಒಂದು ಸರಕು ನಿಜ. ಈ ಪರಿಸ್ಥಿತಿ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಇದೆ. ಆದರೆ ಗೋವಾದಲ್ಲಿರುವುದು ಅತಿರೇಕ. ಪ್ರವಾಸದ ಉದ್ದೇಶವೇ ದೈಹಿಕ ಸುಖ ಎಂಬಂತೆಯೂ, ಸಂಗಾತಿಗಳು ಇಲ್ಲಿ ಆರಾಮಾಗಿ ಸಿಗುತ್ತಾರೆ ಎಂಬಂತೆಯೂ ಇಲ್ಲಿ ಸಂದೇಶವೊಂದು ಮುಕ್ತವಾಗಿ ರವಾನೆಯಾಗಿ ಬಿಡುತ್ತದೆ. ನಿಜಕ್ಕೂ ಈ ರೀತಿಯ ಬಾಹ್ಯ ಪ್ರದರ್ಶನಕ್ಕೆ ಒಗ್ಗಿಕೊಂಡಿರುವ ಮಹಿಳೆಯರು ಅತಿ ಕಡಿಮೆ. ಕೌಟುಂಬಿಕ ಚೌಕಟ್ಟಿನಲ್ಲಿದ್ದುಕೊಂಡು ಸಣ್ಣಪುಟ್ಟ ಕೆಲಸಗಳಲ್ಲಿ ಆ ಮನೆಗೆಲಸಗಳಲ್ಲಿ ತೊಡಗಿಕೊಂಡಿರುವವರ ಶೇಕಡವಾರು ಅಂಕಿ ಅಂಶವೇ ದೊಡ್ಡದಿದೆ." (ಸುಧಾ ಚಿದಾನಂದಗೌಡ, ೨೦೧೭, ಪುಟ-೪೮) ಎಂದು ಅಭಿಪ್ರಾಯ ಪಡುತ್ತಾರೆ. ದೈಹಿಕ ಹಿಂಸೆಗಳಿಂದಲೇ ಮಹಿಳೆಯರ ಬದುಕು ಛಿದ್ರಗೊಳ್ಳುತ್ತಿದ್ದರಿಂದ ಗೋವಾದ ಲಿಂಗಾನುಪಾತವು ಕುಸಿದಿದೆ. ೨೦೧೬ರ ಅಂಕಿ ಅಂಶಗಳ ಪ್ರಕಾರ ಗೋವಾದಲ್ಲಿ ೧೦೦೦ ಗಂಡಸರಿಗೆ ೯೬೦ ಹೆಂಗಸರಿದ್ದಾರೆ. ಹೆಣ್ಣನ್ನು ಪ್ರವಾಸಿಗರ ಸರಕಾಗಿ ನೋಡುವವರಿಂದಾಗಿ ಈ ಅಂಕಿಅಂಶಗಳು ಕುಸಿದಿರುವ ಸಾಧ್ಯತೆಗಳಿವೆ. ಹೀಗಾಗಿಯೇ ಗೋವಾದ ಲಿಂಗಾನುಪಾತವು ಅಪಾಯಕ್ಕೆ ಕಾರಣವಾಗಿದೆ. ಜನಸಂಖ್ಯೆ ಕಡಿಮೆ ಇರುವ ಕಾರಣಕ್ಕೆ ಸಾಕ್ಷರತೆಯ ಪ್ರಮಾಣ ಶೇ. ೮೦ಕ್ಕೂ ಹೆಚ್ಚಿದೆ. ಇದು ಸಮಾಧಾನಕರವಾದರೂ ಗೋವಾದ ವೇಶ್ಯಾವಾಟಿಕೆಯಲ್ಲಿ ವಿದ್ಯಾವಂತರೇ ಪಾಲ್ಗೊಂಡಿದ್ದಾರೆ. ಪೂರ್ಣ ಪ್ರಮಾಣದ ಉದ್ಯೋಗವಿಲ್ಲದೆ, ಕೌಟುಂಬಿಕ ಒತ್ತಡಗಳಿಂದಲೇ ವೈಯಕ್ತಿಕವಾದ ಆಮಿಷಗಳಿಂದಾಗಿಯೋ

ವೇಶ್ಯೆವಾಟಿಕೆ ಜಾಲಕ್ಕೆ ಸಿಲುಕಿಕೊಳ್ಳುತ್ತಾರೆ. ಮಾನವ ಸಾಕಾಣಿಕೆಯು ನಿರಂತರವಾಗಿ ನಡೆಯುತ್ತಿರುವ ಕುರಿತು ಮಾಧ್ಯಮಗಳು ಸಹ ಅನೇಕ ಭಾರಿ ಬಯಲು ಮಾಡಿರುವುದೇ ಇದಕ್ಕೆ ಸಾಕ್ಷಿಯಾಗಿವೆ.

ಗೋವಾದ ಶ್ರೀಮಂತ ಸ್ಥಳಗಳಲ್ಲಿ ನಡೆಯುವ ವೇಶ್ಯಾವಾಟಿಕೆ, ಕೇರಳದಲ್ಲಿ ಮತ್ತೊಂದು ಸ್ವರೂಪ ತಾಳಿರುವುದು ಪ್ರಜ್ಞಾ ಮತ್ತಿಹಳ್ಳಿ ಅವರ 'ದೇವರ ಸ್ವಂತ ನಾಡಿನಲ್ಲಿ' ಎಂಬ ಕೃತಿಯಲ್ಲಿ ತಿಳಿದುಬರುತ್ತದೆ. ಕೇರಳದ ತಿರುನೆಲ್ಲಿಗೆ ಭೇಟಿಯಿತ್ತ ಸಂದರ್ಭದಲ್ಲಿ ಅಲ್ಲಿನ ಮಹಿಳಾ ಸ್ಥಿತಿಗತಿಗಳನ್ನು ನೋಡಿ ೧೯೭೫ರಲ್ಲಿ ಬಿಡುಗಡೆಯಾದ 'ದಿ ಟ್ರಾಪರ್' ಸಿನಿಮಾವನ್ನು ನೆನಪಿಸಿಕೊಳ್ಳುತ್ತಾರೆ. ಫಣಿಯ ಜನಾಂಗದ ಅವಿವಾಹಿತ ಮಹಿಳೆಯರು ತಾಯಂದಿರಾಗುವ ಸಮಸ್ಯೆಯನ್ನೇ ಸಿನಿಮಾವಾಗಿಸಿದ್ದಾರೆ. ಕ್ರೌರ್ಯವನ್ನೇ ಕಥಾವಸ್ತುವನ್ನಾಗಿ ಚಿತ್ರಿಸಿದ ಸಿನೆಮಾವು ಮೆಚ್ಚುಗೆ ಗಳಿಸಿತ್ತು. ಸಮಾಜಕ್ಕೆ ಕಂಟಕವಾಗಿದ್ದ ವಿಷಯವೊಂದನ್ನು ಸಿನಿಮಾವಾಗಿಸಿ ಮುನ್ನೆಲೆಗೆ ತಂದಾಗ ಬದಲಾವಣೆಯನ್ನು ಕಾಣಬೇಕಾಗಿತ್ತು. ಆ ಬದಲಾವಣೆಯಾಗದಿದ್ದಕ್ಕೆ ಚಿತ್ರದ ನಿರ್ದೇಶಕರಾದ ಜೋನಿ ಅವರು ಮಾತುಗಳನ್ನು ಲೇಖಕಿ "ತಿರುನೆಲ್ಲಿ ಪ್ರದೇಶದಲ್ಲಿ ಸ್ತ್ರೀ ಶೋಷಣೆ ಇನ್ನೂ ಪರಿಹಾರ ಕಾಣದ ಸಮಸ್ಯೆಯಾಗಿಯೇ ಉಳಿದಿರುವುದರಿಂದ ನನಗೆ ಅವಮಾನವಾಗಿದೆ. ನಾನು ಇದನ್ನು ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ ಎಂದು ನೊಂದು ಹೇಳಿದ್ದರು"(ಪ್ರಜ್ಞಾ ಮತ್ತಿಹಳ್ಳಿ, ೨೦೧೫, ಪುಟ-೧೯) ಎಂದು ತಿಳಿಸುತ್ತಾರೆ. ಗೋವಾದಲ್ಲಿರುವಂತೆಯೇ ಕೇರಳದಲ್ಲೂ ಈ ಸಮಸ್ಯೆ ಮಹಿಳೆಯರನ್ನು ಕಾಡುತ್ತಿದೆ. ಅವಿವಾಹಿತ ಮಹಿಳೆಯರು ತಾಯಿಯಾಗುತ್ತಿರುವುದನ್ನು ಗಮನಿಸಿದಾಗ ಲೈಂಗಿಕ ಕಾರ್ಯಕರ್ತೆಯರ ಸಂಖ್ಯೆ ಆಧುನಿಕ ಕಾಲಕ್ಕೂ ಬದಲಾಗಿಲ್ಲ ಎಂದಿದ್ದಾರೆ. ಪ್ರಸಿದ್ಧ ಚಾರಿತ್ರಿಕ ಪ್ರವಾಸ ತಾಣಗಳಲ್ಲಿ ಮಹಿಳೆಯರನ್ನು ವೇಶ್ಯಾವಾಟಿಕೆಗೆ ತಳ್ಳುವ 'ಬಸವಿ' ಪದ್ಧತಿಯಿತ್ತು. ರಾಜರ ಕಾಲವಲ್ಲದ ಜಾಗತೀಕರಣದ ಹೊತ್ತಿನಲ್ಲಿ ಮಹಿಳೆಯರನ್ನು ಲೈಂಗಿಕವಾಗಿ ಹಿಂಸಿಸುವ ಸ್ವರೂಪಗಳು ಬದಲಾಗಿವೆ. ಆಧುನಿಕತೆ ಹೆಸರನಲ್ಲಿ ನಡೆಸುವ ಕೆಲವು ಹೋಟೆಲ್, ಸ್ಪಾ ಸೆಂಟರ್‌ಗಳು, ರೆಸಾರ್ಟ್‌ಗಳು ಮುಂತಾದವುಗಳಲ್ಲಿ ಮುಂದುವರೆದಿರುವುದಾಗಿ ಲೇಖಕಿ ಅಭಿಪ್ರಾಯಪಡುತ್ತಾರೆ.

ಪಾಶ್ಚಿಮಾತ್ಯ ಜೀವನ ಶೈಲಿಯ ಪ್ರಭಾವದಿಂದಾಗಿ ಇಂದಿನ ಅಕ್ಷರಸ್ಥ ಮಹಿಳೆಯರು ಆಕರ್ಷಿತಳಾಗಿದ್ದಾರೆ. ದಾಂಪತ್ಯ ಏಕೆ? ಮಕ್ಕಳು ಏಕೆ? ಮದುವೆಯಾದವರು ಸುಖವಾಗಿದ್ದಾರೆಯೇ? ಮಕ್ಕಳನ್ನು ಹೆತ್ತು ಏನು ಪ್ರಯೋಜನ? ಇಂತಹ ಮಾತುಗಳು ಯುವ ಜನರ ಬಾಯಲ್ಲಿ ಸಾಮಾನ್ಯವಾಗಿವೆ. ವಿದೇಶಿ ಮಹಿಳೆಯರು ವೈವಾಹಿಕ ಜೀವನದಿಂದ ಹಿಂದೆ ಸರಿಯುತ್ತಿದ್ದಾರೆ. ಈ ಕುರಿತು ಲೇಖಕಿಯು "ವಿದ್ಯಾಭ್ಯಾಸ ಸಾಧನೆ, ಆರ್ಥಿಕ ಸ್ವಾವಲಂಬನೆಗಳು, ಹೊರ ಪ್ರಪಂಚದಲ್ಲಿನ ಆಕರ್ಷಣೆಗಳು ಮಕ್ಕಳನ್ನು ಪಡೆಯುವ ಜವಾಬ್ದಾರಿಯನ್ನು ದೂರ ತಳ್ಳುತ್ತವೆ. ಮಗು ಹುಟ್ಟಿದರೆ! ಕೆರಿಯರ್ ಪ್ರಶ್ನೆ! ತನ್ನ ಸೌಂದರ್ಯದ ಪ್ರಶ್ನೆ! ದಾಂಪತ್ಯದ ಪ್ರಶ್ನೆ! ಜವಾಬ್ದಾರಿಗಳು! ಮಗುವನ್ನು ಹಗಲು ರಾತ್ರಿ ಸಂಭಾಳಿಸಬೇಕಾದ ಅನಿವಾರ್ಯತೆ, ಇವುಗಳಿಂದ ಮುಕ್ತಿ ಪಡೆಯ ಬಯಸುತ್ತವೆ. ಯಾವ ಮನಸ್ಸು ಮನೆಯ ಗೃಹ ಕೃತ್ಯಗಳಲ್ಲಿ ತನ್ನನ್ನು ತಾನು

ತೊಡಗಿಸಿಕೊಳ್ಳಲು ಹಿಂಜರಿಯುವ ಗಂಡು, ಹಿರಿಯರನ್ನು ದೂರ ಮಾಡಿ ಬದುಕಿದ ಶೈಲಿ, ಪರಸ್ಪರ ನಂಬಿಕೆಯೇ ಇಲ್ಲದ ದಾಂಪತ್ಯ ಜೀವನ, ಇಂದಿನ ವಿವಾಹಗಳು ಪರಸ್ಪರ ಕುಟುಂಬಗಳನ್ನು ಸೇರಿಸುವ ಕೊಂಡಿಗಳಾಗಿಲ್ಲ. ಮನಸ್ಸು ಮನಸ್ಸುಗಳ ನಡುವೆ ಸಂಬಂಧ ಕಲ್ಪಿಸುವ ಸೇತುವೆಗಳಾಗಿಲ್ಲ. ತೋರಿಕೆ, ಆಕರ್ಷಣೆ, ಓಡಾಟ, ಸುತ್ತಾಟ ಅಲೆದಾಟಗಳಿಗೊಂದು ಪರವಾನಿಗೆಯಾಗಿದೆ."(ಇಂದಿರಾ ಶಿವಣ್ಣ, ೨೦೧೨, ಪುಟ-೨೭೯) ಎಂದು ತಮ್ಮ 'ಬದುಕಿಗೆ ಬಂಗಾರದ ಲೇಪನ' ಎಂಬ ಕೃತಿಯಲ್ಲಿ ಹೇಳಿದ್ದಾರೆ. ಗಂಗೋತ್ರಿ, ಯಮನೋತ್ರಿ, ಬದರಿನಾಥ, ಕೇದರನಾಥ, ಚಾರ್‌ಧಾಮ್ ಉತ್ತರಭಾರತದ ಪ್ರವಾಸ ಮಾಡಿದ ಅನುಭವ ಕಥನವಾದ ತ್ರಿವೇಣಿ ಶಿವಕುಮಾರ್ ಅವರ 'ಬಹುರೂಪೀ ಭಾರತ'ವು ಮುಖ್ಯವಾಗುತ್ತದೆ. ಹೋಟೆಲ್‌ವೊಂದರಲ್ಲಿ ಸಾಮೂಹಿಕ ಸ್ನಾನ ಮಾಡುವುದನ್ನು ಕಂಡ ಲೇಖಕಿಯು ಪ್ರೊ.ಕೃಷ್ಣೇಗೌಡರ ಮಾತುಗಳನ್ನು ಕುರಿತು "ಈಗಿನ ಹೆಣ್ಣು ಮಕ್ಕಳು ಬಹಳ ಬುದ್ಧಿವಂತರು, ಎಲ್ಲವನ್ನು ಬಹಳ ಬೇಗ ಕಲಿಯುತ್ತಾರೆ, ಎಲ್ಲಾ ರಂಗಗಳಲ್ಲೂ ಪುರುಷರಿಗಿಂತ ಚೂರು ಮುಂದೆಯೂ ಇದ್ದಾರೆ. ಯಾವುದೇ ಕೆಲಸವನ್ನು ಸಮರ್ಥವಾಗಿ ನಿಭಾಯಿಸಬಲ್ಲರು. ವಿದೇಶಿಗಳಿಗೂ ಒಂಟಿಯಾಗಿ ಹೋಗಿ ಕಾರ್ಯ ಸಾಧಿಸಿಕೊಂಡು ಬರಬಲ್ಲರು. ಅವರಿಗೆ ಗೊತ್ತಿಲ್ಲದ ವಿಷಯ ಈ ಪ್ರಪಂಚದಲ್ಲಿ ಏನೂ ಇಲ್ಲ, ಒಂದನ್ನು ಬಿಟ್ಟು ಎಂದು ಒಂದು ನಿಮಿಷ ತಡೆದು ಅದು 'ಲಜ್ಜೆ'."(ತ್ರಿವೇಣಿ ಶಿವಕುಮಾರ್,೨೦೧೨, ಪುಟ-೨೨೩) ಎಂದು ಲೇಖಕಿ ಪ್ರಸ್ತಾಪಿಸಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಚೆನ್ನೈಗೆ ಹೋದಾಗ ಅಲ್ಲಿನ ಸಿಬ್ಬಂದಿ ತಡರಾತ್ರಿಯಲ್ಲಿ ಊಟ ಸಿಗುವುದು ಪ್ರವಾಸಿ ನಿರ್ವಾಹಕ ಕಷ್ಟ ಎಂದಾಗ, ರಾಜಧಾನಿಯಾದ ಚೆನ್ನೈನಲ್ಲಿ ಊಟ ಸಿಗಲ್ಲ ಅಂದ್ರೆ ಏನು. ಊಟ ಏರ್ಪಾಡು ಮಾಡಿಸೋದು ನಿಮ್ಮ ಕರ್ತವ್ಯ ಎಂದು ಮಹಿಳಾ ಪ್ರವಾಸಿಯೇ ಗಟ್ಟಿತನದಲ್ಲಿ ಎದುರಿಸಿದ ಪರಿಣಾಮವಾಗಿ ಎಲ್ಲಾರಿಗೂ ಊಟ ದೊರೆತ ಪ್ರಸಂಗವನ್ನು ಲೇಖಕಿ ನೆನಪಿಸಿಕೊಳ್ಳುತ್ತಾರೆ. ಈ ಮೂಲಕ ಮಹಿಳಾ ಧೋರಣೆಗಳಲ್ಲಿನ ಗಟ್ಟಿತನವನ್ನು ಹೇಳುತ್ತಾರೆ.

ಅರೇಬಿಯಾದ ರಿಯಾಜ್, ಜೆಡ್ಡಾ ನಗರಗಳಲ್ಲಿ ಮಹಿಳಾ ಕಾಲೇಜುಗಳಲ್ಲಿ ಬುರ್ಕಾಧಾರಿ ಹುಡುಗಿಯರನ್ನು, ಮಕ್ಕಳನ್ನು ಕಾಲೇಜಿಗೆ ಬಿಡುವ ತಂದೆಯಾಗಲಿ, ಡ್ರೈವರ್‌ಗಳಾಗಲಿ ಗೇಟ್‌ನಾಚೆ ಇರಬೇಕಾಗುತ್ತದೆ ಎಂದು ಲತಾಗುತ್ತಿ ಅವರು 'ನಾ ಕಂಡಂತೆ ಅರೇಬಿಯಾ' ಕೃತಿಯಲ್ಲಿ ಸ್ತ್ರೀ ದೃಷ್ಟಿ ಧೋರಣೆಗಳ ಬಗ್ಗೆ ವಿವರಿಸಿದ್ದಾರೆ. ಅರೇಬಿಯಾದಲ್ಲಿ ಕಾಲೇಜಿನ ಒಳಗಡೆ ಎಲ್ಲಾ ಮಹಿಳಾ ಉಪಾಧ್ಯಾಯಿನಿಯರೇ ಇರುತ್ತಾರೆ. ಕೆಲವೊಂದು ವಿಷಯಗಳಿಗೆ ಪುರುಷ ಉಪಾಧ್ಯಾಯರಿದ್ದು, ಕ್ಯಾಮರಗಳ ಮುಂದೆಯೇ ಬೋಧಿಸಬೇಕು. ಪ್ರಶ್ನೆಗಳನ್ನು ಇಂಟರ್‌ಕಾಮ್. ಟೆಲಿಕಾಂಗಳಲ್ಲಿಯೇ ಚರ್ಚಿಸಬೇಕು. ವಿದ್ಯಾರ್ಥಿನಿಯರಿಗೆ ಮಾತ್ರ ಉಪಧ್ಯಾಯರು ಕಾಣಿಸುವ ಸೌಲಭ್ಯವಿದೆ. ಆದರೆ ಉಪಾಧ್ಯಾಯರಿಗೆ ವಿದ್ಯಾರ್ಥಿನಿಯರು ಕಾಣಿಸುವುದಿಲ್ಲ. ಇಂತಹ ಸಂಪ್ರದಾಯ ಕಟ್ಟೆಚ್ಚರಿಕೆಗಳು ಬಹುತೇಕ ಯಾವ ದೇಶಗಳಲ್ಲಿ ಕಂಡುಬರುವುದಿಲ್ಲ. ಕೇವಲ

ಮುಸ್ಲಿಂ ದೇಶಗಳಲ್ಲಿ ಮಾತ್ರ ಈ ಕಟ್ಟಳೆಗಳಿರುವುದು ಕಂಡುಬರುತ್ತದೆ. ಅಲ್ಲಿನ ಪುರುಷ ಸಮಾಜವು ಸ್ತ್ರೀಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿರದೆ ಹಲವು ನಿರ್ಬಂಧಗಳನ್ನು ಇಂದಿಗೂ ಹೇರುತ್ತಿವೆ. ಸಮಾನತೆಗಾಗಿ ಪ್ರಯತ್ನಿಸುವವರ ಮಧ್ಯೆ ಮಹಿಳೆಯನ್ನು ಅಡಿಯಾಳಾಗಿ ನೋಡುವ ದೃಷ್ಟಿಕೋನಗಳಿವೆ. ಅರೇಬಿಯಾದ ಅತೀ ಜಾಗರೂಕತೆಗೆ ಬುರ್ಕಾಧಾರಿ ಮಹಿಳಾ ಬ್ಯಾಂಕ್‌ಗಳೇ ಸಾಕ್ಷಿ. ಶ್ರೀಮಂತರಾದರೂ ಸ್ವತಂತ್ರವಾಗಿ ವ್ಯವಹಾರಕ್ಕೆ ಇಳಿಯುವಂತಿಲ್ಲ. ಪುರುಷರನ್ನೇ ಅವಲಂಭಿಸಬೇಕಾದ ಅನಿವಾರ್ಯತೆಯನ್ನು ಅಲ್ಲಿನ ಸರ್ಕಾರವೇ ನಿರ್ಬಂಧಿಸಿದ್ದಾಗಿ ಲೇಖಕಿ ನಿರೂಪಿಸುತ್ತಾರೆ.

ಅಮೇರಿಕಾದ ಕಾನೂನಿನಲ್ಲಿ ಕೆಲವು ಸಂದರ್ಭದಲ್ಲಿ ಸ್ತ್ರೀವಾದದ ಧೋರಣೆಗಳು ಅನ್ವಯಿಸುವುದಿಲ್ಲವೆಂದು ನೀಳಾದೇವಿ ಅವರು 'ನಾ ಕಂಡ ಆಖಂಡ' ಕೃತಿಯಲ್ಲಿ ಹೇಳಿದ್ದಾರೆ. ಮಗುವಿನ ತಾಯಿಯೊಬ್ಬಳು ಸ್ನಾನಕ್ಕಾಗಿ ಟಬ್‌ಬಾತ್‌ಗೆ ಬಿಸಿನೀರು ಬಿಡುವಾಗ ಪೋನ್ ರಿಂಗಣಿಸಿತೆಂದು ಅಚಾನಕ್ಕಾಗಿ ಮಗುವನ್ನು ಮರೆತು ಮನೆಯ ಹಾಲ್‌ಗೆ ಹೋದ ಆಕೆ ಬರುವುದರೊಳಗಾಗಿ ಮಗು ಬಿಸಿನೀರಲ್ಲಿ ಬಿದ್ದು ಮೈಯಲ್ಲಾ ಬೊಬ್ಬೆಗಳು ಬಂದಿರುತ್ತವೆ. ಆಸ್ಪತ್ರೆಗೆ ಹೋದಾಗ ಆಕೆಯ ಮೇಲೆ ವೈದ್ಯರೇ ದೂರು ಕೊಡುತ್ತಾರೆ. ಹೆತ್ತ ತಾಯಿ ತನ್ನ ಕಂದನ ಬಗ್ಗೆ ಅರಿವಿಲ್ಲದೇ ಬಿಟ್ಟು ಹೋಗಿದ್ದಕ್ಕೆ ಕೋರ್ಟ್‌ನಲ್ಲಿ ಶಿಕ್ಷೆಯಾಗುತ್ತದೆ. ವೈದ್ಯರು ಇಂತಹ ಘಟನೆಗಳನ್ನು ನಿರ್ಲಕ್ಷಿಸಿದರೆ ಅವರಿಗೆ ಶಿಕ್ಷೆಯಾಗುತ್ತದೆ. ಬದಲಾಗಿ ನೈತಿಕತೆಯ ಪಾಠವನ್ನು ಅಲ್ಲಿನ ಕಾನೂನು ಕಲಿಸುತ್ತದೆ. ಇಂದಿರಾ ಶಿವಣ್ಣ ಅವರ 'ಹಾಲೆಂಡ್‌ನಿಂದ ಲಂಡನ್‌ವರೆಗೆ' ಕೃತಿಯಲ್ಲಿ ಲಂಡನ್ ಹುಡುಗ-ಹುಡುಗಿಯರು ವಿವಾಹದ ಬಂಧನವಿಲ್ಲದೆಯೇ ಒಟ್ಟಾಗಿ ವಾಸಿಸುತ್ತಾರೆ. ಅಂತಹದ್ದೇ ಕೋಣೆಗಳಿರುವ ಮನೆಗಳು ಸಿಗುತ್ತವೆ. ಇಲ್ಲಿ ಬಾಡಿಗೆ ಪಡೆದು ವಾಸಿಸುತ್ತಿದ್ದ ಲೇಖಕಿಯ ಸಂಬಂಧಿ ವೈಲೆಟ್‌ಳ ಮಾತುಗಳನ್ನು ಕುರಿತು ಲೇಖಕಿ "ಮೈಮೇಲೆ ಬಟ್ಟೆಯೇ ಇಲ್ಲದೆ ಓಡಾಡುತ್ತಾರೆ. ಅವರಿಗೆ ಹೊರಪ್ರಪಂಚದ ಪರಿವೆಯೇ ಇಲ್ಲ. ನಾನು ಮೂರು ವರ್ಷಗಳ ಕಾಲ ಅವರ ಮಧ್ಯೆ ಜೀವಿಸಿದ್ದು ಅತ್ಯಂತ ಕ್ಲಿಷ್ಟಕರವಾದ ದಿನಗಳು ಎಂದಳು. ಹುಡುಗನ ಜೊತೆಗಾರನಿಲ್ಲದ ಹುಡುಗಿಯನ್ನು ಅಲ್ಲಿಯ ಜನ ನೋಡುವ ರೀತಿಯೇ ಬೇರೆಯಾಗಿರುತ್ತದೆ. ಹುಡುಗಿಯರೊಂದಿಗೆ ಗೆಳತನ ಇದ್ದರಂತೂ ಅದಕ್ಕೆ ಬೇರೊಂದು ಅರ್ಥವನ್ನೇ ಕೊಡುತ್ತಾರೆ. ಹುಡುಗಿಯರ ಜೊತೆ ಜೊತೆಯಾಗಿ ನಡೆಯುವಲ್ಲಿ ಎಷ್ಟೊಂದು ವ್ಯತ್ಯಾಸ, ಅಲ್ಲಿನ ಸಾಮಾಜಿಕ ಪರಿಸರಕ್ಕೂ, ಅಲ್ಲಿಯ ಜೀವನಕ್ಕೂ ಅಜಗಜಾಂತರ ವ್ಯತ್ಯಾಸ ಎಂದು ಬೇಬಿ ಹೇಳುತ್ತಿದ್ದಳು. ನನಗೂ ಒಬ್ಬ ಬಾಯ್ ಫ್ರೆಂಡ್ ಇದ್ದಾನೆ. ಜರ್ಮನಿಯಲ್ಲಿದ್ದಾನೆ. ನೋಡಲಿಕ್ಕೆ ಬರುತ್ತಾನೆ. ಅವನ ಜೊತೆ ಹೋಗ್ತಾ ಇರ್ತಿನಿ. ಹೀಗೆ ಸುಳ್ಳು ಹೇಳಿ ಬೇರೆ ಎಲ್ಲಾದರೂ ಹೋಗಿ ಬರುತ್ತೇನೆ."(ನೀಳಾದೇವಿ, ೧೯೮೫, ಪುಟ-೪೬) ಎನ್ನುತ್ತಾರೆ. ಆಕೆಯ ಮಾತುಗಳನ್ನು ಕೇಳಿದ ಲೇಖಕಿಗೆ ಸಮಾಜ ಎಲ್ಲಿಗೆ ಬಂದಿತು ಎಂದುಕೊಳ್ಳುತ್ತಾರೆ. ಭಾರತದಂತಹ ಸಂಪ್ರದಾಯಸ್ಥ ದೇಶದಲ್ಲಿ ವಿವಾಹ ಪೂರ್ವದ ಸಂಬಂಧಗಳನ್ನು ಒಪ್ಪುವುದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ

ಇದಕ್ಕೆ ತದ್ವಿರುದ್ಧವಾದ ಆಚರಣೆಗಳಿವೆ. ವೈಲೆಟ್‌ಳು ಇತರೆ ಸ್ತ್ರೀಯರಂತೆ ಕಥೆಕಟ್ಟಿ ಬದುಕುವುದನ್ನು ಗಮನಿಸಿದರೇ ವಿದೇಶಿ ಮಹಿಳೆಯರಿಗೆ ವೈಯಕ್ತಿಕ, ಸ್ವತಂತ್ರ ಬದುಕಿಗೆ ಅವಕಾಶವಿಲ್ಲವೆಂದು ಲೇಖಕಿ ನಿರೂಪಿಸುತ್ತಾರೆ.

ವಿದೇಶಿ ಮಹಿಳೆಯರು ಉದ್ಯೋಗಸ್ಥರಲ್ಲಿ ಅನೇಕ ಸಂದಿಗ್ಧತೆಗಳು ಎದುರಾಗುತ್ತವೆಂದು ಇಂದಿರಾ ಶಿವಣ್ಣ ಅವರು ಹೇಳುತ್ತಾರೆ. ಮಹಿಳೆಯರು ಎಷ್ಟೇ ಹೋರಾಟಗಾರರಾದರೂ ನಮ್ಮ ಕೆಲಸಕ್ಕೆ, ಶ್ರಮಕ್ಕೆ, ಸಂಪಾದನೆಗೆ ಸಿಗುವ ಮಹತ್ವವೇ ಬೇರೆ. ಕೆಲಸದ ಜೊತೆಗೆ ಬೆಳೆದ ಮಾನಸಿಕ ಸಂಬಂಧಗಳ ಬಗ್ಗೆಯಾಗಲಿ, ವ್ಯಾಮೋಹದ ಬಗ್ಗೆಯಾಗಲಿ ಯಾರು ಯೋಚಿಸುವುದಿಲ್ಲ. ಮನೆ ಕೆಲಸ ಎರಡನ್ನು ನಿರ್ವಹಿಸಲಾರದೆ ಹೋದರೆ ಕೆಲಸ ಬಿಡು ಎನ್ನುವ ಮನೋಭಾವದವರು ಇಂದಿಗೂ ಇದ್ದಾರೆ. ಈ ಬಗ್ಗೆ ಯಾರು ಯೋಚಿಸುವುದೇ ಇಲ್ಲ. ಮಹಿಳೆ ತನ್ನ ಕೆರಿಯರ್‌ನ್ನು ತ್ಯಾಗ ಮಾಡಿ ಗಂಡ ಮಕ್ಕಳೆಂದು ಪೋಷಿಸುವುದಕ್ಕೆ ನಿಲ್ಲುತ್ತಾಳೆ. ಸಂಪ್ರದಾಯಸ್ಥ ಕುಟುಂಬಗಳಲ್ಲಿ ಸಾಮಾನ್ಯವಾಗಿ ಸಣ್ಣ ಅವಘಡವಾದರೂ ಹೆಣ್ಣು ಮಕ್ಕಳನ್ನು ಕೆಲಸಕ್ಕೆ ಕಳಿಸಬಾರದು. ಕೈಯಲ್ಲಿ ನಾಲ್ಕು ಕಾಸು ಸೇರಿದರೆ ಹೆಣ್ಣು ಹಾಗೇನೆ ಎನ್ನುವ ಮಾತುಗಳನ್ನು ಕೇಳಬೇಕಾಗಿತ್ತು ಎಂದು ಇಂದಿರಾ ಶಿವಣ್ಣ ಅವರು ತಾವು ಬದುಕಿದ ವಾತಾವರಣವನ್ನು ನೆನಸಿಕೊಳ್ಳುತ್ತಾರೆ.

ಗೋವಾ ರಾಜ್ಯ ಪ್ರವಾಸ ಕಥನದಲ್ಲಿ ಮದುವೆಗಳು ವರದಕ್ಷಿಣೆ ಇಲ್ಲದೇ ನಡೆಯುವುದೇ ಇಲ್ಲ ಎಂದು ಎಚ್.ಎಸ್.ಮುಕ್ತಾಯಕ್ಕ ಅವರು 'ಮದಿರೆಯ ನಾಡಿನಲ್ಲಿ' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ವರದಕ್ಷಿಣೆ ನೀಡುವುದನ್ನು ಅಲ್ಲಿನವರು ಪ್ರತಿಷ್ಠೆಯ ವಿಷಯವಾಗಿ ಭಾವಿಸಿರುವುದಾಗಿ ಹೇಳುತ್ತಾರೆ. ಹುಡುಗನ ಕಡೆಯವರು ಬೇಡುವ ಪ್ರಶ್ನೆಯೇ ಇಲ್ಲ. ಬಂಗಾರ ಮತ್ತು ಹಣ ಸಾಮಾನ್ಯವಾಗಿ ಕೊಡುವ ವಾಡಿಕೆಯಿದೆ. ಈ ಪದ್ಧತಿಯಿಂದಾಗಿಯೇ ಗೋವಾದ ಹೆಣ್ಣು ಮಕ್ಕಳು ಸುರಕ್ಷಿತವಾಗಿದ್ದಾರೆ ಎನ್ನುತ್ತಾರೆ. ಇಲ್ಲಿನ ಮಹಿಳೆಯರು ಸ್ವತಂತ್ರರಾಗಿರುವ ಕುರಿತು ಅಲ್ಲಿನವರು "ಅತ್ಯಾಚಾರಗಳು ತೀರಾ ಕಡಿಮೆ. ಶೋಷಣೆಗಳ ಬಗೆಗೆ ಹೆಣ್ಣನ್ನು ಗುಲಾಮಳಂತೆ ನಡೆಸಿಕೊಳ್ಳುವಂಥ ಶೋಷಣೆ ಇಲ್ಲವೇ ಇಲ್ಲ. ಆಕೆಗೆ ಇಲ್ಲಿ ಸರ್ವಸ್ವತಂತ್ರವಿದೆ. ಸಮಾನತೆ ಇದೆ. ಅಂತಹ ಯಾವುದೇ ನಿರ್ಬಂಧಗಳೂ ಇಲ್ಲ." (ಮುಕ್ತಾಯಕ್ಕ ಎಚ್.ಎಸ್., ೨೦೦೮, ಪುಟ-೩೩) ಎನ್ನುತ್ತಾರೆಂದು ಲೇಖಕಿ ಪ್ರಸ್ತಾಪಿಸುತ್ತಾರೆ. ವರದಕ್ಷಿಣೆ ಕೊಡುವುದರಿಂದಲೇ ಹೆಣ್ಣು ಮಕ್ಕಳಿಗೆ ಶೋಷಣೆಗಳಿಲ್ಲ ಎಂಬುದು ಮನುಷ್ಯನ ನೈತಿಕತೆಯನ್ನು ಪ್ರಶ್ನೆ ಮಾಡುವಂತಿದೆ. ವರದಕ್ಷಿಣೆ ನೀಡುವುದು ಕಾನೂನಿ ಪ್ರಕಾರ ಅಪರಾಧವಾಗಿದೆ. ಹಣದಿಂದಲೇ ಮಹಿಳೆಯರ ಬದುಕು ಸುಖವಾಗಿರುತ್ತದೆ ಎಂಬ ಅರ್ಥವು ಈ ಮೇಲಿನ ಹೇಳಿಕೆಯಲ್ಲಿ ಬರುತ್ತದೆ. ವರದಕ್ಷಿಣೆ ರಹಿತ ಮದುವೆಗಳ ಕಡೆಗೆ ಗೋವಾದ ಕುಟುಂಬಗಳು ಸಾಗಿದಾಗ ಮಾತ್ರ ಮಹಿಳಾ ಅಭಿವ್ಯಕ್ತಿಗಳು ಸಫಲವಾಗುತ್ತವೆ.

ಹಿಂದೂ, ಮುಸ್ಲಿಂ, ಸಿಖ್, ಬೌದ್ಧ ಮುಂತಾದ ಧರ್ಮಗಳನ್ನು ಒಳಗೊಂಡಂತೆ, ಎಲ್ಲರೂ ಸಾವಿನ ಕಾಶ್ಮೀರದಲ್ಲಿ ನರಳುತ್ತಿದ್ದಾರೆಂದು ಶಮಂತ ಅವರು 'ಕದನ ಕಾಶ್ಮೀರ'

ಕೃತಿಯಲ್ಲಿ ನಿರೂಪಿಸಿದ್ದಾರೆ. ಕಾಶ್ಮೀರದಲ್ಲಿ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯವನ್ನು ವಿರೋಧಿಸಿ ನಿರಂತರವಾಗಿ ಹೋರಾಟಗಳು ನಡೆಯುತ್ತವೆ. ಆದರೆ ರಾಷ್ಟ್ರೀಯ ಮಾಧ್ಯಮಗಳಿಂದ ಸೂಕ್ತ ಬೆಂಬಲ ಸಿಗದೆ ಅನೇಕ ಹೋರಾಟಗಳು ಸೊರಗುತ್ತವೆ. ಕಣಿವೆಯಲ್ಲಿ ಮಹಿಳೆಯರು ಘೋರ ಹತ್ಯಾಕಾಂಡದಿಂದಾಗಿ 'ಅಜಾದಿ' ಹೋರಾಟವನ್ನು ಮಾಡುತ್ತಿದ್ದರೆಂದು ಹೇಳುತ್ತಾರೆ. ಈ ಕುರಿತು ಕಾಶ್ಮೀರದ ಕಾನೂನು ವಿದ್ಯಾರ್ಥಿಯು ಪ್ರಸ್ತಾಪಿಸಿದನ್ನು ಲೇಖಕಿ "ಮೇಲೆ ಹುಡುಗಿಯರಂತೆ ಚೆನ್ನಾಗಿ ಶೃಂಗರಿಸಿಕೊಂಡು ನಗು ನಗುತ್ತಿದ್ದೇವೆ ಒಳಗೆ ಅವಮಾನ, ಅವಹೇಳನದಿಂದ ಕುಗ್ಗಿ ಹೋಗುತ್ತಿದ್ದೇವೆ" (ಶಮಂತ, ೧೯೯೫, ಪುಟ–೧೦) ಎಂದು ಹೇಳಿಕೊಳ್ಳುತ್ತಾಳೆ. ಮಹಿಳಾ ಹಕ್ಕು ಮತ್ತು ಸ್ವಾತಂತ್ರ್ಯದ ಬಗ್ಗೆ ತಿಳಿದಿರುವ ಕಾನೂನು ವಿದ್ಯಾರ್ಥಿಯೇ ಹೀಗೆ ಹೇಳಿದಾಗ ಹೆಣ್ಣುಮಕ್ಕಳ ಪರಿಸ್ಥಿತಿ ಹೇಗೆ ಎನ್ನುವ ಪ್ರಶ್ನೆ ಸಹಜವಾಗಿ ಉದ್ಭವವಾಗುತ್ತದೆ. ಅಲ್ಲದೇ ಇಲ್ಲಿನ ಒಬ್ಬೊಬ್ಬ ಮಹಿಳೆಯರು ಒಂದೊಂದು ಗೋಳಿನ ಕತೆಯಾಗಿದೆ. ಬುರ್ಕಾದೊಳಗಿನ ಕಣ್ಣೀರು ಇಂಗುವುದೇ ಇಲ್ಲವೇನು ಎಂಬಂತೆ ಬಿಕ್ಕಳಿಕೆಗಳ ಸಂಗತಿಗಳನ್ನು ಬಿಚ್ಚಿಡುತ್ತಾರೆ. ಅಲ್ಲಿನ ಕುಟುಂಬಗಳು ಸ್ವತಃ ರಕ್ಷಣಾ ಪಡೆಯಿಂದಲೇ ದೌರ್ಜನ್ಯಕ್ಕೆ ಒಳಗಾಗುವ ಕುರಿತು ಲೇಖಕಿಯು "ಉಗ್ರರನ್ನು ಹುಡುಕುವ 'ತಲಾಷ್' ಹೆಸರಿನಲ್ಲಿ ರಕ್ಷಣಾ ಸಿಬ್ಬಂದಿಯೇ ಅವಮಾನಿಸುತ್ತಿವೆ. ಹೊಸಿಲು ದಾಟಲು ಅಳುಕುತ್ತಿದ್ದಾರೆ. ಹಾಡುಹಗಲೇ ಎಲ್ಲಾರೆದರು ರಕ್ಷಣಾ ಸಿಬ್ಬಂದಿ ಅವಮಾನಿಸುತ್ತಿದ್ದರೂ ಯಾರೂ ಸೊಲ್ಲೆತ್ತದ ಪರಿಸ್ಥಿತಿ ಇಲ್ಲಿದೆ."(ಅದೇ, ಪುಟ–೧೩) ಎಂದು ಹೇಳುತ್ತಾರೆ. ಬೂಟಿನ ಸಪ್ಪಳ ಕೇಳಿದರೆ ನಡುವಷ್ಟು ಭೀಕರತೆಯನ್ನು ರಕ್ಷಣಾ ಸಿಬ್ಬಂದಿಯೇ ಸೃಷ್ಟಿಸಿದ್ದಾರೆ. ಅವಮಾನ, ಅತ್ಯಾಚಾರ, ಲೈಂಗಿಕ ದೌರ್ಜನ್ಯಗಳಿಂದ ಮಹಿಳೆಯರು ನಲುಗಿ ಹೋಗಿದ್ದಾರೆ. ಬಡತನವು ದಿನೇ ದಿನೇ ಹೆಚ್ಚುತ್ತಿದ್ದು ಅತೀ ಕಡಿಮೆ ಹಣದಲ್ಲಿ ಜೀವನ ಸಾಗಿಸುತ್ತಿದ್ದಾರೆ. ರಕ್ಷಣೆ ಕೊಡುವವರೇ ಅತ್ಯಾಚಾರಕ್ಕೆ ಇಳಿದಾಗ ಯಾರಿಂದ ರಕ್ಷಣೆ ಕೋರಬೇಕು ಎನ್ನುವ ಪ್ರಶ್ನೆ ಕಣಿವೆಯ ಮಹಿಳೆಯರಲ್ಲಿ ಕಾಡುತ್ತದೆ. ಅಲ್ಲಿನ ಗ್ರಾಮೀಣ ಮಹಿಳೆಯರು ಕೃಷಿ ಕ್ಷೇತ್ರಕ್ಕೆ ಕಾಲಿಡದಂತಹ ವಾತಾವರಣದಿಂದಾಗಿ ಒಪ್ಪೊತ್ತಿನ ಊಟವು ಇಲ್ಲದೇ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಬುರ್ಕಾದೊಳಗೆ ಬಾಂಬ್ ಅಡಗಿಸಿಕೊಂಡರೆಂಬ ಸಂಶಯದಿಂದಾಗಿ ನಡುರಸ್ತೆಯಲ್ಲಿ ಬಟ್ಟೆ ಬಿಚ್ಚಿಸುವ ಉದಾಹರಣೆಗಳು ಸಾಕಷ್ಟಿವೆ ಎನ್ನುತ್ತಾರೆ. ವೈದ್ಯರಾದವರಿಗೂ ಉಗ್ರಗಾಮಿಗಳ ಜೊತೆ ನಂಟು ಇದೆ ಎಂಬ ಕಾರಣಕ್ಕೆ ಅನಾವಶ್ಯಕ ವಿಚಾರಣೆ ಮಾಡಿ ಅವರ ವೃತ್ತಿಜೀವನವನ್ನೇ ಹಾಳು ಮಾಡಿದ ಘಟನೆಗಳು ನಡೆದಿವೆ. ಜಮ್ಮು ಕಾಶ್ಮೀರದಲ್ಲಿ ಸ್ತ್ರೀ ಶಿಕ್ಷಣ ಮುಂಚೆಗಿಂತ ಕಡಿಮೆಯಾಗಿದೆ. ಮನೆ ಸಮೀಪದ ಶಾಲೆಗಳಿಗೆ ಮಾತ್ರ ಕಳಿಸಿದ್ದು, ದೂರದ ಕಾಲೇಜಿಗೆ ಸೇರಿಸಲು ಇಚ್ಛಿಸುತ್ತಿಲ್ಲ ಎಂದಿದ್ದಾರೆ. "ಕಾಶ್ಮೀರದ ಅತ್ಯಾಚಾರಕ್ಕೆ ಒಳಪಟ್ಟ ಮಹಿಳೆಯರನ್ನು ತಮ್ಮ ಕುಟುಂಬದವರೇ ಸೇರಿಸಿಕೊಳ್ಳದ ಘಟನೆಗಳು ಉಂಟು. ಭಗವಂತನ ದೃಷ್ಟಿಯಲ್ಲಿ ಅವಳು ಸೇರಿಸಿಕೊಳ್ಳದಿರುವ ಪ್ರಸಂಗಗಳು ಉಂಟು. ಭಗವಂತನ ದೃಷ್ಟಿಯಲ್ಲಿ ಅವಳು ಪಾಪಿಷ್ಠಳೆಂಬ ಹಣೆಪಟ್ಟಿ ಕಟ್ಟುತ್ತಿದ್ದಾರೆ.

ವಿವಾಹಿತ ಮಹಿಳೆಯರ ಪರಿಸ್ಥಿತಿ ಮತ್ತೂ ಶೋಚನೀಯ. ಆತ್ಮಹತ್ಯೆ ಮಾಡಿಕೊಳ್ಳಲು ಧೈರ್ಯವಿಲ್ಲ. ನಮ್ಮ ಮಕ್ಕಳನ್ನು ಯಾರು ನೋಡಿಕೊಳ್ಳುವವರು? ನನ್ನ ಗಂಡ, ಮನೆಯವರು ನನ್ನನ್ನು ಸ್ವೀಕರಿಸದಿದ್ದರೂ ಪರವಾಗಿಲ್ಲ. ನನ್ನ ಮಕ್ಕಳಿಗಾಗಿ ಮನೆಯ ಮುಂದೆಯೇ ಬಿದ್ದಿರುತ್ತಾರೆ. ಇವರಿಗೆ ವಿದ್ಯೆಯಿಲ್ಲ, ಉದ್ಯೋಗವಿಲ್ಲ, ಜೀವಿಸಬೇಕೆಂಬ ಹಠವೊಂದೇ ಇವರಲ್ಲಿ ಜೀವಂತವಾಗಿರುವುದು".(ಅದೇ, ಪುಟ-೫೦) ಎಂದು ಲೇಖಕಿಯು ಅಲ್ಲಿನ ಕಾಶ್ಮೀರಿ ಮಹಿಳೆಯರ ಧೋರಣೆಗಳು ಕಮರಿ ಹೋದ ಕುರಿತು ಲೇಖಕಿ ವಿವರಿಸುತ್ತಾರೆ.

ಕಾಶ್ಮೀರದಲ್ಲಿ ಶ್ರೀಮಂತ ಮಹಿಳೆಯರೇನೋ ಕಣಿವೆ ಬಿಟ್ಟು ಪಟ್ಟಣ ಸೇರಿದರೆ, ಬಡ ಮಹಿಳೆಯರು ಅಲ್ಲೇ ಇದ್ದು ನರಕಯಾತನೆ ಅನುಭವಿಸುತ್ತಾರೆಂದು ಶಮಂತ ಅವರು 'ಹಿಮದಗ್ನಿ' ಕೃತಿಯಲ್ಲಿ ನಿರೂಪಿಸುತ್ತಾರೆ. ಈ ಬಗ್ಗೆ ಕಾಶ್ಮೀರದ ಮಹಿಳೆಯು "ನಮ್ಮೂರಿನ ಹೆಣ್ಣು ಮಕ್ಕಳಿಗೆ ಭವಿಷ್ಯವೇ ಇಲ್ಲ. ಇಲ್ಲಿ ರಕ್ಷಣೆಗೆಂದು ಬಂದವರು ಅತ್ಯಾಚಾರಿಗಳಾಗಿದ್ದಾರೆ. ನಿಮ್ಮೂರಿನಲ್ಲಿ ಇದೇ ರೀತಿ ನಿಮ್ಮೊಂದಿಗೆ ಪೋಲೀಸರಾಗಲಿ, ಇನ್ಯಾರಾದ್ರೂ ನಡೆದುಕೊಳ್ತಾರಾ? ಒಂದು ಪಕ್ಷ ಅಸಭ್ಯವಾಗಿ ನಡೆದುಕೊಂಡರೂ ನೀವು ಸಹಿಸಿಕೊಂಡು ಸುಮ್ಮನಿರ್ತೀರಾ? ನಾವಿಲ್ಲಿ ನಮ್ಮ ಕಣ್ಣೆದುರು ನಡೀತಿರೋ ದುರ್ಘಟನೆಯನ್ನು ಕಂಡು ಅಸಹಾಯಕರಾಗಿದ್ದೇವೆ. ನಮ್ಮ ರಕ್ತ ಕುದಿಯುತ್ತಿದೆ. ಆದರೆ ನಾವು ನಿಸ್ಸಹಾಯಕರು"(ಶಮಂತ, ೧೯೯೬, ಪುಟ-೪೭) ಎಂದು ಲೇಖಕಿಯ ಬಳಿ ತನ್ನ ಸಂಕಷ್ಟಗಳನ್ನು ತೋಡಿಕೊಳ್ಳುತ್ತಾಳೆ. ಕಾಶ್ಮೀರದಲ್ಲಿ ನಿರಂತರವಾಗಿ ಅತ್ಯಾಚಾರಗಳಿಂದಾಗಿ ಪುರುಷರ ಸಂಖ್ಯೆ ಹೆಚ್ಚುತ್ತಿದ್ದು, ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಿದೆ. ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ವಿಧವೆಯರು ಕಣಿವೆಯಲ್ಲಿ ಸಂಕಷ್ಟದ ದಿನಗಳನ್ನು ದೂಡುತ್ತಿದ್ದಾರೆ. ನಿರುದ್ಯೋಗ, ಬಡತನ, ಅಭದ್ರತೆ, ಹೆದರಿಕೆ ಇವುಗಳಿಂದ ಚಡಪಡಿಸುತ್ತಿರುವ ಮಹಿಳೆಯರ ಬಗ್ಗೆ ಮಾತನಾಡುವ ಜನರು, ಸಂಘಟನೆಗಳು, ಸಂಸ್ಥೆಗಳು, ಮಾನವಹಕ್ಕುಗಳ ಆಯೋಗವು ಯೋಚಿಸುವಂತಾಗಿದ್ದರೆ ಬಹುಶಃ ಕಾಶ್ಮೀರಿ ಮಹಿಳೆಯ ಸ್ಥಿತಿ ಇಷ್ಟು ಅಧೋಗತಿಗೆ ಇಳಿಯುತ್ತಿರಲಿಲ್ಲ. ಇಲ್ಲಿನ ಮುಗ್ಧ ಯುವಕರು ಭಯೋತ್ಪಾದಕರಾಗುತ್ತಿದ್ದರೆ, ಮಹಿಳೆಯರು, ವೈದ್ಯರು, ಶಿಕ್ಷಕರು ಅಜಾದಿ ಹೋರಾಟಗಳಿಗೆ ಇಳಿದಿದ್ದಾರೆ. 'ಹಣವಂತರ ಮಕ್ಕಳು ಪೆನ್ನು ಹಿಡಿದರೆ, ಬಡಮಕ್ಕಳು ಗನ್ ಹಿಡಿದಿದ್ದಾರೆ.' ಎನ್ನುವ ಅಲ್ಲಿನ ಮಹಿಳಾ ಹೋರಾಟಗಾರ್ತಿಯರು ಸಹ ಈ ಭೀತಿಗೆ ಹೊರತಾಗಿಲ್ಲ. ಆಧುನಿಕ ಕಾಲದಲ್ಲಿಯೂ ಕಾಶ್ಮೀರದ ಮಹಿಳೆಯರ ಬದುಕು ಪುರುಷ ದೌರ್ಜನ್ಯದ ಭೀತಿಯಲ್ಲಿಯೇ ಕಳೆಯುವಂತಾಗಿದೆ ಎಂದು ಲೇಖಕಿ ಅಭಿಪ್ರಾಯಪಡುತ್ತಾರೆ.

ಭಾರತಿ ಭಟ್ ಅವರ 'ನನ್ನ ಬೆಲ್ಜಿಯಂ ಪ್ರವಾಸ' ಕೃತಿಯಲ್ಲಿ, ಲೇಖಕಿ ಹೇಳಿಕೊಂಡಿರುವಂತೆ ಅವರಿಗೆ ಬೆಲ್ಜಿಯಂನ ವಿಮಾನ ನಿಲ್ದಾಣದಲ್ಲಿ ಗೋಸ್ವಾಮಿ ಪರಿಚಯವಾಗುತ್ತಾರೆ. ಅವರ ಪತ್ನಿ ತೀರಿ ಹೋಗಿ ಒಂದು ವರ್ಷವಾಗಿರುತ್ತದೆ. ಮೂವರು ಮಕ್ಕಳಿದ್ದಾರೆ. ಎಲ್ಲರೂ ಕಾಲೇಜು ಓದುವ ವಯಸ್ಸಿನವರಿದ್ದರೂ ಇನ್ನೊಂದು ಮದುವೆಯ ಪ್ರಯತ್ನದಲ್ಲಿದ್ದರು. ೪೫ವರ್ಷದ ಅವರು ಇಬ್ಬರು ಹುಡುಗಿಯನ್ನು ನೋಡಿ ಬಂದಿದ್ದರ ಬಗ್ಗೆ ಲೇಖಕಿಯ ಹತ್ತಿರ ಪ್ರಸ್ತಾಪಿಸುತ್ತಾರೆ.

ಅದರಲ್ಲಿ ಒಬ್ಬಾಕೆ ವಿಧವೆ ೪೦ವರ್ಷ, ಮತ್ತೊಬ್ಬಳು ಸುಂದರವಾದ ಯುವತಿ ೨೦ವರ್ಷ. ಯುವತಿಯನ್ನು ಮದುವೆಯಾಗುವಂತೆ ಆಕೆಯ ತಂದೆಯ ಒತ್ತಾಯವಿದೆ ಎಂದಾಗ ಲೇಖಕಿ "ನೀವು ವಿಧವೆಯನ್ನು ಮದುವೆಯಾಗಿ, ಆಕೆ ನಿಮ್ಮ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಬಲ್ಲಳು. ಅಲ್ಲದೆ ಆಕೆಯ ಪ್ರಾಯವೂ ನಿಮಗೆ ಸರಿಯಾಗುತ್ತದೆ. ಯುವತಿ ಚಿಕ್ಕ ಪ್ರಾಯದವಳಾದ ಕಾರಣ ಅವಳಿಗೆ ಬೇರೆ ವರ ಸಿಗಬಹುದು"(ಭಾರತೀ ಭಟ್, ೨೦೦೦, ಪುಟ-೪೫) ಎಂದು ಸಲಹೆ ನೀಡುತ್ತಾರೆ. ಲೇಖಕಿಯ ಈ ಮಾತುಗಳಿಂದಾಗಿ ಆತನಿಗೆ ಮನಸಿಗೆ ಸಮಾಧಾನಕೊಟ್ಟಂತೆ ಕಾಣಿಸಿತ್ತಂತೆ. ಆತನ ಪ್ರಾಯಕ್ಕೂ, ಚಿಕ್ಕ ಮಗುವಿಗೂ ಎಲ್ಲಾ ಸಮಸ್ಯೆಗೆ ಸೂಕ್ತವಾದ ನಿರ್ಧಾರವನ್ನು ಕೊಟ್ಟರು. ಯುವತಿಯ ವಯಸ್ಸಿನ ಅಂತರ ದುಪ್ಪಟ್ಟು ಆಗುವ ಹುಡುಗಿಗಿಂತಲೂ ಅನುಭವವಿರುವ ವಿಧವೆ ಕುಟುಂಬವನ್ನು ನೋಡಿಕೊಳ್ಳಬಲ್ಲಳು. ಸಮಾಜದ ಅರಿವಿದ್ದ ವಿಧವೆ ಕುಟುಂಬದ ಕಡೆ ಹೆಚ್ಚು ಗಮನಹರಿಸಬಲ್ಲಳು. ಮರುಮದುವೆ ಆಗುವುದರಿಂದ ಕಳೆದುಕೊಂಡ ಜೀವನವು ಮರಳಿ ಸಿಕ್ಕಂತಾಗಿ ಕುಟುಂಬದ ಬಗ್ಗೆ ಗೌರವ ಉಳಿಸಿಕೊಳ್ಳಬಲ್ಲಳು ಎನ್ನುವ ಲೇಖಕಿಯ ಮಾತುಗಳಲ್ಲಿ ಸ್ತ್ರೀವಾದಿ ಧೋರಣೆಯ ಆಶಯಗಳಿರುವುದು ಕಂಡುಬರುತ್ತವೆ.

ಕೆನಡಾದ ಬಾಸ್ಕೆಟ್ ಬಾಲ್ ಆಟಗಾರರು ಹೋದಲ್ಲೆಲ್ಲಾ ಹುಡುಗಿಯರೊಂದಿಗೆ ಸಂಬಂಧ ಇಟ್ಟುಕೊಳ್ಳುತ್ತಿದ್ದರು. ಹುಡುಗಿಯರ ಮುಖಗಳನ್ನು ಗುರುತೇ ಹಿಡಿಯದಷ್ಟು ಸಂಬಂಧಗಳಾಗಿರುತ್ತಿದ್ದವೆಂದು ಉಮಾರಾವ್ ಅವರು 'ರಾಕೀ ಪರ್ವತಗಳ ನಡುವೆ ಕ್ಯಾಬರೆ' ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಅಲ್ಲಿನ ಆಟಗಾರನೊಬ್ಬನು "ಎಷ್ಟೊಂದು ಹುಡುಗಿಯರು ಅರ್ಧರಾತ್ರಿಯಲ್ಲಿ ನಮ್ಮ ಹೋಟೆಲ್ ರೂಮುಗಳಿಗೆ ಬಂದು ಬಾಗಿಲು ಬಡಿಯುತ್ತಾರೆ. ಬಾಗಿಲು ತೆಗೆದಂತೆ ನಮಗೆ ತೆಕ್ಕೆ ಬೀಳುತ್ತಾರೆ. ನಾವು ಮನುಷ್ಯರಲ್ಲವೇ? ನಂತರ ಇವರು ಗರ್ಭಿಣಿಯರಾಗಿ ಮಗು ಹೆತ್ತು, ನಮ್ಮ ಮೇಲೆ 'ಪ್ಯಾಟಿನಿಟಿ ಸ್ಯೂಟ್' ಹಾಕುತ್ತಾರೆ. ತಂದೆಯೆಂದು ಸಾಬೀತು ಮಾಡಿ ಮಿಲಿಯನ್ ಡಾಲರ್‌ಗಳನ್ನು ಮೇಂಟೆನನ್ಸ್ ರೂಪದಲ್ಲಿ ಪಡೆಯುತ್ತಾರೆ"(ಉಮಾರಾವ್, ೨೦೦೨, ಪುಟ-೧೦೪) ಎಂದು ಹೇಳುತ್ತಾರೆ. ಇಂತಹ ಸಂಬಂಧದಿಂದ ತಾಯಿಯಾದ ಒಬ್ಬ ಹುಡುಗಿ ಮಗುವಿಗೆ ತಂದೆ ಬೇಕೆಂದು ವಾದಿಸುತ್ತಾಳೆ. ಆಕೆಯ ಅಭಿಪ್ರಾಯಗಳನ್ನು ಲೇಖಕಿ "ನಾನು ಇವರು ಹೇಳುವಂತೆ ಗುಂಪುಗಳೊಂದಿಗೆ ಸಂಬಂಧ ಬೆಳೆಸುವ ಮಟ್ಟದವಳಲ್ಲ, ನಾನೇನು 'ಚಿನ್ನ ಹೆಕ್ಕಲು' ಇಂಥ ಕೆಲಸ ಮಾಡಿದವಳಲ್ಲ. ನನಗೆ ಅವನ ಕಂಡರೆ ತುಂಬಾ ಪ್ರೀತಿ. ಮೆಚ್ಚುಗೆ ಇತ್ತು. ಈಗ ನನಗೆ ಬೇಕಾಗಿರುವುದು ತಂದೆಯಾಗಿ. ಅವನೂ ತನ್ನ ಮಗುವಿನ ಬೆಳವಣಿಗೆಯಲ್ಲಿ ಭಾಗಿಯಾಗಬೇಕೆಂಬುದು..." (ಅದೇ, ಪುಟ-೧೦೫) ಎಂದು ದಾಖಲಿಸುತ್ತಾರೆ. ಈ ಎರಡು ಘಟನೆಗಳಲ್ಲಿ ಭಿನ್ನ ವೈರುಧ್ಯಗಳಿವೆ. ಒಂದು ಹೆಣ್ಣೇ ಗಂಡಸಿನ ಬಯಕೆಗೆ ಒಳಗಾಗಿ ಹಣ ಕೀಳುವುದು, ಎರಡನೇಯದು ಪ್ರೀತಿ, ಮೆಚ್ಚುಗೆಗಾಗಿ ಆತನನ್ನು ಪಡೆಯುವುದು. ಪ್ರೀತಿಯಲ್ಲಿಯ ಗಟ್ಟಿತನ ಮತ್ತು ಜೊಳ್ಳುವಿನ ದರ್ಶನ ಈ ಘಟನೆಗಳಲ್ಲಿ ನೋಡಬಹುದಾಗಿದೆ. ಆಧುನಿಕತೆಯ ಇಬ್ಬರು

ಮಹಿಳೆಯರಲ್ಲಿ ವಿಭಿನ್ನ ಅಭಿವ್ಯಕ್ತಿಗಳಿವೆ. ಹಣಕ್ಕಾಗಿ ದೇಹವನ್ನು ವ್ಯವಹಾರದಂತೆ ಭಾವಿಸಿರುವ ಮಹಿಳೆ ಒಂದು ಕಡೆಯಾದರೆ, ಮತ್ತೊಬ್ಬಳು ಲೈಂಗಿಕ ಸಂಬಂಧ ಹೊಂದಿ ಸಂಬಂಧ ಬೆಸೆದುಕೊಳ್ಳುತ್ತಾಳೆ. ಈ ಎರಡರ ದುರಂತವೆಂದರೆ ಈ ಆಧುನಿಕ ಮಹಿಳೆಯರು ಇನ್ನೊಬ್ಬರ ಮನಸನ್ನು ಅರ್ಥೈಸಿಕೊಂಡು ಗೆಲ್ಲುವ ಕಡೆ ಗಮನಹರಿಸಿಲ್ಲ. ಸ್ವಹಿತಾಸಕ್ತಿಯ ಅಭಿಪ್ರಾಯವೇ ಮುಖ್ಯವಾಗಿ ಕಂಡುಬರುತ್ತದೆ.

ಅಮೇರಿಕಾದಲ್ಲಿ ಲೇಖಕಿಯ ಮಗನ ಪರಿಚಿತ ಮಹಿಳೆಯೊಬ್ಬಳು ಮಗನಿರುವ ಸಂಗತಿ ತಿಳಿದು ನಿಮಗೆ ಮದುವೆಯಾಗಿದೆಯಾ ಎಂದು ಕೇಳುತ್ತಾಳೆ. ಇದರಿಂದ ಲೇಖಕಿ ಗಾಬರಿಗೆ ಒಳಗಾಗುತ್ತಾರೆ. ಭಾರತದಲ್ಲಿ ಅದು ಅಪಾರ್ಥವನ್ನು ಸೂಚಿಸುವ ಮಾತು. ಆದರೆ ಅಮೇರಿಕಾದಲ್ಲಿ ಸರ್ವೆ ಸಾಮಾನ್ಯ ಸಂಗತಿ. ಹದಿಹರೆಯದವರು ಗರ್ಭಿಣಿಯರಾಗುವುದು, ವಿವಾಹ ಬಾಹಿರ ಸಂತಾನಗಳನ್ನು ಹೆಮ್ಮೆಯಿಂದ ಬೆಳೆಸುವ ಪದ್ಧತಿ ಅಲ್ಲಿದೆ. ಈ ಕುರಿತು ಲೇಖಕಿ "ಭಾರತೀಯ ವಿವಾಹಗಳ ಬಗ್ಗೆ ಇವರಿಗೆ ತಿಳಿ ಹೇಳಿದರೂ ಧರ್ಮೇಚ, ಅರ್ಥೇಚ, ಕಾಮೇಚ, ನಾತಿ ಚರಾಮಿ ಎನ್ನುವ ವಿವಾಹಗಳು ಇಲ್ಲಿ ಅರ್ಥ ಕಳೆದುಕೊಳ್ಳುತ್ತವೆ. ಅಜೀವವರಿಗೂ ಒಂದನ್ನೇ ನಂಬಿಕೊಂಡು ಬಾಳುವುದು ಸುಳ್ಳು ಎನ್ನುವುದು ಸಾಮಾನ್ಯ ತಿಳುವಳಿಕೆ."(ಪದ್ಮಾಶಣೈ, ೧೯೯೮, ಪುಟ-೨೫)ಎಂದು ತಮ್ಮ 'ಅಮೇರಿಕಾ: ವಾಸ ಪ್ರವಾಸ' ಕೃತಿಯಲ್ಲಿ ನಿರೂಪಿಸುತ್ತಾರೆ. ಇದಕ್ಕೆ ವ್ಯತಿರೇಕ ಎಂಬಂತೆ ಭಾರತೀಯ ಮಹಿಳೆಯರು ಗಂಡನಿಂದ ಅಗಲಿರಬೇಕಾದ ಪರಿಸ್ಥಿತಿಯಲ್ಲಿಯೂ ಅವನನ್ನು ಕೂಡಿಕೊಳ್ಳುವ ಕ್ಷಣವನ್ನು ಲೆಕ್ಕ ಹಾಕುತ್ತಿರುತ್ತಾಳೆ. ವಿದೇಶದಲ್ಲಿ ಇವೆಲ್ಲವುಗಳು ತದ್ವಿರುದ್ಧವಾಗಿರುತ್ತವೆ. ಅಲ್ಲಿನ ಅತ್ತೆ ಸೊಸೆಯರು ಒಟ್ಟೊಟ್ಟಿಗೆ ವಾಸ ಮಾಡುವುದು ಅಪರೂಪವಾಗಿದೆ. ವಯಸ್ಕ ಮಕ್ಕಳು ಹೆತ್ತವರ ಜೊತೆ ವಾಸಿಸಲು ಇಷ್ಟಪಡುವುದಿಲ್ಲ. ಅಮೇರಿಕವು ಸ್ತ್ರೀ ಸ್ವಾತಂತ್ರ್ಯವಾದಿಗಳ ದೇಶ, ಇಲ್ಲಿ ಮಹಿಳೆಯರಿಗೆ ಪೂರ್ಣರೂಪದ ಸ್ವಾತಂತ್ರ್ಯವಿದೆ. ಸ್ತ್ರೀ ಮತ್ತು ಪುರುಷರೊಳಗೆ ಉಡುಗೆ, ತೊಡುಗೆ, ಆಹಾರ ವಿಹಾರ, ರೀತಿ ನೀತಿ ನೌಕರಿಯ ಅವಕಾಶಗಳು ಹೀಗೆ ಯಾವುದರಲ್ಲಿ ಭೇದ ಇಲ್ಲ. ಶೇಕಡಾ ೫೧% ವಿವಾಹ ವಿಚ್ಛೇದನಗಳು ಇವೆ. ಜೊತೆಯಾಗಿ ವಾಸಿಸುವುದು, ಬಾಯ್‌ಫ್ರೆಂಡ್ಸ್, ವಿವಾಹ ಬಾಹಿರ ಸಂಬಂಧಗಳು, ಮಕ್ಕಳನ್ನು ಹೇರುವುದು, ಸಾಕುವುದು, ಇಲ್ಲವೇ ತ್ಯಜಿಸುವುದು ಇಲ್ಲಿ ಯಾವುದು ಅಪರೂಪವಲ್ಲವಂತಾಗಿದೆ ಎಂದು ಲೇಖಕಿ ಅಮೇರಿಕಾದ ಸ್ತ್ರೀವಾದಿ ಧೋರಣೆಗಳ ಅಭಿವ್ಯಕ್ತಿಗಳ ಕುರಿತು ಪ್ರಸ್ತಾಪಿಸಿದ್ದಾರೆ.

ಪರಮೇಶ್ವರಿ ಲೋಕೇಶ್ವರ್ ಅವರ 'ಅಮೇರಿಕಾದಲ್ಲಿ ಅರವತ್ತು ದಿನಗಳು' ಪ್ರವಾಸ ಕೃತಿಯಲ್ಲಿ ಹಿಮಸಾಗರದಲ್ಲಿ ಬದುಕುವ ಪೆಂಗ್ವಿನ್‌ಗಳನ್ನು ಕಂಡು ಲೇಖಕಿಯು ಗಂಡು ಪೆಂಗ್ವಿನ್ ದಪ್ಪವಿದ್ದು, ಹೆಣ್ಣು ಪೆಂಗ್ವಿನ್ ಗಂಡಿಗಿಂತ ಕಡಿಮೆಯಿರುವುದನ್ನು ಗುರುತಿಸುತ್ತಾರೆ. ಇದನ್ನು ಹೆಣ್ಣು ಗಂಡಿಗೆ ರೂಪಕವಾಗಿ ತೆಗೆದುಕೊಂಡು ಹೀಗೆ ವಿಶ್ಲೇಷಣೆ ಮಾಡುತ್ತಾರೆ. "ಹೆಣ್ಣು ಯಾವಾಗಲೂ ದೈಹಿಕವಾಗಿ ಗಂಡಿಗಿಂತ ದುರ್ಬಲವಾಗಿಯೇ ಇರಲಿ ಎನ್ನುವುದೇನೋ

ಸೃಷ್ಟಿಕರ್ತನ ಧೋರಣೆ, ನಿಜವಾಗಿ ಸಂತಾನಾಭಿವೃದ್ಧಿಯಲ್ಲಿ ಹೆಣ್ಣಿನ ಶ್ರಮ ಗಂಡಿಗಿಂತಲೂ ಅಧಿಕ. ಆದರೂ ದೈಹಿಕವಾಗಿ ಹೆಣ್ಣು ಕೋಮಲ ಶರೀರದಿಂದಲೇ ಇರಲಿ. ಅದೇ ಆಕರ್ಷಣೆಯೇ ಹೆಣ್ಣಿಗೊಂದು ಸೊಬಗು ಎಂದು ನಿಸರ್ಗದ ಯೋಚನೆ ಇರಬೇಕು."(ಪರಮೇಶ್ವರಿ ಲೋಕೇಶ್ವರ್, ೨೦೦೩, ಪುಟ-೬೯) ಲೇಖಕಿಯ ಈ ಮಾತುಗಳಲ್ಲಿ ಹೆಣ್ಣಿನ ದೈಹಿಕ ರಚನೆ, ಶಕ್ತಿ, ನಿಸರ್ಗದ ರಚನೆಯ ಬಗ್ಗೆ ಹೆಮ್ಮೆಯೂ ಇದೆ. ದುರ್ಬಲ ಎನ್ನುವ ಹೆಣ್ಣಿನ ದೈಹಿಕ ರಚನೆಯು ಸೃಷ್ಟಿಕರ್ತನ ತಪ್ಪಲ್ಲವೆಂದು. ಹೆಣ್ಣುತನಕ್ಕೆ ಸೂಕ್ತವಾದುದು ಎಂದಿದ್ದಾರೆ. ಆದರೆ ಹೆಣ್ಣನ್ನು ವ್ಯಾಪಾರೀಕರಣದಲ್ಲಿ ಬಳಸಿಕೊಳ್ಳುತ್ತಿರುವ ರೀತಿಯನ್ನು ಮಾತ್ರ ಪ್ರಶ್ನಿಸುತ್ತಾರೆ. ಅಮೇರಿಕಾ ಪ್ರವಾಸದಲ್ಲಿ ಅಲ್ಲಿನ ದೈನಿಕ ಪತ್ರಿಕೆಗಳಲ್ಲಿಯೂ ೪೦-೫೦ಪುಟಗಳಲ್ಲಿ ಹೆಚ್ಚಿನ ಪುಟಗಳು ಜಾಹಿರಾತಿನಿಂದಲೇ ಕೂಡಿರುತ್ತವೆ. ಜಾಹಿರಾತಿಗಾಗಿಯೇ ಪ್ರತ್ಯೇಕ ಪುಟಗಳು ಮೀಸಲಾಗಿರುತ್ತವೆ. ಅದೆಷ್ಟೋ ಉದ್ಯಮಗಳು, ಸಂಘ-ಸಂಸ್ಥೆಗಳು ಮುದ್ರಿಸುವ ಮುದ್ದಾದ ಬಿಳಿ-ಕರಿ ಸುಂದರಿಯರ ಅರೆಬೆತ್ತಲೆಯ ಮುಖಪುಟವನ್ನು ಹೊಂದಿರುವ ನುಣುಪು ಕಾಗದದ ಪತ್ರಿಕೆಗಳು ಆ ದೇಶದ ತುಂಬೆಲ್ಲಾ ಹರಿದಾಡುತ್ತವೆ. ಜಾಹಿರಾತಿನ ಪ್ರಮುಖ ಆಕರ್ಷಣೆಯೇ ಹೆಣ್ಣು, ಆದರೆ ಬಳಸಿಕೊಳ್ಳುವವರ ಮನೋಧೋರಣೆ ಪ್ರಶ್ನಿಸುವಂತಹದ್ದೇ ಆಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಮಧ್ಯಪ್ರದೇಶದ ಖಜುರಾಹುದ ಐತಿಹಾಸಿಕ ಸ್ಥಳದಲ್ಲಿ ಮಹಿಳೆಯರಿಗೆ ಆಧುನಿಕ ಕಾಲದಲ್ಲೂ ಶೌಚಾಲಯ ನಿರ್ಮಿಸಿ ಕೊಡದ ಬಗ್ಗೆ ಇಂದಿರಾ ಹೆಗ್ಗಡೆ ಅವರು 'ಇಂದ್ರಪ್ರಸ್ಥದಿಂದ ಐತಿಹಾಸಿಕ ನಡೆ' ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಅಲ್ಲಿನ ಮಹಿಳೆಯರು ತಲೆಯನ್ನು, ಮುಖವನ್ನು ಸೆರಗಿನಿಂದ ಮರೆಮಾಡದೆ ಇದ್ದಲ್ಲಿ (ಪರದಾ) ಆ ವಂಶದ ಮಾನ ಹೋಯಿತು ಎನ್ನುವ ಸಂಸ್ಕೃತಿಯು ಇಂದಿಗೂ ಪ್ರಚಲಿತವಾಗಿದೆ. ಮಹಿಳೆಯರು ಬರ್ಹಿದೆಸೆಗೆ ಹೊರಗಡೆ ಹೋಗಿ ಗಿಡಮರಗಳ ಹಿಂದೆ ಕೂರುವ ಪರಿಸ್ಥಿತಿ ಈಗಲೂ ಇದೆ ಎನ್ನುತ್ತಾರೆ. ಹಳ್ಳಿಯ ಬಡವರು ಪಾಯಿಖಾನೆ ಕಟ್ಟಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಪ್ರವಾಸ ಬರುವವರಿಗಾದರೂ ಇರಬೇಕಲ್ಲ. ಇದು ಒಂದು ರಾಜ್ಯದ ಸಾಂಸ್ಕೃತಿಕವಾದ ಪ್ರಶ್ನೆ ಎಂದಿದ್ದಾರೆ. ಮಧ್ಯಪ್ರದೇಶ ಸರ್ಕಾರ ಪ್ರವಾಸಿತಾಣಗಳಲ್ಲಿ ನಿರ್ಲಕ್ಷ್ಯ ತೋರಿದ್ದ ಬಗ್ಗೆ ಪ್ರಸ್ತಾಪಿಸುವ ಇಂದಿರಾ ಹೆಗ್ಗಡೆಯವರ ಈ ಕೃತಿ ೨೦೧೮ರಲ್ಲಿ ಬಂದಂತಹ ಕೃತಿಯಾಗಿದ್ದು. ಇಂತಹ ಹೊತ್ತಿನಲ್ಲೂ ಸ್ತ್ರೀಯರ ಪರವಾದ ಯೋಜನೆಗಳು ಮಧ್ಯಪ್ರದೇಶದಲ್ಲಿ ಇಲ್ಲವಾಗಿವೆ. ಸ್ವಚ್ಛಭಾರತ ಪರಿಕಲ್ಪನೆ ಈ ರಾಜ್ಯಕ್ಕೆ ತಟ್ಟಿಲ್ಲದಂತೆ ಮೌನವಾಗಿರುವುದನ್ನು ಗಮನಿಸಿದರೆ ಆಧುನಿಕ ಮಹಿಳಾ ಪ್ರಜ್ಞೆಯ ಅಭಿವ್ಯಕ್ತಿಗಳು ಸಂಪೂರ್ಣವಾಗಿ ಜಾರಿಯಾಗದ ಬಗ್ಗೆ ಸ್ಪಷ್ಟವಾಗುತ್ತದೆ. ರುಕ್ಮಿಣಿ ಗಿರಿಮಾಜಿ ಅವರ 'ಬೆಂಗಳೂರಿನಿಂದ ಬದರಿನಾಥಕ್ಕೆ' ಪ್ರವಾಸ ಕಥನದಲ್ಲಿ ಬದರಿನಾಥಕ್ಕೆ ಹೋಗುವ ಸಂದರ್ಭದ ಅನುಭವವನ್ನು ಹಂಚಿಕೊಂಡಿದ್ದಾರೆ. ಅಲ್ಲಿನ ಬಸ್‌ಗಳಲ್ಲಿ ಗಂಡಸರು ಹೆಂಗಸರು ಸಮಾನ ಅಧಿಕಾರ ಬೇಡಿದರೂ ಸಹ ಬಸ್ಸುಗಳಲ್ಲಾಗಲೀ ಇತರ ಸ್ಥಳಗಳಲ್ಲಾಳಾಗಲೀ ಸ್ತ್ರೀಯರಿಗೇ ಕುಳಿತುಕೊಳ್ಳಲು ಮೊದಲು ಅವಕಾಶ ಕೊಡುತ್ತಾರೆ. ಯಾರಾದರೂ ಸ್ತ್ರೀಯರು ನಿಂತಿದ್ದನ್ನು ಕಂಡು ಗಂಡಸರು ಭಂಡತನದಿಂದ ಕುಳಿತೇ ಇದ್ದರೆ,

ಇತರ ಪ್ರಯಾಣಿಕರು ಮೊದಲು ವಿನಂತಿಸಿಕೊಳ್ಳುತ್ತಾರೆ. ಅವರು ಏಳದಿದ್ದರೆ ರಟ್ಟೆ ಹಿಡಿದು ಎಬ್ಬಿಸಿ ಅಲ್ಲಿ ಆಕೆಯನ್ನು ಕೂರಿಸುತ್ತಾರೆ. ಇದು ಅಲ್ಲಿ ಸ್ತ್ರೀಯರಿಗೆ ಕೊಡುವ ಗೌರವವಾಗಿದೆ ಎಂದು ಲೇಖಕಿ ನಿರೂಪಿಸಿದ್ದಾರೆ.

ಕನ್ನಡ ಪ್ರವಾಸ ಕಥನಗಳಲ್ಲಿ ಸ್ತ್ರೀವಾದಿ ದೃಷ್ಟಿಧೋರಣೆಗಳನ್ನು ಗಮನಿಸಿದಾಗ ಪುರುಷ ಪ್ರವಾಸ ಕಥನಗಳಿಗಿಂತಲೂ ಹೆಚ್ಚಾಗಿ ಮಹಿಳಾ ಪ್ರವಾಸ ಕಥನಗಳಲ್ಲಿ ಕಂಡುಬರುತ್ತವೆ. ಮಹಿಳೆಯರ ಮೇಲಾಗುವ ದಬ್ಬಾಳಿಕೆಯ ವಿರುದ್ಧ ದೇಶ, ವಿದೇಶದಲ್ಲಿ ಅನೇಕ ಮಹಿಳಾ ಹೋರಾಟಗಳೇ ನಡೆದಿವೆ. ಇಂತಹ ಚಳುವಳಿಗಳಿಂದಾಗಿಯೇ ಸ್ತ್ರೀವಾದ ಜಗತ್ತಿನೆಲ್ಲಡೆ ಹರಿದು ಸಮಾನತೆಯ ಹಾದಿಯಲ್ಲಿ ಸಾಗುತ್ತಿದ್ದಾರೆ. ಆದರೂ ನಗರದ ಮಹಿಳೆಯರಿಗಿಂತ ಗ್ರಾಮೀಣ ಮಹಿಳೆಯರ ಸ್ಥಿತಿಗತಿಗಳು ಬದಲಾಗಿಲ್ಲ. ಹೀಗಾಗಿ ಸ್ತ್ರೀವಾದ ದೃಷ್ಟಿಧೋರಣೆಗಳನ್ನು ಅರಿಯಬೇಕಾದ ಅಗತ್ಯತೆ ಇದೆ.

೭.೨. ಪ್ರವಾಸ ಕಥನಗಳಲ್ಲಿ ಪಾರಂಪರಿಕ ಪುರುಷ ಪ್ರಧಾನ ಮೌಲ್ಯ- ಮಡಿವಂತಿಕೆಗಳ ಪ್ರಶ್ನೆ

ಪ್ರವಾಸ ಕಥನಗಳಲ್ಲಿ ಪಾರಂಪರಿಕ ಪುರುಷ ಪ್ರಧಾನ ಮೌಲ್ಯಗಳ ಪ್ರಶ್ನೆ ಎಂಬುದು ಬಹುತೇಕ ಎಲ್ಲಾ ದೇಶಗಳಿಗೆ ಅನ್ವಯಿಸುವಂತಹದ್ದು. ಗಂಡು ಹೆಣ್ಣು ಇರುವ ಕಡೆ, ಮೇಲು ಕೀಳು ಪ್ರಶ್ನೆ ಬಂದಾಗ ಮನುಷ್ಯರು ಅನೇಕ ನಂಬಿಕೆಗಳನ್ನು ಹುಟ್ಟಿಸಿಕೊಂಡಿದ್ದಾರೆ. ಹೀಗೆ ಸೃಷ್ಟಿಸಿಕೊಂಡ ನಂಬಿಕೆಗಳಲ್ಲಿ ತಮಗೆ ಅನುಕೂಲಕ್ಕೆ ತಕ್ಕ ಹಾಗೆ ಮಾರ್ಪಡಿಸಿಕೊಂಡ ರೀತಿ ರಿವಾಜುಗಳೇ ಹೆಚ್ಚಾಗಿವೆ. ಇವುಗಳು ಮಹಿಳೆಗೆ ವರದಾನವಾಗದೆ ಎಲ್ಲವನ್ನೂ ಸಂಭಾಳಿಸಿಕೊಂಡು ಹೋಗುವಂತೆ ಪುರುಷ ವ್ಯವಸ್ಥೆಯೊಳಗೆ ಸಿಕ್ಕು ನಲುಗುವಂತಾಯಿತು. ಹಲವು ಶತಮಾನಗಳನ್ನು ದಾಟಿ ಆಧುನಿಕತೆಗೆ ಮುಖಮಾಡಿ ನಿಂತರು ಅದರಿಂದ ಹೊರಬರಲು, ಸಮಾನತೆಯ ಹಕ್ಕುಗಳನ್ನು ಪಡೆಯಲು ಹೋರಾಟಗಳು ನಡೆಯುತ್ತಲೇ ಇವೆ. ಆದರೂ ಸಾಧಿಸಿದ್ದು ಅಲ್ಪ ಮಾತ್ರ, ಪಾರಂಪರಿಕ ಪುರುಷ ವ್ಯವಸ್ಥೆಯ ನಂಬಿಕೆಯೊಳಗೆ ಮಹಿಳೆಯರು ಸಿಲುಕಿಕೊಂಡಿದ್ದನ್ನು ಕುರಿತು ಅನುಪಮಾ ನಿರಂಜನ ಅವರು 'ಸ್ನೇಹಯಾತ್ರೆ' ಪ್ರವಾಸ ಕಥನದಲ್ಲಿ ಪ್ರಸ್ತಾಪಿಸುತ್ತಾರೆ. ಜರ್ಮನಿಯ ಪ್ರವಾಸಿ ಗೈಡ್ ಆಗಿದ್ದ ರುತ್‌ಳು ಲೇಖಕಿಯ ಬೆರಳನ್ನು ಗಮನಿಸಿ ನಿಮಗೆ ಮದುವೆಯಾಗಿದೆಯಾ ಎಂದಾಗ, ಮಕ್ಕಳು ಇದ್ದಾರೆ ಎಂದು ಲೇಖಕಿ ಹೇಳುತ್ತಾರೆ. ರುತ್‌ಳು ನಿಮ್ಮ ಬೆರಳಲ್ಲಿ ಮದುವೆಯ ಉಂಗುರ ಇರಲಾರದ ಬಗ್ಗೆ ಹೇಳಿದಾಗ, ಲೇಖಕಿಯು ಕತ್ತಿನಲ್ಲಿದ್ದ ಕರಿಮಣಿಸರ ತೋರಿಸಿ ತಾಳಿ ಹಾಕ್ಕೋತ್ತೀವಿ ಎನ್ನುತ್ತಾರೆ. ಬ್ಯೂಟಿಫುಲ್ ಎಂದು ಉದ್ಗಾರತೆಗೆದ ರುತ್ ಕರಿಮಣಿಸರ, ತಾಳಿನೂ ಗಂಡಸರು ಹಾಕ್ಕೋತಾರಾ? ಎಂದಾಗ, ಭಾರತೀಯ ಮಹಿಳೆಗೆ ಕರಿಮಣಿ ಸರ ಮದುವೆಯಾಗಿದ್ದರ ಸಂಕೇತ ಎಂದು ಉತ್ತರಿಸುತ್ತಾದರೂ ರುತ್‌ಳ ಪ್ರಶ್ನೆಯು ಭಾರತದ ಮೂಲಭೂತವಾದಿ ತನವನ್ನು ಪ್ರಶ್ನಿಸುವಂತೆ ಮಾಡಿತ್ತು.

ಗಂಡಿಗಿರುವಷ್ಟೇ ಅಸಮಾನತೆಯ ಈ ಸಂಕೇತವನ್ನು ಯಾಕೆ ನಾವ್ಯಾರು ವಿಶೇಷವಾಗಿ ಗಮನಿಸಿಲ್ಲ ಅನಿಸಿತು ಎಂದು ಲೇಖಕಿ ಅಭಿಪ್ರಾಯ ಪಟ್ಟಿದ್ದಾರೆ.

ಮಹಿಳೆಯರು ವಿದೇಶಕ್ಕೆ ಹೋಗಬೇಕಾದರೆ ತಮ್ಮ ಗಂಡಂದಿರ, ಕುಟುಂಬದವರ ಜೊತೆಯಾಗಿಯೋ, ಅನುಮತಿ ಪಡೆದೋ, ನಂಬಿಕಸ್ಥರ ಜೊತೆಯಾಗಿಯೋ ಪ್ರವಾಸ ಕೈಗೊಳ್ಳಬೇಕಾಗಿತ್ತು. ಆದರೆ ಗಂಡಸರು ಪ್ರವಾಸ ಕೈಗೊಳ್ಳುವಾಗ ಪತ್ನಿಯರಾಗಲಿ, ಕುಟುಂಬದವರಾಗಲಿ ಯಾರ ಅನುಮತಿಯನ್ನು ಪಡೆಯಬೇಕಾಗಿಲ್ಲ. ಕುಟುಂಬಸ್ಥರ, ಗಂಡಂದಿರ ಒಪ್ಪಿಗೆ ಪತ್ರವನ್ನು ಪಡೆದು ಪ್ರವಾಸ ಮಾಡುವ ದುಸ್ಥಿತಿಯನ್ನು ಕುರಿತು 'ಯುರೋ ದರ್ಶನ' ಕೃತಿಯಲ್ಲಿ ಲೇಖಕಿ "ಟ್ರಾವೆಲ್ ಏಜೆಂಟರ್ ತಿಳಿಸಿದಂತೆ ನಮ್ಮ ನಮ್ಮ ಗಂಡಂದಿರು ನಮ್ಮ ಪ್ರವಾಸಕ್ಕೆ ಅನುಮತಿ ಕೊಡುವ ಪತ್ರಗಳನ್ನು ಒಯ್ದಿದ್ದೆವು! ಗಂಡಂದಿರಿಗೆ ಮಾತ್ರ ವಿದೇಶಕ್ಕೆ ಹೋಗಲು ಹೆಂಡತಿಯರ ಪರವಾನಿಗೆ ಅವಶ್ಯಕತೆಯಿಲ್ಲ. ಆದರೆ ಹೆಂಡತಿಯರಿಗೆ ಮಾತ್ರ ಈ ನಿರ್ಬಂಧವೇಕೋ ಅರ್ಥವಾಗಲಿಲ್ಲ. ಯಾವಾಗಲಾದರೂ ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬೇಕೆಂದು ನಿರ್ಧರಿಸಿದೆ!" (ಹೇಮಲತಾ ಮಹಿಷಿ, ೧೯೯೯, ಪುಟ-೮) ಎಂದು ಯೋಚಿಸುತ್ತಾರೆ. ಇಂತಹ ಅನೇಕ ಕಟ್ಟುಪಾಡುಗಳು ಸ್ತ್ರೀಯರಿಗಿದ್ದ ಬಗ್ಗೆ ವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದ ಲೇಖಕಿ ಹೇಮಲತಾ ಮಹಿಷಿಯವರು ನ್ಯಾಯಲಯದಲ್ಲಿ ಈ ವಿಷಯದ ಬಗ್ಗೆ ಪ್ರಶ್ನಿಸಬೇಕು ಎಂದುಕೊಳ್ಳುತ್ತಾರೆ. ಆಧುನಿಕ ಮಹಿಳೆಯರ ಅಭಿವ್ಯಕ್ತಿಗಳಿಗೆ ಉದ್ಯೋಗದ ಸಮಸ್ಯೆ ಮುಖ್ಯವಾಗಿ ಕಾಡುತ್ತದೆ. ಕಾರ್ಮಿಕ ಕಾಯ್ದೆಯಲ್ಲಿ ಲಿಂಗ ತಾರತಮ್ಯಗಳಿಗೆ ಅವಕಾಶಗಳಿಲ್ಲದಿದ್ದರೂ, ಖಾಸಾಗಿ ಕಂಪನಿಗಳಲ್ಲಿ ಮಹಿಳೆಯರಿಗೆ ಬಾಸ್‌ಗಳು ಸಂತಾನಹರಣ ಗುಳಿಗೆಗಳನ್ನು ತೆಗೆದುಕೊಳ್ಳುವಂತೆ ಒತ್ತಾಯಪಡಿಸುತ್ತಾರೆ. ಕೌಟುಂಬಿಕ ವಿಷಯಗಳಲ್ಲಿ ಅನಗತ್ಯ ಪ್ರಶ್ನೆಗಳಿಂದ ಉದ್ಯೋಗದಿಂದ ವಂಚಿತಳಾಗುವಂತೆ ಮಾಡುತ್ತಾರೆಂದು ಲೇಖಕಿ ದಾಖಲಿಸುತ್ತಾರೆ. ಇವರ 'ಹಂಗೇರಿಯಲ್ಲಿ ಹೇಮ' ಎಂಬ ಕೃತಿಯಲ್ಲಿ ಮಹಿಳೆಯರ ಮೇಲೆ ದೈಹಿಕವಾಗಿ ಹಲ್ಲೆ ಮಾಡುವಂತಹ ಸಂಗತಿಗಳನ್ನು ಹೇಳುತ್ತಾರೆ. ಭಾರತದಲ್ಲಿ 'ಎಮ್ಮೆ ಹಾಗೂ ಹೆಂಗಸು ಬಡಿಯಲು ಯೋಗ್ಯರು' ಎನ್ನುವ ಗಾದೆ ಮಾತುಗಳು, ಹಂಗೇರಿಯಲ್ಲಿ 'ಎಣಿಸಲು ಹಣ ಉತ್ತಮ, ಬಡಿಯಲು ಹೆಂಗಸು ಉತ್ತಮ' ಎಂಬ ಗಾದೆ ಮಾತುಗಳಿಗೂ ಸಾಮ್ಯತೆಗಳಿವೆ. ಮಹಿಳೆಯರನ್ನು ಕೌಟುಂಬಿಕವಾಗಿ ಹಿಂಸಿಸುವ, ದೌರ್ಜನ್ಯ ಎಸಗಲು ಪಾರಂಪರಿಕ ಪುರುಷ ಪ್ರಧಾನ ಸಮಾಜವು ಕಟ್ಟಿಕೊಂಡ ಗಾದೆಯಂತಿದೆ. ದನ, ಕರು, ಎಮ್ಮೆಯಂತಹ ಮೂಕ ಜೀವಿಗಳನ್ನು ಹೊಡೆದರು ಹೇಗೆ ಹಿಂತಿರುಗುವುದಿಲ್ಲವೋ, ಹಾಗೆಯೇ ಇಲ್ಲಿನ ಮಹಿಳೆಯರನ್ನು ಬೇಕಾದಂತೆ ಬಳಸಿಕೊಳ್ಳುವ, ಹಿಂಸೆಗೆ ಒಳಪಡಿಸಬಹುದಾದ ಸರಕು ಎನ್ನುವಂತಹ ದೃಷ್ಟಿಕೋನಗಳಿರುವುದು ಕಂಡುಬರುತ್ತದೆ. ಈ ಗಾದೆ ಮಾತುಗಳು ಸಾಮಾಜಿಕ ಬದಲಾವಣೆಗೆ ಅವಕಾಶ ನೀಡದೆ ಪುರುಷ ಪಾರಂಪರಿಕ ಸಮಾಜವನ್ನು ಯಥಾಸ್ಥಿತಿಯಲ್ಲಿಡುವುದಾಗಿದೆ.

೧೯೮೮ರಲ್ಲಿ ಅಮೇರಿಕಾ ಪ್ರವಾಸ ಕೈಗೊಂಡ ಅನುಪಮಾ ನಿರಂಜನ ಅವರು 'ಅಂಗೈಯಲ್ಲಿ ಯುರೋ ಅಮೇರಿಕ' ಎಂಬ ಕೃತಿಯಲ್ಲಿ ಸ್ವಿಟ್ಜರ್ಲೆಂಡ್ ದೇಶದಲ್ಲಿ ಹೆಂಗಸರಿಗೆ ಮತದಾನದ ಹಕ್ಕನ್ನು ನಿರಾಕರಿಸಿದ ಕುರಿತು ನಿರೂಪಿಸುತ್ತಾರೆ. ಅಲ್ಲಿನ ಮಹಿಳೆಯರನ್ನು ಲೇಖಕಿ ಪ್ರಶ್ನಿಸಿದಾಗ 'ನಮಗ್ಯಾಕೆ ಬೇಕು ಓಟಿನ ಹಕ್ಕು? ನಮಗೆ ಬೇಕು ಅಂದದ್ದನ್ನು ನಮ್ಮ ಗಂಡಂದಿರ ಮೂಲಕ ಪಡಕೋತೀವಿ' ಎನ್ನುತ್ತಿದ್ದರಂತೆ. ಮರಿಯಾ ಎನ್ನುವ ಮಹಿಳೆಯು ರೋಮನ್ ಚರ್ಚ್‌ನಲ್ಲಿ ಹೆಣ್ಣು ಮಕ್ಕಳಿಗೆ ಮಕ್ಕಳು ಬೇಡ ಅಂದರೆ ಅಬಾರ್ಷನ್ ಮಾಡಿಸಿಕೊಳ್ಳೋಕೆ ಹಕ್ಕಿಲ್ಲ ಎಂದು ಹೇಳುತ್ತಾಳೆ. ಈ ಮಾತನ್ನು ಕೇಳಿದ ಲೇಖಕಿಗೆ ಮತ್ತು ಅವರ ಸ್ನೇಹಿತೆಗೆ ಈ ವಿಷಯದಲ್ಲಿ ಇಂಡಿಯಾ ವಾಸಿ ಎಂದುಕೊಳ್ಳುತ್ತಾರೆ. ಮಹಿಳೆಯರಿಗೆ ಸ್ವತಂತ್ರ ಎನ್ನುವಂತಾದ್ದು ಸಾಗರದಾಚೆಯ ಮುಂದುವರೆದ ದೇಶಗಳಲ್ಲೂ ಕಡಿವಾಣಗಳಿವೆ. ಕೆಲವು ವರ್ಷಗಳಿಂದೀಚೆಗೆ ಹಕ್ಕನ್ನು ನೀಡಿದೆಯಾದರೂ, ಪ್ರಾಚೀನ ಕಾಲದಿಂದಲೂ ಕೇವಲ ಭಾರತದ ನೆಲದಲ್ಲಿ ಮಾತ್ರವಲ್ಲ, ಪ್ರಪಂಚದ ಅನೇಕ ಕಡೆಗಳಲ್ಲಿ ಹೆಣ್ಣನ್ನು ದ್ವಿತೀಯ ದರ್ಜೆಯವಳಾಗಿ ನೋಡುವುದನ್ನು ಪುರುಷ ಪ್ರಧಾನ ಸಮಾಜ ನಡೆಸಿಕೊಂಡು ಬಂದಿರುವುದಕ್ಕೆ ಸ್ವಿಟ್ಜರ್ಲೆಂಡ್ ಉತ್ತಮ ಉದಾಹರಣೆಯಾಗಿದೆ. ಅಮೇರಿಕದ 'ಕ್ಯಾಪಿಟೋಲ್ ಭವನ'ವು ಪ್ರಜಾಪ್ರಭುತ್ವದ ಸಂಕೇತದಂತಿದ್ದರೂ, ಪ್ರತಿಮಾಗೃಹವು ಪುರುಷ ಪ್ರತಿಮೆಗಳಿಂದಲೇ ಕೂಡಿದೆ ಎಂದಿದ್ದಾರೆ. ಅಮೇರಿಕದಲ್ಲಿ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಸ್ತ್ರೀ ವಿಮೋಚನಾ ಚಳುವಳಿಯಲ್ಲಿ ಅನೇಕ ಹೋರಾಟಗಾರ್ತಿಯರಿದ್ದರು, ಪ್ರಾನ್ಸಿಸ್ ವಿಲ್ಲರ್ಡ್ ಪ್ರತಿಮೆ ಮಾತ್ರ ನಿರ್ಮಾಣ ಮಾಡಿದ್ದು, ಅಲ್ಲಿನ ಪುರುಷ ಪ್ರಾಧಾನ್ಯತೆಯ ನಿಲುವನ್ನು ಎತ್ತಿತೋರಿಸುತ್ತದೆ ಎಂದು ಲೇಖಕಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಪೆರುವಿನ ನೆಲದಲ್ಲಿ ಪುರುಷ ಪ್ರಧಾನ ಸಮಾಜದ ಕ್ರೌರ್ಯವನ್ನು ಕುರಿತು ನೇಮಿಚಂದ್ರ ಅವರು 'ಪೆರುವಿನ ಪವಿತ್ರ ಕಣಿವೆಯಲ್ಲಿ' ಎಂಬ ಕೃತಿಯಲ್ಲಿ ವಿವರಿಸುತ್ತಾರೆ. ಪೆರುವಿನ 'ಶೈನಿಂಗ್ ಪಾತ್' ಗೊರಿಲ್ಲಾ ಪಡೆಗಳು ಮಹಿಳಾ ಹಕ್ಕಿಗಾಗಿ ಹೋರಾಡಿದ ಮೇರಿ ಎಲೆನಾಳನ್ನು ಕೊಂದು ಹಾಕುತ್ತಾರೆ. ಆಕೆಯ ದೇಹವನ್ನು ತನ್ನ ಮಕ್ಕಳ ಎದುರು ಡೈನಾಮೆಟ್‌ಗಳಿಂದ ಛಿದ್ರಗೊಳಿಸುತ್ತಾರೆ. ಈ ಭೀಕರ ಹತ್ಯೆಯ ಮೂಲಕ ಅಲ್ಲಿನ ಪುರುಷ ಸಮಾಜದ ವಿರುದ್ಧವಾಗಿ ಹೋರಾಡುವ ಮಹಿಳೆಯರಿಗೆ ಎಚ್ಚರಿಕೆಯನ್ನು ಕೊಟ್ಟಿತ್ತು. ಭಾರಿ ಜನಪ್ರಿಯತೆ ಪಡೆದ ಆಕೆಯ ಸಾವು ಅತಿದೊಡ್ಡ ಪೆಟ್ಟು ನೀಡಿತ್ತು. ಆಕೆಯ ಅಂತ್ಯ ಸಂಸ್ಕಾರದಲ್ಲಿ ಸಾವಿರಾರು ಜನ ಭಾಗವಹಿಸಿದರು. ಈ ಘಟನೆಯ ನಂತರವೂ ಶೈನಿಂಗ್ ಪಾತ್‌ನ ಹಿಂಸಾತ್ಮಕ ಕೊಲೆಗಳು ಮುಂದುವರೆದಿದ್ದವು. ಎಲೆನಾಳ ಧಾರುಣ ಹತ್ಯೆ ನಂತರ ಕ್ಯಾಂಟೀನ್ ಯೋಜನೆಗೆ ದುಡಿಯುತ್ತಿದ್ದ ಪ್ಯಾಸ್ಕುಲಾ ರೊಸಾದೋಳನ್ನು ಕೊಂದುಹಾಕಿದರು. ಮಹಿಳೆಯರು ಪೆರುವಿನ ಆತಂಕವಾದಿಗಳ ಟಾರ್ಗೆಟ್ ಆಗಿದ್ದ ಬಗ್ಗೆ ಲೇಖಕಿ ದಾಖಲಿಸಿದ್ದಾರೆ. ಇವು ಆಧುನಿಕ ಕಾಲದಲ್ಲಿಯೂ ನಿಲ್ಲದೆ ಮುಂದುವರೆದ ಬಗ್ಗೆ ಲೇಖಕಿಯು "ಫ್ಯುಜಿಮೊರಿ ಕಾಲದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ

ಎಸಗಿದ ಪೊಲೀಸರು, ಸೈನಿಕರು, ಮಹಿಳಾ ಹೋರಾಟಗಾರ್ತಿಯರನ್ನು ಕ್ರಾಂತಿಕಾರಿ ತಂಡದವರು ಕೊಂದು ಮುಗಿಸಿದರು. ಯಾವುದೇ ಶಿಕ್ಷೆ ಇಲ್ಲದೆ ನುಸುಳಿ ಹೋಗಿರುವ ಸಂದರ್ಭಗಳೇ ಹೆಚ್ಚು. ಎಲೆನಾಳ ಬದುಕು ಮತ್ತು ಸಾವು ಬರೀ ಪೆರುವಿನ ಮಹಿಳೆಯರ ಅನುಭವವಾಗಿ ಮುಗಿಯುವುದಿಲ್ಲ. ಮೂರನೆ ಜಗತ್ತಿನ ಮಹಿಳೆಯರೆಲ್ಲರ ಹೋರಾಟವನ್ನು ಪ್ರತಿಬಿಂಬಿಸುತ್ತದೆ. ಜೊತೆಗೆ ಲ್ಯಾಟಿನ್ ಅಮೆರಿಕದ ಮಹಿಳಾ ಹೋರಾಟದ ಸದ್ಯದ ಚರಿತ್ರೆಯನ್ನು ತಿಳಿಸುತ್ತದೆ"(ನೇಮಿಚಂದ್ರ, ೨೦೦೪, ಪುಟ-೪೧) ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸರ್ಕಾರದ ಅಂಗ ಸಂಸ್ಥೆಗಳೇ ಅತ್ಯಾಚಾರಗಳನ್ನು ಮಾಡಿಸುವ, ಹೋರಾಟಗಳನ್ನು ಹತ್ತಿಕ್ಕುವ, ಕೊಲ್ಲುವ ಕೆಲಸಕ್ಕೆ ಇಳಿಯುತ್ತವೆ. ಕೊಂದಿರುವ ತಪ್ಪಿಗಾಗಿ ಶಿಕ್ಷೆಗೆ ಒಳಪಡದೆ ಕಾನೂನಿಂದಲೂ ತಪ್ಪಿಸಿಕೊಳ್ಳುವುದನ್ನು ನೋಡಿದರೆ ಅಲ್ಲಿನ ಪುರುಷರು ಮಹಿಳೆಯರನ್ನು ನೋಡುವ ದೃಷ್ಟಿಕೋನಗಳು ಎಂತಹದ್ದು ಎಂಬುದನ್ನು ಅರಿಯಬಹುದಾಗಿದೆ.

ಪ್ರಥಮ ಸ್ತ್ರೀವಾದಿ ಚಿಂತಕಿ ಆಫ್ರಾ ಬೆನ್‌ಳು ಅಮೆಜಾನ್ ಪ್ರದೇಶವು ಡಚ್ಚರ, ಫ್ರೆಂಚರ ಕಾಲೋನಿಗಳಾದಾಗ ಬಂಡಾಯಗಾರರ ಜೊತೆ ಸೇರಿ ಬಂಡಾಯ ಸಾರಿದ್ದ ಅನುಭವಗಳನ್ನು ತಮ್ಮ 'ಒರಂಕೋ' ಕೃತಿಯಲ್ಲಿ ದಾಖಲಿಸಿದ್ದಾರೆ. ಕಪ್ಪು ರಾಜನ ಸಂಗಾತಿಯಾಗಿದ್ದ ಆಫ್ರಾ ಬೆನ್‌ಳ ಗಂಡನಾಗಿ ರಾಜಕುಮಾರನನ್ನು ಅಪಹರಣ ಮಾಡಿ ದಕ್ಷಿಣ ಅಮೇರಿಕಾಗೆ ಕೊಂಡೊಯ್ಯದಾಗ, ಗುಲಾಮ ಪದ್ಧತಿಯ ವಿರುದ್ಧವಾಗಿ ಹೋರಾಡುತ್ತಾಳೆ. ಈ ಹೋರಾಟದ ಅನುಭವವನ್ನು ಆಫ್ರಾಳು ತನ್ನ ಕೃತಿ ಮೂಲಕ ಅಲ್ಲಿನ ಜೀತಪದ್ಧತಿಯ ಕ್ರೌರ್ಯವನ್ನು ಜಗತ್ತಿಗೆ ಪರಿಚಯಿಸುತ್ತಾಳೆ. ದೌರ್ಜನ್ಯದ ವಿರುದ್ಧವಾಗಿ ಅಲ್ಲಿನ ಮಹಿಳೆಯರು ಇಂದಿಗೂ ಹೋರಾಟಗಳನ್ನು ಮಾಡುತ್ತಲೇ ಇದ್ದಾರೆ. ಪೆರುವಿನ ಮಹಿಳೆಯರು ಸಹ ಜಗತ್ತಿನ ಎಲ್ಲಾ ಮಹಿಳೆಯರಂತೆ ತಮ್ಮ ಹಕ್ಕುಗಳಿಗಾಗಿ ಚರಿತ್ರೆಯುದ್ದಕ್ಕೂ ಹೋರಾಡಿದ್ದಾರೆ. ನಾಪತ್ತೆಯಾದ, ಕೊಲ್ಲಲ್ಪಟ್ಟ, ಹಿಂಸಿಸಲ್ಪಟ್ಟ ಸಂಬಂಧಿಕರ ಪರವಾಗಿ ಹೋರಾಟಗಳನ್ನು ಸಂಘಟಿಸುತ್ತಲೇ ಬಂದಿದ್ದಾರೆ. ಅನೇಕರು ಮಹಿಳಾ ನ್ಯಾಯವಾದಿಗಳಾಗಿ ಮಹಿಳಾ ಹೋರಾಟಕ್ಕಾಗಿ, ಉದ್ಯೋಗಕ್ಕಾಗಿ, ಸಮಾನತೆಗಾಗಿ, ಕೌಟುಂಬಿಕ ಹಿಂಸೆಯ ವಿರುದ್ಧ ಚಳುವಳಿಗಳನ್ನು ನಡೆಸುತ್ತಿರುವುದು ಇತ್ತೀಚಿನ ದಿನಗಳಲ್ಲಿ ತೀವ್ರವಾಗಿದೆ. ಇಂತಹ ದೌರ್ಜನ್ಯಗಳು ಜಗತ್ತಿನ ಯಾವುದೇ ಮೂಲೆಗೆ ಹೋದರು ಒಂದೇ ತೆರನಾಗಿ ಕಂಡುಬರುತ್ತವೆ ಎಂದು ಲೇಖಕಿ ಅಭಿಪ್ರಾಯಪಟ್ಟಿದ್ದಾರೆ.

ದಕ್ಷಿಣ ಅಮೇರಿದ ಕಡಲ್ಗಳ್ಳರಾದ ಗರ್ವಾನಿಯವರು ಗುಲಾಮತನಕ್ಕಾಗಿ ಮಹಿಳೆಯರನ್ನು ವ್ಯಾಪಾರ ನಡೆಸುತ್ತಿದ್ದ ಕುರಿತು ಎಚ್.ಎಸ್.ಅನುಪಮಾ ಅವರು 'ಚೆಗೆವಾರನ ನೆಲದಲ್ಲಿ' ಎಂಬ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಗರ್ವಾನಿ ಕಡಲ್ಗಳ್ಳರು ಸ್ಥಳೀಯ ಇಂಡಿಯನ್ ಮತ್ತು ಆಫ್ರಿಕನ್ ಹೆಂಗಸರನ್ನು ಹಿಡಿದು ಗುಲಾಮರ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದರು. ಇಂತಹ ಮಹಿಳೆಯರನ್ನು ಜಾನುವಾರುಗಳಂತೆ ನಡೆಸಿಕೊಳ್ಳುತ್ತಿದ್ದರು. ಜೆಸ್ಯೂಟ್ ಪಾದ್ರಿಗಳು ಈ ದಬ್ಬಾಳಿಕೆಗಳನ್ನು ಪ್ರಶ್ನಿಸುವ ಮೂಲಕ ಮಹಿಳೆಯರನ್ನು ನಾಗರಿಕರನ್ನಾಗಿಸುವ,

ಸಬಲೀಕರಣಗೊಳಿಸುವ ಪ್ರಯತ್ನ ಮಾಡಿದರು. ಆದರೆ ಅವರು ಮತಾಂತರ ಪ್ರಕ್ರಿಯೆಗೆ ಒಳಗಾಗದೆ ತಮ್ಮ ದಬ್ಬಾಳಿಕೆಯ ಪರಂಪರೆಯನ್ನು ಮುಂದುವರೆಸಿದರು. ಈ ಕಾರಣಕ್ಕಾಗಿ ಮತ್ತಷ್ಟು ದಾಳಿಗೆ ತುತ್ತಾಗಿ ಅವನತಿಯ ಹಾದಿ ಹಿಡಿಯಬೇಕಾಯಿತು ಎಂದಿದ್ದಾರೆ. ಇಂತಹ ಮಹಿಳಾ ದೌರ್ಜನ್ಯ, ಹತ್ಯೆಗಳನ್ನು ಹತ್ತಿಕ್ಕುವ ಕುರಿತು 'ಚೆಗೆವಾರನ ನೆಲದಲ್ಲಿ' ಎಂಬ ಪ್ರವಾಸ ಕಥನದಲ್ಲಿ "ಸಾಂಪ್ರದಾಯಿಕ-ಧಾರ್ಮಿಕ-ನ್ಯಾಯಿಕ ವ್ಯವಸ್ಥೆಯಿಂದಾಗಲೀ ತಮಗೆ ಸಿಗಬೇಕಾದ ನ್ಯಾಯ ಸಿಗುವುದಿಲ್ಲ ಎನಿಸಿದಾಗಲೆಲ್ಲ ಮಹಿಳೆಯರು ತಮ್ಮದೇ ನ್ಯಾಯವ್ಯವಸ್ಥೆಯನ್ನು ಅನ್ವೇಷಿಸಿಕೊಂಡಿದ್ದಾರೆ. ಹಾಗೆ ನ್ಯಾಯಹೋರಾಟಕ್ಕಾಗಿ ಅಮಾಯಕ ತಾಯಂದಿರ ದುಃಖಾಂತ ಘಳಿಗೆಯಲ್ಲಿ 'ಮದರ್ಸ್ ಆಫ್ ಪ್ಲಾಜಾ ಡಿ ಮೇಯೊ' ರೂಪುಗೊಂಡಿದೆ"(ಅನುಪಮಾ.ಎಚ್.ಎಸ್., ೨೦೧೭, ಪುಟ-೬೧) ಎಂದು ಹೇಳುತ್ತಾರೆ. 'ಮದರ್ಸ್ ಆಫ್ ಪ್ಲಾಜಾ ಡಿ ಮೇಯೊ' ಎಂಬ ಮಹಿಳಾ ಹೋರಾಟ ಸಂಘಟನೆಯು ಸಾವಿನ ಸುತ್ತ ಹೆಣೆಯಲಾದ ತಾಯ್ತನದ ವರ್ತುಲವೆಂದೇ ಪ್ರಸಿದ್ಧವಾಗಿದೆ. ಪುರುಷ ಪ್ರಧಾನ ಸಮಾಜವು ಮಹಿಳೆಯರ ತಾಯ್ತನದ ಮೇಲೆ ಹೇರುವಂತಹ ಹಿಂಸಾತ್ಮಕ ನಡೆಗಳನ್ನು ವಿರೋಧಿಸುತ್ತವೆ. ಅಹಿಂಸಾತ್ಮಕ ಹಾಗೂ ಪರ್ಯಾಯ ಹೋರಾಟಗಳಿಗೆ ಮಾದರಿಯಾದ ಐರಿಸ್‌ನ ಅಧ್ಯಕ್ಷೀಯ ಭವನವಾದ 'ಕಾಸಾ ರೋಸಾಡಾ" (ಪಿಂಕ್ ಹೌಸ್) ಎದುರು ಪ್ರತಿವಾರ ಆಳುವ ಪುರುಷ ಅಧಿಕಾರದ ಹಿಂಸಾತ್ಮಕ ನಡೆಗಳನ್ನು ಪ್ರಶ್ನಿಸುವ ಮೂಲಕ ತಾಯ್ತನಕ್ಕೆ ಹೊಸ ವ್ಯಾಖ್ಯಾನ ಬರೆಯುತ್ತಾರೆ. ಮುಂದೆ ಅರ್ಜೆಂಟೀನಾದಲ್ಲಿ 'ರಾಷ್ಟ್ರೀಯ ಪುನರ್ ನಿರ್ಮಾಣ ಪ್ರಕ್ರಿಯೆ' ಎಂಬ ಸೇನಾಡಳಿತ ಆರಂಭವಾದಾಗ ಸರ್ಕಾರವನ್ನು ವಿರೋಧಿಸುವ ಸಮಾಜವಾದಿಗಳನ್ನು ಕೊಲ್ಲಲಾಯಿತು. ಇದರಿಂದಾಗಿ ಕುಟುಂಬವನ್ನು ಕಳೆದುಕೊಂಡ ಅಜುಸೆನಾ ವಿನ್ಸೆಂಟ್‌ಳು ತಾಯಂದಿರ ದುಃಖವನ್ನು ಹಂಚಿಕೊಳ್ಳಲು ಪರಸ್ಪರ ಚರ್ಚಿಸಲು ಒಗ್ಗೂಡಿದರು. ಪೋಲೀಸರೇ ತಾಯಂದಿರನ್ನು ಅಪಹರಿಸಿ ಅನಾಮಿಕ ಸ್ಥಳಗಳಿಗೆ ಒಯ್ದು ಭಯಾನಕ ಹಿಂಸೆ ನೀಡಿ ಕೊಂದರು. ಸಾಮೂಹಿಕವಾಗಿಯೇ ಹತ್ಯೆ ಮಾಡಿದರು. ಇಲ್ಲಿನ ಕ್ರೌರ್ಯವನ್ನು ಕುರಿತು ಲೇಖಕಿ "ನಾಪತ್ತೆಯಾದ ಗರ್ಭಿಣಿ ಹೆಂಗಸರು ಹಿಂಸಾಕೇಂದ್ರಗಳಲ್ಲಿ ಹೆತ್ತ ಮಕ್ಕಳನ್ನು ಯಾರ್ಯಾರಿಗೋ ದತ್ತು ಕೊಟ್ಟು ಬಾಣಂತಿಯರನ್ನೂ ಕೊಲ್ಲಲಾಗಿತ್ತು. ದತ್ತು ಕೊಟ್ಟ ೨೫೬ ಎಳೆಗೂಸುಗಳು ನಾಪತ್ತೆಯಾಗಿದ್ದವು"(ಅದೇ, ಪುಟ-೬೧) ಎಂದು ದಾಖಲಿಸುತ್ತಾರೆ. ಅಲ್ಲಿನ ಸರ್ಕಾರವೇ ಹೋರಾಟಗಾರ್ತಿಯರನ್ನು ಹುಚ್ಚು ಹೆಂಗಸರು ಎಂದು ಬಣ್ಣಿಸಿತು. ಪುರುಷ ಪ್ರಧಾನ ಮೌಲ್ಯಗಳೇ ತುಂಬಿ ತುಳುಕುವಂತಹ ಆಡಳಿತದ ವಿರುದ್ಧವಾಗಿ ಮಹಿಳೆಯರು ಸಂಘಟಿತರಾಗಿ ಪ್ರಶ್ನಿಸತೊಡಗಿದರು. ಎಸ್ತರ್, ಮರಿಯಾ, ಲಿಯೊನಿ ಡುಕೆ ಹೀಗೆ ನಾಪತೆಯಾದ ತಾಯಂದಿರ ಸಂಖ್ಯೆ ಮೂವತ್ತು ಸಾವಿರ ದಾಟುತ್ತದೆ ಎಂದು ಅಂದಾಜಿಸಲಾಗಿದೆ. ಆದರೆ ಇಲ್ಲಿನ ಸರ್ಕಾರವು ವಿಶ್ವಸಂಸ್ಥೆಯಲ್ಲಿ ಒಂಬತ್ತು ಸಾವಿರ ಮಹಿಳೆಯರು ಅಪಹರಣವಾಗಿರುವುದಾಗಿ ತಿಳಿಸಿದೆ. ಹೀಗೆ ನಿರಂತರ ಹೋರಾಟದ ಫಲವಾಗಿ ಪುರುಷ ಪ್ರಧಾನ್ಯತೆಯಿಂದ ಬಿಡುಗಡೆ ಪಡೆದರು. ೧೯೮೩ರಲ್ಲಿ ಮಿಲಿಟರಿ ಆಡಳಿತ ಕೊನೆಗೊಂಡು ಜನತಂತ್ರ ಚುನಾಯಿತ ಸರ್ಕಾರ

ಅಧಿಕಾರಕ್ಕೆ ಬಂದಾಗ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಲಾರಂಬಿಸಿತೆಂದು ಲೇಖಕಿ ದಾಖಲಿಸಿದ್ದಾರೆ.

ಈಜಿಪ್ಟ್‌ನ ಪಿರಮಿಡ್‌ಗಳ ಹಿನ್ನೆಲೆ ಅರಿತ ಎಚ್.ಎಸ್.ಅನುಪಮಾ ಅವರು ಅದೊಂದು ಗುಲಾಮಗಿರಿಯ ಸಂಕೇತದಂತೆ ಕ್ರೌರ್ಯ ಮೆರೆದು ಕಟ್ಟಿದ ಸೌಧ ಎಂದು 'ನೈಲ್ ದಾರಿಗುಂಟ' ಕೃತಿಯಲ್ಲಿ ದಾಖಲಿಸಿದ್ದಾರೆ. ಈ ಕುರಿತು ಲೇಖಕಿಯು "ಸತ್ತ ರಾಜನ ಮರಣದ ನಂತರ ಉಪಯೋಗಕ್ಕೆ ಬೇಕಾಗುತ್ತದೆ ಎಂದು ಅವನ ಜೀವನಕ್ಕೆ ಅವಶ್ಯವಿರುವಷ್ಟು ಕೆಲಸಗಾರರನ್ನು, ಕುಶಲಕರ್ಮಿಗಳನ್ನು, ಕೆಲ ಬಾರಿ ಹೆಂಡತಿಯನ್ನು ಜೀವಂತವಾಗಿ ಗೋರಿಯೊಳಗಿಟ್ಟು ಮುಚ್ಚಿ ಬಿಡುತ್ತಿದ್ದರು ಎಂದೂ ಕೇಳಿದ್ದ ನೆನಪಿತ್ತು" (ಅನುಪಮಾ.ಎಚ್.ಎಸ್., ೨೦೧೧, ಪುಟ-೧೩೪) ಎಂದಿದ್ದಾರೆ. ಪಿರಮಿಡ್ ಈಜಿಪ್ಟ್‌ನ ಸಾಂಸ್ಕೃತಿಕ ಸಂಕೇತದಂತೆ ಲೇಖಕಿಗೆ ಅನಿಸದೇ, ಸತಿಸಹಗಮನದ ಇನ್ನೊಂದು ರೂಪದಂತೆ ಭಾಸವಾಗುತ್ತದೆ. ಭಾರತದಲ್ಲಿ ಬೇರೂರಿದ್ದ ಈ ಪಿಡುಗು ಈಜಿಪ್ಟ್‌ನಲ್ಲಿಯೂ ಕಾಣುತ್ತದೆ. ಪುರುಷರು ಪತ್ನಿಯ ಪಾವಿತ್ರ್ಯತೆಗೋಸ್ಕರ ಜೀವಂತವಾಗಿ ಸತಿಯನ್ನು ಊಳುವ ಅಥವಾ ಜೀವಂತ ಸಮಾಧಿ ಮಾಡುವುದನ್ನು ಚರಿತ್ರೆಯಲ್ಲಿ ದಾಖಲಾಗಿವೆ. ಪಿರಮಿಡ್ಡುಗಳ ನಿರ್ಮಾಣದ ಕಾರ್ಯಕ್ಕೆ ಸ್ತ್ರೀ ಪುರುಷ ಎಂಬ ಭೇದವಿಲ್ಲದೆ ದುಡಿಯಬೇಕಾಗಿತ್ತು. ಕಾಯಿಲೆ ಬಿದ್ದವರು, ಅಶಕ್ತರು ಸಹ ಹೊಡೆತ ತಿನ್ನುತ್ತ ಸಾಯುವವರೆಗೂ ದುಡಿಯಬೇಕಿತ್ತು. ಹೀಗಾಗಿ ಬದುಕಿಗಿಂತ ಸಾವು ಉತ್ತಮ ಎಂದು ಭಾವಿಸಿದ್ದರು. ಪುರುಷ ಅಧಿಕಾರ, ರಾಜ ಮನೆತನದ ನಿಷ್ಠೆಗಳು ಅಲ್ಲಿನ ಜನರನ್ನು ಪ್ರಶ್ನಿಸುವ ಹಕ್ಕುಗಳನ್ನು ಮೊಟಕುಗೊಳಿಸಿತ್ತು ಎಂದು ಲೇಖಕಿ ಅಭಿಪ್ರಾಯ ಪಡುತ್ತಾರೆ.

ಥೈಲ್ಯಾಂಡಿನ ಪಟ್ಟಾಯದ ಸೆಕ್ಸ್ ಉದ್ಯಮವನ್ನು ಉಮಾರಾವ್ ಅವರ 'ಇನ್ನು ಎಲ್ಲಿಗೋಟ' ಕೃತಿಯಲ್ಲಿ ಪುರುಷ ಕ್ರೌರ್ಯದ ಸಂಕೇತದಂತೆ ಕಾಣುತ್ತರೆ. ಪಟ್ಟಾಯದಲ್ಲಿ ಶಾಂತ, ಸುಂದರ ಬೀಚ್ ಇದ್ದ ಊರಿನಲ್ಲಿ ೨೯ ಜೂನ್ ೧೯೫೯ರಲ್ಲಿ ಅಮೇರಿಕನ್ ಸೈನಿಕರು ಎಳೆಯ ಹೆಣ್ಣು ಮಕ್ಕಳ ಜೊತೆ ಮೋಜು ಮಾಡಿದ್ದರು. ಈ ವಿಷಯವು ಅದು ಅನೇಕ ಪ್ರದೇಶಗಳಲ್ಲಿ ಹರಡಿದಾಗ, ವರ್ಷದಿಂದ ವರ್ಷಕ್ಕೆ ಹುಡುಗಿಯರಿಗಾಗಿ ಅರಸಿ ಬರುವವರ ಸಂಖ್ಯೆ ಹೆಚ್ಚಳವಾಗುತ್ತಾ ಹೋಯಿತು. ಪಟ್ಟಾಯ ಜನಸಂಖ್ಯೆಯಲ್ಲಿ ೩೦೦೦ ಜನ ವೇಶ್ಯೆ ವೃತ್ತಿಯವರಾಗಿದ್ದಾರೆ. ಸಾವಿರದಿಂದ ಲಕ್ಷಾಂತರ ಡಾಲರ್‌ಗಳು ಹರಿಯುತ್ತದೆ. ಅಮೇರಿಕವು ಪುರುಷವಾದಿ ದೇಶವಾಗಿದ್ದು, ಒಂದು ಪ್ರದೇಶವನ್ನು ತಮ್ಮ ವೈಯಕ್ತಿಕ ಸುಖ ಸಂತೋಷಗಳಿಗಾಗಿ ಪಟ್ಟಾಯವನ್ನು 'ಸೆಕ್ಸ್ ಕ್ಯಾಪಿಟಲ್' ನಗರವಾಗಿಸಿದ್ದಾರೆ. ತಮ್ಮ ಮೋಜು ಮಸ್ತಿಗಾಗಿ ಬಾಲ ವೇಶ್ಯೆಯರನ್ನು ಸೃಷ್ಟಿಸುತ್ತಿದ್ದಾರೆ. ಇದನ್ನೇ ಉದ್ಯಮವೆಂದು ಬಗೆದು ಕೋಟ್ಯಾಂತರ ಡಾಲರ್‌ಗಳನ್ನು ವ್ಯಯಿಸುವ ಮೂಲಕ ಅಮಾನವೀಯ ಅನಾಗರಿಕರಂತೆ ವರ್ತಿಸುತ್ತಿದ್ದಾರೆ. ಈ ಕುರಿತು ಲೇಖಕಿ "ತಮ್ಮ ಮಕ್ಕಳ ಬಗ್ಗೆ ಇರುವ ಕಾಳಜಿ ಈ ಗಂಡಸರಿಗೆ ಹೇಗೆ ಅಳಿದು ಹೋಗಲು ಸಾಧ್ಯ? ಅವರೂ ಮಕ್ಕಳಲ್ಲವೇ? ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಏಕೆ?"(ಉಮಾರಾವ್,

೨೦೧೫, ಪುಟ-೧೦೪) ಎಂದು ಪ್ರಶ್ನಿಸುತ್ತಾರೆ. ತಮ್ಮ ಕುಟುಂಬಗಳಲ್ಲಿ ಸಭ್ಯತೆಯ ಪ್ರದರ್ಶನ ಮಾಡುವಂತಹ ಪ್ರವಾಸಿಗರು, ಹೊರ ದೇಶಗಳಲ್ಲಿ ಹೋದಾಗ ಬಾಲ ವೇಶ್ಯೆರಿಗಾಗಿ ಬೇಡಿಕೆ ಇರುವ ಸಂಗತಿಗಳು ಲೇಖಕಿಗೆ ಅಚ್ಚರಿ ತರಿಸುತ್ತದೆ. ಎನ್.ಜಿ.ಓ.ಗಳು ಈ ಕ್ರೌರ್ಯದ ವಿರುದ್ಧ ಕೆಲಸ ಮಾಡುತ್ತಿದ್ದು, ಜಾಗೃತಿಗಾಗಿ ಹೆಣಗಾಡುತ್ತಿವೆ. ಪುರುಷ ಪ್ರಧಾನ್ಯತೆಯಿದ್ದ ಕಡೆ ಯಾವುದೇ ಉತ್ತಮ ಕೆಲಸಗಳು ಸಲೀಸಾಗಿ ನಡೆಯದೆ ವ್ಯವಸ್ಥೆ ಜೊತೆಗೆ ಹೊಂದಿಕೊಂಡು ಹೋಗುವುದನ್ನು ಗಮನಿಸಬಹುದಾಗಿದೆ. ಹೀಗಾಗಿ ಥೈಲ್ಯಾಂಡ್ ಲೈಂಗಿಕ ಚಟುವಟಿಕೆಗಳ ತಾಣವಾಗಿ ಇಂದಿಗೂ ಗುರುತಿಸಲ್ಪಡುತ್ತದೆ ಎಂದು ಲೇಖಕಿ ಅಭಿಪ್ರಾಯಪಟ್ಟಿದ್ದಾರೆ.

ವಿಯಟ್ನಾಂನ ಲಾವೋಸ್‌ನಲ್ಲಿ ನೂರಾರು ಬುದ್ಧನ ಸಾಲುಗಳಿರುವ ದೇವಾಲಯಗಳಲ್ಲಿ ಬುದ್ಧದೇವನಿಗೆ ಸ್ನಾನದ ಸಂಭ್ರಮ ನಡೆಯುತ್ತದೆ. ಆದರೆ ಸ್ತ್ರೀಯರು ಮಾತ್ರ ಮೂರ್ತಿಯನ್ನು ಮುಟ್ಟುವಂತಿರಲಿಲ್ಲ. ಆದ್ದರಿಂದ ಮರದ ಕಾಲುವೆ ಮೇಲೆ ನಿಂತು ನೀರು ಹಾಕುತ್ತಾರೆ. ಆ ನೀರು ಹರಿದು ಬಂದು ಬುದ್ಧನ ವಿಗ್ರಹಕ್ಕೆ ಬೀಳುತ್ತದೆ. ಬುದ್ಧ ಜಗತ್ತಿಗೆ ಬೆಳಕನ್ನು ನೀಡಿದನು ಎನ್ನುವ ನಂಬಿಕೆವೊಂದಿದವರೇ ಪುರುಷ ಪ್ರಾಧ್ಯಾನತೆಯನ್ನು ಆಚರಿಸುತ್ತಾರೆ. ಆದರೆ ಈ ಹಬ್ಬದ ಆಚರಣೆಯ ಹಿಂದಿರುವ ಪುರುಷ ಪ್ರಧಾನ ಸೇವಕರೂ ಮಹಿಳೆಯನ್ನು ಎರಡನೇ ದರ್ಜೆಯವಳನ್ನಾಗಿಸಿದ್ದು ದುರಂತವೆನ್ನುತ್ತಾರೆ. ಬುದ್ಧನ ಆರಂಭಿಕ ತತ್ವಗಳಲ್ಲಿಯೂ ಮಹಿಳೆಯರಿಗೆ ಅವಕಾಶವಿರಲಿಲ್ಲ ಎಂಬುದನ್ನು ಗಮನಿಸಬೇಕಾದ ಸಂಗತಿ ಎಂದು ಸುಧಾಮೂರ್ತಿ ಅವರು 'ಕಾವೇರಿಯಿಂದ ಮೆಕಾಂಗಿಗೆ' ಎಂಬ ಕೃತಿಯಲ್ಲಿ ನಿರೂಪಿಸುತ್ತಾರೆ. ವಿಯಟ್ನಾಂನಲ್ಲಿ ನಡೆದ ಯುದ್ಧದ ಪರಿಣಾಮವು ಪುರುಷ ಪ್ರಾಧಾನ್ಯತೆಗೆ ಇಂದಿಗೂ ಸಾಕ್ಷಿಯಂತಿದೆ. ಈ ಯುದ್ಧದ ಸಂದರ್ಭದಲ್ಲಿ ಅಮೇರಿಕನ್ ಸೈನಿಕರು ಸ್ಥಳೀಯ ವಿಯೆಟ್ನಾಂ ಹೆಂಗಸರೊಂದಿಗೆ ಸಂಪರ್ಕ ಬೆಳೆಸಿದರು. ಯುದ್ಧ ಮುಗಿದ ಮೇಲೆ ಹೆಂಗಸರನ್ನು ಬಿಟ್ಟು ಸ್ವದೇಶಕ್ಕೆ ತೆರಳಿದರು. ಇಂಥ ಸಂಬಂಧಗಳಿಂದಾಗಿ ಹುಟ್ಟಿದ ಮಕ್ಕಳು ಅರ್ಧ ಬಿಳಿ, ಅರ್ಧ ಕಪ್ಪಾಗಿದ್ದರು. ಇವರಿಗೆ 'ಅಮರೇಶಿಯನ್' ಎಂದು ಕರೆಯುತ್ತಾರೆ. ಇಂತಹ ಮಕ್ಕಳನ್ನು ವಿಯೆಟ್ನಾಂನಲ್ಲಿ ತುಚ್ಛವಾಗಿ ಕಾಣುತ್ತಾರೆ. ಪ್ರಾಯದ ಹುಡುಗಿಯರು ಇಂತಹ ಮಕ್ಕಳನ್ನು ಬೀದಿಯಲ್ಲಿ ಬೀಸಾಡಿದರು. ಈ ಮಕ್ಕಳಿಗೆ ಇಂಗ್ಲೀಷ್ ಕಲಿಸಿ ಪೌರತ್ವ ನೀಡಿದರಾದರೂ, ಪೋಷಕರನ್ನು ಗುರುತಿಸದೇ ಹೋಗಿದ್ದರಿಂದ ಅನಾಥರಾಗಿ ಬೆಳೆಯಬೇಕಾಯಿತು ಎಂದು ಲೇಖಕಿ ದಾಖಲಿಸುತ್ತಾರೆ.

ಥೈಲ್ಯಾಂಡ್, ಪಟ್ಟಾಯ, ಜರ್ಮನ್, ಕಾಶ್ಮೀರ, ವಿಯೆಟ್ನಾಂಗಳಲ್ಲಿ ನಡೆದ ಯುದ್ಧಗಳಿಂದಾಗಿ ಅಲ್ಲಿನ ಮಹಿಳೆಯರನ್ನು ಲೈಂಗಿಕವಾಗಿ ಬಳಸಿಕೊಂಡಿದ್ದಲ್ಲದೇ, ಅವರ ಬದುಕಿಗೆ ದೊಡ್ಡ ಹೊಡೆತವನ್ನೇ ಕೊಟ್ಟರು. ದೇಶವನ್ನು ಕಾಪಾಡುವ ಸೈನಿಕರೇ ಸ್ಥಳೀಯ ಮಹಿಳೆಯರ ಬದುಕಿಗೆ ಕೊಳ್ಳಿ ಇಡುವ ಸಂಪ್ರದಾಯ ರಕ್ಷಣಾ ಪಡೆಗಳಲ್ಲಿರುವುದು ಸ್ಪಷ್ಟವಾಗುತ್ತದೆ. ಅಂತವರ ವಿರುದ್ಧ ಧ್ವನಿ ಎತ್ತಿದರೂ ಯಾವ ಪ್ರಯೋಜನವಾಗಲಿಲ್ಲ. ಈ ಬಗ್ಗೆ ಸರ್ಕಾರಗಳು ತಲೆಕೆಡಿಸಿಕೊಂಡಿಲ್ಲ. ಒಟ್ಟಿನಲ್ಲಿ ಬದುಕು ಅನ್ಯಾಯವಾಗಿದ್ದು ಮಾತ್ರ ಬಡ ಹೆಣ್ಣುಮಕ್ಕಳಿಗೆ.

ವಿಯೆಟ್ನಾಂನಂತೆಯೇ ಲೀಮಾದ ಲಾರ್ಕೊ ಮ್ಯೂಸಿಯಂ ಹಾಗೂ ಪುರಾತತ್ವ ಮ್ಯೂಸಿಯಂಗಳಲ್ಲಿ ಕಂಡುಬರುವ ಲೈಂಗಿಕ ಕ್ರಿಯೆಗಳ ಪ್ರದರ್ಶನ ಕಲೆಗಳು ಆ ದೇಶದ ಪುರುಷ ಪ್ರಧಾನ ಕ್ರೌರ್ಯವನ್ನು ತೋರುತ್ತದೆ. ಇವು ಊಜಿ, ಪಿಂಗಾಣಿ, ಪಾತ್ರೆಗಳಲ್ಲಿ ಚಿತ್ರಣಗೊಂಡಿವೆ. ಪಿಂಗಾಣಿಗಳಲ್ಲಿ ವಿಕೃತ ಲೈಂಗಿಕ ಕ್ರಿಯೆಗಳ ಭಂಗಿಗಳ ಚಿತ್ರಣಗಳಿವೆ. ಅಲ್ಲದೆ ಮಹಿಳೆಯನ್ನು ಪುರುಷನನ್ನು ಹೋಲುವ ವಿಚಿತ್ರ ಪ್ರಾಣಿಗಳು ಸಂಭೋಗಿಸುತ್ತಿರುವ ಚಿತ್ರಣಗಳಿವೆ. ನೈಸರ್ಗಿಕವಲ್ಲದ ಲೈಂಗಿಕ ಹಿತಾಸಕ್ತಿಯ ಚಿತ್ರಣಗಳು ಮನುಷ್ಯನ ವಿಕೃತಿ ಮೆರೆಯುತ್ತಿವೆ. ಈ ಕುರಿತು ಲೇಖಕಿ "ಕುಲೀನ ಮನೆತನದ ಹೆಣ್ಣುಗಳು ಅಖ್ಲಾಗಳಾಗಿ ಕನ್ಯತ್ವ ರಕ್ಷಿಸಲ್ಪಟ್ಟ ಸೂರ್ಯ ದೇವಾಲಯದ ಹೆಣ್ಣುಗಳಾಗಿ ಇರಬೇಕಾಗಿತ್ತು. ಪರಸ್ಪರರು ಎಷ್ಟು ಲೈಂಗಿಕವಾಗಿ ಹೊಂದಿಕೊಳ್ಳುತ್ತಾರೆಂದು ಪರೀಕ್ಷಿಸುವ 'ಟ್ರಯಲ್ ಮದುವೆ'ಗಳಿದ್ದವು. ಆಗೊಮ್ಮೆ ಮಗು ಹುಟ್ಟಿದಲ್ಲಿ ಮದುವೆ ಖಾಯಂ ಆಗಿತ್ತು." (ಸುಧಾಮೂರ್ತಿ, ೨೦೧೩, ಪುಟ-೧೫೭) ಎಂದು ಹೇಳಿದ್ದಾರೆ. ಅಲ್ಲಿನ ಇತಿಹಾಸದ ದಾಖಲೆಗಳಲ್ಲಿ ಗಂಡು ಹೆಣ್ಣುಗಳಲ್ಲಿ ಮುಕ್ತ ಲೈಂಗಿಕ ಸ್ವಾತಂತ್ರ್ಯವಿತ್ತು ಎಂದಿದ್ದಾರೆ. ಅರ್ಜೆಂಟೇನಿಯಾದಲ್ಲಿನ ಈ ಪದ್ಧತಿಗಳಲ್ಲಿ ಮಹಿಳೆಯರನ್ನು ಪ್ರಾಣಿಗಳಿಗಿಂತ ಕಡೆಯಾಗಿ ನೋಡುವ ಪುರುಷ ದೌರ್ಜನ್ಯವನ್ನು ಕಾಣುತ್ತೇವೆ. 'ಟ್ರಯಲ್ ಮದುವೆ' ಪದ್ಧತಿಗಳು ಮಹಿಳಾ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನೇ ಕಸಿದಿವೆ. ಗಂಡು ಹೆಣ್ಣನ್ನು ಸಮಾನವಾಗಿ ನೋಡದ, ತನಗೆ ಬೇಕಾದಂತೆ ಬಳಸಿಕೊಳ್ಳುವ ಮತ್ತು ಬೇಡವಾದಾಗ ನಿರ್ಲಕ್ಷಿಸುವ ವಸ್ತು ಎಂದು ಭಾವಿಸಿದಂತಿದೆ ಎಂದು ಲೇಖಕಿ ತಿಳಿಸಿದ್ದಾರೆ.

ಜಾಗತಿಕ ಕಾಲದ ಸಂದರ್ಭದಲ್ಲೂ ಹೆಣ್ಣನ್ನು ಲೈಂಗಿಕವಾಗಿ ಬಳಸಿಕೊಳ್ಳುವುದು ಒಂದು ಕಡೆಯಾದರೆ, ಹೆಣ್ಣನ್ನು ಬಲಿ ನೀಡುವ ಪದ್ಧತಿ ಪೆರು ದೇಶದಲ್ಲಿ ರೂಢಿಗತವಾಗಿ ಬಂದ ಸಂಪ್ರದಾಯವಾಗಿದೆ. ರಾಜ ಸತ್ತಾಗ, ರಾಜನಿಗೆ ಮಗು ಹುಟ್ಟಿದರೆ, ಕಾಯಿಲೆಯಾದರೆ, ಪಟ್ಟಕ್ಕೇರಿದರೆ, ಬಡ ಮಕ್ಕಳನ್ನು ಬಲಿ ಕೊಡುವ ಪದ್ಧತಿ ಪೆರುವಿನಲ್ಲಿತ್ತು. ೧೦-೧೬ ವರ್ಷದ ಒಳಗಿನ ಹುಡುಗ-ಹುಡುಗಿಯರು ಈ ಪದ್ಧತಿಗೆ ಒಳಗಾಗುತ್ತಿದ್ದರು. ಅದರಲ್ಲೂ ಚಂದದ, ಆರೋಗ್ಯವಂತ, ಬುದ್ಧಿವಂತ, ಮೈಮೇಲೆ ಒಂದು ಗಾಯದ ಕಲೆಗಳಿರದ ಹೆಣ್ಣುಮಕ್ಕಳನ್ನು 'ವಾಕಾ'(ಬಲಿಪೀಠದ ಸ್ಮಾರಕ)ಗಳಲ್ಲಿ ಬಲಿ ಕೊಡುತ್ತಿದ್ದರು. ದೈವದ ಮೆಚ್ಚುಗೆಗಾಗಿ ಕನ್ಯೆಯರನ್ನು ಹೆಚ್ಚು ಬಲಿ ಕೊಡುತ್ತಿದ್ದರು. ಈ ಬಲಿಪದ್ಧತಿಯು ರಾಜರ ತಾರುಣ್ಯ ಮತ್ತು ಆರೋಗ್ಯ ಹೆಚ್ಚಿಸಲಿಕ್ಕೆ ನಡೆದ ಕೃತ್ಯಗಳಾಗಿವೆ. ಮಾನವೀಯತೆ ಮೆರೆಯುವ ಬದಲು ಮನುಷ್ಯನು ವಿಕೃತಿಯನ್ನು ಮೆರೆದ ಪಾರಂಪರಿಕ ಪುರುಷ ವ್ಯವಸ್ಥೆಯನ್ನು ಚರಿತ್ರೆಯ ಕ್ರೂರ ವ್ಯಂಗ್ಯವೆಂದು ಎಚ್.ಎಸ್. ಅನುಪಮಾ ಅವರು 'ಚೆಗೆವಾರನ ನೆಲದಲ್ಲಿ' ಕೃತಿಯಲ್ಲಿ ನಿರೂಪಿಸಿದ್ದಾರೆ.

ದಕ್ಷಿಣ ಅಮೇರಿಕಾದ ಚಿಂಟಾಲಾರ್ಗ ಬುಡಕಟ್ಟುಗಳ ಕತೆಯನ್ನು ದಾಖಲಿಸಿದ ಕೃತಿಯಾಗಿ 'ಅಂಡಮಾನ್ ಕಂಡ ಹಾಗೆ' ಕೃತಿಯು ಮುಖ್ಯವಾಗುತ್ತದೆ. ಅಲ್ಲಿನ ರಬ್ಬರ್‌ಗಳನ್ನು ತನ್ನದಾಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಪ್ಲಾಂಟರ್‌ನೊಬ್ಬನು ಕಾಡು ಜನರನ್ನು ನಿರ್ನಾಮ

ಮಾಡಲು ಡೈನಾಮೈಟ್‌ನಿಂದ ಸ್ಫೋಟಿಸುತ್ತಾನೆ. ಸ್ಫೋಟದ ನಂತರ ಯಾರಾದರೂ ಉಳಿದಿದ್ದಾರೆಂದು ನೋಡಲು ಹೋದ ಆತ, ಒಬ್ಬ ಚಿಂಟಾ ತಾಯಿ ಮಗುವಿಗೆ ಹಾಲುಣ್ಣಿಸುವುದನ್ನು ಕಂಡನು. ಕೂಡಲೆ ಆ ಮಗುವಿನ ತಲೆ ಹಾರಿಸಿ, ತಾಯಿಯನ್ನು ತಲೆಕೆಳಗಾಗಿ ಮಾಡಿ, ಮರಕ್ಕೆ ನೇತಾಡಿಸಿ, ಅರ್ಧ ಶರೀರ ಸೀಳಿರುವುದಾಗಿ ಆತ ಹೆಮ್ಮೆಯಿಂದ ಬರೆದುಕೊಂಡಿದ್ದಾನೆ. ಈ ಕ್ರೌರ್ಯದ ಕುರಿತು ಅಲ್ಲಿನ "ಕೆಲವರು ಈ ದುಷ್ಟ ನಡವಳಿಕೆ ವಿರೋಧಿಸಿ ಕೋರ್ಟ್‌ಗೆ ಹೋದರು. ಅವನಿಗೆ ೧೦ವರ್ಷ ಜೈಲಾಯಿತು. ಕೊನೆಗೆ ಆತನಿಗೆ ಕ್ಷಮಾಧಾನ ನೀಡಲಾಯಿತು. ಹೀಗೆ ಬಿಡುಗಡೆಯಾದ ಆತ ಆದಿವಾಸಿ ಜನ ಸೋಮಾರಿಗಳು ಮತ್ತು ದ್ರೋಹಿಗಳು ಅವರನ್ನು ಕೊಲ್ಲುವುದೇ ಸೂಕ್ತ ಎಂದು ಹೇಳಿದ್ದನಂತೆ."(ಅನುಪಮಾ.ಎಚ್.ಎಸ್., ೨೦೧೩, ಪುಟ-೪೮) ಎಂದು ಪ್ರಸ್ತಾಪಿಸಿದ ಲೇಖಕಿ ಹಾಲುಣ್ಣಿಸುವ ತಾಯಿ ಮಗುವನ್ನು ಹತ್ಯೆ ಮಾಡಿದ ಆತನ ಕ್ರೌರ್ಯತನ ಚರಿತ್ರೆಗೆ ಕಳಂಕವಾಗಿದೆ ಎನ್ನುತ್ತಾರೆ. ನಗರವಾಸಿಗಳು, ಆದಿವಾಸಿಗಳನ್ನು ನೋಡುವ ನೋಟ ಎಂತಹ ಮಾರ್ಮಿಕತನದ್ದಾಗಿದೆ. ನಗರ ಮನುಷ್ಯನ ಲಲಾಸೆಗಳಿಗೆ, ವ್ಯವಹಾರಗಳಿಗೆ, ಲಾಭಗಳಿಗೆ ಪ್ರಾಚೀನ ಕಾಲದಿಂದಲೂ ನಗರದ ಸೋಂಕು ಸೋಕದೆ ಬದುಕುತ್ತಿರುವ ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸುವ ಪರಂಪರೆ ಇಂದಿಗೂ ಬಿಟ್ಟಿಲ್ಲ. ಅವರು ವಾಸಿಸುವ ಪ್ರದೇಶಗಳಿಗೆ ಹೋಗಿ ಅವರ ಬದುಕನ್ನು ಖಾಸಗಿಗೊಳಿಸುವ ಗೋವಾ ಮತ್ತು ಅಂಡಮಾನ್ ದ್ವೀಪದ ಪರಿಸ್ಥಿತಿಗಳು ಇದಕ್ಕಿಂತ ಭಿನ್ನವಾಗಿಲ್ಲ ಎನ್ನಲಾಗಿದೆ.

ಭಾರತದಲ್ಲಿ ಚಿಕ್ಕ ಹೆಣ್ಣು ಮಗುವಿನಿಂದ ಹಿಡಿದು ಹಿರಿಯ ಮಹಿಳೆಯರವರೆಗೂ ತಾವು ವಾಸಿಸುವ ಊರಿನ ಪಕ್ಕದ ಬೀದಿಗೆ ಹೋದರು ಗಂಡು ಮಗುವನ್ನಾದರೂ ಕಳಿಸುವ ಪುರುಷ ಪರಂಪರೆಯನ್ನು ಕುರಿತು ಎಂ.ಜಾನಕಿ ಬ್ರಹ್ಮಾವರ ಅವರು 'ತಿರುಗಾಟದ ತಿರುಳು' ಕೃತಿಯಲ್ಲಿ ಪ್ರಶ್ನಿಸಿದ್ದಾರೆ. ಪ್ರವಾಸದ ಸಂದರ್ಭದಲ್ಲಿ ಗಂಡಸಿನ ಇರುವಿಕೆಯು ಕುರಿತು ಸ್ನೇಹಿತರು "ಒಬ್ಬರಾದರೂ ಗಂಡು ಮಗ ಆಗಿದ್ದರೆ ಈಗ ಧೈರ್ಯದಿಂದ ಹೊರಡಬಹುದಿತ್ತು. ಹೆಣ್ಣು ಮಕ್ಕಳು ಎಷ್ಟೇ ಹುಷಾರ್ ಇದ್ದರೂ ಹೆಣ್ಣು ಹೆಣ್ಣೇ, ಗಂಡು ಗಂಡೇ ಎನ್ನುವ ಮಾತು ನನ್ನ ಬಾಯಿಂದ ಬಂದೇ ಬಿಟ್ಟಿತು. ಸುಧಾಕರ್ ಸರಿ ಎನ್ನುವಂತೆ 'ಹೂಂ' ಗುಟ್ಟಿದರು. ಆದರೆ ನಮ್ಮ ಹೆಣ್ಣು ಮಕ್ಕಳು ಬುಸುಗುಟ್ಟಿದರು." (ಜಾನಕಿ ಬ್ರಹ್ಮಾವರ, ೧೯೯೯, ಪುಟ-೧೬) ಎನ್ನುತ್ತಾರೆ. ಗಂಡಿನ ಯಜಮಾನಿಕೆಯ ಮೌಲ್ಯಗಳ ವಿರುದ್ಧವಾಗಿ ಲೇಖಕಿ "ಹೆಣ್ಣುಗಳೆಂದರೆ ನಿಮಗೂ ತಾತ್ಸಾರ, ಹೆಣ್ಣು ಮಕ್ಕಳೇನು ಬುದ್ಧಿ ಇಲ್ಲದವರಾ? ಹೆಣ್ಣುಗಳು ಗಂಡಿನ ರಕ್ಷಣೆಯಲ್ಲೇ ಇರಬೇಕು" ಎನ್ನುವವರು ನಿಜವಾಗಿಯೂ ಸ್ವಾರ್ಥಿಗಳು. ಗಂಡಿಗೆ ಎತ್ತರದ ಮನೆ, ಯಜಮಾನಿಕೆ ಪಟ್ಟ"(ಅದೇ, ಪುಟ-೧೬) ಎಂದು ಪ್ರಶ್ನಿಸುತ್ತಾರೆ. ಪುರುಷ ಪ್ರಾಧಾನ್ಯತೆ ಸಮಾಜದಿಂದ ದೂರ ಸರಿದು ಸಮಸಮಾಜದ ನಿರ್ಮಾಣ ಮಾಡುವ ಜಾಗತೀಕರಣದ ಕಾಲದಲ್ಲಿ ಶಿಕ್ಷಣ, ವೈಚಾರಿಕತೆಯ ಜ್ಞಾನದ ಬೆಳಕು ಇದ್ದಲ್ಲಿ ಹೆದರಿಕೆಯ ಕತ್ತಲು ನಿಲ್ಲದು ಎನ್ನುತ್ತಾರೆ. ಹೆಣ್ಣು ಮಕ್ಕಳು ಗಂಡಸರ

ಬೆಂಬಲವಿಲ್ಲದೆ ಇಡೀ ಪ್ರಪಂಚವನ್ನೇ ಸುತ್ತಿದ್ದ ಇಂದಿರಾ ಗಾಂಧಿ, ವೆಲೆಂಟಿನಾ, ಟೆರೆಸ್ಕೋವಾ, ಬಚೇಂದ್ರಿ ಪಾಲ್, ಕಿರಣ್ ಬೇಡಿ, ಮೇಧಾ ಪಾಟ್ಕರ್, ಚಂದ್ರಿಕಾ ಕುಮಾರ ತುಂಗೆ ಇವರೆಲ್ಲರ ಸಾಧನೆ ಮಹಿಳೆಯರಿಗೆ ಗಂಡಿನ ಧೈರ್ಯಕ್ಕಿಂತ ಮಿಗಿಲಾಗಿ ಕಾಣುತ್ತದೆ ಎಂದು ಲೇಖಕಿ ಉದಾಹರಣೆ ಕೊಡುತ್ತಾರೆ.

ಶಾಂತದೇವಿ ಮಾಳವಾಡ ಅವರ 'ಶ್ರೀಗಿರಿಯಿಂದ ಹಿಮಗಿರಿಗೆ' ಕೃತಿಯು ಉತ್ತರ ಭಾರತದ ಪ್ರಸಿದ್ಧ ತಾಣಗಳ ಅನುಭವ ಕಥನವಾಗಿದೆ. ಅಲ್ಲಿನ ದೇವಾಲಯಗಳಿಗೆ ಪ್ರವೇಶಿಸುವ ಗಂಡಸರು ಹೆಂಗಸರು ತಲೆಯ ಮೇಲೆ ವಸ್ತ್ರವನ್ನು ಹೊದ್ದುಕೊಳ್ಳಬೇಕಾಗುತ್ತದೆ. ಅಲ್ಲಿನ ಹಿಂದೂ ದೇವಾಲಯಗಳಲ್ಲಿ ಒಂದೊಂದು ದೇವರ ಮೂರ್ತಿಗೂ ನೂರು ರೂಪಾಯಿ ಹಾಕುವಂತೆ ಒತ್ತಾಯ ಪಡಿಸುತ್ತಿದ್ದರು. ಈ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದ ಲೇಖಕಿ ಗೆಳತಿ ಪ್ರತಿಭಾ ಅವರು ದುಡ್ಡು ನೀಡದೆ ಹೋದರೆ ದೇವರ ದರ್ಶನ ಪಡೆಯಲು ಆಗುವುದಿಲ್ಲವೆಂದು ಪಂಡರೊಡನೆ ವಾದಕ್ಕೆ ಇಳಿಯುತ್ತಾರೆ. ನಾವು ಹಿಂದೂಗಳೆಂದು ಪ್ರಮಾಣ ಪತ್ರ ನೀಡುತ್ತೇವೆಂದರೂ ಬಿಡಲಿಲ್ಲ. ಕೊನೆಗೆ ಪೊಲೀಸನವರಿಗೆ ದೂರಿತ್ತರು. ಇದರ ನಡುವೆ ಪ್ರತಿಭಾಗೆ ಅವಮಾನಿಸಿ, ಅವಹೇಳನ ಮಾಡಿ, ಬೆದರಿಸಿ ಮಾನನಷ್ಟ ಮೊಕದ್ದಮೆ ಹೂಡಿದರು. ದೇವಾಲಯದ ದರ್ಶನಕ್ಕೆ ಇಷ್ಟು ಪಜೀತಿ ಪಟ್ಟ ಲೇಖಕಿಯ ಬಳಗವು ಈ ಪುರುಷ ಸಮಾಜದ ಮೌಲ್ಯಗಳಿಗೆ ತಲೆಭಾಗದೇ ದಿಟ್ಟವಾಗಿ ಎದುರಿಸಿದ್ದರು. ಆದರೆ ಅದು ಅಂದಿನ ಹೋರಾಟಕ್ಕೆ ಮಾತ್ರ ಸೀಮಿತವಾಗಿತ್ತು. ಮರುದಿನ ಮುಂದುವರೆದಿದ್ದ ಕುರಿತು ಲೇಖಕಿ ಪುರಿಯಲ್ಲಿ ಬ್ರಾಹ್ಮಣಿಕೆಯ ಸೊಕ್ಕು ಇನ್ನು ಇಳಿದಿಲ್ಲ ಎನ್ನುತ್ತಾರೆ. ಧಾರ್ಮಿಕವಾಗಿ ಮಹಿಳೆಯರ ಮೇಲೆ ದಬ್ಬಾಳಿಕೆ ನಡೆಸುವ ಕುರಿತು ವಿಜಯಾ ದಬ್ಬೆ ಅವರು 'ಉರಿಯ ಚಿಗುರು ಉತ್ಕಲೆ' ಕೃತಿಯಲ್ಲಿ ನಿರೂಪಿಸುತ್ತಾರೆ. ಮಹಿಮಾ ದೇವಾಲಯ, ಮಠಗಳ ಆವರಣದ ಒಂದು ಕೋಣೆಯ ಒಳಗೆ ಮಹಿಳೆಯರಿಗೆ ಪ್ರವೇಶವಿಲ್ಲದ್ದು ಕಂಡು ಬೇಸರ ವ್ಯಕ್ತಪಡಿಸುತ್ತಾರೆ. ಪರಂಪರೆಯಿಂದಲೂ ಪುರುಷ ದಬ್ಬಾಳಿಕೆ, ಮಡಿವಂತಿಕೆಗಳಿಂದ ಮುಕ್ತಿ ಪಡೆಯದ ಮಹಿಳೆಯರನ್ನು ತಾಯಿಯೆಂದು ಗೌರವಿಸಿದರೆ ಸಾಕು. ಅವರು ಎಲ್ಲೆಲ್ಲಿಗೂ ಬರಲು ಬಿಡುವುದು ಬೇಡ ಎಂದುಕೊಳ್ಳುತ್ತಾರೆ. ಇದು ಮುಖ್ಯವಾಗಿ ಗಂಡಸರ ಸಾಮ್ರಾಜ್ಯ. ಅಡುಗೆ ಮನೆಯಲ್ಲಿ ಮಹಿಳಾ ಸಹಾಯಕಿಯರು ಇದ್ದಾರೆ. ಆದರೆ ಮಹಿಳೆಯರಿಗೆ ಮಹಿಮಾ ಧರ್ಮದ ಭಿಕ್ಕುಗಳಿಗೆ ಸರಿಸಮಾನ ಸ್ಥಾನವನ್ನು ನೀಡುತ್ತಿಲ್ಲ ಎಂದು ದಾಖಲಿಸುತ್ತಾರೆ.

ಸುಧಾ ಚಿದಾನಂದಗೌಡ ಅವರು 'ಸಮನ್ವಿತೆ ಗೋಮಾಂತ' ಕೃತಿಯಲ್ಲಿ ಗೋವಾ ಬೀಚ್‌ವೊಂದರ ದೃಶ್ಯವೊಂದನ್ನು ಪ್ರಸ್ತಾಪಿಸುತ್ತಾರೆ. ಮುಸ್ಲಿಂ ಯುವಕನು ಸಮುದ್ರದ ಅಲೆಗಳ ತೀವ್ರತೆ ಹೆಚ್ಚು ಇದೆ. ಹತ್ತಿರ ಹೋಗಬೇಡಿ ಎಂದು ಎಚ್ಚರಿಸುತ್ತಿರುವುದನ್ನು ಕಂಡು ಲೇಖಕಿ ಮಾತನಾಡಿಸುತ್ತಾಳೆ. ಆತನ ಸ್ನೇಹಿತರಿಬ್ಬರು ಸಮುದ್ರದ ಪಾಲಾಗಿರುವುದಾಗಿ ಹೇಳುತ್ತಾನೆ. ಸಣ್ಣ ಅಂಗಡಿಯಲ್ಲಿ ಜೀವನ ಮಾಡುವ ಸ್ನೇಹಿತನ ಪ್ರೇಯಸಿ ಒಂಟಿಯಾಗಿದ್ದು, ಆಕೆ ಹಿಂದೂ

ಹುಡುಗಿ ಆಗಿದ್ದರೆ, ಮದ್ವೆ ಆಗುತ್ತಿದ್ದೆ ಎಂಬ ಉದಾರ ಭಾವನೆಯನ್ನು ವ್ಯಕ್ತಪಡಿಸುತ್ತಾನೆ. ಆದರೆ ಕ್ರಿಶ್ಚಿಯನ್ ಹುಡುಗಿ ಎಂಬ ಕಾರಣಕ್ಕೆ ಮದ್ವೆ ಮನಸ್ಸು ಕೈಬಿಟ್ಟಿರುವುದಾಗಿ ಹೇಳುತ್ತಾನೆ. ಇದನ್ನು ಕೇಳಿದ ಲೇಖಕಿ ಅವಳನ್ನು ಮದ್ವೆ ಮಾಡ್ಕೋ ಏನು ತಪ್ಪು? ಎಂದು ಹೇಳಿದಾಗ, ಇನ್ನೊಂದು ವರ್ಷ ಆದರೆ ನಿಧಾನಕ್ಕೆ ಮರೀತಾಳೆ. ಮನೆಯಲ್ಲಿ ಮದುವೆ ಮಾಡುತ್ತಾರೆ ಸರಿ ಹೋಗುತ್ತೆ ಎಂದು ಉತ್ತರಿಸುತ್ತಾನೆ. ಆತನ ಮಾತುಗಳಲ್ಲಿ ಅನುಕಂಪವಿತ್ತೇ ಹೊರತು, ಧರ್ಮವನ್ನು ಮೀರುವ ಪ್ರಯತ್ನ ಮಾಡಲಿಲ್ಲ. ಪುರುಷ ಪ್ರಾಧಾನ್ಯತೆಗೆ ಧಾರ್ಮಿಕ ಪದ್ಧತಿಯ ಆಚರಣೆಗಳೇ ಮೂಲ ನೆಲೆಯಾಗುತ್ತವೆ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಸಾಂಪ್ರದಾಯಿಕ ವಿಚಾರಗಳನ್ನು ಮುರಿಯುವ ಮನಸ್ಸು, ಆಧುನಿಕ ಯುವ ಜನತೆಯಲ್ಲೂ ಇದ್ದರೂ ಕೂಡ, ಪರಂಪರೆಯ ಹಾದಿಯಿಂದ ದೂರ ಸಾಗುವ ಮನಸ್ಸು ಮಾಡುತ್ತಿಲ್ಲ. ಅದೇ ಧರ್ಮ, ಜಾತಿ ಅಡ್ಡಿ ಪಡಿಸುತ್ತಿರುವುದು. ಆದರೆ ಹಳೆಯ ಮೌಲ್ಯಗಳಿಗೆ ಕಟ್ಟುಬಿದ್ದಿರುವುದು ಈ ಯುವಕನಲ್ಲಿ ಕಂಡುಬರುತ್ತದೆ. ಪ್ರಜ್ಞಾ ಮತ್ತಿಹಳ್ಳಿ ಅವರು 'ದೇವರ ಸ್ವಂತ ನಾಡಿನಲ್ಲಿ' ಎಂಬ ಕೃತಿಯಲ್ಲಿ ಕೇರಳದ ಧಾರ್ಮಿಕ ಪುರುಷರ ಮಡಿವಂತಿಕೆಯ ಸೋಗಲಾಡಿತನಗಳನ್ನು ನಿರೂಪಿಸಿದ್ದಾರೆ. ಅಲ್ಲಿನ ದೇವಾಲಯವೊಂದರಲ್ಲಿ ಸಂಪ್ರದಾಯಸ್ಥ ಕುಟುಂಬದ ಪುರುಷರೆಂದು ಹೇಳಿಕೊಳ್ಳುವವರು ನಡೆದುಕೊಳ್ಳುವ ರೀತಿಯ ಬಗ್ಗೆ ಟೀಕಿಸುತ್ತಾರೆ. ನದಿ ನೀರಿನಲ್ಲಿ ಬಯಲು ಸ್ನಾನ ಮಾಡಿ ಸೀರೆ ಬದಲಾಯಿಸುವಾಗ ತಮ್ಮ ತಮ್ಮ ಹೆಂಗಸರೊಂದಿಗೆ ಪೇಸ್ಟ್, ಟವಲ್ ವಿನಿಮಯಗೊಳಿಸುತ್ತ ಕೌಟುಂಬಿಕತನವನ್ನು ತೋರಿಸುತ್ತಲೇ ಪುಕ್ಕಟೆ ಸಿಗುವ ದೃಶ್ಯಗಳನ್ನು ನೋಡುವ ಪುರುಷರನ್ನು ಕಂಡು ಲೇಖಕಿಗೆ ಇರಿಸುಮುರಿಸಾಗುತ್ತದೆ. ಮನುಷ್ಯನ ಸಭ್ಯತೆಯಲ್ಲಿಯೂ ಸೋಗಲಾಡಿತನ ತೋರುವ ವ್ಯಕ್ತಿತ್ವ, ಆತನ ವಾಸ್ತವ ಬದುಕಿನ ಚಿತ್ರಣಗಳನ್ನು ತೋರುತ್ತಿರುತ್ತವೆ. ಯಾವ ಸ್ಥಳಗಳನ್ನು ಪವಿತ್ರತಾಣ ಎಂದು ಭಾವಿಸುತ್ತಾರೋ, ಅಂತಹ ಪಾರಂಪರಿಕ ತಾಣಗಳಲ್ಲಿ ಅನೈತಿಕ ಚಟುವಟಿಕೆಗಳಿಗೆ ಕಾರಣವಾಗುವ ಪುರುಷ ಸಮಾಜದ ಕುರಿತು ಲೇಖಕಿ ಪ್ರಶ್ನಿಸುತ್ತಾರೆ.

ಲಂಡನ್ ಮುಕ್ತ ಅಭಿವ್ಯಕ್ತಿ ಇರುವ ದೇಶವಾದರೂ, ಅದರ ಚರಿತ್ರೆಯ ಪುಟಗಳನ್ನು ತೆಗೆದಾಗ ಪುರುಷ ದೌರ್ಜನ್ಯಗಳು ಕಂಡುಬರುತ್ತವೆ ಎಂದು ಇಂದಿರಾ ಶಿವಣ್ಣ ಅವರು 'ಬದುಕಿಗೆ ಬಂಗಾರದ ಲೇಪನ' ಕೃತಿಯಲ್ಲಿ ತಿಳಿಸುತ್ತಾರೆ. ಲಂಡನ್ನಿನ ಸಾಮಾನ್ಯ ಮಹಿಳೆಯರಲ್ಲಾದವರೂ ಪುರುಷ ದಬ್ಬಾಳಿಕೆಗೆ ಒಳಗಾಗಿದ್ದ ಚರಿತ್ರೆಯನ್ನು ಲೇಖಕಿ ವಿವರಿಸುವುದು ಹೀಗೆ. "ಅಲ್ಲಿನ 'ಗ್ರೀಕ್ ಟವರ್' ರಾಜ ಹೆನ್ರಿ ತನ್ನ ರಾಣಿಯರ ತಲೆ ಕಡಿಸಿದ ಭಾಗ, ಅವನ ಹೆಂಡತಿ ಎಂಟು ಜನರ ಪ್ರತಿಮೆಗಳನ್ನು ಮಾಡಲಾಗಿದೆ. ೧೬ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಆಳಿದ ೮ನೇ ಹೆನ್ರಿ, ೧೮ನೇ ವಯಸ್ಸಿನಲ್ಲಿ ಸಿಂಹಾಸನವೇರಿ ತನ್ನ ಅಣ್ಣನ ಹೆಂಡತಿ ಕ್ಯಾಥರೀನಾಳನ್ನು ಮದುವೆಯಾಗಿ ಅವಳಿಂದ ಗಂಡು ಸಂತಾನವಿಲ್ಲದೆ ವಿಚ್ಛೇದನ ಪಡೆಯಲಿಚ್ಚಿಸಿದ. ಆದರೆ ರೋಮನ್ ಚರ್ಚ್‌ನೊಡನೆ ವಿರೋಧ ಕಟ್ಟಿಕೊಂಡ. ಕ್ಯಾಥರೀನಾಳನ್ನು ಬಿಟ್ಟು ಆನ್ ಜೋಲಿಸ್‌ಳೊಂದಿಗೆ ವಿವಾಹವಾದ. ಅವಳೂ ಸಾಕೆನಿಸಿದಾಗ ಅವಳು ಮಾಟಗಾತಿ, ಶೀಲ

ಸರಿಯಿಲ್ಲವೆಂದು ದೂಷಿಸಿ ಅವಳನ್ನು ಬಂಧನದಲ್ಲಿರಿಸಿ ಅವಳ ತಲೆ ಕಡಿಸಿದ. ಮತ್ತೆ ಹೆನ್ರಿ ಜೆನ್ ಸಮಾರಳೊಂದಿಗೆ ಮದುವೆಯಾದ. ಜೆನ್ ಮಕ್ಕಳು ಹೆತ್ತು ನಂತರ ಸತ್ತಳು. ಆನ್‌ಳೊಂದಿಗೆ ನಾಲ್ಕನೇ ಮದುವೆ ಆದ. ಬಿಟ್ಟು ಕ್ಯಾಥರೀನ್ ಹವರ್ಡ್‌ಳನ್ನು ವರಿಸಿದ. ಐವತ್ತರ ಹೆನ್ರಿ ಸಂಶಯ ಪಿಶಾಚಿಯಾದ, ಅವಳ ತಲೆಯನ್ನು ಲಂಡನ್ ಟವರ್‌ನಲ್ಲಿ ಕಡಿಯಲಾಯಿತು. ೬ನೇ ಹೆಂಡತಿಯು ಹೀಗೆ ಸಾಯುತ್ತಾಳೆ."(ಇಂದಿರಾ ಶಿಪಣ್ಣ, ೨೦೧೨, ಪುಟ-೧೬೪) ರಾಜಮನೆತನದಲ್ಲಿ ಹುಟ್ಟಿದ ಹೆಣ್ಣುಮಕ್ಕಳೇ ಹೀಗೆ ದುರಂತ ಅಂತ್ಯ ಕಂಡಿದ್ದನ್ನು ಇಂಗ್ಲೆಂಡ್ ಚರಿತ್ರೆಯಲ್ಲಿ ದಾಖಲಾದ ಬಗ್ಗೆ ಲೇಖಕಿ ಹೇಳುತ್ತಾರೆ.

ಅರೇಬಿಯಾದಲ್ಲಿ ಆಧುನಿಕತೆಯಲ್ಲಿಯೂ ಸ್ತ್ರೀಯರ ಬದುಕು ಪಾರಂಪರಿಕ ಪುರುಷರ ಹಿಡಿತದಲ್ಲಿರುವುದನ್ನು ಲತಾಗುತ್ತಿ ಅವರು 'ನಾ ಕಂಡಂತೆ ಅರೇಬಿಯಾ' ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಅಲ್ಲಿನ ೯೮% ಸ್ತ್ರೀಯರಿಗೆ ಸ್ವಾತಂತ್ರ್ಯ ಎನ್ನುವುದರ ಅರ್ಥವೇ ಗೊತ್ತಿಲ್ಲವೆನ್ನುತ್ತಾರೆ. ಗಂಡನಿಗೆ ಯಾವುದೇ ದೃಷ್ಟಿಯಿಂದ ಮರು ಉತ್ತರವಾಗಲಿ ನೀಡುವುದಿಲ್ಲ. ಸ್ವಲ್ಪ ಧ್ವನಿ ಎತ್ತಿದರು ನನ್ನನ್ನು ಬಿಟ್ಟಾನು ಎಂಬ ಭಯ ಅರೇಬಿಯಾದ ಮಹಿಳೆಯರಿಗೆ ನಿರಂತರವಾಗಿ ಕಾಡುತ್ತದೆ. ಇಲ್ಲಿನ ಸ್ತ್ರೀಯರು ಹುಟ್ಟುವುದೇ ಗಂಡ, ಮಕ್ಕಳ ಮನೆಯ ಸೇವೆಗೆಂದು ತಿಳಿದಂತೆ ಇಲ್ಲಿನ ಪುರುಷರು ವರ್ತಿಸುವುದನ್ನು ಲೇಖಕಿ ಕಂಡಿದ್ದಾರೆ. ತಮ್ಮ ಕುಟುಂಬದ ಅಥವಾ ಇತರೆ ಮಹಿಳೆಯರ ಜೀವನವನ್ನು ಕಣ್ಣಾರೆ ಕಂಡಿದ್ದ ಅರೇಬಿಯಾದ ಮಹಿಳೆಯರು ಪುರುಷ ದೌರ್ಜನ್ಯದ ವಿರುದ್ಧ ಮಾತಾನಾಡುವುದಿಲ್ಲ. ಮುಸ್ಲಿಂ ಧರ್ಮದಲ್ಲಿರುವ 'ತಲಾಖ್' ಎನ್ನುವ ಅಸ್ತ್ರವು ಅಲ್ಲಿನ ಮಹಿಳೆಯರಿಗೆ ಭಯೋತ್ಪಾದಕ ಪದಕ್ಕೆ ಸಮಾನವಾಗಿ ಕಾಣುತ್ತದೇನೋ ಎಂದು ಲೇಖಕಿ ನಿರೂಪಿಸುತ್ತಾರೆ. ಒಬ್ಬ ಪುರುಷನಿಗೆ ಎರಡು ಮೂರು ಹೆಂಡತಿಯರು ಇರುವುದರಿಂದ ಸದಾ ತಿಕ್ಕಾಟದಲ್ಲಿಯೇ ಕಾಲ ಕಳೆಯಬೇಕಾದ ಅನಿವಾರ್ಯತೆ ಅರಬ್ಬಿ ಮಹಿಳೆಯರಿಗಿದೆ. ಹೀಗಾಗಿ ಧಾರ್ಮಿಕ ಕಟ್ಟಲೇ ಮುರಿದರೆ ಆಶ್ರಯವಿಲ್ಲದೇ, ಏಕಾಂಗಿಯಾಗಿ ಬದುಕಬೇಕಾದೀತು ಎಂಬ ಭಯ ಸದಾ ಕಾಡುತ್ತಿರುತ್ತದೆ. ಜೊತೆಗೆ ಭವಿಷ್ಯದ ಜೀವನಕ್ಕಾಗಿ, ಮಕ್ಕಳಿಗಾಗಿ ಗಂಡನ ನೆರಳಿನಲ್ಲಿರಬೇಕಾದ ಅನಿವಾರ್ಯತೆಯಿಂದಾಗಿ ತಲಾಖ್ ನಂತರದ ಜೀವನವನ್ನು ಸಾಗಿಸುವ ಏಕೈಕ ದಾರಿ ಎಂದು ಭಾವಿಸಿದಂತಿದೆ ಎಂದು ಲತಾಗುತ್ತಿ ಅಭಿಪ್ರಾಯ ಪಡುತ್ತಾರೆ. ಅಲ್ಲದೇ ಸೌದಿಯಲ್ಲಿ ದುಡಿಯುವ ಮಹಿಳೆಯರ ಮೇಲೆ ಪುರುಷ ದೌರ್ಜನ್ಯವನ್ನು ದಾಖಲಿಸುತ್ತಾರೆ. ಅಲ್ಲದೇ ಸುಡಾನ್, ಸೊಮಾಲಿಯಾ ದೇಶದ ಮಹಿಳೆಯರು ಉದ್ಯೋಗ ಹರಿಸಿ ಸೌದಿಗೆ ಬರುತ್ತಾರೆ. ಬಾಂಗ್ಲಾ ದೇಶದ ಸ್ತ್ರೀಯರು ಮನೆಗೆಲಸಗಳಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಇಂತಹ ದುಡಿಯುವ ಮಹಿಳೆಯರನ್ನು ಮನೆಯ ಯಜಮಾನರು ಕಾಮತೃಷೆಗಾಗಿ ಬಳಸಿಕೊಳ್ಳುತ್ತಾರೆ. ಇದರಿಂದಾಗಿ ಸೌದಿಯಲ್ಲಿ ಅನೇಕ ಬಡ ಮಹಿಳೆಯರು ತಮ್ಮ ಬದುಕನ್ನು ನರಕ ಮಾಡಿಕೊಳ್ಳುತ್ತಾರೆ. ಮಹಿಳಾ ದೌರ್ಜನ್ಯದ ಸಂಘಟನೆಗಳಾಗಲಿ, ಸ್ತ್ರೀವಾದದ ಧೋರಣೆಗಳು ಇಲ್ಲಿ ಹೆಚ್ಚು

ಕ್ರಿಯಾಶೀಲವಾಗಿಲ್ಲ. ಪಾರಂಪರಿಕ ಪುರುಷ ಮೌಲ್ಯಗಳು ಎಂದು ಕೊನೆಯಾಗುವುದಕ್ಕೆ ಚಳುವಳಿಗಳಿಂದಲೇ ಸಾಧ್ಯವೆಂದು ಲೇಖಕಿ ಅಭಿಪ್ರಾಯ ಪಡುತ್ತಾರೆ.

ಅಮೇರಿಕಾದ ಯುವಜನತೆಯಲ್ಲಿ ಮದುವೆ ಕೂಡ ಒಂದು ಅನಾವಶ್ಯಕ ಬಂಧನ ಎನಿಸುತ್ತಿದೆ. ಹಲವಾರು ಯುವಕ-ಯುವತಿಯರು ಮದುವೆ ಮಾಡಿಕೊಳ್ಳದೆಯೇ ಮನೆ, ಸಂಸಾರ ಮಾಡಿ ದಾಂಪತ್ಯ ಜೀವನ ನಡೆಸುತ್ತಿದ್ದಾರೆಂದು ನೀಳಾದೇವಿ ಅವರು 'ನಾ ಕಂಡ ಆ ಖಂಡ' ಕೃತಿಯಲ್ಲಿ ದಾಖಲಿಸುತ್ತಾರೆ. ವರ್ಷಾನುಗಟ್ಟಲೇ ಹೀಗೆ ಇದ್ದು ಜೀವನ ನಡೆಸಿ, ವಿವಾಹ ರಹಿತ ಮಕ್ಕಳನ್ನು ಪಡೆಯುತ್ತಾರೆ. ಹೆಣ್ಣು ಮಕ್ಕಳು ಹರೆಯವಯಸ್ಸಿನಲ್ಲಿಯೇ ಗರ್ಭಿಣಿಯರಾಗಿ ಹಾಸ್ಪೆಲ್‌ಗಳು ಸೇರುತ್ತಾರೆ. ತಂದೆ ತಾಯಿಗಳು ಪೋಷಿಸುವುದಿಲ್ಲ. ಮಗು ಹುಟ್ಟಿಸಿದ ತಂದೆಯು ಆಸ್ಪತ್ರೆಗೆ ಬರುತ್ತಾನೋ ಎಂಬುದು ಸಂದೇಹವೇ ಎನ್ನುತ್ತಾರೆ. ಆ ಮಗುವನ್ನು ಬೆಳೆಸುವ ಜವಾಬ್ದಾರಿ ಹೊರಲು ಮುಂದೆ ಬರುವುದಿಲ್ಲ. ಕೆಲವೊಮ್ಮೆ ಇಂತಹ ಮಕ್ಕಳು ಅನಾಥರಾಗಿಯೇ ಬೆಳೆಯುತ್ತಾರೆ. ಈ ಕುರಿತು ಲೇಖಕಿ ಸಾರಾ ಅಬೂಬಕ್ಕರ್ ಅವರು 'ಐಷಾರಾಮದ ಆಳದಲ್ಲಿ' ಎಂಬ ಕೃತಿಯಲ್ಲಿ ಅಮೇರಿಕಾದ ವಿವಾಹಪೂರ್ವದ ಸಂಬಂಧಗಳಲ್ಲಿ ಹುಟ್ಟಿದ ಮಗುವನ್ನು ಪೊದೆಯಲ್ಲೋ, ಕಸದ ತೊಟ್ಟಿಯಲ್ಲೊ, ಜೀವಂತವಾಗಿಯೋ, ಮೃತಪಟ್ಟೋ ಕಾಣಸಿಕ್ಕುವುದಿದೆ ಅಥವಾ ಆಸ್ಪತ್ರೆಯಲ್ಲಿ ಬಿಟ್ಟು ಹೋಗುವುದು ಇದೆ ಎಂದಿದ್ದಾರೆ. ಹೀಗೆ ಸಿಕ್ಕ ಅನಾಥ ಮಕ್ಕಳನ್ನು ಅಲ್ಲಿನ ಅನಾಥಶ್ರಮಗಳು ಸಲುಹುತ್ತವೆ. ಈ ಸಂಸ್ಥೆಗಳಲ್ಲಿ ತಾಯಿಯ ಗುರುತನ್ನು ಬಹಿರಂಗಪಡಿಸುವುದಿಲ್ಲ. ಆದರೂ ಅಮೇರಿಕಾದಲ್ಲಿ ಮಾನವೀಯತೆಗೆ ಕೊರತೆಯಿಲ್ಲ ಎಂದು ಹೇಳುವ ಲೇಖಕಿ, ಅಲ್ಲಿನವರು ಮಕ್ಕಳ ಮೇಲೆ ಅಪಾರ ಕರುಣೆ ಮತ್ತು ಮಾನವೀಯತೆ ಪ್ರದರ್ಶಿಸುವವರು ಇದ್ದಾರೆ. ಆದರೆ ಭಾರತೀಯರಷ್ಟು ತಂದೆ, ತಾಯಿ, ಮಕ್ಕಳ ಮೇಲಿನ ಹೊಣೆಗಾರಿಕೆಯನ್ನು ದೂರ ತೆಗೆದುಕೊಂಡು ಹೋಗುವುದಿಲ್ಲ. ಮಕ್ಕಳೇ ಕಡಿಮೆಯಾಗುತ್ತಿರುವ ದೇಶದಲ್ಲಿ ಮಕ್ಕಳು ಕುಟುಂಬಕ್ಕೆ ಹೊರತಾಗಿ ಬೆಳೆಯುವವು. ಆಧುನಿಕತೆಯ ಪುರುಷ ಸಮಾಜವು ಮಹಿಳೆಯನ್ನು ಬಳಸಿ ಬಿಸಾಡುವಂತಹ ಮುಕ್ತತೆ ಈ ಸಮಾಜ ಕಂಡುಕೊಂಡ ದಾರಿಯಂತಿದೆ. ಯುವಕರ ಯುವತಿಯರಲ್ಲಿನ ಮಿತಿ ಮೀರಿದ ಸ್ವೇಚ್ಛೆ ಅಲ್ಲಿನ ಯುವಜನರನ್ನು ಇನ್ನಿಲ್ಲದ ಸಮಸ್ಯೆಗೆ ದೂಡುವುದಲ್ಲದೆ. ಅಡ್ಡ ಪರಿಣಾಮಗಳಿಗೆ ದಾರಿ ಮಾಡುಕೊಡುವ ಬಗ್ಗೆ ಲೇಖಕಿ ವಿಷಾದ ವ್ಯಕ್ತಪಡಿಸುತ್ತಾರೆ.

ಕೆನಡಾದ ಶಾಲಾ ಕಾಲೇಜುಗಳಲ್ಲಿ, ವಿದ್ಯಾರ್ಥಿಗಳಿಗೆ ಉಚಿತವಾಗಿ ಕಾಂಡಮ್‌ಗಳನ್ನು ನೀಡುತ್ತಿದ್ದು, ಇದರಿಂದಾಗಿ ಲೈಂಗಿಕ ಕ್ರಿಯೆಯಲ್ಲಿ ವಿದ್ಯಾರ್ಥಿಗಳು ತೊಡಗಿಕೊಂಡಿರುವುದನ್ನು ಉಮಾರಾವ್ ಅವರು 'ರಾಕೀ ಪರ್ವತಗಳ ನಡುವೆ ಕ್ಯಾಬರೆ' ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಸರ್ಕಾರವೇ ಕಾಂಡಮ್‌ಗಳನ್ನು ನೀಡುವುದರಿಂದ ಶಾಲಾ ಮಕ್ಕಳನ್ನು ಲೈಂಗಿಕವಾಗಿ ಪಾಲ್ಗೊಳ್ಳುವಂತೆ ಪ್ರೇರೆಪಿಸುತ್ತವೆ. ಶಿಕ್ಷಣ ಶಾಲೆಗಳು ದೇವಾಲಯಗಳಂತೆ ಭಾವಿಸಿ ಕಲಿಸಬೇಕಾದ ಮಕ್ಕಳಿಗೆ ಲೈಂಗಿಕ ಚಟುವಟಿಕೆಯ ಕೇಂದ್ರವಾಗಿಸುವುದು ಸರ್ಕಾರದ ನೈತಿಕ ಮಟ್ಟವನ್ನು ಪ್ರಶ್ನಿಸುವಂತಿದೆ.

ಪ್ರಪಂಚದಲ್ಲಿಯೇ ಅತ್ಯಂತ ವೈಭವೋಪೇತವಾದ ರಾಷ್ಟ್ರವೆಂದು ಖ್ಯಾತಿ ಪಡೆದ ಅಮೇರಿಕಾವನ್ನು ಕಣ್ಣಾರೆ ಕಂಡು ಮನದಲ್ಲೇ ಆನಂದಿಸಿದ ಲೇಖಕಿಗೆ, ಅಮೇರಿಕಾದ ಸೊಗಸುಗಾರಿಕೆಯ ನಡುವೆಯೂ ಈ ವಿಚಾರಗಳು ಮೊಸರಿನಲ್ಲಿ ಕಲ್ಲು ಕಂಡಂತೆ ತೋರುತ್ತವೆ. ಇದು ಕಾನೂನಿನ ಚೌಕಟ್ಟನ್ನು ಮೀರಿ ಇಂದು ಬೆಳೆದಿದೆ. ಈ ಸಮೃದ್ಧ ದೇಶದಲ್ಲಿಯೂ ಕಳವು, ದರೋಡೆಗಳು, ಅನೈತಿಕ ಲೈಂಗಿಕಾಸಕ್ತಿ, ಮಾನಭಂಗ, ಅಪ್ರಾಪ್ತ ವಯಸ್ಕರ ಮೇಲೆ ಬಲತ್ಕಾರ, ಲೈಂಗಿಕ ಅಪರಾಧ ಮುಂತಾದವುಗಳೆಲ್ಲ ದಿನನಿತ್ಯ ಎನ್ನುವಂತೆ ನಡೆಯುವ ಕುರಿತು ಲೇಖಕಿ ದಾಖಲಿಸಿದ್ದಾರೆ.

ರಾಜಾಮ್ಮಾಜಿ ಪತಿಯಾದ ಸಿ.ಕೆ.ನಾಗರಾಜರಾವ್ ಅವರು ಪ್ಯಾರಿಸ್ ನಗರದಲ್ಲಿ ಕ್ಯಾಬರೆ ನೃತ್ಯಕ್ಕೆ ವಿಶ್ವವಿಖ್ಯಾತಿ ಇದೆ. ಅದನ್ನು ಕಣ್ಣಿಂದ ನೋಡಿ ಬರೋಣ. ಮತ್ತೆ ನಾವು ಪ್ಯಾರಿಸ್‌ಗೆಲ್ಲಿ ಬರುತ್ತೇವೆ ಎಂದಾಗ, ಲೇಖಕಿಗೆ ಮೈಯಲ್ಲಿ ಮುಳ್ಳಿನಿಂದ ಚುಚ್ಚಿದ ಅನುಭವವಾಗುತ್ತದೆ. ಅಮೇರಿಕಾದಲ್ಲಿ ಕಲೆಗಿಂತ ದೇಹ ಪ್ರದರ್ಶನಕ್ಕೆ ಪ್ರಾಮುಖ್ಯತೆ ಇರುತ್ತದೆ. ಅದು ಲೈಂಗಿಕ ಪ್ರಚೋದನೆಗೂ ಸಾಧನವಾಗಬಹುದೆಂದಿದ್ದಾರೆ. ಕ್ಯಾಬರೆಗೆ ಹೋದ ಲೇಖಕಿಯು ಅಲ್ಲಿನ ನೃತ್ಯಗಳು ಅರೆಬರೆ ಬಟ್ಟೆ, ದೃಶ್ಯ ದೃಶ್ಯಕ್ಕೂ ಬದಲಾವಣೆ ಕಾಣುತ್ತಿತ್ತು. ಮೈಮೇಲಿದ್ದ ವಸ್ತ್ರಗಳು ಕಡಿಮೆಯಾಗುತ್ತಾ ಹೋದವು. ಗುಪ್ತಾಂಗಗಳನ್ನು ಬಿಟ್ಟರೆ ಶರೀರವೆಲ್ಲ ನಗ್ನವಾಗಿಸಿಕೊಂಡು ಕುಣಿಯುತ್ತಿರುವುದನ್ನು ಕಂಡು ರಾಜಾಮ್ಮಾಜಿಯವರು ಮುಜುಗರದಿಂದ ಹೊರಬಂದರು. ಪುರುಷ ಅಧೀನತೆಯಲ್ಲಿರುವ ಸಮಾಜವು ಹೆಣ್ಣನ್ನು ಬಳಸಿಕೊಳ್ಳುವ ರೀತಿಗೆ ಲೇಖಕಿ ಅಸಹ್ಯ ಪಟ್ಟುಕೊಳ್ಳುತ್ತಾರೆ. ಕಲೆಯ ಹೆಸರಿನಲ್ಲೂ ಹೆಣ್ಣನ್ನು ಬೆತ್ತಲೆಗೊಳಿಸಿ ಕುಣಿಸುವ, ಅದನ್ನು ಆಸ್ವಾಧಿಸುವ ಮನಸ್ಸುಗಳ ಕೊಳಕನ್ನು ಆಧುನಿಕರು ಜನಪದರನ್ನು ಬಿಡದೆ ಹೋಗಿದ್ದಾರೆ ಎಂದು ಬೇಸರಿಸಿಕೊಳ್ಳುತ್ತಾರೆ.

ಚೀನಾದ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಗೆ ಕಪ್ಪು ಚುಕ್ಕೆಯಂತಿರುವುದು 'ಪುಟ್ ಬೈಡಿಂಗ್'(ಪಾದ ಕಟ್ಟುವುದು). ಪುರುಷ ಪ್ರಧಾನ ಸಮಾಜದ ಕ್ರೂರತ್ವಕ್ಕೆ ನಿದರ್ಶನದಂತಿದೆ. ಸಣ್ಣ ವಯಸ್ಸಿನಲ್ಲಿಯೇ ಹೆಣ್ಣು ಮಕ್ಕಳ ಪಾದಗಳನ್ನು ಮೂರು ಇಂಚಿಗಿಂತಲೂ ಉದ್ದವಾಗಿ ಬೆಳೆಯದಂತೆ ಕಟ್ಟಿಹಾಕಿ ನಿಯಂತ್ರಿಸುತ್ತಿದ್ದರು. ಅದೊಂದು ಸಾಂಪ್ರದಾಯಿಕ ಆಚರಣೆಯಂತೆ ಭಾವಿಸಿದ್ದರು. ಕ್ರಿ.ಶ.೬೬೦ ರಿಂದ ೧೯೧೧ರವರೆಗಿನ ಸುಮಾರು ಸಾವಿರ ವರ್ಷಗಳ ಕಾಲ ಚೀನಿ ಹೆಣ್ಣು ಮಕ್ಕಳ ಬದುಕನ್ನು ಯಾತನಾಮಯ ಗೊಳಿಸುತ್ತಿದ್ದ ಕುಖ್ಯಾತಿ ಈ ಆಚರಣೆಗಿದೆ. ಹೆಣ್ಣು ಮಕ್ಕಳು ನಾಲ್ಕು ವರ್ಷದವರಿದ್ದಾಗಿನಿಂದ ಪಾದಗಳನ್ನು ೩-೪ ಇಂಚಿಗೆ ಕುಗ್ಗುವಂತೆ ಪಾದಗಳನ್ನು ಬಿಸಿ ನೀರಿನಲ್ಲಿ ತೊಳೆದು, ಮಸಾಜ್ ಮಾಡಿ, ಬೆರಳುಗಳನ್ನು ಹಿಮ್ಮಡಿಯವರೆಗೆ ಮಡಚಿ ಬೀಗಿಯಾಗಿ ಕಟ್ಟುತ್ತಿದ್ದರು. ಪಾದದ ಬೆಳವಣಿಗೆ ಸ್ಥಗಿತಗೊಳಿಸಲಿಕ್ಕೆ ಎರಡು ಮೂರು ವರ್ಷಗಳವರೆಗೆ ಕಟ್ಟು ಬಿಚ್ಚುತ್ತಿರಲಿಲ್ಲ. ಕೆಲವೊಮ್ಮೆ ಕಟ್ಟು ಬಿಚ್ಚಿ ಪಾದವನ್ನು ಕಾಮಾನಿನಂತೆ ಬಾಗಿಸಿ ಬಿಗಿತ ಮತ್ತಷ್ಟು ಗಟ್ಟಿಗೊಳಿಸುತ್ತಿದ್ದರು. ಕೆಲವರಲ್ಲಿ ರಕ್ತ ಪರಿಚಲನೆ ಇಲ್ಲದಂತಾಗಿ, ಗ್ಯಾಂಗ್ರೀನ್‌ನಿಂದಾಗಿ ರಕ್ತವು ವಿಷವಾಗುತ್ತಿತ್ತು. ಆಗ ಬೆರಳನ್ನು ಕತ್ತರಿಸುತ್ತಿದ್ದರು. ಈ ಗಾಯಗಳಿಗೆ

ಚಿಕಿತ್ಸೆಯೂ ಇರುತ್ತಿರಲಿಲ್ಲ. ಹೆಣ್ಣು ಮಕ್ಕಳ ಕಾಲಿನ ಪಾದವನ್ನು ವೈದ್ಯರು ನೋಡುವ ಹಾಗೆಯೂ ಇರಲಿಲ್ಲ. ಇಂತಹ ಯಾತನೆಯಲ್ಲಿ ಹೆಣ್ಣು ಮಕ್ಕಳ ಬೆಳೆದು ನಿಂತಾಗ ಅಸಾಧ್ಯ ನೋವನ್ನು ಅನುಭವಿಸಿದ್ದರೆಂದು ಲೇಖಕಿ ಹೇಳುತ್ತಾರೆ. ಇಂತಹ ಅಮಾನವೀಯ ಪದ್ಧತಿಯ ಹಿಂದೆ ಹೆಣ್ಣಿನ ಸೌಂದರ್ಯವು ವೃದ್ಧಿಸುತ್ತದೆ ಎಂಬ ನಂಬಿಕೆ ಚೀನಿಯ ಪುರುಷರಲ್ಲಿತ್ತು. ಹೆಣ್ಣಿನ ಪುಟ್ಟಪಾದಗಳು ಕಾಮೋತ್ತೇಜಕ ಅಂಗಗಳಾಗಿದ್ದವು. ಕಟ್ಟಿದ ಪಾದಗಳಿಂದಾಗಿ ಹೆಚ್ಚು ಓಡಾಡಲಾರದ ಸ್ಥಿತಿಯಲ್ಲಿ ಸ್ಥಿರವಾದ ಜಾಗದಲ್ಲಿರುವುದರಿಂದ ಸ್ತ್ರೀಯರ ಕನ್ಯತ್ವವನ್ನು ಪರೋಕ್ಷವಾಗಿ ದೃಢೀಕರಿಸುತ್ತಿದ್ದರು. ಪಾದಕಟ್ಟದಿದ್ದರೆ ಮದುವೆಯಾಗದೆ ಉಳಿದುಬಿಡುವ ಆತಂಕದಿಂದಾಗಿ ತಂದೆ-ತಾಯಿಯರು ಪಾದಗಳನ್ನು ಕಟ್ಟುವ ಕಟ್ಟುಪಾಡಿಗೆ ಒಳಗು ಪಡಿಸುತ್ತಿದ್ದರು. ೧೦ನೇ ಶತಮಾನದಲ್ಲಿ ಟ್ಯಾಂಗ್ ರಾಜವಂಶದಿಂದ ಆರಂಭವಾದ ಈ ಕ್ರೂರಪದ್ಧತಿ, ೧೯೦೦ರವರೆಗೆ ರೂಢಿಯಲ್ಲಿತ್ತು. ೨೦ನೇ ಶತಮಾನದಲ್ಲಿ ಕ್ರೈಸ್ತ ಮಿಶನರಿಗಳು ಇದರ ವಿರುದ್ಧ ಹೋರಾಡಿದರು. ೧೯೦೫ರಲ್ಲಿ ಚಕ್ರವರ್ತಿನಿ ಡೊವೆಜರ್ ಶಿಕ್ಸಿ ಈ ಪದ್ಧತಿ ವಿರುದ್ಧ ಫರ್ಮಾನು ಹೊರಡಿಸಿದಳು. ಸಾಹಿತಿಗಳು ಸಹ ಈ ಬಗ್ಗೆ ಸಾಹಿತ್ಯವನ್ನು ರಚಿಸಿ ಸಮಾಜಕ್ಕೆ ತಿಳಿಯುವಂತೆ ಮಾಡಿದರು. 'ಪುಟ್ ಬೈಂಡಿಂಗ್' ಆಚರಿಸುವವರ ವಿರುದ್ಧವಾಗಿ ನಿರ್ಬಂಧ ಏರಿ ದಂಡ ವಿಧಿಸಿದರು. 'ನ್ಯೂ ಚೈನಿಸ್ ರಿಪಬ್ಲಿಕ್' ಸರ್ಕಾರ ಬರುತ್ತಿದ್ದಂತೆ ಈ ಅನಿಷ್ಠ ಪದ್ಧತಿಯಿಂದ ಚೀನಾದ ಮಹಿಳೆಯರು ಸಂಪೂರ್ಣವಾಗಿ ಮುಕ್ತಿ ಪಡೆದರು. ಈ ಪಾದಕಟ್ಟುವಿಕೆ ಪುರುಷ ಸಮಾಜವು ಮಹಿಳೆಯ ನಿಯಂತ್ರಣಕ್ಕಾಗಿ, ಮಹಿಳೆಯನ್ನು ಗುರಿಯಾಗಿಸಿಕೊಂಡು ಮಾಡಿದ ಅಮಾನವೀಯ ಪದ್ಧತಿಯಾಗಿದೆ. ಈ ಪಾರಂಪರಿಕ ಪುರುಷ ಪ್ರಧಾನ ಸಮಾಜದ ನಿರ್ಧಾರದಿಂದಾಗಿ ಮಹಿಳೆಯರ ಅಭಿವ್ಯಕ್ತಿಗಳನ್ನು, ಆಚರಣೆಗಳನ್ನು ಪ್ರಶ್ನಿಸುವುದಕ್ಕೆ ೧೦ ಶತಮಾನಗಳೇ ಬೇಕಾಯಿತು. ಅಷ್ಟು ದೀರ್ಘಕಾಲದ ನೋವನ್ನು ಚೀನಿ ಮಹಿಳೆಯರು ಅನುಭವಿಸುವಂತಾಯಿತು ಎಂದಿದ್ದಾರೆ.

ಟಿಬೆಟ್ ಪ್ರವಾಸ ಕೃತಿಯಾದ 'ಕೈಲಾಸಾಧಿಪತಿಯ ಮನೆಯಂಗಳದಲ್ಲಿ' ಕುಟುಂಬ ವ್ಯವಸ್ಥೆಗಳು, ವಿವಾಹದ ಸಂಬಂಧಗಳ ಬಗ್ಗೆ ದಾಖಲಿಸಿದ್ದಾರೆ. "ಅಲ್ಲಿ ಮದುವೆಯಾದ ಹೆಣ್ಣು, ಅವನ ತಮ್ಮಂದಿರಿಗೆಲ್ಲರಿಗೂ ಪತ್ನಿಯಾಗುತ್ತಾಳೆ. ಆದುದರಿಂದ ಅವರಲ್ಲಿ ಮನೆಗಳು ಒಡೆದಿಲ್ಲ. ಮನೆತನಗಳು ಹೆಚ್ಚಾಗಿಲ್ಲ. ವಿಧವಾ ವಿವಾಹವು ಇಲ್ಲಿ ಸಾಮಾನ್ಯ. ವಿಧವೆ ಮತ್ತು ವಿಧುರರ ನಡುವೆ ನಿಯೋಗ ಪದ್ಧತಿಯು ಇಲ್ಲಿ ಕಂಡುಬರುತ್ತದೆ. ತಮ್ಮ ತಮ್ಮ ಮನೆಯಲ್ಲಿದ್ದು, ಕೂಡಿಕೊಳ್ಳುವಿಕೆಯಿಂದ ಹುಟ್ಟಿದ ಮಗು ಹೆಣ್ಣಿನ ಸ್ವತ್ತು. ಸಾಮಾನ್ಯ ವಿವಾಹದಿಂದಾಗಿ ಮಕ್ಕಳಿಗೆ ಸಿಗುವ ಹಕ್ಕು ಬಾಧ್ಯತೆಗಳೆಲ್ಲವೂ ಇಲ್ಲಿಯ ಜನತೆಯ ಮೇಲೆ ಮುಖ್ಯವಾಗಿ, ಮಹಿಳೆಯರ ಮೇಲೆ ನಡೆಸುವ ಅತ್ಯಾಚಾರದ ದೌರ್ಜನ್ಯಕ್ಕೆ ಕೊನೆಯಿಲ್ಲ." (ಮಮತಾರಾವ್, ೨೦೦೭, ಪುಟ-೨೮) ಎಂದು ಲೇಖಕಿ ನಿರೂಪಿಸುತ್ತಾರೆ. ಇಂತಹ ದುರ್ಘಟನೆಗಳಿಂದಾಗಿ ಅಲ್ಲಿನ ಕುಟುಂಬದವರಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ. ಇಲ್ಲಿನ ಜನತೆಯನ್ನು ಧಾರ್ಮಿಕವಾಗಿ, ನೈತಿಕವಾಗಿ, ಆರ್ಥಿಕವಾಗಿ ನೆಲಕ್ಕಚ್ಚುವಂತೆ ಮಾಡಿವೆ. ಚೀನಾ ಸರ್ಕಾರವು ಅಧಿಕಾರದ

ದರ್ಪದಿಂದಾಗಿ ಟಿಬೆಟಿಯನ್ ಮಹಿಳೆಯರು ಕುಟುಂಬಗಳಲ್ಲಿ ಹೆಚ್ಚು ಕ್ರಿಯಾಶೀಲವಾಗಿಲ್ಲ ಮತ್ತು ಇಲ್ಲಿನ ಹೆಣ್ಣು ವ್ಯಭಿಚಾರಿಯಂತೆ ಬಳಕೆಯಾಗುತ್ತಿರುವುದು ಕಂಡುಬರುತ್ತದೆ. ಈ ಪದ್ಧತಿಯ ನಿರ್ಮೂಲನೆಗಾಗಿ ಅಲ್ಲಿನ ಮಹಿಳಾ ಹೋರಾಟಗಾರ್ತಿಯರು ನಿರಂತರವಾಗಿ ಹೋರಾಡುತ್ತಿದ್ದಾರೆ. ಪುರುಷ ದಬ್ಬಾಳಿಕೆಯ ವಿರುದ್ಧ ಮಹಿಳೆಯರು ಸಂಘಟಿತರಾಗಿ ಜಾಗೃತಿಯನ್ನು ಮೂಡಿಸುವ ಪ್ರಯತ್ನದಲ್ಲಿರುವುದಾಗಿ ಲೇಖಕಿ ಪ್ರಸ್ತಾಪಿಸುತ್ತಾರೆ

೧೯೯ಳರಲ್ಲಿ ಕಾಶ್ಮೀರದ ಅನಕ್ಷರಸ್ಥ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕಾರ್ಮಿಕರಾಗಿದ್ದರೆಂದು, ಕಣಿವೆಗಳಲ್ಲಿ ಅವರು ಅನುಭವಿಸುವ ದೌರ್ಜನ್ಯಗಳನ್ನು ಕುರಿತು ಶಮಂತ ಅವರು 'ಕದನ ಕಾಶ್ಮೀರ' ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಲೇಖಕಿ ಕಾಶ್ಮೀರ ಕಣಿವೆಗೆ ಭೇಟಿಯಿತ್ತ ಸಂದರ್ಭದಲ್ಲಿ ಮಹಿಳೆಯರ ಮೇಲಾಗುವ ದೌರ್ಜನ್ಯವನ್ನು ಕುರಿತು ಅಲ್ಲಿನ ಹೆಣ್ಣುಮಕ್ಕಳು ತಮ್ಮೊಂದಿಗೆ ಹೇಳಿಕೊಂಡ ವಿಚಾರಗಳನ್ನು ಹೀಗೆ ವಿವರಿಸುತ್ತಾರೆ. "ಒಂದೇ ದಿನದಲ್ಲಿ ರಕ್ಷಣಾ ಸಿಬ್ಬಂದಿಯವರು ಸುಮಾರು ಹದಿನೈದು ಮಹಿಳೆಯರನ್ನು ಅತ್ಯಾಚಾರ ಮಾಡಿದ್ದಾರೆ. ಇದನ್ನು ಪ್ರತಿಭಟಿಸಿ ಮೆರವಣಿಗೆ ಹೊರಟಿದ್ದಕ್ಕೆ ಬಿ.ಎಸ್.ಎಫ್.ನವರು ಅರವತ್ತು ಜನರನ್ನು ಗುಂಡಿಕ್ಕಿ ಕೊಂದರು. ನಮಗಾದ ಅನ್ಯಾಯವನ್ನು, ನೋವನ್ನು ನಾವು ಪ್ರತಿಭಟಿಸಬಾರದೆ? ಪ್ರಜಾರಾಷ್ಟ್ರ ಎಂದುಕೊಳ್ಳುವ ಭಾರತದ ಈ ನಿಲುವು ಸರಿಯಾದುದೆ? ೧೨-೧೩ ವರ್ಷಗಳ ಅಪ್ರಾಪ್ತ ಬಾಲಕಿಯರ ಮೇಲೂ ಅತ್ಯಾಚಾರವೆಸಗಿದ್ದಾರೆ."(ಶಮಂತ, ೧೯೯೫, ಪುಟ-೭೫) ಈಗಾಗಲೇ ಬದುಕಿನಲ್ಲಿ ನಿರಾಶವಾದಿಗಳಾದ ಅವರು ದೇವರು ಇರುವಿಕೆಯ ಬಗೆಗೆ ಪ್ರಶ್ನೆಯನ್ನು ಎತ್ತುತ್ತಾರೆ. ದೇವರು ಸೃಷ್ಟಿಕರ್ತ, ಎಲ್ಲರನ್ನೂ ಸಮಾನವಾಗಿ ಕಾಣುತ್ತಾನೆ ಎಂಬುದಕ್ಕಾಗಿ ಪ್ರಶ್ನಿಸಿ ನಿರಾಶರಾಗಿದ್ದಾರೆ. ಅಲ್ಲದೇ ಮುಸ್ಲಿಂ ಕುಟುಂಬದ ಮೇಲೆ ಭಯೋತ್ಪಾದಕರ ಬಗ್ಗೆ ವಿಚಾರಿಸುವ ನೆಪದಲ್ಲಿ ತಂದೆಯ ಮುಂದೆ ಮಗಳನ್ನು ಬೆತ್ತಲೆಗೊಳಿಸುವುದು, ಮಕ್ಕಳೆದುರು ತಂದೆಯನ್ನು ಬೆತ್ತಲೆಗೊಳಿಸಿ ಹೊಡೆಯುವ ಕ್ರೂರ ಶಿಕ್ಷೆಗೆ ಗುರಿಪಡಿಸುತ್ತಿದ್ದಾರೆ. ಕೆಲವೊಮ್ಮೆ ಕುಟುಂಬದವರ ಎದುರಿಗೆ ಅತ್ಯಾಚಾರಕ್ಕೂ ಗುರಿಯಾದ ಘಟನೆಗಳು ನಡೆದಿವೆ. ಅಲ್ಲಿನ ಅಧಿಕಾರಿಗಳು ತನಿಖೆಯ ನೆಪದಲ್ಲಿ ಕುಟುಂಬಗಳ ಮೇಲೆ, ಮಹಿಳೆಯರ ಮೇಲೆ ದೌರ್ಜನ್ಯ ಎಸೆಗಿದ್ದಾರೆಂದು ಲೇಖಕಿ ನಿರೂಪಿಸಿದ್ದಾರೆ. 'ಹಿಮದಗ್ನಿ' ಎಂಬ ಕೃತಿಯಲ್ಲಿ ಶಮಂತ ಅವರು ಕಾಶ್ಮೀರದ ಕಣಿವೆ ಭಾಗಗಳಲ್ಲಿ ಅಜ್ಜಿ, ಮಗಳು, ಮೊಮ್ಮಗಳು ಎಂಬ ಭೇದ ಭಾವವಿಲ್ಲದೆ, ಗಂಡ, ತಂದೆ, ತಮ್ಮ, ಅಣ್ಣ, ಮಕ್ಕಳೆದುರೇ ಅತ್ಯಾಚಾರಗಳು ನಡೆಯುವುದನ್ನು ಕೇಳಿಯೇ ಎದೆನಡುಗವುದೆಂದಿದ್ದಾರೆ. ಇಷ್ಟು ಸಾಲದೆಂಬಂತೆ ಈ ಮಹಿಳೆಯರನ್ನು ತಮ್ಮ ಗುಪ್ತಸ್ಥಳಗಳಿಗೆ ಎಳೆದೊಯ್ದು ಲೈಂಗಿಕ ವಸ್ತುಗಳಂತೆ ಬಳಸಿಕೊಂಡು ಹೊರಗಟ್ಟಿದ ಅನುಭವಗಳನ್ನು ಲೇಖಕಿ ಸಂದರ್ಶಿಸಿದ ಮಹಿಳೆಯರು ಹೇಳಿಕೊಂಡಿದ್ದಾರೆ. ಆದರೆ ಬಡ ಹೆಣ್ಣುಮಕ್ಕಳ ಪರಿಸ್ಥಿತಿ ಭಿನ್ನವಾಗದೇ ಹೊರಜಗತ್ತಿಗೆ ಗೊತ್ತಾಗದಂತೆ ಅವರ ನೋವುಗಳು ಕಣಿವೆಯೊಳಗೆ ಬೆಂದಿವೆ. ಕಾಶ್ಮೀರಿ ಹೆಣ್ಣುಮಕ್ಕಳ ಮೇಲೆ ನಡೆಯುವ ಅತ್ಯಾಚಾರಗಳು, ಅಬಾರ್ಷನ್‌ಗಳ ಸಮಸ್ಯೆಗಳಂತೂ

ಲೆಕ್ಕಕ್ಕಿಲ್ಲದೆ ಹೋಗಿರುವ ಅನೇಕ ಸಂಗತಿಗಳನ್ನು ಅಲ್ಲಿನ ಮಹಿಳಾ ಹೋರಾಟಗಾರರು ಪ್ರಸ್ತಾಪಿಸುತ್ತಾರೆ.

ಜರ್ಮನ್ನಿನ ಏಕೀಕರಣದ ಸಂದರ್ಭದಲ್ಲಿ 'ರಾವೆನ್ ಬುಕ್' ಎನ್ನುವ ಮಹಿಳಾ ಕೇಂದ್ರೀಕೃತ ಶಿಬಿರಗಳು ಕಂಡುಬಂದಿದ್ದವು. ಮಹಿಳೆಯರನ್ನು ಹೊತ್ತು ತಂದು ಶಿಬಿರಗಳಲ್ಲಿ ಕೂಡಿ ಹಾಕಲಾಗಿತ್ತು. ಇವರು ಯಾರೊಂದಿಗೂ ಮಾತನಾಡದಂತೆ ನಿಷೇಧ ಏರಲ್ಪಟ್ಟಿತ್ತು. ಜರ್ಮನ್ನಿನ ಮಹಿಳೆಯರೊಂದಿಗೆ ಬೆರೆಯುವಂತಿರಲಿಲ್ಲ. ಸೈನ್ಯದಲ್ಲಿ ಸೇರುವ ಅವಕಾಶವಿತ್ತು. ಆದರೆ ಪುರುಷ ಕಣ್ಗಾವಲಿನಲ್ಲಿರಬೇಕಿತ್ತು. ಕೆಲವು ಮಹಿಳೆಯರು ಸೈನ್ಯಕ್ಕೆ ಸೇರಿ ಆಯುಧಗಳನ್ನು ಬಳಸಲು ಇಚ್ಛೆಯಿಲ್ಲದವರು ಸ್ವೀಡನ್, ಅಮೇರಿಕಾ ದೇಶಗಳಿಗೆ ಪಲಾಯನ ಮಾಡಿ, ಊಟಕ್ಕೂ ಗತಿಯಿಲ್ಲದಂತಾಗಿ, ಜೀವನ ನಡೆಸಲು ಕಷ್ಟದಾಯಕವಾಗಿ ಜರ್ಮನ್‌ಗೆ ಮರಳಿ ಶಿಬಿರಗಳನ್ನು ಸೇರಿದರು. ಈ ಶಿಬಿರದ ಮಹಿಳೆಯರು ಜೀವನ ಪೂರ್ತಿ ಜನಸಂದಣಿ ನಡುವೆ ಏಕಾಂಗಿಯಾಗಿ ಬದುಕಿದರು. ಮಹಿಳೆಯನ್ನು ನಿಯಂತ್ರಣದಲ್ಲಿರಿಸಲು ಈ ಮಾರ್ಗವನ್ನು ಆಯ್ದುಕೊಂಡಿದ್ದರೆಂದು ಹೇಳಿದ್ದಾರೆ. ಆದರೆ ಮೂರು ಸಾವಿರ ಪುರುಷರಿಗೆ ಒಬ್ಬ ಮಹಿಳೆಯನ್ನು ಸಹಾಯಕ್ಕಾಗಿ ಹಿಡಲಾಗಿದ್ದು, ಆ ಮಹಿಳೆಯು ಹೊಲಿಗೆ ಕೆಲಸದ ಜೊತೆಗೆ, ಮನೆ ಕಟ್ಟುವ ಕೆಲಸದಲ್ಲೂ ಕೆಲಸ ಪಾಲ್ಗೊಳ್ಳಬೇಕಿತ್ತು. ವಿಪರೀತ ಕೆಲಸದ ಒತ್ತಡ, ಲೈಂಗಿಕ ದೌರ್ಜನ್ಯಗಳಿಂದಾಗಿ ಎಷ್ಟೋ ಮಹಿಳೆಯರು ಅಸುನೀಗಿದುದ್ದಾಗಿ ಅಲ್ಲಿನ ಚರಿತ್ರೆಯಲ್ಲಿ ದಾಖಲಾದ ಬಗ್ಗೆ ಲೇಖಕಿ ಹೇಳುತ್ತಾರೆ.

ಅರುಣಾಚಲ ಪ್ರದೇಶದಲ್ಲಿ ನಡೆಯುವ ಪುರುಷ ದೌರ್ಜನ್ಯಗಳನ್ನು ಕುರಿತು ಅಂಜಲಿ ರಾಮಣ್ಣ ಅವರು 'ಬೆಳಕಿನ ಸೆರಗು' ಎಂಬ ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. 'ಕೆಂಗ್‌ಚಾಮ್' ಎನ್ನುವ ನೃತ್ಯದಲ್ಲಿ ಇಬ್ಬರು ಬೆತ್ತಲೆ ಮನುಷ್ಯರು ಅಸ್ಥಿಪಂಜರದ ಮುಖವಾಡ ತೊಟ್ಟು ಕೆಡುಕಿನ ಮೇಲೆ ಒಳಿತಿನ ವಿಜಯವನ್ನು ಸಾರುವಂತಹ ಕಥೆಯನ್ನು ರೂಪಕವನ್ನಾಗಿಸುತ್ತಾರೆ. 'ಅರಮು' ನೃತ್ಯವು ಕದನವನ್ನು ತೋರಿಸುವ ಸೈನಿಕರ ನೃತ್ಯವಾಗಿದ್ದು, ಮಹಿಳೆಯರಿಗೆ ಅವಕಾಶವಿರುವುದಿಲ್ಲ. ಅಲ್ಲಿನ ಪಾರ್ಥಸಾರಥಿ ಎನ್ನುವ ಸ್ವಾಮೀಜಿಯನ್ನು ಸಂದರ್ಶಿಸಿದ ಲೇಖಕಿಗೆ ಮಹಿಳೆಯರ ಮೇಲೆ ಪುರುಷರು ನಡೆಸುವ ದೌರ್ಜನ್ಯಗಳು ಬಗ್ಗೆ ತಿಳಿದುಬರುತ್ತದೆ. ಇಲ್ಲಿನ ಪುರುಷರು ಹೆಚ್ಚು ಮಕ್ಕಳನ್ನು ಮಾಡಿಕೊಳ್ಳುವುದೆ ಪ್ರತಿಷ್ಠೆಯ ಸಂಕೇತವೆಂದು ಭಾವಿಸುತ್ತಾರೆ. ಬಸಿರಾಗಲು ನಿರಾಕರಿಸಿದ ಮಹಿಳೆಯರ ಮೇಲೆ ಮಾರಣಾಂತಿಕ ಹಲ್ಲೆಗಳನ್ನು ನಡೆಸಿದ್ದಾರೆ. ಕೌಟುಂಬಿಕ ದೌರ್ಜನ್ಯಗಳು ಸರ್ವೆಸಾಮಾನ್ಯವಾಗಿದ್ದು, ಮಹಿಳೆಯರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ಪುರುಷ ಪ್ರಾಬಲ್ಯವನ್ನು ಸಾರುವ ಇಲ್ಲಿನ ಆಚರಣೆಗಳು, ವಿಕೃತ ಹಿಂಸೆಗಳ ವಿರುದ್ಧ ಕಾನೂನಿನ ಮೆಟ್ಟಿಲು ಏರಿದರು 'ಬಚ್ಚಲು ಮನೆಯಲ್ಲಿ ಜಾರಿದ್ದು' ಎಂತಲೋ, 'ಅಡುಗೆ ಕೋಣೆಯಲ್ಲಿ ಜಾರಿದ್ದು' ಎಂತಲೋ ಮುಚ್ಚಿಡುವಂತೆ ಕೌಟುಂಬಿಕ ಒತ್ತಡಗಳಿರುತ್ತವೆ. ಇಲ್ಲಿನ ಗಂಡಸರ ಸ್ವಚ್ಛವಲ್ಲದ ಲೈಂಗಿಕ ಕ್ರಿಯೆಗಳಿಂದಾಗಿ ಅನೇಕ ಮಹಿಳೆಯರು

ಖಾಯಿಲೆಗಳಿಂದ ಬಳಲುತ್ತಿದ್ದಾರೆ. ಈ ಕುರಿತು ಖುದ್ದು ಭೇಟಿ ಮಾಡಿ ನೋಡಿದ ಲೇಖಕಿ ಇಲ್ಲಿನವರಿಗೆ ಸ್ವಚ್ಛತೆಯ ಅರಿವು ಮೂಡಿಸುವುದು ಸಾಹಸದ ಕೆಲಸ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಉತ್ತರ ಭಾರತದ ಹಲವು ರಾಜ್ಯಗಳ ಅನುಭವ ಕಥನವಾಗಿ ಇಂದಿರಾ ಹೆಗ್ಗಡೆ ಅವರ 'ಇಂದ್ರಪ್ರಸ್ಥದಿಂದ ಐತಿಹಾಸಿಕ ನಡೆ' ಕೃತಿಯು ಮುಖ್ಯವಾಗುತ್ತದೆ. ಆಹಮದಾಬಾದ್‌ನ ಗಾಂಧೀಜಿಯ ತತ್ವ ಸಿದ್ಧಾಂತಗಳ ಒಪ್ಪಿದ ಗಾಂಧಿವಾದಿಗಳು 'ಹೃದಯಕುಂಜ್' ಕಛೇರಿಯ ಒಳಮಂದಿರದ ಮನೆಯೊಳಗೆ ಓಡಾಡುವಾಗ ಕಸ್ತೂರಿ ಬಾ ಅವರನ್ನು ಲೇಖಕಿ ನೆನಪಿಸಿಕೊಳ್ಳುತ್ತಾರೆ. ಅಲ್ಲಿನ ಸಂಪ್ರದಾಯವಾದಿ ವಣಿಕ ಮಹಿಳೆಯರು ತಮ್ಮ ಗಂಡಂದಿರ ಆಜ್ಞೆಯಂತೆ ಹರಿಜನರ ಮನೆಗಳ ಪಾಯಿಖಾನೆಗಳನ್ನು ತೊಳೆಯುವ ಸಂದರ್ಭದಲ್ಲಿ ಅವರಿಗೆ ಆಗಿರಬಹುದಾದ ತೋಳಲಾಟಗಳನ್ನು ಊಹಿಸಿಕೊಳ್ಳುತ್ತಾರೆ. ಮಹಿಳೆಯರ ವೈಯಕ್ತಿಕವಾದ ಅಭಿಪ್ರಾಯವನ್ನು ಕೇಳದೆ ಗಾಂಧಿ ತತ್ವ ಸಿದ್ಧಾಂತಗಳ ಅಡಿಯಲ್ಲಿ ಪುರುಷ ಪ್ರಧಾನತೆಯನ್ನು ತೋರ್ಪಡಿಸಿ ಮಾನಸಿಕ ಹಿಂಸೆಯನ್ನು ನೀಡುವುದಾಗಿ ಮಹಿಳೆಯರು ತೊಡಿಕೊಳ್ಳುತ್ತಾರೆ. ಉತ್ತರ ಭಾರತದ ನಾಥ ಗುರುಪರಂಪರೆಯ ಮೀರಾಬಾಯಿ ನೆಲಸಿದ ವೃಂದಾವನದಲ್ಲಿ ಈಗಲೂ ವಿಧವೆಯರು ಆಶ್ರಯವನ್ನು ಪಡೆದಿದ್ದಾರೆ. ಆದರೆ ಕೆಲವು ಸಮುದಾಯಗಳಲ್ಲಿ ಗಂಡ ಸತ್ತ ವಿಧವೆಯರನ್ನು ಮೀರಾಬಾಯಿ ಮಂದಿರಕ್ಕೆ ಕಳಿಸುವ ವಾಡಿಕೆ ಇನ್ನೂ ಜೀವಂತವಿದೆ. ಈ ವಿಧವೆಯರಲ್ಲಿ ಎಲ್ಲಾ ವಯಸ್ಸಿನ ಮಹಿಳೆಯರಿದ್ದಾರೆ. ಅವರಲ್ಲಿ ಯೌವ್ವನದ ಮಹಿಳೆಯರು ವೇಶ್ಯಾವಾಟಿಕೆಗೆ ಇಳಿದರೆ. ಉಳಿದವರು ಭಿಕ್ಷಾಟನೆಗೆ ಇಳಿಯುತ್ತಾರೆ. ಮೀರಾಬಾಯಿ ಆಶ್ರಮದಲ್ಲಿದ್ದ ಸಕಾರಣ ಅರೆಯದ ಪುರುಷ ಸಮಾಜವು ಅದನ್ನೇ ಆಚರಣೆಯಾಗಿ ಮಾಡಿ ಲೈಂಗಿಕ ಶೋಷಣೆಗೆ ಮುಂದಾಗಿರುವುದು ಅಲ್ಲಿನ ಪಾರಂಪರಿಕ ಪುರುಷ ಸಮಾಜದ ಮೌಲ್ಯಗಳನ್ನು ಎತ್ತಿ ತೋರಿಸುತ್ತದೆ. ಮಹಿಳೆಗೆ ಗಂಡ ಸತ್ತನಂತರ ಜೀವನವೇ ಇಲ್ಲ ಎನ್ನುವವರಿದ್ದಾರೆ. ಇಲ್ಲಿನ ಅನೈತಿಕ ಮೌಲ್ಯಗಳು ಒಟ್ಟುಗೂಡಿ ದೈಹಿಕ ಹಿಂಸೆಗೆ ಇಳಿದುಬಿಟ್ಟಿವೆ. ಈ ಕುರಿತು ಇತ್ತೀಚಿನ ದಿನಗಳಲ್ಲಿ ಹೋರಾಟಗಳಲ್ಲಿ ತೊಡಗಿದ್ದಾರೆ.

ಉತ್ತರ ರಾಜ್ಯಗಳಲ್ಲಿ ಈಗಲೂ ಪುರುಷ ಪ್ರಾಧಾನ್ಯತೆಯಿದೆ. ಅವರ ಮೌಲ್ಯಗಳಿಗೆ ತಲೆಬಾಗುವ ಮಹಿಳೆಯ ಬದುಕಿನ ಘಟನೆಯೊಂದನ್ನು ಲೇಖಕಿ ಹೇಳಿದ್ದು ಹೀಗೆ, ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಮಾಡುವ ಸರಿತಾ ಮಾತೃಪ್ರಧಾನ ವ್ಯವಸ್ಥೆಯ ಆಧುನಿಕ ಹುಡುಗಿ. ರೈಲ್ವೆ ನಿಲ್ದಾಣದಲ್ಲಿ ಪತಿಯ ಪಕ್ಕ ಸರಿಸಮಾನವಾಗಿ ಕೂತಿರದೆ, ನೆಲದ ಮೇಲೆ ಕೂತಿದ್ದ ಮಹಿಳೆಯನ್ನು ಕಂಡು ಮೇಲಕ್ಕೆ ಕೂರಲು ತಿಳಿಸಿದಾಗ ಆಕೆ ನಿರಾಕರಿಸುತ್ತಾಳೆ. ನಮ್ಮಲ್ಲಿ ಪತಿಯ ಸರಿಸಮಾನವಾಗಿ ಕುಳಿತುಕೊಳ್ಳಬಾರದೆಂಬ ಮಾತು ಕೇಳಿ ಆಕೆ ಬೆಚ್ಚುತ್ತಾಳೆ. ನಿನ್ನ ಪತಿಯ ಪಕ್ಕದ ಆಸನದ ಮೇಲೆ ಕೂರುವಿರ ಎಂದು ಸರಿತಾರನ್ನೇ ಪ್ರಶ್ನಿಸುತ್ತಾಳೆ. ಸರಿತಾ ನಿಮಗೆ ಕೂರಲು ನಿನ್ನ ಹೆಸರಿಗೊಂದು ಆಸನ ಕಾದಿರಿಸಬೇಕಲ್ಲ? ಎಂದಾಗ ಹಳ್ಳಿಯ ಕಟ್ಟಾ

ಸಂಪ್ರದಾಯದ ಮಧ್ಯೆ ಬೆಳೆದ ಆಕೆಗೆ ಅರ್ಥವಾಗದೇ ಶುಷ್ಕವಾಗಿ ನಕ್ಕದನ್ನು ಪ್ರಸ್ತಾಪಿಸುತ್ತಾರೆ. ಈ ಘಟನೆಯ ಮೂಲಕ ಲೇಖಕಿಯೂ ಪುರುಷರಿಗೆ ಸರಿಸಾಮಾನವಾಗಿ ಬದುಕುವ ಮಹಿಳೆಯರು ಒಂದು ಕಡೆಯಾದರೆ, ಪುರುಷನ ಪಾದವೇ ಜೀವನ ಎಂದು ನಂಬಿ ಬದುಕುವ ಮಹಿಳೆಯರು ಇನ್ನೊಂದು ಕಡೆ ಇದ್ದಾರೆ ಎಂಬುದನ್ನು ಪ್ರತಿಪಾದಿಸುತ್ತಾರೆ. ಭೂಭಾಗದ ಉದ್ದಗಲಕ್ಕೂ ಒಂದೇ ತೆರನಾದ ಸಮಾನತೆ ಕಾಣಲಿಕ್ಕೆ ಸಾಧ್ಯವಿಲ್ಲದ ಜಗತ್ತಿನಲ್ಲಿ ಬದುಕುವ ಕುರಿತು ಲೇಖಕಿ ಇಂದಿರಾ ಹೆಗ್ಗಡೆ ಬೇಸರ ವ್ಯಕ್ತಪಡಿಸುತ್ತಾರೆ.

ಇಂದಿರಾ ಶಿವಣ್ಣ ಅವರ 'ಹಾಲೆಂಡಿನಿಂದ ಲಂಡನ್‌ವರೆಗೆ' ಕೃತಿಯಲ್ಲಿ ತಾವು ಪ್ರವಾಸ ಕೈಗೊಂಡ ದೇಶಗಳಲ್ಲಿರುವಂತಹ ಪುರುಷ ಪ್ರಧಾನ ಮೌಲ್ಯಗಳನ್ನು ಪ್ರಶ್ನಿಸುವ ಸಂಗತಿಗಳನ್ನು ದಾಖಲಿಸಿದ್ದಾರೆ. ಅವುಗಳಲ್ಲಿ ೧೯೪೪ ಆಗಸ್ಟ್ ೦೪ರಂದು ನಾಜಿಗಳ ಆಕ್ರಮಣಕ್ಕೆ ತುತ್ತಾದ ಕುಟುಂಬದ ಎಲ್ಲರೂ ಬಂಧಿಗಳಾಗಿ ಹೊರಬಿದ್ದರು. ಪೊಲೀಸರು ಚೆಲ್ಲಾಡಿದ ವಸ್ತುಗಳಲ್ಲಿ ಆನ್‌ಳ ದಿನಚರಿ ಮಾತ್ರ ಶಾಶ್ವತವಾಗಿ ಮನೆಯಲ್ಲಿತ್ತು. ಬಂಧಿತರನ್ನು ಗಂಡಸು ಹೆಂಗಸರನ್ನು ಬೇರೆಯಾಗಿಸಿ, ಗಟ್ಟಿಮುಟ್ಟಾದವರನ್ನು ಸ್ವಲ್ಪಕಾಲ ಬದುಕಲು ಬಿಡುತ್ತಿದ್ದರು. ಮುದುಕರನ್ನು, ಅಸಹಾಯಕರನ್ನು ಹದಿನೈದು ವರ್ಷದ ಕೆಳಗಿನ ಮಕ್ಕಳನ್ನು ಗ್ಯಾಸ್ ಛೇಂಬರ್‌ಗೆ ತಳ್ಳಿ ಸಾಯಿಸಲಾಗುತ್ತಿತ್ತು. ಇಲ್ಲಿನ ಅಸಂಖ್ಯಾತ ಹೆಂಗಸರನ್ನು ಜೈಲುಗಳಲ್ಲಿ ಕೂಡಿ ಹಾಕುತ್ತಿದ್ದರು. ನಾಜಿಗಳ ಕ್ರೂರತೆಗೆ ಬೆಂಕಿಯಲ್ಲಿ ಬಿದ್ದು ನರಳುತ್ತಾ ನೋವಿನ ಪರಾಕಾಷ್ಠೆಯಲ್ಲಿ ಪರಲೋಕಕ್ಕೆ ಸೇರಿದಳು. ಆ ಕುಟುಂಬವನ್ನ ಕೊನೆಗೂ ಬದುಕಿ ಉಳಿದ ಆಟೋಫ್ರಾಂಕ್ ಹೆಂಡತಿ ಮಕ್ಕಳನ್ನು ಅರಸಿ ಆ್ಯಮ್‌ಸ್ಟರ್ ಡ್ಯಾಂಗೆ ಬಂದಾಗ ಅವನಿಗೆ ಸಿಕ್ಕದ್ದು ಮಾತ್ರ ಆನ್‌ಳು ಬರೆದ ಡೈರಿ ಮಾತ್ರ, ಮಗಳ ಅನುಭವಿಸಿದ ನೋವಿನ ಎಳೆಗಳನ್ನು ಒಂದೊಂದಾಗಿ ಬಿಡಿಸುತ್ತಾ ತನ್ನ ನಡುಗುವ ಕೈಗಳಿಂದ ಅವಳ ದಿನಚರಿಯನ್ನು ಟೈಪ್ ಮಾಡಿ ೧೯೪೭ರಲ್ಲಿ 'the secrete annexe' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದನು. ಆನ್‌ಳ ಅನುಭವಿಸಿದ ಚಿತ್ರಹಿಂಸೆ. ನಾಜಿಗಳ ದಬ್ಬಾಳಿಕೆಗೆ ಆನ್‌ಳಂತೆ ಅನೇಕ ಮಹಿಳೆಯರು ನೋವನ್ನು ಅನುಭವಿಸಿದ್ದರು. ಅಂತಹ ಮಹಿಳೆಯರ ಪ್ರತಿನಿಧಿಯಾಗಿ ಆನ್‌ಳ ಡೈರಿ ಸಾಕ್ಷಿಪ್ರಜ್ಞೆಯಂತೆ ನಮ್ಮ ಕಣ್ಣ ಮುಂದೆ ನೋವನ್ನು ತೋಡಿಕೊಳ್ಳುವ ಕುರಿತು ಲೇಖಕಿ ಪ್ರಸ್ತಾಪಿಸುತ್ತಾರೆ.

ಚೀನಾದ ಸರ್ಕಾರವು ಟಿಬೇಟಿಯನ್ನರ ಕುಟುಂಬಗಳಲ್ಲಿ ಹತ್ತರ ವಯಸ್ಸಿನ ಮಕ್ಕಳನ್ನು ಬಲತ್ಕಾರದಿಂದ ಬೇರ್ಪಡಿಸಿ ಚೀನಿ ಮಕ್ಕಳ ಜೊತೆ ಬೆಳೆಯಲು ಏರ್ಪಾಡು ಮಾಡುತ್ತಿತ್ತು. ಸಾಂಸ್ಕೃತಿಕವಾಗಿ ಅವರನ್ನು ಪರಿವರ್ತಿಸಲು ಟಿಬೆಟಿಯನ್ ಮಹಿಳೆಯರಿಗೆ ಸಂತಾನ ಹರಣ ಚಿಕಿತ್ಸೆ ಮಾಡುತ್ತಿದ್ದರು. ಅವಿವಾಹಿತ ಟಿಬೆಟ್ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡಿ, ಅವರನ್ನು ಬೇರೆ ಯುವಕರು ಮದುವೆಯಾಗುವುದನ್ನು ತಪ್ಪಿಸುತ್ತಿದ್ದರು. ಸೈನಿಕರು ಬಾಲಕಿಯರನ್ನು ಬಿಡದೆ ತಮ್ಮ ಕಾಮ ಪಿಪಾಸೆಗೆ ಉಪಯೋಗಿಸಿಕೊಳ್ಳುತ್ತಿದ್ದರು. ಚೀನಿಯರಿಂದ ಸ್ವಾಯತ್ತ ಗಣರಾಜ್ಯವಾಗಿ ಟಿಬೆಟ್ ಅಸ್ತಿತ್ವ ಪಡೆದಾಗಲೂ ಅನೇಕ ವರ್ಷಗಳ ಕಾಲ ಚೀನಿಯರು ಎಲ್ಲಾ

ರಂಗಗಳಲ್ಲಿಯೂ ದೌರ್ಜನ್ಯವೆಸಗಿದರು. ಬೌದ್ಧ ಸನ್ಯಾಸಿಯರನ್ನು ಬಂಧಿಸಿ ಕ್ರೂರ ರೀತಿಯಲ್ಲಿ ಹಿಂಸಿಸಿದರು. ಮಹಿಳಾ ಸನ್ಯಾಸಿಯಾಗಿದ್ದರು ಚೀನಿ ಪುರುಷರು ವಿವಸ್ತ್ರಗೊಳಿಸಿ ಕಾದ ಕಬ್ಬಿಣಗಳಿಂದ ಸುಡುವುದು, ಮುಡಿ ಹಿಡಿದು ಕೀಳುವುದು, ಕಾದ ಕಬ್ಬಿಣದ ರಾಡ್‌ಗಳಿಂದ ಮೈಮೇಲೆ ಉರುಳಿಸುವುದು, ಹಸಿವಿನಿಂದ ಕಂಗೆಡಿಸುವುದು ಮಾಡುತ್ತಿದ್ದರು. ಮಣ್ಣಿನಲ್ಲಿ ಬಿಸಾಡಿದ ಅನ್ನವನ್ನು ತಿನ್ನುವಂತಹ ಮುಂತಾದ ಅಮಾನವೀಯ ಕೃತ್ಯಗಳನ್ನು ಕುರಿತು ಇಂದಿರಾ ಶಿವಣ್ಣ ಅವರು ತಮ್ಮ 'ನಿಗೂಢಗಳ ನಿಚ್ಚಣಿಕೆ ಏರಿ' ಕೃತಿಯಲ್ಲಿ ನಿರೂಪಿಸಿದ್ದಾರೆ.

ಪ್ರವಾಸ ಕಥನಗಳನ್ನು ಗಮನಿಸಿದಾಗ ಪುರುಷ ಪ್ರಾಧಾನ್ಯತೆಯು ಭಾರತಕ್ಕೆ ಸೀಮಿತವಾಗದೆ, ವಿಶ್ವದ ಅನೇಕ ದೇಶಗಳಲ್ಲೂ ಆಕ್ರಮಿಸಿಗೊಂಡಿದೆ. ಕೆಲವು ದೇಶಗಳಲ್ಲಿ ಸಮಾನತೆಯ ಹಕ್ಕನ್ನು ಮಹಿಳೆಯರು ಸಾಧಿಸಿದರಾದರೂ, ಸಂಪ್ರದಾಯಸ್ಥ ದೇಶಗಳಲ್ಲಿ ಬೂದಿ ಮುಚ್ಚಿದ ಕೆಂಡದಂತಿದೆ. ಪುರುಷ ಮೌಲ್ಯ-ಮಡಿವಂತಿಕೆಗಳ ವಿರುದ್ಧ ಮಹಿಳೆಯರು ಪ್ರಶ್ನಿಸುತ್ತಲೇ ಬಂದಿದ್ದಾರೆ. ಇದರಿಂದಾಗಿ ಬದಲಾವಣೆಯನ್ನು ಕಂಡಿದ್ದಾರೆ. ಆದರೆ ಚಳುವಳಿಗಳಿಂದಾಗಿಯೇ ಸಂಪೂರ್ಣವಾಗಿ ನಿರ್ನಾಮವಾಗುವುದಿಲ್ಲ. ಪುರುಷರೇ ತಮ್ಮ ನೈತಿಕತೆಯನ್ನು ಪ್ರಶ್ನಿಸಿಕೊಳ್ಳಬೇಕು ಆಗಾದಾಗ ಮಾತ್ರ ಸಮಾನತೆಯನ್ನು ಕಾಣಲಿಕ್ಕೆ ಸಾಧ್ಯವಾಗುತ್ತದೆ.

೭.೩. ಮಹಿಳಾ ಸಬಲೀಕರಣದ ತುಡಿತಗಳು

ಕನ್ನಡ ಮಹಿಳಾ ಪ್ರವಾಸ ಕಥನಗಳಲ್ಲಿ ಮಹಿಳಾ ಸಬಲೀಕರಣದ ಕುರಿತು ಸಾಕಷ್ಟು ಅಂಶಗಳು ವ್ಯಕ್ತವಾಗಿವೆ. ಪುರುಷ ಪ್ರಧಾನ ಸಮಾಜದಿಂದ ನಲುಗಿದ ಮಹಿಳೆಯರನ್ನು ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಂತೆ ಅನೇಕ ದೇಶಗಳಲ್ಲಿ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಈ ಕುರಿತು ಅನುಪಮಾ ನಿರಂಜನ ಅವರು 'ಸ್ನೇಹಯಾತ್ರೆ' ಪ್ರವಾಸ ಕಥನವು ಸ್ತ್ರೀ ಸಬಲೀಕರಣದ ಆಶಯವನ್ನು ಪ್ರಸ್ತಾಪಿಸುತ್ತಾರೆ. ಜರ್ಮನ್ ದೇಶದಲ್ಲಿ ಸಾಮಾಜಿಕ, ಕೌಟುಂಬಿಕ, ಸಾಂಸ್ಕೃತಿಕ ರಂಗಗಳಲ್ಲಿ ಮಹಿಳೆಯರ ಕ್ರಿಯಾಶೀಲತೆಯನ್ನು ಕಂಡ ಸರ್ಕಾರವು ಔದ್ಯೋಗಿಕ ಹಕ್ಕನ್ನು ನೀಡಿತು. ಅಲ್ಲದೇ ವಿವಿಧ ರಂಗಗಳಲ್ಲಿ ಸಾಕಷ್ಟು ಅವಕಾಶ ಲಭಿಸಿದವು. ಅನಂತರ ಸ್ತ್ರೀಯರು ಪುರುಷರ ಸರಿಸಮಾನವಾಗಿ ಕುಟುಂಬವನ್ನು ಪೋಷಿಸುವುದಕ್ಕೆ ಮುಂದಾದರು. ಇದಕ್ಕಾಗಿ ಜರ್ಮನ್ ದೇಶವು ಬಾಣಂತನದಲ್ಲಿ ಸಂಬಳ ಸಹಿತ ರಜೆ, ಮಗು ಹುಟ್ಟಿದಾಗಲು ಒಂದು ಸಾವಿರ ಮಾರ್ಕ್ ಹಣ. ಮೂರರಿಂದ ಆರು ವಯೋಮಿತಿಯ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ, ಪ್ರತಿ ಮಗುವಿನ ಊಟದ ವೆಚ್ಚಕ್ಕೆ ೧೭೦ ಮಾರ್ಕ್ ಹಣವನ್ನು ಭರಿಸುತ್ತದೆ. ಇದು ನಗರಗಳಲ್ಲಿ ಈ ಸೌಲಭ್ಯವಿದ್ದರೆ. ಹಳ್ಳಿಗಳಲ್ಲಿ ಕಾಲಿಕ ನರ್ಸರಿ(ಸಿಸನಲ್ ನರ್ಸರಿ)ಗಳೆಂಬ ತಾತ್ಕಲಿಕ ನರ್ಸರಿಗಳಿರುತ್ತವೆ. ಇವುಗಳು ತಾಯಿಂದರಿಗೆ ಹೊಲದಲ್ಲಿ ಕುಯಿಲು ಕೆಲಸ ಇರುವಾಗ ಮಾತ್ರ ಈ ನರ್ಸರಿಗಳು ಕೆಲಸಮಾಡುತ್ತವೆ. ದುಡಿಯುವ ತಾಯಿಂದಿರಿಗೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸುವುದು ಜರ್ಮನ್ ಸರ್ಕಾರದ ಪ್ರಮುಖ ಉದ್ದೇಶವಾಗಿವೆ. ಮಕ್ಕಳ ಹೋಟೆಲ್‌ಗಳು, ನರ್ಸರಿಗಳು, ಕ್ಯಾಂಪ್‌ಗಳು, ಕ್ರೀಡಾ

ಸಂಸ್ಥೆಗಳಿವೆ. ಪಯೋನಿರ್ಸ್ ಶಾಲಾ ಸಂಸ್ಥೆಯು ಮಕ್ಕಳಿಗೆ "ನಾವು ಶಾಂತಿಯಿಂದ ಪ್ರೀತಿಸುತ್ತೇವೆ ಮತ್ತು ರಕ್ಷಿಸುತ್ತೇವೆ. ನಾವು ಶಾಲೆಯಲ್ಲಿ ಶಿಸ್ತಿನಿಂದ ಉತ್ಸಾಹದಿಂದ ಅಭ್ಯಾಸ ಮಾಡುತ್ತೇವೆ. ಪ್ರಪಂಚದ ಎಲ್ಲಾ ಮಕ್ಕಳೊಡನೆ ನಾವು ಸೌಹಾರ್ದತೆಯಿಂದಿರುತ್ತೇವೆ" (ಅನುಪಮಾ ನಿರಂಜನ, ೧೯೯೭, ಪುಟ-೭೪) ಎಂಬ ಪ್ರತಿಜ್ಞಾ ವಿಧಿಯನ್ನು ಬೋಧಿಸುತ್ತದೆ. ಸೌಹಾರ್ದತೆಯ ಪ್ರತಿಜ್ಞಾವಿಧಿಯು ಮಕ್ಕಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಇಲ್ಲಿನ ಮಹಿಳೆಯರು ಉದ್ಯೋಗ ಹಾಗೂ ವ್ಯವಹಾರಗಳಲ್ಲಿ ತೊಡಗಿರುವುದರಿಂದ ಆರ್ಥಿಕವಾಗಿ ಪ್ರಬಲರಾಗಿದ್ದಾರೆ. ಆದರೆ ಕೌಟುಂಬಿಕ ಜೀವನದಲ್ಲಿ ಹೆಚ್ಚು ತೊಂದರೆ ಅನುಭವಿಸಿದಂತೆ ಕಂಡುಬರುತ್ತಾರೆ. ಈ ಕುರಿತು ಲೇಖಕಿ "ಯಶಸ್ವಿ ಮಹಿಳೆಯರು ಒಂಟಿಯಾಗಿರುತ್ತಾರೆ. ಇಲ್ಲವೇ ವಿಚ್ಛೇದಿತರಾಗಿರುತ್ತಾರೆ" (ಅದೇ, ಪುಟ-೧೩೯) ಎಂದಿದ್ದಾರೆ. ಕೌಟುಂಬಿಕ ಸಮಸ್ಯೆಗಳಿಂದ ಮುಕ್ತರಾದ ಮಹಿಳೆಯರ ತುಡಿತಗಳಿಗೆ ಸಬಲೀಕರಣ ತರುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಜರ್ಮನ್ ಸರ್ಕಾರವು ಜಾರಿಗೊಳಿಸಿದೆ. ಇಂತಹ ಯೋಜನೆಗಳು ಭಾರತದ ಮಹಿಳೆಯರಿಗೂ ಸಹಕಾರಿ ಎಂದು ಲೇಖಕಿ ಅಭಿಪ್ರಾಯಪಡುತ್ತಾರೆ.

ಕುಟುಂಬದಿಂದ ಬೇರ್ಪಟ್ಟ ಹಂಗೇರಿಯ ಮಹಿಳೆಯರಿಗೆ ಅಲ್ಲಿನ ಸರ್ಕಾರವು ಅನೇಕ ಯೋಜನೆಗಳನ್ನು ರೂಪಿಸಿದ ಬಗ್ಗೆ ಹೇಮಲತಾ.ಎಚ್.ಎಂ. ಅವರು 'ಹಂಗೇರಿಯಲ್ಲಿ ಹೇಮ' ಎಂಬ ಕೃತಿಯಲ್ಲಿ ದಾಖಲಿಸುತ್ತಾರೆ. ದಾಂಪತ್ಯ ಜೀವನದಿಂದ ಹೊರಬಂದ ಮಹಿಳೆಯರು ಸರ್ಕಾರದ 'ಶೆಲ್ಟರ್ ಹೋಮ್'ಗಳಲ್ಲಿ ೬ ರಿಂದ ೧೨ ತಿಂಗಳವರೆಗೆ ಆಶ್ರಯವನ್ನು ಪಡೆಯಬಹುದಾಗಿದೆ. ಬಹುತೇಕ ವಿಭಕ್ತ ಕುಟುಂಬಗಳಾದ್ದರಿಂದ ಸ್ವಾತಂತ್ರ್ಯ ಜೀವನ ಹರಿಸಿ ಹೋದವರಿಗೆ 'ಶೆಲ್ಟರ್ ಹೋಮ್'ಗಳು ಸಬಲೀಕರಣಗೊಳ್ಳುವಂತೆ ಮಾಡುತ್ತವೆ. ಭಾರತದಲ್ಲಿ ವೃದ್ಧಾಶ್ರಮಗಳು, ವರ್ಕಿಂಕ್ ವುಮೆನ್ಸ್ ಹಾಸ್ಟೆಲ್‌ಗಳಿದ್ದರು ಹಂಗೇರಿಯಂತೆ ನಿರಾಶ್ರಿತರಿಗೆ ಉಳಿದುಕೊಳ್ಳುವಂತಹ ಸ್ಥಳಗಳಾಗಿಲ್ಲ. ಈ ನಿಟ್ಟಿನಲ್ಲಿ ಹಂಗೇರಿ ಸರ್ಕಾರವು ಮಹಿಳೆಯರಿಗೆ ಮತ್ತೊಂದು ಜೀವನ ಕಲ್ಪಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಅಲ್ಲದೇ 'ಆಫೀಸ್ ಫಾರ್ ವಿಮೆನ್ಸ್ ಇಶ್ಯೂಸ್', 'ಮಿನಿಷ್ಟ್ರಿ ಆಫ್ ಸೋಷಿಯಲ್ ಎಂಡ್ ಪ್ಯಾಮಿಲಿ ಆಫೇರ್ಸ್', 'ದಿ ಕೌನ್ಸಿಲ್ ಆಫ್ ವುಮೆನ್ಸ್ ಇಶ್ಯೂಸ್', 'ಪಬ್ಲಿಕ್ ಹೆಲ್ತ್ ಸರ್ವಿಸ್', 'ಹೆಲ್ತ್ ಫಾರ್ ವುಮೆನ್ ಆಂಡ್ ಹೆಲ್ತ್ ಫಾರ್ ಪ್ಯಾಮಿಲೀಸ್' ಎನ್ನುವ ಸರ್ಕಾರಿ ಇಲಾಖೆಗಳು, ಭಾರತದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕುಟುಂಬ ಮತ್ತು ಕಲ್ಯಾಣ ಇಲಾಖೆಯ ಯೋಜನೆಗಳನ್ನು ಹೋಲುತ್ತವೆಂದು ಲೇಖಕಿ ಪ್ರಸ್ತಾಪಿಸುತ್ತಾರೆ. ಹಂಗೇರಿಯ ಕೌಟುಂಬಿಕ ಕಾಯಿದೆಯು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು ವಿವಾಹ, ಆಸ್ತಿ, ವಿಚ್ಛೇದನ, ಕುಟುಂಬದ ಅಡ್ಡಹೆಸರು, ಬಹುಪತ್ನಿತ್ವ, ಮಕ್ಕಳ ಮೇಲಿನ ಹಕ್ಕು, ಅವಿವಾಹಿತರ ಜೀವನ, ಒಂಟಿ ತಾಯಂದಿರು, ತಂದೆತನದ ನಿರ್ಣಯ, ಸಂತಾಹರಣ ಚಿಕಿತ್ಸೆಗೆ ಒಳಪಡುವುದು ಮುಂತಾದವುಗಳನ್ನು ತಿಳಿಸುತ್ತದೆ. ಹಂಗೇರಿ ಸಂವಿಧಾನವು ಭಾರತದ ಸಂವಿಧಾನದಂತೆ

ಮಹಿಳೆಯರಿಗೆ ಸಮಾನ ಆಸ್ತಿ ಹಾಗೂ ಉತ್ತರಾಧಿಕಾರ ಹಕ್ಕನ್ನು ನೀಡಿದೆ. ಸಾಮಾಜಿಕ ಸುರಕ್ಷಾ ಸೌಲಭ್ಯಗಳೆಂದರೆ ಕುಟುಂಬ ಭತ್ಯೆ, ಹೆರಿಗೆ ಭತ್ಯೆ, ಮಕ್ಕಳ ಪೋಷಣೆ ಭತ್ಯೆ, ಜನನ ಅನುದಾನ ಮತ್ತು ಶೋಷಿತ ಮಹಿಳೆಯರಿಗೆ ಪತ್ರಿಕೆ ಕೆಲಸ ಮತ್ತು ತರಬೇತಿಗಳನ್ನು ನೀಡುವುದು. ರಕ್ಷಣೆಯ ಹೊಣೆ, ಮುನ್ನೆಚ್ಚರಿಕೆಯ ಕ್ರಮಗಳು ಮುಂತಾದ ಕೆಲಸ ಕಾರ್ಯಗಳಲ್ಲಿ ತೊಡಗಿಸಿ ಮಹಿಳಾ ಸಬಲೀಕರಣಕ್ಕಾಗಿ ಹಂಗೇರಿ ಸರ್ಕಾರವು ಪ್ರಯತ್ನಿಸುವ ಕುರಿತು ಲೇಖಕಿ ನಿರೂಪಿಸುತ್ತಾರೆ.

ಪಾರ್ವತಮ್ಮ ಮಹಾಲಿಂಗಶೆಟ್ಟಿ ಅವರ 'ಅಮೇರಿಕಾದ ಇತಿಹಾಸ ಮತ್ತು ಜನಜೀವನ' ಕೃತಿಯಲ್ಲಿ ಮಹಿಳಾ ಸಬಲೀಕರಣದ ಅನೇಕ ಅಂಶಗಳಿವೆ. ಅಮೇರಿಕಾದಲ್ಲಿ ವಾಸವಾಗಿರುವ ಭಾರತೀಯ ಹೆಣ್ಣು ಮಕ್ಕಳು ಬಾಣಂತನಕ್ಕೆ ತಾಯಿ ಮನೆಗೆ ಬರದೆ, ಅಮೇರಿಕದಲ್ಲಿಯೇ ಉಳಿದುಕೊಳ್ಳುತ್ತಾರೆ. ಬಾಣಂತನಕ್ಕಾಗಿ ತಮ್ಮ ತಾಯಿಯವರನ್ನು ಕರೆಸಿಕೊಂಡು ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ಅಮೇರಿಕದಲ್ಲಿಯೇ ಮಗು ಜನಿಸಿದರೆ ಅಮೇರಿಕದ ಪೌರತ್ವ ಲಭಿಸುವ ಕಾರಣಕ್ಕಾಗಿ ಅಲ್ಲಿಯೇ ಹೆರಿಗೆ ಮಾಡಿಸಿಕೊಳ್ಳುತ್ತಾರೆ. ಈ ಕಾರಣಕ್ಕಾಗಿ ತವರು ದೇಶಕ್ಕೆ ಬಂದು ಹೆರಿಗೆ ಮಾಡಿಸಿಕೊಳ್ಳುವ ಉದ್ದೇಶವಿರುವುದಿಲ್ಲ. ಹೆರಿಗೆಯ ಕೆಲಸಗಳು ಸಹ ಭಾರತದಂತಹ ಕ್ಲಿಷ್ಟ ಕೆಲಸಗಳಾಗಿಯೂ ಇರುವುದಿಲ್ಲ. ಮಕ್ಕಳಿಗೆ ಸಿಗುವ ಸೌಲಭ್ಯದಿಂದಾಗಿ, ಮಹಿಳೆಯರ ಸಬಲೀಕರಣದ ಉದ್ದೇಶದಿಂದ ಅಲ್ಲಿನವರು ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಾರೆ.

ಪೆರು ದೇಶದ ಮಹಿಳಾ ಹೋರಾಟಗಾರರು ಶ್ರಮ, ಕಠಿಣ ಬದುಕಿನಿಂದಾಗಿ ಬಂದೂಕು ಹಿಡಿದು ಸಬಲೀಕರಣವಾಗುವ ಕಡೆ ಮುಖ ಮಾಡಿದ್ದ ಬಗ್ಗೆ ನೇಮಿಚಂದ್ರ ಅವರು 'ಪೆರುವಿನ ಪವಿತ್ರ ಕಣಿವೆಯಲ್ಲಿ' ಎಂಬ ಕೃತಿಯಲ್ಲಿ ನಿರೂಪಿಸುತ್ತಾರೆ. ಇಂತಹ ಮಹಿಳೆಯರ ಸಂಕಷ್ಟಗಳನ್ನು ಕುರಿತು ಮಹಿಳಾ ವಿಮೋಚನೆ, ಕ್ರಾಂತಿಕಾರಿ ಸಂಘಟನೆಯ ಪರ ಅನೇಕ ಮಹಿಳೆಯರ ಬೆಂಬಲ ದಕ್ಕುತ್ತದೆ. ಎಡಿಸ್ ಲಾಗೋಸ್‌ನ 'ಶೈನಿಂಗ್ ಪಾತ್'ಗೆ ಸೇರಿದ ೧೯ ವರ್ಷದ ಮಹಿಳೆ ಗೆರಿಲ್ಲಾ ಹೋರಾಟಗಾರ್ತಿಯಾಗಿದ್ದಳು. ಈ ಹೋರಾಟಗಳು ಪೆರುವಿನ ಮಹಿಳಾ ಸಬಲೀಕರಣಕ್ಕಾಗಿ ನಿರಂತರವಾಗಿ ನಡೆಯುತ್ತಿದ್ದವು. ಈ ಚಳುವಳಿಗಳಿಂದಾಗಿ ಇತ್ತೀಚೆಗೆ ರಾಜಕೀಯದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ ಎಂದು ಲೇಖಕಿ ಹೇಳುತ್ತಾರೆ. ದಕ್ಷಿಣ ಅಮೇರಿಕದಲ್ಲೂ ಈ ಸಂಖ್ಯೆ ಹೆಚ್ಚಳವಾಗುತ್ತದೆ. ಕಾಂಗ್ರೆಸ್‌ನಲ್ಲಿ ಮಹಿಳಾ ಪ್ರಾತಿನಿಧ್ಯ ಪ್ರಮಾಣ ಅರ್ಜೆಂಟೀನಿಯಾದಲ್ಲಿ ಹೆಚ್ಚಿದೆ. ಎರಡನೆಯದಾಗಿ ಕೋಸ್ಟಾರಿಕಾದಲ್ಲಿದೆ. ಮೂರನೇ ಸ್ಥಾನ ಪೆರುವಿನದು. ಈಗ ಶೇ.೨೯% ಲೆಜಿಸ್ಲೇಟಿವ್ ಕೌನ್ಸಿಲ್ ಸ್ಥಾನದಲ್ಲಿ ಮಹಿಳಾ ಅಭ್ಯರ್ಥಿಗಳಿದ್ದಾರೆ. ರಾಜಕೀಯದಲ್ಲಿ ೪೪% ಸ್ಥಾನದಲ್ಲಿ ಮಹಿಳೆಯರು ಕ್ರಿಯಾಶೀಲರಾಗಿದ್ದಾರೆ. ಸ್ಥಳೀಯ ಹಾಗೂ ಪ್ರಾಂತೀಯ ಸ್ಥಳಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ೧೨% ರಷ್ಟಿದೆ. ಮಹಿಳೆಯರ ಸಾಕ್ಷರತೆಯ ಪ್ರಮಾಣ ೮೪% ರಷ್ಟಿದ್ದರೆ, ಎರಡನೇ ಹಂತ (ಎಸ್.ಎಸ್.ಎಲ್.ಸಿ.) ಆದವರ ಪ್ರಮಾಣ ೪೭%. ಮಹಿಳಾ ಕಾರ್ಮಿಕರು ೬೭% ಇದ್ದಾರೆ. ದೇಶದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಸ್ವಲ್ಪ

ಕಡಿಮೆ ೪೯.೯% ಮಹಿಳೆಯರಿದ್ದಾರೆ. ೨೫% ಆಸ್ತಿಯ ಹಕ್ಕು ಮಹಿಳೆಯರಿಗಿದೆ. ಈ ಅಂಕಿ ಅಂಶಗಳು ಅಲ್ಲಿನ ಪುರುಷ ಪ್ರಾಧಾನ್ಯತೆಯಿಂದ ಮುಕ್ತಿ ಹೊಂದಿ ಮಹಿಳೆಯರು ಶೈಕ್ಷಣಿಕವಾಗಿ ಶಕ್ತರಾಗಿ ಮಹಿಳಾ ಸಬಲೀಕರಣಕ್ಕೆ ಸರ್ಕಾರಗಳು ಯತ್ನಿಸುತ್ತಿರುವುದು ಸ್ಪಷ್ಟವಾಗುತ್ತಿದೆ ಎಂದು ಲೇಖಕಿ ಅಂಕಿ ಸಂಖ್ಯೆಗಳ ಮೂಲಕ ದಾಖಲಿಸುತ್ತಾರೆ.

ಮಹಿಳೆಯೊಬ್ಬಳು ಆಧ್ಯಾತ್ಮಿಕ ರಂಗದಲ್ಲಿ ಸಾಧಿಸಿದ ವೈಖರಿಯನ್ನು ಉಮಾರಾವ್ ಅವರು 'ಇನ್ನು ಎಲ್ಲಿಗೋಟ' ಪ್ರವಾಸ ಕಥನದಲ್ಲಿ ನಿರೂಪಿಸಿದ್ದಾರೆ. ಬ್ರಿಟನ್ ಮೂಲದ ವಿದೇಶಿ ಮಹಿಳೆಯಾದ ಡಯಾನ ಪೆರ್ರಿ ಭಾರತಕ್ಕೆ ಬಂದು ಬೌದ್ಧ ಸನ್ಯಾಸಿನಿಯಾಗಿ 'ಶ್ರಮನೇರಿಕಾ' ದೀಕ್ಷೆ ಪಡೆದ ಮೊದಲ ವಿದೇಶಿ ಮಹಿಳೆಯಾಗಿದ್ದಾಳೆ. ಈ ದೀಕ್ಷೆಯು ಅತ್ಯಂತ ಕಠಿಣ ತಪಸ್ಸನ್ನು ಒಳಗೊಂಡಿರುತ್ತದೆ. ಭಿಕ್ಷುಣಿಯರ ಪರಂಪರೆ ಕ್ಷೀಣಿಸುತ್ತಿರುವ ಕಾಲದಲ್ಲಿ ಖಮ್ಟ್ರುಲ್ ರಿಂಪೋಚೆಯ ಆಶ್ರಮದಲ್ಲಿ ೧೦೦ ಪುರುಷ ಸನ್ಯಾಸಿಗಳ ನಡುವೆ ಬ್ರಿಟನ್ ಬೌದ್ಧ ಸನ್ಯಾಸಿನಿ ಒಬ್ಬಳೇ ಇದ್ದಳು. ಭಾರತದ ಆಧ್ಯಾತ್ಮ ಕ್ಷೇತ್ರದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶಗಳಿರಲಿಲ್ಲ. ಇದರಿಂದಾಗಿ ಡಯಾನ ಪೆರ್ರಿಗೂ ಅವಮಾನಗಳಾದವು. ಈ ಅವಮಾನಗಳಿಂದ ಹೊಸ ಅನುಭವಗಳನ್ನು ಪಡೆದರು. ಗಂಡಸರಿಗೆ ಸರಿಸಮಾನವಾದ ಜ್ಞಾನ ಪಡೆದಿದ್ದರೂ, ಹೆಣ್ಣೆಂಬ ಕಾರಣಕ್ಕಾಗಿ ಹೆಚ್ಚಿನ ಜ್ಞಾನವನ್ನು ನೀಡಲು ನಿರಾಕರಿಸಿದರು. ತನ್ನ ಶ್ರದ್ಧೆಯಿಂದ ಆಶ್ರಮ ಸೇರಿದರೂ, ಹಲವು ಮುಖ್ಯ ಆಧ್ಯಾತ್ಮಿಕ ಚಟುವಟಿಕೆಗಳಿಂದ ಹೊರಗಿಡಲಾಗಿತ್ತು. ಈ ಅನುಭವದಿಂದಾಗಿ ಆಕೆ ಹೊಸಜ್ಞಾನ ಲಭಿಸುವ ಕಡೆಗೆ ಮುಖ ಮಾಡಿದಳು. ಹಾಂಕಾಂಗ್ ಹೋಗಿ ಪೂರ್ಣ ಪ್ರಮಾಣದ ಭಿಕ್ಷುಣಿ ದೀಕ್ಷೆ ಪಡೆದಳು. ಆಧ್ಯಾತ್ಮಿಕ ಪರಿಪೂರ್ಣತೆ ಪಡೆದಳು. ೧೩.೨೦೦ ಅಡಿ ಎತ್ತರದ ಪ್ರದೇಶದಲ್ಲಿ ಒಂದು ನಿರ್ಜನ ಗುಹೆಯಲ್ಲಿ ಧ್ಯಾನಕ್ಕೆ ನಿರತಳಾದಳು. ಮೂರು ವರ್ಷ ಯಾವ ಬಾಹ್ಯ ಸಂಪರ್ಕವಿಲ್ಲದೆ ೧೨ವರ್ಷಗಳ ಕಾಲ ಕಳೆದಳು. ಡಯಾನ ಪೆರ್ರಿ ಅವರೇ ಹೇಳಿಕೊಂಡಂತೆ ನೂರು ಜನ ಪುರುಷ ಸನ್ಯಾಸಿಯರ ಜೊತೆ ಕಳೆದರು ಎಂದೂ ಲೈಂಗಿಕ ಶೋಷಣೆಯಾಗಲಿ ಆಗಲಿಲ್ಲ. ಜೊತೆಯಲ್ಲಿದ್ದವರೆಲ್ಲ ಒಳ್ಳೆಯವರಾಗಿದ್ದರು ಎಂದಿದ್ದಾರೆ. ಆದರೂ ಮಹಿಳೆಯ ಸಾಧನೆಯನ್ನು ನಿರ್ಲಕ್ಷಿಸಿದಾಗಿ ಹೇಳಿಕೊಂಡಿದ್ದಾಳೆ. ಆಕೆಯ ಅಧ್ಯಾತ್ಮ ಚೈತನ್ಯ ಕಂಡು ಅಲ್ಲಿನ ಸನ್ಯಾಸಿಯರು "ನೀನು ಮುಂದಿನ ಜನ್ಮದಲ್ಲಾದರೂ ಗಂಡಾಗಿ ಜನ್ಮ ತಾಳಿ ನಮ್ಮೆಲ್ಲರೊಡನೆ ಆಶ್ರಮದ ಚಟುವಟಿಕೆಗಳಲ್ಲಿ ಭಾಗವಹಿಸುವಂತಾಗಲಿ ಎಂದು ನಾವೆಲ್ಲ ದಿನಾ ನಿನಗಾಗಿ ಪ್ರಾರ್ಥಿಸುತ್ತೇವೆ"(ಉಮಾರಾವ್, ೨೦೧೫, ಪುಟ-೭೦) ಎಂದು ಹೇಳಿದ್ದರು. ಹೆಣ್ಣಾಗಿ ಜನ್ಮ ತಾಳಿದ್ದೆ ದೀಕ್ಷೆಗೆ ಸಮಸ್ಯೆಯಾದರೆ ಅವರು ನಂಬಿರುವ ತತ್ವಗಳ ಬಗ್ಗೆ ಪ್ರಶ್ನೆ ಮೂಡುತ್ತದೆ. ಗಂಡಿಗಿಂತ ಕೀಳಾಗಿ ಕಾಣುವ ಸಮಾಜದಲ್ಲಿ ಆಕೆ ಎಲ್ಲಾವನ್ನೂ ಮೀರಿ ಸಾಧಿಸಿದಳು. ವಿಷಾದವೆಂದರೆ ಪುರುಷ ಪ್ರಧ್ಯಾನತೆಯು ಆಧ್ಯಾತ್ಮಿಕತೆಯನ್ನು ಬಿಟ್ಟಿಲ್ಲ ಎನ್ನುವುದು. ಗೌತಮ ಬುದ್ಧ ಹೇಳಿದ್ದ ಹಾಗೆ ಮಹಿಳೆಯರು ಪೂರ್ಣ ಪ್ರಮಾಣದ ಭಿಕ್ಷುಣಿಯರಾಗಲೂ ಯಾವ ತಡೆಯಿಲ್ಲ ಎಂಬ ಹೇಳಿಕೆಯನ್ನು ಬಲವಾಗಿ ನಂಬಿಕೊಂಡು ಬುದ್ಧನ ಉದ್ದೇಶಗಳನ್ನು

ಸಾಕಾರಗೊಳಿಸಿದಳು. ಆ ಮೂಲಕ ಪುರುಷ ಪ್ರಧಾನವಾದ ಆಧ್ಯಾತ್ಮಿಕ ಲೋಕದಲ್ಲಿ ಹೆಸರು ಮಾಡಿ, ಆ ಬಗೆಗೆ ಇದ್ದ ಕೇಡನ್ನು ಈಕೆ ತೊಲಗಿಸಿದ್ದಳು. ಆಧುನಿಕ ಮಹಿಳೆಯರು ಆಧ್ಯಾತ್ಮಿಕ ನೆಲೆಯಲ್ಲಿ ಮಹಿಳೆಯರು ಸಬಲೀಕರಣಗೊಳ್ಳುವುದಕ್ಕೆ ಡಯಾನ ಪೆರ್ರಿ ಮಾದರಿಯಾಗಿದ್ದಾಳೆ.

ಅಂಡಮಾನ್ ಬುಡುಕಟ್ಟು ಸಮುದಾಯದ ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ ಜಾರ್ಜ್ ಟಾಂಗ್ ಬಳಿ ಪ್ರಾಥಮಿಕ ಶಾಲೆ ಆರಂಭಿಸಿದ್ದು ಜರವಾ ಜನಾಂಗದ ಭಯದಿಂದಾಗಿ ಅದನ್ನು ನಗರದಲ್ಲಿ ಕೊಡಲು ಅಲ್ಲಿನ ಆಡಳಿತ ಮಂಡಳಿ ಕೇಳಿದೆ, ಬುಡಕಟ್ಟು ಸಮುದಾಯಗಳಲ್ಲಿ ಶಿಕ್ಷಣದ ಅರಿವಿಲ್ಲದಿರುವುದು ಮಹಿಳೆಯರ ಹಿಂದುಳಿದಿರುವಿಕೆಗೆ ಕಾರಣವಾಗಿದೆ. ಪ್ರಯತ್ನ ಬಿಡದ ಅಲ್ಲಿನ ಸರ್ಕಾರವು ಜರವಾ ಸಮುದಾಯಕ್ಕೆ ಸೇರಿದ ಮಗುವನ್ನು ತೆಗೆದುಕೊಂಡು ನಗರಲ್ಲಿ ಶಿಕ್ಷಣ ಕೊಡುತ್ತಿದ್ದಾರೆ. ನಿಧಾನಕ್ಕೆ ಅಲ್ಲಿನ ಎನ್.ಜಿ.ಓ. ಸಂಸ್ಥೆಗಳ ನಿರಂತರ ಸಂಪರ್ಕದ ಫಲವಾಗಿ ಮಹಿಳಾ ಲೋಕದ ಆಚರಣೆಗಳು, ಔಷಧಿ, ಮದುವೆ, ಹಬ್ಬ ಮುಂತಾದ ಆಚರಣೆಗಳ ಬಗ್ಗೆ ಮಾಹಿತಿ ಲಭಿಸಿದೆ. ಅಲ್ಲದೇ ಶಿಕ್ಷಣದ ಕಡೆ ಒಲವು ಮೂಡಿಸಲು ಅಲ್ಲಿನ ಜರವಾ ಮಹಿಳೆಯರನ್ನು ಒಲೈಸುವ ಪ್ರಕ್ರಿಯೆ ನಡೆದಿದೆ. ಮಹಿಳೆಯರು ವಸ್ತ್ರಗಳನ್ನು ಬಳಸುವಂತೆ ಮಾಡಿದ್ದಾರೆ. ಇದಕ್ಕಾಗಿಯೇ ಶಾಲೆಯನ್ನು ತೆರೆದಿರುವುದಾಗಿ ಅಂಡಮಾನ್‌ಗೆ ಭೇಟಿ ಕೊಟ್ಟ ಎಚ್.ಎಸ್.ಅನುಪಮಾ ಅವರು 'ಅಂಡಮಾನ್ ಕಂಡ ಹಾಗೆ', ಮತ್ತು ಸುಮಂಗಲಾ ಎಸ್.ಮುಮ್ಮಿಗಟ್ಟಿ ಅವರು 'ಅದ್ಭುತ ಜೀವವಾಸ ಅಂಡಮಾನ್' ಎಂಬ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ.

ತೆಲಂಗಾಣ ರಾಜ್ಯ ಉದಯಿಸಿದಾಗ ಅನೇಕ ಸಮಸ್ಯೆಗಳ ಜೊತೆಗೆ ಮಹಿಳಾ ರಕ್ಷಣೆಯ ಸಮಸ್ಯೆಗಳ ಪ್ರಮುಖವಾಗಿದ್ದವೆಂದು ತೇಜಸ್ವಿನಿ ಜಿ.ಯಕ್ಕುಂಡಿಮಠ ಅವರು 'ತಿರೆಯ ಮೇಲಣ ಸ್ವರ್ಗ' ಕೃತಿಯಲ್ಲಿ ನಿರೂಪಿಸಿದ್ದಾರೆ. ತೆಲಂಗಾಣದಲ್ಲಿ ಮಹಿಳೆಯರಿಗೆ ಮಾರಕವಾಗಿದ್ದ ಅನೈತಿಕ ಚಟುವಟಿಕೆಗಳನ್ನು ನಿಯಂತ್ರಿಸುವ, ಪುರುಷ ದಬ್ಬಾಳಿಕೆಯನ್ನು ತಡೆಗಟ್ಟುವ ಸಲುವಾಗಿ ಐ.ಎ.ಎಸ್. ಅಧಿಕಾರಗಳ 'SHE' ತಂಡವೊಂದನ್ನು ರೂಪಿಸಲಾಗಿತ್ತು. ಸಾರ್ವಜನಿಕ ಪ್ರದೇಶಗಳಲ್ಲಿ ಮಹಿಳೆಯರನ್ನು ಚುಡಾಯಿಸುವ, ತೊಂದರೆ ಕೊಡುವವರ ಮೇಲೆ ನಿಯಂತ್ರಣ ಸಾಧಿಸುವ ತಂಡವಾಗಿತ್ತು. ಆರಂಭದಲ್ಲಿ ರಾಜಧಾನಿ ಹೈದರಾಬಾದ್ ನಗರಕ್ಕೆ ಸೀಮಿತವಾಗಿದ್ದ 'SHE' ತಂಡದ ಯಶಸ್ಸಿನಿಂದಾಗಿ ರಾಜ್ಯದ ಇತರೆ ಜಿಲ್ಲೆಗಳಿಗೂ ವ್ಯಾಪಿಸಿತು. ಪುರುಷ ದೌರ್ಜನ್ಯವನ್ನು ತಡೆಗಟ್ಟುವ ಸಲುವಾಗಿ ಮಹಿಳಾ ಸಬಲೀಕರಣಗೊಳಿಸುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಮಹಿಳೆಯರೇ ಈ ತಂಡವನ್ನು ಯಶಸ್ವಿಗೊಳಿಸಿ ಮುನ್ನೆಡೆಸುತ್ತಿರುವುದು ಈ ತಂಡದ ವಿಶೇಷತೆ ಎಂದು ಲೇಖಕಿ ದಾಖಲಿಸುತ್ತಾರೆ.

ಭೂತಾನ್‌ನ ಸಾಂಪ್ರದಾಯಿಕವಾದ ಸಮುದಾಯಗಳಲ್ಲಿ ಆಧುನಿಕ ಕಾಲಕ್ಕೂ ಮಹಿಳಾ ಪರವಾದಂತಹ ಹಕ್ಕುಗಳು ಮಹತ್ವವಾಗಿ ಕಂಡುಬರುತ್ತವೆಂದು, ಅಲ್ಲಿನ ಕುಟುಂಬಗಳು ಇಂದಿಗೂ ಮಾತೃ ಪ್ರಾಧಾನ್ಯತೆಯನ್ನು ಸಾರುತ್ತಿವೆಂದು ಉಮಾರಾವ್ ಅವರು 'ಇನ್ನೂ

ಎಲ್ಲಿಗೋಟ' ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಈ ಸಮುದಾಯಗಳ ಆಚರಣೆಗಳ ಕುರಿತು ಲೇಖಕಿ "ಸುಮಾರು ೨,೦೦,೦೦೦ ಜನರಿರುವ ಈ ದೇಶದಲ್ಲಿ ೭೫ ಜನ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಶೇಕಡಾ ೬೦ ಹೆಣ್ಣು ಮಕ್ಕಳು ಆಸ್ತಿಯ ಒಡೆತನ ಹೊಂದಿದ್ದಾರೆ. ಒಂದು ಕುಟುಂಬದಲ್ಲಿ ಮುಖ್ಯ ನಿರ್ಧಾರಗಳನ್ನು ಮನೆ ಒಡತಿಯೇ ತೆಗೆದುಕೊಳ್ಳುತ್ತಾಳೆ. ವಯಸ್ಸಾದ ತಂದೆ ತಾಯಿಯರನ್ನು ಮಗಳೇ ನೋಡಿಕೊಳ್ಳುತ್ತಾಳೆ. ಇಲ್ಲಿ ಮದುವೆಯಾದ ಕೂಡಲೇ ಹುಡುಗ ಹುಡುಗಿಯ ಮನೆಯಲ್ಲಿ ವಾಸಿಸಲು ಶುರು ಮಾಡುತ್ತಾನೆ. ಇಲ್ಲಿ ಲವ್ ಮ್ಯಾರೆಜ್, ಅರೆಂಜ್ಡ್ ಮ್ಯಾರೆಜ್ ಎರಡೂ ಆಗುತ್ತವೆ. ಎರಡಕ್ಕೂ ಆ ಸಮುದಾಯಗಳ ಸಮ್ಮತಿಯಿದೆ. ಮದುವೆ ಆಗದಯೇ ಗಂಡು ಹೆಣ್ಣು ಜೊತೆಗೆ ಬಾಳುತ್ತ ಮಕ್ಕಳನ್ನು ಪಡೆದರೂ ಸಮಾಜದಲ್ಲಿ ಯಾವ ಆಕ್ಷೇಪಣೆಯನ್ನು ಎತ್ತುವುದಿಲ್ಲ. ಆ ಮಕ್ಕಳಿಗೂ ಯಾವ ಹಣೆಪಟ್ಟಿ ಹಚ್ಚದೆ ಪ್ರೀತಿಯಿಂದ ಸ್ವೀಕರಿಸುತ್ತಾರೆ. ವಿವಾಹ ವಿಚ್ಛೇದನದ ಹಕ್ಕೂ ಗಂಡು, ಹೆಣ್ಣು ಇಬ್ಬರಿಗೂ ಸಮಸಮನಾಗಿದೆ." (ಉಮಾರಾವ್, ೨೦೧೫,ಪುಟ-೫೦) ಎಂದಿದ್ದಾರೆ. ಸಣ್ಣ ದೇಶವಾದ ಭೂತಾನ್ ಗಂಡು ಹೆಣ್ಣನ್ನು ಸಮಾನ ದೃಷ್ಟಿಯಿಂದ ನೋಡಿದೆ. ಅಂತರಜಾತಿ ವಿವಾಹಗಳಿಗೆ ಅಲ್ಲಿನ ಕುಟುಂಬಗಳ ಬೆಂಬಲವಿದೆ. ಇಲ್ಲಿನ ಮಹಿಳೆಯರಿಗೆ ಅಭಿವ್ಯಕ್ತಿಗಳಿಗೆ ಮುಕ್ತ ಅವಕಾಶವನ್ನು ನೀಡಿ ವಿಶೇಷ ಸ್ಥಾನಮಾನಗಳನ್ನು ನೀಡಿರುವುದಾಗಿ ಲೇಖಕಿ ದಾಖಲಿಸುತ್ತಾರೆ. ಉಮಾರಾವ್ ಅವರು 'ರಾಕೀ ಪರ್ವತಗಳ ನಡುವೆ ಕ್ಯಾಬರೆ' ಕೃತಿಯಲ್ಲಿ ಮಹಿಳೆಯರು ಸಬಲೀಕರಣಗೊಳ್ಳುತ್ತಿರುವ ಕೆಲವು ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ. ಅಲ್ಲಿನ ಮಹಿಳೆಯರ ಶೈಕ್ಷಣಿಕವಾಗಿಯೂ, ತಾಂತ್ರಿಕವಾಗಿ ಮುಂದೆ ಬರಲು ಕೆಲವು ಯೋಜನೆಗಳನ್ನು ಅಲ್ಲಿನ ಸರ್ಕಾರವು ಏಶಿಯನ್ ಸ್ಟಡಿಸ್ ಸೆಂಟರ್ ಮತ್ತು ವಿಮೆನ್ಸ್ ಸ್ಟಡಿಸ್ ಡಿಪಾರ್ಟ್‌ಮೆಂಟ್‌ನವರು ಸೇರಿ 'ಎಂಜೆಂಡರಿಂಗ್ ವಾಯಿಸ್' ಎಂಬ ಸೆಮಿನಾರನ್ನು ಕೆನಡಾದ ಬೇರೆ ಬೇರೆ ಕ್ಷೇತ್ರಗಳಲ್ಲಿ ಏರ್ಪಾಡಿಸುತ್ತಾರೆ. ಇಲ್ಲಿ ಸೌತ್ ಏಶಿಯಾದಲ್ಲಿ ಬಾಲ ವೇಶ್ಯೆಯರು ಹೆಚ್ಚುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾರೆ. ಈ ಕುರಿತು ಅಲ್ಲಿನ ವಿದ್ಯಾರ್ಥಿನಿಯರು ಪಿಎಚ್.ಡಿ. ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಕೆನಡಾದ ಮಕ್ಕಳಿಗೆ ಸಂಬಂಧಿಸಿದ ಕಠಿಣ ಕಾನೂನುಗಳನ್ನು ಕುರಿತು ಅಲ್ಲಿನ ವಿದ್ಯಾರ್ಥಿನಿಯು ಲೇಖಕಿಯೊಂದಿಗೆ ಪ್ರಸ್ತಾಪಿಸುವುದು ಹೀಗೆ "ನಮ್ಮ ದೇಶದಲ್ಲಿ ಮಕ್ಕಳಿಗೆ ಸ್ವಲ್ಪ ಹಿಂಸೆಯಾದರೂ ನಾವೆಷ್ಟು ಕಾಳಜಿ ವಹಿಸುತ್ತೇವೆ. ನಮ್ಮಲ್ಲಿ ಚೈಲ್ಡ್ ಅಬ್ಯೂಸ್ ಕಾನೂನುಗಳು ಎಷ್ಟು ಸ್ಟ್ರಿಕ್ಟ್ ಆಗಿವೆ." (ಉಮಾರಾವ್, ೨೦೦೨, ಪುಟ-೬) ಮಹಿಳೆಯರನ್ನು ಸಮಾಜಮುಖಿಯಾಗಿಸುವ ಸಲುವಾಗಿ ಅನೇಕ ಸೆಮಿನಾರ್‌ಗಳನ್ನು ಏರ್ಪಡಿಸುವ ಮೂಲಕ ಮಹಿಳಾ ಸಮಸ್ಯೆಗಳ ಅಧ್ಯಯನಕ್ಕೆ ತೊಡುಗುತ್ತಾರೆ. ಸಮಸ್ಯೆಗಳಿಗೆ ಪರಿಹಾರವಾಗಿ ಸಬಲೀಕರಣಗೊಳಿಸುವ ಯೋಜನೆಗಳನ್ನು ರೂಪಿಸಲಿಕ್ಕೆ ಸಾಧ್ಯವಾಗುತ್ತದೆ ಎಂದಿದ್ದಾರೆ.

ಅರೇಬಿಯಾದ ಮಹಿಳೆಯರು ಸಬಲೀಕರಣವಾಗುವ ಹಾದಿಗಳ ಬಗ್ಗೆ ಲತಾಗುತ್ತಿ

ಅವರು 'ನಾ ಕಂಡಂತೆ ಅರೇಬಿಯಾ' ಕೃತಿಯಲ್ಲಿ ಚರ್ಚಿಸಿದ್ದಾರೆ. ಇತರೆ ದೇಶಗಳಿಗೆ ಹೋಲಿಸಿದರೆ ಅರೇಬಿಯಾವು ಧಾರ್ಮಿಕತೆಗೆ ಒತ್ತುಕೊಟ್ಟ ಪುರುಷ ಪ್ರಧಾನವಾದ ನಾಡು. ಮಹಿಳಾ ಪರವಾದ ಹೋರಾಟಗಳು ಇತ್ತೀಚೆಗೆ ಶುರುವಾಗಿವೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಗುರುತಿಸಿಕೊಳ್ಳುವ ಕಡೆ ಹೆಜ್ಜೆ ಹಾಕುತ್ತಿದ್ದಾರೆ. ತೊಂಬತ್ತರ ದಶಕದಲ್ಲಿ ಕೆಲವೇ ವರ್ಷಗಳ ಹಿಂದಿನಿಂದ ಹುಡುಗಿಯರು ಶಾಲೆ ಕಾಲೇಜುಗಳಿಗೆ ಹೋಗುತ್ತಿದ್ದಾರೆ. ಯುವತಿಯರು ಪದವಿ ಪಡೆಯುವಂತಾಗಿದ್ದಾರೆ. ಉದ್ಯೋಗಗಳಿಗೂ ಅವಕಾಶ ನೀಡಿದ್ದಾರೆ. ಅಮೇರಿಕಾ, ಯುರೋಪ್ ದೇಶಗಳಲ್ಲಿ ಡಾಕ್ಟರ್, ಇಂಜನಿಯರ್ ಪದವಿ ತೆಗೆದುಕೊಂಡು ದೇಶಕ್ಕೆ ಮರಳಿದ್ದಾರೆ. ಅಸ್ಪತ್ರೆಗಳಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಲೇಖಕಿ ಅಲ್ಲಿನ ಅಸ್ಪತ್ರೆಗಳಿಗೆ ಭೇಟಿ ನೀಡಿದಾಗ ಮಹಿಳಾ ವೈದ್ಯರು ಧರಿಸುವ ವಸ್ತ್ರಗಳು ಸಾಂಪ್ರದಾಯಿಕವಾಗಿ ಕಂಡವು. ಮಹಿಳಾ ವೈದ್ಯರ ಬಗ್ಗೆ ಅಲ್ಲಿನ ಜನರು ವ್ಯಂಗ್ಯವಾಗಿ ಹಂಗಿಸುವುದನ್ನು ಕಂಡು ಲೇಖಕಿ ಬೇಸರ ವ್ಯಕ್ತಪಡಿಸುತ್ತಾರೆ. ಮಹಿಳೆಯರು ವಿಶ್ವದ ಗಮನ ಸೆಳೆಯುವ ಹೊತ್ತಿನಲ್ಲೂ ಅರೇಬಿಯಾವು ಸಾಂಸ್ಕೃತಿಕವಾಗಿ ತೀರಾ ಹಿಂದುಳಿದಿದ್ದ ಬಗ್ಗೆ ತಿಳಿಸುತ್ತಾರೆ. ಸಾಮಾಜಿಕ ರಂಗಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡುವ ಉದ್ದೇಶದಿಂದ ಅಲ್ಲಿನ ಸರ್ಕಾರವು ಅನೇಕ ಸೌಕರ್ಯಗಳನ್ನು ನೀಡಲು ಮುಂದಾಗಿದೆ. ಔದ್ಯೋಗಿಕವಾಗಿ ಬೆಳೆಯುವ ಮಹಿಳೆಯರಿಗೆ ಮತ್ತಷ್ಟು ಅವಕಾಶ ಗಿಟ್ಟಿಸುವ ಹಾಗೆ ಯೋಜನೆಗಳನ್ನು ಜಾರಿಗೊಳಿಸಿವೆ. ಈ ಹಿನ್ನೆಲೆಯಲ್ಲಿ ಮಹಿಳಾ ಬ್ಯಾಂಕ್‌ಗಳನ್ನು ಸ್ಥಾಪನೆಗೊಳಿಸಿವೆ. ಇಂತಹ ಬ್ಯಾಂಕ್‌ಗಳಲ್ಲಿ ಮಹಿಳಾ ಉದ್ಯೋಗಿಗಳೇ ಸೇವೆಸಲ್ಲಿಸುತ್ತಿರುವುದನ್ನು ಲೇಖಕಿ ಪ್ರಸ್ತಾಪಿಸುತ್ತಾರೆ.

ಇಂದಿರಾ ಶಿವಣ್ಣ ಅವರ 'ನಿಗೂಢಗಳ ನಿಚ್ಚಣಿಕೆ ಏರಿ' ಕೃತಿಯಲ್ಲಿ ಚೀನಾದ ಮಹಿಳೆಯರ ಸ್ಥಾನಮಾನಗಳಲ್ಲಿ ಗಣನೀಯ ಬದಲಾವಣೆ ಕಂಡು ಬಂದಿದ್ದು, ಚೀನಾದ ತತ್ವಜ್ಞಾನಿ ಕನ್‌ಫ್ಯೂಷಿಯಸ್ ಸ್ತ್ರೀಯರನ್ನು ಗಂಡು ಮಕ್ಕಳ ಕ್ಷೇಮದ ಹೊಣೆ ಹೊತ್ತವಳು ಎಂದು ಶತಮಾನಗಳ ಹಿಂದೆಯೇ ಹೇಳಿದ್ದರು. ಆಧುನಿಕ ಚೀನಾದ ಹರಿಕಾರನಾದ ಮಾವೋತ್ಸೆತುಂಗನು ಸ್ತ್ರೀಯರು ಪುರುಷನಿಗೆ ಸಮಾನ ಎಂದು ಘೋಷಿಸಿದ್ದನು. ತತ್ವಜ್ಞಾನಿಗಳ ಸಂದೇಶಗಳ ಕುರಿತು ಲೇಖಕಿ ಸ್ತ್ರೀಯರ ಪರ ಧ್ವನಿ ಎತ್ತಲು ಪೂರಕವಾಗಿದ್ದವು ಎನ್ನುತ್ತಾರೆ. 'ಹಾಲೆಂಡ್‌ನಿಂದ ಲಂಡನ್‌ವರೆಗೆ' ಎಂಬ ಲೇಖಕಿಯ ಇನ್ನೊಂದು ಕೃತಿಯಲ್ಲಿ ರಾಣಿ ಎಲಿಜಬೆತ್ ಆಳ್ವಿಕೆಯಲ್ಲಿ ಇಂಗ್ಲೆಂಡ್ ಆಂತರಿಕವಾಗಿ, ಬಾಹ್ಯವಾಗಿ ಸಿರಿವಂತ ಹಾಗೂ ಪ್ರಬಲ ರಾಷ್ಟ್ರವಾಯಿತೆಂದು ಹೇಳುತ್ತಾರೆ. ಚೀನಾದ ತತ್ವಜ್ಞಾನಿಗಳು ಮಹಿಳಾ ಸಬಲೀಕರಣಕ್ಕೆ ನಾಂದಿಯಾದ ಮಾತುಗಳನ್ನು ಆಡಿದ್ದಾರೆ. ಇಂಗ್ಲೆಂಡಿನ ರಾಣಿ ದೇಶವನ್ನೇ ಸಬಲೀಕರಣಗೊಳಿಸಿ ಇತಿಹಾಸ ಮೆರೆಯುತ್ತಾಳೆ. ಇಂದಿರಾ ಶಿವಣ್ಣ ಅವರು 'ಬದುಕಿಗೆ ಬಂಗಾರದ ಲೇಪನ' ಎಂಬ ಕೃತಿಯಲ್ಲಿ "ಪಾಶ್ಚಿಮಾತ್ಯ ಸಾಮಾಜಿಕ ಜೀವನ ನಮಗಿಂತ ಐವತ್ತು ಅರವತ್ತು ವರ್ಷಗಳ ಮುಂದಿದೆ. ಕಲಿಯುವ ಅವಕಾಶ ಹೆಣ್ಣು ಗಂಡು ಮಕ್ಕಳಿಗೆ ಸಮವಾಗಿದೆ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಇಲ್ಲ. ಹದಿನೈದು-ಹದಿನಾರರ ವಯಸ್ಸಿಗೆ ಮಕ್ಕಳು ಪ್ರೌಢರಾಗುತ್ತಾರೆ. ತಂದೆ ತಾಯಿಗಳಿಂದ ದೂರವಿದ್ದು

ಕಲಿಯುತ್ತಾರೆ. ಕಲಿಯುವ ಮನಸ್ಸಿರುವವರಿಗೆ ಸರ್ಕಾರದ ನೆರವು, ಸಾಲ ಸಿಗುತ್ತದೆ. ಇದರೊಂದಿಗೆ ಕೆಲಸ ಮಾಡಿಕೊಂಡೆ ವಿದ್ಯಾಭ್ಯಾಸ ಮುಂದುವರೆಸುತ್ತಾರೆ. ಇದರಲ್ಲಿ ಹುಡುಗ ಹುಡುಗಿಯರೆಂಬ ಭೇದವಿಲ್ಲ. ಅವರು ನಡೆಯುವ ಹಾದಿಯಲ್ಲಿ ಅವರದೆ ಗುರಿ. ಅವರದೆ ಕನಸು. ಅವರದೆ ಶ್ರಮ ಇರುತ್ತದೆ. ಹಾಗೆಂದು ಇಲ್ಲಿಯ ಹೆಣ್ಣುಗಳಿಗೆ ಸಮಸ್ಯೆಗಳೇ ಇಲ್ಲವೆಂದಲ್ಲ. ಹುಚ್ಚು ಕೋಡಿ ಮನಸ್ಸಿನ ಹರೆಯ ತರದ ಸಮಸ್ಯೆಗಳು ಇಲ್ಲಿಯ ಸಾಮಾಜಿಕ ಪಿಡುಗುಗಳಾಗಿವೆ."(ಇಂದಿರಾ ಶಿವಣ್ಣ, ೨೦೧೨, ಪುಟ-೧೧೧,೧೧೨) ಎಂದು ಅಭಿಪ್ರಾಯಪಡುತ್ತಾರೆ.

ಕ್ಯಾಲಿಪೋರ್ನಿಯಾದ ಸಾರ್ವಜನಿಕ ಹೈಸ್ಕೂಲ್‌ವೊಂದರಲ್ಲಿ ಕಾಂಡಮ್ಸ್ ಇರಿಸುತ್ತಾರೆ. ಈ ಪದ್ಧತಿಯು ಶಾಲೆಯ ಶಿಕ್ಷಕನೊಬ್ಬ ಏಡ್ಸ್ ರೋಗದಿಂದ ಸತ್ತ ಮೇಲೆ ಜಾರಿಗೆ ತಂದಿರುವ ಕುರಿತು ಪದ್ಮಾಶಣೈ ಅವರು 'ಅಮೇರಿಕಾ: ವಾಸ ಪ್ರವಾಸ' ಕೃತಿಯಲ್ಲಿ ವಿವರಿಸುತ್ತಾರೆ. ಇಲ್ಲಿನ ಶಾಲೆಗಳಲ್ಲಿ ಗ್ರೇಡ್ ನಾಲ್ಕರಿಂದಲೇ ಲೈಂಗಿಕ ಶಿಕ್ಷಣ ಆರಂಭವಾಗುತ್ತದೆ. ಹದಿನೈದು ಪ್ರಾಂತ್ಯಗಳಲ್ಲಿ ಶಾಲಾ ಕ್ಲಿನಿಕ್‌ಗಳಿವೆ. ಆರೋಗ್ಯ ತಪಾಸಣೆ, ಗರ್ಭ ನಿರೋಧಕಗಳ ಬಗ್ಗೆ ಮಾಹಿತಿ, ಕುಟುಂಬ ಯೋಜನೆಯ ಸಲಹೆ ಮುಂತಾದ ಕೇಂದ್ರಗಳನ್ನು ತೆರೆದಿದ್ದಾರೆ. ಹದಿಹರೆಯದ ಹುಡುಗಿಯರಿಗಾಗಿ ವಿದ್ಯಾಭ್ಯಾಸದ ಕಡೆ ಗಮನ ಹರಿಸುವಂತೆ, ನೌಕರಿ ತರಬೇತಿ ಕಾರ್ಯಕ್ರಮಗಳನ್ನು ನೀಡುವುದು, ಸಾಂಸ್ಕೃತಿಕವಾಗಿ ಮುನ್ನೆಲೆಗೆ ತರುವ ಕಾರ್ಯಗಾರಗಳು ನಡೆಯುತ್ತವೆ ಎಂದಿದ್ದಾರೆ. ಇಂತಹ ಕಾರ್ಯಕ್ರಮಗಳಿಂದಾಗಿ ಅಮೇರಿಕಾದ ಹೆಣ್ಣು ಮಕ್ಕಳಲ್ಲಿ ಜಾಗೃತಿಯುಂಟಾಗಿ ಗರ್ಭಧರಿಸುವುದು ಇಳಿಮುಖವಾಗುತ್ತಿದೆ. ಸಣ್ಣವಯಸ್ಸಿನಲ್ಲಿ ಗರ್ಭಧರಿಸುವುದರಿಂದ ಅನಾರೋಗ್ಯ, ಅಂಗವಿಕಲ ಮಕ್ಕಳು ಹುಟ್ಟುವುದು ಕಡಿಮೆಯಾಗಿದೆಯಂತೆ. ಈ ಹಿನ್ನೆಲೆಯಲ್ಲಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುವ ಕುರಿತು ಅಲ್ಲಿನ ಸರ್ಕಾರವು ಮಹತ್ವದ ಯೋಜನೆಗಳನ್ನು ಜಾರಿಗೆ ತಂದಿವೆ. ಅಲ್ಲದೇ ಹೋಮ್ ಶೆಲ್ಟರ್‌ಗಳಿಗೆ ಹೆಚ್ಚಿನ ಸಹಾಯ ನೀಡುತ್ತಿದ್ದಾರೆ. ಹಿಂಸಿಸಲ್ಪಡುವ ಸ್ತ್ರೀಯರಿಗೆ ರಕ್ಷಣೆ ದೊರೆಯುತ್ತದೆ. ಯಾವ ವಿಳಂಬವಿಲ್ಲದೇ ಕಾನೂನಿನ ಕ್ರಮಕೈಗೊಳ್ಳುತ್ತಾರೆ. ಪೊಲೀಸ್, ನ್ಯಾಯದೀಶರಿಂದ ಮಹಿಳೆಯರ ದೌರ್ಜನ್ಯದ ತಡೆಗೆ ತರಬೇತಿ ನೀಡುತ್ತಾರೆ. ಮಹಿಳೆಯರ ಶೆಲ್ಟರ್‌ಗಳಿಗೆ ಅಮೇರಿಕಾ ಸರ್ಕಾರ ಮಿಲಿಯನ್‌ಗಟ್ಟಲೇ ಹಣ ಸುರಿಯುತ್ತಿದೆ. ಅಲ್ಲಿನ ಸೆನೆಟ್ ಜ್ಯೂಡಿಷಿಯರಿ ಕಮಿಟಿ ಸರ್ವೆ ಪ್ರಕಾರ ಪ್ರತಿವರ್ಷ ಒಂದು ಮಿಲಿಯನ್ ಹಣವನ್ನು ಮಹಿಳಾ ದೌರ್ಜನ್ಯಗಳ ತಡೆಗಟ್ಟುವುದಕ್ಕೆ ಖರ್ಚು ಮಾಡುತ್ತವೆ.

ತೇಜಸ್ವಿನಿ ಬಿ.ಯಕ್ಕುಂಡಿಮಠ ಅವರು 'ತಿರೆಯ ಮೇಲಣ ಸ್ವರ್ಗ' ಎಂಬ ಕೃತಿಯಲ್ಲಿ ತೆಲಂಗಾಣದ ನೈಟ್ ಬಜಾರ್‌ನಲ್ಲಿ ಮಹಿಳೆಯೊಬ್ಬಳು ರಾತ್ರಿ ಹನ್ನೊಂದರ ವೇಳೆಯಲ್ಲಿ ಕೆಲಸ ಮಾಡುತ್ತಿದ್ದಳು. ಆಕೆಯ ಕೆಲಸದ ಮೇಲಿನ ನಿಷ್ಠೆಯನ್ನು ಕಂಡ ಲೇಖಕಿ ಸಂದರ್ಶಿಸಿಗಾಗ ಆ ಮಹಿಳೆಯು ಉಮಾ ಎಂಪೋರಿಯಂನ ಸಂಸ್ಥಾಪಕಿಯಾಗಿದ್ದಳು. ಹತ್ತನೇ ತರಗತಿ ಅನುತೀರ್ಣರಾಗಿ, ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿ ಒಂದು ಯಶಸ್ವಿ ಉದ್ಯಮವನ್ನು ಕಟ್ಟಿದ್ದ ಕೀರ್ತಿ ಉಮಾ ಅವರಿಗೆ ಸಲ್ಲುತ್ತದೆ. ಇವರು ಮಹಿಳಾ ಸಬಲೀಕರಣದ ಯಶಸ್ಸಿಗಾಗಿ

ಪ್ರಯತ್ನಸುವವರಿಗೆ ಮಾದರಿಯಾಗಿ ನಿಲ್ಲುತ್ತಾರೆ. ತೆಲಂಗಾಣದಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ವಿಶೇಷ ಯೋಜನೆಗಳನ್ನು ಜಾರಿಗೆ ತಂದಿದೆ. 'ಆರೋಗ್ಯ ಲಕ್ಷ್ಮಿ' ಗರ್ಭಿಣಿ ಮಹಿಳೆಯರಿಗೆ, ಹಾಲುಣಿಸುವ ತಾಯಂದಿರರಿಗೆ, ಅಂಗನವಾಡಿ ಕೇಂದ್ರಗಳ ಮೂಲಕ ಒಂದು ಹೊತ್ತು ಪೌಷ್ಠಿಕ ಆಹಾರವನ್ನು ಒದಗಿಸುವ ಯೋಜನೆಯಾಗಿದೆ. ಮಗುವಿನ ತಾಯಿಗೆ, ಮಗುವಿಗೆ ತಿಂಗಳಿಗೆ ೨೫ದಿನ ೨೦೦ಮಿ.ಲಿ. ಹಾಲು ಹಾಗೂ ಪ್ರತಿದಿನ ಒಂದು ಮೊಟ್ಟೆ ನೀಡಲಾಗುತ್ತದೆ. ೭ನೇ ತಿಂಗಳಿಂದ ೩ವರ್ಷದೊಳಗಿನ ಮಕ್ಕಳಿಗೆ ೧೬ ಮೊಟ್ಟೆಗಳು ಹಾಗೂ ೨.೫ಕೆ.ಜಿ. ಊಟದ ಪ್ಯಾಕೆಟ್‌ನ್ನು ನೀಡಲಾಗುತ್ತದೆ. ಆರು ವರ್ಷದೊಳಗಿನ ಮಕ್ಕಳಿಗೆ ದಿನಕ್ಕೊಂದು ಮೊಟ್ಟೆ ಹಾಗೂ ಊಟ ಪೂರೈಸಲಾಗುತ್ತದೆ. ಇಷ್ಟೇ ಅಲ್ಲದೇ 'ಗ್ರಾಮಜ್ಯೋತಿ' ಎನ್ನುವ ಕಾರ್ಯಕ್ರಮವನ್ನು 'ಗಂಗದೇವಿ ಪಲ್ಲಿ' ಎನ್ನುವ ಗ್ರಾಮದಲ್ಲಿ ಜಾರಿಗೊಳಿಸಿದರು. ಈ ಹಳ್ಳಿಯ ೧೯೯೫-೨೦೦೬ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಯಾದ ಪಂಚಾಯತ್ ಆಡಳಿತವು ಸಂಪೂರ್ಣ ಮಹಿಳಾಮಯವಾದುದು ವಿಶೇಷತೆಯಾಗಿದೆ ಎಂದು ಲೇಖಕಿ ದಾಖಲಿಸುತ್ತಾರೆ. ೨೦೦೭ರಲ್ಲಿ ಗಂಗದೇವಿಪಲ್ಲಿ ಕೇಂದ್ರ ಸರ್ಕಾರ ಭಾರತದ ಅತ್ಯುತ್ತಮ ಪಂಚಾಯಿತಿಗಾಗಿ ಕೊಡಮಾಡುವ 'ನಿರ್ಮಲ ಗ್ರಾಮ ಪುರಸ್ಕಾರ'ಕ್ಕೂ ಭಾಜನವಾಗಿತ್ತು. ರಾಜ್ಯವೊಂದರಲ್ಲಿ ಮಹಿಳೆಯರ ಏಳಿಗೆಯನ್ನು ಗುರಿಯಾಗಿಸಿ ತಂದ ಯೋಜನೆ ಇದಾಗಿದೆ. ಈ ಮೂಲಕ ಮಹಿಳೆಯರ ಕೈಗೆ ಅಧಿಕಾರವನ್ನು ನೀಡುವುದರಿಂದ ಮಹಿಳಾ ಸಬಲೀಕರಣಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ.

ಅರುಣಾಚಲ ಪ್ರದೇಶದ ಅನುಭವ ಕಥನವಾದ ಅಂಜಲಿ ರಾಮಣ್ಣ ಅವರ 'ಬೆಳಕಿನ ಸೆರಗು' ಕೃತಿಯಲ್ಲಿ ಪಾಶ್ಚಾತ್ಯ ಸಂಗೀತಗಾರರ ಬ್ಯಾಂಡ್‌ಗಳು ಹೆಚ್ಚುತ್ತಿರುವ ಬಗ್ಗೆ ಹೇಳುತ್ತಾರೆ. ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತಿ ಇರುವ ಯುವಕರು ಪುಸ್ತಕ ಪ್ರಕಟಿಸುತ್ತಿದ್ದಾರೆ. ಯುವತಿಯರು ಸೌಂದರ್ಯ ಸ್ಪರ್ಧೆಗಳಲ್ಲಿ ಒಗ್ಗಿಸಿಕೊಳ್ಳುತ್ತಿದ್ದಾರೆ. ವಾಂಟೋ ಬುಡಕಟ್ಟಿಗೆ ಸೇರಿದ 'ರುನುಬೊಂಹಂ' ಎನ್ನುವ ಯುವತಿಯು ೨೦೧೫ರ ಸಾಲಿನ ಮಿಸ್.ಅರುಣಾಚಲ ಪ್ರದೇಶ ಆಗಿ ಆಯ್ಕೆಯಾಗಿದ್ದರು. ಇಲ್ಲಿನ ಹೆಣ್ಣುಮಕ್ಕಳ ಅಕ್ಷರ ಜ್ಞಾನ ಗಂಡಸರಿಗಿಂತ ಹೆಚ್ಚಿದ್ದು. ಅಧ್ಯಾಪಕ ವೃತ್ತಿಯನ್ನೇ ಹೆಚ್ಚು ಮಹಿಳೆಯರು ಆಯ್ದುಕೊಳ್ಳುತ್ತಿದ್ದಾರೆ. ಇಡೀ ರಾಜ್ಯದಲ್ಲಿ ೩೦೦ ಮಹಿಳಾ ಪೋಲೀಸರಿದ್ದಾರೆಂದು, ಕ್ರಿಮಿನಲ್ ಅಪರಾಧ ನಡೆಯುತ್ತಲೇ ಇರಲಿಲ್ಲ ಎನ್ನುತ್ತಾರೆ. ಜೊತೆಗೆ ಇಲ್ಲಿನ ಹೆಂಗಸರು ಬಹಳ ಆತ್ಮವಿಶ್ವಾಸ ಉಳ್ಳವರು ಮತ್ತು ಆರ್ಥಿಕವಾಗಿ ಸಮರ್ಥವಾಗಿದ್ದಾರೆ. ಅರುಣಾಚಲ ಪ್ರದೇಶದ ಮಹಿಳೆಯರು ಶಿಕ್ಷಣದ ಮಹತ್ವ ಅರಿತು, ಅದರಿಂದಲೇ ಸಬಲೀಕರಣವಾಗುತ್ತಿರುವುದನ್ನು ಲೇಖಕಿ ಹೇಳುತ್ತಾರೆ.

ಕನ್ನಡ ಪ್ರವಾಸ ಕಥನಗಳಲ್ಲಿ ಆಧುನಿಕ ಮಹಿಳಾ ಪ್ರಜ್ಞೆಯ ಅಭಿವ್ಯಕ್ತಿಯು ವಿಭಿನ್ನ ಆಯಾಮಗಳಲ್ಲಿ ನಿರೂಪಿತಗೊಂಡಿದೆ. ಸ್ತ್ರೀವಾದಿ ದೃಷ್ಟಿಧೋರಣೆಗಳು ಎಲ್ಲ ಕಡೆ ಹರಡಿಕೊಂಡ ಕಾರಣ ಪಾರಂಪರಿಕ ಪುರುಷ ಅಧಿಕಾರದಿಂದ ಹೊರಬಂದು ಸ್ವತಂತ್ರರಾಗುತ್ತಿದ್ದಾರೆ. ಕುಟುಂಬ ಜವಾಬ್ದಾರಿಗೆ ಸೀಮಿತವಾಗಿದ್ದ ಮಹಿಳೆಯರು ತಮ್ಮ ಶಕ್ತಿಯನ್ನು ಅರಿತು ಜಾಗತೀಕವಾಗಿ

ಗುರುತಿಸಿಕೊಳ್ಳುತ್ತಿದ್ದಾಳೆ. ಕಲೆ, ನಾಟಕ, ಸಿನೆಮಾ, ಕ್ರೀಡೆ, ಆಧ್ಯಾತ್ಮ, ಸರ್ಕಾರಿ ಅಥವಾ ಖಾಸಗಿ ಉದ್ಯೋಗ, ವೈದ್ಯೆ, ಇಂಜಿನಿಯರ್ ಹುದ್ದೆಗಳಲ್ಲದೇ ರಾಜಕೀಯ, ಕಾರ್ಪೋರೇಟ್ ಕ್ಷೇತ್ರಗಳಲ್ಲಿಯೂ ತಮ್ಮ ಕ್ರಿಯಾಶೀಲತೆಯನ್ನು ಸಾರುತ್ತಿದ್ದಾರೆ. ಈ ಮೂಲಕ ಮಹಿಳಾ ಆಧುನಿಕ ಪ್ರಜ್ಞೆಯ ಅಭಿವ್ಯಕ್ತಿ ಜಗತ್ತಿಗೆ ಹೊಸ ಬೆಳಕು ನೀಡಬಲ್ಲದೆಂದು ಕನ್ನಡದ ಅನೇಕ ಮಹಿಳಾ ಪ್ರವಾಸಿಗರು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ.

❑❑❑

ಅಧ್ಯಾಯ ಎಂಟು

ಪ್ರವಾಸ ಕಥನಗಳ ಭಾಷೆ ಮತ್ತು ಕಥನ ಶೈಲಿಯಲ್ಲಿ ಮಹಿಳಾ ಅನನ್ಯತೆಯ ಚಹರೆಗಳು

ಅಧ್ಯಾಯ ಎಂಟು

ಪ್ರವಾಸ ಕಥನಗಳ ಭಾಷೆ ಮತ್ತು ಕಥನ ಶೈಲಿಯಲ್ಲಿ ಮಹಿಳಾ ಅನನ್ಯತೆಯ ಚಹರೆಗಳು

ಕನ್ನಡ ಪ್ರವಾಸ ಕಥನಗಳಲ್ಲಿ ಬಳಕೆಯಾಗುವ ಭಾಷೆ ಮತ್ತು ಕಥನ ಶೈಲಿಗಳು ಮಹತ್ವವಾಗುತ್ತವೆ. ಕೃತಿಯೊಂದನ್ನು ಅರ್ಥೈಸಿಕೊಳ್ಳಲು ಹಾಗೂ ಪ್ರವಾಸಿಗರ ಅನುಭವಗಳನ್ನು ಹಂಚಿಕೊಳ್ಳಲು ಇರುವ ಎರಡು ಪ್ರಧಾನ ಅಂಶಗಳಾಗಿ ಭಾಷೆ ಮತ್ತು ಕಥನಕ್ರಮಗಳು ಪ್ರಮುಖ ಪಾತ್ರವಹಿಸುತ್ತವೆ. ಭಾಷೆ ಮನುಷ್ಯರ ಸಂಪರ್ಕ ಅಥವಾ ಅಭಿವ್ಯಕ್ತಿಗೆ ಪೂರಕವಾದರೆ, ಕಥನಶೈಲಿ ಕೃತಿಯ ರಚನೆಗೆ ಮುಖ್ಯವಾಗುತ್ತದೆ. ಭಾಷೆ ಮತ್ತು ಕಥನಕ್ರಮವು ಅತ್ಯಂತ ಮುಖ್ಯವೆನಿಸುತ್ತದೆ. ಕಥನ ಶೈಲಿಯ ಅಭಿವ್ಯಕ್ತಿಯ ಸಂವಹನಕ್ಕೆ 'ನಿರೂಪಣೆ', 'ನಿರೂಪಣಾ ಶೈಲಿ ಅಥವಾ ವಿಧಾನ', 'ಕಥೆಯನ್ನು ಹೇಳುವ ತಂತ್ರಗಾರಿಕೆ' ಎಂತಲೂ ಕರೆಯಲಾಗಿದೆ. ಕಥನಶೈಲಿಯಲ್ಲಿ ತಾವು ನೋಡಿದ, ಅನುಭವಕ್ಕೆ ಬಂದ ಸಂಗತಿಗಳನ್ನು ಹೇಳುವ, ಕಾಣಿಸುವ, ಕತೆಯನ್ನು ಮುನ್ನೆಡೆಸುವ ವಿಧಾನವೇ ಕಥನಕ್ರಮವೆನಿಸುತ್ತದೆ. ಲೇಖಕರು ತಾವು ಕಾಣಿಸುವ, ತೋರಿಸುವ ಈ ಕ್ರಮದಲ್ಲಿ ಒಂದು ಘಟನೆಯನ್ನು ಅಥವಾ ಸನ್ನಿವೇಶವನ್ನು ಕಲಾತ್ಮಕವಾಗಿ ಕಾಣಿಸುವ ಭಾಷೆಯ ಮೂಲಕ ಕಟ್ಟಿಕೊಡುವ ಕ್ರಮದಲ್ಲಿ ಅಲ್ಲಿನ ಪಾತ್ರಗಳ ವಸ್ತುವಿನ ಸಂಭಾಷಣೆಗಳು ಪ್ರಮುಖ ಪಾತ್ರವಹಿಸುತ್ತವೆ. ಪ್ರವಾಸ ಕೃತಿಗಳಲ್ಲಿ ಬಹುವಲಯದ ಕುರಿತು ವಿವರಿಸುವಾಗ ಕಥನಕಾರರು 'ಸರ್ವಸಾಕ್ಷಿಪ್ರಜ್ಞೆ'ಯಂತೆ ನಿರೂಪಿಸುವುದನ್ನು ಕಾಣುತ್ತೇವೆ. ಈ ಕಥನಕ್ರಮವನ್ನು 'ಸ್ವಗತ ಮಾದರಿ' ಎಂದು ಕರೆಯುತ್ತಾರೆ. ಇಲ್ಲಿ ವ್ಯಕ್ತಿಪ್ರಜ್ಞೆ ಮುಖ್ಯವಾಗಿದ್ದು ಪ್ರವಾಸಿಗರ ಅಂತಃಸತ್ವವನ್ನು ಭಾಷೆಯ ಮೂಲಕ ಅಭಿವ್ಯಕ್ತಿಸಲು ಸಾಧ್ಯವಾಗುತ್ತದೆ. ಕನ್ನಡದ ಪ್ರವಾಸ ಕಥನಗಳಲ್ಲಿ ಬಳಕೆಯಾಗಿರುವ ನಿರೂಪಣೆಗಳಿಗೂ ಅವುಗಳ ಹಿಂದಿನ ದೃಷ್ಟಿಕೋನಗಳಿಗೂ ಸಂಬಂಧಗಳಿರುತ್ತವೆ. ಇದರಿಂದಾಗಿ ಕೃತಿಯ ಅನೇಕ ವಿಚಾರಗಳು ಚರ್ಚೆಗೆ ಬರುತ್ತವೆ. ಪ್ರವಾಸ ಕಥನಗಳು ಮುಖ್ಯವಾಗಿ ಗದ್ಯರೂಪದ ಬರಹಗಳಾಗಿವೆ. ಆದರೆ ಇವುಗಳ ಸ್ವರೂಪ, ಶೈಲಿ ಹಾಗೂ ಕಥನಕ್ರಮಗಳಲ್ಲಿ ಒಬ್ಬೊಬ್ಬ ಲೇಖಕರು ವಿಶಿಷ್ಟತೆಯನ್ನು ಮೆರೆದಿರುವುದನ್ನು

ಕಾಣುತ್ತೇವೆ. ಈ ಸಾಹಿತ್ಯ ಪ್ರಕಾರವು ಪ್ರಬಂಧ, ದಿನಚರಿ, ಪತ್ರಲೇಖನ, ವಿಡಂಬನ, ಹಾಸ್ಯ, ಅಣಕ, ಕವನ ಮುಂತಾದ ರೂಪಗಳಲ್ಲಿಯೂ ರಚನೆಯಾಗಿರುವುದುಂಟು. ಸಾಮಾನ್ಯವಾಗಿ ಪ್ರವಾಸ ಕಥನಗಳು ಗದ್ಯ ನಿರೂಪಣಾ ಶೈಲಿಯಲ್ಲಿ ರಚನೆಯಾಗಿರುತ್ತವೆಯಾದರೂ ಕೆಲವು ಪ್ರವಾಸ ಕಥನಗಳಲ್ಲಿ ಗದ್ಯದ ನಡುವೆ ಪದ್ಯವು ಕಾಣಿಸಿಕೊಳ್ಳುವುದುಂಟು. ಪದ್ಯ, ಗಾದೆ, ನುಡಿಗಟ್ಟುಗಳು ಬೆರತು ಹೋಗಿರುವುದನ್ನು ಪ್ರವಾಸ ಕಥನದಲ್ಲಿ ಗಮನಿಸಬಹುದಾಗಿದೆ.

ಪ್ರವಾಸ ಕಥನಗಳ ನಿರೂಪಣಾ ವಿಧಾನಗಳನ್ನು ಕುರಿತು ಎಸ್.ವಿದ್ಯಾಶಂಕರ್ ಅವರು "ಪ್ರವಾಸಕ್ಕೆ ಹೋದವರಲ್ಲಿ ಪ್ರವಾಸ ಕಥನಗಳನ್ನು ಬರೆಯಲು ಆಗುವುದಿಲ್ಲ. ಪ್ರವಾಸ ಕಥನವೆಂಬುದು ವ್ಯಕ್ತಿನಿಷ್ಠ ಸಾಹಿತ್ಯವಾಗಿದೆ. ಎಲ್ಲಾ ಸಾಹಿತ್ಯಗಳಿಗೆ ಅನುಭವ ಎಷ್ಟು ಮುಖ್ಯವೋ ಪ್ರವಾಸ ಕಥನಕ್ಕೂ ಅಷ್ಟೇ ಮುಖ್ಯ. ಪ್ರವಾಸಿಯ ಗ್ರಹಿಕೆಯ ಶಕ್ತಿಯನ್ನು ಅವಲಂಬಿಸಿ ಅವನ ಅನುಭವ ಗಟ್ಟಿ ಇಲ್ಲವೆ ಟೊಳ್ಳಾಗಿರುತ್ತದೆ. ಗ್ರಹಿಕೆ ಶಕ್ತಿ ಗುಣವಿಲ್ಲದ ಪ್ರವಾಸಿಯ ರೆಕ್ಕೆಗಳಿಲ್ಲದೆ ಪಕ್ಷಿಯಂತೆ"(ವಿದ್ಯಾಶಂಕರ್ ಎಸ್., ೧೯೯೧, ಪುಟ-೮೭) ಎಂದಿದ್ದಾರೆ. ಪ್ರವಾಸ ಮಾಡಿದ ಸಂದರ್ಭದಲ್ಲಿ ಎಲ್ಲವನ್ನೂ ದಾಖಲಿಸಲು ಆಗದ ಕಾರಣ, ಟಿಪ್ಪಣಿ ಬರೆದಿಟ್ಟಿರಬಹುದು ನೆನಪಿನ ಶಕ್ತಿ ಮುಖ್ಯವಾಗುತ್ತದೆ. ಕೆಲವೊಮ್ಮೆ ಟಿಪ್ಪಣಿಗಳು ಸಹಕಾರಿಯಾಗುತ್ತವೆ. ಪ್ರವಾಸಿಗರ ಅಂತರಂಗದ ಅನುಭವವನ್ನು ಹೆಚ್ಚಿಸುತ್ತವೆ. ಹೀಗಾಗಿ ಸಂವೇದನಶೀಲರಾದ ಪ್ರವಾಸಿಗರಿಗೆ ತಮ್ಮ ಅನುಭವಗಳನ್ನು ದಾಖಲಿಸಲು ಭಾಷೆಯು ಪ್ರಧಾನವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳಾ ಪ್ರವಾಸ ಕಥನಗಳ ಭಾಷೆ ಮತ್ತು ಕಥನಶೈಲಿ ಎಂದರೆ ನಿರೂಪಿಸುವ ವಿಧಾನ ಎಂದರ್ಥ. ಆ ಮೂಲಕ ಕನ್ನಡ ಮಹಿಳಾ ಪ್ರವಾಸ ಕಥನಗಳು ಅನನ್ಯವಾಗಿ ನಿಲ್ಲುತ್ತವೆ.

ಪ್ರವಾಸ ಕಥನಗಳ ನಿರೂಪಣಾ ವಿಧಾನಗಳನ್ನು ಗಮನಿಸಿದರೆ, 'ನಾನು' ಎನ್ನುವ ಆತ್ಮವೃತ್ತಾಂತ ನಿರೂಪಣಾ ಕ್ರಮ ಇಲ್ಲವೇ ಧ್ವನಿ ಹರಿದಿರುತ್ತದೆ. 'ನಾನು' ಎನ್ನುವ ಆತ್ಮವೃತ್ತಾಂತವು ಪ್ರವಾಸ ಕಥನದ ಜೀವಾಳದಂತೆ ಕಥನದುದ್ದಕ್ಕೂ ಕಂಡುಬರುತ್ತದೆ. 'ನಾನು' ಎನ್ನುವ ಉತ್ತಮ ಪುರುಷ ಸರ್ವನಾಮದ ಹೊರತಾಗಿ ಪ್ರವಾಸ ಕಥನಗಳಲ್ಲಿ ಸಾಂದರ್ಭಿಕವಾಗಿ ಮಧ್ಯಮ ಪುರುಷ, ಪ್ರಥಮ ಪುರುಷ ಸರ್ವನಾಮಗಳು ಬಳಕೆಯಾಗುತ್ತವೆ. ಕೃತಿಕಾರರು ನಾನು ಎಂಬುದಾಗಿಯೇ ನೆನಪಿಸಿಕೊಂಡು ವಸ್ತು ವಿವರಣೆಗಳನ್ನು ಅನುಭವಗಳನ್ನು ವರ್ಣಿಸಲು ಆರಂಭಿಸುತ್ತಾರೆ. 'ನಾನು ಹೋದೆ', 'ನಾನು ಇದನ್ನು ನೋಡಿದೆ', 'ನಾನು ಅಲ್ಲಲ್ಲಿ ಓಡಾಡಿದೆ', 'ನನಗೆ ಈ ಅನುಭವವಾಯಿತು', 'ನನಗೆ ಹೀಗೆ ಕಂಡಿತು', 'ನಾನು ವೀಸಾ ಪಾಸ್‌ಪೋರ್ಟ್ ಕಳೆದುಕೊಂಡೆ' ಹೀಗೆ 'ನಾನು' ಎನ್ನುವ ಪದವು ಪದೇ ಪದೇ ಪ್ರವಾಸ ಕಥನಗಳಲ್ಲಿ ಪ್ರತಿಧ್ವನಿಸುತ್ತಲೇ ಇರುತ್ತದೆ. ಪ್ರವಾಸದ ಅನುಭವಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಳಿಸುವ ಬರಹಗಾರರು ಅನೇಕ ತಂತ್ರಗಳನ್ನು ರೂಪಿಸಿಕೊಳ್ಳುತ್ತಾರೆ. ಅನುಭವವನ್ನು ದಾಖಲಿಸುವಾಗ ಭಾಷೆಯನ್ನು ನಿರೂಪಣೆಯ ತಂತ್ರಗಾರಿಕೆಯಾಗಿ ಬಳಸಿಕೊಳ್ಳುತ್ತಾರೆ. ಅವುಗಳಲ್ಲಿ ಗದ್ಯದ ನಿರೂಪಣಾ ಶೈಲಿ, ಪದ್ಯದ ನಿರೂಪಣಾ ಶೈಲಿ, ಸಂಭಾಷಣೆಯ ಶೈಲಿ, ಪದ್ಯ ಬೆರಸಿದ

ಗದ್ಯದ ಶೈಲಿಯಲ್ಲಿ ಬರೆದಿರುವುದು ಕಂಡುಬರುತ್ತದೆ. ಆದರೆ ಗದ್ಯದ ಕಥನಶೈಲಿಯೇ ಪ್ರವಾಸ ಕಥನಗಳಿಗೆ ಹೆಚ್ಚು ಸೂಕ್ತವಾಗುತ್ತದೆ. ಗದ್ಯ ನಿರೂಪಣೆಯೊಳಗೆ ಪದ್ಯಗಳನ್ನು ಬೆರಸುವುದು ಬಹುತೇಕ ಪ್ರವಾಸ ಕಥನಗಳಲ್ಲಿ ಕಾಣುತ್ತೇವೆ. ಆದರೆ ಪ್ರವಾಸ ಕಥನಗಳನ್ನು ಸೃಜನಶೀಲ ಪ್ರಕಾರವಾಗಿಲ್ಲ ಎನ್ನುವ ಚರ್ಚೆಗಳಿವೆ. ಪ್ರವಾಸದ ಅನುಭವವನ್ನು ವಿವರಿಸುವ ಸಾಹಿತ್ಯ ಪ್ರಕಾರವಾಗಿ ಇವುಗಳನ್ನು ಪರಿಗಣಿಸಲಾಗಿದೆ. ಈ ಕುರಿತು ಎನ್.ಎಸ್.ತಾರಾನಾಥ ಅವರು "ಪ್ರವಾಸ ಕಥನದಲ್ಲಿ ನಿರ್ದಿಷ್ಟವಾದ ಪ್ರದೇಶ ವಸ್ತು, ನಿರ್ದಿಷ್ಟವಾದ ಕಾಲ ಮತ್ತು ವಿವರಗಳಿರುತ್ತವೆ. ಅದನ್ನು ಪ್ರವಾಸ ಕಥಕನೇನೂ ಸೃಷ್ಟಿಸಬೇಕಿಲ್ಲ. ತಾನು ಕಂಡದ್ದನ್ನು, ಅನುಭವಿಸಿದ್ದನ್ನು ಆಕರ್ಷಕವಾಗಿ ಹೇಳಿದರೆ ಸಾಕು. ಪ್ರವಾಸ ಕಥನದಲ್ಲಿ ಎಲ್ಲೂ ಲೇಖಕನ ಕಲ್ಪನೆ ಅರಳುವುದಿಲ್ಲ. (blossoming of imagination) ಅದರಲ್ಲಿ ಉದ್ದಕ್ಕೂ ಆತನ ವರ್ಣನೆ, ಕಲೆ-ನಿರೂಪಣಾ ವೈಖರಿ (descriptive) ಮಾತ್ರ ಎದ್ದು ಕಾಣುತ್ತದೆ. ಸೃಜನಶೀಲತೆಗೆ ಕಿಂಚಿತ್ತು ಅವಕಾಶವಿಲ್ಲದ ಈ ಪ್ರಕಾರವನ್ನು ಹೇಗೆ ಸೃಜನಶೀಲ ಪ್ರಕಾರವೆಂದು ಕರೆಯುವುದು?" (ಮಲ್ಲೇಪುರಂ ಜಿ.ವೆಂಕಟೇಶ.(ಸಂ), ೧೯೯೨, ಪುಟ-೨೦)ಎಂದಿದ್ದಾರೆ. ಪ್ರವಾಸ ಸಾಹಿತ್ಯದ ನಿರೂಪಣೆ, ಲಕ್ಷಣ, ಸ್ವರೂಪಗಳನ್ನು ಗಮನಿಸಿದಾಗ ಲೇಖಕರ ಮಾತಿನಲ್ಲೇ 'ಆಕರ್ಷಕ ವರ್ಣನೆ', 'ಕಲೆ', 'ನಿರೂಪಣಾ ವೈಖರಿ' ಇತ್ಯಾದಿ ಪದಗಳು ಬಳಕೆಯಾಗಿರುವುದನ್ನು ಗಮನಿಸಬಹುದು ಹಾಗಾಗಿ ಕಲಾತ್ಮಕವಾದ ಅಭಿವ್ಯಕ್ತಿ ಕ್ರಮ ಮತ್ತು ನಿರೂಪಣಾ ಶೈಲಿಯಿಂದಾಗಿ ಕೆಲವು ಪ್ರವಾಸ ಕಥನಗಳು ಸೃಜನಶೀಲ ಪ್ರಕಾರಗಳಂತೆಯೇ ಓದುಗರಿಗೆ ರಂಜನೀಯವೆನಿಸಬಹುದು.

ಪ್ರವಾಸ ಕಥನಗಳಲ್ಲಿ ಅಪರಿಚಿತರೊಂದಿಗೆ ಸಂವಾದಿಸುವ ಸನ್ನಿವೇಶಗಳು ಕಥನದ ಉದ್ದಕ್ಕೂ ಬರುತ್ತವೆ. ಹೀಗಾಗಿ ಪ್ರವಾಸಿಗರಿಗೆ ಭಾಷೆ ಬಹುಮುಖ್ಯವಾಗುತ್ತದೆ. ಬೇರೊಂದು ದೇಶದ ನೈಸರ್ಗಿಕ ಸಂಪತ್ತು, ಜನರ ಸಂಸ್ಕೃತಿ, ಆಚಾರ-ವಿಚಾರ ಮತ್ತು ಸಾಂಸ್ಕೃತಿಕ ರಂಗಗಳನ್ನು ಅರಿಯುವುದಕ್ಕೆ ಭಾಷೆ ಸಂಪರ್ಕ ಕೊಂಡಿಯಾಗಿರುತ್ತದೆ. ವಿಶ್ವ ಪರ್ಯಟನೆಗೆ 'ಇಂಗ್ಲೀಷ್' ಭಾಷೆ ಮುಖ್ಯವೆಂದು ಭಾವಿಸಿದರೂ, ಆಯಾ ದೇಶಗಳಲ್ಲಿನ ಸ್ಥಳೀಯ ಭಾಷೆಯು ಅಷ್ಟೇ ಪ್ರಾಮುಖ್ಯತೆ ಪಡೆಯುತ್ತದೆ. ಪ್ರಾದೇಶಿಕ ಭಾಷೆಗಳು ಪ್ರಧಾನವಾದಂತಹ ಪ್ರದೇಶಗಳಲ್ಲಿ ಸ್ಥಳೀಯ ಭಾಷೆಯೊಂದಿಗೆ ಸಂಪರ್ಕಿಸಬೇಕಾಗುತ್ತದೆ. ಇಲ್ಲವೆ ಪರಿಚಯವಿರುವ ಸ್ಥಳೀಯ ಭಾಷೆಗಳಲ್ಲಿಯೇ ವ್ಯವಹರಿಸಬೇಕಾಗುತ್ತದೆ. ಇವೆರಡರ ಹೊರತಾಗಿಯೂ ಹಲವು ಲೇಖಕಿಯರೂ ಯಶಸ್ವಿ ಪ್ರವಾಸ ಕೈಗೊಂಡಿರುವುದು ಕೃತಿಗಳ ಮೂಲಕ ತಿಳಿದುಬರುತ್ತದೆ. ಆದರೂ ಪ್ರವಾಸ ಕಥನಗಳ ಕುರಿತ ಅಧ್ಯಯನಗಳಲ್ಲಿ ಇಂಗ್ಲೀಷ್ ಭಾಷೆಯ ಪರಿಚಯವಿರಬೇಕು. ಅದಿಲ್ಲದಿದ್ದರೇ ಒಂದೊಂದು ಗಳಿಗೆಯೂ ಉಸಿರುಕಟ್ಟುವ ಸನ್ನಿವೇಶ ಉಂಟಾಗುತ್ತದೆ ಎಂದು ಹಲವು ಲೇಖಕರು ದಾಖಲಿಸಿದ್ದಾರೆ. ಭಾಷೆಯ ಹಂಗು ಇಲ್ಲದೆ ಪ್ರವಾಸ ಮಾಡಿದವರಿದ್ದಾರೆ. ಭಾಷೆ ಜೊತೆಗೆ ಪ್ರವಾಸದ ಸಂದರ್ಭದಲ್ಲಿ ಪ್ರವಾಸಿಗರ ಪ್ರತಿಕ್ರಿಯೆ ಮುಖ್ಯವಾಗುತ್ತದೆ. ಇನ್ನೊಂದು ದೇಶದ ಆಚಾರ-ವಿಚಾರಗಳನ್ನು, ಸಂಸ್ಕೃತಿಗಳಲ್ಲಿ ಇಷ್ಟವಾದದ್ದನ್ನು ಬರೆಯುವ, ಬೇಡವಾದದ್ದನ್ನು

ತಿರಸ್ಕರಿಸುವ ನಿರೂಪಣೆಗಳು ಕಂಡುಬರುತ್ತವೆ. ಇದನ್ನು ಆಥರಿಯಲ್ ರೆಸ್ಪಾನ್ಸ್ (ಲೇಖಕ ಪ್ರತಿಕ್ರಿಯೆ) ಎಂದು ಕರೆಯುತ್ತಾರೆ. ಲೇಖಕ ಪ್ರತಿಕ್ರಿಯೆಯು ಸಾಹಿತ್ಯದ ಎಲ್ಲಾ ಪ್ರಕಾರಗಳಿಗೂ ಅನ್ವಯಿಸುವಂತಹದ್ದು, ಆದರೆ ಪ್ರವಾಸ ಕಥನಗಳಿಗೆ ಹೆಚ್ಚು ಅನ್ವಯಿಸುತ್ತದೆ. ಪ್ರವಾಸದ ಸಂದರ್ಭದಲ್ಲಿ ಲೇಖಕ ಪ್ರತಿಕ್ರಿಯೆಗಳ ಮೇಲೆ ಒಂದು ವಸ್ತು, ವಿಷಯಗಳು ಕೃತಿಯಲ್ಲಿ ಹೇಗೆ ಮೂಡುತ್ತವೆ ಎಂಬುದು ತಿಳಿದು ಬರುತ್ತದೆ. ಮೋನಾಲಿಸಾಳ ವರ್ಣಚಿತ್ರವನ್ನು ಕುರಿತು ಹಲವು ಪ್ರವಾಸಿಗರಲ್ಲಿ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ಇಂದಿರಾ ಶಿವಣ್ಣ ಅವರಲ್ಲಿ ಮೆಚ್ಚುಗೆಯ ಧನ್ಯತೆಯ ಭಾವ ವ್ಯಕ್ತವಾಗಿದ್ದರೆ, ತ್ರಿವೇಣಿ ಶಿವಕುಮಾರ್ ಅವರು ಸಾಮಾನ್ಯ ಹೆಂಗಸಿನ ಚಿತ್ರಣ ಎಂದಿದ್ದಾರೆ. ಈ ಭಿನ್ನಾಭಿಪ್ರಾಯ ಅಥವಾ ಲೇಖಕ ಪ್ರತಿಕ್ರಿಯೆ ಪ್ರವಾಸ ಕಥನಗಳಲ್ಲಿ ಸಹಜವಾಗಿರುತ್ತವೆ. ಒಬ್ಬ ಲೇಖಕರಿಂದ ಮತ್ತೊಬ್ಬ ಲೇಖಕರಿಗೆ ಒಂದೇ ವಸ್ತು ಸ್ಥಳದ ಮೇಲೆ ಪ್ರತಿಕ್ರಿಯೆಗಳು ಭಿನ್ನವಾಗಿರುತ್ತವೆ. ಅಮೇರಿಕಾ ಪ್ರವಾಸ ಮಾಡಿದ ನೀಳಾದೇವಿ, ಅನುಪಮಾ ನಿರಂಜನ, ಸಾರಾ ಅಬೂಬಕ್ಕರ್, ಜಲಜಾ ಗಂಗೂರು, ಪದ್ಮಾಶಣ್ಯೆ ಅವರ ಅಭಿಪ್ರಾಯಗಳು, ಅಂಡಮಾನ್ ಪ್ರವಾಸ ಮಾಡಿದ ಅನುಪಮಾ.ಎಚ್.ಎಸ್., ಸುಮಂಗಲಾ ಎಸ್.ಮುಮ್ಮಿಗಟ್ಟಿ ಮತ್ತು ಹೊ.ನಾಗರತ್ನ ಅವರ ನಿರೂಪಣಾ ವಿಧಾನಗಳು ಭಿನ್ನವಾಗಿವೆ. ಲೇಖಕರು ತಮ್ಮ ವೈಯಕ್ತಿಕ ಅನುಭವಗಳನ್ನು ನಿರೂಪಿಸುವುದರಿಂದ ಪ್ರವಾಸ ಕಥನಗಳಿಗೆ ಆತ್ಮಕಥನದ ಸ್ವರೂಪದ ಬರಹಗಳಲ್ಲದಿದ್ದರೂ, ಸಮೀಪದ ನಿರೂಪಣೆಗಳನ್ನು ಪ್ರವಾಸ ಕಥನಗಳಲ್ಲಿ ಕಾಣಬಹುದಾಗಿದೆ. ಆತ್ಮಕಥನದಂತೆ ತಮಗಾದ ನಿಶ್ಚಿತ ಅನುಭವಗಳು ಬರೆಯುವಲ್ಲಿ ವೈಯಕ್ತಿಕ ಮನೋಭಿಲಾಷೆಗಳು ದಟ್ಟವಾಗಿ ನಿರೂಪಣೆಗೊಂಡಿರುತ್ತವೆ.

ಭಾಷೆ ಮತ್ತು ಕಥನ ಶೈಲಿಯ ಅಂಶಗಳಿಂದ ಪ್ರವಾಸ ಕಥನಗಳಲ್ಲಿ ಮಹಿಳೆಯರನ್ನು ಅನನ್ಯಗೊಳಿಸುವ ಅಥವಾ ಪ್ರತಿನಿಧಿಸುವ ನಿರೂಪಣೆಗಳು ಸಾಕಷ್ಟು ಕಂಡುಬರುತ್ತವೆ. ಪುರುಷ ಪ್ರವಾಸಿಗರಿಗಿಂತಲೂ ಮಹಿಳಾ ಪ್ರವಾಸಿಗರ ಕಥನಶೈಲಿಯಲ್ಲಿ ಮಹಿಳಾ ಅನನ್ಯತೆಯ ಚಹರೆಗಳು ಹೆಚ್ಚಾಗಿ ಕಂಡುಬರುತ್ತವೆ. ಕನ್ನಡ ಮಹಿಳಾ ಪ್ರವಾಸ ಕಥನಗಳಲ್ಲಿ ಮಹಿಳಾ ಅನನ್ಯತೆಯ ಚಹರೆಗಳ ಒಳಮೈ ಲಕ್ಷಣಗಳನ್ನು ನಾಲ್ಕು ಬಗೆಯ ಕಥನ ತಂತ್ರಗಳನ್ನು ಗುರುತಿಸಬಹುದಾಗಿದೆ. ಅವುಗಳೆಂದರೆ

೧. ಪೌರಾಣಿಕ ಮಹಿಳಾ ನೆಲೆ

೨. ಶೋಷಿತ ಮಹಿಳಾ ನೆಲೆ

೩. ಮಹಿಳಾ ಹೋರಾಟಗಳ ನೆಲೆ

೪. ಮಹಿಳಾ ಸಬಲೀಕರಣದ ನೆಲೆ

ಮಹಿಳಾ ಪ್ರವಾಸಿಗರು ತಮ್ಮ ಅನುಭವಗಳನ್ನು ದಾಖಲಿಸುವಾಗ ಕೃತಿಗಳನ್ನು ವಿಶಿಷ್ಟವಾಗಿಸುವ ಸಲುವಾಗಿ ಅನೇಕ ತಂತ್ರಗಳನ್ನು ರೂಪಿಸುತ್ತಾರೆ. ಮಹಿಳಾ ಪ್ರವಾಸ

ಕಥನಗಳನ್ನು ಅನನ್ಯಗೊಳಿಸುವ ತಂತ್ರಗಳಲ್ಲಿ ಕೃತಿಗಳ ಶೀರ್ಷಿಕೆಗಳು ಒಂದು. ಜಲಜಾ ಗಂಗೂರು ಅವರ 'ಅವನಿಯ ಅಪ್ಸರೆ ಅಮೇರಿಕಾ', ರಾಜಲಕ್ಷ್ಮೀ ಗೋಪಾಲ ಅವರ 'ಅಮರಲೋಕದಲ್ಲಿ ಅಧ್ಯಾಪಕಿ' ಮತ್ತು ಹೇಮಲತಾ.ಎಚ್.ಎಂ. ಅವರ 'ಹಂಗೇರಿಯಲ್ಲಿ ಹೇಮ' ಕೃತಿಗಳ ಶೀರ್ಷಿಕೆಗಳಲ್ಲಿ ಸಾಮಾನ್ಯವಾದ ಅಂಶಗಳಾಗಿ ಮಹಿಳೆ ಕಂಡುಬರುತ್ತಾಳೆ. ರಾಜಲಕ್ಷ್ಮೀ ಗೋಪಾಲ ಅವರು ವೃತ್ತಿಯಲ್ಲಿ ಅಧ್ಯಾಪಕಿಯಾಗಿದ್ದ ಕಾರಣಕ್ಕೆ, ಅಧ್ಯಾಪಕ ವೃತ್ತಿಯನ್ನು ಸೂಚಿಸುವ ಶೀರ್ಷಿಕೆಯನ್ನು ನೀಡಿದ್ದಾರೆ. ಸುಂದರ ಮಹಿಳೆಯರನ್ನು ಅಪ್ಸರೆಗೆ ಹೋಲಿಸುವ ರೂಢಿಗತ ಮಾತನ್ನು ಜಲಜಾ ಗಂಗೂರು ಅವರು ಅಮೇರಿಕಾದ ಸೊಬಗಿಗೆ ಹೋಲಿಸಿ ಶೀರ್ಷಿಕೆಯಾಗಿಸಿದ್ದಾರೆ. ಹೇಮಲತಾ.ಎಚ್.ಎಂ. ಅವರ 'ಹಂಗೇರಿಯಲ್ಲಿ ಹೇಮ' ಪ್ರವಾಸ ಕಥನವು ಮಹಿಳಾ ವಿಶ್ವವಿದ್ಯಾಲಯವು ಮಹಿಳಾ ಅಧ್ಯಯಯಕ್ಕಾಗಿ ಜಂಡರ್ ಸ್ಟಡೀಸ್ ಶಿಸ್ತಿನ ಸ್ವರೂಪ ಮತ್ತು ಪಠ್ಯಕ್ರಮ, ಹಂಗೇರಿ ಮತ್ತು ಭಾರತದ ಮಹಿಳೆಯರ ಸ್ಥಾನಮಾನ ಕುರಿತು ತುಲನಾತ್ಮಕ ಅಧ್ಯಯನವಾಗಿದೆ. ಇದು ಯು.ಜಿ.ಸಿ.ಯೋಜನೆಯ ಶೈಕ್ಷಣಿಕ ಪ್ರವಾಸವಾಗಿದೆ. ಹೀಗಾಗಿ ಮಹಿಳಾ ಸಂವೇದನೆಯನ್ನು ನಿರೂಪಿಸುವುದೇ ಈ ಕೃತಿಯ ಮುಖ್ಯ ಧ್ಯೇಯವಾಗಿದೆ. ತಮ್ಮದೇ ಹೆಸರನ್ನು ಹಂಗೇರಿಯ ಪ್ರವಾಸದಲ್ಲಿನ ಅನುಭವಗಳನ್ನು ಹಂಚಿಕೊಳ್ಳುವಲ್ಲಿ ನಿರೂಪಕಿಯ ಪಾತ್ರ ಮುಖ್ಯವಾದ ಕಾರಣಕ್ಕೆ 'ಹಂಗೇರಿಯಲ್ಲಿ ಹೇಮ' ಎಂದು ಕರೆದಿದ್ದಾರೆ. ಪಾರ್ವತಿ ಪೆಂಡರಕೂರ ಅವರ 'ಅಮೇರಿಕಾದಲ್ಲಿ ಕನ್ನಡದಜ್ಜಿ' ಕೃತಿಯ ಶೀರ್ಷಿಕೆಯು ಅಜ್ಜಿಯೊರ್ವಳು ಜಾನಪದ ಕಥೆಯನ್ನು ಮಕ್ಕಳಿಗಾಗಿ ಹೇಳುವ ರೀತಿಯಲ್ಲಿದೆ. ಬೇರೊಂದು ಜಗತ್ತಿನಲ್ಲಿ, ಬೇರೊಂದು ಭಾಷೆಯಲ್ಲಿಯೂ ಲೇಖಕಿ ಕನ್ನಡತನವನ್ನು, ತನ್ನತನವನ್ನು ಎದ್ದುಕಾಣುವಂತೆ ಶೀರ್ಷಿಕೆ ಇಟ್ಟಿದ್ದಾರೆ. ಅಮೇರಿಕಾದ ಕುಟುಂಬಗಳ ಮತ್ತು ತಮ್ಮ ಮೊಮ್ಮಕ್ಕಳ ಒಡನಾಟದ ಅನುಭವಗಳ ಜೊತೆಯಲ್ಲಿಯೇ ನಿರೂಪಣೆ ಸಾಗುವುದರಿಂದ ಈ ಶೀರ್ಷಿಕೆಯನ್ನು ನೀಡಿರುವಂತಿದೆ. ವಸಂತಿ ಚಂದ್ರ ಅವರ 'ಮೌನ ಮೋಹಿನಿ', ಮತ್ತು ವಸಂತಿ ವೆಂಕಟರಂಗನ್ ಅವರ 'ನಾ ಕಂಡ ಮಹಿಳೆ(ಪೂರ್ವ) ಆಫ್ರಿಕಾದಲ್ಲಿ ಸಾಧನೆ' ಕೃತಿಗಳಲ್ಲಿ ಮಹಿಳೆಯನ್ನು ಭಾಷಿಕವಾಗಿ ಸೂಚಿಸುವ ಮತ್ತು ನಿರೂಪಿಸುವ ಶೀರ್ಷಿಕೆಗಳನ್ನು ಗುರುತಿಸಬಹುದಾಗಿದೆ. ಮಹಿಳಾ ಪ್ರವಾಸಿಗರಂತೆ ಪುರುಷ ಪ್ರವಾಸಿಗರು ಸಹ ತಮ್ಮ ಕೃತಿಗಳಲ್ಲಿ ಮಹಿಳಾ ಅನನ್ಯತೆಯನ್ನು ಬಿಂಬಿಸುವಂತಹ ಶೀರ್ಷಿಕೆಗಳನ್ನು ನೀಡಿದ್ದಾರೆ. ಹೋ.ಶ್ರೀನಿವಾಸಯ್ಯ ಅವರ 'ಜಯಶ್ರೀ ಕಂಡ ಜಗತ್ತು' ಮತ್ತು 'ಜಯಶ್ರೀ ಕಂಡ ಯುರೋಪ್', ಪ್ರಭುಶಂಕರ ಅವರ 'ಅಮೇರಿಕಾದಲ್ಲಿ ನಾನು ಮತ್ತು ಶಾಂತಿ' ಕೃತಿಗಳ ಲೇಖಕರು ತಮ್ಮ ಪತ್ನಿಯ ಜೊತೆಗೂಡಿ ಪ್ರವಾಸ ಕೈಗೊಂಡಿದ್ದು, ಪ್ರವಾಸ ಸಂದರ್ಭದಲ್ಲಿ ತಮ್ಮೆಲ್ಲಾ ಅನುಭವಗಳ ಭಾಗವಾಗಿದ್ದ ಹೆಂಡತಿಗೆ ಗೌರವ ಸೂಚಕವಾಗಿ ಕೃತಿಯನ್ನು ಅರ್ಪಿಸಿದಂತೆ ಇಲ್ಲಿನ ಶೀರ್ಷಿಕೆಗಳು ಕಂಡುಬರುತ್ತವೆ. ಇಲ್ಲಿ ಪತ್ನಿಯರು ಕೃತಿಯ ನಿರೂಪಣೆಗಳಲ್ಲಿಯೂ ಭಾಗಿಯಾಗುವುದರಿಂದ ಗೌರವ ಸೂಚಕವಾಗಿಯೂ ಬಳಸಿಕೊಂಡಿದ್ದಾರೆ. ನಾಗೇಶ ಹೆಗಡೆ ಅವರ 'ಗಗನ ಸಖಿಯರ ಸೆರಗು ಹಿಡಿದು' ಕೃತಿಯ ಶೀರ್ಷಿಕೆಯು ವಿದೇಶಿ ಪ್ರವಾಸ ಕೈಗೊಂಡವರಲ್ಲಿ ವಿಮಾನಯಾನದ ಮೊದಲ ಅನುಭವವು ಗಗನಸಖಿಯರದ್ದಾಗಿರುತ್ತದೆ.

ಈ ಕುರಿತು ಅನೇಕ ಪ್ರವಾಸಿಗರು ಗಗನಸಖಿಯರೊಂದಿಗಿನ ಅನುಭವಗಳನ್ನು ದಾಖಲಿಸಿದ್ದಾರೆ. ನವರತ್ನರಾಮ್ ಅವರ 'ಪ್ಯಾರಿಸ್‌ನಿಂದ ಪ್ರೇಯಸಿಗೆ' ಕೃತಿಯ ಶೀರ್ಷಿಕೆಯು ಸಹ ಮಹಿಳೆಯನ್ನು ಸೂಚಿಸುವ ಶೀರ್ಷಿಕೆ ನೀಡಿರುವುದು ಗಮನಾರ್ಹವಾಗಿದೆ. ಅಂಜಲಿ ರಾಮಣ್ಣ ಅವರ 'ಬೆಳಕಿನ ಸೆರಗು' ಶೀರ್ಷಿಕೆಯು ಮಹಿಳಾ ಉಡುಪಿನಲ್ಲಿ ಒಂದಾದ ಸೀರೆಯ ಭಾಗವಾಗಿ ಸೆರಗು ಎಂಬುದು ಮಹಿಳೆಯರನ್ನೇ ಪ್ರತಿನಿಧಿಸಿದರೆ, ಉಮಾರಾವ್ ಅವರ 'ರಾಕೀ ಪರ್ವತಗಳ ನಡುವೆ ಕ್ಯಾಬರೆ' ಕೃತಿಯ ಶೀರ್ಷಿಕೆಯು ವಿದೇಶದಲ್ಲಿ ಮಹಿಳೆಯರಿಲ್ಲದ ಕ್ಯಾಬರೆ ಊಹಿಸಲಿಕ್ಕೂ ಅಸಾಧ್ಯವೆಂಬುದು ವಿದೇಶದಲ್ಲಿ ನೆಲೆಯೂರಿದೆ. ಹೀಗಾಗಿ ಮಹಿಳಾ ಸೂಚಕ ಪದವಾಗಿ ಕಂಡುಬರುತ್ತದೆ. ಕನ್ನಡದ ಪ್ರವಾಸ ಕಥನಗಳಲ್ಲಿ ಮಹಿಳಾ ಅನನ್ಯತೆಯನ್ನು ಶೀರ್ಷಿಕೆಗಳಲ್ಲಿ ದಾಖಲು ಮಾಡುವ ಕೃತಿಗಳು ವಿರಳವಾಗಿ ಕಂಡುಬಂದಿವೆ. ಆದರೆ ಪ್ರವಾಸಿಗರು ಮಹಿಳಾ ಸಂವೇದನೆಗಳನ್ನು ವಿಶಿಷ್ಟಗೊಳಿಸುವುದಕ್ಕೆ ಕೃತಿಯ ಒಳಗೆ ಪ್ರತ್ಯೇಕ ಅಧ್ಯಾಯಗಳಲ್ಲಿ ನಿರೂಪಿಸಿರುವುದು ಗಮನಾರ್ಹವಾಗಿದೆ.

ಮಹಿಳಾ ಪ್ರವಾಸ ಕಥನಗಳಲ್ಲಿ ಮಹಿಳಾ ಅನನ್ಯತೆಯ ಚಹರೆಗಳನ್ನು ಗುರುತಿಸುವ ಭಾಗವಾಗಿ ಕೃತಿಯೊಳಗಿನ ಅಧ್ಯಾಯಗಳು ಅಥವಾ ಉಪಶೀರ್ಷಿಕೆಗಳು ಬಹಳ ಮುಖ್ಯವಾಗುತ್ತವೆ. ಈ ಮೂಲಕ ದೇಶ-ವಿದೇಶಗಳಲ್ಲಿನ ಮಹಿಳೆಯರ ಜೀವನ, ಸ್ಥಿತಿಗತಿಗಳು, ಆಚರಣೆಗಳು, ಸಂವೇದನೆಗಳು ಪ್ರವಾಸ ಕಥನಗಳನ್ನು ಕೇಂದ್ರೀಕರಿಸಲಾಗಿದೆ. ಪುರುಷ ಪ್ರವಾಸಿಗರಿಗಿಂತಲೂ ಮಹಿಳಾ ಪ್ರವಾಸಿಗರು ಮಹಿಳಾ ಸಂವೇದನೆಗಳ ವಿಚಾರಗಳನ್ನು ಹೆಚ್ಚಾಗಿ ಪ್ರಸ್ತಾಪಿಸಿದ್ದಾರೆ. ಆರಂಭದ ಕೆಲವು ಪ್ರವಾಸ ಕಥನಗಳನ್ನು, ಧಾರ್ಮಿಕ ಪ್ರವಾಸ ಕಥನಗಳನ್ನು ಹೊರತು ಪಡಿಸಿದರೆ ಮಹಿಳಾ ಅನನ್ಯತೆಯನ್ನು ಸಾರುವ ಚಹರೆಗಳು ಕೃತಿಗಳಲ್ಲಿ ಎದ್ದುಕಾಣುತ್ತವೆ. ಇಂದಿರಾ ಶಿವಣ್ಣ ಅವರ 'ನಿಗೂಢಗಳ ನಿಜ್ಜಣಿಕೆ ಏರಿ' ಕೃತಿಯಲ್ಲಿ 'ಸೌದಿ ಮಹಿಳೆಯರ ಬದುಕು' ಎಂಬ ಅಧ್ಯಾಯವು ಅರಬ್ ಮಹಿಳೆಯರ ವಿಚಾರಗಳನ್ನು ಒಳಗೊಂಡಿದೆ. ಶೀರ್ಷಿಕೆಯಲ್ಲಿಯೇ ಸೌದಿ ಮಹಿಳೆಯರ ಬದುಕಿನ ಏರಿತಳಗಳನ್ನು ಸೂಚಿಸುವಂತಿದೆ. ಅನುಪಮಾ ನಿರಂಜನ ಅವರ 'ಸ್ನೇಹಯಾತ್ರೆ' ಕೃತಿಯಲ್ಲಿ 'ಜರ್ಮನ್ ಮಹಿಳೆ' ಅಧ್ಯಾಯದಲ್ಲಿ ಜರ್ಮನ್ ಮಹಿಳೆಯರು ಕೌಟುಂಬಿಕವಾಗಿಯೂ, ಔದ್ಯೋಗಿಕವಾಗಿಯೂ ಸದಾ ಕ್ರಿಯಾಶೀಲದವರಾಗಿದ್ದಾರೆ. ಲೇಖಕಿಗೆ ಪರಿಚಿಯವಾದ 'ಲೀಡಾ'ಎನ್ನುವ ಮಹಿಳೆಯು ಶಿಕ್ಷಣ ಪದ್ಧತಿ, ಮಹಿಳೆಯರಿಗೆ ಔದ್ಯೋಗಿಕ ತರಬೇತಿಗಳು, ಕುಟುಂಬ ವ್ಯವಸ್ಥೆ, ಮಹಿಳಾ ಹಕ್ಕುಗಳ ಕುರಿತು ವಿವರಿಸುತ್ತಾರೆ. ಅಲ್ಲಿನ ಮಹಿಳೆಯರನ್ನು ಸಬಲೀಕರಣಗೊಳಿಸುವ ವಿಚಾರಗಳನ್ನು ಕುರಿತು ನಿರೂಪಿಸಿದ್ದಾರೆ. ಅವರದೇ ಇನ್ನೊಂದು ಕೃತಿಯಾದ 'ಅಂಗೈಯಲ್ಲಿ ಯುರೋ ಅಮೇರಿಕಾ'ದ 'ದೇವತೆಗಳ ನಗರ' ಅಧ್ಯಾಯದಲ್ಲಿ ವಿದೇಶಿ ನೆಲದಲ್ಲಿ ಮಹಿಳೆಯರನ್ನು ನೋಡುವ ದೃಷ್ಟಿಕೋನ, ಭಾರತದಂತೆ ಮಹಿಳೆಯರನ್ನು ದೇವತೆಗಳಾಗಿಸುವ ಕುರಿತು, ಮಹಿಳಾ ಸಂವೇದನೆಗಳನ್ನು ಕುರಿತು ನಿರೂಪಿಸುತ್ತಾರೆ. ವಿಜಯಾದಬ್ಬೆ ಅವರ 'ಉರಿಯ ಚಿಗುರು ಉತ್ಕಲೆ' ಕೃತಿಯ

'ದೇವಿಯರ ರಾಜ್ಯ' ಅಧ್ಯಾಯದಲ್ಲಿ ಗಿರಿವಾಸಿ ಮಹಿಳೆಯರ ಬದುಕನ್ನು ಕುರಿತು ದಾಖಲಿಸಿದರೆ, ಬಿ.ಎನ್.ಸುಮಿತ್ರಾಬಾಯಿ ಅವರ 'ಬ್ರಹ್ಮಪುತ್ರದ ಕಣಿವೆಯಲ್ಲಿ' ಎಂಬ ಕೃತಿಯಲ್ಲಿ 'ಮಹಾಮಾತೆ ಕಾಮಾಖ್ಯಾ' ಎಂಬ ಅಧ್ಯಾಯವು ಗುವಾಹಟಿಯ ಧಾರ್ಮಿಕ ಕ್ಷೇತ್ರದಲ್ಲಿನ ಮಹಿಳೆಯರ ಬದುಕನ್ನು ದಾಖಲಿಸುತ್ತದೆ. 'ನಿರುಪಮೆ, ನಿರ್ಮಲ ಪ್ರಭೆಯರ ಸನ್ನಿಧಿಯಲ್ಲಿ' ಗುವಾಹಟಿಯ ಸ್ತ್ರೀವಾದಿ ಚಿಂತಕಿ ನಿರುಪಮಾ ಬರ್‌ಗೊಹೈನರು ಅಸ್ಸಾಮೀ ಮಹಿಳೆಯರ ಜೀವನ, ಅಕಾಡೆಮಿಯಲ್ಲಿನ ಮಹಿಳೆ ಎಂಬ ತಾರತಮ್ಯಗಳು, ಅಸ್ಸಾಂ ಬುಡಕಟ್ಟುವಿನಲ್ಲಿ ಮಾತೃ ಪ್ರಾಧಾನ್ಯತೆಯನ್ನು ಕುರಿತು ಪ್ರಸ್ತಾಪಿಸಿದ್ದನ್ನು ಲೇಖಕಿ ನಿರೂಪಿಸಿದ್ದಾರೆ. 'ಹೆಣ್ಣುಮಕ್ಕಳು ಬನ್ನಿ, ಬಣ್ಣವ ಉಡ ಬನ್ನಿ' ಅಧ್ಯಾಯದಲ್ಲಿ ಅಸ್ಸಾಂ ಮಹಿಳೆಯರ ರೇಷ್ಮೆ ನೇಕಾರರಾಗಿದ್ದು, ರೇಷ್ಮೆ ಸೀರೆ ಪ್ರಸಿದ್ಧಿ ಪಡೆದಿವೆ. ಮಹಿಳಾ ಉದ್ಯಮಕ್ಕೆ ಬೆಂಬಲ ವ್ಯಕ್ತಪಡಿಸುವ ರೀತಿಯಲ್ಲಿ ಗ್ರಾಹಕರನ್ನು ಆಹ್ವಾನಿಸುವ ಇಲ್ಲಿನ ಶೀರ್ಷಿಕೆಗಳು ಕಂಡುಬರುತ್ತವೆ.

ಶಮಂತ ಅವರ 'ಹಿಮದಗ್ನಿ'ಯಲ್ಲಿ 'ಕಾಶ್ಮೀರಿ ಕನ್ಯೆ' ಎಂಬ ಅಧ್ಯಾಯವು ಕಾಶ್ಮೀರದಲ್ಲಿ ಬೆಳೆಯುವ ಹೆಣ್ಣುಮಕ್ಕಳ ನೋವಿನ ಬದುಕನ್ನು ಚಿತ್ರಿಸಿದರೆ, ಪ್ರೇಮಶೇಖರ ಅವರ 'ದೇಶ ಪರದೇಶ' ಕೃತಿಯಲ್ಲಿ 'ಇಂದಿರಾ ಗಾಂಧಿಯವರ ಬಗ್ಗೆ ಒಂದಿಷ್ಟು ಮಾತುಗಳು' ಎಂಬ ಉಪಶೀರ್ಷಿಕೆಯಲ್ಲಿ ವಿದೇಶಗಳಲ್ಲಿ ಭಾರತೀಯತೆಯನ್ನು ಎತ್ತಿಹಿಡಿದ ಇಂದಿರಾ ಗಾಂಧಿ ಅವರ ಆಡಳಿತದ ದಕ್ಷತೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ವಿದೇಶಿ ನೆಲಗಳಲ್ಲಿ ಇಂಡಿಯಾ ಎಂದರೆ ಇಂದಿರಾ ಎಂದು ಖ್ಯಾತಿ ಪಡೆದಿದ್ದರು. ಇದನ್ನು ನೀಳಾದೇವಿ, ಪಾರ್ವತಮ್ಮ ಮಹಾಲಿಂಗಶೆಟ್ಟಿ, ಅನುಪಮಾ ನಿರಂಜನ ಮುಂತಾದ ಲೇಖಕಿಯರು ತಮ್ಮ ಪ್ರವಾಸ ಕಥನಗಳಲ್ಲಿ ಪ್ರಸ್ತಾಪಿಸಿದ್ದಾರೆ. ಲೇಖಕಿ ಪ್ರೇಮಶೇಖರ ಅವರಿಗೂ ವಿದೇಶ ನೆಲದಲ್ಲಿ ಇಂದಿರಾ ಬಗೆಗೆ ಅನುಭವವಾಗಿದ್ದರಿಂದ ಈ ಅಧ್ಯಾಯವನ್ನು ಅರ್ಪಿಸಿದಂತಿದೆ. ಉಮಾರಾವ್ ಅವರ 'ಇನ್ನು ಎಲ್ಲಿಗೋಟ' ಕೃತಿಯ 'ಮಮ್ಮಿ ನೋಡಲು ಬಂದ ಪುಟ್ಟ ಹೆಂಗಸು', 'ಹೆಣ್ಣುಮಕ್ಕಳಿಗೆ ಸ್ವರ್ಗ', 'ಆಂಗ್ಲ ಸನ್ಯಾಸಿಯ ಹಿಮಗವಿಯ ಏಕಾಂತ', 'ಪಂಜರದಲ್ಲಿ ಹುಡುಗಿಯರು', 'ಅವರೂ ಮಕ್ಕಳಲ್ಲವೇ?', 'ಗಟ್ಟಿಗಿತ್ತಿ ಸ್ಯಾಂಡ್ರಾ ಸಿಸ್ನೆರೋಸ್' ಮುಂತಾದ ಅಧ್ಯಾಯಗಳು ಮಹಿಳಾ ಲೋಕವನ್ನೇ ಪರಿಚಯಿಸಿದಂತಿದೆ. ಇಲ್ಲಿನ ಶೀರ್ಷಿಕೆಗಳು ಸಾಮಾನ್ಯ ಮಹಿಳೆಯರನ್ನು, ಸ್ತ್ರೀ ಸಮಾನತೆಯಲ್ಲಿ ಬದುಕುವ ಮಹಿಳೆಯನ್ನು, ಆಧ್ಯಾತ್ಮದ ಸಾಧನೆ ತೋರಿದ ಮಹಿಳೆಯನ್ನು, ಪುರುಷ ದಬ್ಬಾಳಿಕೆಗಳಿಗೆ ಒಳಗಾಗುತ್ತಿರುವ ಮಹಿಳೆಯರ ಬದುಕಿನ ಅನನ್ಯತೆಯ ಚಹರೆಗಳನ್ನು ನಿರೂಪಿಸುತ್ತಿವೆ. 'ಅವರೂ ಮಕ್ಕಳಲ್ಲವೇ?' ಉಪಶೀರ್ಷಿಕೆಯು ಪುರುಷ ಕ್ರೌರ್ಯವನ್ನು ಪ್ರಶ್ನಿಸುತ್ತಿದೆ. ಬೆಳೆಯುತ್ತಿರುವ ಚಿಕ್ಕ ಪ್ರಾಯದ ಹುಡುಗಿಯರು ಲೈಂಗಿಕ ಉದ್ಯಮಕ್ಕೆ ಬಳಸಿಕೊಳ್ಳುವ ಕುರಿತು ಮರುಕವನ್ನು, ಆಕ್ರೋಶವನ್ನು ಶೀರ್ಷಿಕೆಯಲ್ಲಿಯೇ ವ್ಯಕ್ತಪಡಿಸಿದಂತಿದೆ.

ಸುಧಾ ಚಿದಾನಂದಗೌಡ ಅವರ 'ಸಮನ್ವಿತೆ ಗೋಮಾಂತ' ಕೃತಿಯಲ್ಲಿ 'ಗೋವಾ ಎಂಬ ಸುಂದರ ಕಂದಕದಲ್ಲಿ ಮಹಿಳೆ' ಎಂಬ ಉಪಶೀರ್ಷಿಕೆಯು ಪ್ರವಾಸಿಗರನ್ನೇ ಉದ್ಯಮವಾಗಿಸಿಕೊಂಡ

ಗೋವಾವು ಉದ್ಯೋಗ ಹರಿಸಿ ಬಂದಂತಹ ಮಹಿಳೆಯರನ್ನು ಪುರುಷ ಸಂಚಿತ ಕಂದಕದಲ್ಲಿ ತಳ್ಳುತ್ತಿದ್ದಾರೆ. ಹೇಮಲತಾ.ಎಚ್.ಎಂ. ಅವರ 'ಹಂಗೇರಿಯಲ್ಲಿ ಹೇಮ' ಕೃತಿಯಲ್ಲಿ ಹಂಗೇರಿ ಮತ್ತು ಭಾರತದ ಮಹಿಳೆಯರ ಸ್ಥಾನ ಕುರಿತು ತುಲನಾತ್ಮಕ ಅಧ್ಯಯನದಲ್ಲಿ ಮಹಿಳಾ ಅನನ್ಯತೆಯನ್ನು ಗುರುತಿಸುವ ಹಲವು ಉಪ ಅಧ್ಯಾಯಗಳಿವೆ. ಅವುಗಳೆಂದರೆ ಮಹಿಳೆಯರ ಕೌಟುಂಬಿಕ ಪಾತ್ರ, ಕಾನೂನಿನಲ್ಲಿ ಜಂಡರ್ ಸಮಾನವೇ, ಶ್ರಮದ ಮಾರುಕಟ್ಟೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ, ಆರೋಗ್ಯ ಸೇವಾ ವ್ಯವಸ್ಥೆ ಮತ್ತು ಮಹಿಳೆಯರು, ಮಹಿಳೆಯರ ರಾಜಕೀಯ ಭಾಗವಹಿಸುವಿಕೆ, ಸಾಮಾಜಿಕ ಸುರಕ್ಷಾ ಸೇವಾ ವ್ಯವಸ್ಥೆ ಮತ್ತು ಮಹಿಳೆಯರು, ಮಹಿಳೆಯರ ಮೇಲಿನ ದೌರ್ಜನ್ಯ ಉಪಶೀರ್ಷಿಕೆಗಳಲ್ಲಿ ಹಂಗೇರಿ ಮತ್ತು ಭಾರತದ ಮಹಿಳೆಯರ ತುಲನಾಲ್ಮಕವಾದ ನಿರೂಪಣೆಗಳಿಂದಾಗಿ ಮಹಿಳಾ ಅನನ್ಯತೆಯ ಚಹರೆಗಳನ್ನು ಎತ್ತಿಹಿಡಿದಿದ್ದಾರೆ.

ಎಚ್.ಎಸ್.ಅನುಪಮಾ ಅವರ 'ಚೆಗೆವಾದನ ನೆಲದಲ್ಲಿ' ಕೃತಿಯಲ್ಲಿ 'ಇಂಕಾದ ಸಮಾಜದಲ್ಲಿ ಮಹಿಳೆ', ನೇಮಿಚಂದ್ರ ಅವರ 'ಪೆರುವಿನ ಪವಿತ್ರ ಕಣಿವೆಯಲ್ಲಿ', ಕೃತಿಯಲ್ಲಿ 'ಪೆರುವಿನ ನೆಲದ ಮಹಿಳಾ ಹೋರಾಟ' ಅಂಜಲಿ ರಾಮಣ್ಣ ಅವರ 'ಬೆಳಕಿನ ಸೆರಗು' ಕೃತಿಯಲ್ಲಿ 'ಕೃತಿಯ ಕೃಷ್ಣ ರುಕ್ಮೀಣಿ ಪಾರ್ವತಿ ಭೇಟಿಯಾದರು', 'ಬೆಳಕಿನ ಪ್ರಾಣಕ್ಕೆ ದಾರಿ ತೋರಿದ ಭಿಕ್ಕುಣಿ', ಮುಂತಾದ ಉಪಶೀರ್ಷಿಕೆಗಳು ಮಹಿಳೆಯರ ಬದುಕನ್ನು ಅನಾವರಣಗೊಳಿಸುವಂತಹ ಶೀರ್ಷಿಕೆಗಳಾಗಿವೆ. ಕನ್ನಡದ ಮಹಿಳಾ ಪ್ರವಾಸ ಕಥನಗಳಲ್ಲಿ ಮಹಿಳಾ ಅನನ್ಯತೆಗಳನ್ನು ಗಮನಿಸಿದರೇ ಬಹು ಆಯಾಮಗಳಲ್ಲಿ ನಿರೂಪಿಸಿರುವುದು ಕಂಡುಬರುತ್ತದೆ. ಕೆಲವು ಮಹಿಳಾ ಪ್ರವಾಸಿಗರು ತಮ್ಮ ಕೃತಿಗಳಲ್ಲಿ ಮಹಿಳೆಯರನ್ನು ಸೂಚಿಸುವ ಉಪಶೀರ್ಷಿಕೆಗಳು ಇಲ್ಲದೇ ಹೋದರು ತಮ್ಮ ಕಥನಶೈಲಿಯಲ್ಲಿ ಮಹಿಳಾ ಬದುಕನ್ನು ಅನನ್ಯವಾಗಿಸಿದ್ದಾರೆ. ಅಂತವರಲ್ಲಿ ಇಂದಿರಾ ಶಿವಣ್ಣ ಅವರ 'ತನ್ಮಯತೆ ಉನ್ಮತ್ತತೆ' ಕೃತಿಯಲ್ಲಿ 'ಮಾತಾರಾಣಿಯ ಮಡಿಲಲ್ಲಿ' ಮತ್ತು ಸುಮಂಗಲಾ ಎಸ್.ಮುಮ್ಮಿಗಟ್ಟಿ ಅವರ 'ಅದ್ಭುತ ಜೀವಾವಾಸ ಅಂಡಮಾನ್', ಸುಧಾಮೂರ್ತಿ ಅವರ 'ಕಾವೇರಿಯಿಂದ ಮೆಕಾಂಗಿಗೆ', ಎಚ್.ಎಸ್.ಅನುಪಮಾ ಅವರ 'ಅಂಡಮಾನ್ ಕಂಡ ಹಾಗೆ', 'ನೈಲ್ ದಾರಿಗುಂಟ', ಪಾರ್ವತಮ್ಮ ಮಹಾಲಿಂಗಶೆಟ್ಟಿ ಅವರ 'ಅಮೇರಿಕಾದಲ್ಲಿ ಜನಜೀವನ ಮತ್ತು ಇತಿಹಾಸ, ಇಂದಿರಾ ಹೆಗ್ಗಡೆ ಅವರ 'ಇಂದ್ರಪ್ರಸ್ಥದಿಂದ ಐತಿಹಾಸಿಕ ನಡೆ, ಎಚ್.ಎನ್.ಆರತಿ ಅವರ 'ಬೆಟ್ಟದಡಿಯ ಬಿದಿರ ಹೂ', ತೇಜಸ್ವಿನಿ ಬಿ.ಯಕ್ಕುಂಡಿಮಠ ಅವರ 'ತಿರೆಯ ಮೇಲಣ ಸ್ವರ್ಗ' ಮುಂತಾದ ಕೃತಿಗಳು ಮುಖ್ಯವಾಗುತ್ತವೆ.

ಪ್ರವಾಸ ಕಥನಗಳಲ್ಲಿ ಮಹಿಳಾ ಅನನ್ಯತೆಯ ಚಹರೆಗಳನ್ನು ಗುರುತಿಸುವಲ್ಲಿ ಸಂಭಾಷಣೆಗಳು ಮುಖ್ಯವಾಗುತ್ತವೆ. ಭೂತಾನ್ ದೇಶದ ಅನುಭವ ಕಥನವಾದ ಉಮಾರಾವ್ ಅವರು 'ಇನ್ನು ಎಲ್ಲಿಗೋಟ' ಕೃತಿಯಲ್ಲಿ ಆ ದೇಶದ ಮಹಿಳಾ ಅನನ್ಯ ಚಹರೆಗಳನ್ನು ಕುರಿತು ನಿರೂಪಿಸಲಾಗಿದೆ. ಭಾರತದಲ್ಲಿ ಹೆಣ್ಣು ಭ್ರೂಣಹತ್ಯೆ, ಸತಿಪದ್ಧತಿ, ಸ್ತ್ರೀಶೋಷಣೆಗಳನ್ನು ಗಮನಿಸಿದಾಗ ಭೂತಾನ್ ಮಹಿಳೆಯರಿಗೆ ಈ ಸಮಸ್ಯೆಗಳಿಲ್ಲ. ನೂರಾರು ವರ್ಷಗಳಲ್ಲಿ ಪುರುಷರ ಸರಿಸಮಾನರಾಗಿ,

ಯಾವ ಲಿಂಗಾಧಾರಿತ ತಾರತಮ್ಯಕ್ಕೂ ಒಳಗಾಗದೆ ಸಮಾನತೆಯಿಂದ ಬದುಕುತ್ತಿದ್ದಾರೆ. ಈ ಕುರಿತು ಲೇಖಕಿ "ಇವರು ಯಾರು ಸ್ತ್ರೀವಾದಿ ಘೋಷಣೆಗಳನ್ನು ಬೀದಿ ಬೀದಿಗಳಲ್ಲಿ ಕೂಗಿದವರಲ್ಲ, ಬ್ರಾ ಸುಟ್ಟವರಲ್ಲ, ಗ್ರಿಯರ್, ಗ್ಲೋರಿಯಾ, ಸಿಮೊನ್ ದ ಬೋವಾ ಲೇಖನಗಳನ್ನು ಮನದಟ್ಟು ಮಾಡಿಕೊಂಡು ಅದರಿಂದ ಪ್ರಭಾವಿತರಾದವರಲ್ಲ. ಈ ಸಹಜ ಮುಕ್ತ ಚೇತನಗಳ ಬದುಕು, ನಂಬಿಕೆಗಳು ರೂಪಗೊಂಡಿರುವುದು ಗಂಡು, ಹೆಣ್ಣು ಸಮಾನರು ಎಂದು ಸಾರುವ ಅಪೂರ್ವ ಸಂಸ್ಕೃತಿಯ ಮೂಲಕ. ಅವರಲ್ಲಿ ಗಟ್ಟಿಯಾಗಿ ನೆಲೆಗೊಂಡಿರುವ ಆಧ್ಯಾತ್ಮಿಕ ಮೌಲ್ಯಗಳ ಮೂಲಕ. ಹಾಗಾಗಿ ಭೂತಾನ್ ದೇಶವು ದಕ್ಷಿಣ ಏಷ್ಯಾದ ಒಂದು ಭಾಗವಾಗಿದ್ದರೂ ಇಲ್ಲಿನ ಜನರ ನಿಲುವುಗಳು ಮಾತ್ರ ಬೇರೆ ದೇಶಗಳಿಗಿಂತ ತುಂಬಾ ಭಿನ್ನವಾದುದು."(ಉಮಾರಾವ್, ೨೦೧೫, ಪುಟ-೪೯) ಎಂದಿದ್ದಾರೆ. ಸ್ತ್ರೀವಾದಿ ಧೋರಣೆಯ ಈಡೇರಿಕೆಗಾಗಿ ಅಕ್ಷರಬಲ್ಲ ಎಷ್ಟೋ ಮಹಿಳಾ ಸಂಘಟನೆಗಳು ಹೋರಾಡುವಾಗ ಭೂತಾನ್ ಮಹಿಳೆಯರು ಇದಕ್ಕೆ ಹೊರತಾಗಿದ್ದಾರೆ. ಇತರೆ ದೇಶಗಳಿಗಿಂತ ಭಿನ್ನವಾಗಿ ಕಾಣುವ ಅಲ್ಲಿನ ಜನರ ಸಮಾನತೆಯ ನಡೆ ಶ್ಲಾಘನೀಯವಾಗಿದೆ. ಇಲ್ಲಿನ ಮಹಿಳೆಯರಿಗೆ ವೈಚಾರಿಕತೆ ಹೋರಾಟ, ಚಳುವಳಿಗಳಿಲ್ಲದೆಯೇ ಪುರುಷರಷ್ಟೇ ಸರಿಸಮಾನವಾದ ಹಕ್ಕುಗಳನ್ನು ಕೊಟ್ಟ ದೇಶವಾಗಿ ಭೂತಾನ್ ಮಾದರಿಯಾಗಿದೆ. ಜಗತ್ತಿನ ಬಹುತೇಕ ದೇಶಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕಾಗಿ ತೀವ್ರವಾದ ಹೋರಾಟಗಳು ನಡೆಸುತ್ತಿದ್ದರೂ ಪ್ರಾಮುಖ್ಯತೆ ಸಿಗದೇ ಹೋಗುತ್ತಿವೆ. ಅಂತಹದರಲ್ಲಿ ಹೆಣ್ಣು ಗಂಡು ಭೇದವಿಲ್ಲದ, ಸರಿಸಮಾನವಾಗಿ ನೋಡುವ, ಸರ್ವರಿಗೂ ಸಮಾನತೆಯ ದೃಷ್ಟಿಯಿಂದ ಕಂಡ ಏಕೈಕ ದೇಶವಾಗಿ ಭೂತಾನ್ ಹೊರಹೊಮ್ಮಿದೆ. ಈ ಮೂಲಕ ಭೂತಾನ್ ಮಹಿಳೆಯರಿಗೆ ಸ್ವರ್ಗವೆಂದು ಲೇಖಕಿ ಕರೆದಿದ್ದಾರೆ. ಬಹುಶಃ ಮನುಷ್ಯ ಕಲಿಯಬೇಕಾದ ನೈತಿಕ ಪಾಠಗಳನ್ನು ಭೂತಾನ್ ಜನರು ಹೆಚ್ಚು ಗೌರವಿಸಿದ್ದಾರೆಂದು ಹೇಳಬಹುದಾಗಿದೆ.

ಮಹಿಳಾ ಪ್ರವಾಸ ಕಥನಗಳಲ್ಲಿ ಮಹಿಳಾ ಅನನ್ಯತೆಯ ಚಹರೆಗಳನ್ನು ಗುರುತಿಸುವಲ್ಲಿ ಜಾನಪದ ಪದ್ಯಗಳು, ಸ್ಥಳೀಯ ಹಾಡುಗಳಲ್ಲಿ ಹೆಣ್ಣನ್ನು ಕುರಿತು ನಿರೂಪಿಸುವುದು ಕಂಡುಬರುತ್ತವೆ. ಪದ್ಮಾ ಗುರುರಾಜ್ ಅವರ ಆಸ್ಟ್ರೇಲಿಯಾದ ಅನುಭವ ಕಥನವಾದ 'ಕಾಂಗರೂಗಳ ನಾಡಿನಲ್ಲಿ' ಎಂಬ ಕೃತಿಯಲ್ಲಿ ಹೆಣ್ಣು ತಾಯಿಯಾಗಲು ಅನುಭವಿಸುವ ಕಷ್ಟವನ್ನು, ಪ್ರಾಣವನ್ನು ಪಣವಾಗಿಡುವ ತಾಪತ್ರಯಗಳ ಕುರಿತಾದ ನಿರೂಪಣೆ ಹೀಗಿದೆ. "ತಾಯಿಯಾಗುವ ಕಷ್ಟ, ನೋವಿನ ಪ್ರತ್ಯಕ್ಷ ದರ್ಶನ ಮಾಡುವ ಯೋಗ ಅವರಿಗಿಲ್ಲ. ಹೆಣ್ಣಿಗೆ ಅಂಥ ಪ್ರಾಣಾಂತಿಕ ನೋವನ್ನು ಸಹಿಸುವ ಶಕ್ತಿ ಪ್ರಕೃತಿದೇವಿ ಆಕೆಗೆ ತಾಯ್ತನದ ಭಾರವನ್ನು ಜೊತೆಗೆ ಅವರ್ಣನೀಯ ಸುಖ ಸಂತೋಷವನ್ನು ಕರುಣಿಸುತ್ತಾಳೆ. 'Maternity is a fact, paternity is a supposition' ಎಂದು ಅಷ್ಟಲ್ಲದೆ ಹೇಳುತ್ತಾರೆಯೇ"(ಪದ್ಮಾ ಗುರುರಾಜ್, ೨೦೧೦, ಪುಟ-೧೨೫) ಈ ನಿರೂಪಣೆಯಲ್ಲಿ ನೋವಿಗೆ ವ್ಯಾಖ್ಯಾನ ಪಡೆಯುವ ವಿನ್ಯಾಸವು ಸೊಗಸಾಗಿ ಮೂಡಿದೆ. ಹೆಣ್ಣಿನ ಹುಟ್ಟು, ಮದುವೆ, ಸಂಸಾರ, ತಾಯ್ತನ ನೋವು ಇವು ಮಹಿಳೆ ಜೊತೆಯಾಗಿಯೆ ಹುಟ್ಟಿರುತ್ತವೆಯೆನೋ

ಎಂದು ಭಾಸವಾಗುವಂತೆ ಲೇಖಕಿ ನಿರೂಪಿಸಿದ್ದಾರೆ. ಇಂತಹದ್ದೆ ಹೆಣ್ಣಿನ ನೋವಿನ ಸಂಗತಿಯನ್ನು ಎಸ್.ಸಂಧ್ಯಾ ಅವರು ಪ್ರಸ್ತಾಪಿಸಿದ್ದಾರೆ. ಅವರ 'ಹಲವು ಕಾಲಗಳ ನಾಡು: ಗುಜರಾಜ್' ಕೃತಿಯಲ್ಲಿ ಮಹಿಳಾ ಸಂವೇದನೆಗಳನ್ನು ಪ್ರತಿಬಿಂಬಿಸುವ ಜನಪದ ಪದ್ಯವೊಂದರ ನಿರೂಪಣೆ ಹೀಗಿದೆ.

"ಹೆಣ್ಣು ಹಡೆಯ ಬ್ಯಾಡ, ಹೆರವರಿಗೆ ಕೊಡಬ್ಯಾಡ

ಹೆಣ್ಣು ಹೋಗ್ಯಾಗ ಅಳಬೇಡ, ಹಡೆದವ್ವ

ಸಿಟ್ಟಾಗಿ ಶಿವಗ ಬೈಬ್ಯಾಡ" (ಸಂಧ್ಯಾ ಎಸ್., ೧೯೯೭, ಪುಟ-೬೩)

ಹೆಣ್ಣು ಹುಟ್ಟಿದಾಗ ಸಾಕಿ ಸಲುಹಿ, ಮದುವೆ ಮಾಡಿ ಪರರ ಮನೆಗೆ ಕಳಿಸುವಾಗ ಅಳಬೇಡ ಎಂದು ಸಮಾಧಾನಿಸುವ ಈ ಸಾಲುಗಳಲ್ಲಿ ಭವಿಷ್ಯದ ಕಡೆಗೆ ಸಾಗುವುದನ್ನು ಹೇಳುತ್ತದೆ. ಜಗತ್ತಿನ ಇತರೆ ದೇಶಗಳಲ್ಲೂ ಆಚಾರ, ವಿಚಾರ, ಭಾಷೆ, ಸಂಸ್ಕೃತಿಗಳು ಬೇರೆಯಾದರೂ ಮದುವೆ, ಸಂಸಾರ ಎನ್ನುವ ವಿಚಾರಕ್ಕೆ ಬಂದಾಗ ಈ ಸಮಸ್ಯೆಗಳಿಂದ ಪರ್ಯಾಯವನ್ನೇ ಕಟ್ಟಿಕೊಳ್ಳಲು ಆಗಿಲ್ಲ. ಹೀಗಾಗಿ ಶಿವನನ್ನು ಬೈ ಬೇಡ ಎಂದು ಜನಪದರು ಹಾಡು ನಿರೂಪಿಸುವ ಮೂಲಕ ಮಹಿಳಾ ಬದುಕಿನ ಅನನ್ಯತೆಗಳನ್ನು ದಾಖಲಿಸಿದ್ದಾರೆ.

ಇಂದಿರಾ ಹೆಗ್ಗಡೆ ಅವರ 'ಇಂದ್ರಪ್ರಸ್ಥದಿಂದ ಐತಿಹಾಸಿಕ ನಡೆ' ಕೃತಿಯಲ್ಲಿ ಮಥುರಾದಲ್ಲಿ ಮನೆಯಿಂದ ಹೊರದೂಡಲ್ಪಟ್ಟ ಎಲ್ಲಾ ವಯಸ್ಸಿನ ವಿಧವೆಯರ ವೃಂದಾವನವೆಂಬ ಆಶ್ರಮವಿದೆ. ಪುರುಷ ಪಾರಂಪರಿಕ ದಬ್ಬಾಳಿಕೆಗಳಿಂತ ಭಿಕ್ಷಾ ಪಾತ್ರೆ ಹಿಡಿದು ಅಂಗಡಿ, ದೇವಸ್ಥಾನಗಳನ್ನು ಸುತ್ತುವುದೇ ಲೇಸು ಎಂದು ಅಲ್ಲಿನ ವಿಧವಾ ಮಹಿಳೆಯರು ಆಶ್ರಮದಲ್ಲಿದ್ದಾರೆ. ಈ ವಿಧವೆಯರ ಸಾಮಾಜಿಕ ಬದುಕಿನಲ್ಲಿ ಆದ ಅವಗಡಗಳನ್ನು ಜನಪದ ಪದ್ಯವೊಂದರಲ್ಲಿ ಕಟ್ಟಿಕೊಡುವ ನಿರೂಪಣೆ ವಿಭಿನ್ನವಾಗಿದೆ.

"ಗಂಡ ಸಾಯೋಕ್ಕಿಂತ ಮುಂಡ್ಯಾಗೋಕ್ಕಿಂತ

ಕಂಡೋರ ಮನೆಯ ಕಸನ್ಹಾಕೆ ಸಾಯೋಕ್ಕಿಂತ

ಕೊಂಡವನ್ನೋದೆ ಕಡುಲೇಸು" (ಇಂದಿರಾ ಹೆಗ್ಗಡೆ, ೨೦೧೮, ಪುಟ-೨೮೩)

ಈ ಜನಪದ ಹಾಡಿನಲ್ಲಿ ಗಂಡ ಇಲ್ಲದ ಬದುಕಿನಲ್ಲಿ ಮುಂಡೆಯಾಗಿ ಬದುಕಲು ಇರುವ ಕಾಠಿಣ್ಯವನ್ನು ಈ ಪದ್ಯ ನಿರೂಪಿಸುತ್ತದೆ. ಇಲ್ಲಿನ ಆಶ್ರಮದಲ್ಲಿ ವಿಧವೆಯರು ಮಾತ್ರವಲ್ಲದೇ ಹದಿಹರೆಯ ಹೆಣ್ಣುಮಕ್ಕಳು ವಾಸವಾಗಿದ್ದರು. ಗಂಡ ಸತ್ತ ನಂತರ ಜೀವಂತವಿರುವ ಮಹಿಳೆಯರನ್ನು ಸಹಿಸದ, ಸಹಗಮನ ಮಾಡಿ ಮನೆಯ ಮಾನ ಕಾಪಾಡು ಎನ್ನುವವರ ಮಧ್ಯೆ ಅಲ್ಲಿನ ಮಹಿಳೆಯರಿದ್ದರು. 'ಒಪ್ಪೊತ್ತು ಉಣಲಾರೆ ನೆತ್ತಿ ಬೋಳಿಸಲಾರೆ' ಎಂಬ ನಿರ್ಧರಿಸುವ ವಿಧವೆಯರು ಸಹಗಮನಕ್ಕೆ ಮುಂದಾಗಿಸುವ ಮನೆಗಳನ್ನು ತೊರೆದು ಆಶ್ರಮ

ವಾಸಿಯಾಗುವುದೇ ಲೇಸು ಎಂದು ಭಾವಿಸುತ್ತಾರೆ. ಇಲ್ಲೂ ವ್ಯಾಪಾರಸ್ಥ ಪುರುಷರ ಕಪಿಮುಷ್ಟಿಗೆ ಸಿಲುಕಿ ನೋವನ್ನು ಅನುಭವಿಸುವ ಮಹಿಳೆಯರನ್ನು ಕುರಿತು ಲೇಖಕಿ ಪ್ರಸ್ತಾಪಿಸುತ್ತಾರೆ.

ಮಹಿಳಾ ಅನನ್ಯತೆಯ ಚಹರೆಗಳನ್ನು ಗುರುತಿಸುವಲ್ಲಿ ಬಿ.ಎನ್.ಸುಮಿತ್ರಾಬಾಯಿ ಅವರ 'ಬ್ರಹ್ಮಪುತ್ರದ ಕಣಿವೆಯಲ್ಲಿ' ಎಂಬ ಕೃತಿಯು ಮುಖ್ಯವಾಗುತ್ತದೆ. ಅಸ್ಸಾಂನ ಬಿಹೂ ಹಬ್ಬದ ಸಂಭ್ರಮದಲ್ಲಿ ಮಹಿಳಾ ಅನನ್ಯತೆಯ ಚಹರೆಗಳನ್ನು ಬಿಂಬಿಸುವ ಜಾನಪದ ಹಾಡುಗಳು ಕಂಡುಬರುತ್ತವೆ. ಬಿಹೂ ಹಬ್ಬದಲ್ಲಿ ಹುಡುಗ ಹುಡುಗಿಯರು ಸೇರಿ ಕುಣಿಯುವ, ಭಾವ ಭಂಗಿಗಳು, ಹಸ್ತ ವಿನ್ಯಾಸ, ನೋಟ, ಒನಪು, ತೊಯ್ದಾಟ ಹೀಗೆ ಮಿಲನದ ಆಶಯವನ್ನು ಬಿಂಬಿಸುವ ಅಲ್ಲಿನ ಹಾಡಿನ ಕನ್ನಡ ರೂಪವನ್ನು ಲೇಖಕಿ ಹೀಗೆ ನಿರೂಪಿಸಿದ್ದಾರೆ.

"ಆಲದ ಮರ ಹೊಸ ಚಿಗುರು ಹೊತ್ತಿದೆ

ನನ್ನ ನಲ್ಲೆ ಹೊಸ ಅಂದದಿಂದ ಹೊಳೆಯುತ್ತಾಳೆ

ತನ್ನೆದೆಯ ಸುತ್ತ ಕೆಂಪು ರಿಹಾ ಸುತ್ತಿಕೊಳ್ಳುತ್ತಾಳೆ"

(ಸುಮಿತ್ರಾಬಾಯಿ ಬಿ.ಎನ್., ೧೯೯೮, ಪುಟ-೨೩)

ಈ ಗೀತೆಯು ಗಂಡು ಹೆಣ್ಣಿನಲ್ಲಿನ ಯೌವ್ವನ ಮಾಗುವಿಕೆಯ ಸಂಕೇತವಾಗಿದೆ. ಬಿಹೂ ಹಬ್ಬದಲ್ಲಿ ನೆರೆದಿರುವವರು ತಮ್ಮ ಸಂಗಾತಿಗಳನ್ನು ಆಯ್ದು ಹೊಸ ಜೀವನಕ್ಕೆ ಕಾಲಿಡುವ ಆಚರಣೆಯಿದೆ. ಅಲ್ಲಿನ ಹಲವು ಮಹಿಳೆಯರು ಬದುಕಿನಲ್ಲಿ ಹೊಸತನ ಮೂಡಿಸುವ ಹಬ್ಬದ ಭಾಗವಾಗಿ ಜಾನಪದ ಹಾಡನ್ನು ನಿರೂಪಿಸುವ ಮೂಲಕ ಮಹಿಳಾ ಅನನ್ಯತೆಯ ಚಹರೆಗಳನ್ನು ದಾಖಲಿಸಿದ್ದಾರೆ.

ನೇಮಿಚಂದ್ರ ಅವರ 'ಪೆರುವಿನ ಪವಿತ್ರಕಣಿವೆಯಲ್ಲಿ' ಎಂಬ ಕೃತಿಯಲ್ಲಿ ಮಹಿಳೆಯನ್ನು ಪ್ರತಿನಿಧಿಸುವ ಕಥನಶೈಲಿ ವಿಶಿಷ್ಟವಾಗಿ ಮೂಡಿಬಂದಿದೆ. ಪೆರು ನಾಡಿನ ಜಾನಪದ ಹಾಡೊಂದು ಸೂರ್ಯನನ್ನು ವಿಶ್ವದೇವನೆಂದು, ಬೆಳಕು ಮತ್ತು ಶಕ್ತಿಯಿಂದ ಈ ಭೂಮಿಯನ್ನು ಸೃಷ್ಟಿಸಿ ಕಾಯ್ದ ಭಗವಂತ ನೀನೆಂದು ಹೇಳುತ್ತದೆ. ವೀರಕೋಚ ನೀನು ಹೆಣ್ಣಾಗಿರು ಗಂಡಾಗಿರು ಜಗತ್ತಿಗೆ ಶಾಖ ಫಲವತ್ತತ್ತೆ ನೀಡಿದವನು ನೀನು ಎಂದು ನಂಬುವ ಪೆರುವಿನ ಮೂಲನಿವಾಸಿಗಳ ಮಹಿಳೆಯ ಸ್ಥಾನಮಾನಗಳನ್ನು, ಲಿಂಗ ಸಮಾನತೆಯನ್ನು ನಿರೂಪಿಸುವ ಹಾಡು ಹೀಗಿದೆ.

"ಜಗತ್ತಿನ ಸೃಷ್ಟಿಕರ್ತ

ನಿನ್ನನ್ನು ನೋಡಲು ಕಣ್ಣು ಕಾತರಿಸುತ್ತಿದೆ

ಕಾಲಾತೀತ ವೀರಕೋಚ

ನಿನ್ನನ್ನು ಮೀರಿದವರು ಭುವಿಯಲ್ಲಿಲ್ಲ

ವಿಶ್ವದ ಆದಿಯಿಂದ ಅಂತ್ಯದವರೆಗೆ ನೀನಿರುವೆ

ಹೆಣ್ಣು ಗಂಡನ್ನು ಸೃಷ್ಟಿಸಿದಾತ

ಅವರು ಶಾಂತಿಯಿಂದ ಜೀವಿಸುವಂತೆ ಕಾಯ್ದವ

ನಮ್ಮ ಈ ಪೂಜೆಯನ್ನು ಸ್ವೀಕರಿಸುವ ಸೃಷ್ಟಿಕರ್ತ"

(ನೇಮಿಚಂದ್ರ, ೨೦೧೭, ಪುಟ-೧೦೭)

ಪೆರುವಿನ ಹಬ್ಬದ ಆಚರಣೆಗಳಲ್ಲಿ ಹಾಡುವ ಹಾಡಿನಲ್ಲಿ ಸೂರ್ಯನನ್ನು ಆರಾಧಿಸುತ್ತಾರೆ. 'ವೀರಕೋಚ ನೀನು ಗಂಡಾಗಿರು ಹೆಣ್ಣಾಗಿರು' ಎಂಬುವ ಸಾಲುಗಳು ಲಿಂಗ ತಾರತಮ್ಯವನ್ನು ಬಿಂಬಿಸುತ್ತಿಲ್ಲ. ಎರಡನ್ನು ಸಾಮ್ಯವಾಗಿಯೇ ನೋಡುತ್ತಿದ್ದಾರೆ. 'ಹೆಣ್ಣು ಗಂಡನನ್ನು ಸೃಷ್ಟಿದವ' ಎನ್ನುವ ಸಾಲುಗಳು ದೇವರನ್ನು ಲಿಂಗಾತೀತವಾಗಿಸಿದ ಧರ್ಮವನ್ನು, ಸ್ತ್ರೀಸಮಾನತೆಯ ನಿಲುವನ್ನು ಈ ಕಥನವು ಪ್ರತಿನಿಧಿಸುತ್ತಿದೆ. ದೈವಿಕ ನಂಬಿಕೆಗಳಂತಹ ವಿಚಾರಗಳಲ್ಲಿ ಮಹಿಳೆಯರನ್ನು ಸಮಾನವಾಗಿ ಕಂಡಿದೆ. ಪೆರುವಿನ ಮೂಲ ನಿವಾಸಿಗಳಲ್ಲಿ ಮಹಿಳಾ ನಿಲುವುಗಳಿರುವ ಸಂಗತಿಗಳನ್ನು ಜಾನಪದ ಹಾಡಿನ ಮೂಲಕ ವ್ಯಕ್ತಪಡಿಸಿದ್ದಾರೆ.

ಪ್ರವಾಸ ಕಥನಗಳ ಕಥನಶೈಲಿಯಲ್ಲಿ ಮಹಿಳಾ ಸಂವೇದನೆಗಳ ಸಂಭಾಷಣೆಗಳು ಹೆಚ್ಚಾಗಿ ಕಂಡುಬರುತ್ತವೆ. ಇಂತಹ ಸಂಭಾಷಣೆಗಳನ್ನು ನಿರೂಪಿಸುವಾಗ ಇಡೀ ಮಹಿಳಾ ಸ್ಥಿತಿಗತಿಗಳನ್ನೇ ಪ್ರತಿನಿಧಿಸುವ ಸಂಗತಿಗಳನ್ನು ಸಂಭಾಷಣೆಗಳಲ್ಲಿ ನಿರೂಪಿಸಿರುತ್ತಾರೆ. ಶಮಂತ ಅವರ 'ಹಿಮದಗ್ನಿ' ಕೃತಿಯಲ್ಲಿ ಕಾಶ್ಮೀರದ ಕಣಿವೆಯಲ್ಲಿ ಭಾರತೀಯ ರಕ್ಷಣಾ ಪಡೆಯಿಂದಾಗಿ ಮಹಿಳೆಯೊಬ್ಬಳು ಅನುಭವಿಸುವ ಸಂಕಷ್ಟಗಳ ಕುರಿತು ಲೇಖಕಿ "ಹಣವಂತರ ಮಕ್ಕಳು ಪೆನ್ ಹಿಡಿದರೆ, ನಮ್ಮಂತಹ ಬಡವರ ಮಕ್ಕಳು ಕೋವಿ ಕೈಗೆತ್ತಿಕೊಂಡಿದ್ದಾರೆ" (ಶಮಂತ,೧೯೯೬, ಪುಟ-೫೪) ಎಂದು ಪ್ರಸ್ತಾಪಿಸುತ್ತಾರೆ. ಈ ವಾಕ್ಯವು ಒಂದು ಅಧ್ಯಾಯದ ಸಾರವನ್ನು ಒಂದೇ ಸಾಲಿನಲ್ಲಿ ಹಿಡಿದಿಡುವ ಲೇಖಕಿಯ ನಿರೂಪಣಾ ಜಾಣ್ಮೆಯನ್ನು ತೋರುತ್ತದೆ. ಪುರುಷ ಪ್ರಾಬಲ್ಯದ ವಿರುದ್ಧ ಕಾಶ್ಮೀರಿ ಮಹಿಳೆಯರ ಹೋರಾಟದ ಧ್ವನಿಗಳು ಎರಡು ರೀತಿಯಲ್ಲಿ ಕಾಣಿಸಿಕೊಳ್ಳುತ್ತವೆ ಹಳ್ಳಿಯ ಬಡ ಹೆಣ್ಣುಮಕ್ಕಳ ಕೂಗಿಗೆ ಸ್ಪಂದನೆಯಿಲ್ಲದೆ ಕೋವಿ ಹಿಡಿಯುವರು ಒಂದು ಕಡೆಯಾದರೆ. ನಗರದ ಶಿಕ್ಷಿತೆಯರ ಹೋರಾಟಗಳ ತೀವ್ರತೆಗಾಗಿ ಲೇಖನಿ ಹಿಡಿದವರು ಮತ್ತೊಂದು ಕಡೆ ಇದ್ದಾರೆ. ಎರಡು ದಾರಿಗಳು ಒಂದೇ ಆದರೂ ಆರ್ಥಿಕ ಅಸಮಾನತೆಯಿಂದಾಗಿ ಭಿನ್ನ ದಾರಿಗಳಿವೆ. ಅಲ್ಲಿನ ಕೋಮುಗಲಭೆ, ಯುದ್ಧದ ಪರಿಣಾಮದಿಂದಾಗಿ ಮಹಿಳೆಯರಿಗೆ ಅನೇಕ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಇದರಿಂದಾಗಿ ಹೋರಾಟದ ಅನಿವಾರ್ಯತೆಗೆ ಕಾಶ್ಮೀರಿ ಮಹಿಳೆಯರು ಇಳಿಯುತ್ತಾರೆ. ಪೆನ್ನು ಮತ್ತು ಗನ್‌ಗಳು ಮಹಿಳೆಯರಿಗೆ ಒದಗಿರುವ ಸಂಕಷ್ಟಗಳ ವಿರುದ್ಧ ಹೋರಾಟದ ತೀವ್ರತೆಯನ್ನು ನಿರೂಪಿಸುತ್ತದೆ.

ಬಹುತೇಕ ಲಂಡನ್ ಪ್ರವಾಸ ಕೈಗೊಂಡ ಪ್ರವಾಸಿಗರು ಮೊನಾಲೀಸಾಳ ವರ್ಣಚಿತ್ರವನ್ನು ನಿರೂಪಿಸಿರುವುದು ಕಂಡುಬರುತ್ತದೆ. ಇಂದಿರಾ ಶಿವಣ್ಣ ಅವರ 'ಹಾಲೆಂಡಿನಿಂದ ಲಂಡನ್‌ವರೆಗೆ'

ಕೃತಿಯಲ್ಲಿ "ಮೊನಾಲಿಸಾ ಅತ್ಯಂತ ಸುಂದರಿಯ ಚಿತ್ರವೂ ಅಲ್ಲ, ಮಧ್ಯ ವಯಸ್ಸಿನ ಸಾಧಾರಣ ಉಡುಪಿನ ಗಂಭೀರ ಮುಖಮುದ್ರೆಯ ಸಮಾನ್ಯ ನಿಲುಭಂಗಿಯ ಚಿತ್ರ. ಆದರೆ ಆ ಹೆಂಗಸಿನ ಕಣ್ಣುಗಳಲ್ಲಿ ಚಿಮ್ಮುವ ಜೀವಕಳೆ ಹಾಗೂ ತುಟಿಗಳಲ್ಲಿ ಮೂಡಿರುವ ಹುಸಿನಗೆ ನೋಡುಗರ ಮನಸ್ಸನ್ನು ಚಂಚಲಗೊಳಿಸುತ್ತದೆ. ಈ ಚಿತ್ರವನ್ನು ನೋಡಬೇಕಾದುದು ಕಣ್ಣುಗಳಿಂದ ಅಲ್ಲಿ ಮನಸ್ಸಿನ ಭಾವನೆಗಳಿಂದ ಮೊನಾಲಿಸಾಳನ್ನು ಸೃಷ್ಟಿಸಿ ಲಿಯೋನಾರ್ಡೊ ಕಲಾ ಪ್ರಪಂಚದಲ್ಲಿ ಅಮರತ್ವ ಪಡೆದ."(ಇಂದಿರಾ ಶಿವಣ್ಣ, ೨೦೧೧, ಪುಟ-೧೭೧) ಎಂದು ನಿರೂಪಿಸಿದ್ದಾರೆ. ಈ ನಿರೂಪಣೆಯು ತ್ರಿವೇಣಿ ಶಿವಕುಮಾರ್ ಅವರ 'ಭುವನದ ಬೆರಗು' ಕೃತಿಯಲ್ಲಿ ಭಿನ್ನವಾಗಿ ವ್ಯಕ್ತವಾಗಿದೆ. "ಅಗಲವಾದ ಹಣೆಯ ದುಂಡುಮುಖದ ಆ ನಡುವಯಸ್ಸಿನ ಮೊನಲೀಸಾಳಿಗಿಂತ ಸಾವಿರಪಟ್ಟು ಸುಂದರವಾಗಿದ್ದ ಚೆಲುವೆಯರು ಅವಳ ಅಕ್ಕ ಪಕ್ಕದಲ್ಲೇ ಇದ್ದರೂ ಇವಳಿಗ್ಯಾಕೆ ಇಂಥ ಪ್ರಸಿದ್ಧಿ ಸಿಕ್ಕಿತೋ ನಾನರಿಯೆ! ಇದು ಮೊನಾಲಿಸಾಳ ಅದೃಷ್ಟವಿರಬೇಕು"(ತ್ರಿವೇಣಿ ಶಿವಕುಮಾರ್,೨೦೧೨, ಪುಟ-೪೫) ಎಂದು ನಿರೂಪಿಸಿದ್ದಾರೆ. ಇಂದಿರಾ ಶಿವಣ್ಣ ಅವರ ನಿರೂಪಣಾ ವಿಧಾನದಲ್ಲಿ ಮಹಿಳೆಯ ಶ್ರೇಷ್ಠತನವನ್ನು ಒಂದಕ್ಕೆ ಮೀಸಲಾಗಿಸಿದ್ದರೆ, ತ್ರಿವೇಣಿ ಶಿವಕುಮಾರ್ ಅವರರಲ್ಲಿ ಆ ಶ್ರೇಷ್ಠತೆಯನ್ನು ಸಾಮಾನ್ಯ ಮಹಿಳೆಯರಲ್ಲಿ ಹುಡುಕುವ ಕಥನ ಶೈಲಿಯಿದೆ. ಭಾಷಿಕವಾಗಿಯೂ ಮೊನಲೀಸಾಳ ಸೌಂದರ್ಯವನ್ನು ಸಾಮಾನ್ಯ ಮಹಿಳೆಯರಲ್ಲಿ ಹುಡುಕುತ್ತಿದ್ದಾರೆ ಮತ್ತು ಇತರರಿಗೂ ಈ ಗೌರವ ಸಲ್ಲಬೇಕೆಂಬ ನಿಲುವುಗಳಿರುವುದು ಕಂಡುಬರುತ್ತದೆ.

ವಿದೇಶಿ ದಾಂಪತ್ಯದ ಕುರಿತು ಪ್ರೇಮಾಭಟ್ ಅವರ 'ಪಶ್ಚಿಮದತ್ತ ಪಯಣ' ಕೃತಿಯಲ್ಲಿ ನಿರೂಪಿಸುತ್ತಾರೆ. ಲಂಡನ್‌ನಲ್ಲಿ ದಂಪತಿಗಳ ಜಗಳ ಮಾಡಿ ನಂತರ ಒಂದಾಗಿರುವುದನ್ನು ಗಮನಿಸಿದ ಲೇಖಕಿಗೆ ಸರ್ವಜ್ಞನ ವಚನವನ್ನು ನಿರೂಪಿಸುವ ಮೂಲಕ ವಿದೇಶಿ ಮಹಿಳೆಯ ಅನನ್ಯತೆಯನ್ನು ಪ್ರಸ್ತಾಪಿಸುತ್ತಾರೆ.

"ಬೆಚ್ಚನೆಯ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ

ಇಚ್ಛೆಯನರಿವ ಸತಿಯಾಗಿ ಸ್ವರ್ಗಕ್ಕೆ

ಕಿಚ್ಚು ಹಚ್ಚೆಂದ ಸರ್ವಜ್ಞ" (ಪ್ರೇಮಾಭಟ್, ೨೦೧೦, ಪುಟ-೯೦)

ವಿದೇಶಿ ಮಹಿಳೆ ಸಾರ್ವಜನಿಕ ಸ್ಥಳದಲ್ಲಿ ಗಂಡನ ಮೇಲೆ ದರ್ಪ ತೋರಿದ್ದನ್ನು ನೋಡಿ ಲೇಖಕಿ ಅಚ್ಚರಿ ಪಡುತ್ತಾರೆ. ಭಾರತದಲ್ಲಿ ಸಾಮಾನ್ಯವಾಗಿ ಕಾಣಬಹುದಾದ ದೃಶ್ಯವನ್ನು ವಿದೇಶದಲ್ಲಿ ಕಂಡಾಗ, ಆಕೆಯ ಸಿಟ್ಟಿನಲ್ಲಿ ವ್ಯಕ್ತವಾದ ಭಾಷೆ, ಕೋಪ-ತಾಪಗಳು, ಆನಂತರ ಇಬ್ಬರು ಒಂದಾದ್ದನ್ನು ಕಂಡು ಲೇಖಕಿ ಸರ್ವಜ್ಞನ ವಚನದ ಮೂಲಕ ದಾಖಲಿಸುತ್ತಾರೆ.

ಸುಧಾ ಚಿದಾನಂದಗೌಡ ಅವರ 'ಸಮನ್ವಿತ ಗೋಮಾಂತ' ಕೃತಿಯಲ್ಲಿ ಗೋವಾದ

ಮಹಿಳಾ ಅನನ್ಯತೆಯ ಚಹರೆಗಳನ್ನು ಗುರುತಿಸುವ ನಿರೂಪಣೆಗಳು ಹೀಗಿವೆ.

"ಆಗ ಕೇಳಿಸಿತು ಮೆಲ್ಲಗೆ. ಜೋಗುಳದ ಹಾಡು

ಆರರೆ... ಎಂದು ತಿರುಗಿ ನೋಡಿದರೆ, ಬಿಚ್ಚಿ ಬೀಳುವಂತಾಯ್ತು. ಹೆದರಿಕೆಯಾಗುವಂತೆ ಕೂದಲು ಹರಡಿಕೊಂಡಿರುವ ವಯಸ್ಸಾದ ಹೆಣ್ಣುಮಗಳು. ಅವಳ ಕೈಯಲ್ಲಿ-ಆರು ತಿಂಗಳಿರಬಹುದಾದ ಮಗು. ಮೆಲ್ಲಗೆ ಕುಸುಕುಸು ಅಳುತ್ತಿತ್ತು. ಅವಳು ಅದನ್ನು ಸುಮ್ಮನಿರಿಸಲು ಪ್ರಯತ್ನಿಸುತ್ತಿದ್ದಳು. ಅವಳುಟ್ಟಿದ್ದ ಸೀರೆ ಸ್ವಲ್ಪ ದಪ್ಪವಾಗಿ, ಬೆಚ್ಚಗಿರುವಂತೆಯೇ ಇತ್ತು. ಆದರೂ ಸಂಜೆಯ ಕುಳಿರ್ಗಾಳಿಗೆ ಮಗುವನ್ನು ಇನ್ನಷ್ಟು ಬೆಚ್ಚಗಿರಿಸಬೇಕು ಎನಿಸಿತು ನನಗೆ. ಅದನ್ನು ಅವಳಿಗೆ ಹೇಳಿಯೂಬಿಟ್ಟೆ."(ಸುಧಾ ಚಿದಾನಂದಗೌಡ, ೨೦೧೭, ಪುಟ-೪೫) ಎನ್ನುವ ನಿರೂಪಣೆಯಲ್ಲಿ ಗೋವಾದ ಮಹಿಳೆಯರನ್ನು ವ್ಯವಹಾರದ ಸರಕುಗಳಂತೆ ಕಾಣುವ ಕಥೆಯನ್ನು ಈ ನಿರೂಪಣೆಯು ಬಿಚ್ಚಿಡುತ್ತದೆ. ಅವಿವಾಹಿತರಾಗಿ ಮಕ್ಕಳನ್ನು ಪಡೆದು, ಯೌವ್ವನ ಮುಗಿದ ಬಳಿಕ ಆ ಹೆಣ್ಣುಮಕ್ಕಳು ಪಡುವ ಪಾಡಿನ ಯಾತನೆಯನ್ನು ಹೇಳುತ್ತದೆ. ವಯಸ್ಸಾದ ಹೆಣ್ಣುಮಗಳು, ಆರು ತಿಂಗಳ ಮಗು, ಕುಸು ಕುಸು ಅಳು, ಸಂಜೆಯ ಕುಳಿರ್ಗಾಳಿ ಎನ್ನುವ ಪದದಲ್ಲಿ ಆಕೆಯ ನೋವಿನ ಕಥೆಯ ಆರಂಭಕ್ಕೆ ಮುನ್ನುಡಿಯನ್ನು ಬರೆಯುವ ನಿರೂಪಣೆಯಾಗಿ ಗಮನ ಸೆಳೆಯುತ್ತವೆ.

ಎಚ್.ಎಸ್.ಅನುಪಮಾ ಅವರ ಕಥನದಲ್ಲಿ ಸಮಾಜದ ಹಂಚಿನಲ್ಲಿ ಜೀವಿಸುವ ಸಮುದಾಯಗಳ ಜೀವಂತಿಕೆಯನ್ನು, ಮಾನವೀಯತೆಯನ್ನು, ಅನುಭವಿಸುವ ನೋವುಗಳನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತಾರೆ. ಜೇರುಸಲೇಂನ ಮಹಿಳೆಯರು 'ಮೊದಲು ಏಕಾಂಗಿಯಾಗಿ ಅಳುತ್ತಿದ್ದೆವು. ಈಗ ಸಾಮೂಹಿಕವಾಗಿ ದುಃಖಿಸುವುದು ಕಲಿತ್ತಿದ್ದೇವೆ' ಎನ್ನುವ ನಿರೂಪಣೆಯ ಒಳಗೆ ಅಲ್ಲಿನ ಮಹಿಳೆಯರ ಎದುರಿಸುತ್ತಿರುವ ಸಮಸ್ಯೆಗಳ ಹಿಂದೆ ನೋವಿನ ಸಂಗತಿಗಳು ವ್ಯಕ್ತವಾಗಿರುವುದನ್ನು ಹೇಳುತ್ತಾರೆ. ಈ ಕುರಿತು ಎಚ್.ಎಸ್.ಅನುಪಮಾ ಅವರು "೧೯೮೮ರ ಜನವರಿಯಲ್ಲಿ ಜೆರುಸಲೇಂನ ಇಸ್ರೇಲಿ ಮಹಿಳೆಯರಿಂದ ಶುರುವಾದ 'ವಿಮೆನ್ ಇನ್ ಬ್ಲಾಕ್' ಕಪ್ಪು ಉಡುಗೆಯ ಮಹಿಳೆಯರ ಯುದ್ಧ ವಿರೋಧಿ ಸಂಘಟನೆ. ಅರ್ಜೆಂಟೀನಾದ ಅಹಿಂಸಾತ್ಮಕ ಪ್ರತಿರೋಧದಿಂದ ಸ್ಫೂರ್ತಿ ಪಡೆದ ಇಸ್ರೇಲಿ ಮಹಿಳೆಯರು ಪ್ರತಿ ಶುಕ್ರವಾರ ಜೆರುಸಲೇಂನ ಹಗಾರ್ ಸ್ಕ್ವೇರ್‌ನಲ್ಲಿ ಮಧ್ಯಾಹ್ನ ಒಂದರಿಂದ ಎರಡರ ತನಕ 'ಸ್ಟಾಪ್ ಅಕ್ಯುಪೆಷನ್' ಎಂಬ ಪ್ಲಕಾರ್ಡ್ ಹಿಡಿದು ಮೌನವಾಗಿ ನಿಂತರು. ಇಸ್ರೇಲಿನ ಇತರ ನಗರಗಳಲ್ಲೂ ವಾರಕೊಮ್ಮೆ ಮಹಿಳೆಯರು ನಗರದ ಚೌಕಗಳಲ್ಲಿ, ಹೆದ್ದಾರಿ ಜಂಕ್ಷನ್‌ಗಳಲ್ಲಿ, ಮೌನವಾಗಿ ಕಪ್ಪುಬಟ್ಟೆ ಧರಿಸಿ ನಿಂತು, ಜನರ ಗಮನ ಸೆಳೆದರು. ೧೯೯೩ರ ಓಸ್ಲೋ ಒಪ್ಪಂದದ ಬಳಿಕ ಇದು ನಿಂತುಹೋಯಿತು."(ಅನುಪಮಾ.ಎಚ್.ಎಸ್.,೨೦೧೭, ಪುಟ-೬೩) ಎಂದಿದ್ದಾರೆ. ಈ ನಿರೂಪಣೆಯು ಪುರುಷ ದಬ್ಬಾಳಿಕೆಯ ವಿರುದ್ಧ ಮಹಿಳೆಯರು ಚಳುವಳಿಯನ್ನೇ ರೂಪಿಸಿದ ಕಥನವಿದೆ. ಅನೇಕ ವರ್ಷಗಳ ಕಾಲ ಏಕಾಂಗಿಯಾಗಿ ಅನುಭವಿಸಿದ ನೋವುಗಳು ನಂತರದಲ್ಲಿ

ಸಾಮೂಹಿಕವಾದವು. ಇದರಿಂದ ಮಹಿಳಾ ರೂಪುರೇಷೆಗಳು ಗಟ್ಟಿಗೊಂಡವು. ಹಲವು ಕಡೆ ಶಾಂತಿಯುತ ಚಳುವಳಿ ನಡೆಸಿ ಯಶಸ್ವಿಯಾದ ಮಹಿಳಾ ಸಂಘಟನೆಯ ಹೋರಾಟದ ಮಾದರಿಯನ್ನು ಲೇಖಕಿ ಅನನ್ಯವಾಗಿಸಿದ್ದಾರೆ.

ವಿಜಯಾದಬ್ಬೆ ಅವರು ಲೇಖಕಿಯಾಗಿ ಹೆಸರುಗಳಿಸಿದವರು. ಹೀಗಾಗಿ ಮಹಿಳೆಯರಿಗೆ ಇರಬಹುದಾದ ಹೊಸ ಸವಾಲುಗಳನ್ನು ತಮ್ಮ ಪ್ರವಾಸ ಕಥನದಲ್ಲಿ ನಿರೂಪಿಸುತ್ತಾರೆ. 'ಒರಿಸ್ಸಾ ಲೇಖಕಾ ಪರಿಷತ್'ಅನ್ನು ಪ್ರಾರಂಭಿಸಿದ ಒರಿಸ್ಸಾ ಲೇಖಕಿಯರು ರಾಜ್ಯದ ಹಲವು ಕಡೆ ಇದರ ಶಾಖೆಗಳನ್ನು ಪ್ರಾರಂಭಿಸಿದ್ದು ಸಮ್ಮೇಳನಗಳನ್ನು ಗೋಷ್ಠಿಗಳನ್ನು ಏರ್ಪಡಿಸಿ ಪ್ರಕಟಣೆಗಳನ್ನು ಮಾಡಿ ಲೇಖಕಿಯರಿಗೆ ಉತ್ತಮ ವೇದಿಕೆಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಮಹಿಳೆಯರ ಬಗೆಗೆ ನಿರ್ಲಕ್ಷ್ಯವನ್ನು ಹೋಗಲಾಡಿಸುವ ಮೂಲಕ ಹೊಸಕಾಲ-ಹೊಸಸವಾಲುಗಳಿಗೆ ಸಿದ್ಧರಾಗುವಂತೆ ಅವರ ವಿಚಾರಶಕ್ತಿಯನ್ನು ಹೆಚ್ಚಿಸುವಂತೆ ಮಾಡುವುದು ರಾಜ್ಯಗಳಲ್ಲಿನ ಲೇಖಕಿಯರ ಕರ್ತವ್ಯ ಎನ್ನುತ್ತಾರೆ. ಆ ಮೂಲಕ ಮಹಿಳಾ ಸಂವೇದನೆಯನ್ನು, ಮಹಿಳಾ ಜಾಗೃತಿಯನ್ನು ಬಯಸುತ್ತಾರೆ. ಅಲ್ಲದೇ 'ಮಹಿಳೆಯರು ಅಡುಗೆ ಮನೆಯ ಕಿಟಕಿಯಿಂದಷ್ಟೇ ಆಕಾಶ ನೋಡುವುದು ತಪ್ಪಬೇಕು' ಎನ್ನುತ್ತಾರೆ. ಮಹಿಳೆಯರು ಸೀಮಿತ ಬದುಕಿನಿಂದ ಹೊರಬಂದು ಸಮಾಜದಲ್ಲಿ ಆತಂಕ ತುಡಿತಗಳನ್ನು ನಿರ್ಭಯವಾಗಿ ಎದುರಿಸುವ ನಿಟ್ಟಿನಲ್ಲಿ ಪರಿಷತ್ತುಗಳು ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂಬುವ ಮೂಲಕ ಮಹಿಳಾ ಅನನ್ಯತೆಯ ಚಹರೆಗಳ ಕುರಿತು ಅಭಿಪ್ರಾಯಪಟ್ಟಿದ್ದಾರೆ.

ಇಂದಿರಾ ಶಿವಣ್ಣ ಅವರ ಇಂಗ್ಲೆಂಡಿನ ಪ್ರವಾಸದಲ್ಲಿ ಸಾಮಾಜಿಕ ಜನಜೀವನದಲ್ಲಿ ವ್ಯಕ್ತವಾದ ಮಹಿಳಾ ಸಂವೇದನೆಗಳ ಬಗ್ಗೆ ತಮ್ಮ 'ಹಾಲೆಂಡಿನಿಂದ ಲಂಡನ್‌ವರೆಗೆ' ಕೃತಿಯಲ್ಲಿ ಪರಿಚಯಿಸಿದ್ದಾರೆ. ಮಾನವ ಹಕ್ಕುಗಳು ಬಗೆಗೆ, ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ಮಾನವೀಯ ಗುಣಗಳ ಬಗ್ಗೆ ಪರಿಣಾಮಕಾರಿಯಾಗಿ ನಿರೂಪಿಸುತ್ತಾರೆ. ಮುಂದುವರೆದ ದೇಶಗಳಲ್ಲಿ ಗಂಡು ಹೆಣ್ಣಿಗೆ ಮುಕ್ತವಾದ ಅಭಿವ್ಯಕ್ತಿ, ಬೃಹತ್ ನಗರಗಳಲ್ಲಿ ಅವಿವಾಹಿತರು ನಡೆಸುವ 'ಲೀವಿಂಗ್ ಟುಗೆದರ್'ನಂತಹ ಸಂಬಂಧಗಳು, ಗರ್ಭಪಾತವಾಗುವ ಸಂಗತಿಗಳು ಸಾಮಾನ್ಯವಾದ ಬಗ್ಗೆ ತಮ್ಮ ಕಥನದಲ್ಲಿ ನಿರೂಪಿಸುತ್ತಾರೆ. ಈ ಅಭಿವ್ಯಕ್ತಿ ಸ್ವಾತಂತ್ರ್ಯಗಳಿಂದಾಗಿ ವಿದೇಶಿ ಮಹಿಳೆಯರು ಮದುವೆಯ ಸಂಬಂಧಗಳನ್ನು ನಿರಾಕರಿಸುವ ಮನೋಭಾವ ಹೊಂದಿದ್ದಾರೆ. ಈ ಕುರಿತು ಲೇಖಕಿ ಮಹಿಳಾ ಅನನ್ಯತೆಯನ್ನು ಎತ್ತಿ ಹಿಡಿಯುವುದು ಹೀಗೆ. "ಇಂದಿನ ಹೆಣ್ಣು ಹೋರಾಟದ ಬದುಕು ಅನಿವಾರ್ಯವಾಗಿದೆ. ಅವಳದೆ ಆದ ಅಸ್ತಿತ್ವಕ್ಕಾಗಿ ಹೋರಾಟ ಮಾಡುತ್ತಾಳೆ. ಮನೆಯ ನಾಲ್ಕು ಗೋಡೆಗಳಿಂದ ಒಳ ನುಗ್ಗಿ ತನ್ನ ಕೋಣೆಯೇ ಅವಳ ಮನೆಯಾಗುತ್ತಾ ಬಂದಿದೆ. ಗಂಡ ಸಂಸಾರ ಮಕ್ಕಳ ಹೊಣೆ ಅವಳಿಗೆ ಬೇಕಿಲ್ಲ. ಕಲಿತ ಹೆಣ್ಣು ಗಂಡಿಗೆ ಸಮನಾಗಿ ಇನ್ನೂ ಒಂದು ಹೆಜ್ಜೆ ಮುಂದೆ ಪ್ರಗತಿ ಸಾಧಿಸುತ್ತಾಳೆ. ಆದರೆ ಪ್ರಕೃತಿ ಅವಳಿಗಾಗಿಟ್ಟ ಕಡಿವಾಣ ಹೊರುವ ಹೆರುವ ಕ್ರಿಯೆ." (ಇಂದಿರಾ ಶಿವಣ್ಣ, ೨೦೧೨, ಪುಟ-

೨೧೭) ಲೇಖಕಿಯ ಈ ನಿರೂಪಣೆಗಳಲ್ಲಿ ಭವಿಷ್ಯದ ಮಹಿಳೆ ಸಾಧಿಸಬಹುದಾದ್ದನ್ನು ಹೇಳುತ್ತಿದ್ದಾರೆ. ಆದರೆ ಮಹಿಳೆಯರ ಈ ದಿಟ್ಟ ಹೆಜ್ಜೆಗಳಿಂದಾಗಿ ಬೆಲೆಯಿಲ್ಲದಂತಹ ಸಂಬಂಧಗಳು ಹುಟ್ಟಿಕೊಳ್ಳುವ ಆತಂಕವು ಸಹ ವ್ಯಕ್ತವಾಗುತ್ತದೆ. ಈ ಕುರಿತು ನೀಳಾದೇವಿ ಅವರು "ಅಲ್ಲಲ್ಲೇ ತಂದೆ, ಅಲ್ಲಲ್ಲೇ ತಾಯಿ, ಅಲ್ಲಲ್ಲೇ ಸವತಿ ಮಕ್ಕಳು, ಸ್ವಂತ ಮಕ್ಕಳು, ಹುಟ್ಟಿಸಿದ ತಾಯಿ ತಂದೆ ಈ ಪೋಟೋದಲ್ಲಿ ಇಂದಿನ ಮಟ್ಟಿಗೆ ಒಟ್ಟಿಗೆ ಇದ್ದರೂ ಇದರಲ್ಲಿ ಎಷ್ಟು 'ತಬ್ಬಲಿ'ಗಳೋ! ಈ ಮಕ್ಕಳಿಗೆ ತಂದೆ ಇದ್ದರೆ, ತಾಯಿ ಪರಕೀಯ. ತಾಯಿ ಇದ್ದರೆ ತಂದೆ ಪರಕೀಯ! ನೈಸರ್ಗಿಕವಾಗಿ ಹೆತ್ತ ತಾಯಿ ಈ ದೇಶದಲ್ಲಿ 'ಬಯಲಾಜಿಕಲ್ ಮದರ್' ಮಾತ್ರ ಆಗುವುದುಂಟು! ಈಗ ಮನೆಯಲ್ಲಿ ಇಷ್ಟು ಜನರ ಗೋಜಲು ಉಂಡೆಯನ್ನು ಒಂದು ಕಡೆ ಕಂಡಾಗ, ಈ ಸಿಕ್ಕು ಬಿಡಿಸುತ್ತಾ ಸಂಬಂಧಗಳನ್ನು ಬೇರೆ ಬೇರೆಯಾಗಿ ಅರಿಸಿ, ಎತ್ತಿಹಿಡಿಯಲು ಸಾಧ್ಯವಿಲ್ಲ. ನಿಮ್ಮ ಕೈಗೊಂದು ಕಾಗದ, ಪೆನ್ಸಿಲ್ ಕೊಟ್ಟರೆ ವಂಶಾವಳಿ ಬರೆಯುತ್ತಾ ಹೋದರೆ ಮಾತ್ರಾ ಈ ಸಂಬಂಧಗಳ ಸ್ಪಷ್ಟ ಚಿತ್ರಣ ಅರಿವಾಗುವುದು."(ನೀಳಾದೇವಿ, ೧೯೮೫, ಪುಟ-೧೧೬) ಎಂದಿದ್ದಾರೆ. ಅಮೇರಿಕಾದಲ್ಲಿ ಇಂತಹ ಕುಟುಂಬಗಳ ಇಂತಹ ಸಂಬಂಧಗಳ ಕುರಿತು ಲೇಖಕಿ ಒಂದೇ ತಕ್ಕಡಿಯಲ್ಲಿ ತೂಗುವಂತೆ ಕಾಣುವ ಬಂಧಗಳೆಂದು ಅಭಿಪ್ರಾಯಪಡುತ್ತಾರೆ.

ಅಲ್ಲದೇ ಗಾದೆ ಮಾತುಗಳು, ಕವನಗಳು, ಜಾನಪದ ಗೀತೆಗಳು, ಲಾವಣಿಗಳು, ವಚನಗಳು ಕೀರ್ತನೆಗಳು ಸಹ ಅಲ್ಲಲ್ಲಿ ಕಂಡುಬರುತ್ತವೆ. ಇವುಗಳು ಸಹ ಮಹಿಳಾ ಸಂವೇದನೆಯನ್ನು ಹೇಳುವಾಗ ಉದಾಹರಿಸಿದ್ದಾರೆ. ಕುವೆಂಪು, ಬೇಂದ್ರೆ, ಸಿದ್ದಲಿಂಗಯ್ಯ, ಡಿ.ವಿ.ಗುಂಡಪ್ಪ, ಗೋಪಾಲಕೃಷ್ಣ ಅಡಿಗ, ಬೇಂದ್ರೆ, ಎಸ್.ಜಿ.ಸಿದ್ಧರಾಮಯ್ಯ ಮುಂತಾದವರ ಕವನಗಳನ್ನು ಮಹಿಳಾ ಪ್ರವಾಸ ಕಥನಗಳ ಕಥನಶೈಲಿಯಲ್ಲಿ ಒಳಗೊಂಡಿವೆ. ಪ್ರೇಮಾಭಟ್ ಅವರು 'ಪಶ್ಚಿಮದತ್ತ ಪಯಣ' ಕೃತಿಯಲ್ಲಿ ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ದ ಪದ್ಯಗಳಾದ 'ಮನೆಯ ಸಂಸಾರದಲ್ಲಿ ವಾಸವಿರುತಾಗಾಗ', 'ಜೀವನ ಪರಿಪೂರ್ಣ ದರ್ಶನವದೊಂದಿಹುದು', 'ಬೆಳ್ದಿಂಗಳ ಮನೆಯಿರಲು', ಸಾ.ಶಿ.ಮರುಳಯ್ಯ ಅವರ 'ಸುಮಸುಂದರ ತರುಲತೆಗಳ ಬೃಂದಾವನ ಲೀಲೆ', ಕೆ.ಎಸ್.ಎನ್. ಅವರ 'ನವಿಲೂರಿನೊಳಗೆ ನೀನೆ ಬಲು ಚಲುವೆ', ದೊಡ್ಡರಂಗೇಗೌಡ ಅವರ 'ತೇರನೇರಿ ಅಂಬರದಾಗೆ ನೇಸರ ನಗುತಾನೆ', ಜಿ.ಎಸ್.ಶಿವರುದ್ರಪ್ಪನವರ 'ಎದೆತುಂಬಿ ಹಾಡುವೆನು' ಕವನಗಳನ್ನು ಬಳಸಿ ನಿರೂಪಿಸಿರುವುದು ಕಂಡುಬರುತ್ತವೆ. ಇಂದಿರಾ ಶಿವಣ್ಣ ಅವರ ಬರ್ನ್ಸ್‌ನ ಕವನ 'ಮೈ ಲವ್ ಲೈಕ್ ಎ ರೆಡ್ ರೋಸ್', 'ಸುರಸ್ವಪ್ನವಿದ್ದ ಪ್ರತಿಬಿಂಬ ಬಿದ್ದ ಉದ್ಬುದ್ಧ ಶುದ್ಧ ನೀರೆ', ಅಂಡಮಾನಿನ ನಿಸರ್ಗಧಾಮ, ಪಕ್ಷಿಗಳ ಕಲರವ ನೋಡಿದ ಎಚ್.ಎಸ್.ಅನುಪಮಾ ಅವರು ಕುವೆಂಪು ಅವರ ಕಾಜಾಣ ಗೀತೆಯನ್ನು, ವೆರಾ ನಿಕೋಲಯೆವಾ ಫಿಗ್ನರ್ ಅವರ 'ಶ್ರೇಷ್ಠರಲ್ಲಿ ಶ್ರೇಷ್ಠರು ನೆಲ ಕಚ್ಚಿದರು' ಎನ್ನುವ ಕವನವನ್ನು ನಿರೂಪಿಸಿದ್ದಾರೆ. ತೇಜಸ್ವಿನಿ ಬಿ.ಯಕ್ಕುಂಡಿಮಠ ಅವರು ತಾನಾಷಾ ಮತ್ತು ಔರಂಗಜೇಬನ ಯುದ್ಧದ ಸನ್ನಿವೇಶವನ್ನು ಬಿಂಬಿಸುವ ಅಮಿತಾಭ್‌ರ

ಸಿನಿಮಾದ ಏಕ್ ಗುಲಶನ್ ಥಾ ಜಲವಾನುಮಾ ಇಸ್ ಜಗಹ' ಎಂಬ ಸಾಲುಗಳನ್ನು ದಾಖಲಿಸಿದ್ದಾರೆ. ಬಿ.ಎನ್.ಸುಮಿತ್ರಾಬಾಯಿ ಅವರು ಅಸ್ಸಾಂ ಲೇಖಕರ ಭೂಫೆನ್ ಹಾಜಾರಿಕಾರ 'ನೀ ಬರೆಯದೆ ಬಿಟ್ಟ ಕಥೆಗಳನ್ನು', 'ಮುಳುಗುವ ಸೂರ್ಯನ ಕನಸುಗಳೊಂದಿಗೆ ಕೆಂಪಾಗಿ', ಪಿ.ಬಿ.ಶೆಲ್ಲಿಯವರ ನಥಿಂಗ್ ಬಿಸೈಡ್ ದ ರಿಮೈನ್ಸ್, ರೌಂಡ್ ದಿ ಡಿಕೆ', ಅಜಿತ್ ಬರುವಾ ಅವರ 'ಮೌನ ದನಿಯ ಕಣ್ಣಿನ ಹೊನ್ನ ಹನಿಗಳು', ಮುಂತಾದ ಕವನಗಳನ್ನು ಕನ್ನಡದಲ್ಲಿ ಅನುವಾದಿಸಿ ತಮ್ಮ ಕಥನಶೈಲಿಯಲ್ಲಿ ಬಳಸಿಕೊಳ್ಳುವ ಮೂಲಕ ವಿಶಿಷ್ಟಗೊಳಿಸಿದ್ದಾರೆ. ಶೈಲಜಾ ಎನ್.ಬಾಗೇವಾಡಿ ಅವರು ಬಸವಣ್ಣನವರ 'ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ', 'ಉಳ್ಳವರು ಶಿವಾಲಯ ಮಾಡುವರು', ಅಕ್ಕ ಮಹಾದೇವಿಯವರ 'ಕಾಯ ಕರ್ರನೆ ಕಂದಿದರೇನಯ್ಯ? ಕಾಯ ಮಿರ್ರನೆ ಮಿಂಚಿದರೇನಯ್ಯ?' ಮತ್ತು ಕುವೆಂಪು ಅವರ ಆರೋ ತೆಕ್ಕನೆ ತುಡುಕಿ ಬಾಯ್ ಮುಚ್ಚಿ ಹಿಡಿದಂತೆ' ಕವನಗಳು ಕೃತಿಯಲ್ಲಿ ಕಂಡುಬರುತ್ತದೆ. ಅಲ್ಲದೇ ತಮ್ಮ ಪ್ರವಾಸ ಕಥನದ ಮುಕ್ತಾಯದ ನಿರೂಪಣೆಯನ್ನು 'ಬಾಗಿಲೋಳು ಕೈಮುಗಿದು ಒಳಗೆ ಬಾ ಯಾತ್ರಿಕನೆ' ಎಂಬ ಕುವೆಂಪು ಕವನದ ಸಾಲುಗಳಿಂದ ಕೊನೆಗೊಳಿಸುತ್ತಾರೆ. ಈ ವೈವಿಧ್ಯಮಯ ನಿರೂಪಣೆಗಳು ಮಹಿಳಾ ಪ್ರವಾಸಿಗರಿಗೆ ಮಾತ್ರ ಅನ್ವಯಿಸದೇ ಪುರುಷ ಪ್ರವಾಸಿಗರು ಸಹ ಬಳಸಿಕೊಂಡಿದ್ದಾರೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಜಾನಪದ ಧಾಟಿಯ 'ಈ ಪ್ರಾಯದಾಗ ಕುಡುಕೈಯ, ಒಲ್ಲೆ ಅನಬೇಡ ಒಲ್ಲೆ ಅನಬೇಡ', ಓಲೆಕಾರ ನಿನಗೆ ಒಳ್ಳೆಯ ಹೆಂಡತಿ ಯಾಕೊ', ವಿ.ಸೀತಾರಾಮಯ್ಯ ಅವರು 'ಪದ್ಮಗಂಧಿ ಶಿವಂ ವಾರಿ ಸ್ವಾದು ಶೀತಂ ಅನಾಮಯಂ' ಎನ್ನುವ ಶ್ಲೋಕವನ್ನು, ಹೊ.ಶ್ರೀನಿವಾಸಯ್ಯ ಅವರು ರವೀಂದ್ರನಾಥ ಟಾಗೂರ್ ಅವರ 'ಕೀರ್ತಿ ಕನ್ಯೆ ಇನ್ನು ಕುವರಿಯಾಗಿಯೇ ಇದ್ದಾಳೆ', ಸರ್ವಜ್ಞ ಕವಿಯ 'ನಡೆವುದೊಂದೆ ಭೂಮಿ ಕುಡಿವುದೊಂದೇ ನೀರು', ಬಸವಣ್ಣನ 'ಸತ್ಯವ ನುಡಿಸುವುದೇ ದೇವಲೋಕ', ಗಾಂಧೀಜಿಯವರ 'ಸ್ವಾತಂತ್ರ್ಯವೇ ಶ್ರೇಷ್ಠವಲ್ಲ ವ್ಯಕ್ತಿ ಸ್ವಾತಂತ್ರ್ಯಕ್ಕೆ ನಾನು ಬೆಲೆಕೊಡುತ್ತೇನೆ.' ಇದಲ್ಲದೇ ಸುಭಾಷಿತಗಳು, ಅರಿಸ್ಟಾಟಲ್, ಕನ್‌ಫ್ಯೂಷಿಯಸ್, ಗಯಟೆಯವರ ವ್ಯಾಖ್ಯೆಗಳನ್ನು ಅಧ್ಯಾಯದ ಪೂರ್ವದಲ್ಲಿ ನಿರೂಪಿಸಿದ್ದಾರೆ. ಬಸವರಾಜ ಕಟ್ಟಿಮನಿಯವರು ಲೆನಿನ್ ಗ್ರಾದಿಯವರ 'ಕಂಡೆ ನಾನಿಂದು, ಸ್ವಪ್ನ ಲೋಕದ ನಗರ: ಕ್ರಾಂತಿಯ ತಾಯಿನಗರ', ರಶಿಯಾದ ಕವಿ ಯಾಂಕಾ ಕುಪಾಲಾ ಅವರ 'ಜವುಗಿನಲ್ಲಿ ಅಡವಿಯಲ್ಲಿ, ಅಲೆಯುತ್ತಿರುಹ ಜನರು;' ಕವನವನ್ನು ಪ್ರವಾಸ ಕಥನದ ನಿರೂಪಣೆಯಲ್ಲಿ ಬಳಸಿಕೊಂಡಿದ್ದಾರೆ. ಇಲ್ಲಿನ ಕವನ, ವಚನ, ಸುಭಾಷಿತ, ಜಾನಪದದಂತಹ ಹಾಡುಗಳ ಬಳಕೆಯೂ ಕೆಲವು ನೇರವಾಗಿ, ಕೆಲವು ಪರೋಕ್ಷವಾಗಿಯೂ ಮಹಿಳೆಯರನ್ನು ಪ್ರತಿನಿಧಿಸುತ್ತವೆ. ಪ್ರವಾಸ ಕಥನದ ನಿರೂಪಣಾ ಶೈಲಿಯಲ್ಲಿ ಬಳಕೆಯಾಗುತ್ತಿರುವುದನ್ನು ಕಂಡಾಗ ಪ್ರವಾಸಿಗರ ಬರಹದ ಶೈಲಿಯಲ್ಲಿ ಇವುಗಳು ಮುಖ್ಯ ಪಾತ್ರವಹಿಸುತ್ತವೆ.

ಮಹಿಳಾ ಪ್ರವಾಸ ಕಥನಗಳಲ್ಲಿ ಗಾದೆ ಮಾತುಗಳು, ನುಡಿಗಟ್ಟುಗಳು, ಒಗಟುಗಳು ಮುಂತಾದವು ಮಹಿಳೆಯರನ್ನು ಪ್ರತಿನಿಧಿಸುವುದು ವಿರಳವಾಗಿ ಕಂಡುಬಂದಿವೆ. ಉಷಾ ಪಿ.ರೈ ಅವರು 'ಲಕ್ಷದ್ವೀಪಕ್ಕೆ ಲಗ್ಗೆ ಇಟ್ಟಾಗ' ಕೃತಿಯಲ್ಲಿ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎಂಬ ಗಾದೆ

ಮಾತು 'ಮಿನಿಕ್ಕೊ' ದ್ವೀಪದಲ್ಲಿ ತದ್ವಿರುದ್ಧವಾಗಿದೆ. ಮದುವೆ ನಂತರದಲ್ಲಿ ಗಂಡನ ಮನೆಗೆ ಹೋಗುವ ಬದಲಾಗಿ, ಗಂಡನೇ ಹೆಂಡತಿಯ ಮನೆಯಲ್ಲಿ ಬಂದು ಇರುವ ಸಂಪ್ರದಾಯವಿದೆ. ಅವರಿಗೆ ಮಕ್ಕಳಾಗಿ ಸ್ವತಂತ್ರರಾಗುವವರೆಗೂ ಹೆಣ್ಣಿನ ತವರು ಮನೆಯ ಖರ್ಚು ವೆಚ್ಚಗಳನ್ನು ಬರಿಸಬೇಕಾಗುತ್ತದೆ. ಚೀನಾದ ರಾಣಿ ಡೊವೆಂಜರ್ ಚಿಕ್ಸಿಯ ಆಡಳಿತವನ್ನು ಕುರಿತು 'ಪ್ರಭಾವಿ ಮಹಿಳೆಯನ್ನು ನಂಬುವಂತಿಲ್ಲ ಅವಳು ಬಹಳ ಅಪಾಯಕಾರಿ' ಎನ್ನುವ ಕನ್‌ಫ್ಯೂಷಿಯಸ್‌ನ ಮಾತನ್ನು ಹೇಳುತ್ತಾರೆ. ಈ ಹೇಳಿಕೆಯು ಹೆಣ್ಣನ್ನು ಸಾಮಾರ್ಥ್ಯವನ್ನು ಕಡೆಗಣಿಸುವ, ಉನ್ನತ ಹುದ್ದೆಯಲ್ಲಿರಲು ಹೆಣ್ಣು ಯೋಗ್ಯವಲ್ಲ ಅನ್ನುವಂತಿದೆ. 'ಪತಿಯೇ ಪರದೈವ', 'ಗಂಡ ಹೆಂಡತಿ ಜಗಳ ಉಂಡು ಮಲಗುವ ತನಕ' ಮುಂತಾದ ಗಾದೆ ಮಾತುಗಳು ಮಹಿಳೆಯ ಸೀಮಿತ ಬದುಕಿನ ಅರ್ಥೈಸುವುದಕ್ಕೆ ಬಳಸಿಕೊಂಡಿದ್ದಾರೆ. ಭಾರತದಲ್ಲಿರುವಂತೆಯೇ ವಿದೇಶದಲ್ಲೂ ಗಾದೆ ಮಾತುಗಳು ರೂಪಕವಾಗಿ ಬಳಸಿ ಹೇಳುವುದಕ್ಕೆ ಜನಪ್ರಿಯವಾಗಿವೆ. ವಿದೇಶದ ನೆಲದಲ್ಲೂ ಗಾದೆ ಮಾತುಗಳು ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಯಂತೆ ನಿರೂಪಿತವಾಗಿರುವುದು ಕಂಡುಬರುತ್ತವೆ. ಅಷ್ಟೇ ಅಲ್ಲದೇ ಪ್ರಸಿದ್ಧನಾಮರ ಉಲ್ಲೇಖಗಳು ಮಹಿಳಾ ಅನನ್ಯತೆಯ ಚಹರೆಗಳನ್ನು ಪ್ರತಿಬಿಂಬಿಸುವಲ್ಲಿ ಪ್ರಮುಖವಾಗಿವೆ. ಕೆಲವು ಉಲ್ಲೇಖಗಳು ಮಹಿಳೆಯರನ್ನು ಸೂಚಿಸಿದರೆ, ಕೆಲವು ಪರೋಕ್ಷವಾಗಿ ಸೂಚಿಸುತ್ತವೆ. ಹೆಣ್ಣನ್ನು ನಕಾರತ್ಮಕವಾಗಿ ಬಿಂಬಿಸುವಂತಹ ಗಾದೆ ಮಾತುಗಳು, ಉಲ್ಲೇಖಗಳು, ನುಡಿಗಟ್ಟುಗಳು ಕಂಡುಬರುತ್ತವೆ. 'ಎಮ್ಮೆ ಹಾಗೂ ಹೆಂಗಸರು ಬಡಿಯಲು ಯೋಗ್ಯರು', ಮತ್ತು 'ಎಣಿಸಲು ಹಣ ಉತ್ತಮ, ಬಡಿಯಲು ಹೆಂಗಸು ಉತ್ತಮ' ಎನ್ನುವಂತಹ ಪುರುಷ ದೌರ್ಜನ್ಯಕ್ಕೆ ನಿದರ್ಶನದಂತಿರುವ ಗಾದೆ ಮಾತುಗಳು ವ್ಯಕ್ತವಾಗಿವೆ. ಒಟ್ಟಿನಲ್ಲಿ ಮಹಿಳಾ ಪ್ರವಾಸ ಕಥನಗಳಲ್ಲಿ ಗಾದೆ ಮತ್ತು ನುಡಿಗಟ್ಟುಗಳ ವಿವರಗಳು ಮಹಿಳಾ ಚಹರೆಗಳನ್ನು ಗುರುತಿಸುವಂತೆ ಕಂಡುಬಂದಿವೆ. ಇವುಗಳು ಮಹಿಳಾ ಲೋಕವನ್ನು ಸೀಮಿತಗೊಳಿಸುತ್ತಿವೆ. ಅಲ್ಲದೇ ಮಹಿಳೆಗೆ ಭಾಷಿಕವಾಗಿಯೂ ಹೆಚ್ಚಿನ ಅಭಿವ್ಯಕ್ತಿಗಳಿಲ್ಲದಿರುವುದು ಕಂಡುಬರುತ್ತದೆ.

ಹೀಗೆ ಅಲ್ಲಲ್ಲಿ ಪ್ರವಾಸ ಕಥನಗಳ ಶೀರ್ಷಿಕೆ, ಉಪಶೀರ್ಷಿಕೆಗಳಲ್ಲಿ ಭಾಷಿಕವಾದ ಮಹಿಳಾ ಅನನ್ಯತೆಯ ಚಹರೆಗಳನ್ನು ಗುರುತಿಸಬಹುದಾಗಿದೆ. ಇವುಗಳನ್ನು ಬಿಟ್ಟರೇ ಭಾಷೆಯ ಅಂಗವಾಗಿರುವ ಗಾದೆ, ನುಡಿಗಟ್ಟುಗಳ ಬಳಕೆಯಲ್ಲೂ ಮಹಿಳಾ ಭಾಷಿಕ ಚಹರೆಗಳು ಕಂಡುಬರುವುದುಂಟು. ಉಳಿದಂತೆ ಪುರುಷ ಲೇಖಕರಿಗೂ ಮಹಿಳಾ ಲೇಖಕಿಯರಿಗೂ ಸಾಮಾನ್ಯವೆನ್ನಬಹುದಾದ ಭಾಷಾ ಬಳಕೆಯೇ ಮಹಿಳಾ ಪ್ರವಾಸ ಕಥನಗಳಲ್ಲೂ ಹೆಚ್ಚಾಗಿ ಕಂಡುಬರುತ್ತವೆ. ಇತ್ತೀಚಿನ ಸ್ತ್ರೀವಾದಿ ಭಾಷಿಕ ಚಿಂತನೆಯೂ ಕನ್ನಡವು ಸೇರಿದಂತೆ ಜಗತ್ತಿನ ಎಲ್ಲಾ ಭಾಷೆಗಳು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ರಚನೆಗೊಂಡವುಗಳು ಎಂಬ ಅಭಿಪ್ರಾಯವನ್ನು ಹೊಂದಿದೆ. ಉದಾಹರಣೆಗೆ ಮನುಷ್ಯ, ವ್ಯಕ್ತಿ ಮೊದಲಾದ ಪದ ಬಳಕೆ ಸಂದರ್ಭದಲ್ಲಿ ಪುರುಷ ವಾಚಕ ಸರ್ವನಾಮ ಮತ್ತು ಪ್ರತ್ಯೇಯಗಳು ಬಳಕೆಯಾಗುವುದನ್ನು ಲಿಂಗ ಪಕ್ಷಪಾತಿ

ಧೋರಣೆ ಎಂದು ಚಿಂತಕರು ಅಭಿಪ್ರಾಯಪಡುತ್ತಾರೆ. ಕನ್ನಡದ ಬಹುಪಾಲು ಮಹಿಳಾ ಪ್ರವಾಸ ಕಥನಗಳು ಕೂಡಾ ಇಂತಹ ಪಾರಂಪರಿಕ ಭಾಷಿಕ ಬಳಕೆಯಿಂದ ಹೊರಬರಲು ಸಾಧ್ಯವಾಗಿಲ್ಲ.

❑❑❑

ಅಧ್ಯಾಯ ಒಂಬತ್ತು

ಸಮಾಪನ–ಅಧ್ಯಯನದ ಫಲಿತಗಳು

ಅಧ್ಯಾಯ ಒಂಬತ್ತು

ಸಮಾಪನ – ಅಧ್ಯಯನದ ಫಲಿತಗಳು

ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಭಾರತದ ವೈವಿಧ್ಯವನ್ನು ತಿಳಿಯಬೇಕಾದ ಸಂದರ್ಭ ಒದಗಿಬಂದಿತು. ವಿವಿಧತೆಯಲ್ಲಿ ಏಕತೆ ಅಡಿಯಲ್ಲಿ ನಿರ್ಮಾಣವಾದ ದೇಶದಲ್ಲಿ, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸಂಸ್ಕೃತಿ, ಆಚರಣೆ, ಕಲೆ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿಯೂ ಭಿನ್ನತೆ ಕಂಡುಬರುತ್ತದೆ. ಹೀಗಾಗಿ ರಾಜ್ಯ ರಾಜ್ಯಗಳ ಬಗ್ಗೆ ತಿಳುವಳಿಕೆ ಅಗತ್ಯವಾಗಿದೆ. ಪ್ರಾಚೀನ ಭಾರತದಲ್ಲಿ ಪ್ರವಾಸಗಳೆಂದರೆ ತೀರ್ಥಯಾತ್ರೆಗಳಾಗಿದ್ದವು. ಈ ಕ್ಷೇತ್ರಗಳನ್ನು ದರ್ಶಿಸಿದರೆ ಪುಣ್ಯಪ್ರಾಪ್ತಿ ಸಿಗುವುದೆಂಬ ನಂಬಿಕೆಯಿತ್ತು. ನಂತರದಲ್ಲಿ ಚಾರಿತ್ರಿಕ, ಧಾರ್ಮಿಕ, ನೈಸರ್ಗಿಕ ತಾಣಗಳನ್ನು ದಾಖಲು ಮಾಡುವ ಅನುಭವ ಕಥನಗಳಾಗಿ ರಚನೆಗೊಂಡವು. ಆದರೆ ಇಂದು ಪ್ರವಾಸ ಸಾಹಿತ್ಯವೆಂಬುದು ವಿಶಾಲಾರ್ಥವನ್ನು ಪಡೆದಿದೆ. ವೀಕ್ಷಣೆ, ಮನೋರಂಜನೆಗಾಗಿ ಪ್ರವಾಸ ಎಂಬ ಮನಸ್ಥಿತಿಯಿಂದ ಜನಾಂಗ, ಆಹಾರ, ನಿಸರ್ಗ, ಆಚರಣೆ, ಸಂಸ್ಕೃತಿಗಳ ಶೋಧನೆಯನ್ನು ಮಾಡುವ ಬರಹಗಳಾಗಿವೆ. ಜಗತ್ತಿನ ಅನೇಕ ವಿಚಾರಗಳ ಜ್ಞಾನವನ್ನು ಪಡೆಯುವುದಕ್ಕೆ ಪ್ರವಾಸ ಕಥನಗಳು ಸಹಕಾರಿಯಾಗಿವೆ. ಇದರಿಂದಾಗಿ ಬೇರೆ ಯಾವುದೇ ಸಾಹಿತ್ಯ ಪ್ರಕಾರದಷ್ಟೇ ಆಕರ್ಷಣೀಯವಾದ ಮತ್ತು ಸೃಜನಶೀಲ ಸಾಹಿತ್ಯವಾಗಿದೆ. ರಾಣಿ ಚನ್ನಾಜಮ್ಮಣ್ಣಿ ಅವರ 'ನನ್ನ ಪ್ರಪಂಚ ಸಂಚಾರ' ಎಂಬ ಕೃತಿಯಿಂದ ಗುರುತಿಸಿಕೊಳ್ಳುವ ಮಹಿಳಾ ಪ್ರವಾಸ ಕಥನಗಳು ಇಂದು ಸುಮಾರು ನೂರ ಐವತ್ತಕ್ಕೂ ಹೆಚ್ಚು ಕೃತಿಗಳಾಗಿ ಬೆಳೆದುನಿಂತಿವೆ. ಇತ್ತೀಚಿನ ಮಹಿಳಾ ಪ್ರವಾಸಿಗರು ಅನ್ವೇಷಕ ಮನೋಭಾವದಿಂದ ಶೋಧಿಸುತ್ತಿದ್ದಾರೆ. ಹೀಗಾಗಿ ಪ್ರಸಿದ್ಧ ದೇಶಗಳಾಚೆಗೆ ಇರುವ ಹಿಂದುಳಿದ ರಾಷ್ಟ್ರಗಳ ಮಹಿಳಾ ಕಥನಗಳನ್ನು ಹೇಳುವುದಕ್ಕೆ ಪ್ರಯತ್ನಿಸಿವೆ. ಮಹಿಳಾ ಕಥನಗಳ ನಿರೂಪಣಾ ವಿಧಾನಗಳನ್ನು ಗಮನಿಸಿದಾಗ ಮಹಿಳಾ ಸಂವೇದನೆ, ಮಹಿಳಾ ಕಾಳಜಿ, ಮಹಿಳಾ ಅನನ್ಯತೆಗಳನ್ನು ತಮ್ಮ ಕಥನಗಳಲ್ಲಿ ಎತ್ತಿಹಿಡಿದಿದ್ದಾರೆ. ಈ ಮೂಲಕ ಮಹಿಳೆಯರನ್ನು ಪ್ರತಿನಿಧಿಸುವ ವಿವರಗಳು ಪುರುಷ ಪ್ರವಾಸ ಕಥನಗಳಿಗಿಂತಲೂ ಮಹಿಳಾ ಪ್ರವಾಸಿಗರ ಕಥನಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಇದುವರೆಗೆ ರಚನೆಯಾಗಿರುವ ೧೫೦ಕ್ಕೂ ಹೆಚ್ಚಿನ ಮಹಿಳಾ ಪ್ರವಾಸ ಕಥನಗಳನ್ನು ಅವಲೋಕಿಸಿದಾಗ ಕಂಡುಬರುವಂತಹ ಸ್ತ್ರೀ ಪ್ರತಿನಿಧೀಕರಣದ ಸಂಗತಿಗಳನ್ನು ಈ ಕೆಳಗಿನಂತೆ ಕ್ರೋಡೀಕರಿಸಬಹುದಾಗಿದೆ.

- ಕನ್ನಡ ಮಹಿಳಾ ಪ್ರವಾಸ ಕಥನಗಳನ್ನು ಹವ್ಯಾಸಿ, ವೃತ್ತಿಪರ, ದೇಶೀಯ ಹಾಗೂ ವಿದೇಶಿ ಪ್ರವಾಸ ಕಥನಗಳಾಗಿ ವರ್ಗೀಕರಿಸಬಹುದಾಗಿದೆ. ಹವ್ಯಾಸಿ ಪ್ರವಾಸ ಕಥನಗಳನ್ನು ರಚಿಸಿದವರಲ್ಲಿ ಈಗಾಗಲೇ ಲೇಖಕಿಯಾಗಿ ಗುರುತಿಸಿಕೊಂಡವರೇ ಕಂಡುಬರುತ್ತಾರೆ. ವೃತ್ತಿಪರ ಪ್ರವಾಸ ಕಥನಗಳು ಸಂಘ, ಸಂಸ್ಥೆಗಳಿಂದ ನಿಯೋಜಿತವಾದವುಗಳಾಗಿವೆ. ಮಹಿಳಾ ಪ್ರವಾಸ ಕಥನಗಳಲ್ಲಿ ಸ್ವದೇಶಿ ಪ್ರವಾಸ ಕಥನಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ವಿದೇಶಿ ಪ್ರವಾಸ ಕಥನಗಳು ವಿರಳವಾಗಿ ಕಂಡುಬರುತ್ತವೆ.
- ಮಹಿಳಾ ಪ್ರವಾಸಿಗರಲ್ಲಿ ಕೆಲವರು ನಿರ್ದಿಷ್ಟ ಉದ್ದೇಶವನ್ನು ಇರಿಸಿಕೊಂಡು ಪ್ರವಾಸ ಕೈಗೊಂಡವರಲ್ಲ. ಸ್ವದೇಶಿ ಪ್ರವಾಸದಲ್ಲಿ ಧಾರ್ಮಿಕ, ಐತಿಹಾಸಿಕ, ಪ್ರೇಕ್ಷಣೀಯ ಸ್ಥಳಗಳ ವಿವರಗಳು ಕಂಡುಬಂದರೆ, ವಿದೇಶಿ ಪ್ರವಾಸ ಕೈಗೊಂಡವರು ತಮ್ಮ ಕುಟುಂಬಸ್ಥರು, ಮಕ್ಕಳು ಇರುವ ಕಾರಣಕ್ಕೆ ಹೋದವರಾಗಿದ್ದಾರೆ. ಇಂತವರು ಸೀಮಿತ ವಲಯಗಳಲ್ಲಿ ಹಾಗೂ ಜನಪ್ರಿಯ ಪ್ರದೇಶಗಳಲ್ಲಿ ಪ್ರವಾಸ ಮಾಡಿದ ವಿವರಗಳನ್ನು ಮಾತ್ರ ದಾಖಲಿಸಿದ್ದಾರೆ.
- ಮಹಿಳಾ ಪ್ರವಾಸ ಕಥನಗಳ ಶೀರ್ಷಿಕೆಗಳು ಮೊದಲಿಗೆ ಸಂಚಾರ, ಯಾತ್ರೆ, ಧಾರ್ಮಿಕ ಕ್ಷೇತ್ರಗಳನ್ನು ಸೂಚಿಸುವ ಶೀರ್ಷಿಕೆಗಳಾಗಿರುತ್ತಿದ್ದವು. ಇಂತಹ ಪ್ರವಾಸ ಕಥನಗಳು ದಿನಚರಿ ರೂಪದ, ಧಾರ್ಮಿಕ ಕ್ಷೇತ್ರಗಳನ್ನು ಪರಿಚಯಿಸುವ ಕೈಪಿಡಿಗಳಂತಿವೆ. ೨೦೦೦ದ ನಂತರದ ಪ್ರವಾಸ ಕಥನಗಳು ವಿಶ್ಲೇಷಣಾತ್ಮಕ ನೆಲೆಗೆ ತೊಡಗಿಸಿಕೊಂಡಿರುವ ಮಹಿಳಾ ಪ್ರವಾಸಿಗರು ತಮ್ಮ ಪ್ರವಾಸ ಕಥನಗಳಿಗೆ ನಿಸರ್ಗಸೂಚಕವಾಗಿ, ಪದ್ಯಮಯವಾಗಿ, ಸ್ತ್ರೀ ಸೂಚಕವಾದ ವಿಭಿನ್ನ ಶೀರ್ಷಿಕೆಗಳನ್ನಿಟ್ಟಿರುವುದು ಕಂಡುಬರುತ್ತವೆ.
- ನಿಯೋಜಿತ ಮಹಿಳಾ ಪ್ರವಾಸಿಗರಲ್ಲಿ ಜೆಂಡರ್ ಸ್ಟಡೀಸ್, ಮಹಿಳಾ ಅಧ್ಯಯನದಂತಹ ನಿರ್ದಿಷ್ಟ ಉದ್ದೇಶಗಳಿಗೆ ಪ್ರವಾಸ ಮಾಡಿದವರಿದ್ದಾರೆ. ವಿವಿಧ ವೃತ್ತಿಯಲ್ಲಿರುವ ಲೇಖಕಿಯರು ತಮ್ಮ ವೃತ್ತಿಗನುಸಾರವಾಗಿ ಆಯಾ ಕ್ಷೇತ್ರದ ಮಹಿಳೆಯರನ್ನು ಕೇಂದ್ರೀಕರಿಸುವ ಕಡೆ ಗಮನಹರಿಸಿದ್ದಾರೆ. ಆದರೆ ಶೈಕ್ಷಣಿಕ ಪ್ರವಾಸ ಕಥನಗಳು ಸಾಕಷ್ಟಿದ್ದರೂ ಉನ್ನತ ವ್ಯಾಸಂಗದಂತಹ ಶೈಕ್ಷಣಿಕ ಉದ್ದೇಶಗಳಿಗಾಗಿ ಪ್ರವಾಸ ಕೈಗೊಂಡವರು ಪ್ರವಾಸ ಕಥನಗಳನ್ನು ರಚಿಸಿದ ಉದಾಹರಣೆಗಳಿಲ್ಲ.
- ಕನ್ನಡ ಮಹಿಳಾ ಪ್ರವಾಸಿಗರು ಧರ್ಮ, ರಾಷ್ಟ್ರ, ಸಂಸ್ಕೃತಿಗಳೆಂಬ ಅಂಧಾಭಿಮಾನವಿಲ್ಲದ, ಮೂಲಭೂತವಾದಿ ದೃಷ್ಟಿಕೋನಗಳಿಲ್ಲದ ಲೇಖಕಿಯರಾಗಿ ಗುರುತಿಸಿಕೊಳ್ಳುತ್ತಾರೆ. ಸಂವೇದನಾಶೀಲ, ಮಾನವೀಯತೆಗೆ ಬೆಲೆ ಕೊಡುವ ಮತ್ತು ಜನರ ನೋವು, ನಲಿವುಗಳಿಗೆ ಸ್ಪಂದಿಸಬಲ್ಲವರಾಗಿದ್ದಾರೆ. ಮಾನವತಾವಾದಿ, ವಿಚಾರವಾದಿ ಮತ್ತು ವಿಶ್ವಮಾನವ

ದೃಷ್ಟಿಕೋನಗಳಿರುವುದನ್ನು ಮಹಿಳಾ ಪ್ರವಾಸ ಕಥನಗಳಲ್ಲಿ ಗುರುತಿಸಲಾಗಿದೆ.

- ಮಹಿಳಾ ಪ್ರವಾಸ ಕಥನಗಳಲ್ಲಿ ಮಹಿಳಾ ಸಂವೇದನೆ, ಮಹಿಳಾ ಕಾಳಜಿಗಳ ಬಗ್ಗೆ ವ್ಯಕ್ತವಾದದ್ದನ್ನು ಗಮನಿಸಿದಾಗ, ಪುರುಷ ಪ್ರವಾಸ ಕಥನಗಳಲ್ಲಿ ಕಂಡುಬರುವ ವಿಷಯಗಳಿಗೂ, ಮಹಿಳಾ ಪ್ರವಾಸ ಕಥನಗಳಲ್ಲಿ ಕಂಡುಬರುವ ವಿಷಯಗಳಿಗೂ ವ್ಯತ್ಯಾಸಗಳಿವೆ. ಮಹಿಳಾ ಕಾಳಜಿ ಮತ್ತು ಸಂವೇದನೆಯನ್ನು ವಿವರಿಸುವ ವಿಷಯಗಳಲ್ಲಿ ಲಿಂಗಭೇದ ನಿರೂಪಣೆಗಳು ಕಂಡುಬರುತ್ತವೆ. ಅಲ್ಲದೇ ಪುರುಷ ಪ್ರವಾಸ ಕಥನಗಳಿಗಿಂತ ಮಹಿಳಾ ಪ್ರವಾಸಿಗರು ಸ್ತ್ರೀಯರನ್ನು ಪ್ರತಿನಿಧಿಸುವ ವಿಚಾರಗಳಲ್ಲಿ ಟೀಕೆಗಳನ್ನು ಮಾಡುತ್ತಾರಾದರೂ ಅವು ತೀವ್ರವಾಗಿರುವುದಿಲ್ಲ ಎಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

- ಸ್ವದೇಶಿ-ವಿದೇಶಿ ಮಹಿಳಾ ಪ್ರವಾಸ ಕಥನಗಳಲ್ಲಿ ನಗರದ ಮಹಿಳೆಯರು ಮತ್ತು ಗ್ರಾಮೀಣ ಮಹಿಳೆಯರೆಂದು ಎರಡು ರೀತಿಯಲ್ಲಿ ಗುರುತಿಸಬಹುದಾಗಿದೆ. ನಗರದ ಮಹಿಳೆಯರು ಹೆಚ್ಚು ಅಕ್ಷರಸ್ಥರಾಗಿದ್ದರಿಂದ ಪುರುಷ ದಬ್ಬಾಳಿಕೆಗಳಿಗೆ ಒಳಗಾಗಿರುವ ನಿರೂಪಣೆಗಳು ವಿರಳವಾಗಿ ದಾಖಲಾಗಿವೆ. ಗ್ರಾಮೀಣ ಭಾಗದ ಮಹಿಳೆಯರು ಹೆಚ್ಚಾಗಿ ಅನಕ್ಷರಸ್ಥೆಯರಾಗಿರುವುದರಿಂದ ಪುರುಷ ದಬ್ಬಾಳಿಕೆಗಳಿಗೆ ಒಳಗಾಗಿರುವ ಅಂಶಗಳನ್ನು ಹೆಚ್ಚಾಗಿ ನಿರೂಪಿಸಲಾಗಿದೆ.

- ವಿಶ್ವದ ಅನೇಕ ದೇಶಗಳ ಮಹಿಳೆಯರ ಸ್ಥಿತಿಗತಿಗಳನ್ನು ಹೋಲಿಸಿ ನೋಡಿದಾಗ, ಅರೇಬಿಯಾ, ಸೌದಿ, ದುಬೈ ಮುಂತಾದ ದೇಶಗಳು ಪುರುಷ ಪ್ರಾಬಲ್ಯದಲ್ಲಿರುವುದು ಕಂಡುಬರುತ್ತದೆ. ಧಾರ್ಮಿಕ ವಿಚಾರಗಳಲ್ಲಿ ಪ್ರಬಲವಾಗಿ ಗುರುತಿಸಿಕೊಂಡ ದೇಶಗಳಲ್ಲಿನ ಮಹಿಳೆಯರು ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆಯದೇ ಇರುವುದನ್ನು ಕನ್ನಡದ ಮಹಿಳಾ ಪ್ರವಾಸ ಕಥನಗಳು ಗುರುತಿಸಿವೆ. ಮುಸ್ಲಿಂ ರಾಷ್ಟ್ರಗಳಾದ ಇರಾಕ್, ಇರಾನ್, ಅಫ್ಘಾನಿಸ್ತಾನ್, ಪಾಕಿಸ್ತಾನ, ದಕ್ಷಿಣ ಕೊರಿಯ ಮುಂತಾದ ದೇಶಗಳಲ್ಲಿ ಮಹಿಳಾ ಪ್ರವಾಸಿಗರು ಪ್ರವಾಸ ಕೈಗೊಳ್ಳದಿರುವುದಕ್ಕೆ ಅಲ್ಲಿನ ಕಟ್ಟುಪಾಡುಗಳೇ ಕಾರಣವಾಗಿರಬಹುದಾಗಿದೆ.

- ೨೦೦೦ದಿಂದೀಚೆಗೆ ಮಹಿಳಾ ಪ್ರವಾಸಿಗರು ಜಾಗತಿಕವಾಗಿ, ತಾಂತ್ರಿಕವಾಗಿ, ಬಂಡವಾಳ ಶಾಹಿ ದೇಶಗಳಾಚೆಗೆ ಭೇಟಿ ನೀಡಿರುವುದನ್ನು ಕಾಣುತ್ತೇವೆ. ವಿದೇಶಿ ಪ್ರವಾಸದಲ್ಲಿಯೂ ಪ್ರಸಿದ್ಧ ನಗರಗಳಾಚೆಗಿನ ಬುಡಕಟ್ಟು ಮಹಿಳೆಯರ ಬದುಕು, ನೈಸರ್ಗಿಕ ಸಂಪತ್ತು, ಗ್ರಾಮೀಣ ಮಹಿಳೆಯರ ಜನಜೀವನ ಮತ್ತು ಸಂಸ್ಕೃತಿಗಳ ಬಗೆಗೆ ಮಹಿಳಾ ಪ್ರವಾಸಿಗರು ಹೆಚ್ಚು ಆಸಕ್ತಿಯನ್ನು ತೋರಿದ್ದಾರೆ.

- ವಿದೇಶಗಳಲ್ಲಿನ ಮಹಿಳಾ ಹೋರಾಟಗಾರ್ತಿಯರು, ಲೇಖಕಿಯರು, ಸ್ತ್ರೀವಾದಿಗಳನ್ನು ಸಂದರ್ಶಿಸಿ ಅಲ್ಲಿನ ಸ್ತ್ರೀ ಪ್ರಾಧ್ಯಾನತೆಯ ಸ್ವರೂಪವನ್ನು ತಿಳಿಯುವ ಯತ್ನವನ್ನು ಮಾಡಿದ್ದಾರೆ.

ಕೆಲವು ಮಹಿಳಾ ಪ್ರವಾಸಿಗರು ಸಾಮಾನ್ಯ ಮಹಿಳೆಯರನ್ನೇ ತಮ್ಮ ಕಥನದಲ್ಲಿ ಪ್ರತಿನಿಧಿಸಿದ್ದಾರೆ. ಆದರೆ ರಾಜಕೀಯ ಪ್ರಜ್ಞೆಯ ವಿವರಗಳು ತೀರಾ ವಿರಳವಾಗಿವೆ. ಅಧಿಕಾರ ಮತ್ತು ರಾಜಕೀಯ ಪ್ರಾತಿನಿಧ್ಯದಿಂದ ಸಾಧಿಸಬಹುದಾದ ಸಂಗತಿಗಳು ಮಹಿಳಾ ಪ್ರವಾಸ ಕಥನಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿವೆ.

- ಕುಟುಂಬ ಸದಸ್ಯರೊಂದಿಗೆ ಪ್ರವಾಸ ಕೈಗೊಂಡ ಪ್ರವಾಸಿಗರು ನಗರದಾಚೆಗಿನ ಮಹಿಳಾ ಬದುಕನ್ನೇ ನೋಡಲಾಗಿಲ್ಲ. ನಗರಗಳನ್ನೇ ಕೇಂದ್ರೀಕರಿಸಿ ನಿರೂಪಿಸಿದ ಮಿತಿಗಳಿವೆ. ಸ್ತ್ರೀ ಸ್ವಾತಂತ್ರ್ಯದಂತಹ ಅನೇಕ ಸಂಗತಿಗಳ ಬಗ್ಗೆ ವಿವರಿಸುತ್ತಾರಾದರೂ ಇವುಗಳು ಪುಸ್ತಕಗಳಿಂದ, ಕುಟುಂಬಸ್ಥರು ನೀಡಿದ ಮಾಹಿತಿಯಿಂದ ಹಾಗೂ ಅಂತರಜಾಲದಿಂದ ಪಡೆದ ವಿವರಗಳನ್ನು ದಾಖಲಿಸಿರುವುದು ತಿಳಿದುಬರುತ್ತದೆ.

- ಬಹುತ್ವದ ಆಚರಣೆಗಳು ಕೇವಲ ಭಾರತಕ್ಕೆ ಸೀಮಿತವಾಗದೆ, ವಿಶ್ವದ ಅನೇಕ ದೇಶಗಳಲ್ಲೂ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಇತ್ತೀಚಿನ ಕೆಲವು ಮಹಿಳಾ ಲೇಖಕಿಯರು ಹೊಸತನ್ನು ಹುಡುಕುವ ಮನೋಭಾವದಿಂದಾಗಿ ವರ್ಣರಂಜಿತ ದೇಶಗಳ ನಡುವೆ ಮರೀಚಿಕೆಯಾದ ಪೆರು, ಚಿಲಿ, ಬ್ರೆಜಿಲ್, ಅರ್ಜೆಂಟೀನಾ ಮುಂತಾದ ಸಣ್ಣ ಪುಟ್ಟ ದೇಶಗಳಿಗೆ ಭೇಟಿ ನೀಡಿ, ಅಲ್ಲಿನ ಸಂಸ್ಕೃತಿ, ಸಂಶೋಧನೆ, ಚಾರಿತ್ರಿಕ ಮಾಹಿತಿಗಳ ಜೊತೆಗೆ ಮಹಿಳೆಯರು ಸಾಂಸ್ಕೃತಿಕ ರಂಗದಲ್ಲಿ ಸಾಧಿಸಿದ ವಿವರಗಳನ್ನು ನಿರೂಪಿಸಿದ್ದಾರೆ.

- ದೇಶ ವಿದೇಶದ ಸೈನಿಕರಿಗೆ ರಾಷ್ಟ್ರ ರಕ್ಷಕರೆಂಬ ಗೌರವ ನೀಡುವುದರ ಹಿಂದೆ ಅನೇಕ ಸತ್ಯಗಳು ಮರೆಮಾಚುತ್ತವೆ. ಕಾಶ್ಮೀರ, ಚೀನಾ, ವಿಯೆಟ್ನಾಂನಂತಹ ಗಡಿನಾಡಿನ ಪ್ರದೇಶಗಳಲ್ಲಿ ಸೈನಿಕರೇ ಅತ್ಯಾಚಾರಿಗಳಾಗಿದ್ದು, ದೌರ್ಜನ್ಯ ಎಸಗುವ ಸಂಗತಿಗಳು ಕಂಡುಬರುತ್ತವೆ. ಅಲ್ಲದೇ ಆ ಪ್ರದೇಶಗಳಲ್ಲಿ ವೇಶ್ಯಾವಾಟಿಕೆಗಳು ನಿರ್ಮಾಣ ಆಗಿರುವುದಕ್ಕೆ ಸೈನಿಕರೇ ಕಾರಣವಾದ ಬಗ್ಗೆ ಮಹಿಳಾ ಪ್ರವಾಸ ಕಥನಗಳಿಂದ ತಿಳಿದುಬರುತ್ತದೆ.

- ವಿಶ್ವದ ಯಾವುದೇ ದೇಶ ಸಾಧಿಸದ ಗಂಡು-ಹೆಣ್ಣಿನ ನಡುವಿನ ಸಮಾನತೆಯನ್ನು ಭೂತಾನ್ ದೇಶವು ಸಾಧಿಸಿದಂತೆ ಕಂಡುಬಂದರೂ ಔದ್ಯೋಗಿಕ, ಶಿಕ್ಷಣ, ಸಾಂಸ್ಕೃತಿಕ ರಂಗಗಳಲ್ಲಿ ಮಹಿಳೆಯರಿಗೆ ಸಮಾನತೆ ನೀಡಿದೆ. ಆದರೆ ಇದುವರೆಗೂ ಭೂತಾನ್‌ನ ಆಡಳಿತದ ಚುಕ್ಕಾಣಿ ಮಾತ್ರ ಪುರುಷರಿಗೆ(ದೊರೆ) ಸೀಮಿತವಾಗಿದೆ. ಮಹಿಳೆಯರಿಗೆ ಅಧಿಕಾರದ ಅವಕಾಶ ನೀಡದಿರುವುದು ಅಲ್ಲಿನ ಮಿತಿಯಾಗಿ ಕಂಡುಬರುತ್ತದೆ.

- ಜಾಗತಿಕವಾಗಿ ಮುಂದುವರಿದ ದೇಶಗಳಲ್ಲಿ ಮಹಿಳೆಯರನ್ನು ಸಾಮಾನವಾಗಿ ಕಂಡರೇ, ಮುಂದುವರಿಯುತ್ತಿರುವ ದೇಶಗಳಲ್ಲಿ ಸಮಾನತೆ ಎಂಬುದು ಅಸ್ಪಷ್ಟವಾಗಿದೆ. ಬುಡಕಟ್ಟು ಸಮುದಾಯದ ಮಹಿಳೆಯರ ಬದುಕನ್ನು ಬಂಡವಾಳವಾದ ಮೂಲವಾಗಿ ಬಳಸಿಕೊಳ್ಳುತ್ತಿದ್ದಾರೆ.

ದಲಿತ ಮಹಿಳೆಯ ಜೀವನಾನುಭವವನ್ನು ಪ್ರತಿನಿಧಿಸುವ ಕನ್ನಡ ಪ್ರವಾಸ ಕಥನಗಳು ಇಲ್ಲ ಎನ್ನಬಹುದಾದಷ್ಟು ವಿರಳವಾಗಿವೆ. ಶ್ರಮಿಕ ಮಹಿಳೆಯರ ಜೀವನಕ್ರಮ ವಿದೇಶಗಳಲ್ಲಿ ಭಿನ್ನವಾದರೆ, ಭಾರತದಲ್ಲಿ ಶ್ರಮಪಡುವ ಮಹಿಳೆಯರ ಜೀವನಕ್ರಮ ಸುಧಾರಿಸದೆ ಇರುವುದನ್ನು ಗುರುತಿಸಲಾಗಿದೆ.

- ೨೦ನೆಯ ಶತಮಾನದಲ್ಲಿ ಸ್ತ್ರೀವಾದವು ಹೆಚ್ಚು ಪ್ರಚಲಿತವಾದಾಗ, ಮಹಿಳೆಯರು ಸಂಪ್ರದಾಯ, ಆಚರಣೆ, ರೂಢಿ ಪದ್ಧತಿಗಳನ್ನು ಮೀರಿ ಹೊರದೇಶಗಳಿಗೆ ಒಂಟಿಯಾಗಿ ಅಥವಾ ಸ್ನೇಹಿತೆಯರೊಂದಿಗೆ ಪ್ರವಾಸ ಕೈಗೊಂಡಿರುವುದನ್ನು ಅನೇಕ ಪ್ರವಾಸ ಕಥನಗಳು ಗುರುತಿಸಿವೆ. ಇತ್ತೀಚಿಗೆ ಮಹಿಳಾ ಪ್ರವಾಸಿಗರು ಜಾಗೃತರಾಗಿ, ನಿರ್ಭೀತಿಯಿಂದ ಪ್ರವಾಸ ಮಾಡಿ ತಮ್ಮ ಅನುಭವ ಕಥನಗಳನ್ನು ಬರೆದಿರುವುದನ್ನು ಕಾಣುತ್ತೇವೆ.
- ಮಹಿಳಾ ಪ್ರವಾಸ ಕಥನಗಳಲ್ಲಿ ಸ್ತ್ರೀ ಪ್ರತಿನಿಧೀಕರಣವನ್ನು ಬಹು ಆಯಾಮಗಳಲ್ಲಿ ಗುರುತಿಸಲಾಗಿದೆ. ಪೌರಾಣಿಕ ಮಹಿಳೆಯರು, ಸಮಕಾಲೀನ ಮಹಿಳೆಯರು, ಬುಡಕಟ್ಟು ಮಹಿಳೆಯರು, ಶೋಷಿತ ಮಹಿಳೆಯರಲ್ಲದೇ, ಹೋರಾಟಗಾರ್ತಿಯರು ಸಬಲೀಕರಣಗೊಳ್ಳುತ್ತಿರುವ ಮಹಿಳೆಯರು ಕಂಡುಬರುತ್ತಾರೆ. ಬುಡಕಟ್ಟು ಮಹಿಳೆಯರ ಸಂವೇದನೆಗಳು, ಆಚಾರ-ವಿಚಾರಗಳು, ಪುರುಷ ಪ್ರವಾಸ ಕಥನಗಳಲ್ಲಿ ಕಾಣದಷ್ಟು ಮಹಿಳಾ ಪ್ರವಾಸ ಕಥನಗಳಲ್ಲಿ ನಿರೂಪಿತಗೊಂಡಿವೆ. ಮಹಿಳಾ ಹಕ್ಕುಗಳ ಕಾರ್ಯಕರ್ತೆಯರು, ಮಹಿಳಾ ಸ್ವಾತಂತ್ರ್ಯ, ಸಮಾನತೆ, ರಾಜಕೀಯ ಪ್ರಾತಿನಿಧ್ಯಗಳಿಗಾಗಿ ಹೋರಾಡಿದ ಮಹಿಳೆಯರ ಬದುಕನ್ನು ಕನ್ನಡದ ಮಹಿಳಾ ಪ್ರವಾಸ ಕಥನಗಳು ಪ್ರತಿಬಿಂಬಿಸಿವೆ. ದೇಶ ವಿದೇಶಗಳ ಪುರಾಣದ ಕಥೆಗಳಲ್ಲಿ ಕಂಡುಬರುವ ಮಹಿಳೆಯರು ಕೂಡ ವರ್ತಮಾನದ ಮಹಿಳಾ ಬದುಕಿನಲ್ಲಿ ಪ್ರಭಾವ ಬೀರಿರುವುದನ್ನು ಮಹಿಳಾ ಪ್ರವಾಸ ಕಥನಗಳು ಅಭಿವ್ಯಕ್ತಿಸಿವೆ. ಈ ಮೇಲಿನ ಎಲ್ಲಾ ಸಂಗತಿಗಳು ಭಾರತಕ್ಕೆ ಮಾತ್ರ ಸೀಮಿತವಾಗದೆ ವಿಶ್ವದ ಎಲ್ಲಾ ದೇಶಗಳಲ್ಲಿ ಇರುವುದನ್ನು ಮಹಿಳಾ ಪ್ರವಾಸ ಕಥನಗಳು ತಿಳಿಸುತ್ತವೆ.

ಹೀಗೆ ಸುಮಾರು ೮೦ ವರ್ಷಗಳ ಮಹಿಳಾ ಪ್ರವಾಸ ಕಥನಗಳ ಇತಿಹಾಸವನ್ನು ಗಮನಿಸಿದರೆ, ಕನ್ನಡ ಮಹಿಳಾ ಪ್ರವಾಸ ಕಥನಗಳು ಆಯಾ ಕಾಲಘಟ್ಟದ ಮಾನವ ಪ್ರಜ್ಞೆ, ಮಹಿಳಾಪ್ರಜ್ಞೆ, ಸಂವೇದನೆಗಳಿಗೆ ತಮ್ಮದೇ ಆದ ರೀತಿಯಲ್ಲಿ ಧ್ವನಿಯಾಗಿರುವುದನ್ನು ಗುರುತಿಸಬಹುದಾಗಿದೆ. ದೇಶ ವಿದೇಶಗಳ ಪ್ರವಾಸದ ಅನುಭವಗಳನ್ನು ದಾಖಲಿಸುವ ಜೊತೆಗೆ ಆಯಾ ಪ್ರದೇಶಗಳ ವಿವಿಧ ಸ್ತರಗಳ ಮಹಿಳಾಲೋಕವನ್ನು ತಮ್ಮ ಮಿತಿಯೊಳಗಡೆಯೇ ಅನಾವರಣಗೊಳಿಸಿದ ಸಾಹಿತ್ಯ ಪ್ರಕಾರವಾಗಿ ಕನ್ನಡದ ಮಹಿಳಾ ಪ್ರವಾಸ ಕಥನಗಳು ನಮಗಿಂದು ಪ್ರಸ್ತುತವೆನಿಸುತ್ತವೆ.

❑❑❑

ಅನುಬಂಧ

೧. ಪ್ರಧಾನ ಆಕರಗಳು
೨. ಪ್ರಕಟಿತ ಕನ್ನಡ ಮಹಿಳಾ ಪ್ರವಾಸ ಕಥನಗಳು
೩. ಆನುಷಂಗಿಕ ಆಕರಗಳು(ಪರಾಮರ್ಶನ ಕೃತಿಗಳು)
೪. ಲೇಖನಗಳು
೫. ಅಪ್ರಕಟಿತ ಎಂ.ಫಿಲ್/ಪಿಎಚ್.ಡಿ. ನಿಬಂಧಗಳು

ಅನುಬಂಧ

೧. ಪ್ರಧಾನ ಆಕರಗಳು

೧. ಅಂಜಲಿ ರಾಮಣ್ಣ, ೨೦೧೬, **ಬೆಳಕಿನ ಸೆರಗು**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨. ಅಂದನೂರು ಶೋಭ, ೨೦೦೫, **ಯುರೋಪಿನಲ್ಲಿ ಒಂದು ಸುತ್ತು**, ಅನಂತ ಪ್ರಕಾಶನ, ಬೆಂಗಳೂರು.

೩. ಅನುಪಮಾ ಎಚ್.ಎಸ್., ೨೦೧೧, **ನೈಲ್ ದಾರಿಗುಂಟ**, ಲಡಾಯಿ ಪ್ರಕಾಶನ, ಗದಗ.

೪. ಅನುಪಮಾ ಎಚ್.ಎಸ್., ೨೦೧೩, **ಅಂಡಮಾನ್ ಕಂಡಹಾಗೆ**, ಲಡಾಯಿ ಪ್ರಕಾಶನ, ಗದಗ

೫. ಅನುಪಮಾ ಎಚ್.ಎಸ್., ೨೦೧೭, **ಚೆಗೆವಾರನ ನೆಲದಲ್ಲಿ**, ಲಡಾಯಿ ಪ್ರಕಾಶನ, ಗದಗ.

೬. ಅನುಪಮಾ ನಿರಂಜನ, ೧೯೮೪, **ಅಂಗೈಯಲ್ಲಿ ಯುರೋ ಅಮೇರಿಕ**, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

೭. ಅನುಪಮಾ ನಿರಂಜನ, ೧೯೯೭, **ಸ್ನೇಹಯಾತ್ರೆ**, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

೮. ಆರತಿ ಎಚ್.ಎನ್., ೨೦೧೭, **ಬೆಟ್ಟದಡಿಯ ಬಿದಿರ ಹೂ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯. ಇಂದಿರಾ ಎಂ.ಕೆ., ೧೯೮೧, **ಅನುಭವ ಕುಂಜ**, ಹೇಮಂತ ಸಾಹಿತ್ಯ, ಬೆಂಗಳೂರು.

೧೦. ಇಂದಿರಾ ಶಿವಣ್ಣ, ೨೦೦೮, **ನಿಗೂಢಗಳ ನಿಚ್ಚಣಿಕೆ ಏರಿ**, ಸಪ್ನ ಬುಕ್‌ಹೌಸ್, ಬೆಂಗಳೂರು.

೧೧. ಇಂದಿರಾ ಶಿವಣ್ಣ, ೨೦೧೨, **ತನ್ಮಯತೆ ಉನ್ಮತ್ತತೆ**, ಸಪ್ನ ಬುಕ್‌ಹೌಸ್, ಬೆಂಗಳೂರು.

೧೨. ಇಂದಿರಾ ಶಿವಣ್ಣ, ೨೦೧೨, **ಬದುಕಿಗೆ ಬಂಗಾರದ ಲೇಪನ**, ಸಪ್ನ ಬುಕ್‌ಹೌಸ್, ಬೆಂಗಳೂರು

೧೩. ಇಂದಿರಾ ಶಿವಣ್ಣ, ೨೦೧೨. **ಹಾಲೆಂಡಿನಿಂದ ಲಂಡನ್‌ವರೆಗೆ,** ಸಪ್ನ ಬುಕ್‌ಹೌಸ್, ಬೆಂಗಳೂರು.

೧೪. ಇಂದಿರಾ ಹೆಗ್ಗಡೆ, ೨೦೧೮, **ಇಂದ್ರಪ್ರಸ್ಥದಿಂದ ಐತಿಹಾಸಿಕ ನಡೆ,** ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೧೫. ಉಮಾರಾವ್, ೨೦೦೨, **ರಾಕೀ ಪರ್ವತಗಳ ನಡುವೆ ಕ್ಯಾಬರೆ,** ಕರ್ನಾಟಕ ಸಂಘ, ದಕ್ಷಿಣ ಕನ್ನಡ.

೧೬. ಉಮಾರಾವ್, ೨೦೧೫, **ಇನ್ನು ಎಲ್ಲಿಗೋಟ,** ಪಲ್ಲವ ಪ್ರಕಾಶನ, ಚನ್ನಪಟ್ಟಣ.

೧೭. ಉಷಾ.ಪಿ.ರೈ., ೨೦೦೪, **ಲಕ್ಷದ್ವೀಪಕ್ಕೆ ಲಗ್ಗೆ ಇಟ್ಟಾಗ,** ಸಾಗರ ಪ್ರಕಾಶನ, ಬೆಂಗಳೂರು.

೧೮. ಕುಲಶೇಖರಿ, ೧೯೯೭, **ಬೊಗಸೆ ಬುತ್ತಿ,** ಚಿನ್ಮಯಿ ಪ್ರಕಾಶನ, ಬೆಂಗಳೂರು.

೧೯. ಗಂಗಾ ಬಿ.ರಾಜಪುರೋಹಿತ, ೨೦೦೧, **ನಮ್ಮ ಜಪಾನ್ ಪ್ರವಾಸ,** ರೇಣುಕಾ ಪ್ರಕಾಶನ, ಬೆಂಗಳೂರು.

೨೦. ಜಯ ಕಲ್‌ಬಾಗಲ್, **ಅಮೇರಿಕದಲ್ಲಿ ಅರವತ್ತೇಳರ ಹುಟ್ಟುಹಬ್ಬ,** ಕ್ರಿಯೇಟಿವ್ ಕಂಬೈನ್ಸ್, ಮೈಸೂರು.

೨೧. ಜಯಲಕ್ಷ್ಮಮ್ಮ ಪಿ.ಆರ್., ೧೯೫೬, **ಬದರೀಯಾತ್ರೆ,** ಶ್ರೀಶೈಲ ಪ್ರಕಾಶನ, ಬೆಂಗಳೂರು.

೨೨. ಜಯಶ್ರೀ ಕೆ.ಆರ್., ೨೦೧೪, **ಅಮೇರಿಕಾ ಪ್ರವಾಸ,** ಕೋಲಾರ ಜಿಲ್ಲಾ ನಂದವರಿಕ ಟ್ರಸ್ಟ್, ಕೋಲಾರ.

೨೩. ಜಲಜಾ ಗಂಗೂರು, ೨೦೦೧, **ಅವನಿಯ ಅಪ್ಸರೆ ಅಮೇರಿಕ,** ಜಗದಾನಿ ಪ್ರಕಾಶನ, ಬೆಂಗಳೂರು.

೨೪. ಜಾನಕಿ ಬ್ರಹ್ಮಾವರ ಎಂ., ೧೯೯೯, **ತಿರುಗಾಟದ ತಿರುಳು,** ಹಿಮಾಂಶು ಪ್ರಕಾಶನ, ಮಂಗಳೂರು.

೨೫. ತ್ರಿವೇಣಿ ಶಿವಕುಮಾರ್, ೨೦೦೨, **ನಿಸರ್ಗಪ್ರಿಯರ ನಾಡಿನಲ್ಲಿ,** ಪ್ರಭುದೀಪ ಪ್ರಕಾಶನ, ಬೆಂಗಳೂರು

೨೬. ತ್ರಿವೇಣಿ ಶಿವಕುಮಾರ್, ೨೦೧೨, **ಭುವನದ ಬೆರಗು,** ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು.

೨೭. ತ್ರಿವೇಣಿ ಶಿವಕುಮಾರ್, ೨೦೧೨, **ಬಹುರೂಪೀ ಭಾರತ,** ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು.

೨೮. ತೇಜಸ್ವಿನಿ ಬಿ.ಯಕ್ಕುಂಡಿಮಠ, ೨೦೧೬, **ತಿರೆಯ ಮೇಲಣ ಸ್ವರ್ಗ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೯. ನಾಗರತ್ನ ಹೊ., ೧೯೯೫, **ನಿಸರ್ಗ ಸ್ವರ್ಗ ಅಂಡಮಾನ್,** ಶ್ರೀ ಲಕ್ಷ್ಮಿ ಚಿಕಿತ್ಸಾಲಯ, ಬೆಂಗಳೂರು.

೩೦. ನಾಗಲಕ್ಷ್ಮಿ ನಂ., ೨೦೦೬, **ಚಾರ್‌ಧಾಮ್ ಹಿಮಾಲಯದ ಮಡಿಲಲ್ಲಿ,** ರುಕ್ಮಿಣಿ ಪ್ರಕಾಶನ, ಬೆಂಗಳೂರು.

೩೧. ನೀಳಾದೇವಿ, ೧೯೮೫, **ನಾ ಕಂಡ ಆ ಖಂಡ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೩೨. ನೇಮಿಚಂದ್ರ, ೧೯೯೯, **ಒಂದು ಕನಸಿನ ಪಯಣ,** ಮಹಿಳಾ ಸಾಹಿತ್ಯಿಕಾ ಪ್ರಕಾಶನ, ಹುಬ್ಬಳ್ಳಿ.

೩೩. ನೇಮಿಚಂದ್ರ, ೨೦೧೫, **ಪೆರುವಿನ ಪವಿತ್ರ ಕಣಿವೆಯಲ್ಲಿ,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩೪. ಪದ್ಮಾ ಗುರುರಾಜ್, ೨೦೧೦, **ಕಾಂಗರೂಗಳ ನಾಡಿನಲ್ಲಿ,** ಅದಮ್ಯ ಪ್ರಕಾಶನ, ಬೆಂಗಳೂರು.

೩೫. ಪದ್ಮಾಶಣೈ, ೧೯೯೮, **ಅಮೇರಿಕಾ: ವಾಸ-ಪ್ರವಾಸ,** ಮಾರ್ಡನ್ ಪ್ರಿಟಿಂಗ್ ಪ್ರೆಸ್, ಬೆಂಗಳೂರು.

೩೬. ಪರಮೇಶ್ವರಿ ಲೋಕೇಶ್ವರ್, ೨೦೦೩, **ಅಮೇರಿಕಾದಲ್ಲಿ ಅರವತ್ತು ದಿನಗಳು,** ಪುಸ್ತಕ ನಿಧಿ ಪ್ರಕಾಶನ, ಬೆಂಗಳೂರು.

೩೭ ಪಾರ್ವತಮ್ಮ ಮಹಾಲಿಂಗಶೆಟ್ಟಿ, ೨೦೦೬, **ಅಮೆರಿಕಾದ ಇತಿಹಾಸ ಮತ್ತು ಇಂದಿನ ಜನಜೀವನ,** ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು.

೩೮. ಪಾರ್ವತಿ ಪೆಂಡರಕೂರ, ೨೦೦೮, **ಅಮೇರಿಕಾದಲ್ಲಿ ಕನ್ನಡದಜ್ಜ,** ಯುವಕರ ಸಂಘ, ರಾಮನಗರ.

೩೯. ಪ್ರಜ್ಞಾ ಮತ್ತಿಹಳ್ಳಿ, ೨೦೧೫, **ದೇವರಸ್ವಂತ ನಾಡಿನಲ್ಲಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೦. ಪ್ರೇಮಾಭಟ್, ೨೦೦೨, **ಪೂರ್ವಾಂಚಲದಲ್ಲಿ ಕೆಲವು ದಿನಗಳು,** ಶ್ರೀ ಪ್ರೇಮಸಾಯಿ ಪ್ರಕಾಶನ, ಬೆಂಗಳೂರು.

೪೧. ಪ್ರೇಮಾಭಟ್, ೨೦೧೦, **ಪಶ್ಚಿಮದತ್ತ ಪಯಣ,** ಶ್ರೀ ಪ್ರೇಮಸಾಯಿ ಪ್ರಕಾಶನ, ಬೆಂಗಳೂರು.

೪೨. ಪ್ರೇಮಶೇಖರ್, ೨೦೧೦, **ದೇಶ ಪರದೇಶ,** ವಿಸ್ಮಯ ಪ್ರಕಾಶನ, ಮೈಸೂರು.

೪೩. ಭಾರತೀ ಭಟ್, ೨೦೦೦, **ನನ್ನ ಬೆಲ್ಜಿಯಂ ಪ್ರವಾಸ,** ಭಾಷಾ ಪ್ರಕಾಶನ, ಮೈಸೂರು

೪೪. ಮಮತಾರಾವ್, ೨೦೦೭, **ಕೈಲಾಸಾಧಿಪತಿಯ ಮನೆಯಂಗಳದಲ್ಲಿ,** ಅಭಿಜಿತ್ ಪ್ರಕಾಶನ, ಮುಂಬೈ.

೪೫. ಮೀನಾ ಮೈಸೂರು, ೨೦೦೩, **ಎತ್ತಣಿಂದೆತ್ತ,** ಋಜುವಾತು ಪ್ರಕಾಶನ, ಮೈಸೂರು.

೪೬. ಮುಕ್ತಾಯಕ್ಕ ಎಚ್.ಎಸ್., ೨೦೦೮, **ಮದಿರೆಯ ನಾಡಿನಲ್ಲಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೭. ರಾಜಲಕ್ಷ್ಮಿ ಗೋಪಾಲ್, ೧೯೯೮, **ಅಮರ ಲೋಕದಲ್ಲಿ ಅಧ್ಯಾಪಕಿ**, ನಾದ ಪ್ರಕಾಶನ, ಬೆಂಗಳೂರು.

೪೮. ರಾಜಾಮ್ಮಣಿ ನಾಗರಾಜ ರಾವ್, ೧೯೯೮, **ಸುವರ್ಣ ಮಧುಚಂದ್ರ**, ಅಪೂರ್ವ ಪ್ರಕಾಶನ, ಬೆಂಗಳೂರು.

೪೯. ರುಕ್ಮಿಣಿ ಗಿರಿಮಾಜಿ, ೧೯೭೬, **ಬೆಂಗಳೂರಿನಿಂದ ಬದರೀನಾಥಕ್ಕೆ**, ಗಿರಿಮಾಜಿ ವೆಂಕಟಬಾಯಿ ಪ್ರಕಾಶನ, ಬೆಂಗಳೂರು.

೫೦. ಲತಾಗುತ್ತಿ, ೧೯೯೩, **ಯುರೋ ನಾಡಿನಲ್ಲಿ**, ಸುಂದರ ಪ್ರಕಾಶನ, ಬೆಂಗಳೂರು.

೫೧. ಲತಾಗುತ್ತಿ, ೧೯೯೫, **ನಾ ಕಂಡಂತೆ ಅರೇಬಿಯಾ**, ಹಂಸಧ್ವನಿ ಪ್ರಕಾಶನ, ಬೆಂಗಳೂರು.

೫೨. ಲೀಲಾವತಿ ದೇವದಾಸ್, ೧೯೯೯, **ಪವಿತ್ರ ನಾಡಿನಲ್ಲಿ ಪ್ರವಾಸ**, ಪ್ರೇಮಾನಂದ ಪ್ರಕಾಶನ, ಬೆಂಗಳೂರು.

೫೩. ವಸಂತೀ ಚಂದ್ರ, ೧೯೯೯, **ಭೋಗಭೂಮಿಯ ಮಡಿಲಲ್ಲಿ**, ವಿಜಯ ಸಾಹಿತ್ಯ ಪ್ರಕಾಶನ, ಬೆಂಗಳೂರು.

೫೪. ವಿಜಯಾ ದಬ್ಬೆ, ೧೯೯೮, **ಉರಿಯ ಚಿಗುರು ಉತ್ಕಲೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೫. ಶಮಂತ, ೧೯೯೫, **ಕದನ ಕಾಶ್ಮೀರ**, ಸುನಂದ ಪ್ರಕಾಶನ, ಬೆಂಗಳೂರು.

೫೬. ಶಮಂತ, ೧೯೯೬, **ಹಿಮದಗ್ನಿ**, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೭. ಶಾಂತಾದೇವಿ ಮಾಳವಾಡ, ೧೯೮೫, **ಶ್ರೀಗಿರಿಯಿಂದ ಹಿಮಗಿರಿಗೆ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೫೮. ಶಿವಲಿಂಗಮ್ಮ ಕಟ್ಟಿ, ೧೯೯೩, **ಪಡುವಣ ಪಯಣ**, ಶ್ರೀ ಜಗದ್ಗುರು ಅನ್ನದಾನೇಶ್ವರ ಗ್ರಂಥಮಾಲೆ, ಮುಂಡರಗಿ.

೫೯. ಶೈಲಜಾ ಎನ್.ಬಾಗೇವಾಡಿ, ೨೦೧೫, **ದೇವಾಲಯಗಳ ನಾಡಿನಲ್ಲಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೦. ಸಂಧ್ಯಾ ಎಸ್., ೧೯೯೭, **ಹಲವು ಕಾಲಗಳ ನಾಡು: ಗುಜರಾತ್**, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು

೬೧. ಸಾರಾ ಅಬೂಬಕ್ಕರ್, ೨೦೦೧, **ಐಷಾರಾಮದ ಆಳದಲ್ಲಿ,** ಚಂದ್ರಗಿರಿ ಪ್ರಕಾಶನ, ಮಂಗಳೂರು.

೬೨. ಸುಧಾ ಚಿದಾನಂದಗೌಡ, ೨೦೧೭, **ಸಮನ್ವಿತೆ ಗೋಮಾಂತ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೩. ಸುಧಾಮೂರ್ತಿ, ೧೯೮೧, **ಅಟ್ಲಾಂಟಿಕ್‌ದಾಚೆಗೆ,** ಮನೋಹರ ಗ್ರಂಥಮಾಲೆ, ಧಾರಾವಾಡ

೬೪. ಸುಧಾಮೂರ್ತಿ, ೨೦೦೩, **ಕಾವೇರಿಯಿಂದ ಮೆಕಾಂಗಿಗೆ,** ಸಪ್ನ ಬುಕ್‌ಹೌಸ್, ಬೆಂಗಳೂರು.

೬೫. ಸುಧಾಮೂರ್ತಿ, ೨೦೧೩, **ಹಕ್ಕಿಯ ತೆರೆಯಲಿ,** ಲೋಕ ಶಿಕ್ಷಣ ಟ್ರಸ್ಟ್, ಬೆಂಗಳೂರು.

೬೬. ಸುಭಾಷಿಣಿ, ೧೯೯೮, **ಜರ್ಮನಿಯ ಒಡಲಲ್ಲಿ,** ಸುಭಾಷಿಣಿ ಪಬ್ಲಿಕೇಷನ್ಸ್, ಬೆಂಗಳೂರು.

೬೭. ಸುಮಂಗಲಾ ಎಸ್.ಮುಮ್ಮಿಗಟ್ಟಿ, ೨೦೧೮, **ಅದ್ಭುತ ಜೀವವಾಸ ಅಂಡಮಾನ್,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೬೮. ಸುಮಿತ್ರಾಬಾಯಿ, **ಬ್ರಹ್ಮಪುತ್ರದ ಕಣಿವೆಯಲ್ಲಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೯. ಸುಶೀಲಾ ಕೊಪ್ಪರ್, ೧೯೯೦, **ಪಡುವಣ ಪತ್ರಮಾಲೆ,** ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೭೦. ಹೇಮಮಾಲಾ ಬಿ., ೨೦೧೭, **ಚಾರ್‌ಧಾಮ್,** ಸ್ನೇಹ ಬುಕ್‌ಹೌಸ್, ಬೆಂಗಳೂರು.

೭೧. ಹೇಮಲತಾ ಮಹಿಷಿ, ೧೯೯೯, **ಯುರೋ ದರ್ಶನ,** ಮನೋಹರ ಗ್ರಂಥಮಾಲೆ, ಧಾರವಾಡ.

೭೨. ಹೇಮಲತಾ ಮಹಿಷಿ, ೨೦೦೬, **ಕಾಂಗರೂ ಕಿವಿಯ ನಾಡಿನಲ್ಲಿ,** ಸುಮುಖ ಪ್ರಕಾಶನ, ಬೆಂಗಳೂರು.

೭೩. ಹೇಮಲತಾ ಹೆಚ್.ಎಂ., ೨೦೧೧, **ಹಂಗೇರಿಯಲ್ಲಿ ಹೇಮ,** ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.

೨. ಪ್ರಕಟಿತ ಕನ್ನಡ ಮಹಿಳಾ ಪ್ರವಾಸ ಕಥನಗಳು

೧. ಆಶಾದೇವಿ ನೂಲಾ, ೨೦೦೦, **ನನ್ನ ಪ್ರವಾಸ ಕಥನ,** ಸದ್ಭಾವಗೋಷ್ಠಿ ಸಮಿತಿ, ಗುಲಬರ್ಗಾ.

೨. ಆಶಾ ಪೋತದಾರ್, ೧೯೭೭, **ಪೌರ್ವಾತ್ಯ ದೇಶಗಳ ಪಕ್ಷಿನೋಟ,** ಟಿಳಕವಾಡಿ ಪ್ರಕಾಶನ, ಬೆಳಗಾವಿ

೩. ಗಿರಿಜಾಬಾಯಿ, ೧೯೬೨, **ಭಾರತದ ಭವ್ಯ ನದಿಗಳು,** ವಿಚಾರ ಸಾಹಿತ್ಯ ಪ್ರೈ. ಲಿಮಿಟೆಡ್, ಬೆಂಗಳೂರು.

೪. ಗಿರಿಜಾಬಾಯಿ, ೧೯೬೩, **ನಮ್ಮ ನದಿಗಳು,** ವಿಚಾರ ಸಾಹಿತ್ಯ ಪ್ರೈ. ಲಿಮಿಟೆಡ್, ಬೆಂಗಳೂರು.

೫. ಚಂದ್ರಭಾಗಾದೇವಿ, ೧೯೭೧, **ಗೆಜ್ಜೆಯ ಹೆಜ್ಜೆ ನುಡಿ,** ಲೋಕಶಿಕ್ಷಣ ಗ್ರಂಥಮಾಲೆ, ಬೆಂಗಳೂರು.

೬. ಜಗದಂಬಾ ಮಲ್ಲೇದೇವರು, ೨೦೦೨, **ಪಯಣಿಗಳಾಗಿ ಪಶ್ಚಿಮದೆಡೆಗೆ,** ಸಂವಹನ ಪ್ರಕಾಶನ, ಮೈಸೂರು.

೭. ಜಯ ರಾಜಶೇಖರ್, ೧೯೮೯, **ಮರಳಿ ಬಂದ ಮಧುರಮಾಸ,** ಲೋಕಶಿಕ್ಷಣ ಗ್ರಂಥಮಾಲೆ, ಬೆಂಗಳೂರು.

೮. ತ್ರಿವೇಣಿ ಶಿವಕುಮಾರ್, ೨೦೦೪, **ಹವಳದ ದ್ವೀಪಗಳಲ್ಲಿ,** ಪ್ರಭುದೀಪ ಪ್ರಕಾಶನ, ಬೆಂಗಳೂರು.

೯. ತ್ರಿವೇಣಿ ಶಿವಕುಮಾರ್, ೨೦೦೫, **ದಿವ್ಯಮೌನದ ದೇಶಗಳಲ್ಲಿ,** ಪ್ರಭುದೀಪ ಪ್ರಕಾಶನ, ಬೆಂಗಳೂರು.

೧೦. ಧಾರಿಣಿ, ೧೯೯೯, **ಭಾವ ಸೇತು-ಜ್ವಾಲಾ,** ಮಾಲಾ ಪ್ರಕಾಶನ, ಬೆಂಗಳೂರು.

೧೧. ದೇವಕಿಮೂರ್ತಿ, ೧೯೯೪, **ಯುರೋ ಅಮೇರಿಕಾ ಇಣುಕು ನೋಟ,** ಕಾವ್ಯಾಲಯ ಪ್ರಕಾಶನ, ಮೈಸೂರು.

೧೨. ಪದ್ಮಾ ಉಮಾಪತಿ, ೧೯೭೩, **ನಾವು ಕಂಡ ಅಮೆರಿಕಾ,** ಸುದರ್ಶನ ಪ್ರಕಾಶನ, ತಿಪಟೂರು.

೧೩. ಪುಷ್ಪಗಂಧಿನಿ, ೨೦೧೦, **ಅಪರೂಪದ ಪ್ರವಾಸ,** ಇಂದಿರಾ ಹಾಲಂಬಿ ಪ್ರಕಾಶನ, ಆತ್ರಾಡಿ.

೧೪. ಪ್ರಭಾಮೂರ್ತಿ, ೨೦೦೬, **ಹಸಿರು ಹವಳ,** ನ್ಯಾಯಸುಧಾ ಪ್ರಕಾಶನ, ಬೆಂಗಳೂರು.

೧೫. ಮಂಜುಳಾದೇವಿ, ೨೦೧೪, **ಕಾಂಗರೂ ನಾಡಿನಲ್ಲೊಂದು ಮಾಸದ ನೆನಪು,** ನೇಕಾರ ಪ್ರಕಾಶನ, ಸೊರಬ.

೧೬. ರಾಜಲಕ್ಷ್ಮಿ ಯು.ಬಿ., ೨೦೦೭, **ಶಂಖನಾದ-ಕ್ಷೇತ್ರದರ್ಶನ-ನೆನಪು-ನಿನಾದ,** ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು

೧೭. ರಾಜೇಶ್ವರಿಗೌಡ, ೨೦೦೦, **ಅದ್ಭುತ ಅಮೇರಿಕಾ ಮತ್ತು ಅನ್ಯರಾಷ್ಟ್ರಗಳು,** ಆದಿ ಚುಂಚನಗಿರಿ ಮಹಾಸಂಸ್ಥಾನ, ನಾಗಮಂಗಲ.

೧೮. ರಾಣಿ ಚನ್ನಾಜಮ್ಮಣಿ, ೧೯೩೭, **ನನ್ನ ಪ್ರಪಂಚ ಸಂಚಾರ,** ಎವಲಾನ್ ಪಬ್ಲಿಷರ್ಸ್, ಬೆಂಗಳೂರು.

೧೯. ರೇಣುಕ, ೨೦೦೬, **ಆನೆಗಳ ಕಾಡಲ್ಲಿ–ಸೋಲಿಗರ ಬೀಡಲ್ಲಿ,** ಸಾಗರ್ ಪ್ರಕಾಶನ, ಬೆಂಗಳೂರು.

೨೦. ಲತಾಗುತ್ತಿ, ೨೦೧೭, **ರಪ್ಯಾ ಎಂಬ ರಪ್ಯಾ,** ಸಪ್ನ ಬುಕ್‌ಹೌಸ್, ಬೆಂಗಳೂರು.

೨೧. ಲಲಿತಾ ಶಾಸ್ತ್ರಿ, ೧೯೯೨, **ಹಿಮವಂತನ ನಾಡಿನಲ್ಲಿ,** ಆರತಿ ಪಬ್ಲಿಕೇಷನ್ಸ್, ಬೆಂಗಳೂರು.

೨೨. ಲಲಿತಾ ಶಾಸ್ತ್ರಿ, ೨೦೦೦, **ಉತ್ತರ ಅಮೆರಿಕಾದಲ್ಲಿ ಚಾತುರ್ಮಾಸ್ಯ,** ಮಧು ಪ್ರಿಂಟರ್ಸ್ ಅ್ಯಂಡ್ ಪಬ್ಲಿಷರ್ಸ್, ಬೆಂಗಳೂರು.

೨೩. ಲಲಿತಾ ಸುಬ್ಬರಾವ್, ೧೯೭೧, **ನಾನು ಕಂಡ ಅಮೇರಿಕ,** ವಾಗ್ದೇವಿ ಪ್ರಕಾಶನ, ಬೆಂಗಳೂರು.

೨೪. ಲೀಲಾಭಟ್ ಬಿ. ೧೯೮೯, **ಶಕ್ತಿಯ ಶೋಧನೆಯಲ್ಲಿ,** ಕರ್ನಾಟಕ ಸಂಘ, ದಕ್ಷಿಣ ಕನ್ನಡ.

೨೫. ಲೀಲಾಮಿರ್ಲೆ, ೧೯೯೫, **ಪ್ರವಾಸ,** ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.

೨೬. ಲೀಲಾವತಿ ದೇವದಾಸ್, ೨೦೦೩, **ಪವಿತ್ರ ನಾಡಿನಲ್ಲಿ,** ಪ್ರೇಮಾನಂದ ಪಬ್ಲಿಕೇಷನ್ಸ್, ಬೆಂಗಳೂರು.

೨೭. ವನಜಾ ರಾಜನ್, ೧೯೯೮, **ಕಣ್ಣಂಚಿನಲ್ಲಿ ಪೂರ್ವ ಪಶ್ಚಿಮ,** ದಿವ್ಯಚಂದ್ರ ಪ್ರಕಾಶನ, ಬೆಂಗಳೂರು

೨೮. ವಸಂತಿ ಚಂದ್ರ, ೨೦೦೨, **ಮೌನ ಮೋಹಿನಿ,** ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

೨೯. ವಸಂತಿ ವೆಂಕಟರಂಗನ್, ೧೯೭೫, **ನಾ ಕಂಡ ಮಹಿಳೆ(ಪೂರ್ವ) ಆಫ್ರಿಕಾದಲ್ಲಿ ಸಾಧನೆ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩೦. ವಾಗೀಶ್ವರಿ ಶಾಸ್ತ್ರಿ, ೧೯೯೭, **ಸಿರಿಸಿಂಗಾರದ ಸಿಂಗಾಪುರ,** ವಾಗ್ದೇವಿ ಕಲಾನಿಕೇತನ ಪ್ರಕಾಶನ, ಬೆಂಗಳೂರು.

೩೧. ವಿಜಯ ಸುಬ್ಬರಾವ್, ೨೦೦೦, **ಸ್ವರ್ಗದ್ವೀಪದ ಕನಸಿನ ಬೆನ್ನೇರಿ,** ರಮಣಶ್ರೀ ಪ್ರಕಾಶನ, ಬೆಂಗಳೂರು.

೩೨. ವಿದ್ಯಾ ಕುಂದರಗಿ, ೨೦೧೮, **ನೈಲ್ ನದಿಯ ಮಡಿಲಲ್ಲಿ**, ಕಣ್ವ ಪ್ರಕಾಶನ, ಬೆಂಗಳೂರು.

೩೩. ಶಮಂತ, ೧೯೯೨, **ಕಾಲ್ನಡಿಗೆಯಲ್ಲಿ ಹಿಮಾಲಯಕ್ಕೆ ರಮ್ಯಸಾಹಸ**, ಹಂಸಧ್ವನಿ ಪ್ರಕಾಶನ, ಬೆಂಗಳೂರು.

೩೪. ಶಮಂತ, ೧೯೯೨, **ಗಿರಿಸ್ನೇಹ**, ಇಳಾ ಪ್ರಕಾಶನ, ಬೆಂಗಳೂರು.

೩೫. ಸರಸ್ವತಿ ನಾಗರಾಜ ಎನ್.ಎಸ್., ೨೦೦೯, **ನಾವು ನೋಡಿದ ಪಶ್ಚಿಮ ದೇಶಗಳ ಒಂದು ಇಣುಕು ನೋಟ**, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು.

೩೬. ಸುಮನ ವಿಶ್ವನಾಥ, ೨೦೦೨, **ಮತ್ತೂರರೊಂದಿಗೆ ಕಾಶೀಯಾತ್ರೆ**, ಪುಸ್ತಕಶಕ್ತಿ ಪ್ರಕಾಶನ, ಬೆಂಗಳೂರು.

೩. ಆನುಷಂಗಿಕ ಆಕರಗಳು(ಪರಾಮರ್ಶನ ಗ್ರಂಥಗಳು)

೧. ಅನುರಾಧ.ಬಿ.ಟಿ.,೨೦೧೧, **ಕನ್ನಡದಲ್ಲಿ ಪ್ರವಾಸ ಸಾಹಿತ್ಯ: ಸಾಂಸ್ಕೃತಿಕ ಒಂದು ಅಧ್ಯಯನ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨. ಅಶೋಕ ನರೋಡೆ (ಸಂ), ೨೦೧೭, **ಕನ್ನಡದಲ್ಲಿ ಪ್ರವಾಸ ಸಾಹಿತ್ಯ**, ಅಭಿನವ ಪ್ರಕಾಶನ, ಅಥಣಿ.

೩. ಆರ್ಯಾಂಬ ಪಟ್ಟಾಬಿ, ೧೯೯೭, **ವಿದೇಶ ಪ್ರವಾಸ**, ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.

೪. ಆರ್ಯಾಂಬ ಪಟ್ಟಾಬಿ (ಸಂ), ೨೦೦೪, **ಪ್ರವಾಸ ಸಾಹಿತ್ಯ ಮತ್ತು ಕ್ರೀಡೆ**, ಸಂವಹನ ಪ್ರಕಾಶನ, ಮೈಸೂರು.

೫. ಕರೀಗೌಡ ಬೀಚನಹಳ್ಳಿ (ಸಂ), ೧೯೯೩, **ಕನ್ನಡ ವಾರ್ಷಿಕ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಕೃಷ್ಣಾನಂದ ಕಾಮತ್, ೨೦೧೨, **ಪ್ರವಾಸಿಯ ಪ್ರಬಂಧಗಳು**, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೭. ಗಿರಡ್ಡಿ ಗೋವಿಂದರಾಜ,೨೦೧೬, **ಓದುವ ದಾರಿಗಳು**,ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯. ಗೊರೂರು ರಾಮಸ್ವಾಮಿ ಅಯ್ಯಂಗಾರ್, ೧೯೭೯, **ಅಮೇರಿಕಾದಲ್ಲಿ ಗೊರೂರು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೦. ಚಂದ್ರಶೇಖರ ಆಲೂರು, ೨೦೦೨, **ಅಮೇರಿಕಾದಲ್ಲಿ ಆಲೂರು**, ಭಾವನಾ ಪ್ರಕಾಶನ, ಬೆಂಗಳೂರು.

೧೧. ತಾರಾನಾಥ ಎನ್.ಎಸ್., ೧೯೯೦, **ಪ್ರವಾಸ ಸಾಹಿತ್ಯ**, ಶಕ್ತಿ ಪ್ರಕಾಶನ, ಬೆಂಗಳೂರು.

೧೨. ತಾರಾನಾಥ ಎನ್.ಎಸ್, ೨೦೦೪, **ಸಹಚರ**, ಭಾರತೀ ಪ್ರಕಾಶನ, ಮೈಸೂರು.

೧೩. ನವರತ್ನರಾವ್, ೧೯೬೬, **ಪ್ಯಾರಿಸ್‌ನಿಂದ ಪ್ರೇಯಸಿಗೆ**, ಆರತಿ ಪ್ರಕಾಶನ, ಬೆಂಗಳೂರು.

೧೪. ನಾಗೇಗೌಡ ಎಚ್.ಎಲ್.(ಸಂ), ೧೯೭೧, **ಪ್ರವಾಸಿ ಕಂಡ ಇಂಡಿಯಾ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೫. ನಾಗೇಶ ಹೆಗಡೆ, ೧೯೯೬, **ಗಗನ ಸಖಿಯರ ಸೆರಗ ಹಿಡಿದು**, ಇಳಾ ಪ್ರಕಾಶನ, ಬೆಂಗಳೂರು.

೧೬. ನಾಯಕ ಜಿ.ಎಚ್., ೨೦೦೯, **ಶತಮಾನದ ಕನ್ನಡ ಸಾಹಿತ್ಯ**, ಶ್ರೀರಾಘವೇಂದ್ರ ಪ್ರಿಟಿಂಗ್ ಅಂಡ್ ಪಬ್ಲಿಷಿಂಗ್ ಟ್ರಸ್ಟ್, ಅಂಕೋಲ.

೧೭. ಪರಮಶಿವಮೂರ್ತಿ ಬಿ.ಎಸ್., ೧೯೭೯, **ಕನ್ನಡದಲ್ಲಿ ಪ್ರವಾಸ ಸಾಹಿತ್ಯ**, ಪ್ರಸಾರಾಂಗ, ಕನ್ನಡ ವಿಶ್ವಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಪ್ರಭುಶಂಕರ, ೧೯೮೩, **ಅಮೆರಿಕದಲ್ಲಿ ನಾನು ಶಾಂತಿ**, ನಿವೇದಿತಾ ಪ್ರಕಾಶನ, ಮೈಸೂರು.

೧೯. ಮಲ್ಲೇಪುರಂ ಜಿ. ವೆಂಕಟೇಶ (ಸಂ), ೧೯೯೨, **ಪ್ರವಾಸ ಸಾಹಿತ್ಯ : ಒಂದು ಅಧ್ಯಯನ**, ಹೊನ್ನ ಪ್ರಕಾಶನ, ಬೆಂಗಳೂರು.

೨೦. ರಮ್ಯ ವೈ.ಪಿ., ೨೦೧೬, **ನೇಮಿಚಂದ್ರ ಅವರ ಪ್ರವಾಸ-ಕಥನಗಳು**, ಜ್ಯೋತಿ ಪ್ರಕಾಶನ, ಮೈಸೂರು.

೨೧. ಲತಾಗುತ್ತಿ, ೨೦೦೭, **ಕನ್ನಡ ಪ್ರವಾಸ ಸಾಹಿತ್ಯ: ವಿಶ್ವಸಂಸ್ಕೃತಿಗಳು**, ಸಚಿನ್ ಪಬ್ಲಿಷರ್ಸ್, ಬೆಂಗಳೂರು.

೨೪. ಲತಾಗುತ್ತಿ, ೨೦೦೯, **ಕನ್ನಡ ಪ್ರವಾಸ ಸಾಹಿತ್ಯದ ಒಳನೋಟಗಳು**, ಅಕ್ಷರ ಮಂಟಪ, ಬೆಂಗಳೂರು.

೨೫. ವಡಗಾಂವಿ ಜಿ.ಎಸ್., ೧೯೯೦, **ಕನ್ನಡದಲ್ಲಿ ಪ್ರವಾಸ ಸಾಹಿತ್ಯ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೬. ವಿಜಯಲಕ್ಷ್ಮಿ ಕೆ.ಎಸ್., ೨೦೦೫, **ಇತಿಹಾಸ ಮತ್ತು ಪ್ರವಾಸೋದ್ಯಮ**, ಕೊರಿ ಪಬ್ಲಿಕೇಷನ್ಸ್, ಬೆಂಗಳೂರು.

೨೭. ವಿದ್ಯಾಶಂಕರ್ ಎಸ್., ೨೦೦೬, **ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೮. ಶ್ರೀನಿವಾಸಯ್ಯ ಹೊ., ೧೯೮೯, **ಜಯಶ್ರೀ ಕಂಡ ಅಮೇರಿಕಾ**, ಸುವಿದ್ಯಾ ಪ್ರಕಾಶನ, ಬೆಂಗಳೂರು.

೨೯. ಶ್ರೀನಿವಾಸಯ್ಯ ಹೊ., ೧೯೯೦, **ಜಯಶ್ರೀ ಕಂಡ ಜಗತ್ತು**, ಸುವಿದ್ಯಾ ಪ್ರಕಾಶನ, ಬೆಂಗಳೂರು.

೩೦. ಸೀತಾರಾಮಯ್ಯ ವಿ., ೨೦೦೪, **ಪಂಪಾಯಾತ್ರೆ**, ವಿ.ಸೀ ಸಂಪದ ಸ್ಮರಣ ವೇದಿಕೆ, ಬೆಂಗಳೂರು.

೪. ಲೇಖನಗಳು

೦೧. ಆರ್ಮುಗಂ ಎಂ., ೨೦೦೨, **ಪ್ರವಾಸ ಸಾಹಿತ್ಯದ ಅಧ್ಯಯನಗಳು ಒಂದು ವಿಶ್ಲೇಷಣೆ**, ಸಂಕ್ರಮಣ ಪತ್ರಿಕೆ, ಬೆಂಗಳೂರು.

೦೨. ಆರ್ಮುಗಂ ಎಂ. ೧೯೮೯, **ಪ್ರವಾಸ ಸಾಹಿತ್ಯ ಬೆಳೆದುಬಂದ ದಾರಿ**, ಸಂಕ್ರಮಣ ಪತ್ರಿಕೆ, ಸೆಪ್ಟೆಂಬರ್-ಆಗಸ್ಟ್,

೦೩. ಚಂದ್ರಶೇಖರ ಕಂಬಾರ, ೧೯೭೩, **ಪ್ರವಾಸ ಕಥನ**, ಸಾಹಿತ್ಯ ವಾರ್ಷಿಕ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೦೪. ನರಹಳ್ಳಿ ಬಾಲಸುಬ್ರಹ್ಮಣ್ಯ, ೧೯೮೯, **ಕನ್ನಡ ಪ್ರವಾಸ ಸಾಹಿತ್ಯ**, ತುಷಾರ ಪತ್ರಿಕೆ-ಆಗಸ್ಟ್, ಬೆಂಗಳೂರು

೦೫. ನಾಗರಾಜ ಕಿ.ರಂ., ೧೯೮೧, **ಪ್ರಬಂಧ-ಪ್ರವಾಸ**, ಸಾಹಿತ್ಯ ವಾರ್ಷಿಕ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೦೬. ಮರುಳಸಿದ್ಧಪ್ಪ ಕೆ., ೧೯೭೪, **ಪ್ರವಾಸ ಕಥನ**, ಸಾಹಿತ್ಯ ವಾರ್ಷಿಕ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೦೭. ವಡಗಾಂವಿ ಜಿ.ಎಸ್., ೧೯೭೬, **ಕನ್ನಡದಲ್ಲಿ ಪ್ರವಾಸ ಸಾಹಿತ್ಯ**, ಕರ್ನಾಟಕ ವಿಶ್ವವಿದ್ಯಾಲಯ, ಧಾರಾವಾಡ.

೦೮. ವಿವೇಕ ರೈ. ಬಿ.ಎ., ೧೯೭೦, **ಕನ್ನಡದಲ್ಲಿ ಪ್ರವಾಸ ಸಾಹಿತ್ಯ**, ಪ್ರಬುದ್ಧ ಕರ್ನಾಟಕ, ಬೆಂಗಳೂರು.


೦೯. ವೀರಣ್ಣ ಸಿ., ೧೯೭೧, **ಪ್ರವಾಸ ಸಾಹಿತ್ಯ**, ಸಾಹಿತ್ಯ ವಾರ್ಷಿಕ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫. ಅಪ್ರಕಟಿತ ಎಂ.ಫಿಲ್/ಪಿಎಚ್.ಡಿ. ನಿಬಂಧಗಳು

೧. ತುಕಾರಾಮ, ೨೦೦೮, **ಅಮೆರಿಕ ಕುರಿತು ಮೂರು ಪ್ರವಾಸ ಕಥನಗಳ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಪೂರ್ಣಿಮ ಎಸ್., ೨೦೧೩, **ಅಮೆರಿಕ ಪ್ರವಾಸ ಕಥನಗಳ ಒಂದು ಸಾಂಸ್ಕೃತಿಕ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

❑❑❑



ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ